# ಮಂಗಳೂರು ವಿಶ್ವವಿದ್ಯಾನಿಲಯ

ದೂರ ಶಿಕ್ಷಣ ಕೇಂದ್ರ , ಮಂಗಳಗಂಗೋತ್ರಿ 574 199

## ಕೋರ್ಸ್–11

# ಅಂತರ್ಗತ ಶಿಕ್ಷಣ

## ಬಿ.ಎಡ್. ಪದವಿ ಕಾರ್ಯಕ್ರಮ

**(ಮುಕ್ತ ಮತ್ತು ದೂರ ಕಲಿಕೆ)**

ಪ್ರಕಾಶಕರು
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ 574 199

**Inclusive Education:** Self Learning Material for B.Ed. Degree Programme (Open and Distance Learning) of First Year prepared by Dr. M. Savitha Pande and translated by Dr. Shashikala A. Published by The Registrar, Mangalore University, Mangalagangothri 574199, Karnataka.
Year 2018-19

**Developed by:**
**The Director,**
**Centre for Distance Education, Mangalore University,**
**Mangalagangothri 574 199, Karnataka.**

**Course Co-ordinator:**
**Dr. Chidananda A.L., B.Ed. (ODL) Programme,**
**Centre for Distance Education,**
**Mangalore University, Mangalagangothri 574 199, Karnataka.**

Printed at Datacon Technologies, #31/10, Left of Magadi Main Road, Behind Saraswathi Convention Centre, Bangalore 560 079 Bangalore.
© The Registrar, Mangalore University
DTP at: Sagar Offset Printers, Alake , Mangalore

| | | |
|---|---|---|
| **ಅಂತರ್ಗತ ಶಿಕ್ಷಣ** | : | ಪ್ರಥಮ ವರ್ಷದ ಬಿ.ಎಡ್ (ಮುಕ್ತ ಮತ್ತು ದೂರ ಕಲಿಕೆ) ಪದವಿ ಕಾರ್ಯಕ್ರಮದ ಸ್ವ ಕಲಿಕಾ ಸಾಮಗ್ರಿ. |
| **ರಚನಕಾರರು** | : | ಡಾ. ಎಂ. ಸವಿತಾ ಪಾಂಡೆ |
| **ಅನುವಾದಕರು** | : | ಡಾ. ಶಶಿಕಲ ಎ. |
| **ಪ್ರಕಾಶಕರು** | : | ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ 574 199, ಕರ್ನಾಟಕ |
| **ವರ್ಷ** | : | 2018–19 |
| © ಹಕ್ಕುಗಳು | : | ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ |
| ಸಿದ್ಧಪಡಿಸಿದವರು | : | **ನಿರ್ದೇಶಕರು, ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ,** ಮಂಗಳಗಂಗೋತ್ರಿ 574 199, ಕರ್ನಾಟಕ |
| **ಕೋರ್ಸ್ ಸಂಯೋಜಕರು** | : | ಡಾ. ಚಿದಾನಂದ ಎ.ಎಲ್., ಬಿ.ಎಡ್. (ಮುಕ್ತ ಮತ್ತು ದೂರ ಕಲಿಕೆ) ಪದವಿ ಕಾರ್ಯಕ್ರಮ, ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ 574 199, ಕರ್ನಾಟಕ |
| ಡಿ.ಟಿ.ಪಿ. | : | ಸಾಗರ್ ಆಫ್‌ಸೆಟ್ ಪ್ರಿಂಟರ್ಸ್, ಅಳಕೆ, ಮಂಗಳೂರು ಮೊಬೈಲ್ :9480228399 |
| ಮುದ್ರಕರು | : | ಡಾಟಾಕಾನ್ ಟೆಕ್ನಾಲಜೀಸ್, # 31/10, ಮಾಗಡಿ ಮುಖ್ಯರಸ್ತೆ ಎಡಭಾಗ ಸರಸ್ವತಿ ಕನ್ವೆನ್ಷನ್ ಸೆಂಟರ್ ಹಿಂಭಾಗ, ಬೆಂಗಳೂರು 560 079 |

**(ಖಾಸಗಿ ಪ್ರಸಾರಕ್ಕಾಗಿ ಮಾತ್ರ)**

# ಕೋರ್ಸ್–11

# ಅಂತರ್ಗತ ಶಿಕ್ಷಣ

---

**ಕುಲಸಚಿವರು** — **ಪ್ರಕಾಶಕರು**

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ–574 199

---

**ಡಾ. ಎಂ. ಸವಿತಾ ಪಾಂಡೆ : ಬ್ಲಾಕ್– 1 ಮತ್ತು 2** — **ಕೋರ್ಸ್ ಲೇಖಕರು**

**ಡಾ. ಶಶಿಕಲ ಎ. :** — **ಕೋರ್ಸ್ ಅನುವಾದಕರು**

---

**ಡಾ. ಶಶಿಕಲ ಎ.** — **ಪರಿಶೀಲಕರು**

ಸಲಹೆಗಾರರರು

ಬಿ.ಎಡ್. ದೂರ ಶಿಕ್ಷಣ ಕಾರ್ಯಕ್ರಮ

(ಮುಕ್ತ ಮತ್ತು ದೂರ ಕಲಿಕೆ)

ದೂರ ಶಿಕ್ಷಣ ಕೇಂದ್ರ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ –574 199

---

**ಡಾ. ಚಿದಾನಂದ ಎ. ಎಲ್.** — **ಸಂಪಾದನ ಸಹಾಯಕರು**

---

## ವಿಷಯ ಸೂಚಿ

## ಕೋರ್ಸಿನ ಪಕ್ಷಿನೋಟ


**ಬ್ಲಾಕ್–1 : ಶಿಕ್ಷಣದಲ್ಲಿ ಅಂತರ್ಗತತೆಯನ್ನು ಅರ್ಥಮಾಡಿಕೊಳ್ಳುವುದು**

ಘಟಕ–1 : ಪೀಠಿಕೆ : ಅಂತರ್ಗತತೆಯ ಪರಿಕಲ್ಪನೆ ಮತ್ತು ಪ್ರಾಮುಖ್ಯತೆ 1

ಘಟಕ–2 : ಅಂತರ್ಗತತೆಯ ಇತಿಹಾಸ 14

ಘಟಕ–3 : ನಿಯಮಗಳ ನೋಟ: ಅಂತರ್ಗತ ಶಿಕ್ಷಣವನ್ನು ಉತ್ತೇಜಿಸಲು ಪ್ರಯತ್ನಗಳು 32

ಘಟಕ–4 : ಅಸಾಮರ್ಥ್ಯವಿರುವ ವ್ಯಕ್ತಿಗಳ ಹಕ್ಕುಗಳನ್ನು ಕುರಿತ ಸಂಯುಕ್ತ ರಾಷ್ಟ್ರಗಳ ಸಮಾಲೋಚನೆ (UNCRPD) ಮತ್ತು ಎಲ್ಲರಿಗೂ ಶಿಕ್ಷಣ (EFA-MDG) 47

ಘಟಕ–5 : ರಾಷ್ಟ್ರೀಯ ಗಮನ–ವಿಭಿನ್ನ ಸಮೂಹಗಳ ಶಿಕ್ಷಣಕ್ಕೆ ಸಂವಿಧಾನಾತ್ಮಕ ಬದ್ಧತೆಗಳು; ರಾಷ್ಟ್ರೀಯ ಶಿಕ್ಷಣ ನೀತಿ (1986–92); ಭಾರತದ ಪುನರ್ವಸತಿ ಕೇಂದ್ರ ಕಾಯಿದೆ(1992); ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಕಾಯಿದೆ (1995); ಅಸಾಮರ್ಥ್ಯವುಳ್ಳ ವ್ಯಕ್ತಿಗಳ ರಾಷ್ಟ್ರೀಯ ನೀತಿ (2006); ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2005), ನ್ಯಾಷನಲ್ ಫೋಕಸ್ ಗ್ರೂಪ್ ಪೇಪರ್; ಸರ್ವ ಶಿಕ್ಷಾ ಅಭಿಯಾನ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಕಾಯಿದೆ; ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳ ಕುರಿತ ರಾಷ್ಟ್ರೀಯ ಸಮಿತಿ, ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಶಿಕ್ಷಣ ಆಯೋಗ 64

ಘಟಕ–6 : ಅಂತರ್ಗತ ಸನ್ನಿವೇಶದ ಅಸಾಮರ್ಥ್ಯವುಳ್ಳ ಮಕ್ಕಳಿಗೆ ಶೈಕ್ಷಣಿಕ ರಿಯಾಯತಿಗಳು, ಸೌಲಭ್ಯಗಳು ಮತ್ತು ಅವಕಾಶಗಳು 94

**ಬ್ಲಾಕ್–2 : ಕಲಿಯುವವರ ವೈವಿಧ್ಯತೆಯನ್ನು ಚರ್ಚಿಸುವುದು ಮತ್ತು ಅರ್ಥಮಾಡಿಕೊಳ್ಳುವುದು**

ಘಟಕ–1 : ವಿವಿಧ ರೀತಿಯ ಅಸಾಮರ್ಥ್ಯಗಳನ್ನುಳ್ಳ ಮಕ್ಕಳ ವಿಶೇಷ ಅಗತ್ಯಗಳು 109

ಘಟಕ–2 : ಅಸಾಮರ್ಥ್ಯತೆಯುಳ್ಳ ಬಾಲಕಿಯರು/ ಮಹಿಳೆಯರು–ವಿಚಾರಗಳು, ಸವಾಲುಗಳು ಮತ್ತು ಬೆಂಬಲಿಸುವ ಕಾರ್ಯಕ್ರಮಗಳು 134

ಘಟಕ–3 : ಸಾಮಾಜಿಕ–ಸಾಂಸ್ಕೃತಿಕ ಮತ್ತು ಆರ್ಥಿಕ ಕಾರಣಗಳಿಂದಾಗಿ ವೈವಿಧ್ಯತೆ 148

ಘಟಕ–4 : ಪಠ್ಯಕ್ರಮ ವಿಚಾರಗಳು 163

ಘಟಕ–5 : ಪಠ್ಯಕ್ರಮ ಹೊಂದಾಣಿಕೆ ಮತ್ತು ಮಾರ್ಪಾಡುಗಳು 179

ಘಟಕ–6 : ಮಾಪನ ಮತ್ತು ಮೌಲ್ಯಮಾಪನ 192

# ಕೋರ್ಸಿನ ಪಕ್ಷಿನೋಟ

ಅಂತರ್ಗತ ಶಾಲೆಯನ್ನು ರೂಪಿಸಿಕೊಳ್ಳುವ ನಿಟ್ಟಿನಲ್ಲಿ ಗಮನಿಸಿಕೊಳ್ಳಬೇಕಾದ ಸಂಸ್ಕೃತಿ, ನೀತಿನಿಯಮಗಳು ಮತ್ತು ಅಭ್ಯಾಸಗಳ ತಿಳಿವಳಿಕೆಯನ್ನುಂಟುಮಾಡುವುದು ಈ ಕೋರ್ಸಿನ ಪ್ರಮುಖ ಉದ್ದೇಶ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಪತ್ರಿಕೆಯು 'ಅಸಾಮರ್ಥ್ಯ' ಮತ್ತು 'ಅಂತರ್ಗತ' ಇವುಗಳ ಪರಿಕಲ್ಪನೆಯನ್ನು ವಿವಿಧ ಆಯಾಮಗಳಲ್ಲಿ ವಿಚಾರಮಾಡುವುದಲ್ಲದೆ, ಶಿಕ್ಷಣದ ಚೌಕಟ್ಟಿನಲ್ಲಿ ಇಂದು ಅಗತ್ಯವಾದ ಇವುಗಳ ವ್ಯಾಖ್ಯೆಯನ್ನು ಗುರುತಿಸಿದೆ. ಈ ಮೂಲಕ ಅಸಾಮರ್ಥ್ಯತೆ ಮತ್ತು ಅಸ್ಮಿತೆಯ ಪ್ರಭಾವಶಾಲಿ ಕಾರಕಗಳನ್ನು ವಿಶ್ಲೇಷಿಸಿದೆ. ಅಸಾಮರ್ಥ್ಯವಿರುವ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸೂಚಿಸಲಾಗಿರುವ ವಿಚಾರಗಳ ಆಧಾರದ ಮೇಲೆ ಅಸಾಮರ್ಥ್ಯವುಳ್ಳವರ ಶಿಕ್ಷಣದ ಮೂಲಭೂತ ಉದ್ದೇಶಗಳನ್ನು ಗುರುತಿಸಲಾಗಿದೆ. ಅದನ್ನು ಸಾಧಿಸಲು ಅಗತ್ಯವಾದ ಸನ್ನಿವೇಶಗಳನ್ನು, ಮಾರ್ಗಗಳನ್ನು, ಮಾರ್ಗೋಪಾಯಗಳನ್ನು ವಿವರಿಸಲಾಗಿದೆ. ಇವುಗಳನ್ನು ಸಾಧಿಸುವ ನಿಟ್ಟಿನಲ್ಲಿ ಲಭ್ಯವಿರುವ ಸೌಲಭ್ಯಗಳು ಅವಕಾಶಗಳನ್ನೂ ತೆರೆದಿಡಲಾಗಿದೆ. ಅಸಾಮರ್ಥ್ಯವುಳ್ಳವರಿಗೆ ಸಂಬಂಧಿಸಿದಂತೆ ಈಗಾಗಲೇ ಅಸ್ತಿತ್ವದಲ್ಲಿರುವ ಕಾರ್ಯಕ್ರಮಗಳ ಪರಿಚಯ ಮಾಡಲಾಗಿದೆ.

ದೈಹಿಕ ಹಾಗೂ ಮಾನಸಿಕ ದೌರ್ಬಲ್ಯವುಳ್ಳವರನ್ನು ಸಮಾನ ಭಾಗೀದಾರರಾಗಿ ಪರಿಗಣಿಸಿ, ಸಾಮಾನ್ಯ ಸಮುದಾಯದೊಂದಿಗೆ ಸಮನ್ವಯಗೊಳಿಸಿ ಸ್ವಾಭಾವಿಕವಾದ ಬೆಳವಣಿಗೆ ಪೂರಕವಾಗುವಂತೆ ಮತ್ತು ಧೈರ್ಯ, ವಿಶ್ವಾಸದೊಂದಿಗೆ ಬದುಕನ್ನು ಎದುರಿಸಲು ಸಮರ್ಥವಾಗುವಂತೆ ಅವರನ್ನು ಸಿದ್ಧಗೊಳಿಸುವುದು ಇವರ ಶಿಕ್ಷಣದ ಉದ್ದೇಶ ಎಂಬುದಾಗಿ ರಾಷ್ಟ್ರೀಯ ಶಿಕ್ಷಣ ನೀತಿ ದಾಖಲಿಸಿದೆ. ಈ ದಾಖಲೆ ಬೆಳಕಿಗೆ ಬಂದ ಕೆಲವೇ ಸಮಯದಲ್ಲಿ ಸಂಯುಕ್ತ ರಾಷ್ಟ್ರಗಳ ಮಕ್ಕಳ ಹಕ್ಕುಗಳ ಒಡಂಬಡಿಕೆಯು 'ಅಂತರ್ಗತತೆ'ಯ ಪರಿಕಲ್ಪನೆಯನ್ನು ಚರ್ಚೆಗೆ ಒಳಗುಮಾಡಿ ಇದು ಅಸಾಮರ್ಥ್ಯವಿರುವವರಿಗೆ ಮಾತ್ರ ಪ್ರಯೋಜನಕಾರಿಯಾಗುವಂತಹುದಲ್ಲ, ಇತರರನ್ನೂ ಒಳಗೊಳ್ಳುವಂತಹುದು, ಮಕ್ಕಳ ವೈವಿಧ್ಯತೆಗೆ ಧನಾತ್ಮಕವಾಗಿ ಪ್ರತಿಕ್ರಿಯಿಸುವ ಮತ್ತು ವೈಯಕ್ತಿಕ ವ್ಯತ್ಯಾಸಗಳನ್ನು ಸಮಸ್ಯೆಯಾಗಿ ನೋಡುವುದಕ್ಕಿಂತ ಕಲಿಕೆಯನ್ನು ಶ್ರೀಮಂತಗೊಳಿಸುವ ಅವಕಾಶಗಳಾಗಿ ಗಣಿಸುವ ಕ್ರಿಯಾಶೀಲ ಉಪಕ್ರಮ ಇದು, ಎಂದು ಪರಿಗಣಿಸಿ ಈ ಪರಿಕಲ್ಪನೆಗೆ ಒಂದು ವಿಶಾಲವ್ಯಾಪ್ತಿಯನ್ನು ತಂದುಕೊಟ್ಟಿದೆ. 2009ರ ಶಿಕ್ಷಣದ ಹಕ್ಕು ಕಾಯಿದೆಯು ಆಯಾ ಸರ್ಕಾರಗಳು ಮತ್ತು ಸ್ಥಳೀಯ ಅಧಿಕಾರಗಳು ಅಸಾಮರ್ಥ್ಯವುಳ್ಳ ಮಕ್ಕಳನ್ನು ಸಾಮಾನ್ಯ ಶಾಲೆಗಳಲ್ಲಿ ಸಮನ್ವಯಗೊಳಿಸಬೇಕು ಎಂದು ಘೋಷಿಸಿದೆ. 2009ರ ಶಿಕ್ಷಣದ ಹಕ್ಕು ಕಾಯಿದೆಯ ಅನ್ವಯಕ್ಕೆ ಸರ್ವಶಿಕ್ಷಾ ಅಭಿಯಾನ ಹಾಕಿಕೊಂಡ ಚೌಕಟ್ಟು ಗುಣಮಟ್ಟದ ಅಂತರ್ಗತತೆಯನ್ನು ಖಚಿತಪಡಿಸಿಕೊಳ್ಳಬೇಕೆಂದೂ ನೆರೆಕೆರೆ ಶಾಲೆಗಳಲ್ಲಿ ವಿಶೇಷ ಅಗತ್ಯವುಳ್ಳ ಎಲ್ಲ ಮಕ್ಕಳನ್ನೂ ಸಮನ್ವಯಗೊಳಿಸುವುದೇ ಇವರ ಶಿಕ್ಷಣದ ಅಂತಿಮ ಗುರಿ ಎಂದೂ ಶಿಫಾರಸುಮಾಡಿದೆ. ಹೀಗೆ ಅಸಾಮರ್ಥ್ಯವಿರುವವರನ್ನು ಶಿಕ್ಷಣಕ್ಕೆ ಸಂಬಂಧಿಸಿದಂತೆ ಮತ್ತೊಂದು ವ್ಯವಸ್ಥೆಗೆ ಪಲ್ಲಟಗೊಳಿಸುವ ಉಪಕ್ರಮದ ರಾಜ್ಯ ದಾಖಲೆಗಳ ಪರಿಣಾಮಗಳು, ಸಾಮಾನ್ಯಶಾಲೆಗಳಲ್ಲಿ 'ಸಮನ್ವಯ' ಮತ್ತು 'ಮೂಲವಾಹಿನಿಯೊಳಗೆ ಸೇರಿಸಿಕೊಳ್ಳುವಿಕೆ'ಗಳ ಕುರಿತಂತೆ ಜನಪ್ರಿಯವಾಗಿದ್ದ 'ಅಂತರ್ಗತತೆ'ಯ ಗ್ರಹಿಕೆಯನ್ನು

ಗೊಂದಲಕ್ಕೊಳಗುಮಾಡಿವೆ. ಈ ನಿಟ್ಟಿನಲ್ಲಿ, ಈ ಕೋರ್ಸಿನ ಮೂಲಕ ವಿದ್ಯಾರ್ಥಿಶಿಕ್ಷಕರು ಇವುಗಳನ್ನು ಕುರಿತ ತಮ್ಮ ಮತ್ತು ಶಾಲಾ ಅಧ್ಯಾಪಕರ ನಂಬಿಕೆ/ಮನೋಭಾವಗಳನ್ನು ಪ್ರಶ್ನಿಸಿಕೊಂಡು ಅವುಗಳನ್ನು ಸ್ಪಷ್ಟೀಕರಿಸಿಕೊಳ್ಳುವುದು ಮಾತ್ರವಲ್ಲದೆ, ಅವು ಅಂತರ್ಗತತೆಯ ಮೇಲೆ ಯಾವ ರೀತಿಯ ಪ್ರಭಾವವನ್ನು ಬೀರುತ್ತವೆ, ಈ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳು ಯಾವುವು ಎಂಬುದನ್ನು ಗುರುತಿಸಿ, ಸ್ಪಷ್ಟಪಡಿಸಿಕೊಳ್ಳುವ ಅವಕಾಶವನ್ನು ಈ ಕೋರ್ಸಿನ ಮೂಲಕ ಒದಗಿಸಲಾಗಿದೆ.

ಈ ಕೋರ್ಸು ಎಲ್ಲರೂ ಅರ್ಥಮಾಡಿಕೊಳ್ಳಬೇಕೆಂದು ಬಯಸುವ ಪ್ರಮುಖವಾದ ಕೆಲವು ವಿಚಾರಗಳಿವೆ. ಅವೆಂದರೆ, ಎಲ್ಲ ಮಕ್ಕಳೂ ಕಲಿಯಲು ಮತ್ತು ಬೆಳೆಯಲು ಸಮರ್ಥರು ಎಂಬ ನಂಬಿಕೆ, ಧನಾತ್ಮಕವಾದ ಮತ್ತು ವಿಭಿನ್ನವಾದ ಫಲಿತಾಂಶಗಳು ಸಾಧ್ಯವೂ ಹೌದು, ಸಾಧುವೂ ಹೌದು ಎಂಬ ಗ್ರಹಿಕೆ, ಉತ್ತಮ ಬೋಧನಾವಿಧಾನ ಎಂಬುದು ಕಲಿಯುವವರ ಬದಲಾಗುವ ಅಗತ್ಯಗಳಿಗೆ ಪ್ರತಿಕ್ರಿಯೆಸುವಂತಹುದಾಗಿ ಸದ್ಯೋಜಾತವಾದದ್ದು ಎಂಬ ವಿಚಾರ, ಉತ್ತಮ ಮಾಪನ ನೀತಿ ಬಹುವಿಧಾನ ಮತ್ತು ಉಪಕ್ರಮಗಳನ್ನು ಒಳಗೊಂಡಿರುವಂತಹುದು, ಅಲ್ಲದೆ ವಿಷಯಗಳಿಗಿಂತ ಕೌಶಲ ಮತ್ತು ಸಂಬಂಧಿತ ಅರಿವನ್ನು ಮಾಡುವಂತಹುದು ಎಂಬ ನಿಗಮನ, ಮಕ್ಕಳು, ಹೆತ್ತವರು, ಸಮುದಾಯ, ಅಧ್ಯಾಪಕರು, ಆಡಳಿತಗಾರರು, ನೀತಿ ನಿರೂಪಕರು ಇವರೆಲ್ಲರ ಬೆಂಬಲ ಮತ್ತು ಸಕ್ರಿಯ ಭಾಗವಹಿಕೆಯೊಂದಿಗೆ ಕಾರ್ಯನಿರ್ವಹಿಸುವ ಪರಿಸರವೇ ಆದರ್ಶ ಪರಿಸರ ಎಂಬ ಮನವರಿಕೆ.

ಈ ವಿಷಯಗಳನ್ನು ಮನದಟ್ಟುಮಾಡಲು ಕೋರ್ಸಿನಲ್ಲಿ ಎರಡು ಬ್ಲಾಕ್‌ಗಳ ಅಡಿಯಲ್ಲಿ 12 ಘಟಕಗಳನ್ನು ಗುರುತಿಸಿಕೊಳ್ಳಲಾಗಿದೆ. ಮೊದಲನೆಯ ಬ್ಲಾಕ್‌ನಲ್ಲಿ ಅಂತರ್ಗತತೆಯ ಪರಿಕಲ್ಪನೆ, ಅಂತರ್ಗತತೆಗೆ ಸಂಬಂಧಿಸಿದ ಮಾದರಿಗಳಲ್ಲಿ ಆದ ಪಲ್ಲಟಗಳು, ಅಂತರ್ಗತ ಶಿಕ್ಷಣವನ್ನು ಪ್ರಾರಂಭಿಸುವಲ್ಲಿನ ಪ್ರಯತ್ನಗಳು, ಈ ಕುರಿತ ರಾಷ್ಟ್ರಮಟ್ಟದ ಕಾರ್ಯಕ್ರಮಗಳು, ರಾಷ್ಟ್ರಮಟ್ಟದಲ್ಲಿ ಒದಗಿಸಿಕೊಟ್ಟಿರುವ ಸೌಲಭ್ಯಗಳು ಮತ್ತು ಅವಕಾಶಗಳು–ಈ ವಿಚಾರಗಳನ್ನು ಗಮನಿಸಲಾಗಿದೆ. ಎರಡನೇ ಬ್ಲಾಕ್‌ನಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳು ಮತ್ತು ಅವರ ಶಿಕ್ಷಣವನ್ನು ಕುರಿತಂತೆ ಹೆಚ್ಚಿನ ಮನವರಿಕೆ ಮಾಡಿಕೊಡಲಾಗಿದೆ. ವಿಶೇಷ ಅಗತ್ಯವಿರುವ ಮಕ್ಕಳ ನಿರ್ದಿಷ್ಟ ಅಗತ್ಯಗಳು, ಮಕ್ಕಳ ಸ್ವರೂಪ ಮತ್ತು ಅಗತ್ಯಗಳಲ್ಲಿನ ಭಿನ್ನತೆಗಳು, ಅಸಾಮರ್ಥ್ಯಗಳನ್ನು ಕುರಿತ ಸವಾಲುಗಳು, ಸವಾಲುಗಳನ್ನು ಎದುರಿಸಲು ಪೂರಕ ಕಾರ್ಯಕ್ರಮಗಳು, ಅಸಾಮರ್ಥ್ಯತೆಯನ್ನು ಪ್ರಭಾವಿಸುವ ಅಂಶಗಳು, ಅಸಾಮರ್ಥ್ಯತೆಯನ್ನು ವಿಭಿನ್ನತೆಯಾಗಿ ಪರಿಗಣಿಸಬೇಕಾದ ಆವಶ್ಯಕತೆ ಮತ್ತು ಮಾರ್ಗಗಳು, ಅಂತರ್ಗತ ಶಿಕ್ಷಣದಲ್ಲಿ ಅಗತ್ಯವಿರುವ ಹೊಂದಾಣಿಕೆಗಳು ಮತ್ತು ಮಾರ್ಪಾಡುಗಳು ಇವುಗಳನ್ನು ಗಮನಿಸಲಾಗಿದೆ.

ಅಂತರ್ಗತ ಶಿಕ್ಷಣ ಇಂದಿನ ಅಗತ್ಯ. ಈ ಅಗತ್ಯಕ್ಕೆ ಹೊಂದಿಕೊಳ್ಳುವಲ್ಲಿ ಈ ಸಾಮಗ್ರಿಯನ್ನು ನೀವು ಸಮರ್ಪಕವಾಗಿ ಬಳಸಿಕೊಂಡರೆ ಈ ಕೋರ್ಸಿನ ಉದ್ದೇಶ ಸಾರ್ಥಕವಾದಂತೆ.

# ಬ್ಲಾಕ್–1 : ಶಿಕ್ಷಣದಲ್ಲಿ ಅಂತರ್ಗತತೆಯನ್ನು ಅರ್ಥಮಾಡಿಕೊಳ್ಳುವುದು
## ಘಟಕ–1 : ಪೀಠಿಕೆ : ಅಂತರ್ಗತತೆಯ ಪರಿಕಲ್ಪನೆ ಮತ್ತು ಪ್ರಾಮುಖ್ಯತೆ

**ಘಟಕದ ರಚನೆ :**

1.1.1 ಕಲಿಕಾ ಉದ್ದೇಶಗಳು
1.1.2. ಪೀಠಿಕೆ
1.1.3 ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು
1.1.3.1 ಅಂತರ್ಗತತೆಯ ಅರ್ಥ ಮತ್ತು ಪರಿಕಲ್ಪನೆ
ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 1
1.1.3.2 ಅಂತರ್ಗತತೆಯ ಪ್ರಾಮುಖ್ಯತೆ
ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 2
1.1.3.4. ಸಾರಾಂಶಿಸೋಣ
1.1.5 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು
1.1.6 ಘಟಕಾಂತ್ಯ ಅಭ್ಯಾಸಗಳು
1.1.7. ಪರಾಮರ್ಶನ ಸೂಚಿ

### 1.1.1 ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಅಂತರ್ಗತತೆಯ ಅರ್ಥವನ್ನು ವಿವರಿಸುವರು.,
- ಅಂತರ್ಗತತೆಯ ವ್ಯಾಖ್ಯೆ ತಿಳಿಸುವರು.,
- ಅಂತರ್ಗತತೆಯ ಪರಿಕಲ್ಪನೆಯನ್ನು ವಿಶ್ಲೇಷಿಸುವರು., ಮತ್ತು
- ಅಂತರ್ಗತತೆಯ ಪ್ರಾಮುಖ್ಯತೆಯನ್ನು ವಿವರಿಸುವರು.

### 1.1.2. ಪೀಠಿಕೆ

ಪ್ರಿಯ ವಿದ್ಯಾರ್ಥಿ/ವಿದ್ಯಾರ್ಥಿನಿಯರೆ,

ನಿಮಗೆ ತಿಳಿದಿರುವಂತೆ ಶಿಕ್ಷಣ ಎಂಬುದು ವ್ಯಕ್ತಿಯ ಮೂಲಭೂತ ಹಕ್ಕು ಮಾತ್ರವಲ್ಲ; ಅದು ಮಾನವರಾಗಿ ಹುಟ್ಟಿದ ಎಲ್ಲರ ಹಕ್ಕು ಎಂಬುದಾಗಿಯೂ ಘೋಷಿತವಾಗಿರುವಂತಹುದು. ಹುಟ್ಟಿದ ಎಲ್ಲ ಮಗುವಿಗೂ ಶಿಕ್ಷಣದ ಹಕ್ಕು ಇದೆ ಎಂಬುದು ಇದರ ಅರ್ಥ. ಹಾಗಾಗಿ ಎಲ್ಲ ಮಗುವೂ ಶಾಲೆಗೆ ದಾಖಲಾಗಲೇ ಬೇಕು. ಮಗು ಶಾಲೆಗೆ ದಾಖಲಾಗುವುದು ಮಾತ್ರವಲ್ಲ; ಪ್ರತಿ ಮಗುವಿಗೂ ಸಮರ್ಪಕವಾದ ಶಿಕ್ಷಣ ದೊರೆಯಬೇಕು. ಈ ಜವಾಬ್ದಾರಿಯನ್ನು ತೆಗೆದುಕೊಳ್ಳುವವರು ಯಾರು? ಅಧ್ಯಾಪಕರು ಹಾಗೂ ಒಟ್ಟು ಶಾಲೆ ಈ ಜವಾಬ್ದಾರಿಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕು. ಇದು ಬಹಳ ಸುಲಭವಾದ ಕೆಲಸವಲ್ಲ. ಏಕೆಂದರೆ ಪ್ರತಿಯೊಂದು ಮಗುವೂ ಅನನ್ಯವಾಗಿದ್ದು, ಪ್ರತಿ ಮಗುವಿನ ಅಗತ್ಯಕ್ಕೆ ತಕ್ಕಂತೆ ಶಿಕ್ಷಣ ಸಾಗಬೇಕು. ಪ್ರತಿ ಮಗುವೂ ಅನನ್ಯವಾದುದು ಎಂದರೇನು? ಪ್ರತಿ ಮಗುವಿನ ಅಗತ್ಯ, ಆಸಕ್ತಿಗಳು, ಅಭಿರುಚಿ ಇತ್ಯಾದಿಗಳು ಬೇರೆಬೇರೆಯಾಗಿರುತ್ತವೆ ಎಂದರ್ಥ. ನೀವು ಗಮನಿಸಿರುವಂತೆ ಮಕ್ಕಳ ಅನನ್ಯತೆಯ ಐದು ಕ್ಷೇತ್ರಗಳನ್ನು ಗುರುತಿಸಿ.

| |
|---|
| 1. |
| 2. |
| 3. |
| 4. |
| 5. |

ಸರಿ, ನೀವು ಗುರುತಿಸಿರುವಂತೆ, ಮಗು ದೈಹಿಕವಾಗಿ, ಮಾನಸಿಕವಾಗಿ, ಮನೋವೈಜ್ಞಾನಿಕವಾಗಿ, ಸಾಮಾಜಿಕವಾಗಿ, ಬೌದ್ಧಿಕವಾಗಿ ಭಿನ್ನವಾಗಿರುತ್ತದೆ. ಈ ಕಾರಣದಿಂದಾಗಿ ಮಕ್ಕಳ ಸ್ವಭಾವ, ಆಸಕ್ತಿ, ಸಾಮರ್ಥ್ಯಗಳು, ಮನೋಭಾವ ಇತ್ಯಾದಿ ಅಂಶಗಳು ಭಿನ್ನವಾಗಿರುತ್ತವೆ. ಹಲವಾರು ಬಾರಿ ನಾವು ಏಕರೂಪವಾಗಿರುವ ಮಕ್ಕಳ ಜೊತೆ ವ್ಯವಹರಿಸುತ್ತಿದ್ದೇವೆ ಎಂದು ನಮಗನ್ನಿಸಿದರೂ ವಾಸ್ತವ ಸ್ಥಿತಿ ಹಾಗಿರುವುದಿಲ್ಲ. ನಾವು ಹಾಗೆ ಅಂದುಕೊಂಡ ಗುಂಪು ಭಿನ್ನರೂಪವಾದದ್ದೇ ಆಗಿರುತ್ತದೆ. ಅಂದಮೇಲೆ ಅವರ ಅಗತ್ಯಗಳೂ ಭಿನ್ನವಾಗಿಯೇ ಇರುತ್ತದೆ. ಹಾಗಾದರೆ ಈ ಭಿನ್ನ ಅಗತ್ಯದ ಹಿನ್ನೆಲೆಯುಳ್ಳ ಮಕ್ಕಳಿಗೆ ಶಿಕ್ಷಣ ನೀಡುವುದಾದರೂ ಹೇಗೆ ಎಂಬ ಒಂದು ದೊಡ್ಡ ಪ್ರಶ್ನೆ ಎದುರಾಗುತ್ತದೆ. ಇದಕ್ಕೆ ಉತ್ತರವಾಗಿ ಮೂಡಿಬಂದ ಪರಿಕಲ್ಪನೆಯೇ ಅಂತರ್ಗತ ಶಿಕ್ಷಣ.

ಅಂತರ್ಗತ ಶಿಕ್ಷಣ ಎಂಬುದು ಒಂದು ಸಂಕೀರ್ಣವಾದ ಪರಿಕಲ್ಪನೆ. ಹಾಗಾಗಿಯೇ ಅದು ಬಹಳ ಬಾರಿ ಈ ಕ್ಷೇತ್ರದ ಅಭ್ಯಾಸಿಗಳ ಹಾದಿ ತಪ್ಪಿಸುತ್ತದೆ ಕೂಡ. ಈ ಪರಿಕಲ್ಪನೆಗೆ ಹೆಚ್ಚು ಸಮಂಜಸವಾದ ವ್ಯಾಖ್ಯೆಯನ್ನು ಕೊಡುವ ಅನೇಕ ಪ್ರಯತ್ನಗಳು ಈಗಾಗಲೇ ನಡೆದಿವೆ. ಈ ಪ್ರಯತ್ನದಲ್ಲಿ ಅಂತರ್ಗತ ಸನ್ನಿವೇಶಗಳ ಕಲಿಕೆದಾರರ ಲಕ್ಷಣಗಳನ್ನು ಗುರುತಿಸಿಕೊಂಡು, ಅಂತರ್ಗತ ತರಗತಿಗಳ ಸ್ವರೂಪವನ್ನು ವರ್ಣಿಸುತ್ತಾ ಈ ಗುಂಪಿನ ಮಕ್ಕಳ ಶಿಕ್ಷಣಕ್ಕೆ ಅನುಸರಿಸಬಹುದಾದ ಮಾರ್ಗೋಪಾಯಗಳನ್ನೂ ಮೌಲ್ಯಮಾಪನ ಅಭ್ಯಾಸಗಳನ್ನೂ ಕಂಡುಕೊಳ್ಳಲಾಗಿದೆ. ನಮ್ಮ ದೇಶದ ಶೈಕ್ಷಣಿಕ ಸನ್ನಿವೇಶದಲ್ಲಿ ಅಂತರ್ಗತ ಶಿಕ್ಷಣದ ಹಾದಿಯಲ್ಲಿ ನಾವು ಹೆಜ್ಜೆಯನ್ನಿಟ್ಟಿರುವೆವಾದರೂ ಅದರ ಪರಿಕಲ್ಪನೆ, ಪ್ರಾಮುಖ್ಯತೆ ಮತ್ತು ಶಾಲೆಗಳಲ್ಲಿ ಅದರ ಅನ್ವಯದ ಕುರಿತಾಗಿ ಹೆಚ್ಚು ಒಮ್ಮತವಾದ ಮತ್ತು ಸ್ಪಷ್ಟವಾದ ಅರಿವು ಅಭ್ಯಾಸಿಗಳಲ್ಲಿ ಇನ್ನೂ ಮೂಡಬೇಕಾಗಿದೆ. ಶಿಕ್ಷಣದ ಹಕ್ಕು ಮೂಲಭೂತ ಹಕ್ಕು ಎಂದು ಘೋಷಿತವಾದ ಹಿನ್ನೆಲೆಯಲ್ಲಿ ಅಂತರ್ಗತ ಶಿಕ್ಷಣದ ಪರಿಸರವನ್ನು ಮೂಡಿಸಬೇಕಾದ ಅಗತ್ಯ ಮತ್ತು ಅದರ ಅನ್ವಯ, ಅಭ್ಯಾಸಗಳನ್ನು ಅನುಸರಿಸಬೇಕಾದ ಆವಶ್ಯಕತೆ ಶಿಕ್ಷಣದ ಫಲಾನುಭವಿಗಳ ದೃಷ್ಟಿಯಿಂದ ಅಗತ್ಯವೂ ಅನಿವಾರ್ಯವೂ ಆಗಿ ಪರಿಣಮಿಸಿದೆ. ಇದು ಸಮಾಜದ ಒಟ್ಟು ಹಿತಾಸಕ್ತಿಯ ದೃಷ್ಟಿಯಿಂದ ಸ್ವಾಗತಾರ್ಹವೂ ಹೌದು.

ಕರುಣ ಪ್ರಾಥಮಿಕ ಶಾಲೆಯ ಅಧ್ಯಾಪಕಿ. ಅವಳು ಬೋಧಿಸುವ ತರಗತಿಗಳಲ್ಲಿ ಅರೆ ದೃಷ್ಟಿಯುಳ್ಳ ಮಕ್ಕಳಿದ್ದಾರೆ. ಇವರು ಕನ್ನಡಕ ಹಾಕಿಕೊಂಡು ಮೊದಲ ಬೆಂಚಿನಲ್ಲೇ ಕುಳಿತಿರುತ್ತಾರೆ. ಕೇಳುವುದರಲ್ಲಿ ತೊಂದರೆ ಇರುವ ವಿದ್ಯಾರ್ಥಿಗಳಿದ್ದಾರೆ. ಅವರನ್ನೂ ಕರುಣ ಹತ್ತಿರದಲ್ಲೇ ಕುಳ್ಳಿರಿಸಿಕೊಳ್ಳುತ್ತಾಳೆ. ಅವಳ ಶಾಲೆಯ ಹತ್ತಿರದಲ್ಲೇ ಮತ್ತೊಂದು ಶಾಲೆ ಇದೆ. ಅಲ್ಲಿನ ಕೆಲವು ತರಗತಿಗಳಲ್ಲಿ ಓದುವ, ಬರೆಯುವ ತೊಂದರೆಯುಳ್ಳ ಮಕ್ಕಳಿದ್ದಾರೆ. ಇದು ಸಹಜವಾಗಿ ಓದುವಲ್ಲಿ ಮತ್ತು ಬರೆಯುವಲ್ಲಿ ಎದುರಾಗುವ ತೊಂದರೆಗಳಲ್ಲ. ಅದಕ್ಕಿಂತ ಭಿನ್ನವಾದುದು. ಅದೇ ಹಳ್ಳಿಯ ಮತ್ತೆ ಕೆಲವು ಶಾಲೆಗಳಲ್ಲಿ ತೆವಳಿಕೊಂಡು ಬರುವ, ನಡೆಯಲು ಕಷ್ಟವಾಗುವ ಮಕ್ಕಳೂ ಇದ್ದಾರೆ. ಈ ರೀತಿ ಒಂದಲ್ಲ ಒಂದು ತೊಂದರೆಯನ್ನು

ಅನುಭವಿಸುತ್ತಿದ್ದು, ವಿಶೇಷ ರೀತಿಯ ಪರಿಗಣನೆಯನ್ನು ಬಯಸುವ ಮಕ್ಕಳು ಎಲ್ಲ ಶಾಲೆಗಳಲ್ಲೂ ಭಿನ್ನ ಪ್ರಮಾಣದಲ್ಲಿಯಾದರೂ ಇರುತ್ತಾರೆ. ಇವರೆಲ್ಲರೂ ಅಂತರ್ಗತ ಶಿಕ್ಷಣಕ್ಕೆ ಒಳಪಡುವವರೇ. ಇಂದು ನಾವು 'ಸಾಮಾಜಿಕ ಅಂತರ್ಗತತೆ' ಎಂಬ ಪದವನ್ನೂ ಬಳಸುತ್ತೇವೆ. ಸಾಮಾಜಿಕವಾಗಿ ಹಿಂದುಳಿದಿರುವ ಮಕ್ಕಳು ಈ ಗುಂಪಿಗೆ ಸೇರುತ್ತಾರೆ. ಇವರೂ ಅಂತರ್ಗತ ಶಿಕ್ಷಣದ ಫಲಾಪೇಕ್ಷಿಗಳೇ ಎಂದು ಹೇಳಬಹುದು. ಈ ಅಂತರ್ಗತತೆಯ ಪರಿಕಲ್ಪನೆ ಮತ್ತು ಪ್ರಾಮುಖ್ಯತೆಯನ್ನು ನಾವೂ ಈ ಘಟಕದಲ್ಲಿ ಕಲಿಯೋಣ.

## 1.1.3.1. ಅಂತರ್ಗತತೆಯ ಅರ್ಥ ಮತ್ತು ಪರಿಕಲ್ಪನೆ:

ಇಂಗ್ಲಿಷಿನ 'inclusion' ಎಂಬ ಪದಕ್ಕೆ ಸಂವಾದಿಯಾಗಿ ಇಲ್ಲಿ 'ಅಂತರ್ಗತತೆ' ಎಂಬ ಪದವನ್ನು ಬಳಸಲಾಗಿದೆ. ಇದಕ್ಕಿಂತ ಉತ್ತಮವಾಗಿ ಈ ಪರಿಕಲ್ಪನೆಯನ್ನು ಸೂಚಿಸುವ ಪದ ಪತ್ತೆಯಾದರೆ ಅದನ್ನು ಬಳಸಬಹುದು. 'ಅಂತರ್ಗತತೆ' ಎಂಬುದಕ್ಕೆ 'ಒಳಗೊಳ್ಳುವ' 'ಒಳಗೆ ಸೇರಿಕೊಳ್ಳುವ' ಎಂಬ ಅರ್ಥಗಳು ರೂಢಿಯಲ್ಲಿವೆ. ಯಾವುದು ಎಲ್ಲಿ ಒಳಗೊಳ್ಳುತ್ತದೆ ಎಂಬುದನ್ನು ಸ್ಪಷ್ಟಪಡಿಸಿಕೊಂಡರೆ ಈ ಪರಿಕಲ್ಪನೆಯ ಅರ್ಥ ಸಮರ್ಪಕವೂ ಸಂಪೂರ್ಣವೂ ಆಗುತ್ತದೆ. ಕೆಲವರು ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು 'ಮೂಲವಾಹಿನಿಗೆ ಸೇರಿಸುವ'(Mainstreaming) ಎಂಬರ್ಥದಲ್ಲಿ ಈ ಪದವನ್ನು ಬಳಸಿದ್ದಾರೆ. ಇದರ ಪ್ರಕಾರ ಅಸಾಮರ್ಥ್ಯವುಳ್ಳ ಮಕ್ಕಳಿಗೆ ಅವರ ಶೈಕ್ಷಣಿಕ ಕೌಶಲಗಳು ಹೆಚ್ಚು ಕಡಿಮೆ ಇತರ (ಅಸಾಮರ್ಥ್ಯವಿಲ್ಲದಿರುವ) ಮಕ್ಕಳ ಕೌಶಲಗಳಿಗೆ ಸಮನಾಗುವವರೆಗೆ ಇತರ ಸಂಪನ್ಮೂಲ ಕಾರ್ಯಕ್ರಮಗಳ ಮೂಲಕ ಶಿಕ್ಷಣ ನೀಡಿ, ನಂತರ ಸಾಮಾನ್ಯ ಶಿಕ್ಷಣ ಸನ್ನಿವೇಶಗಳ ಮೂಲವಾಹಿನಿಯೊಳಗೆ ಅಂತರ್ಗತಗೊಳಿಸಲಾಗುತ್ತದೆ. ಹೀಗಾಗಿ 'ಸಾಮಾನ್ಯ' ಶೈಕ್ಷಣಿಕ ಸನ್ನಿವೇಶಕ್ಕೆ ಮಗು ಹೊಂದಿಕೊಳ್ಳುವಂತೆ ಮಾಡುವುದು ಇಲ್ಲಿಯ ಗುರಿ.

'ಶಾಲಾ ಸನ್ನಿವೇಶದಲ್ಲಿ ಮಗು ಬದಲಾಗಬೇಕು, ಅದು ಅಪೇಕ್ಷಣೀಯ' ಎಂದು ಬಯಸುವ ಬದಲಿಗೆ ಮಗು ಶಿಕ್ಷಣ ಪಡೆಯುವ ವ್ಯವಸ್ಥೆಯನ್ನು ಬದಲಿಸಿ ಆ ಮೂಲಕ ಮಗು ಸಹಜವಾಗಿ ಬೆಳೆಯುತ್ತಾ, ಅರಳುತ್ತಾ ಶಿಕ್ಷಣ ಪಡೆಯಬೇಕು ಎಂಬುದು ಅಂತರ್ಗತ ಶಿಕ್ಷಣದ ಉದ್ದೇಶ. ಇದು ಎರಡು ಅಂಶಗಳನ್ನು ಒಳಗೊಳ್ಳುತ್ತದೆ. ಒಂದು, ಕಾನೂನಾತ್ಮಕವಾದುದು ಮತ್ತೊಂದು ತಾತ್ವಿಕವಾದುದು. ಕಾನೂನಾತ್ಮಕವಾಗಿ, ಅಸಾಮರ್ಥ್ಯತೆಯುಳ್ಳವರ ಕಾಯಿದೆಗೆ(PWD Act–1992)ಸಂಬಂಧಿಸಿದುದು. ಅದರ ಪ್ರಕಾರ ಅಸಾಮರ್ಥ್ಯವುಳ್ಳ ಮಕ್ಕಳಿಗೆ 'ಕನಿಷ್ಟ ನಿಯಂತ್ರಿತ ಸನ್ನಿವೇಶ'ದಲ್ಲಿ ಶಿಕ್ಷಣ ನೀಡಬೇಕು. ಬಹಳಷ್ಟು ವೃತ್ತಿಪರರು, ಪೋಷಕರು, ವಕೀಲರು ಮತ್ತು ಗ್ರಾಹಕರ ಪ್ರಕಾರ ಈ ಕನಿಷ್ಟ ನಿಯಂತ್ರಿತ ಸನ್ನಿವೇಶ ಎಂದರೆ, ಸಾಮಾನ್ಯ ಶಾಲಾ ತರಗತಿಯ ಸನ್ನಿವೇಶವೇ. ಅಂತರ್ಗತತೆಯ ಹಿಂದೆ ಒಂದು ತಾತ್ವಿಕವಾದ ಅಂಶವೂ ಇದೆ. ಯಾವುದೇ ವ್ಯಕ್ತಿಯನ್ನಾಗಲೀ, ಭಿನ್ನತೆಯ ಹಿನ್ನೆಲೆಯಲ್ಲಿ ಪ್ರತ್ಯೇಕಿಸಬಾರದು. ಹೀಗೆ ಮಾಡಿದರೆ ಅದು ಭಿನ್ನತೆಯನ್ನು ಅಪಾರ್ಥಮಾಡಿಕೊಂಡಂತೆ ಎಂಬ ಜಾಗರೂಕ ಅರಿವು ಇಂದು ತಾತ್ವಿಕವಾಗಿಯಾದರೂ ಮೂಡಿದೆ ಎಂಬುದು ಸತ್ಯ. ನಾವು ಅಂತರ್ಗತತೆಯನ್ನು ಒಪ್ಪಿಕೊಂಡಲ್ಲಿ ನಮ್ಮ ಶಾಲೆಗಳು ವಿವಿಧತೆಯನ್ನು ಅಂತರ್ಗತಗೊಳಿಸಿಕೊಂಡ ಸಮಾಜವನ್ನು ಪ್ರತಿಬಿಂಬಿಸಬೇಕು.

ಅಂತರ್ಗತತೆಯು ಇಂದಿನ ಶಾಲಾ ಮಕ್ಕಳನ್ನು ಮತ್ತು ಯುವಜನತೆಯನ್ನು ಅರ್ಥಮಾಡಿಕೊಳ್ಳುವ, ಸ್ವಸ್ವರೂಪದಲ್ಲಿ ಅವರನ್ನು ಒಪ್ಪಿಕೊಳ್ಳುವ ಮತ್ತು ಭಿನ್ನತೆಯನ್ನು ಗೌರವಿಸುವ ಒಂದು ಪ್ರಕ್ರಿಯೆಯೂ ಹೌದು ಮತ್ತು ಫಲವೂ ಹೌದು. ನಮ್ಮ ಸಮಾಜದಲ್ಲಿ ಸಮತೆ ಮತ್ತು ಸಾಮಾಜಿಕ ನ್ಯಾಯವನ್ನು ಸಾಧಿಸುವ ಪ್ರಕ್ರಿಯೆ ಮತ್ತು ಫಲಶ್ರುತಿ ಅಂತರ್ಗತ ಶಿಕ್ಷಣ.

ಅಂತರ್ಗತ ಶಿಕ್ಷಣವನ್ನು ಎದುರಿಸಬೇಕಾದರೆ ಸಂಬಂಧಪಟ್ಟ ವ್ಯವಸ್ಥೆಯು ನೈತಿಕ, ಕಾನೂನಾತ್ಮಕ ಮತ್ತು ತಾತ್ವಿಕ ವಿಚಾರಗಳ ಚರ್ಚೆಗಿಂತ ಆಚೆಗೆ ಕಾರ್ಯನಿರತವಾಗಬೇಕು. ಈ ಚರ್ಚೆಗಳು ನಿರ್ಧಾರವಾಗಿದೆಯೋ ಇಲ್ಲವೋ ಅಂತರ್ಗತತೆ ಅಸ್ತಿತ್ವದಲ್ಲಿದೆ, ಇರಬೇಕು ಎಂಬುದಷ್ಟೇ ನಮಗೆ ಪಸ್ತುತ. ಇದು ನಮ್ಮ ಸಾರ್ವಜನಿಕ ಶಾಲೆಗಳ ಸತ್ಯವಾಗಿದೆ; ಮುಂದೆಯೂ ಆಗಿರಬೇಕು. ಅವರಿಗೆ ಪ್ರತ್ಯೇಕವಾಗಿ ಶಿಕ್ಷಣ ಕೊಡಬೇಕೋ ಇತರ ಮಕ್ಕಳ ಜೊತೆಗೆ ಕೊಡಬೇಕೋ ಇತ್ಯಾದಿ ಚರ್ಚೆಗಳಿಗಿಂತ ವಿಶೇಷ ಮಕ್ಕಳಿಗೆ ಪ್ರಜಾಪ್ರಭುತ್ವದ ಪ್ರಕಾರ ಶಿಕ್ಷಣ ಕೊಡಬೇಕು ಎಂಬುದಷ್ಟೇ ಮುಖ್ಯವಾಗುತ್ತದೆ.

1948ರಲ್ಲಿ ಸಂಯುಕ್ತ ರಾಷ್ಟ್ರಗಳು ಅನ್ವಯಿಸಿಕೊಂಡ 'ಅಂತರರಾಷ್ಟ್ರೀಯ ಹಕ್ಕು ದಾಖಲೆ'ಯ ಜೊತೆಜೊತೆಗೇ ಅಂತರ್ಗತತೆಯ ಪರಿಕಲ್ಪನೆಯೂ ಹುಟ್ಟಿಕೊಂಡಿತು. ಎಲ್ಲ ವ್ಯಕ್ತಿಗಳು ಜನ್ಮತಃ ಸ್ವತಂತ್ರರು ಹಾಗೂ ಗೌರವ ಮತ್ತು ಹಕ್ಕುಗಳಿಗೆ ಸಂಬಂಧಿಸಿದಂತೆ ಎಲ್ಲರೂ ಸಮಾನರು ಎಂಬ ಅಂಶವನ್ನು ಈ ದಾಖಲೆಯು ಗುರುತಿಸಿತು. ಈ ಘೋಷಣೆಯು ಮೂಲಭೂತವಾಗಿ ಸಮಾಜದ ಪ್ರತಿ ವಿಷಯದಲ್ಲಿ, ಅದರ ಎಲ್ಲ ಹಂತಗಳಲ್ಲಿ ಅಸ್ತಿತ್ವದಲ್ಲಿದ್ದ ತಾರತಮ್ಯದ ವಿಚಾರವನ್ನು ಕುರಿತಂತೆ ಚರ್ಚಿಸುವ ಆಶಯದಿಂದ ಮೂಡಿಬಂದುದಾಗಿತ್ತು.

ಅಂತರ್ಗತತೆ ಎಂಬುದು ಭಿನ್ನತೆಯನ್ನು ಗಣಿಸದೆ ಎಲ್ಲ ವ್ಯಕ್ತಿಗಳನ್ನೂ ಒಪ್ಪಿಕೊಳ್ಳುವ ಒಂದು ಪರಿಕಲ್ಪನೆ. ಇದು ಒಂದು ಪ್ರಮುಖ ಮನೋಭಾವವೂ ಹೌದು. ಅಂತರ್ಗತತೆ ಎಂಬುದು, ವ್ಯಕ್ತಿಗಳನ್ನು ವ್ಯಕ್ತಿಗಳಾಗಿ ಒಪ್ಪಿಕೊಳ್ಳುವುದು ಮತ್ತು ಅವರ ಸಾಮರ್ಥ್ಯಗಳನ್ನು ಪ್ರಶಂಸಿಸುವುದನ್ನು ಕುರಿತ ಮನೋಭಾವವೇ ಹೊರತು ಅವರ ನಡೆ, ನುಡಿ ಅಥವಾ ಅವರ ವರ್ತನೆಗಳನ್ನು ಕುರಿತದ್ದಲ್ಲ. ಇದರ ಜೊತೆಗೆ ಅಂತರ್ಗತತೆಯು ಪ್ರತಿಯೊಬ್ಬರಲ್ಲಿರುವ ವ್ಯತ್ಯಾಸಗಳನ್ನು ಅವರ ಅನನ್ಯತೆಯ ದೃಷ್ಟಿಯಿಂದ ಮೆಚ್ಚಿಕೊಳ್ಳುವುದನ್ನೂ ಒಳಗೊಳ್ಳುತ್ತದೆ.

ತಾತ್ವಿಕವಾಗಿ, ಅಸಾಮರ್ಥ್ಯವುಳ್ಳ ಮತ್ತು ಅಸಾಮರ್ಥ್ಯವಿಲ್ಲದಿರುವ ಮಕ್ಕಳು ಪ್ರತಿನಿತ್ಯವೂ ಯಾವುದೇ ಪೂರ್ವಾಗ್ರಹವಿಲ್ಲದೆ ಒಟ್ಟಿಗೆ ಕಲೆತು ಕಲಿಯಲು, ಒಬ್ಬರನ್ನೊಬ್ಬರು ಒಪ್ಪಿಕೊಂಡು ನಲಿಯಲು ಆಗುಮಾಡುವ ಪರಿಸರದ ಸೃಷ್ಟಿಯೇ ಅಂತರ್ಗತತೆ. ಅಸಾಮರ್ಥ್ಯವಿರುವ ಮಕ್ಕಳು ಚಿಕಿತ್ಸೆಯ ಹಂತದಲ್ಲಿದ್ದರೂ ಇದು ಸಾಧ್ಯವಾಗಬೇಕು ಎಂಬುದು ಈ ಪರಿಕಲ್ಪನೆಯ ಆಶಯ.

ಮಾನವನ ಬದುಕಿನ ಅನನ್ಯತೆಯ ಮೂಲಭೂತ ಲಕ್ಷಣ ಮೂಡಿಬರುವುದು ವ್ಯಕ್ತಿಯ ಬೆಳವಣಿಗೆ ಮತ್ತು ವಿಕಾಸದ ಅವಶ್ಯಕ ಅಂಶಗಳ ಮೂಲಕವಾಗಿಯೇ. ಇದರ ಗತಿ ಪ್ರತಿಯೊಬ್ಬರ ಬೆಳವಣಿಗೆಯ ಜೈವಿಕ ಮಿತಿಗಳಿಗೆ ಅನುಗುಣವಾದುದು. ಹಾಗಾಗಿ, ಎಲ್ಲ ವ್ಯಕ್ತಿಗಳಿಗೂ ಅವರದೇ ಆದ ಅಸ್ಮಿತೆಯೊಂದಿಗೆ, ಅವರಿಗೇ ವಿಶಿಷ್ಟವಾದ ವಿಭಿನ್ನವಾದ ವ್ಯಕ್ತಿತ್ವವೂ ಇರುತ್ತದೆ. ಇದರಿಂದ ವ್ಯಕ್ತಿವಿಕಾಸದ ಮಿತಿಯನ್ನು ವೈಯಕ್ತಿಕ ಭಿನ್ನತೆಗಳು ನಿರ್ಧರಿಸುತ್ತವೆ ಎಂಬುದು ತಿಳಿದುಬರುತ್ತದೆ. ಹೀಗಾಗಿ, ಇಬ್ಬರು ವ್ಯಕ್ತಿಗಳು ಒಂದೇ ರೀತಿಯಾಗಿರುವುದಿಲ್ಲ, ಮಾತ್ರವಲ್ಲ, ಪ್ರತಿಯೊಬ್ಬರೂ ದೈಹಿಕ, ಬೌದ್ಧಿಕ ಹಾಗೂ ವರ್ತನಾತ್ಮಕ ಸಾಮರ್ಥ್ಯಗಳಲ್ಲಿ ವಿಶಿಷ್ಟ ವಿಭಿನ್ನತೆಯನ್ನು ಪ್ರದರ್ಶಿಸುತ್ತಾರೆ ಎಂಬಲ್ಲಿ ಆಶ್ಚರ್ಯವೇನೂ ಇಲ್ಲ.

ಶಿಕ್ಷಣದ ಇತಿಹಾಸದಲ್ಲಿ ಈ ಹಿಂದೆ ಅಸ್ತಿತ್ವದಲ್ಲಿದ್ದ ವಿಶೇಷ ಶಿಕ್ಷಣ, ಸಮನ್ವಯ ಶಿಕ್ಷಣ ಮುಂತಾದ ಪರಿಕಲ್ಪನೆಗಳು ಒಂದು ರೀತಿಯಲ್ಲಿ ಶಿಕ್ಷಣದ ಇತಿಹಾಸದಷ್ಟೇ ಪುರಾತನವಾದುದು. ಅವುಗಳ ಅಡಿಯಲ್ಲಿ ವಿಶಿಷ್ಟ ಗುಂಪಿನ ಮಕ್ಕಳ ಅಗತ್ಯಗಳಿಗಾಗಿ ಪ್ರತ್ಯೇಕ ಶಾಲೆಗಳೇ ಮೂಡಿಬಂದಿದ್ದು, ಅವುಗಳು ವ್ಯಷ್ಟಿ ರೂಪದಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದವು. ಕಾಲಕಳೆದಂತೆ ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ, ಈ ಪ್ರತ್ಯೇಕ ಗುಂಪಿನ ಮಕ್ಕಳಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡಬೇಕು, ಅವರೂ ಗರಿಷ್ಠ ಮಟ್ಟದಲ್ಲಿ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು

ಯಾವುದೇ ತಾರತಮ್ಯವಿಲ್ಲದೆ ಸಮಾನ ಅವಕಾಶಗಳನ್ನು ಕೊಡಬೇಕು ಎಂಬ ನಿಟ್ಟಿನಲ್ಲಿ ಸಮನ್ವಯ ಶಿಕ್ಷಣದ ಕಲ್ಪನೆ ಮೂಡಿಬಂದಿತು. ಸಮನ್ವಯ ಶಿಕ್ಷಣದ ಪರಿಕಲ್ಪನೆ ಅಂತರ್ಗತ ಶಿಕ್ಷಣಕ್ಕೆ ಪೂರ್ವಾವಶ್ಯಕವಾದ ವೇದಿಕೆಯನ್ನು ಸಜ್ಜುಗೊಳಿಸಿತು. ಅಸಾಮರ್ಥ್ಯ ಮಕ್ಕಳನ್ನು ಸಾಮಾನ್ಯ ತರಗತಿಗಳಲ್ಲಿ ಸಮನ್ವಯಗೊಳಿಸುವುದರ ಮೂಲಕ ಅಂತರ್ಗತ ಶಿಕ್ಷಣ ಬೆಳೆದು ಪಸರಿಸಲು ಅನುವು ಮಾಡಿಕೊಟ್ಟಿತು. ಅಸಾಮರ್ಥ್ಯವುಳ್ಳ ಮಕ್ಕಳನ್ನು ಮೂಲವಾಹಿನಿಗೆ ಸೇರಿಸುವ ಪ್ರಕ್ರಿಯೆಯ ಬದಲಾವಣೆಯಲ್ಲಿ ಅಂತರ್ಗತ ಶಿಕ್ಷಣ ಮೂಡಿಬಂದಿತು.

ಶಿಕ್ಷಣ ವ್ಯವಸ್ಥೆಯಲ್ಲಿ ಅಂತರ್ಗತತೆ ಎಂಬುದು ಒಂದು ವಿಶಿಷ್ಟ ಸಂರಚನೆಯನ್ನು ಸೂಚಿಸುತ್ತದೆ. ಒಟ್ಟು ಶಿಕ್ಷಣದ ಸಾಮಾನ್ಯ ಸಂರಚನೆಯಲ್ಲಿ ವಿವಿಧ ಅಸಾಮರ್ಥ್ಯಗಳು ಮತ್ತು ವಿಭಿನ್ನತೆಗಳನ್ನುಳ್ಳ ಎಲ್ಲ ಮಕ್ಕಳ ಶಿಕ್ಷಣಕ್ಕೆ ಅಗತ್ಯವಾದ ಸೌಲಭ್ಯಗಳು, ಬೋಧನಾ ವಿಧಾನಗಳು, ಪಠ್ಯಕ್ರಮ ಮತ್ತು ತರಗತಿ ನಿರ್ವಹಣೆಯ ಒಟ್ಟು ರಚನೆಯನ್ನು ಅಳವಡಿಸಿಕೊಂಡ ಸಂರಚನೆ ಇದು. ಶಾಲಾವ್ಯವಸ್ಥೆಯಲ್ಲಿ ಅಂತರ್ಗತತೆಯ ಉಪಕ್ರಮವನ್ನು ಅನ್ವಯಿಸಿಕೊಳ್ಳುವಷ್ಟು ಅಗತ್ಯವಾದ ನಮ್ಯತೆಯನ್ನೊಳಪಡಿಸಿಕೊಳ್ಳುವುದು ಅತ್ಯಂತ ಸವಾಲಿನ ಕೆಲಸ. ಇದು ಎರಡು ಪ್ರಮುಖ ಮೂಲಭೂತ ಪ್ರಶ್ನೆಗಳನ್ನು ಕುರಿತ ಆಳವಾದ ಚಿಂತನೆಯನ್ನೂ ಚರ್ಚೆಯನ್ನೂ ಅಪೇಕ್ಷಿಸುತ್ತದೆ. ಶಿಕ್ಷಣದ ಒಟ್ಟು ಪಾತ್ರವೇನು ಎಂಬುದು ಒಂದು ಪ್ರಶ್ನೆಯಾದರೆ, ಶಾಲೆಯಲ್ಲಿ ಮಕ್ಕಳು ಏನು ಕಲಿಯಬೇಕು ಎಂಬುದು ನಮ್ಮ ಅಪೇಕ್ಷೆ ಎಂಬ ಪ್ರಶ್ನೆ ಮತ್ತೊಂದು. ಇದು ಒಟ್ಟು ಶಾಲಾ ವ್ಯವಸ್ಥೆಯನ್ನು ಸಾಂಪ್ರದಾಯಿಕ ಪರೀಕ್ಷಾಕೇಂದ್ರಿತ ವ್ಯವಸ್ಥೆಯಿಂದ ಅಂತರ್ಗತೀಯ ಶಿಶುಕೇಂದ್ರಿತ ಶಿಕ್ಷಣದ ಉಪಕ್ರಮಕ್ಕೆ ಹೊಂದಿಕೊಳ್ಳುವಂತೆ ಮಾಡುವ ಸುಧಾರಣೆಗೆ ಕೊಂಡೊಯ್ಯುತ್ತದೆ. ಇದಕ್ಕಾಗಿ ಅಂತರ್ಗತ ಶಿಕ್ಷಣದ ಪರಿಕಲ್ಪನೆಯ ಸ್ಪಷ್ಟವಾದ ನಿಖರವಾದ ಗ್ರಹಿಕೆಯೂ ಅಗತ್ಯವಾಗುತ್ತದೆ. ಅಂತರ್ಗತತೆ ಪರಿಣಾಮಕಾರಿಯಾಗಬೇಕಾದರೆ ಅದನ್ನು ಬೆಂಬಲಿಸುವವರೆಲ್ಲರಿಗೂ–ನಿಯೋಗಗಳು, ಅಧ್ಯಾಪಕರು, ಕುಟುಂಬಗಳು, ಸರ್ಕಾರೇತರ ಸಂಸ್ಥೆಗಳು, ಸಮುದಾಯದ ನಾಯಕರು– ಅಂತರ್ಗತತೆಯ ಸನ್ನಿವೇಶದಲ್ಲಿ ಕೈಗೊಳ್ಳುವ ಕೆಲಸ ಉತ್ಸಾಹಪೂರಿತವಾದ ಕಾಯಕವಾಗಬೇಕಾಗುತ್ತದೆ.

ವಿಭಿನ್ನ ಅಗತ್ಯದ ಮಕ್ಕಳ ಅಂತರ್ಗತತೆಯ ಪ್ರಯತ್ನ 1970ರ ದಶಕದಲ್ಲಿ ಹೆಚ್ಚು ಶಕ್ತಿಯುತವಾಯಿತು. ಈ ಪ್ರಯತ್ನಗಳನ್ನು ಮುಖಾ–ಮುಖಿ ಶಿಕ್ಷಣ ಕಾರ್ಯಕ್ರಮಗಳು ಮತ್ತು ದೂರಶಿಕ್ಷಣದ ಕಾರ್ಯಕ್ರಮಗಳೆರಡರಲ್ಲೂ ಗುರುತಿಸಬಹುದು. ಉದಾಹರಣೆಗೆ, ಮುಕ್ತ ಶಾಲೆಯ ರಾಷ್ಟ್ರೀಯ ಸಂಸ್ಥೆಯು ವಿಶೇಷ ಮಕ್ಕಳ ಅಗತ್ಯಕ್ಕನುಗುಣವಾದ ನಮ್ಯತೆಯುಳ್ಳ ಕೋರ್ಸುಗಳನ್ನು ತೆರೆದು ಅವರ ಕಲಿಕಾಗತಿಗನುಗುಣವಾದ ಬೆಳವಣಿಗೆಗೆ ಅವಕಾಶಗಳನ್ನು ಕಲ್ಪಿಸಿದೆ.

ವಿಶೇಷ ಅಗತ್ಯವುಳ್ಳ ಮಕ್ಕಳು ಶಾಲೆಯಲ್ಲಿ ವಿಶೇಷ ಅಗತ್ಯವಿಲ್ಲದ(ಸಾಮಾನ್ಯ ಶಿಕ್ಷಣದ) ಮಕ್ಕಳೊಂದಿಗೆ ಇಡೀ ದಿನ ಅಥವಾ ದಿನದ ಹೆಚ್ಚಿನ ಭಾಗವನ್ನು ಕಳೆಯುವ ಮಾದರಿಯನ್ನು ಅಂತರ್ಗತತೆಯು ಸೂಚಿಸುತ್ತದೆ. ಇದು ವಿಶೇಷ ಶಿಕ್ಷಣದ ಸನ್ನಿವೇಶದಲ್ಲಿ ವೈಯಕ್ತೀಕರಿಸಿದ ಶಿಕ್ಷಣ ಕಾರ್ಯಕ್ರಮದ ಜೊತೆಗೆ ಹುಟ್ಟಿಕೊಂಡುದು. ಇತರ ಮಕ್ಕಳ ಜೊತೆಯಲ್ಲಿ ಬೆರೆತು ಬಾಳುವಿಕೆಯ ಅನುಭವ ವಿಶೇಷ ಅಗತ್ಯವುಳ್ಳ ಮಕ್ಕಳ ಬದುಕಿನ ಯಶಸ್ಸಿಗೆ ಹೆಚ್ಚು ಅಗತ್ಯ ಹಾಗೂ ಪರಿಣಾಮಕಾರಿ ಎಂಬ ಆಲೋಚನೆಯ ಮೇಲೆ ರೂಪಿತವಾದ ಪರಿಕಲ್ಪನೆ ಇದು. ಈ ಅಭ್ಯಾಸವು ವಿಶೇಷ ಶಾಲೆ, ವಿಶೇಷ ತರಗತಿಗಳ ಸಂಪೂರ್ಣ ಅಳವಡಿಕೆಯನ್ನು ನಿರಾಕರಿಸುವುದಾದರೂ ಅಗತ್ಯವಿದ್ದಷ್ಟುಮಟ್ಟಿಗೆ ಅವುಗಳ ಬಳಕೆಗೆ ಅವಕಾಶ ನೀಡುತ್ತದೆ. ಇದು ವಿಶೇಷ ಅಗತ್ಯವಿಲ್ಲದ ಮಕ್ಕಳನ್ನು ವಿಶೇಷ ಅಗತ್ಯವಿರುವ ಮಕ್ಕಳಿಂದ ಬೇರ್ಪಡಿಸಬೇಕಾದ ಸನ್ನಿವೇಶದಲ್ಲಿ ಮಾತ್ರ. ಅಂತರ್ಗತ ತರಗತಿಗಳಿರುವ ಶಾಲೆಗಳು ಪ್ರತ್ಯೇಕ ತರಗತಿಗಳ ಅಗತ್ಯವನ್ನು ಒಪ್ಪಿಕೊಳ್ಳುವುದಿಲ್ಲ. ವಿದ್ಯಾರ್ಥಿಗಳ

ಸಂಖ್ಯೆ ಹೆಚ್ಚಾಗಿರುವ ಕಾರಣದಿಂದಾಗಿ ಅಧ್ಯಾಪಕರ ವಿಶೇಷ ಗಮನ ಇಲ್ಲಿ ಸಿಗದಿರುವುದು ಒಂದು ರೀತಿಯಲ್ಲಿ ವಿಶೇಷ ಮಕ್ಕಳಿಗೆ ಒಳ್ಳೆಯದೇ. ಅವರು ಸಮಸ್ಯೆ ಇರುವ ಮಕ್ಕಳ ಪ್ರಪಂಚದಲ್ಲಲ್ಲದೆ ಸಾಮಾನ್ಯ ಸನ್ನಿವೇಶದಲ್ಲಿ, ಇತರ ಮಕ್ಕಳ ಒಡನಾಟದಲ್ಲಿ ಸಾಮಾಜಿಕ ವರ್ತನೆಗಳನ್ನು ಸಹಜವಾಗಿಯೇ ಕಲಿಯುವ ಅವಕಾಶ ಇಲ್ಲಿ ಸಿಗುತ್ತದೆ. ಅವರೊಡನೆ ಹೊಂದಿಕೊಳ್ಳಬೇಕಾದುದು ಅನಿವಾರ್ಯವಾಗಿ, ಹೊರಜಗತ್ತಿನಲ್ಲಿ ಸಾಮಾಜೀಕರಣ ಸುಲಭವಾಗುತ್ತದೆ. ಅಂತರ್ಗತತೆಯು ಇತರ ಮಕ್ಕಳ ಜೊತೆಗೆ ಬೆಳೆಯುವುದನ್ನು ಪ್ರೋತ್ಸಾಹಿಸುವುದರಿಂದ ಸಮಸ್ಯೆಯುಳ್ಳ ಮಕ್ಕಳು ಬೆಳೆಯುವ ಅವಕಾಶಗಳನ್ನು ಇದು ರಕ್ಷಿಸುತ್ತದೆ.

ಭಾರತದಲ್ಲಿ, ಬಹಳಷ್ಟು ಇತರ ದೇಶಗಳಲ್ಲಿಯಂತೆ, ದೈಹಿಕವಾಗಿ ಮತ್ತು ಮಾನಸಿಕವಾಗಿ ಸವಾಲುಗಳುಳ್ಳ ಮಕ್ಕಳ ಶಿಕ್ಷಣಕ್ಕೆ ವಿಶೇಷ ಸವಲತ್ತುಗಳನ್ನು ಹುಟ್ಟುಹಾಕುವುದು ಎಂಬರ್ಥದಲ್ಲಿಯೇ ಅಂತರ್ಗತ ಶಿಕ್ಷಣದ ಪರಿಕಲ್ಪನೆಯನ್ನು ವ್ಯಾಖ್ಯಾನಿಸಲಾಗುತ್ತದೆ. ಈ ತಿಳಿವಳಿಕೆಯು ಸವಾಲುಗಳುಳ್ಳ ಮಕ್ಕಳ ವಿಶೇಷ ಅಗತ್ಯಗಳನ್ನು ಗಮನಕ್ಕೆ ತಂದು, ಇತರ ಸವಾಲುಗಳಿಲ್ಲದ ಮಕ್ಕಳಿಗೆ ಸಿಗುವ ಶಿಕ್ಷಣದಿಂದ ವಂಚಿತರಾಗದಿರುವಂತೆ ವಿಶೇಷ ವ್ಯವಸ್ಥೆಯನ್ನು ತರಬೇಕಾದ ಅಗತ್ಯವನ್ನು ಗಣನೆಗೆ ತರುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಆದರೂ ಈ ಪರಿಕಲ್ಪನೆಯು ಸಮರ್ಪಕ ಅವಕಾಶ, ಮೂಲಸೌಲಭ್ಯಗಳು ಮತ್ತು ಅರ್ಥಪೂರ್ಣ ಪಠ್ಯಕ್ರಮದಿಂದ ವಂಚಿತರಾದ ಗ್ರಾಮೀಣ, ದೇಶೀ ಅಥವಾ ಆರ್ಥಿಕವಾಗಿ ಹಿಂದುಳಿದ ವಿಶಾಲ ಸಮುದಾಯದ ಶೈಕ್ಷಣಿಕ ದುರವಸ್ಥೆಯನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.

ಇಂದು ಭಾರತದ ಸನ್ನಿವೇಶದಲ್ಲಿ ನೀತಿ ನಿಯಾಮಕರು ಮತ್ತು ಬೆಂಬಲಿಗರೆಲ್ಲರೂ 'ಅಂತರ್ಗತ ಶಿಕ್ಷಣ'ವು ಅಸಾಮರ್ಥ್ಯತೆಯ ವಿಚಾರವನ್ನು ಮೀರಿ ಯುನೆಸ್ಕೊದ 1994ನೆಯ ಸಲಮಂಕ ಘೋಷಣೆಯ (Salamanca Declaration UNESCO 1994)) ಆಚೆಗೂ ತೆರೆದುಕೊಂಡು ಸಮಾಜದ ಅಂಚಿನಲ್ಲಿರುವ ಎಲ್ಲ ವರ್ಗಗಳನ್ನೂ ಅಂದರೆ ದಲಿತರು, ಗಿರಿಜನರು ಮತ್ತು ದೇಶೀ ವಾಸಿಗಳು, ಧಾರ್ಮಿಕ ಮತ್ತು ಭಾಷಿಕ ಅಲ್ಪಸಂಖ್ಯಾತರು, ಬಾಲ ಕಾರ್ಮಿಕರು ಜೊತೆಗೆ ದೈಹಿಕವಾಗಿ ಹಾಗೂ ಮಾನಸಿಕ ಅಸಾಮರ್ಥ್ಯವುಳ್ಳವರು ಮತ್ತು ಗಮನಾರ್ಹ ಸಂಖ್ಯೆಯಲ್ಲಿ ಶಾಲೆಯಿಂದ ಹೊರಗಿರುವ ಈ ಎಲ್ಲ ವರ್ಗಗಳ ಬಾಲಕಿಯರನ್ನು ಗಣನೆಗೆ ತೆಗೆದುಕೊಳ್ಳಬೇಕು ಎಂಬುದನ್ನು ದೃಢವಾಗಿ ಒಪ್ಪಿಕೊಳ್ಳುತ್ತಾರೆ. ಅಂತರ್ಗತ ಶಿಕ್ಷಣವು ಈ ಎಲ್ಲ ಕಲಿಕೆದಾರರಿಗೂ ಉತ್ತಮ ಸಾಮಾಜಿಕ ಬೆಳವಣಿಗೆ ಮತ್ತು ಶೈಕ್ಷಣಿಕ ಫಲಶ್ರುತಿಗಳನ್ನು ತಂದುಕೊಡುತ್ತದೆ ಎಂಬುದನ್ನು ಸಂಶೋಧನೆಗಳೂ ತೋರಿಸಿಕೊಟ್ಟಿವೆ.

ಅಂತರ್ಗತತೆಯ ಪರಿಸರದಲ್ಲಿ ಸಮಸ್ಯೆಯುಳ್ಳ ಮಕ್ಕಳು ನೈಜ ಸನ್ನಿವೇಶಗಳಿಗೆ ತೆರೆದುಕೊಂಡು, ಜೊತೆಯಲ್ಲೇ ಕಲಿಯುತ್ತಿರುವ ಇತರ ಮಕ್ಕಳ ಜೊತೆಯಲ್ಲಿ ವ್ಯವಹರಿಸಬೇಕಾಗುತ್ತದೆ. ಈ ಸನ್ನಿವೇಶದಲ್ಲಿ ಪ್ರತಿಯೊಬ್ಬರ ಸ್ವಭಾವ, ಆಸಕ್ತಿ ಮತ್ತು ಸಾಮರ್ಥ್ಯಗಳು ಭಿನ್ನವಾಗಿರುತ್ತವೆ. ಮಕ್ಕಳು ಈ ಸನ್ನಿವೇಶಗಳಿಗೆ ಒಗ್ಗಿಕೊಳ್ಳುವುದನ್ನು ಕಲಿಯುವುದು ಅನಿವಾರ್ಯವಾಗುತ್ತದೆ. ಹಾಗಾಗಿ ಅಂತರ್ಗತತೆ ಸಾಮಾಜಿಕ ಕೌಶಲಗಳ ಬೆಳವಣಿಗೆ ಮತ್ತು ಉತ್ತಮ ಸಾಮಾಜಿಕ ಅಂತರ್‌ಕ್ರಿಯೆಗಳಿಗೆ ದಾರಿಮಾಡಿಕೊಡುತ್ತದೆ. ಕಲೆತು ಕಲಿಯುವುದರಿಂದ ಅಸಾಮರ್ಥ್ಯವಿಲ್ಲದ ಸಹಪಾಠಿಗಳು ಅಸಾಮರ್ಥ್ಯವಿರುವ ಮಕ್ಕಳ ಕುರಿತು ಧನಾತ್ಮಕ ಮನೋಭಾವವನ್ನು ಬೆಳೆಸಿಕೊಳ್ಳುತ್ತಾರೆ. ಹೀಗೆ ಅಂತರ್ಗತ ಶಿಕ್ಷಣವು ವಿಭಿನ್ನತೆಯನ್ನು ಒಪ್ಪಿಕೊಳ್ಳುವ, ಗೌರವಿಸುವ ಮತ್ತು ವಿಜೃಂಭಿಸುವ ಮೂಲಕ ಅಂತರ್ಗತ ಸಮಾಜಕ್ಕೆ ಬುನಾದಿಯನ್ನು ಹಾಕುತ್ತದೆ. ಆದರೂ ಜಾಗತಿಕವಾಗಿ ಕೆಲವು ರಾಷ್ಟ್ರಗಳು ಒಂದಲ್ಲ ಒಂದು ರೀತಿಯ ಪ್ರತ್ಯೇಕತೆಯ ಸನ್ನಿವೇಶವನ್ನು ನಿರ್ವಹಿಸುವ ಅಗತ್ಯವನ್ನು ಕಾಣುತ್ತಿವೆ. ಅದು ಸಾಮಾನ್ಯ ಶಾಲೆಗಳಲ್ಲಿ ವಿಶೇಷ ತರಗತಿಯ ವ್ಯವಸ್ಥೆ ಇರಬಹುದು ಇಲ್ಲವೇ ವಿಶೇಷ ಶಾಲೆಗಳೇ ಇರಬಹುದು.

ಮತ್ತೆ ಕೆಲವು ರಾಷ್ಟ್ರಗಳಲ್ಲಿ ಅಂತರ್ಗತ ಶಿಕ್ಷಣದ ಕಾರ್ಯಕ್ರಮಗಳು ನಿಯಮಿತವಾಗಿವೆಯಾದರೂ ಅಂತರ್ಗತ ಶಿಕ್ಷಣದ ಕಡೆಗೆ ಸ್ಪಷ್ಟವಾದ ಒಲವು ಇರುವುದು ಕಾಣಬರುತ್ತದೆ. ಭಾರತೀಯ ಶಿಕ್ಷಣದ ಸಂದರ್ಭದಲ್ಲಿಯಂತೂ ಕೆಲವು ಪಂಗಡಗಳನ್ನು ಶಿಕ್ಷಣದಿಂದ ಹೊರಗಿಡುವಿಕೆಯ ಕ್ರಮವನ್ನು ಅಂತರ್ಗತ ಶಿಕ್ಷಣದ ತತ್ವಗಳ ಮೂಲಕ ಸವಾಲಿಗೆ ಒಡ್ಡದಿದ್ದರೆ ಸಾಮಾನ್ಯ ಶಿಕ್ಷಣ ವ್ಯವಸ್ಥೆಯ ಕನಸು ನನಸಾಗುವುದು ಸಾಧ್ಯವೇ ಇಲ್ಲ.

## ಅಂತರ್ಗತತೆಯ ವ್ಯಾಖ್ಯೆಗಳು :

ಅಂತರ್ಗತತೆಯ ವ್ಯಾಖ್ಯೆಯನ್ನು ಕುರಿತಂತೆ ಭಿನ್ನಾಭಿಪ್ರಾಯಗಳಿವೆ. ಕೆಲವರು ಇದನ್ನು ವಿಶೇಷ ಶಿಕ್ಷಣದ ವಿಸ್ತರಣ ಎಂದು ನೋಡಿದರೆ ಮತ್ತೆ ಕೆಲವರು ಇದು ವಿಶೇಷ ಮಕ್ಕಳನ್ನು ಮೂಲವಾಹಿನಿಗೆ ತರುವ ಮತ್ತೊಂದು ವಿಧದ ಉಪಕ್ರಮ ಎನ್ನುತ್ತಾರೆ. ತಜ್ಞರ ಪ್ರಕಾರ ಅಂತರ್ಗತತೆಯನ್ನು ಕೆಲವೊಮ್ಮೆ ಮೂಲವಾಹಿನಿಗೆ ಸೇರಿಸುವಿಕೆ ಮತ್ತು ವಿಶೇಷ ಶಿಕ್ಷಣದ ಮತ್ತೊಂದು ರೂಪ ಎಂದು ಪರಿಗಣಿಸುವುದು ಹೌದಾದರೂ ಈ ಪರಿಕಲ್ಪನೆಗೆ ವೈದ್ಯಕೀಯ ನಿಹಿತಾರ್ಥಗಳಿರುವುದರಿಂದ, ಇದು ಮರುಕಳಿಸುವ ಸಾಧ್ಯತೆಗಳಿಂದ ಮತ್ತು ಇದಕ್ಕೆ ರೋಗಶಾಸ್ತ್ರದ ಮೂಲವಿರುವುದರಿಂದ ಈ ರೀತಿಯ ಪರಿಗಣನೆ ಸಮಸ್ಯೆಯಾಗಬಹುದು ಎಂಬ ಅಭಿಪ್ರಾಯವಿದೆ. ಈ ಅಂತರ್ಗತೆಯ ವಿಚಾರ ಮತ್ತು ಅನ್ವಯಕ್ಕೆ 'ಹಕ್ಕು ಆಧಾರಿತ ಚೌಕಟ್ಟು' ಇರುವುದರಿಂದ ಅಂತರ್ಗತ ಶಿಕ್ಷಣವನ್ನು ಬೆಳೆಸುವುದು ಅರ್ಥಪೂರ್ಣವೆಂದು ಪರಿಗಣಿತವಾಗಿದೆ.

ಅಸಾಮರ್ಥ್ಯವುಳ್ಳ ಮಕ್ಕಳು ಮತ್ತು ಯುವಜನತೆಯ ಅಂತರ್ಗತ ಶಿಕ್ಷಣದ ಕ್ರಿಯಾಯೋಜನೆ(2005) ನೀಡಿರುವ ಅಂತರ್ಗತಶಿಕ್ಷಣದ ವ್ಯಾಖ್ಯೆ ಹೀಗಿದೆ: 'ಸಮಗ್ರ ಅರ್ಥದಲ್ಲಿ, ಅಂತರ್ಗತ ಶಿಕ್ಷಣವು ಎಲ್ಲ ಮಕ್ಕಳ, ಯುವಜನರ ಮತ್ತು ವಯಸ್ಕರ ಅದರಲ್ಲೂ ಮುಖ್ಯವಾಗಿ ಶಿಕ್ಷಣಬಾಹಿರರಾಗುವ ಸಮಾಜದ ಅಂಚಿನಲ್ಲಿರುವವರ ಕಲಿಕಾ ಅಗತ್ಯಗಳನ್ನು, ಎದುರಿಸುವ ಒಂದು ಉಪಕ್ರಮ. ಸಾಮಾನ್ಯ ಶಾಲಾಪೂರ್ವ ಅವಕಾಶಗಳು, ಶಾಲೆಗಳು ಮತ್ತು ಸಮರ್ಪಕ ಬೆಂಬಲ ಸೇವೆಯ ಜಾಲದಿಂದೊಡಗೂಡಿರುವ ಸಮುದಾಯ ಶಿಕ್ಷಣ ವ್ಯವಸ್ಥೆ ಈ ಅವಕಾಶಗಳ ಮೂಲಕವಾಗಿ ಅಸಾಮರ್ಥ್ಯವುಳ್ಳ ಮತ್ತು ಇಲ್ಲದಿರುವ ಎಲ್ಲ ಕಲಿಕಾರ್ಥಿಗಳು, ಯುವಜನರು, ಜೊತೆಯಲ್ಲಿ ಕಲಿಯಲು ಸಮರ್ಥರಾಗುತ್ತಾರೆ ಎಂಬುದನ್ನು ಇದು ಸೂಚಿಸುತ್ತದೆ.

ಇದು ವಿಭಿನ್ನ ರೀತಿಯ ಕಲಿಕಾರ್ಥಿಗಳ ಅಗತ್ಯಗಳ ಜೊತೆಗೆ ಅವುಗಳನ್ನು ಎದುರಿಸುವ, ನಮ್ಯತೆಯಿಂದ ಕೂಡಿದ ಶೈಕ್ಷಣಿಕ ವ್ಯವಸ್ಥೆಯಿಂದ ಮಾತ್ರ ಸಾಧ್ಯವಾಗುತ್ತದೆ. ಇದು ವ್ಯವಸ್ಥೆಯ ಎಲ್ಲ ಫಲಾನುಭವಿಗಳಿಗೂ (ಕಲಿಕೆದಾರರು, ಪೋಷಕರು, ಸಮುದಾಯ, ಅಧ್ಯಾಪಕರು, ಆಡಳಿತಗಾರರು, ನಿಯಮ ನಿಯಾಮಕರು) ವಿವಿಧತೆಯ ಸನ್ನಿವೇಶ ಹಿತಕರವಾಗಿರುವಂತೆ ಹಾಗೂ ಅವರೆಲ್ಲರೂ ಅಸಾಮರ್ಥ್ಯವನ್ನು ಒಂದು ಸಮಸ್ಯೆ ಎಂಬುದಕ್ಕಿಂತ ಒಂದು ಸವಾಲು ಎಂದು ನೋಡುವಂತಾಗುವ ಗುರಿಯನ್ನು ಹೊಂದಿದೆ.

ಅಸಾಮರ್ಥ್ಯವುಳ್ಳವರ ಅಗತ್ಯ ಮತ್ತು ಶಕ್ತಿಗಳಿಗನುಗುಣವಾಗಿ ಅವರ ಎಲ್ಲ ಅಗತ್ಯಗಳಿಗೆ ಹೊಂದಿಕೆಯಾಗುವ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸುವುದೇ ಅಂತರ್ಗತ ಶಿಕ್ಷಣ ಎಂದು ವ್ಯಾಖ್ಯೆ ಮಾಡಬಹುದು. ಪ್ರತಿಯೊಂದು ಮಗುವಿನ ಭಾಗವಹಿಕೆಯೂ ರಾಷ್ಟ್ರೀಯ ಬೆಳವಣಿಗೆಗೆ ಅಗತ್ಯವಾದುದು. ಸುಮಾರು 40 ಮಿಲಿಯನ್ ಮಕ್ಕಳು ಶಿಕ್ಷಣವ್ಯವಸ್ಥೆಯ ಅವಕಾಶದಿಂದ ಹೊರಗುಳಿದಿದ್ದಾರೆ ಎಂಬುದು ಗಮನಾರ್ಹ. ನಾವು ಅರ್ಥಮಾಡಿಕೊಂಡಿರುವಂತೆ, ಸಮರ್ಪಕ ಬೋಧನಾ ವಿಧಾನದ ಅಳವಡಿಕೆಯಿಂದ ಅಧ್ಯಾಪಕರು ಎಲ್ಲ ವಿದ್ಯಾರ್ಥಿಗಳ ವಿಭಿನ್ನ ಅಗತ್ಯಗಳನ್ನು ಗಮನಿಸಿಕೊಳ್ಳುತ್ತಾ ಎಲ್ಲ ಮಕ್ಕಳಿಗೂ –ಅಸಾಮರ್ಥ್ಯವಿರುವ ಮತ್ತು ಇಲ್ಲದಿರುವ– ಒಂದೇ ವರ್ಗಕೋಣೆಯಲ್ಲಿ ಶಿಕ್ಷಣ ಕೊಡುವ ಪ್ರಕ್ರಿಯೆ ಅಂತರ್ಗತ ಶಿಕ್ಷಣ ಎಂದು ಹೇಳಬಹುದು.

ಹೆಚ್ಚು ಕಡಿಮೆ ಒಂದೇ ರೀತಿಯ ಅರ್ಥವನ್ನು ಕೊಡುವ ಮೇಲಿನ ವ್ಯಾಖ್ಯೆಗಳಿಂದ, ಅಂತರ್ಗತ ಶಿಕ್ಷಣದ ಯಶಸ್ಸು ಅನೇಕ ಅಂಶಗಳನ್ನು ಅವಲಂಬಿಸಿದೆ ಎಂದು ಹೇಳಬಹುದು. ಅಂತರ್ಗತ ಶಿಕ್ಷಣದ ಅಭ್ಯಾಸಕ್ಕೆ ಸಮರ್ಪಕವಾದ ಪರಿಸರ ಅಗತ್ಯ. ವಿದ್ಯಾರ್ಥಿಗಳ ಸಾಮರ್ಥ್ಯ, ಅಸಾಮರ್ಥ್ಯ ಏನೇ ಇರಲಿ, ಎಲ್ಲ ಶಾಲೆಗಳು ವಿಭಿನ್ನ ಮಕ್ಕಳ ವಿವಿಧ ಅಗತ್ಯಗಳನ್ನು ಪೂರೈಸುವಂತಿರಬೇಕು. ಹೀಗಾಗಿ ಅಂತರ್ಗತ ತರಗತಿ ಎಂಬುದು, ಸಾಮಾನ್ಯವಾಗಿ ಹೆಚ್ಚು ಸಾಮರ್ಥ್ಯವಿರುವವರಿಗಾಗಿ ಇರುವ ತರಗತಿಯಲ್ಲ; ಬದಲಿಗೆ ಎಲ್ಲ ಮಕ್ಕಳನ್ನೂ ಅವರವರ ಸಾಮರ್ಥ್ಯಕ್ಕನುಗುಣವಾಗಿ ಬೆಳೆಯಲು ಅಗತ್ಯವಾದ ಅವಕಾಶಗಳನ್ನೊದಗಿಸುವ ಸನ್ನಿವೇಶವನ್ನುಳ್ಳ ತರಗತಿ. ಈ ವಿವರಣೆಯೊಂದಿಗೆ ಅಂತರ್ಗತ ತರಗತಿಗಳ ಪ್ರಾಮುಖ್ಯತೆಯನ್ನು ಗಮನಿಸೋಣ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–1

ಅಂತರ್ಗತ ಶಾಲೆಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು '✓' ಚಿಹ್ನೆಯಿಂದ ಸೂಚಿಸಿ:

1. ಹೆಚ್ಚು ಸಾಮರ್ಥ್ಯವಿರುವವರನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.
2. ಮಕ್ಕಳ ಸಾಮರ್ಥ್ಯಕ್ಕನುಗುಣವಾದ ಶಿಕ್ಷಣವನ್ನು ಒದಗಿಸುತ್ತದೆ.
3. ಪ್ರತಿಯೊಬ್ಬರಿಗೂ ಬೆಳೆಯಲು ಅವಕಾಶ ಕೊಡುತ್ತದೆ.
4. ವಿಭಿನ್ನ ಅಗತ್ಯವುಳ್ಳ ಮಕ್ಕಳನ್ನು ಒಳಗೊಳ್ಳುತ್ತದೆ.
5. ಅಸಾಮರ್ಥ್ಯವಿಲ್ಲದಿರುವವರ ಅಗತ್ಯಗಳಿಗೆ ವಿಶೇಷ ಗಮನ ಕೊಡುವುದಿಲ್ಲ.
6. ವಿಶೇಷ ಮಕ್ಕಳಿಗೆ ಅಗತ್ಯವಾದ ಚಟುವಟಿಕೆಗಳನ್ನು ರೂಪಿಸುತ್ತವೆ.
7. ಸಾಮಾನ್ಯ ಮತ್ತು ವಿಶೇಷ ಶಿಕ್ಷಣಗಳೆರಡರಲ್ಲೂ ಪರಿಣತಿ ಹೊಂದಿರುವ ಶಿಕ್ಷಕರ ಸಹಾಯ ಪಡೆಯುತ್ತದೆ.
8. ಸಮುದಾಯದ ಬೆಂಬಲ ಬಯಸುತ್ತದೆ.
9. ಪೋಷಕರ ಬೆಂಬಲ ಬಯಸುವುದಿಲ್ಲ.
10. ಇವು ಕೇವಲ ಸರ್ಕಾರಿ ಶಾಲೆಗಳು.
11. ಇಂದಿನ ಎಲ್ಲ ಸರ್ಕಾರಿ ಶಾಲೆಗಳೂ ಅಂತರ್ಗತ ಶಾಲೆಗಳೇ.

## 1.1.3.2 ಅಂತರ್ಗತತೆಯ ಪ್ರಾಮುಖ್ಯತೆ

ಅಂತರ್ಗತ ಶಿಕ್ಷಣ ಬೇಕೇ ಬೇಡವೇ ಎಂಬ ಪ್ರಶ್ನೆ ನಮ್ಮ ಸನ್ನಿವೇಶದಲ್ಲಿ ಅಸಂಗತವಾದುದೇನೋ. ಏಕೆಂದರೆ ಇಂದು ಅಂತರ್ಗತತೆಯ ಅನಿವಾರ್ಯತೆ ಅಕ್ಷರಮಟ್ಟಿಗೆ ಕಾಣಬರುತ್ತದೆ. ಈ ಕೆಳಗಿನ ಅಂಶಗಳು ಅಂತರ್ಗತತೆಯ ಪ್ರಾಮುಖ್ಯತೆಯನ್ನು ಎತ್ತಿ ತೋರುತ್ತವೆ.

- ನಾವು ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ಒಪ್ಪಿಕೊಳ್ಳುವುದಾದರೆ ಅಂತರ್ಗತ ಶಿಕ್ಷಣ ಅಗತ್ಯ ಮಾತ್ರವಲ್ಲ; ಅನಿವಾರ್ಯವೂ ಹೌದು. ಪ್ರಜಾಪ್ರಭುತ್ವವು ಮಾನವೀಯತೆಯನ್ನು ಪೋಷಿಸುತ್ತದೆ. ಮಾನವೀಯತೆ ನೆಲೆಗೊಳ್ಳಬೇಕಾದರೆ ವಿಭಿನ್ನತೆಯನ್ನು ಒಪ್ಪಿಕೊಳ್ಳುವುದು ಮಾತ್ರವಲ್ಲ; ಅದನ್ನು ಗೌರವಿಸಲೂ ಬೇಕು. ಹೀಗಾಗಿ ವಿಭಿನ್ನತೆ ಮತ್ತು ವಿಭಿನ್ನ ಸಮುದಾಯ ಎರಡೂ ಮೌಲಿಕವೇ. ಈ ಸಮುದಾಯಗಳು ಪ್ರಾರಂಭವಾಗುವುದು ಮಕ್ಕಳು ಅವರ ಜೊತೆಗಾರರೊಡನೆ ಬೆರೆತು

ಬೆಳೆಯಲು ಕಲಿಯುವ ಶಾಲೆಯಲ್ಲಿಯೇ. ಒಟ್ಟಿಗೆ ಕಲಿಯುವುದು, ನಲಿಯುವುದು, ಬದುಕುವುದು, ಬೆಳೆಯುವುದು ನಮಗೆ ಅಪೇಕ್ಷಣೀಯವಾದ ಸಮಾಜವನ್ನು ಕಟ್ಟಲು ಸಹಕಾರಿಯಾಗುತ್ತದೆ.

- ಎಲ್ಲ ಮಕ್ಕಳ ಅನನ್ಯ ಪ್ರತಿಭೆಯನ್ನು ಗುರುತಿಸಿ ಆ ಮೂಲಕ ವ್ಯಷ್ಟಿ ಹಾಗೂ ಸಮಷ್ಟಿಯ ಬೆಳವಣಿಗೆಗೆ ಶಿಕ್ಷಣದ ಒಟ್ಟು ವ್ಯವಸ್ಥೆ ಕಾರಣವಾಗಬೇಕು. ಅಂತರ್ಗತ ಶಿಕ್ಷಣದಲ್ಲಿ ನಾವು ಈ ಅನನ್ಯತೆಯನ್ನು ಗುರುತಿಸುವುದು ಮಾತ್ರವಲ್ಲ; ಗೌರವಿಸುತ್ತೇವೆ ಕೂಡ. ಇತರರ ಅನನ್ಯತೆಯನ್ನು ಪ್ರಶಂಸಿಸುವ ವಾತಾವರಣವೂ ಇಲ್ಲಿ ಸೃಷ್ಟಿಯಾಗುತ್ತದೆ. ಇದು ಒಂದು ತರಗತಿ ಕೋಣೆಯನ್ನು ನಿಜವಾದ ಸಮುದಾಯವಾಗಿ ಪರಿವರ್ತಿಸುತ್ತದೆ.

- ಅಂತರ್ಗತ ಶಿಕ್ಷಣದ ಪರಿಸರಕ್ಕೆ ಸಂಬಂಧಿಸಿದ ಸಂಶೋಧನಾ ಫಲಿತಾಂಶಗಳೂ ಅಂತರ್ಗತ ಶಿಕ್ಷಣದ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯುತ್ತವೆ. ಅಲನ ಸಂಸ್ಥೆಯು ಈ ಕುರಿತ ಸಮಗ್ರ ಸಂಶೋಧನಾ ಫಲಿತಾಂಶವನ್ನು 2017ರಲ್ಲಿ ಪ್ರಕಟಿಸಿದ್ದು ಅದರ ಪ್ರಮುಖ ಅಂಶಗಳು ಹೀಗೆ ಹೇಳುತ್ತವೆ: ಅಸಾಮರ್ಥ್ಯವುಳ್ಳ ಮತ್ತು ಇಲ್ಲದಿರುವ ಮಕ್ಕಳ ಗುಂಪುಗಳೆರಡಕ್ಕೂ ಅಂತರ್ಗತ ಶಿಕ್ಷಣ ಗಮನಾರ್ಹವಾದ ಪ್ರಯೋಜನಗಳನ್ನು ಉಂಟುಮಾಡುತ್ತದೆ ಎಂಬುದಕ್ಕೆ ನಂಬಲರ್ಹವಾದ ಆಧಾರಗಳಿವೆ. ಅಂತರ್ಗತತೆಯಿಂದ ಅಸಾಮರ್ಥ್ಯವಿಲ್ಲದಿರುವ ಮಕ್ಕಳು ಶೈಕ್ಷಣಿಕವಾಗಿ ಹೆಚ್ಚಿನ ಪ್ರಯೋಜನಗಳನ್ನು ಪಡೆಯುತ್ತಾರೆ. ಅಂತರ್ಗತ ಪರಿಸರದಲ್ಲಿರುವ ಅಸಾಮರ್ಥ್ಯವುಳ್ಳ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಪ್ರತ್ಯೇಕ ಸನ್ನಿವೇಶದಲ್ಲಿರಿಸಿದ ಅಸಾಮರ್ಥ್ಯ ವಿದ್ಯಾರ್ಥಿಗಳನ್ನು ಮೀರಿಸುತ್ತಾರೆ. ಅಸಾಮರ್ಥ್ಯವುಳ್ಳ ವಿದ್ಯಾರ್ಥಿಗಳನ್ನು ಅಂತರ್ಗತಗೊಳಿಸಿಕೊಳ್ಳುವುದರಿಂದ ಅಧ್ಯಾಪಕರ ಬೋಧನೆ ಉತ್ತಮವಾಗಿ ಅದು ಎಲ್ಲ ಮಕ್ಕಳಿಗೂ ಲಾಭದಾಯಕವಾಗುತ್ತದೆ. ಈ ಸನ್ನಿವೇಶದಲ್ಲಿನ ಪ್ರಯೋಜನಗಳು ಅಸಾಮರ್ಥ್ಯವಿಲ್ಲದ ಮಕ್ಕಳಿಗೆ ಮುಂದೆ ಉದ್ಯೋಗದ ಸನ್ನಿವೇಶದಲ್ಲಿ ಸಹಾಯವಾಗುತ್ತದೆ. ಅಂತರ್ಗತ ಸನ್ನಿವೇಶವು ಬೆಳೆಯುತ್ತಿರುವ ವಿದ್ಯಾರ್ಥಿಗಳ ಮೇಲೆ ಯಾವುದೇ ಋಣಾತ್ಮಕ ಪ್ರಭಾವವನ್ನು ಬೀರುವುದಿಲ್ಲ. ಅಂತರ್ಗತತೆಯು ಅಸಾಮರ್ಥ್ಯವಿಲ್ಲದಿರುವ ವಿದ್ಯಾರ್ಥಿಗಳ ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆಗೆ ಪೂರಕವಾಗುತ್ತದೆ. ಅಲ್ಲದೆ ಶೈಕ್ಷಣಿಕ ಸಾಧನೆಯನ್ನೂ ಬೆಂಬಲಿಸುತ್ತದೆ.

- ಅಸಾಮರ್ಥ್ಯವಿರುವ ಮತ್ತು ಇಲ್ಲದಿರುವ ವಿದ್ಯಾರ್ಥಿಗಳಿಬ್ಬರೂ ಈ ಸನ್ನಿವೇಶದಲ್ಲಿ ಹೆಚ್ಚು ಕಲಿಯುತ್ತಾರೆ. ಅಂತರ್ಗತತೆಯ ಕಾರಣದಿಂದಾಗಿ ಅಸಾಮರ್ಥ್ಯವಿರುವ ಮಕ್ಕಳು ಉತ್ತಮ ಶೈಕ್ಷಣಿಕ ಸಾಧನೆಯನ್ನೂ ಮತ್ತು ಉತ್ತಮ ಕೌಶಲಗಳನ್ನೂ ಸಾಧಿಸುತ್ತಾರೆ. ಅವರ ಸಹಪಾಠಿಗಳೂ ಇದರ ಪ್ರಯೋಜನ ಪಡೆಯುತ್ತಾರೆ. ಅಸಾಮರ್ಥ್ಯವುಳ್ಳ ವಿದ್ಯಾರ್ಥಿಗಳು ಸಾಕ್ಷರತೆ(ಓದುವುದು, ಬರೆಯುವುದು), ಗಣಿತ, ಮತ್ತು ಸಾಮಾಜಿಕ ಅಧ್ಯಯನ ಈ ವಿಷಯಗಳಲ್ಲಿ ಶೈಕ್ಷಣಿಕ ಉತ್ತಮಿಕೆ ತೋರುತ್ತಾರೆ. ಇದು ಶಾಲಾ ಸಾಧನಾ ಪರೀಕ್ಷೆಗಳು, ಪ್ರಮಾಣೀಕೃತ ಪರೀಕ್ಷೆಗಳೆರಡರಲ್ಲೂ ಸಾಬೀತಾಗಿದೆ. ಇದರ ಜೊತೆಗೆ ಇವರು ಹೆಚ್ಚಿನಮಟ್ಟದ ಸಂವಹನಾ ಕೌಶಲಗಳು, ಸಾಮಾಜಿಕ ಕೌಶಲಗಳು ಮತ್ತು ಗೆಳೆತನವನ್ನೂ ಪ್ರದರ್ಶಿಸುತ್ತಾರೆ. ತರಗತಿಗೆ ಗೈರು ಹಾಜರಿ ಮತ್ತು ವಿಚ್ಛಿದ್ರಕಾರಕ ವರ್ತನೆಗಳು ಇವರಲ್ಲಿ ಕಡಿಮೆ ಮಟ್ಟದಲ್ಲಿ ಕಾಣಿಸಿಕೊಳ್ಳುತ್ತವೆ. ಅವರ ಸ್ವ-ಪರಿಕಲ್ಪನೆಯೂ ಉತ್ತಮವಾಗಿರುತ್ತದೆ. ಅವರು ಅವರ ಅಧ್ಯಾಪಕರನ್ನೂ ಶಾಲೆಯನ್ನೂ ಇಷ್ಟಪಡುತ್ತಾರೆ. ಕಲಿಕೆ

ಹಾಗೂ ಕೆಲಸಗಳಲ್ಲಿ ಹೆಚ್ಚಿನ ಅಭಿಪ್ರೇರಣೆಯನ್ನು ಪ್ರದರ್ಶಿಸುತ್ತಾರೆ.ಅಸಾಮರ್ಥ್ಯವಿಲ್ಲದ ವಿದ್ಯಾರ್ಥಿಗಳ ಕುರಿತು ಧನಾತ್ಮಕ ಮನೋಭಾವವನ್ನು ತೋರುತ್ತಾರೆ.

- ಅಸಾಮರ್ಥ್ಯವಿಲ್ಲದ ಮಕ್ಕಳಿಗೆ ಇದು ಹೊಸ ರೀತಿಯ ಕಲಿಕಾ ಅವಕಾಶಗಳನ್ನು ಒದಗಿಸುತ್ತದೆ. ಅವರೂ ಓದುವಿಕೆ ಮತ್ತು ಗಣಿತದಲ್ಲಿ ಹೆಚ್ಚಿನ ಮಟ್ಟದ ಸಾಧನೆ ತೋರುತ್ತಾರೆ. ಗೆಳೆಯರ ಗುಂಪಿನ ಬೋಧನೆಯಲ್ಲಿ ತೊಡಗಿಸಿಕೊಂಡಾಗ ಇದು ಎದ್ದು ಕಾಣುತ್ತದೆ. ಮತ್ತೊಬ್ಬರಿಗೆ ಕಲಿಕೆಯಲ್ಲಿ ಸಹಾಯಮಾಡುವುದು ಹೇಗೆ ಎಂದು ತೊಡಗಿಸಿಕೊಳ್ಳುವುದರ ಮೂಲಕ ಅವರೂ ಕಲಿಯುತ್ತಾರೆ. ಅಧ್ಯಾಪಕರೂ ವಿಭಿನ್ನ ಮಕ್ಕಳ ಬೋಧನೆಯ ಸನ್ನಿವೇಶದಲ್ಲಿ ವಿವಿಧ ಕಲಿಕಾ ಶೈಲಿಗಳಿಗನುಗುಣವಾಗಿ (ದೃಶ್ಯ, ಶ್ರವಣ ಮತ್ತು ಸ್ಪರ್ಶ) ಬೋಧಿಸುವುದರಿಂದ ಇದು ಎಲ್ಲ ವಿದ್ಯಾರ್ಥಿಗಳಿಗೂ ಲಾಭದಾಯಕವಾಗುತ್ತದೆ.
- ಅಂತರ್ಗತ ಶಿಕ್ಷಣ ಎಂಬುದು ಒಂದು ವಿಕಾಸಾತ್ಮಕ ಉಪಕ್ರಮ. ಇದು ಎಲ್ಲ ಮಕ್ಕಳ, ಯುವಕರ ಮತ್ತು ವಯಸ್ಕರ ಕಲಿಕಾ ಅಗತ್ಯಗಳನ್ನು ಉದ್ದೇಶಿಸಬಯಸುತ್ತದೆ. ಸಮಾಜದ ಅಂಚಿನಲ್ಲಿರುವ ದುರ್ಬಲರ ಕಡೆಗೂ ಇದರ ಗಮನವಿದೆ. ಅಂತರ್ಗತ ಶಿಕ್ಷಣದ ಪ್ರಮುಖ ಗುರಿ ನಾಯಕತ್ವದ ಕಡೆಗೆ. ಶಿಕ್ಷಣದ ಹಕ್ಕನ್ನು ಗುರುತಿಸುತ್ತಲೇ, ಅಸಾಮರ್ಥ್ಯವುಳ್ಳ ಪ್ರತಿ ಮಗು, ಯುವಕ ಮತ್ತು ವಯಸ್ಕರಿಗೆ ಶಿಕ್ಷಣದ ಅವಕಾಶವನ್ನು ಒದಗಿಸಲು 'ಎಲ್ಲರಿಗೂ ಶಿಕ್ಷಣ'ವನ್ನು ಅನುಮೋದಿಸುವ ಸಹಭಾಗಿಗಳನ್ನು ಅವರ ಪ್ರಯತ್ನಗಳನ್ನು ಒಟ್ಟುಗೂಡಿಸುವುದು ಈ ನಾಯಕತ್ವದ ಗುರಿ. ಈ ನಾಯಕತ್ವವು ಜಾಗತಿಕ ಅಸಾಮರ್ಥ್ಯ ಸಂಸ್ಥೆಗಳು, ಅಂತರರಾಷ್ಟ್ರೀಯ ವಿಕಾಸಾತ್ಮಕ ನಿಯೋಗಗಳು ಮತ್ತು ವಿಶೇಷ ಮತ್ತು ಸಮನ್ವಯ ಶಿಕ್ಷಣ ಕ್ಷೇತ್ರದ ತಜ್ಞರನ್ನೂ ಒಳಗೊಂಡಂತೆ, ವಿಭಿನ್ನ ಸಂಸ್ಥೆಗಳ ಒಕ್ಕೂಟದಿಂದ ರೂಪಿತವಾಗಿರುವಂತಹುದು.
- ಸೃಜನಶೀಲತೆ ವಿಭಿನ್ನತೆಯಿಂದ ಮೂಡುವಂತಹುದು. ವಿಭಿನ್ನತೆ ಇಲ್ಲದಿರುವಲ್ಲಿ ಸೃಜನಶೀಲತೆಯೂ ಇರದು. ಹಾಗಾಗಿ ವಿಭಿನ್ನ ತರಗತಿಗಳಲ್ಲಿ ಮಾತ್ರ ಸೃಜನಶೀಲತೆಯನ್ನು ಮೂಡಿಸುವುದು ಸಾಧ್ಯ.
- ನಮಗೆ ತಿಳಿದಿರುವಂತೆ ಅಸಾಮರ್ಥ್ಯವುಳ್ಳ ಮಕ್ಕಳು ಅನುಭವಿಸುವ ತಾರತಮ್ಯತೆ ಮತ್ತು ಬಡತನವನ್ನು ಶಿಕ್ಷಣದಿಂದ ಮಾತ್ರ ಪರಿಣಾಮಕಾರಿಯಾಗಿ ಹೋಗಲಾಡಿಸಲು ಸಾಧ್ಯ. ಅಲ್ಲದೆ ಎಲ್ಲ ಮಕ್ಕಳಿಗೂ ಶಿಕ್ಷಣಕ್ಕೆ ಹಕ್ಕು ಇರುವುದನ್ನು ಗಮನಿಸಿಕೊಂಡು ಎಲ್ಲ ಮಕ್ಕಳನ್ನೂ ಸೇರಿಸಿಕೊಳ್ಳಬೇಕಾದುದು ಶಾಲೆಯ ಕರ್ತವ್ಯ.
- 1998ರ ಮಕ್ಕಳ ಕಾಯಿದೆಯಂತೆ, ಅವರದೇ ವಯೋಮಾನದ ಮಕ್ಕಳೊಂದಿಗೆ ಶಿಕ್ಷಣ ಪಡೆಯಲು ಅಸಾಮರ್ಥ್ಯವುಳ್ಳ ಮಕ್ಕಳಿಗೆ ಹಕ್ಕಿದೆ. ಈ ಕಾಯಿದೆಯ ಪ್ರಕಾರ, ಅಸಾಮರ್ಥ್ಯವಿಲ್ಲದಿರುವ ಮಕ್ಕಳು ಕಲಿಯುವ ಪಠ್ಯಕ್ರಮವನ್ನೇ ಅನುಸರಿಸಲು ಇವರಿಗೂ ಅವಕಾಶವಿರಬೇಕು.
- ಅಂತರ್ಗತ ಸನ್ನಿವೇಶದಲ್ಲಿರಿಸಿದರೆ ಅಸಾಮರ್ಥ್ಯವುಳ್ಳ ಮಕ್ಕಳು ತಮ್ಮ ವಯೋಮಾನದ ಮಕ್ಕಳೊಂದಿಗೆ ಕಲಿತು ಕಲೆತು ಉತ್ತಮ ಸಾಮಾಜೀಕರಣ ಕೌಶಲಗಳನ್ನು ಬೆಳೆಸಿಕೊಳ್ಳುತ್ತಾರೆ.
- ಅಂತರ್ಗತ ಶಿಕ್ಷಣವು ತಾತ್ವಿಕತೆ, ಪಠ್ಯಕ್ರಮ, ವ್ಯವಸ್ಥಾ ಸಂಘಟನೆ ಮತ್ತು ಬೋಧನಾ ವಿಧಾನ ಇವುಗಳಿಗೆ ಸಂಬಂಧಿಸಿದಂತೆ ಅಸಾಮರ್ಥ್ಯವಿರುವ ಮಕ್ಕಳ ದೃಷ್ಟಿಯಿಂದ ಅಗತ್ಯವಾದ ಮಾರ್ಪಾಡುಗಳನ್ನು ಮಾಡಿಕೊಂಡು ಅವರ ಶಿಕ್ಷಣಕ್ಕೆ ವಿಶೇಷ ಗಮನಕೊಡುತ್ತದೆ. ಈ

ಮಾರ್ಪಾಡುಗಳು 'ಅಸಾಮರ್ಥ್ಯವಿರುವ ಮಕ್ಕಳು' ಎಂದು ಗುರುತಿಸಲಾಗುವ ಮಕ್ಕಳನ್ನು ಪ್ರಭಾವಿಸುವುದನ್ನೂ ಮೀರಿ ವಿಶೇಷ ಶಿಕ್ಷಣದ ಗಮನಕ್ಕೂ ಆಚೆಗೆ ಪರಿಣಾಮಕಾರಿಯಾಗುತ್ತದೆ. ಈ ಪ್ರತಿ ಮಾರ್ಪಾಡು ಅಸಾಮರ್ಥ್ಯವುಳ್ಳ ಮಕ್ಕಳ ಅಗತ್ಯವಾದ ಬದಲಾವಣೆ ಮತ್ತು ಬೆಂಬಲವನ್ನು ಸಾಕಾರಗೊಳಿಸುವಷ್ಟು ಸಶಕ್ತವಾಗಿರುತ್ತದೆ. ಹೀಗಾಗಿ ಸಮಾಜಗಳು ವಯಸ್ಸು, ಲಿಂಗ, ಅಥವಾ ಅಸಾಮರ್ಥ್ಯ ಈ ಯಾವುದೇ ಭೇದಭಾವಗಳಿಲ್ಲದೆ ಎಲ್ಲರೂ ಮೂಲಭೂತ ಮಾನವ ಹಕ್ಕುಗಳನ್ನು ಅನುಭವಿಸಲು ಅನುವಾಗುವ ರಚನೆಯನ್ನು ಹೊಂದಿಸಿಕೊಳ್ಳುವುದು ಅವಶ್ಯಕ.

- ಅಂತರ್ ವ್ಯಕ್ತಿ ಸಂಬಂಧಗಳ ನೆಲೆಯಲ್ಲಿ, ಅಂತರ್ಗತ ಶಿಕ್ಷಣವು ಅಸಾಮರ್ಥ್ಯವಿರುವವರಿಗೆ ಅವರದೇ ವಯೋಮಾನದವರೊಡನೆ ಗೆಳೆತನ ಬೆಳೆಸಿಕೊಂಡು ಅವರ ಅಸಾಮರ್ಥ್ಯಗಳ ಕಡೆಗೆ ಕಡಿಮೆ ಗಮನಕೊಡುವಂತೆ ಮಾಡುತ್ತದೆ. ಅವರಲ್ಲಿ ಹೆಚ್ಚಿನ ಆತ್ಮವಿಶ್ವಾಸವನ್ನು ಮೂಡಿಸುತ್ತದೆ. ಅಲ್ಲದೆ ಒಟ್ಟಿಗೆ ಬೆಳೆಯುವುದರಿಂದ ದುಡಿಸಿಕೊಳ್ಳಬಹುದಾದ ಅನೇಕ ಕೌಶಲಗಳನ್ನು ಮತ್ತು ಸ್ವಭಾವಗಳನ್ನು ಬೆಳೆಸುವ ಅವಕಾಶಗಳನ್ನು ತೆರೆದಿಡುತ್ತದೆ. ಉದಾಹರಣೆಗೆ, ಬ್ರೈಲ್ ಮತ್ತು ಸಂಕೇತ ಭಾಷೆಯನ್ನು ಇತರ ಸಂವಹನ ಮಾಧ್ಯಮಗಳಾಗಿ ಎಲ್ಲ ಮಕ್ಕಳೂ ಕಲಿಯುತ್ತಾರೆ. ನಡೆಯಲಾಗದ ಮಕ್ಕಳಿಗೆ 'ವೀಲ್ ಚೇರ್' ಸೌಲಭ್ಯವನ್ನು ಒದಗಿಸುವುದು ಹೇಗೆ ಎಂಬುದು ಎಲ್ಲರಿಗೂ ತಿಳಿಯುತ್ತದೆ. ಇವು ಸಂವಹನದ ಅಡೆತಡೆಗಳನ್ನು ಹೋಗಲಾಡಿಸಿ ಪರಸ್ಪರ ಕಲಿಕೆಗೆ ಸಹಾಯಮಾಡುತ್ತದೆ. ಪರಸ್ಪರ ಪ್ರೀತಿ, ಕಾಳಜಿ, ಸ್ವೀಕಾರ ಇವುಗಳಿಗೆ ಸಹಾಯವಾಗುತ್ತದೆ. ಇತರರ ಸವಾಲುಗಳಿಗೆ ಸಂವೇದನೆ ಬೆಳೆಯುತ್ತದೆ. ಇದರಿಂದಾಗಿ ರಾಷ್ಟ್ರದ ಐಕ್ಯತೆ ಮತ್ತು ಪರಸ್ಪರ ಸಮನ್ವಯ ಬೆಳವಣಿಗೆಗೆ ಅಗತ್ಯವಾದ ಹೆಚ್ಚಿನ ಪರಾನುಭೂತಿ ಮತ್ತು ನಾಯಕತ್ವ ಬೆಳೆಯುತ್ತದೆ.
- ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಶಿಕ್ಷಣ ಕಾಯಿದೆ (Individuals with Disabilities Education Act -IDEA 2004)ಹೀಗೆ ಹೇಳುತ್ತದೆ: ಸುಮಾರು 30ವರ್ಷಗಳ ಸಂಶೋಧನೆ ಮತ್ತು ಅನುಭವಗಳು ಅಸಾಮರ್ಥ್ಯವುಳ್ಳ ಮಕ್ಕಳ ಕುರಿತ ಹೆಚ್ಚಿನ ಅಪೇಕ್ಷೆಗಳನ್ನಿಟ್ಟುಕೊಳ್ಳುವುದರ ಮೂಲಕ, ವಿಕಾಸಾತ್ಮಕ ಗುರಿಗಳನ್ನು ಸಾಧಿಸಲು, ಎಲ್ಲ ಮಕ್ಕಳಿಗೆ ಗುರುತಿಸಿಕೊಳ್ಳಲಾಗಿರುವ ಸವಾಲಿನ ಅಪೇಕ್ಷೆಗಳನ್ನು ಸಾಕಾರಗೊಳಿಸಿಕೊಳ್ಳಲು, ವಯಸ್ಕರಾದಾಗ ಉತ್ಪಾದಕ ಮತ್ತು ಸ್ವತಂತ್ರ ಬದುಕಿಗೆ ತಯಾರಾಗಲು ಸಾಧ್ಯವಾದಷ್ಟುಮಟ್ಟಿಗೆ ಸಾಮಾನ್ಯ ತರಗತಿಗಳಲ್ಲಿ ಸಾಮಾನ್ಯ ಶಿಕ್ಷಣ ಪಠ್ಯಕ್ರಮಕ್ಕೆ ಅವಕಾಶಮಾಡಿಕೊಡುವುದರಿಂದ, ಅಸಾಮರ್ಥ್ಯವುಳ್ಳ ಮಕ್ಕಳ ಶಿಕ್ಷಣವನ್ನು ಹೆಚ್ಚು ಪರಿಣಾಮಕಾರಿಯಾಗಿಸಬಹುದು ಎಂಬುದನ್ನು ತೋರಿಸಿಕೊಟ್ಟಿವೆ. ಕೊನೆಯದಾಗಿ ಅಂತರ್ಗತತೆ ವಿಭಿನ್ನತೆಯನ್ನು ಗೌರವಿಸುತ್ತದೆ ಮತ್ತು ಭಿನ್ನತೆಗೆ ಮನ್ನಣೆ ನೀಡುತ್ತದೆ.

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–2**

ಅಂತರ್ಗತತೆಯ ಪ್ರಾಮುಖ್ಯತೆಯನ್ನು ಕುರಿತು ನಾಲ್ಕು ಅಂಶಗಳನ್ನು ಬರೆಯಿರಿ

## 1.1.4. ಸಾರಾಂಶಿಸೋಣ

- ಅಂತರ್ಗತತೆಯು ಇಂದಿನ ಶಾಲಾ ಮಕ್ಕಳನ್ನು ಮತ್ತು ಯುವಜನತೆಯನ್ನು ಅರ್ಥಮಾಡಿಕೊಳ್ಳುವ, ಸ್ವಸ್ವರೂಪದಲ್ಲಿ ಅವರನ್ನು ಒಪ್ಪಿಕೊಳ್ಳುವ ಮತ್ತು ಭಿನ್ನತೆಯನ್ನು ಗೌರವಿಸುವ ಒಂದು ಪ್ರಕ್ರಿಯೆಯೂ

ಹೌದು ಮತ್ತು ಫಲವೂ ಹೌದು. ನಮ್ಮ ಸಮಾಜದಲ್ಲಿ ಸಮತೆ ಮತ್ತು ಸಾಮಾಜಿಕ ನ್ಯಾಯವನ್ನು ಸಾಧಿಸುವ ಪ್ರಕ್ರಿಯೆ ಮತ್ತು ಫಲಶ್ರುತಿ ಅಂತರ್ಗತ ಶಿಕ್ಷಣ.

- ಅಂತರ್ಗತತೆ ಎಂಬುದು ಭಿನ್ನತೆಯನ್ನು ಗಣಿಸದೆ ಎಲ್ಲ ವ್ಯಕ್ತಿಗಳನ್ನೂ ಒಪ್ಪಿಕೊಳ್ಳುವ ಒಂದು ಪರಿಕಲ್ಪನೆ. ಇದು ಒಂದು ಪ್ರಮುಖ ಮನೋಭಾವವೂ ಹೌದು.
- ಶಿಕ್ಷಣ ವ್ಯವಸ್ಥೆಯಲ್ಲಿ ಅಂತರ್ಗತತೆ ಎಂಬುದು, ಒಟ್ಟು ಶಿಕ್ಷಣದ ಸಾಮಾನ್ಯ ಸಂರಚನೆಯಲ್ಲಿ ವಿವಿಧ ಅಸಾಮರ್ಥ್ಯಗಳು ಮತ್ತು ವಿಭಿನ್ನತೆಗಳನ್ನುಳ್ಳ ಎಲ್ಲ ಮಕ್ಕಳ ಶಿಕ್ಷಣಕ್ಕೆ ಅಗತ್ಯವಾದ ಸೌಲಭ್ಯಗಳು, ಬೋಧನಾ ವಿಧಾನಗಳು, ಪಠ್ಯಕ್ರಮ ಮತ್ತು ತರಗತಿ ನಿರ್ವಹಣೆಯ ಒಟ್ಟು ಸಂರಚನೆಯನ್ನು ಅಳವಡಿಸಿಕೊಂಡ ಶಿಕ್ಷಣವನ್ನು ಸೂಚಿಸುತ್ತದೆ.
- ಭಾರತದಲ್ಲಿ, ಬಹಳಷ್ಟು ಇತರ ದೇಶಗಳಲ್ಲಿಯಂತೆ, ದೈಹಿಕವಾಗಿ ಮತ್ತು ಮಾನಸಿಕವಾಗಿ ಸವಾಲುಗಳುಳ್ಳ ಮಕ್ಕಳ ಶಿಕ್ಷಣಕ್ಕೆ ವಿಶೇಷ ಸವಲತ್ತುಗಳನ್ನು ಹುಟ್ಟುಹಾಕುವುದು ಎಂಬರ್ಥದಲ್ಲಿಯೇ ಅಂತರ್ಗತ ಶಿಕ್ಷಣದ ಪರಿಕಲ್ಪನೆಯನ್ನು ವ್ಯಾಖ್ಯಾನಿಸಲಾಗುತ್ತದೆ.
- ಇಂದು ಭಾರತದ ಸನ್ನಿವೇಶದಲ್ಲಿ ತೆರೆದುಕೊಂಡು ಸಮಾಜದ ಅಂಚಿನಲ್ಲಿರುವ ಎಲ್ಲ ವರ್ಗಗಳನ್ನೂ ಅಂದರೆ ದಲಿತರು, ಗಿರಿಜನರು ಮತ್ತು ದೇಶೀ ವಾಸಿಗಳು, ಧಾರ್ಮಿಕ ಮತ್ತು ಭಾಷಿಕ ಅಲ್ಪಸಂಖ್ಯಾತರು, ಬಾಲ ಕಾರ್ಮಿಕರು ಜೊತೆಗೆ ದೈಹಿಕವಾಗಿ ಹಾಗೂ ಮಾನಸಿಕ ಅಸಾಮರ್ಥ್ಯವುಳ್ಳವರು ಮತ್ತು ಗಮನಾರ್ಹ ಸಂಖ್ಯೆಯಲ್ಲಿ ಶಾಲೆಯಿಂದ ಹೊರಗಿರುವ ಈ ಎಲ್ಲ ವರ್ಗಗಳ ಬಾಲಕಿಯರನ್ನು ಗಣನೆಗೆ ತೆಗೆದುಕೊಳ್ಳಬೇಕು ಎಂದು ಒಪ್ಪಿಕೊಳ್ಳಲಾಗಿದೆ.
- ಅಸಾಮರ್ಥ್ಯವುಳ್ಳವರ ಅಗತ್ಯ ಮತ್ತು ಶಕ್ತಿಗಳಿಗನುಗುಣವಾಗಿ ಅವರ ಎಲ್ಲ ಅಗತ್ಯಗಳಿಗೆ ಹೊಂದಿಕೆಯಾಗುವ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸುವುದೇ ಅಂತರ್ಗತ ಶಿಕ್ಷಣ ಎಂದು ವ್ಯಾಖ್ಯೆ ಮಾಡಬಹುದು.
- ಶಿಕ್ಷಣದ ಒಟ್ಟು ವ್ಯವಸ್ಥೆ ಎಲ್ಲ ಮಕ್ಕಳ ಅನನ್ಯ ಪ್ರತಿಭೆಯನ್ನು ಗುರುತಿಸಿ ಆ ಮೂಲಕ ವ್ಯಷ್ಟಿ ಹಾಗೂ ಸಮಷ್ಟಿಯ ಬೆಳವಣಿಗೆಗೆ ಕಾರಣವಾಗಬೇಕು. ಅಂತರ್ಗತ ಶಿಕ್ಷಣದಲ್ಲಿ ನಾವು ಈ ಅನನ್ಯತೆಯನ್ನು ಗುರುತಿಸುವುದು ಮಾತ್ರವಲ್ಲ; ಗೌರವಿಸುತ್ತೇವೆ ಕೂಡ. ಇತರರ ಅನನ್ಯತೆಯನ್ನು ಪ್ರಶಂಸಿಸುವ ವಾತಾವರಣವೂ ಇಲ್ಲಿ ಸೃಷ್ಟಿಯಾಗುತ್ತದೆ. ಇದು ಒಂದು ತರಗತಿ ಕೋಣೆಯನ್ನು ನಿಜವಾದ ಸಮುದಾಯವಾಗಿ ಪರಿವರ್ತಿಸುತ್ತದೆ.
- ಅಂತರ್ಗತ ಶಿಕ್ಷಣದ ಪರಿಸರಕ್ಕೆ ಸಂಬಂಧಿಸಿದ ಸಂಶೋಧನಾ ಫಲಿತಾಂಶಗಳೂ ಅಂತರ್ಗತ ಶಿಕ್ಷಣದ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯುತ್ತವೆ.

## 1.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1 ಮತ್ತು 2'

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–1**

2,3,4,6,7,8, – '✓'

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–2**

ಈ ಘಟಕದಲ್ಲಿ ಈ ಕುರಿತ ಚರ್ಚೆಯನ್ನು ಗಮನಿಸಿಕೊಳ್ಳಿ.

## 1.1.6. ಘಟಕಾಂತ್ಯ ಅಭ್ಯಾಸಗಳು :

1. ಅಂತರ್ಗತತೆಯ ಪರಿಕಲ್ಪನೆಯನ್ನು ಸ್ಪಷ್ಟೀಕರಿಸಿ
2. ಭಾರತದ ಸನ್ನಿವೇಶದಲ್ಲಿ ಅಂತರ್ಗತ ಶಿಕ್ಷಣದ ಪ್ರಾಮುಖ್ಯತೆಯನ್ನು ವಿವರಿಸಿ.

## 1.1.7. ಪರಾಮರ್ಶನ ಸೂಚಿ :


1. Sharma Prem Lata and et.al (2012) 'Inclusive Education : What,Why and How',RIE (NCERT) Mysore, A.G. Suvratheendra Vani press, Geetha Road, Chamarajapuram Mysore 570 005.
2. Ministry of Human Resource Development (MHRD) (2006), Inclusive Edcuation-Draft Action Plan for Inclusive Education of Children and Youth with Disabilities, New Delhi : MHRD.
3. Report on Integration of Culture Education in the School Curriculum (2005). CABE, MHRD, GOI. Retrieved fromhttp://mhrd.gov.in/sites/upload_files/mhrd/files/document-reports/Culture.pdf
4. Report on Justice VermaCommision on Teacher Education (2012). Department of School Education and Literacy, Ministry of Human Resource Development, Government of India. Retrieved from http://mhrd.gov.in/sites/upload_files/mhrd/files/document-reports/JVC%20Vol%201.pdf
5. http://allmeansall.org.au/research/


***********

# ಬ್ಲಾಕ್–1 : ಶಿಕ್ಷಣದಲ್ಲಿ ಅಂತರ್ಗತತೆಯನ್ನು ಅರ್ಥಮಾಡಿಕೊಳ್ಳುವುದು

## ಘಟಕ–2 : ಅಂತರ್ಗತತೆಯ ಇತಿಹಾಸ

**ಘಟಕದ ರಚನೆ**


1.2.1 ಕಲಿಕಾ ಉದ್ದೇಶಗಳು

1.2.2. ಪೀಠಿಕೆ

1.2.3 ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

1.2.3.1. ಅಂತರ್ಗತತೆಯ ಇತಿಹಾಸ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 1

1.2.3.2 ವಿಶೇಷ ಶಿಕ್ಷಣದಿಂದ ಅಂತರ್ಗತ ಶಿಕ್ಷಣದ ಕಡೆಗೆ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 2

1.2.3.3 ಸಮನ್ವಯ ಶಿಕ್ಷಣದಿಂದ ಅಂತರ್ಗತ ಶಿಕ್ಷಣದ ಕಡೆಗೆ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 3

1.2.3.4. ಅಂತರ್ಗತ ಶಿಕ್ಷಣದ ಸವಾಲುಗಳು ಮತ್ತು ಮಾರ್ಗೋಪಾಯಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 4

1.2.4. ಸಾರಾಂಶಿಸೋಣ

1.2.5 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1, 2, 3 ಮತ್ತು 4

1.2.6 ಘಟಕಾಂತ್ಯ ಅಭ್ಯಾಸಗಳು

1.2.7. ಪರಾಮರ್ಶನ ಸೂಚಿ


## 1.2.1 ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಅಂತರ್ಗತ ಶಿಕ್ಷಣದ ಇತಿಹಾಸವನ್ನು ವಿವರಿಸುವರು;
- ವಿಶೇಷ ಶಿಕ್ಷಣದ ಅರ್ಥವನ್ನು ಸ್ಪಷ್ಟೀಕರಿಸುವರು;
- ಸಮನ್ವಯ ಶಿಕ್ಷಣದ ವ್ಯಾಖ್ಯೆಯನ್ನು ತಿಳಿಸುವರು;
- ವಿಶೇಷ ಶಿಕ್ಷಣ ಮತ್ತು ಸಮನ್ವಯ ಶಿಕ್ಷಣ ಇವುಗಳ ನಡುವಿನ ವ್ಯತ್ಯಾಸವನ್ನು ಗುರುತಿಸುವರು; ಮತ್ತು
- ವಿಶೇಷ ಶಿಕ್ಷಣ, ಅಂತರ್ಗತ ಶಿಕ್ಷಣವಾದ ಪಲ್ಲಟವನ್ನು ಗುರುತಿಸಿಕೊಳ್ಳುವರು.

## 1.2.2. ಪೀಠಿಕೆ

ಪ್ರಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರೇ,

ಹಿಂದಿನ ಘಟಕದಲ್ಲಿ ಅಂತರ್ಗತತೆ ಎಂದರೇನು, ಅದರ ಸ್ವರೂಪವೇನು ಇತ್ಯಾದಿ ಅಂಶಗಳನ್ನು ಚರ್ಚಿಸಿದ್ದೇವೆ. ಈ ಅಂತರ್ಗತತೆಯ ಪರಿಕಲ್ಪನೆಗೆ ಅದರದ್ದೇ ಆದ ಇತಿಹಾಸವಿದೆ. ಈ ಪರಿಕಲ್ಪನೆ ಹೇಗೆ ಮೂಡಿಬಂದಿತು, ಇದರ ಹಿಂದಿದ್ದ ಆಶಯವೇನು, ಶಿಕ್ಷಣದಲ್ಲಿ ಈ ಅಭ್ಯಾಸವನ್ನು ಅಳವಡಿಸಿಕೊಳ್ಳಲು ನಮ್ಮ ದೇಶದಲ್ಲಿ ಹಾಗೂ ಒಟ್ಟು ಜಾಗತಿಕ ಮಟ್ಟದಲ್ಲಿ ಹುಟ್ಟಿಕೊಂಡ ಒಲವುಗಳು ಯಾವುವು, ದೈಹಿಕ, ಮಾನಸಿಕ, ಸಾಮಾಜಿಕ, ಭಾವನಾತ್ಮಕ ಸವಾಲುಗಳುಳ್ಳ ಮಕ್ಕಳಿಗೆ ಶಿಕ್ಷಣಕೊಡುವಲ್ಲಿ ಈ ಉಪಕ್ರಮ ಎಷ್ಟು ಪರಿಣಾಮಕಾರಿಯಾಗಿದೆ, ವಿವಿಧ ರೀತಿಯ ಸವಾಲುಗಳುಳ್ಳ ಮಕ್ಕಳನ್ನು ಹೇಗೆ ಒಂದೇ ಪರಿಕಲ್ಪನೆಯ ಅಡಿಯಲ್ಲಿ ಸೇರಿಸಿಕೊಳ್ಳಲಾಗಿದೆ ಎಂಬೀ ವಿಷಯಗಳನ್ನು ತಿಳಿಯೋಣ. ಈ ಎಲ್ಲ ಪ್ರಶ್ನೆಗಳಿಗೆ ಉತ್ತರಹುಡುಕುವ ಹಾದಿಯಲ್ಲಿ ಪ್ರತ್ಯೇಕತೆ, ಸಮನ್ವಯತೆ ಮತ್ತು ಅಂತರ್ಗತತೆ ಇವುಗಳ ಕುರಿತು ಹೆಚ್ಚು ತಿಳಿದುಕೊಳ್ಳುತ್ತಲೇ ಇವುಗಳ ನಡುವಿನ ವ್ಯತ್ಯಾಸಗಳನ್ನೂ ಸ್ಪಷ್ಟಪಡಿಸಿಕೊಳ್ಳೋಣ.

## 1.2.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 1.2.3.1 ಅಂತರ್ಗತತೆಯ ಇತಿಹಾಸ

ಪ್ರಾಚೀನ ಭಾರತದಲ್ಲಿ ಅಸಾಮರ್ಥ್ಯವುಳ್ಳ ವ್ಯಕ್ತಿಗಳನ್ನು ಸ್ವಾಭಾವಿಕವಾದ ಒಂದು ಸ್ಥಿತಿ ಎಂದು ಪರಿಗಣಿಸಲಾಗಿದ್ದು, ಆ ರೀತಿಯ ವ್ಯಕ್ತಿಗಳು ಆಯಾ ಕಾಲದ ವ್ಯವಸ್ಥೆಗೆ ಹೊಂದಿಕೊಂಡು ಬದುಕು ಸಾಗಿಸುತ್ತಾ ಬಂದವರಾಗಿದ್ದರು. ಭಾರತದಲ್ಲಿ ಅನಾದಿಕಾಲದಿಂದ ಸವಾಲುಗಳುಳ್ಳ ವ್ಯಕ್ತಿಗಳು ಇದ್ದರಾದರೂ ಕಿವುಡರು ಹಾಗೂ ಕುರುಡರಿಗಾಗಿ ಮೊದಲ ಶಾಲೆ ಎಂಬುದು ಪ್ರಾರಂಭವಾದುದು ಕ್ರಮವಾಗಿ 1884 ಮತ್ತು 1887ರಲ್ಲಿ. ಅಸಾಮರ್ಥ್ಯವುಳ್ಳ ಮಕ್ಕಳ ಸಾಕ್ಷರತೆಯ ಮಟ್ಟದಲ್ಲಿ ಇಂದಿಗೂ ಇರುವ ತಾರತಮ್ಯ ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಈ ಮಕ್ಕಳನ್ನು ಕುರಿತಂತೆ ರಾಷ್ಟ್ರೀಯ ಸಾಕ್ಷರತೆಯ ಮಟ್ಟದ ಆಶಯ ಶೇ.70 ಆಗಿದ್ದು, ಅದನ್ನು ತಲುಪಲು ಇನ್ನೂ ಸಾಕಷ್ಟು ಸಾಹಸವನ್ನೇ ಮಾಡಬೇಕಾಗಿದೆ. ಭಾರತದ ಬಹಳಷ್ಟು ರಾಜ್ಯಗಳಲ್ಲಿ ಅಸಾಮರ್ಥ್ಯವಿರುವ ಮಕ್ಕಳ ಸಾಕ್ಷರತೆಯ ಮಟ್ಟಕ್ಕೆ ಅಸಾಮರ್ಥ್ಯವಿಲ್ಲದಿರುವ ಮಕ್ಕಳ ಸಾಕ್ಷರತೆಯ ಮಟ್ಟವನ್ನು ಹೊಂದಿಸಲು ಸಾಧ್ಯವಾಗಿಯೇ ಇಲ್ಲ. ಇದು ಸಾಧ್ಯವಾಗದೇ 'ಎಲ್ಲರಿಗೂ ಶಿಕ್ಷಣ' ಎಂಬ ಪರಿಕಲ್ಪನೆಗೆ ಅರ್ಥವೇ ಬರುವುದಿಲ್ಲ. ಹಾಗಾಗಿ ಈ ಮಕ್ಕಳೂ ಸಮಗ್ರವಾಗಿ ಸಾಕ್ಷರರಾಗಬೇಕು. ಇವರೂ ಒಟ್ಟು ಮಕ್ಕಳ ಸಂಖ್ಯೆಯಲ್ಲಿ ಒಂದಾಗಬೇಕು. ಸವಾಲುಗಳುಳ್ಳವರೆಂದು ಗುರುತಿಸಲಾದ ಮಕ್ಕಳಿಗೂ ಹಕ್ಕೊತ್ತಾಯವಾಗಿ ಶಿಕ್ಷಣ ಒದಗಿಬರಬೇಕು. ಹೀಗಾಗಿ ಅವರು ಶಿಕ್ಷಣದ ಪ್ರಾರಣಭದ ಹಂತದಿಂದಲೂ ಮೂಲವಾಹಿನಿಯೊಂದಿಗೆ ಕೂಡಿಕೊಳ್ಳಬೇಕು.

ಈ ಸವಾಲುಗಳುಳ್ಳ ಮಕ್ಕಳ ಇತ್ತೀಚಿನ ಸಂಖ್ಯೆಯನ್ನು ಕುರಿತು ಗುರುತಿಸಲು ಪ್ರಯತ್ನಿಸಿ. 2003ರ ಒಂದು ಗಣತಿಯ ಅಂದಾಜಿನ ಪ್ರಕಾರ (MHRD 2003 statistics cited in World Bank, 2004), ಭಾರತದಲ್ಲಿ ಸುಮಾರು 25 ಮಿಲಿಯ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಈ ಹೊರಗುಳಿಯುವಿಕೆಗೆ ಕಾರಣ ಬಡತನ, ಲಿಂಗತ್ವ, ಅಸಾಮರ್ಥ್ಯ, ಜಾತಿ, ಧರ್ಮ ಹೀಗೆ ಹಲವಾರು. ಹೀಗೆ ಧರ್ಮ, ನಂಬಿಕೆ, ಲಿಂಗತ್ವ, ವಾಂಶಿಕತೆ, ಹಾಗೂ ಸಾಮರ್ಥ್ಯ ಇವು ವೈವಿಧ್ಯತೆಯ ಶ್ರೀಮಂತ ಅಂಶಗಳಾಗಿಯಲ್ಲದೆ ಸಮಾಜಕ್ಕೆ ಬಾಧೆ ತರುವ ಅಂಶಗಳಾಗಿ ಕಾಣಲಾಗುವ ಭಾರತದಂತಹ ರಾಷ್ಟ್ರದಲ್ಲಿ ಅಂತರ್ಗತ ಶಿಕ್ಷಣ ಎಂಬ ಪರಿಕಲ್ಪನೆ ಅತ್ಯಂತ ಸಮಂಜಸ, ಸಮರ್ಪಕ, ಜೊತೆಗೆ ಅನಿವಾರ್ಯ ಕೂಡ. ಎಲ್ಲ ಮಕ್ಕಳ ಶೈಕ್ಷಣಿಕ ಅಗತ್ಯಗಳನ್ನು ಎದುರಿಸುವ ನಿಟ್ಟಿನಲ್ಲಿ ಅಂತರ್ಗತ ಶಿಕ್ಷಣ ಎಲ್ಲ ಶಾಲೆಗಳ ಸರ್ವಾಂಗೀಣ ಅಭಿವೃದ್ಧಿಗೆ ಒಂದು ಸಾಧನವಾಗಿ ಕಂಡುಬರುತ್ತದೆ.

1994ರಲ್ಲಿ ಸಲಮಂಕದಲ್ಲಿ ವಿಶೇಷ ಅಗತ್ಯಗಳ ಶಿಕ್ಷಣವನ್ನು ಕುರಿತು ಸ್ಪೈನ್‌ನಲ್ಲಿ ನಡೆದ ಸಮ್ಮೇಳನವೇ ಅಂತರ್ಗತ ಶಿಕ್ಷಣದ ಪ್ರಮುಖ ಬೆಂಬಲ ಶಕ್ತಿ. ಶಾಲೆಗಳು ಮಕ್ಕಳ ದೈಹಿಕ, ಬೌದ್ಧಿಕ, ಸಾಮಾಜಿಕ, ಭಾವನಾತ್ಮಕ, ಭಾಷಿಕ ಹಾಗೂ ಇತರ ಸನ್ನಿವೇಶಗಳನ್ನು ಲೆಕ್ಕಿಸದೆ ಎಲ್ಲ ಮಕ್ಕಳನ್ನೂ ಸೇರಿಸಿಕೊಳ್ಳಬೇಕು ಎಂಬುದನ್ನು ಈ ಸಮ್ಮೇಳನ ಒತ್ತಿ ಒತ್ತಿ ಹೇಳಿತು.

> ಅಂತರ್ಗತತೆಯ ದೃಷ್ಟಿಕೋನದೊಂದಿಗಿನ ಸಾಮಾನ್ಯ ಶಾಲೆಗಳು ಪಕ್ಷಪಾತದ ಮನೋಭಾವಗಳನ್ನು ಎದುರಿಸಲು, ಎಲ್ಲರನ್ನೂ ಬರಮಾಡಿಕೊಳ್ಳುವ ಸಮುದಾಯಗಳನ್ನು ಸೃಷ್ಟಿಸಲು, ಅಂತರ್ಗತ ಸಮಾಜವನ್ನು ಕಟ್ಟಲು ಮತ್ತು ಎಲ್ಲರಿಗೂ ಶಿಕ್ಷಣದ ಧ್ಯೇಯವನ್ನು ಸಾಧಿಸಲು ಅತ್ಯಂತ ಪರಿಣಾಮಕಾರಿಯಾದ ಸಾಧನ. ಅದಕ್ಕಿಂತ ಹೆಚ್ಚಾಗಿ ಅದು ಗರಿಷ್ಠ ಸಂಖ್ಯೆಯ ಮಕ್ಕಳಿಗೆ ಪರಿಣಾಮಕಾರಿ ಶಿಕ್ಷಣವನ್ನು ಒದಗಿಸಿ, ಕೊನೆಯದಾಗಿ ಶೈಕ್ಷಣಿಕ ವ್ಯವಸ್ಥೆಯ ದಕ್ಷತೆ ಮತ್ತು ಮಿತವ್ಯಯವನ್ನು ಹೆಚ್ಚಿಸುತ್ತದೆ. (ವಿಶೇಷ ಶಿಕ್ಷಣವನ್ನು ಕುರಿತಂತೆ ಸಲಮಂಕದ ಹೇಳಿಕೆ ಮತ್ತು ಕಾರ್ಯ ಯೋಜನೆಯ ಚೌಕಟ್ಟು)

ಸಮಾಜದ ಹೊರಗಿರುವ ಮಕ್ಕಳ ಅಗತ್ಯಗಳನ್ನು ಪ್ರತಿಕ್ರಿಯಾತ್ಮಕವಾದ ಶೈಕ್ಷಣಿಕ ಅವಕಾಶಗಳ ಮೂಲಕ ಗಮನಿಸಿಕೊಳ್ಳಬೇಕಾದ ತುರ್ತು ಅಗತ್ಯವನ್ನು ಡಕಾರ್(ಸೆನೆಗಾಲ್)ಜಾಗತಿಕ ಶೈಕ್ಷಣಿಕ ಸಭೆಯೂ ಬೆಳಕಿಗೆ ತಂದು ಘೋಷಿಸಿತು. ಇದಕ್ಕೆ ಸಂಬಂಧಿಸಿದ ದಾಖಲೆಯಲ್ಲಿಯೇ "ಎಲ್ಲರಿಗೂ ಶಿಕ್ಷಣ ಎಂಬ ಪರಿಕಲ್ಪನೆಯ ವಿಶಾಲ ಕಾಣ್ಕೆಯಾಗಿ ಅಂತರ್ಗತತೆ ಒಂದು ಪ್ರಮುಖ ಸವಾಲಾಗಿ ಪರಿಗಣಿತವಾಗಬೇಕು ಎಂಬ ಅಂಶ ರಾಷ್ಟ್ರೀಯ ಸರ್ಕಾರಿ ಮತ್ತು ಧನಸಹಾಯ ಆಯೋಗಗಳಲ್ಲಿ ಪ್ರತಿಫಲಿಸಬೇಕು, ಎಲ್ಲರಿಗೂ ಶಿಕ್ಷಣ ಎಂಬುದು ಮಕ್ಕಳು, ದೂರದ ಗ್ರಾಮೀಣ ವಾಸಿಗಳು, ಅಲೆಮಾರಿಗಳು ಮತ್ತು ವಾಂಶಿಕ ಹಾಗೂ ಭಾಷಿಕ ಅಲ್ಪಸಂಖ್ಯಾತರು, ಘರ್ಷಣೆಗಳಿಂದ ಬಳಲುತ್ತಿರುವ ಮಕ್ಕಳು, ಯುವಕರು ಮತ್ತು ವಯಸ್ಕರು, ಹೆಚ್ ಐ ವಿ/ ಏಡ್ಸ್ ಮೊದಲಿಂದ ಬಳಲುತ್ತಿರುವವರು, ಹಸಿವೆ ಮತ್ತು ಆರೋಗ್ಯ ಕ್ಷೀಣತೆಯನ್ನು ಅನುಭವಿಸುತ್ತಿರುವವರು ಮತ್ತು ವಿಶೇಷ ಕಲಿಕಾ ಅಗತ್ಯವುಳ್ಳವರು ಈ ಎಲ್ಲರನ್ನೂ ಒಳಗೊಂಡಂತೆ ಸೌಲಭ್ಯವಂಚಿತರ, ಬಡವರ, ಅಗತ್ಯಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕು" ಎಂಬ ಅಂಶವನ್ನೂ ಪ್ರಮುಖವಾಗಿ ಹೇಳಲಾಯಿತು.

ಭಾರತದಲ್ಲಿ ಸ್ವಾತಂತ್ರ್ಯಾನಂತರದ ಕಾಲದಲ್ಲಿ ಸಾಕ್ಷರತೆಯ ಮಟ್ಟ ಗಣನೀಯವಾಗಿ ಏರಿಕೆಯಾಯಿತು. ಶೈಕ್ಷಣಿಕ ಅವಕಾಶಗಳೂ ಸಾಕಷ್ಟು ತೆರೆದುಕೊಂಡವು. ಆದರೆ ಈ ಶೈಕ್ಷಣಿಕ ಅವಕಾಶಗಳಿಂದ ಅಸಾಮರ್ಥ್ಯ ಹೊಂದಿದ ಮಕ್ಕಳಿಗೆ ಅಂತಹ ಪ್ರಯೋಜನವೇನೂ ಆಗಲಿಲ್ಲ. ಇದರಿಂದಾಗಿಯೇ 1964–66ರ ಕೊಠಾರಿ ಆಯೋಗವೂ ಸಾಮಾನ್ಯ ಶಾಲೆಗಳಲ್ಲಿ ಅಂಗವಿಕಲ ಮಕ್ಕಳನ್ನು ಸಮನ್ವಯ ಮಾಡಿಕೊಳ್ಳಬೇಕು ಎಂದು ಶಿಫಾರಸು ಮಾಡಿತು. 1986ರಲ್ಲಿ ಎನ್.ಸಿ.ಇ.ಆರ್.ಟಿ. ಯು ಅಸಾಮರ್ಥ್ಯವಿರುವ ಮಕ್ಕಳಿಗೆ ಯೋಜನಾ ಸಮನ್ವಯ ಶಿಕ್ಷಣ (Project Integration Education for the disabled - PIED)ವನ್ನು ರೂಪಿಸಿತು. 1994ರ ಸಲಮಂಕ ಸಮ್ಮೇಳನದಲ್ಲೂ ಅಂತರ್ಗತ ಶಿಕ್ಷಣವನ್ನು ತಾತ್ವಿಕವಾಗಿ ಒಪ್ಪಿಕೊಳ್ಳಲಾಯಿತು. ಇದನ್ನೇ 2000ದಲ್ಲಿ ಡಾಕರ್‌ನಲ್ಲಿನ ಜಾಗತಿಕ ಶಿಕ್ಷಣ ಸಭೆಯಲ್ಲೂ ಪುನರ್ ಸ್ಥಾಪಿಸಲಾಯಿತು.

ಅಸಾಮರ್ಥ್ಯವಿರುವ ಮಕ್ಕಳು ಶಿಕ್ಷಣ ಪಡೆದ 19ನೇ ಶತಮಾನದಾದ್ಯಂತ ಮತ್ತು 20ನೇ ಶತಮಾನದ ಬಹಳಷ್ಟು ಕಾಲ ಅದು ಸಾಂಸ್ಥಿಕವಾಗಿ ಪ್ರತ್ಯೇಕ ಸನ್ನಿವೇಶದಲ್ಲಿ ನಡೆಯುತ್ತಿತ್ತು. ಇತ್ತೀಚಿನ ವರ್ಷಗಳಲ್ಲಿ ಅಂತರ್ಗತ ಸನ್ನಿವೇಶ ಪಲ್ಲಟಗೊಂಡಿದೆ.

ಭಾರತದಲ್ಲಿ ಅಸಾಮರ್ಥ್ಯವುಳ್ಳ ಮಕ್ಕಳ ಶಿಕ್ಷಣಕ್ಕೆ ಅದರದ್ದೇ ಆದ ಇತಿಹಾಸವಿದೆ. ವೃದ್ಧರು, ಅಸ್ವಸ್ಥರು ಮತ್ತು

ಅಸಾಮರ್ಥ್ಯವಿರುವವರನ್ನು ಕುರಿತ ಕಾಳಜಿ ಭಾರತಕ್ಕೆ ಹೊಸದೇನಲ್ಲ; ಅದು ಭಾರತದ ಬುನಾದಿಯೂ ಹೌದು. ಭಾರತದಲ್ಲಿ ಅಸಾಮರ್ಥ್ಯವಿರುವವರನ್ನು ಕುರಿತ ಕಲ್ಯಾಣ ಸೇವೆಗಳ ಮೂಲವನ್ನು ಹುಡುಕಿ ಹೊರಟರೆ, ಅದು ಭಾರತದ ಮೂಲದಷ್ಟೇ ಆಳಕ್ಕೆ ಹೋಗಬಹುದು. ಭಾರತದ ಸಂಸ್ಕೃತಿ ಒಂದು ರೀತಿಯಲ್ಲಿ ಅಂತರ್ಗತತೆಯ ಸಂಸ್ಕೃತಿಯೇ. ಇದು ಎಲ್ಲ ವರ್ಗದವರನ್ನೂ ಒಳಗೊಂಡ ಸಂಸ್ಕೃತಿ. ಔಪಚಾರಿಕ ಶಿಕ್ಷಣಕ್ಕೆ ಮೊದಲೇ ಭಾರತದ ಸಂಸ್ಕೃತಿಯಲ್ಲಿ ಮಾನವೀಯತೆ ಮೂರ್ತಿವೆತ್ತಿದೆ. ಇದೇ ಎಲ್ಲ ರೀತಿಯ ವ್ಯಕ್ತಿಗಳ ಅಂತರ್ಗತತೆಯೊಂದಿಗಿನ ಸಂಸ್ಕೃತಿಯ ಬೆಳವಣಿಗೆಗೆ ಕಾರಣವಾಗಿದೆ. ಭಾರತದ ಪ್ರತಿ ಧರ್ಮವೂ ಬಡವರು, ನಿರಾಶ್ರಿತರನ್ನು ಒಪ್ಪಿಕೊಂಡೇ ತನ್ನ ತೆಕ್ಕೆಗೆ ತೆಗೆದುಕೊಂಡೇ ಬಂದಿದೆ. ಕರುಣೆ, ತ್ಯಾಗ, ದಯೆ, ಪರಸ್ಪರ ಕಾಳಜಿ ಇವುಗಳನ್ನು ಒಪ್ಪಿಕೊಂಡ ಭಾರತೀಯ ಸಂಸ್ಕೃತಿ ಅಸಾಮರ್ಥ್ಯವುಳ್ಳ ವ್ಯಕ್ತಿಗಳನ್ನೂ ಸಹಜವಾಗಿಯೇ ತನ್ನೊಳಗೆ ಸೇರಿಸಿಕೊಂಡಿದೆ ಎಂಬುದು ನಿರ್ವಿವಾದ.

ಭಾರತದ ಸಾಮಾಜಿಕ ವ್ಯವಸ್ಥೆಯೂ ಈ ಅಂತರ್ಗತತೆಯನ್ನು ಪೋಷಿಸಿದೆ ಎಂದು ಹೇಳಬಹುದು. ಅವಿಭಕ್ತ ಕುಟುಂಬ ವ್ಯವಸ್ಥೆ, ರಕ್ತಸಂಬಂಧದ ನೆಂಟು ಸಹಜವಾಗಿಯೇ ಅಂತರ್ಗತತೆಗೆ ತೆರೆದುಕೊಂಡ ವ್ಯವಸ್ಥೆಯಾಗಿದ್ದಿತು. ಇತರ ದೇಶಗಳಿಗಿಂತ ಮೊದಲೇ ಭಾರತದಲ್ಲಿ ಇಂತಹ ಮಕ್ಕಳಿಗೆ ಶಿಕ್ಷಣ ಕೊಡುವ ವ್ಯವಸ್ಥೆಯೂ ಇದ್ದಿತೆಂದು ಹೇಳಲಾಗುತ್ತದೆ. ಪ್ರಾಚೀನ ಭಾರತದಲ್ಲಿದ್ದ ಗುರುಕುಲ ಪದ್ಧತಿಯೂ ಮಕ್ಕಳ ಸಾಂಸ್ಕೃತಿಕ, ಸಾಮಾಜಿಕ ಮತ್ತು ಆರ್ಥಿಕ ಅಗತ್ಯಗಳಿಗೆ ಸಂವೇದನಾಶೀಲವಾಗಿಯೇ ಇದ್ದಿತು. ಈ ರೀತಿಯ ಅಭ್ಯಾಸಗಳು ಭಾರತದ ಇತಿಹಾಸದುದ್ದಕ್ಕೂ ಮುಂದುವರಿಯುತ್ತಲೇ ಬಂದಿದೆ.

ಭಾರತದಲ್ಲಿ ಅಸಾಮರ್ಥ್ಯವುಳ್ಳ ಮಕ್ಕಳ ಔಪಚಾರಿಕ ಶಿಕ್ಷಣ ಪ್ರಾರಂಭವಾದುದು ಸುಮಾರು 1869ರಲ್ಲಿ ಜೇನ್ ಲಿಯೋಪಾಟ್ ಅವರು ಚರ್ಚ್ ಮಿಶಿನರಿ ಸೊಸೈಟಿಯ ಸಹಾಯದಿಂದ ಅಂಥ ಮಕ್ಕಳಿಗಾಗಿ ಬನಾರಸ್‌ನಲ್ಲಿ ಒಂದು ಶಾಲೆಯನ್ನು ಪ್ರಾರಂಭಿಸಿದಾಗ ಎಂದು ಹೇಳಬಹುದು. ಮುಂದೆ, ಭಾರತದ ಕುರ್ಸಿಯಾಂಗ್‌ನಲ್ಲಿ 1918ರಲ್ಲಿ ಬೌದ್ಧಿಕ ಮತ್ತು ದೈಹಿಕ ಅಸಾಮರ್ಥ್ಯವುಳ್ಳ ಮಕ್ಕಳಿಗೆ ಒಂದು ಔಪಚಾರಿಕ ಶಾಲೆಯನ್ನು ಪ್ರಾರಂಭಿಸಲಾಯಿತು. 1947ರಲ್ಲಿ ಸ್ವಾತಂತ್ರ್ಯ ಪಡೆದ ನಂತರ ಅಸಾಮರ್ಥ್ಯವುಳ್ಳ ಮಕ್ಕಳಿಗೆ ಪ್ರತ್ಯೇಕ ಸನ್ನಿವೇಶದಲ್ಲಿ ಶಿಕ್ಷಣ ಹೆಚ್ಚು ಪ್ರಬಲವಾಯಿತು. ಹಲವಾರು ಸರ್ಕಾರೇತರ ಸಂಸ್ಥೆಗಳು ಅವರ ಶಿಕ್ಷಣದ ಕುರಿತು ಹೆಚ್ಚಿನ ಜವಾಬ್ದಾರಿಯನ್ನು ತೆಗೆದುಕೊಂಡವು. ಮೂಲಗಳ ಪ್ರಕಾರ 1966ರ ವೇಳೆಗೆ ದೃಶ್ಯ ಅಸಾಮರ್ಥ್ಯವುಳ್ಳ ಮಕ್ಕಳಿಗೆ 115 ಶಾಲೆಗಳೂ ಶ್ರವಣ ಅಸಾಮರ್ಥ್ಯವುಳ್ಳ ಮಕ್ಕಳಿಗೆ 70 ಶಾಲೆಗಳೂ ಮೂಳೆಗಳ ಸಮಸ್ಯೆಯುಳ್ಳ ಮಕ್ಕಳಿಗೆ 25 ಶಾಲೆಗಳೂ ಬೌದ್ಧಿಕ ಅಸಾಮರ್ಥ್ಯವುಳ್ಳ ಮಕ್ಕಳಿಗೆ 27 ಶಾಲೆಗಳೂ ಇದ್ದುವೆಂದು ತಿಳಿದುಬರುತ್ತದೆ. 1991ರ ವೇಳೆಗೆ ಭಾರತದಲ್ಲಿ ವಿವಿಧ ರೀತಿಯ ಅಸಾಮರ್ಥ್ಯವುಳ್ಳ ಮಕ್ಕಳಿಗೆ ಇದ್ದ ಶಾಲೆಗಳ ಒಟ್ಟು ಸಂಖ್ಯೆ 1200. ಇತ್ತೀಚಿನ ವರ್ಷಗಳಲ್ಲಿ ಅಸಾಮರ್ಥ್ಯವುಳ್ಳವರ ಶಿಕ್ಷಣ ಸ್ವಲ್ಪ ನಿಧಾನವಾಗಿರುವಂತೆ ಕಂಡುಬಂದರೂ ಹೆಚ್ಚು ಪ್ರಗತಿಶೀಲವಾಗಿ ಕಾಣಬರುತ್ತಿದೆ. ಈ 21ನೇ ಶತಮಾನದಲ್ಲಿ ನಾವು ಮುಂದುವರಿಯುತ್ತಿದ್ದಂತೆ, ಸಾರ್ವತ್ರಿಕ ಅಂತರ್ಗತ ಶಿಕ್ಷಣದ ಪ್ರಗತಿ ಸ್ವಲ್ಪ ಕಷ್ಟಕರವಾಗಿ ಕಂಡುಬಂದರೂ ಬಹಳಮಟ್ಟಿಗೆ ನಮ್ಮ ಕೈಯಲ್ಲೇ ಇದೆ. ಕಲಿಯುವವರಲ್ಲಿನ ವಿಭಿನ್ನತೆಯನ್ನು ಕುರಿತ ಶೈಕ್ಷಣಿಕ ಸವಾಲುಗಳನ್ನು ಹೇಗೆ ಎದುರಿಸುವುದು ಎಂಬುದನ್ನು ಕುರಿತ ಕಾಳಜಿ ಇಂದು ಹೆಚ್ಚಾಗಿರುವುದು ಕಾಣುತ್ತಿದೆ. ಸಾಮಾಜಿಕ ಚಲನೆಯ ಕಾರಣದಿಂದಾಗಿ, ಭಾರತದ ಶಾಲೆಗಳಲ್ಲಿನ ವಿದ್ಯಾರ್ಥಿ ಸಮುದಾಯದಲ್ಲಿ ಹೆಚ್ಚಿನ ವಿಭಿನ್ನತೆ ಕಾಣುತ್ತಿದ್ದು, ಶಿಕ್ಷಣತಜ್ಞರು ಶಾಲಾ ಸುಧಾರಣಾ ಪ್ರಯತ್ನಗಳ ಮೂಲಕ ಈ ಸ್ವರೂಪದ ವಿದ್ಯಾರ್ಥಿ ಸಮುದಾಯಕ್ಕೆ ಪ್ರತಿಕ್ರಿಯಿಸಬೇಕಾಗಿದೆ. ಅಸಾಮರ್ಥ್ಯರ ಗುಂಪುಗಳೊಳಗಿನ ಹೆಚ್ಚಿನ ಸಹಯೋಗ, ಅಸಾಮರ್ಥ್ಯ ಸಮುದಾಯ ಮತ್ತು ಸರ್ಕಾರ, ಅಸಾಮರ್ಥ್ಯ ಸಮುದಾಯ

ಹಾಗೂ ಮಾನವ ಹಕ್ಕು ಹೋರಾಟ ಸಮುದಾಯ ಇವುಗಳ ನಡುವಿನ ಸಹಯೋಗಗಳ ಕಾರಣದಿಂದಾಗಿ, ಅಸಾಮರ್ಥ್ಯತೆಯನ್ನು ಕುರಿತ ಚಳುವಳಿ ಅಗತ್ಯವಾದ ಬದಲಾವಣೆಗೆ ಜಾಗತಿಕ ಶಕ್ತಿಯಾಗಿ ಪರಿಣಮಿಸುತ್ತಿದೆ. ಕಲಿಕೆ ಮತ್ತು ಬೆಳವಣಿಗೆಯನ್ನು ಕೆಲವು ಅಡ್ಡಿಗಳೊಂದಿಗೆ ಅನುಭವಿಸುತ್ತಿರುವ ಕೆಲವು ದೇಶಗಳಲ್ಲಿ ಕಳೆದ ದಶಕಗಳಲ್ಲಿ ಹಿರಿದಾದ ಮಾರ್ಪಾಡುಗಳಾಗಿವೆ. ಜನರ ಮನೋಭಾವ ಮತ್ತು ಗ್ರಹಿಕೆಗಳಲ್ಲಿ ಬದಲಾವಣೆಗಳಾಗಿವೆ. ಉದಾಹರಣೆಗೆ, ಅಸಾಮರ್ಥ್ಯವಿರುವ ಮಕ್ಕಳನ್ನು ಜನಗಣನೆಗೆ ಬಾರದಂತೆ ಅಡಗಿಸಿಡಬೇಕಾಗಿಲ್ಲ, ಅವರೂ ಇತರರಂತೆ ಸಮಾಜದಲ್ಲಿ ಬಾಳಬೇಕು, ಅವರೂ ಶಿಕ್ಷಣ ಪಡೆಯಲು ಸಾಧ್ಯವಿದೆ ಇತ್ಯಾದಿ ಪ್ರಮುಖ ಅರಿವು, ಜಾಗೃತಿ ಮೂಡಿಬಂದಿದೆ. ಇದು ಅಸಾಮರ್ಥ್ಯವಿರುವ ಮಕ್ಕಳ ಬದುಕನ್ನು ಹಸನುಮಾಡಲು ಕಾರಣವಾಗಿದೆಯಲ್ಲದೆ ಎಲ್ಲ ಮಕ್ಕಳ ಕಲಿಕಾ ಅನುಭವಗಳನ್ನು ಜೀವನಾನುಭವಗಳನ್ನು ಶ್ರೀಮಂತಗೊಳಿಸಲು ದಾರಿಯಾಗಿದೆ. ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯ ಸಾಧನೆಯಲ್ಲಿ ಹಿಂದೆಂದೂ ಇರದ ಆಸಕ್ತಿ ಕಾಳಜಿಗಳು ಇಂದು ಬೆಳಕಿಗೆ ಬರುತ್ತಿವೆ.

ಶಿಕ್ಷಣ ಎಂಬುದು, ಪ್ರತಿ ವ್ಯಕ್ತಿಯ ಬೆಳವಣಿಗೆ ಮತ್ತು ಕ್ರಿಯಾಶೀಲತೆಯನ್ನು ಸುಗಮಗೊಳಿಸುವ ಸಾಧನ. ಈ ವಿಷಯದಲ್ಲಿ ಯಾವುದೇ ರೀತಿಯ ದೈಹಿಕ ಅಥವಾ ಇತರ ಅಡೆತಡೆಗಳು ಗಣನೀಯವಲ್ಲ. ಹಾಗಾಗಿ ಅಸಾಮರ್ಥ್ಯ ಎಂಬುದನ್ನು ಯಾವುದೇ ಕಾರಣಕ್ಕೂ ಅನರ್ಹತೆಯಾಗಿ ಪರಿಗಣಿಸಲಾಗದು. ಅವರ ಅಗತ್ಯಕ್ಕೆ ಅನುಗುಣವಾಗಿ ಅಗತ್ಯವಾದ ಸಂಪನ್ಮೂಲಗಳನ್ನು ರಾಜಕೀಯ ಆಶಯದೊಂದಿಗೆ ಹೋಲಿಸಿ ಅವರಿಗೆ ಒದಗಿಸಬೇಕು. ಅಂತಿಮವಾಗಿ ಒಂದು ದೇಶದ ಯಶಸ್ಸು, ಆ ದೇಶದ ಅಸಾಮರ್ಥ್ಯವುಳ್ಳವರನ್ನೂ ಒಳಗೊಂಡಂತೆ, ಒದಗಿಸಲಾಗುವ ಮೂಲಶಿಕ್ಷಣದ ಗುಣಮಟ್ಟದ ಮೇಲೆ ತೀರ್ಮಾನವಾಗುತ್ತದೆ. ಈ ತೀರ್ಮಾನವನ್ನು ಕೈಗೊಳ್ಳುವವರು ಆ ರೀತಿಯ ಶಿಕ್ಷಣವನ್ನು ಪಡೆದವರೇ ವಿನಾ ಯಾವುದೇ ಸರ್ಕಾರವಾಗಲೀ ದಾತಾರರಾಗಲೀ ಅಲ್ಲ ಎಂಬ ಆಲೋಚನೆಗಳು ಜಾಗೃತವಾಗುತ್ತಿದೆ.

ಈ ಹಿನ್ನೆಲೆಯಲ್ಲಿ ವಿಶೇಷ ಮಕ್ಕಳ ವಿಭಿನ್ನ ಅಗತ್ಯಗಳನ್ನು ಪೂರೈಸಲು ಕಾಲಕಾಲಕ್ಕೆ ಅನೇಕ ಹೊಸ ಹೊಸ ಪ್ರಯತ್ನಗಳನ್ನು ಮಾಡಲಾಗಿದೆ. ಇದಕ್ಕೆ ಪೂರಕವಾಗಿ ಅಧ್ಯಾಪಕರಿಗೆ ಅಗತ್ಯವಾದ ಮನೋಭಾವ, ಕೌಶಲ ಹಾಗೂ ಸಾಮರ್ಥ್ಯಗಳನ್ನು ಬೆಳೆಸಲೂ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ವಿಶೇಷ ಶಿಕ್ಷಣದ ಈ ಪರಿಕಲ್ಪನೆಗಳು ಅಂತರ್ಗತ ಶಿಕ್ಷಣವಾಗಿ ಮಾರ್ಪಾಡುಗೊಂಡ ರೀತಿಯನ್ನು ಗಮನಿಸೋಣ.

## ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

ಕೆಳಗೆ ಕೆಲವು ಅಪೂರ್ಣವಾಕ್ಯಗಳನ್ನು ಕೊಡಲಾಗಿದೆ. ಅವುಗಳನ್ನು ಸೂಕ್ತ ಪದಗಳಿಂದ ತುಂಬಿಸಿ ಪೂರ್ಣಗೊಳಿಸಿ.

1. ಪುರಾತನ ಭಾರತದಲ್ಲಿ ಅಸಾಮರ್ಥ್ಯವಿದ್ದ ವ್ಯಕ್ತಿಗಳು ಪರಿಗಣಿತವಾಗಿದ್ದ ತಳಹದಿ________________
2. ಜಾಗತಿಕ ಬ್ಯಾಂಕ್ ಗುರುತಿಸಿದಂತೆ 2004ರಲ್ಲಿ ಶಾಲೆಯ ಹೊರಗಿದ್ದ ಮಕ್ಕಳ ಸಂಖ್ಯೆ______________
3. ಅಂತರ್ಗತ ಶಿಕ್ಷಣದ ಪ್ರಮುಖ ಬೆಂಬಲ ಶಕ್ತಿಯಾದುದು ವಿಶೇಷ ಅಗತ್ಯಗಳ ಶಿಕ್ಷಣವನ್ನು ಕುರಿತಂತೆ ಸಲಮಂಚದಲ್ಲಿ ನಡೆದ ________________
4. ವಿಶೇಷ ಶಿಕ್ಷಣದಲ್ಲಿನ ಬೋಧನೆ ___________________
5. ಪ್ರತ್ಯೇಕ ಶಿಕ್ಷಣದ ಉತ್ತಮಿಕೆಯ ರೂಪ________________

## 1.2.3.2 ವಿಶೇಷ ಶಿಕ್ಷಣದಿಂದ ಸಮನ್ವಯ ಶಿಕ್ಷಣದ ಕಡೆಗೆ :

ಅಸಾಮಾರ್ಥ್ಯವಿರುವ ಮಕ್ಕಳ ಶಿಕ್ಷಣದ ಇತಿಹಾಸದಲ್ಲಿ ಕಾಣಬರುವ ವಿಶೇಷ ಶಿಕ್ಷಣದ ವಿಧಗಳನ್ನು ಅರ್ಥಮಾಡಿಕೊಳ್ಳುವ ಮೊದಲಿಗೆ ಅಂತರರಾಷ್ಟ್ರೀಯ ಬೆಳವಣಿಯ ಕ್ಷೇತ್ರದಲ್ಲಿ ಚರ್ಚಿತವಾಗಿರುವ ಅಸಾಮರ್ಥ್ಯದ ಎರಡು ಸಾಮಾನ್ಯ ಮಾದರಿಗಳನ್ನು ತಿಳಿಯುವುದು ಮುಖ್ಯವಾಗುತ್ತದೆ. ಅವೆಂದರೆ ಸಾಮಾಜಿಕ ಹಾಗೂ ವೈದ್ಯಕೀಯ ಮಾದರಿಗಳು. ಅಸಾಮರ್ಥ್ಯದ ವೈದ್ಯಕೀಯ ಮಾದರಿಯು ಅಸಾಮರ್ಥ್ಯವನ್ನು ಹೊಂದಿರುವ ವ್ಯಕ್ತಿಗಳನ್ನು ಯಾವುದೋ ಒಂದು ಕೊರತೆ ಇರುವವರು ಮತ್ತು ಅದನ್ನು ಸರಿಪಡಿಸಬೇಕು ಎಂದು ಪರಿಗಣಿಸುತ್ತದೆ. ಈ ವೈದ್ಯಕೀಯ ಮಾದರಿಯ ದೃಷ್ಟಿಯಿಂದ ಅಸಾಮರ್ಥ್ಯವಿರುವವರನ್ನು ನೋಡುವ ವ್ಯಕ್ತಿಗಳು ಆ ವ್ಯಕ್ತಿಗಳ ಬದುಕಿನ ಗುಣಮಟ್ಟವನ್ನು ಅವರು ಹುಟ್ಟುವ ಮೊದಲೇ ನಿರ್ಣಯಿಸಿಬಿಡುತ್ತಾರೆ. ಸಾಮಾನ್ಯವಾಗಿ ಅಸಾಮರ್ಥ್ಯವಿರುವ ವ್ಯಕ್ತಿಗಳು ಕಡಿಮೆ ಮಟ್ಟದ ಸಾರ್ಥಕತೆಯ ಬದುಕನ್ನು ಬದುಕುತ್ತಾರೆ ಎಂದು ನಂಬುತ್ತಾರೆ. ಅವರ ಬದುಕು ಸಾಮಾನ್ಯರ ಬದುಕಿಗಿಂತ ಭಿನ್ನವಾಗಿರುತ್ತದೆ ಎಂಬ ಒಂದೇ ಒಂದು ಅಂಶದ ಆಧಾರದ ಮೇಲೆ ಅವರು ಈ ನಿರ್ಣಯಕ್ಕೆ ಬರುತ್ತಾರೆ. ಇದರಿಂದಾಗಿ, ಅವರನ್ನು 'ಸಾಮಾನ್ಯ'ರಂತೆ ಮಾಡಿದರೆ ಮಾತ್ರ ಅವರಿಗೆ ಉತ್ತಮ ಗುಣಮಟ್ಟದ ಬದುಕಿಗೆ ದಾರಿಯಾಗುತ್ತದೆ ಎಂಬ ನಂಬಿಕೆಯ ಮೇಲೆ ಅದಕ್ಕೆ ಮಾಡಬೇಕಾದುದೆಲ್ಲವನ್ನೂ ಮಾಡಲಾಗುತ್ತದೆ. ಈ ವೈದ್ಯಕೀಯ ಮಾದರಿಯ ಮೇಲೆ ಕಟ್ಟಿದ ವಿಚಾರಗಳು 'ಪ್ರತ್ಯೇಕ ಮಾದರಿ'ಯ ಶಿಕ್ಷಣದ ಅವಿಭಾಜ್ಯ ಅಂಶವಾಗುತ್ತದೆ. ವೈದ್ಯಕೀಯ ಮಾದರಿ ಮತ್ತು ಪ್ರತ್ಯೇಕ ಸನ್ನಿವೇಶದಲ್ಲಿನ ಶಿಕ್ಷಣ ಈ ಎರಡೂ ವ್ಯಕ್ತಿ ಹಾಗೂ ವ್ಯಕ್ತಿಯ ಅಸಾಮರ್ಥ್ಯತೆ ಎರಡನ್ನೂ ಸಮಸ್ಯೆಯಾಗಿಯೇ ನೋಡುತ್ತದೆ. ಮಾತ್ರವಲ್ಲ, ಅಸಾಮರ್ಥ್ಯವಿರುವ ವ್ಯಕ್ತಿಯನ್ನು ಸಾಮಾನ್ಯವ್ಯಕ್ತಿಗೆ ಸಮಾನಾಗಿ ಮಾಡಿ ಸಮಸ್ಯೆಯನ್ನು ಪರಿಹರಿಸಲು ಬಯಸುತ್ತವೆ. ಇದಕ್ಕೆ ವಿರುದ್ಧವಾಗಿ, ಸಾಮಾಜಿಕ ಮಾದರಿಯು ಕೊರತೆಯನ್ನು ವ್ಯಕ್ತಿಯೊಳಗೆ ಕಾಣುವುದಿಲ್ಲ. ಬದಲಿಗೆ, ಸಾಮಾಜಿಕ ಮಾದರಿಯ ಕಣ್ಣಿನಲ್ಲಿ, ಕೊರತೆಗಳು ಸೂಕ್ತವಾದ ಅವಕಾಶಗಳನ್ನೀಯದ ಸಮಾಜದಿಂದಾಗಿ ಬಂದುದು. ಅಸಾಮರ್ಥ್ಯವುಳ್ಳ ವ್ಯಕ್ತಿಗಳಿಗೆ ಅಡ್ಡಿಗಳು ಮೂರು ಕ್ಷೇತ್ರಗಳಲ್ಲಿ ಉಂಟಾಗುತ್ತವೆ ಎಂದು ಹೇಳಲಾಗುತ್ತದೆ.

ಅವೆಂದರೆ ವ್ಯಕ್ತಿಯ ಭೌತಿಕ ಪರಿಸರ, (ಕಟ್ಟಡದ ವಿನ್ಯಾಸ ಇತ್ಯಾದಿ) ಸಮಾಜದ ರಚನೆ, ನೀತಿನಿಯಮಗಳು ಮತ್ತು ಉಪಲಬ್ಧವಿರುವ ಸೇವೆಗಳು, ಅಸಾಮರ್ಥ್ಯವುಳ್ಳ ವ್ಯಕ್ತಿಗಳನ್ನು ಕುರಿತ ಸಮುದಾಯದ ಮನೋಭಾವಗಳು ಮತ್ತು ಸಂಘಟನೆಗಳ ನಿಯಮ ಮತ್ತು ಕಾರ್ಯವಿಧಾನಗಳು. ಹೀಗಾಗಿ, ಸಾಮಾಜಿಕ ಮಾದರಿಯು, ಅಸಾಮರ್ಥ್ಯವಿರುವ ವ್ಯಕ್ತಿಯೊಳಗಣ ಸಮಸ್ಯೆಯನ್ನು ಕಂಡುಹಿಡಿದು ಪರಿಹರಿಸುವುದಕ್ಕಿಂತ, ಸಮಾಜದೊಳಗಣ ಈ ಅಡ್ಡಿಗಳನ್ನು ನಿವಾರಿಸಲು ಅಥವಾ ಅದರ ಪರಿಣಾಮಗಳನ್ನು ಕಡಿಮೆಮಾಡಲು ಪ್ರೋತ್ಸಾಹಿಸುತ್ತದೆ.

ಸಾಮಾಜಿಕ ಮಾದರಿಯ ಗುರಿ ಮತ್ತು ವಿಚಾರಗಳ ಸುತ್ತ ಅಂತರ್ಗತ ಶಿಕ್ಷಣವನ್ನು ಕಟ್ಟಲಾಗಿದೆ. ಸಾಮಾಜಿಕ ಮಾದರಿ ಅನ್ವಯವಾಗುವ ಸಮಾಜದ ಹಲವು ಅಂಶಗಳಲ್ಲಿ ಶಿಕ್ಷಣವೂ ಒಂದು. ಅಂತರ್ಗತತೆ ಎಂದರೆ ತರಗತಿ ಮತ್ತು ಶಾಲೆಗಳಲ್ಲಿನ ಅಡ್ಡಿಗಳನ್ನು ದೂರಮಾಡಿ ಭಿನ್ನ ಮಟ್ಟದ ಸಾಮರ್ಥ್ಯವುಳ್ಳ ಮಕ್ಕಳು ಒಂದೇ ಪಾಠದಲ್ಲಿ ಭಾಗಿಯಾಗುವಂತೆ ಮಾಡುವುದು. ಶಿಕ್ಷಣಕ್ಕೆ ಕೊಡುವ ಸಮಾನ ಅವಕಾಶದಿಂದಾಗಿ ಅಸಾಮರ್ಥ್ಯವಿರುವ ಮಕ್ಕಳು ಸ್ವತಂತ್ರರೂ ಕೊಡುಗೆದಾತರೂ ಅಂತರ್ಗತವಾಗಿರುವ ಅಡ್ಡಿಮುಕ್ತ ಸಮಾಜದ ಸಹಕಾರಿ ಸದಸ್ಯರೂ ಆಗುವಂತೆ ಸಬಲಗೊಳ್ಳುತ್ತಾರೆ.

ಈ ಎರಡು ಮಾದರಿಗಳ ಆಧಾರದ ಮೇಲೆ ಅಸಾಮರ್ಥ್ಯವುಳ್ಳ ಮಕ್ಕಳಿಗೆ ಮೂರು ರೀತಿಯ ಶಿಕ್ಷಣದ ವ್ಯವಸ್ಥೆ ಒದಗಿಬಂದಿರುವುದನ್ನು ನೋಡಬಹುದು.

ಪ್ರತ್ಯೇಕ ಪರಿಸರದ ಶಿಕ್ಷಣದಲ್ಲಿ ವಿದ್ಯಾರ್ಥಿಗಳು ಅವರ ನೆರೆಕೆರೆಯವರಿಂದ ಭಿನ್ನವಾದ ಸನ್ನಿವೇಶದಲ್ಲಿ ಪ್ರತ್ಯೇಕವಾಗಿ ಕಲಿಯುತ್ತಾರೆ. ಸಾಮಾನ್ಯವಾಗಿ ಪ್ರಗತಿಶೀಲ ರಾಷ್ಟ್ರಗಳಲ್ಲಿ, ಪ್ರತ್ಯೇಕ ಶಿಕ್ಷಣವು ಅಸಾಮರ್ಥ್ಯವಿರುವ ಮಕ್ಕಳಿಗಾಗಿಯೇ ರೂಪಿಸಲಾದ ವಿಶೇಷ ಶಾಲೆಗಳ ಮಾದರಿಯಲ್ಲಿ ಅಥವಾ ವಿಶೇಷ ತರಗತಿಗಳಲ್ಲಿ ನಡೆಯುತ್ತದೆ. ಪ್ರತ್ಯೇಕ ಶಿಕ್ಷಣವು ಅಸಾಮರ್ಥ್ಯವಿರುವ ಮಗುವನ್ನು ಒಂದು ಸಮಸ್ಯೆಯಾಗಿ ಗುರುತಿಸುವುದಲ್ಲದೆ, ಅದನ್ನು ಕಲಿಕೆಗೆ ಅಡ್ಡಿಯೆಂದೂ ಪರಿಗಣಿಸುತ್ತದೆ. ಆ ಪರಿಣಾಮವಾಗಿ ಈ ಸನ್ನಿವೇಶದ ಮಕ್ಕಳು ತಮ್ಮ ಜೊತೆಗಾರರಾದ ಸಾಮಾನ್ಯ ಶಾಲೆಯ ಮಕ್ಕಳು ಕಲಿಯುವ ಪಠ್ಯಕ್ರಮಕ್ಕಿಂತ ಭಿನ್ನವಾದ ಪಠ್ಯಕ್ರಮವನ್ನು ವಿಭಿನ್ನವಾದ ಬೋಧನಾ ವಿಧಾನ ಮತ್ತು ಮೌಲ್ಯಮಾಪನ ಕ್ರಮಗಳೊಂದಿಗೆ ಕಲಿಯುತ್ತಾರೆ. ಶಾಲೆಯಲ್ಲಿನ ಈ ಪ್ರತ್ಯೇಕತೆ ಈ ಮಕ್ಕಳ ಬದುಕಿನ ಇತರ ಕ್ಷೇತ್ರಗಳಲ್ಲೂ ಅವರನ್ನು ಪ್ರತ್ಯೇಕವಾಗಿರಿಸಿಬಿಡುತ್ತದೆ.

ಅಸಾಮರ್ಥ್ಯವುಳ್ಳ ಮಕ್ಕಳ ವಿಶಿಷ್ಟ ಶೈಕ್ಷಣಿಕ ಹಾಗೂ ಸಂಬಂಧಿತ ಅಗತ್ಯಗಳ ಪೂರೈಕೆಯ ಉದ್ದೇಶದಿಂದ ವಿನ್ಯಾಸಗೊಳಿಸಲಾದ ವೈಯಕ್ತಿಕ ಶೈಕ್ಷಣಿಕ ಬೋಧನೆಯೇ ವಿಶೇಷ ಶಿಕ್ಷಣ. ಇದು ವಿಶೇಷ ಮಕ್ಕಳ ವೈಯಕ್ತಿಕ ವ್ಯತ್ಯಾಸಗಳನ್ನು ಗಮನಿಸಿಕೊಂಡು ಅವರ ಶೈಕ್ಷಣಿಕ ಅಗತ್ಯಗಳನ್ನು ಪೂರೈಕೆಯನ್ನು ಉದ್ದೇಶಿಸಿದುದು. ಸಾಮಾನ್ಯವಾಗಿ ಪ್ರಮಾಣೀಕೃತ ಅಥವಾ ಸಾಮಾನ್ಯ ಶಾಲೆಗಳಲ್ಲಿ ಒದಗಿಸಲಾಗದ ಕಲಿಕಾ ಅವಕಾಶಗಳನ್ನು ವಿಶೇಷ ಶಿಕ್ಷಣ ಪೂರೈಸುತ್ತದೆ. ವಿಶೇಷ ಶಿಕ್ಷಣ ಕಾರ್ಯಕ್ರಮಗಳು ಆಯಾ ವಿದ್ಯಾರ್ಥಿಗೆ ಸಮರ್ಪಕವಾಗುವಂತೆ ವಿನ್ಯಾಸಗೊಸಲಾಗಿರುತ್ತದೆ.  ಒಂದು ಆದರ್ಶ ಸನ್ನಿವೇಶದಲ್ಲಿ, ಈ ಪ್ರಕ್ರಿಯೆಯು ವೈಯಕ್ತಿಕ ದೃಷ್ಟಿಯಿಂದ ಯೋಜಿತವಾದ ಮತ್ತು ವ್ಯವಸ್ಥಿತವಾಗಿ ನಿರ್ವಹಿಸಲಾದ ಬೋಧನಾ ವಿಧಾನಗಳ, ಹೊಂದಾಣಿಕೆ ಮಾಡಿದ ಸಲಕರಣೆ ಹಾಗೂ ಸಾಮಗ್ರಿಗಳ, ವಿದ್ಯಾರ್ಥಿಗಳ ಅಗತ್ಯಗಳಿಗನುಗುಣವಾಗಿ ಒದಗಿಸಿದ ವ್ಯವಸ್ಥೆಗಳ ವಿನ್ಯಾಸವನ್ನು ಹೊಂದಿರುತ್ತದೆ. ಇವು ವಿಶೇಷ ವಿದ್ಯಾರ್ಥಿಗಳಿಗೆ ಉನ್ನತ ಮಟ್ಟದ ಸ್ವ ಪರಿಪೂರ್ಣತೆಗೂ ಮತ್ತು ಶಾಲೆ ಹಾಗೂ ಸಮುದಾಯದಲ್ಲಿ ಮುನ್ನಡೆಗೂ ಅನುವು ಮಾಡಿಕೊಡುತ್ತದೆ.  ಸಾಧಾರಣ ತರಗತಿಗಳಲ್ಲಿ ದೊರೆಯುವ ಒತ್ತಾಸೆಗಿಂತ ಹೆಚ್ಚಿನ ಮಟ್ಟದ ಒತ್ತಾಸೆಗೆ ಇಲ್ಲಿ ಅವಕಾಶವಿದೆ. ವಿಶೇಷ ಶಿಕ್ಷಣವು ವಾಕ್ ಚಿಕಿತ್ಸೆ ಹಾಗೂ  ದೈಹಿಕ ಚಿಕಿತ್ಸೆ ಹಾಗೂ ವೃತ್ತಿಸಂಬಂಧಿ ಕೌಶಲಗಳಲ್ಲಿ ತರಬೇತಿ ಇತ್ಯಾದಿ ಸಂಬಂಧಿತ ಬೋಧನಾ ಸೇವೆಗಳನ್ನೂ ಸಾರಿಗೆ ಸೇವೆಗಳನ್ನೂ ಒಳಗೊಳ್ಳುತ್ತದೆ. ದೃಶ್ಯ, ಶ್ರವಣ, ಮಾತು, ಆಲೋಚನೆ ಹಾಗೂ ಸಾಮಾಜೀಕರಣಕ್ಕೆ ಸಂಬಂಧಿಸಿದಂತೆ ಮಕ್ಕಳಲ್ಲಿರುವ ವಿಶೇಷ ಸಮಸ್ಯೆಗಳನ್ನೂ ಪ್ರತಿಭೆಗಳನ್ನೂ ಇದು ಅಧ್ಯಯನ ಮಾಡುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಸಾಮಾನ್ಯವಾಗಿ ಇತರ ಮಕ್ಕಳಿಗಿಂತ ಭಿನ್ನವಾಗಿರುವ ಮಕ್ಕಳನ್ನು ಕುರಿತ ಅಧ್ಯಯನವಿದು.

ವಿಭಿನ್ನ ಅಗತ್ಯಗಳನ್ನುಳ್ಳ ಮಕ್ಕಳಿಗೆ ವಿಶೇಷ ಶಿಕ್ಷಣವನ್ನು ನೀಡಲಾಗುತ್ತದೆ. ಅವುಗಳಲ್ಲಿ ಮುಖ್ಯವಾದ ವರ್ಗಗಳೆಂದರೆ, ಬುದ್ಧಿಮಾಂದ್ಯರು, ಕಲಿಕಾ ಅಸಾಮರ್ಥ್ಯವುಳ್ಳವರು, ಶ್ರವಣ ದೋಷವಿರುವವರು, ದೃಷ್ಟಿ ದೋಷವಿರುವವರು, ವಾಕ್ ದೋಷವಿರುವವರು, ಮೂಳೆಸಂಬಂಧಿ ದೋಷವುಳ್ಳವರು, ವಿಭಿನ್ನ ಮತ್ತು ತೀವ್ರತರ ದೋಷವಿರುವವರು. ವಿಶೇಷ ಮಕ್ಕಳು ಗರಿಷ್ಠಮಟ್ಟದಲ್ಲಿ ಸ್ವತಂತ್ರವಾಗಿ ಬದುಕುವಂತೆ ಮಾಡುವುದು ವಿಶೇಷ ಶಿಕ್ಷಣದ ಪ್ರಮುಖ ಗುರಿ. ಇದರ ವ್ಯಾಪ್ತಿ ವಿಶಾಲವಾದುದು. ಇದು ಬಾಲ್ಯದಲ್ಲಿ ಅಸಾಮರ್ಥ್ಯವನ್ನು ಪತ್ತೆಹಚ್ಚುವುದರಿಂದ ಹಿಡಿದು ಅವರನ್ನು ವೃತ್ತಿಯಲ್ಲಿ ಸ್ಥಿರಗೊಳಿಸುವವರೆಗೆ ವಿವಿಧ ರೀತಿಯ ಸೇವೆಗಳನ್ನೂ ತರಬೇತಿ ಕಾರ್ಯಕ್ರಮಗಳನ್ನೂ ಒದಗಿಸುತ್ತದೆ. ಸಾಮಾನ್ಯ ಶಾಲೆಗಳ ತರಗತಿಗಳಿಂದ ಸಂಪೂರ್ಣ ಪ್ರಯೋಜನ ಪಡೆಯಲಾಗದ ವಿದ್ಯಾರ್ಥಿಗಳಿಗೆ ಅಗತ್ಯವಾದ ಶೈಕ್ಷಣಿಕ ಅನುಭವಗಳನ್ನು ಒದಗಿಸುವ ಉದ್ದೇಶದಿಂದಲೇ ಇದು ಮೂಡಿಬಂದುದು. ಇದು ಮಕ್ಕಳ  ಅಗತ್ಯಗಳಿಗೆ ತಕ್ಕಂತ ಶಾಲಾ ಆಧಾರಿತ ಅಥವಾ ಗೃಹ ಆಧಾರಿತ ಕಾರ್ಯಕ್ರಮಗಳನ್ನು ಒಳಗೊಳ್ಳುತ್ತದೆ. ಈ ವಿಶೇಷ ಶಿಕ್ಷಣವೇ ಮುಂದೆ ಸಮನ್ವಯ ಶಿಕ್ಷಣಕ್ಕೆ ದಾರಿಮಾಡಿಕೊಟ್ಟಿತು. ಸಮನ್ವಯ ಶಿಕ್ಷಣವು ಮೂಡಿಬಂದ ಸನ್ನಿವೇಶವನ್ನು ಈಗ  ತಿಳಿಯೋಣ.

**ಅಭ್ಯಾಸ : I**

ವಿಶೇಷ ಅಗತ್ಯಗಳನ್ನುಳ್ಳ ಮಕ್ಕಳನ್ನು ನೀವು ಈಗಾಗಲೇ ನಿಮ್ಮ ವೈಯಕ್ತಿಕ ಬದುಕಿನಲ್ಲಿ ಅಥವಾ ವೃತ್ತಿ ಜೀವನದಲ್ಲಿ ಕಂಡಿರಬಹುದು. ಯಾವ ರೀತಿಯ ಅಗತ್ಯಗಳನ್ನುಳ್ಳ ಮಕ್ಕಳು ನಿಮ್ಮ ಗಮನಕ್ಕೆ ಬಂದಿದ್ದಾರೆ, ಅವರ ವರ್ತನೆಯಲ್ಲಿನ ವೈಲಕ್ಷಣ್ಯಗಳೇನು ಎಂಬುದನ್ನು ವಿವರಿಸಿ.

**ಸಮನ್ವಯ ಶಿಕ್ಷಣ :** ಅಸಾಮರ್ಥ್ಯವಿರುವ ಎಲ್ಲ ಮಕ್ಕಳನ್ನೂ ಶಿಕ್ಷಣದ ಪರಿಧಿಯೊಳಗೆ ತರುವ ಒಂದು ಪರ್ಯಾಯ ಉಪಕ್ರಮವಾಗಿ ಮೊದಲಿಗೆ ಸಮನ್ವಯ ಶಿಕ್ಷಣವನ್ನು ಕಲ್ಪಿಸಿಕೊಳ್ಳಲಾಯಿತು. ಪ್ರತ್ಯೇಕ ಶಿಕ್ಷಣದ ಉತ್ತಮಿಕೆಯ ಭಾಗವಾಗಿ ಇದು ಮೊದಲಾಗಿ ಇಪ್ಪತ್ತನೆಯ ಶತಮಾನದ ಎರಡನೇ ಭಾಗದಲ್ಲಿ ಹೆಚ್ಚು ಜನಪ್ರಿಯವಾಯಿತು. ಈ ವ್ಯವಸ್ಥೆಯು ಅಸಾಮರ್ಥ್ಯವಿರುವ ಮಕ್ಕಳನ್ನು ಸಾಮಾನ್ಯ ಶಾಲೆಯೊಳಗೆ ತಂದಿತು. ಸಮನ್ವಯ ಸನ್ನಿವೇಶದಲ್ಲಿ, ಅವರ ಸಾಮರ್ಥ್ಯಕ್ಕೆ ಅನುಗುಣವಾದ ಪಠ್ಯಕ್ರಮದೊಂದಿಗೆ ಶಿಕ್ಷಣ ನೀಡಲಾಗುತ್ತಿತ್ತು. ಪ್ರತ್ಯೇಕ ಸನ್ನಿವೇಶದಲ್ಲಿ ಅಸ್ತಿತ್ವದಲ್ಲಿದ್ದ ವಿಶೇಷ ಶಾಲೆಗಳನ್ನು ಸಂಪೂರ್ಣವಾಗಿ ಮುಚ್ಚಿಬಿಡುವುದು ಇದರ ಉದ್ದೇಶವಾಗಿರಲಿಲ್ಲ. ಬದಲಿಗೆ ವಿಶೇಷ ಸನ್ನಿವೇಶದ ಆವಶ್ಯಕತೆ ಎದುರಾದಾಗ ಬಳಸಿಕೊಳ್ಳಬಹುದಾದ ಪರ್ಯಾಯ ವ್ಯವಸ್ಥೆಯಾಗಿ ಅದನ್ನು ಒಪ್ಪಿಕೊಳ್ಳಲಾಗಿತ್ತು. ಸಮನ್ವಯ ಶಿಕ್ಷಣವು ಸಂಗೀತ, ಕಲೆ ಇತ್ಯಾದಿ ಇತರ ಕ್ಷೇತ್ರಗಳಲ್ಲಿನ ಸಾಮರ್ಥ್ಯ ಅಸಾಮರ್ಥ್ಯಗಳನ್ನೂ ಪರಿಗಣಿಸಿತು. ಸಮನ್ವಯವು ಅಂಗವಿಕಲರನ್ನು ಅಥವಾ ವಿಭಿನ್ನರಾದವರನ್ನು ಸಾಮಾನ್ಯ ಶಾಲೆಗಳಲ್ಲಿಯೇ ವಿಶೇಷ ತರಗತಿಗಳ ಸೇವೆಯೊಂದಿಗೆ ಸೇರಿಸಿಕೊಳ್ಳಬೇಕು ಎಂಬ ಅಂಶವನ್ನು ಒಪ್ಪಿಕೊಳ್ಳುತ್ತದೆ. ಸಾಮರ್ಥ್ಯವಿರುವವರ ಮತ್ತು ಇಲ್ಲದವರ ಜೊತೆಗೂಡಿದ ಶಿಕ್ಷಣ ಪ್ರಜಾಪ್ರಭುತ್ವದ ಶೈಕ್ಷಣಿಕ ವ್ಯವಸ್ಥೆಯಲ್ಲಿ ಬಹಳ ಮುಖ್ಯವಾದುದು ಎಂಬ ಅಭಿಪ್ರಾಯ ಈ ಸನ್ನಿವೇಶದಲ್ಲೇ ಪ್ರಚಲಿತವಾಗಲಾರಂಭಿಸಿತು.

ಇದರ ಜೊತೆಗೆ, ಅಪಾಯದ ಅಂಚಿನಲ್ಲಿರುವ ಮಕ್ಕಳು ಎಂದು ಗುರುತಿಸಲಾಗುವ ಮಕ್ಕಳಿಗೂ ಸಮನ್ವಯ ಶಿಕ್ಷಣ ಸಹಾಯ ಮಾಡುತ್ತದೆ. ಅವರು ಈಗ ಯಾವುದೇ ಅಸಾಮರ್ಥ್ಯವನ್ನು ಎದುರಿಸುತ್ತಿಲ್ಲದಿರಬಹುದು; ಆದರೆ ಅವರ ಬದುಕಿನ ಇಂದಿನ ಸನ್ನಿವೇಶ ಮುಂದೆ ಅಸಾಮರ್ಥ್ಯವನ್ನು ತರುವ ಸೂಚನೆಯನ್ನು ಕೊಡುತ್ತಿರಬಹುದು. ತಜ್ಞರು ನಾಲ್ಕು ರೀತಿಯ ಸಮನ್ವಯವನ್ನು ಸೂಚಿಸಿದ್ದಾರೆ:

**ಭೌತಿಕ ಸಮನ್ವಯ :** ಅಸಾಮರ್ಥ್ಯವಿರುವ ಮತ್ತು ಇಲ್ಲದಿರುವ ಮಕ್ಕಳ ಭೌತಿಕ ಅಂತರವನ್ನು ಕಡಿಮೆ ಮಾಡುವುದು.

**ಕ್ರಿಯಾಶೀಲ ಸಮನ್ವಯ :** ಎರಡು ಗುಂಪುಗಳು, ವಿವಿಧ ಸಲಕರಣೆಗಳು ಮತ್ತು ಸಂಪನ್ಮೂಲಗಳನ್ನು ಬಳಸುವಾಗ ಅವರ ನಡುವಿನ ಕ್ರಿಯಾಶೀಲತೆಯಲ್ಲಿನ ಅಂತರವನ್ನು ಕಡಿಮೆ ಮಾಡುವುದು.

**ಸಾಮಾಜಿಕ ಸಮನ್ವಯ :** ಎರಡು ಗುಂಪುಗಳ ನಡುವಿನ ಸಾಮಾಜಿಕ ಅಂತರವನ್ನು ಕಡಿಮೆ ಮಾಡುವುದು. ಸಂಬಂಧಗಳಲ್ಲಿನ ಅಂತರ ಜೊತೆಗೆ ಒಬ್ಬರಿಗೊಬ್ಬರು ಬೇರೆ ಎಂಬ ಮನೋವೈಜ್ಞಾನಿಕ ಭಾವನೆಯನ್ನು ದೂರಮಾಡುವುದು. ಸಮುದಾಯವು ಅಸಾಮರ್ಥ್ಯವಿರುವ ಮಕ್ಕಳನ್ನೂ ಅದರ ಭಾಗವಾಗಿ ಬೆಸೆದುಕೊಂಡಿದ್ದು ಅವರಿಗೂ ನಾವು ಈ ಸಮುದಾಯದ ಸ್ವಾಭಾವಿಕ ಭಾಗ ಎಂದು ಅನಿಸಿದ್ದಾದರೆ ಅಲ್ಲಿ ಸಾಮಾಜಿಕ ಸಮನ್ವಯತೆ ಇದೆ ಎಂದು ಅರ್ಥ.

**ಸಮಾಜಿಕ ಸಮನ್ವಯ :** ಇದು ವಯಸ್ಕರಿಗೆ ಸಂಬಂಧಿಸಿದುದು. ಸಮಾಜದಲ್ಲಿ ಇತರರಿಗಿರುವ ಸಂಪನ್ಮೂಲಗಳ ಅವಕಾಶ, ತಮ್ಮದೇ ಸನ್ನಿವೇಶವನ್ನು ಬದಲಿಸಿಕೊಳ್ಳಲು ಇರುವ ಅವಕಾಶಗಳು, ಉತ್ಪಾದಕ ಕಾರ್ಯ ನಿರ್ವಹಣೆಯ ಪಾತ್ರ, ಇತರರೊಡನೆ ಸಾಮಾಜಿಕ ಸಮುದಾಯದಲ್ಲಿ ಭಾಗಿಯಾಗುವ ಅವಕಾಶ ಇವು ಅಸಾಮರ್ಥ್ಯವಿರುವ ವಯಸ್ಕರಿಗೂ ಇದ್ದರೆ ಅದು ಸಮಾಜಿಕ ಸಮನ್ವಯವಿದೆ ಎಂಬುದನ್ನು ಸೂಚಿಸುತ್ತದೆ.

ವಿಶೇಷ ಶಿಕ್ಷಣದಲ್ಲಿನ ಇತ್ತೀಚಿನ ಪಲ್ಲಟ ಎಂದರೆ ಅಸಾಮರ್ಥ್ಯರಿಗೆ ಅವರ 'ಅಂತರ್ಗತತೆ'ಯನ್ನು ಕುರಿತ ಸಮನ್ವಯ ಶಿಕ್ಷಣ.

## ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

ಕೆಳಗೆ ಕೆಲವು ಹೇಳಿಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಕೆಲವು ಸರಿಯಾಗಿವೆ, ಕೆಲವು ತಪ್ಪಾಗಿವೆ. ಸರಿಯಾಗಿರುವುದನ್ನು 'ಸರಿ' ಎಂತಲೂ ತಪ್ಪಾಗಿರುವುದನ್ನು 'ತಪ್ಪು' ಎಂತಲೂ ಗುರುತಿಸಿ.'

1. ಎಲ್ಲ ವರ್ಗಗಳ ಮಕ್ಕಳಿಗೂ ವಿಶೇಷ ಶಿಕ್ಷಣವನ್ನು ನೀಡಲಾಗುತ್ತದೆ.
2. ವಿಶೇಷ ಮಕ್ಕಳು ಗರಿಷ್ಠಮಟ್ಟದಲ್ಲಿ ಸ್ವತಂತ್ರವಾಗಿ ಬದುಕುವಂತೆ ಮಾಡುವುದು ವಿಶೇಷ ಶಿಕ್ಷಣದ ಪ್ರಮುಖ ಗುರಿ.
3. ವಿಶೇಷ ಶಿಕ್ಷಣದ ಉತ್ತಮಿಕೆಯ ಭಾಗವಾಗಿ ಪ್ರತ್ಯೇಕ ಶಿಕ್ಷಣ ಮೂಡಿಬಂದಿತು.
4. ಸಮನ್ವಯ ಶಿಕ್ಷಣವು ಅಪಾಯದ ಅಂಚಿನಲ್ಲಿರುವ ಮಕ್ಕಳಿಗೆ ಸಹಾಯಮಾಡುತ್ತದೆ.
5. ಸಮಾಜಿಕ ಸಮನ್ವಯ ಮಕ್ಕಳನ್ನು ಮತ್ತು ವಯಸ್ಕರನ್ನು ಒಳಗೊಳ್ಳುತ್ತದೆ.

## 1.2.3.3 ಸಮನ್ವಯ ಶಿಕ್ಷಣದಿಂದ ಅಂತರ್ಗತ ಶಿಕ್ಷಣದ ಕಡೆಗೆ :

ಅಂತರ್ಗತ ಶಿಕ್ಷಣವನ್ನು ಕುರಿತು ನೀವು ಈಗಾಗಲೇ ತಿಳಿದಿದ್ದೀರಿ. ಆದರೆ ವಿಶೇಷ ಶಿಕ್ಷಣ ಮತ್ತು ಸಮನ್ವಯ ಶಿಕ್ಷಣಗಳೆರಡರ ಜೊತೆಗೆ ಹೇಗೆ ಅಂತರ್ಗತತೆಯ ಅಂಶ ಒಡಮೂಡಿತು ಎಂಬುದಷ್ಟೇ ನೀವು ಗಮನಿಸಬೇಕಾದ ವಿಷಯ.

ಅಂತರ್ಗತ ಶಿಕ್ಷಣ ಎಂಬುದು ಒಂದು ಪದಗುಚ್ಛ ಮಾತ್ರವಲ್ಲ; ಅದಕ್ಕಿಂತ ತುಂಬಾ ಮಿಗಿಲಾದುದು. ಇದು ಯಾವುದೇ ಭೇದಭಾವವಿಲ್ಲದೆ ಎಲ್ಲ ಮಕ್ಕಳನ್ನೂ ಸಾಮಾನ್ಯ ಶಾಲೆಗೆ ಸ್ವಾಗತಿಸುವ ವಿಶಿಷ್ಟ ಪರಿಕಲ್ಪನೆ. ಅಸಾಮರ್ಥವಿರುವ ಮಕ್ಕಳಿಗೆ ಸಂಪನ್ಮೂಲ ಕೊಠಡಿಗಳು ಹಾಗೂ ಬೆಂಬಲಿತ ಅಧ್ಯಾಪಕ ಸೇವೆಗಳನ್ನೋ ಒಂದೇ ಸ್ಥಳದಲ್ಲಿ ಕಲ್ಪಿಸಿಕೊಟ್ಟು ಅವರು ಇತರ ಮಕ್ಕಳೊಂದಿಗೆ ಕಲೆತು ಕಲಿಯುವಂತೆ ಮಾಡುವ ವಿಶೇಷ ವ್ಯವಸ್ಥೆ ಇದು. ಸಂಸ್ಥೆ, ಪಠ್ಯಕ್ರಮ, ಅಧ್ಯಾಪಕರು, ಬೋಧನೆ ಮತ್ತು ಮೌಲ್ಯಮಾಪನ ವಿಧಾನಗಳು ಎಲ್ಲವನ್ನೂ ಒಳಗೊಂಡಂತೆ ಸಾಮಾನ್ಯ ಶಾಲೆಗಳಲ್ಲಿ ಅಸಾಮಾನ್ಯ ಮಕ್ಕಳಿಗಾಗಿ ಹೊಂದಾಣಿಕೆ ಮಾಡಿದ ವ್ಯವಸ್ಥೆಯನ್ನು

ಇದು ಸೂಚಿಸುತ್ತದೆ. ಅಸಾಮರ್ಥ್ಯವಿರುವ ಮಕ್ಕಳನ್ನು ಮೂಲವಾಹಿನಿಗೆ ತಂದು ಎಲ್ಲರಿಗೂ ಶಿಕ್ಷಣ ಒದಗುವಂತೆ ಮಾಡುವ ಉದ್ದೇಶವನ್ನು ನೆರವೇರಿಸುವುದು ಇದರ ಗುರಿ.

ಅಂತರ್ಗತತೆಯ ಪರಿಕಲ್ಪನೆಯ ಹಿಂದೆ ವಿಶೇಷವಾದ ತಾತ್ವಿಕತೆ ಅಡಗಿದೆ. ಅಂತರ್ಗತತೆ ಎಂದರೆ ಯಾವುದೇ ರೀತಿಯ ವ್ಯತ್ಯಾಸಗಳ ಪರಿಗಣನೆಯಿಲ್ಲದೆ ಎಲ್ಲ ಮಕ್ಕಳಿಗೂ ವಿಕಾಸಹೊಂದಲು ಮುಕ್ತ ಅವಕಾಶ ಕಲ್ಪಿಸುವುದು. ಅಂತರ್ಗತತೆ ಅಥವಾ ಅಂತರ್ಗತ ಶಿಕ್ಷಣವು ಮಕ್ಕಳು ಮೂಲವಾಹಿನಿಯಲ್ಲಿರುವ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಹೊಂದಿಕೊಳ್ಳಬಲ್ಲರೇ ಎಂಬುದನ್ನು ಪರಿಗಣಿಸುವುದಿಲ್ಲ, ಬದಲಾಗಿ ಶಾಲೆಗಳು ಮತ್ತು ಅಧ್ಯಾಪಕರು ಎಲ್ಲ ಮಕ್ಕಳ ವೈಯಕ್ತಿಕ ಅಗತ್ಯಗಳಿಗೆ ಅರ್ಥಪೂರ್ಣ ಹೊಂದಾಣಿಕೆಯನ್ನು ಮಾಡಿಕೊಳ್ಳಲು ಸಾಧ್ಯವೇ ಎಂಬುದನ್ನು ಪರಿಗಣಿಸುತ್ತದೆ. ಅಸಾಮರ್ಥ್ಯವಿರುವ ಮತ್ತು ಇಲ್ಲದಿರುವ ಮಕ್ಕಳು ಕೂಡಿ ಕಲಿಯುವ ಸಮನ್ವಯ ಸಮೂಹಕ್ಕೆ ಸಮಾನ ಅವಕಾಶಗಳನ್ನು ಕೊಡುವುದೇ ಅಂತರ್ಗತ ಶಿಕ್ಷಣದ ತಾತ್ವಿಕತೆ.

ಸಮನ್ವಯತೆ ಮತ್ತು ಅಂತರ್ಗತತೆಗಳಿಗಿರುವ ಪ್ರಮುಖ ವ್ಯತ್ಯಾಸವಿಷ್ಟೇ. ಸಮನ್ವಯ ಶಿಕ್ಷಣವು ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಶಾಲೆಗಳಿಗೆ ಸೇರಿಸಿಕೊಳ್ಳುವ ಪರಿಪಾಠವಿದ್ದರೆ, ಅಂತರ್ಗತತೆ ಅದಕ್ಕೆ ಹೆಚ್ಚಿನದಾದ ಅರ್ಥವ್ಯಾಪ್ತಿಯನ್ನು ಹೊಂದಿರುತ್ತದೆ. ಇದು ಅಸಾಮರ್ಥ್ಯವಿರುವ ಮಕ್ಕಳನ್ನು ಮಾತ್ರ ಶಾಲಾವ್ಯಾಪ್ತಿಯಲ್ಲಿ ಒಳಪಡಿಸಿಕೊಳ್ಳುವುದಲ್ಲದೆ ಕಲಿಕೆಗೆ ಅಡ್ಡಿಯನ್ನನುಭವಿಸುವ ಎಲ್ಲ ಮಕ್ಕಳನ್ನೂ ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ.

**ವಿಶೇಷ ಶಿಕ್ಷಣ :** ಸಾಮಾನ್ಯ ಮಕ್ಕಳೇ, ನಾನು ನಿಮಗಾಗಿ ಅಲ್ಲ; ಇಲ್ಲಿ ಬರುವುದು ಬೇಡ.
**ಸಮನ್ವಯ ಶಿಕ್ಷಣ :** ಅಸಾಮರ್ಥ್ಯವಿರುವ ಮಕ್ಕಳೇ, ನನ್ನಲ್ಲಿಗೆ ಬನ್ನಿ; ನೀವು ಬದಲಾಗುವಿರಿ; ನಾನು ತಟಸ್ಥ.
**ಅಂತರ್ಗತ ಶಿಕ್ಷಣ :** ಮಕ್ಕಳೇ, ನಿಮಗೆಲ್ಲರಿಗೂ ಸ್ವಾಗತ. ನಿಮಗಾಗಿ ನಾನು ಬದಲಾಗುತ್ತೇನೆ.

## ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3

1. ಕೆಳಗೆ ವಿಶೇಷ ಶಿಕ್ಷಣ, ಸಮನ್ವಯ ಶಿಕ್ಷಣ ಮತ್ತು ಅಂತರ್ಗತ ಶಿಕ್ಷಣ ಇವುಗಳಿಗೆ ಸಂಬಂಧಿಸಿದ ನಿಹಿತಾರ್ಥಗಳನ್ನು ಕೊಡಲಾಗಿದೆ. ಅವುಗಳನ್ನು ಕ್ರಮವಾಗಿ 'ವಿ.ಶಿ', 'ಸ.ಶಿ' ಮತ್ತು 'ಅಂ.ಶಿ' ಎಂಬ ಅಕ್ಷರಗಳಿಂದ ಗುರುತಿಸಿ.
2. ಸಮರ್ಪಕ ಸೇವೆಗಳಿಗೆ ಸೂಚಿಸಲು ಸಹಕಾರಿಯಾಗುವಂತೆ ಅವರ ಅಸಾಮರ್ಥ್ಯದ ವಿಧಗಳನ್ನು ಗುರುತಿಸಿಕೊಳ್ಳಿ.
3. ವಿವಿಧ ಅಸಾಮರ್ಥ್ಯತೆಯ ಮಕ್ಕಳ ಅಗತ್ಯಗಳಿಗೆ ತಕ್ಕಂತೆ ತಜ್ಞ ಸಿಬ್ಬಂದಿಗಳನ್ನು ಇರಿಸಿಕೊಳ್ಳಿ.
4. ಅಸಾಮರ್ಥ್ಯವಿರುವ ಮಕ್ಕಳಿಗಾಗಿಯೇ ವಿಶೇಷ ಶೈಕ್ಷಣಿಕ ಒಳಹರಿವುಗಳನ್ನು ಯೋಜಿಸಿಕೊಳ್ಳಿ.
5. ಸಾಮಾನ್ಯ ಮಕ್ಕಳು ಮತ್ತು ಅಸಾಮರ್ಥ್ಯವಿರುವ ಮಕ್ಕಳಿಬ್ಬರಿಗೂ ಸಹಾಯವಾಗುವ ಶೈಕ್ಷಣಿಕ ಒಳಹರಿವುಗಳನ್ನು ಯೋಜಿಸಿಕೊಳ್ಳಿ.
6. ಸಾಮಾನ್ಯ ಶಾಲೆಯಲ್ಲಿಯೇ ಅಸಾಮರ್ಥ್ಯವಿರುವ ಮಕ್ಕಳಿಗಾಗಿ ವಿಶೇಷ ವ್ಯವಸ್ಥೆಯನ್ನು ಮಾಡಿಕೊಳ್ಳಿ.
7. ವಿವಿಧ ರೀತಿಯ ಅಸಾಮರ್ಥ್ಯವಿರುವವರಿಗೆ ಶಿಕ್ಷಣ ಕೊಡುವುದರಲ್ಲಿ ತಜ್ಞರಾದವರನ್ನು ಶಾಲೆಯಲ್ಲಿರಿಸಿಕೊಳ್ಳಿ.
8. ಮಗುವಿಗೆ ಸಹಾಯವಾಗುವುದಾದರೆ ಅವರ ಹೆತ್ತವರು ಅವರ ಜೊತೆಯಲ್ಲಿ ಶಾಲೆಯಲ್ಲಿ ಕುಳಿತುಕೊಳ್ಳಲು ಅನುಮತಿ ನೀಡಿರಿ.

9. ವಿವಿಧ ರೀತಿಯ ಅಸಾಮರ್ಥ್ಯವುಳ್ಳ ಮಕ್ಕಳಿಗೆ ಅಗತ್ಯವಾದ ವಿಶೇಷ ಶಿಕ್ಷಣ ಸಾಮಗ್ರಿಗಳನ್ನು ತಯಾರಿಸಿ.
10. ಅಸಾಮರ್ಥ್ಯವಿಲ್ಲದಿರುವ ಮಕ್ಕಳ ಜೊತೆಯಲ್ಲಿ ಅಸಾಮರ್ಥ್ಯವಿರುವ ಮಕ್ಕಳೂ ಇಡೀ ದಿನ ತರಗತಿಯಲ್ಲಿರುವಂತೆ ಅವಕಾಶ ಮಾಡಿಕೊಳ್ಳಿ.
11. ಗರಿಷ್ಠ ಮಟ್ಟದಲ್ಲಿ ಎಲ್ಲ ಮಕ್ಕಳೂ ಶಾಲಾ ಸನ್ನಿವೇಶದಲ್ಲಿ ಸ್ವತಂತ್ರರಾಗಿರುವಂತೆ ನೋಡಿಕೊಳ್ಳಿ.
12. ಅಸಾಮರ್ಥ್ಯವಿರುವ ಮಕ್ಕಳು ಹಾಗೂ ಇತರ ಮಕ್ಕಳ ಕ್ರಿಯಾಶೀಲತೆಯಲ್ಲಿ ಯಾವುದೇ ವ್ಯತ್ಯಾಸವಿಲ್ಲದಂತೆ ಪ್ರಯತ್ನ ಮಾಡಿರಿ.

## 1.2.3.4 ಅಂತರ್ಗತ ಶಿಕ್ಷಣ : ಸವಾಲುಗಳು ಮತ್ತು ಮಾರ್ಗೋಪಾಯಗಳು

ಅಂತರ್ಗತ ಶಿಕ್ಷಣದ ಹಾದಿಯಲ್ಲಿ ಅನೇಕ ಸವಾಲುಗಳಿವೆ. ಅದನ್ನು ಎದುರಿಸಲು ಅನೇಕ ಮಾರ್ಗೋಪಾಯಗಳನ್ನು ಅನ್ವಯಿಸಿಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಅಂತರ್ಗತ ಶಿಕ್ಷಣದ ಸವಾಲುಗಳನ್ನು ಮತ್ತು ಮಾರ್ಗೋಪಾಯಗಳನ್ನು ತಿಳಿಯೋಣ.

**ಅಂತರ್ಗತ ಶಿಕ್ಷಣದ ಸವಾಲುಗಳು :**

**ಅಸಾಮರ್ಥ್ಯದೊಡಗೂಡಿರುವ ಬಡತನದ ವಿರುದ್ಧ ಹೋರಾಟ :**

ಜಾಗತಿಕ ಜನಸಂಖ್ಯೆಗೆ ಸಂಬಂಧಿಸಿದಂತೆ ಭಾರತ ಎರಡನೇ ಸ್ಥಾನದಲ್ಲಿದೆ. ಇದು ಜಾಗತಿಕ ಜನಸಂಖ್ಯೆಯ ಸುಮಾರು ಶೇ 17ರಷ್ಟನ್ನು ಹೊಂದಿದೆ. ಶಾಲೆಯಿಂದ ಹೊರಗಿರುವ ಮಕ್ಕಳಿಗೆ ಸಂಬಂಧಿಸಿದಂತೆ, ಜಗತ್ತಿನ ಒಟ್ಟು ಪ್ರಮಾಣದ ಶೇ 20ರಷ್ಟು ಮಕ್ಕಳು ನಮ್ಮ ದೇಶ ಒಂದರಲ್ಲೇ ಇದ್ದಾರೆ. ಇತ್ತೀಚಿನ ದಶಕಗಳಲ್ಲಿನ ಪ್ರಗತಿಯಿಂದಾಚೆಗೂ ನಮ್ಮಲ್ಲಿ 260 ಮಿಲಿಯ ಜನರು ಬಡತನದಲ್ಲಿದ್ದಾರೆ. ಅಸಾಮರ್ಥ್ಯವಿರುವ ಮಕ್ಕಳಲ್ಲಿ ದೊಡ್ಡ ಪಾಲು ಬಡತನದ ರೇಖೆಯಿಂದ ಕೆಳಗಿರುವ ಕುಟುಂಬಗಳಲ್ಲಿ ವಾಸಿಸುತ್ತಾರೆ. ತಜ್ಞರ ಪ್ರಕಾರ, ಅಸಾಮರ್ಥ್ಯತೆ ಬಡತನವನ್ನುಂಟುಮಾಡುವಂತೆ, ಬಡತನವೂ ಅಸಾಮರ್ಥ್ಯತೆಯನ್ನುಂಟುಮಾಡಬಹುದು. ಕೆಲವರ ಪ್ರಕಾರ ಇದು ಸಮುದಾಯದ ಚಟುವಟಿಕೆಗಳಲ್ಲಿ ಭಾಗವಹಿಸಲು ಅಡ್ಡಿತರುವ ಲಕ್ಷಣ. ಇದು ಶಾಲಾ ಪ್ರವೇಶಕ್ಕೂ ಅಡ್ಡಿಯುಂಟುಮಾಡುತ್ತದೆ. ಈಚೆಗೆ, ಭಾರತ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಖಾತೆಯು ಬಡತನ ನಿರ್ಮೂಲನ ಕಾರ್ಯಕ್ರಮಗಳಲ್ಲಿ ಶೇ 3ರಷ್ಟನ್ನು ಅಸಾಮರ್ಥ್ಯವಿರುವ ಮಕ್ಕಳ ಕುಟುಂಬಕ್ಕೆ ಮೀಸಲಿಟ್ಟಿದೆ. ಏನೇ ಆದರೂ ಅಸಾಮರ್ಥ್ಯವಿರುವ ಮಕ್ಕಳನ್ನು ಶಾಲೆಗೆ ಕಳುಹಿಸುವುದಕ್ಕೆ ಸಂಬಂಧಪಟ್ಟ ಖರ್ಚನ್ನು ಭರಿಸುವಂತೆ ಮಾಡುವುದು ಒಂದು ಸವಾಲಾಗಿಯೇ ಉಳಿದಿದೆ.

**ಆಳವಾಗಿ ಬೇರೂರಿರುವ ಮನೋಭಾವಗಳನ್ನು ಬದಲಿಸುವುದು :** ಅಸಾಮರ್ಥ್ಯವಿರುವ ಮಕ್ಕಳನ್ನು ಸಾಮಾಜಿಕವಾಗಿ ಒಟ್ಟುಗೂಡಿಸಲು ಅಡ್ಡಿಯಾಗುವ ಪ್ರಮುಖ ಅಂಶ ಎಂದರೆ, ಅವರನ್ನು ಕುರಿತಂತೆ ಸಮಾಜದ ಸದಸ್ಯರಲ್ಲಿರುವ ಮನೋಭಾವ. ಅಸಾಮರ್ಥ್ಯತೆ ಹೆಚ್ಚು ಕಾಣುವಂತಾದರೆ ಅದು ಅಥವಾ ಅದರ ಪ್ರಭಾವ ಇತರರ ಮೇಲಾಗುತ್ತದೆ ಎಂದುಕೊಳ್ಳುವ ಭಯ ಹೆಚ್ಚು. ಇದರಿಂದಾಗಿ ಅಸಾಮರ್ಥ್ಯವಿರುವವರನ್ನು ದೂರವಿಡುವ ಸಂಭವ ಇದೆ. ಇದಕ್ಕೆ ಧಾರ್ಮಿಕವಾಗಿ ಹುಟ್ಟುಹಾಕುವ ಮನೋಭಾವಗಳ ಕೊಡುಗೆಯೂ ಇಲ್ಲದಿಲ್ಲ. ಉದಾಹರಣೆಗೆ ಭಾರತದ ಹಿಂದೂ ಸಮಾಜದಲ್ಲಿ 'ಕರ್ಮ'ದ ಕಲ್ಪನೆ ಇದೆ. ವ್ಯಕ್ತಿಗಳು ಹಿಂದಿನ ಜನ್ಮದಲ್ಲಿ ಮಾಡಿದ ಪಾಪಕರ್ಮಗಳ ಫಲವಾಗಿ ಈ ರೀತಿಯ ಅಸಾಮರ್ಥ್ಯಗಳುಂಟಾಗುತ್ತವೆ. ಅದನ್ನು ಅನುಭವಿಸಿಯೇ ತೀರಬೇಕು ಎಂದು ನಂಬುವ

ಜನರು ನಮ್ಮಲ್ಲಿದ್ದಾರೆ. 'ಏನು ಮಾಡುವುದು, ಅವರವರು ಮಾಡಿದ ಕರ್ಮ, ಅವರೇ ಅನುಭವಿಸಬೇಕು' ಎಂದು ಹೇಳುವವರೂ ಇದ್ದಾರೆ. ಹಾಗಾಗಿ ಅದನ್ನು ಹೆತ್ತವರು ಒಪ್ಪಿಕೊಂಡುಬಿಡುವ, ಅದರೊಂದಿಗೆ ಬದುಕಬೇಕು ಎಂದು ಸಮಜಾಯಿಶಿ ಮಾಡಿಕೊಳ್ಳುವ ಅಪಾಯವೂ ಇದೆ. ಇದನ್ನು ಹೋಗಲಾಡಿಸಿಕೊಳ್ಳಲು ಮಾಡುವ ಪ್ರಯತ್ನ ಅಲ್ಲಾಹನಿಗೆ ತೋರುವ ಅಗೌರವ' ಎಂದುಕೊಳ್ಳುವವರೂ ಇದ್ದಾರೆ. ಭಾರತದಲ್ಲಿ ಅಸಾಮರ್ಥ್ಯವನ್ನು 'ಸಹಜ' ಎಂದು ಒಪ್ಪಿಕೊಳ್ಳುವ ಸನ್ನಿವೇಶ ಇಲ್ಲವಾಗಿದೆ. ಅಂತಹ ಕುಟುಂಬಗಳಲ್ಲಿ ಒಂದು ರೀತಿಯ ಭಯ, ಅಪರಾಧಿ ಮನೋಭಾವ ಮನೆಮಾಡಿಕೊಂಡಿದೆ. ಇದರ ವಿರುದ್ಧ ಇಂದು ಎಚ್ಚೆತ್ತುಕೊಳ್ಳಬೇಕಾಗಿದೆ. ಅಸಾಮರ್ಥ್ಯ ಒಂದು ಸ್ವಾಭಾವಿಕ ಸನ್ನಿವೇಶ ಎಂಬುದನ್ನು ಮನಗಾಣಿಸಬೇಕಾಗಿದೆ.

**ಮಾಹಿತಿ ಪ್ರಸಾರ ಮತ್ತು ಸಾರ್ವಜನಿಕ ಶಿಕ್ಷಣ :** ಅಸಾಮರ್ಥ್ಯವುಳ್ಳವರನ್ನು ಕುರಿತಂತೆ ಈಚೆಗೆ ಸರ್ಕಾರ ಹೊರಡಿಸಿರುವ ಆದೇಶಗಳು ಹೆತ್ತವರು ಮತ್ತು ಶಾಲಾ ಸಿಬ್ಬಂದಿಗಳನ್ನೊಳಗೊಂಡಂತೆ ಜನರಿಗೆ ತಿಳಿದಿಲ್ಲ. ಸಾಮಾನ್ಯ ಶಾಲೆಗಳಲ್ಲಿ ಅಸಾಮರ್ಥ್ಯವಿರುವ ಮಕ್ಕಳಿಗೆ ಸಿಗುವ ಆರ್ಥಿಕ ಸಹಾಯವನ್ನು ಕುರಿತಂತೆಯೂ ಬಹಳಷ್ಟು ಶಾಲಾ ಸಿಬ್ಬಂದಿಗಳಿಗೆ ಅರಿವು ಇಲ್ಲ. ಈ ರೀತಿಯ ಅರಿವು ಉಳ್ಳ ಸಿಬ್ಬಂದಿಗಳಿಗೆ ಅಸಾಮರ್ಥ್ಯವುಳ್ಳವರನ್ನು ಕುರಿತ ಶಿಕ್ಷಣದ ಕುರಿತು ಧನಾತ್ಮಕ ಮನೋಭಾವ ಇದೆ ಎಂಬುದಕ್ಕೆ ಸಂಶೋಧನಾ ಆಧಾರಗಳಿವೆ. ಹೆತ್ತವರು ಅಂತರ್ಗತ ಶಿಕ್ಷಣದ ಕುರಿತ ಅರಿವು ಉಳ್ಳವರಾದರೆ ಮತ್ತು ಒತ್ತಾಸೆ ನೀಡಿದರೆ ಅದು ಶಾಲಾ ಸಿಬ್ಬಂದಿಗಳ ಮೇಲೆ ಧನಾತ್ಮಕ ಪರಿಣಾಮವನ್ನು ಬೀರುತ್ತದೆ ಎಂಬುದಕ್ಕೂ ಆಧಾರಗಳಿವೆ. ಹೀಗಾಗಿ, ಹೆತ್ತವರಿಗೆ ಮತ್ತು ಶಾಲಾ ಸಿಬ್ಬಂದಿ ವರ್ಗದವರಿಗೆ ಅಂತರ್ಗತ ಶಿಕ್ಷಣದ ಅರಿವು ಇಲ್ಲದಿದ್ದರೆ ಈ ಕುರಿತು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಪ್ರಯತ್ನಗಳೆಲ್ಲವೂ ವ್ಯರ್ಥವಾಗುತ್ತದೆ. ಈ ಕುರಿತ ಜಾಗೃತಿ ಮೂಡಿಸುವಲ್ಲಿ ಪ್ರಯತ್ನಗಳಾಗಬೇಕಾಗಿದೆ.

ಅಸಾಮರ್ಥ್ಯವುಳ್ಳವರ ಅಗತ್ಯಗಳ ಪೂರೈಕೆಗೆ ಒಂದು ರಾಷ್ಟ್ರೀಯ ಸಂಪನ್ಮೂಲ ಕೇಂದ್ರದ ಅಗತ್ಯವಿದೆ. ಅಂತಹ ಒಂದು ಕೇಂದ್ರವು ಅಸಾಮರ್ಥ್ಯ ಮತ್ತು ಅಸಾಮರ್ಥ್ಯವುಳ್ಳವರ ಕುರಿತ ಅರಿವು ಮೂಡಿಸಬಹುದು. ಈ ಕೇಂದ್ರವೂ ದೂರದರ್ಶನ, ಅಂತರ್ಜಾಲಗಳ ಸಹಾಯದಿಂದ ಅಂತಹ ಅರಿವನ್ನು ಉಂಟುಮಾಡಲು ಸಾಧ್ಯವಿದೆ. ಇದಲ್ಲದೆ ಎಲ್ಲ ಸಮೂಹ ಮಾಧ್ಯಮ ಕಾರ್ಯಕ್ರಮಗಳ ವಿಮರ್ಶೆಯನ್ನೂ ಈ ಕೇಂದ್ರ ಮಾಡುವುದರ ಮೂಲಕ ಅಸಾಮರ್ಥ್ಯವನ್ನು ಕುರಿತು ಮಾಧ್ಯಮಗಳು ಋಣಾತ್ಮಕವಾಗಿ ಬಿಂಬಿಸದಂತೆ ಕ್ರಮ ಕೈಗೊಳ್ಳಬಹುದು.

**ಫಲಾನುಭವಿಗಳಿಗೆ ಸಮರ್ಪಕ ಮಟ್ಟದ ತರಬೇತಿ ನೀಡುವುದು :** ಭಾರತದ ಗರಿಷ್ಠ ಸಂಖ್ಯೆಯ ಸಾಮಾನ್ಯ ಶಾಲೆಯ ಸಿಬ್ಬಂದಿಗಳಿಗೆ ಅಸಾಮರ್ಥ್ಯವಿರುವ ಮಕ್ಕಳ ಶಿಕ್ಷಣದ ಕುರಿತಾದ ತರಬೇತಿ ಇಲ್ಲ. ಭಾರತದ ಬಹಳಷ್ಟು ಸೇವಾಪೂರ್ವ ಶಿಕ್ಷಣ ಕಾರ್ಯಕ್ರಮಗಳಲ್ಲಿ ಈ ಕುರಿತ ತರಬೇತಿಯು ಪಠ್ಯಕ್ರಮದ ಭಾಗವಾಗಿಲ್ಲ. ಇರುವ ಕಡೆಗಳಲ್ಲಿ ಸಮರ್ಪಕವಾಗಿಲ್ಲ.

ಭಾರತದ ವಿವಿಧ ಸಂಸ್ಥೆಗಳಲ್ಲಿನ ವಿಶೇಷ ಶಿಕ್ಷಣ ಕಾರ್ಯಕ್ರಮಗಳ ಪಠ್ಯಕ್ರಮ, ಪ್ರಕ್ರಿಯೆ ಮತ್ತು ಪರೀಕ್ಷೆಗಳಲ್ಲಿ ಬಹಳಷ್ಟು ವ್ಯತ್ಯಾಸಗಳಿರುವುದೂ ಗಮನಕ್ಕೆ ಬಂದಿದೆ. ಆದರೆ, ಭಾರತದ ಪುನರ್ವಸತಿ ಕೌನ್ಸಿಲ್ ಅಸ್ತಿತ್ವದಲ್ಲಿದ್ದು ಅದು ಕಾಲಕಾಲಕ್ಕೆ ಪ್ರತಿ ಕಾರ್ಯಕ್ರಮವೂ ಕನಿಷ್ಠ ಗುಣಮಟ್ಟವನ್ನು ಪಾಲಿಸುತ್ತಿದೆ ಎಂಬುದನ್ನು ಮೌಲ್ಯಮಾಪನ ಮಾಡುವ ಸನ್ನಿವೇಶವಿರುವುದರಿಂದ ಈ ಪರಿಸ್ಥಿತಿಗಳಲ್ಲಿ ಸುಧಾರಣೆಗಳಾಗುವ ಸಾಧ್ಯತೆಗಳಿವೆ. ತರಬೇತಿ ಪಡೆದ ವಿಶೇಷ ಶಿಕ್ಷಣ ಸಿಬ್ಬಂದಿಯ ಸಂಖ್ಯೆಯೂ ಕಡಿಮೆ ಪ್ರಮಾಣದಲ್ಲಿದೆ. ಅಗತ್ಯವಿರುವ ಮಕ್ಕಳ ಸಂಖ್ಯೆಗೆ ಹೋಲಿಸಿದರೆ ತರಬೇತಿ ಪಡೆದಿರುವ ಅಧ್ಯಾಪಕರ ಸಂಖ್ಯೆ ಅತಿ ಕಡಿಮೆ ಮಟ್ಟದಲ್ಲಿದೆ ಎಂಬುದನ್ನು ಈ ಸಂಸ್ಥೆಯೇ ಗುರುತಿಸಿದೆ. ಹಾಗಾಗಿ, ಎಲ್ಲ ಮಕ್ಕಳಿಗೆ ಸೂಕ್ತ ಅಧ್ಯಾಪಕರು ಸಿಗುವಂತೆ ವಿಶೇಷ ಶಿಕ್ಷಣಕ್ಕೆ ಸಂಬಂಧಿಸಿದ ತರಬೇತಿ ಕಾರ್ಯಕ್ರಮವನ್ನು

ಪುನರ್ಪರಿಶೀಲಿಸಬೇಕಾಗಿದೆ. ಈ ವಿಶೇಷ ಶಿಕ್ಷಕರು ಸಾಮಾನ್ಯ ಶಾಲಾ ಸನ್ನಿವೇಶದಲ್ಲಿ ಅಸಾಮರ್ಥ್ಯವಿರುವ ಮಕ್ಕಳ ಅಗತ್ಯಗಳಿಗೆ ತಕ್ಕಂತೆ ಹೇಗೆ ಶಿಕ್ಷಣ ಕೊಡಬೇಕು ಎಂಬುದರ ಕುರಿತಂತೆ ಶಿಕ್ಷಕರಿಗೆ ತರಬೇತಿ ಕೊಡುವಲ್ಲಿ ಪ್ರಮುಖ ಸಂಪನ್ಮೂಲ ವ್ಯಕ್ತಿಗಳಾಗಿಯೂ ಕೊಡುಗೆ ನೀಡಬಲ್ಲವರಾಗಿರುತ್ತಾರೆ. ಇವರು ಸಾಮಾನ್ಯ ಶಿಕ್ಷಕರೊಂದಿಗೆ ಜಂಟಿಯಾಗಿ ಕೆಲಸಮಾಡುವ ಸಂಚಾರಿ ಶಿಕ್ಷಕರಾಗಿಯೂ ಕೆಲಸಮಾಡುತ್ತಾ, ಅಸಾಮರ್ಥ್ಯವಿರುವ ಮಕ್ಕಳ ಶಿಕ್ಷಣದ ಪ್ರಾಯೋಗಿಕ ವಿಷಯಗಳಲ್ಲಿ ಹೆಚ್ಚಿನ ಸಹಕಾರ ನೀಡಬಹುದಾಗಿದೆ.

**ಸಮರ್ಪಕ ಸಂಪನ್ಮೂಲಗಳಿಗೆ ಅವಕಾಶ :** ಭಾರತದಲ್ಲಿನ ಬಹಳಷ್ಟು ಶಾಲೆಗಳು ಕಳಪೆಯಾಗಿ ವಿನ್ಯಾಸಗೊಂಡಿದ್ದು, ಅಸಾಮರ್ಥ್ಯವಿರುವ ಮಕ್ಕಳ ವಿಶೇಷ ಅಗತ್ಯಗಳನ್ನು ಪೂರೈಸುವ ಸ್ಥಿತಿ ಇಲ್ಲವಾಗಿದೆ. ಅಸಾಮರ್ಥ್ಯವುಳ್ಳವರ ಸ್ನೇಹಿ ಸಾರಿಗೆ ಸೇವೆ ಮತ್ತು ಕಟ್ಟಡಗಳ ವ್ಯವಸ್ಥೆ ಇಲ್ಲದಿರುವುದೇ ಈ ಕ್ಷೇತ್ರದ ಪ್ರಮುಖ ಸಮಸ್ಯೆಯಾಗಿವೆ. ಶಾಲೆಗಳಲ್ಲಿ ಅಂತರ್ಗತ ಶಿಕ್ಷಣದ ಯಶಸ್ವಿ ಅಳವಡಿಕೆಗೆ ಅಗತ್ಯವಾದ ಈ ವ್ಯವಸ್ಥೆಗಳನ್ನೂ ಒಳಗೊಳ್ಳುವಂತೆ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹೆಚ್ಚಿನ ಸಂಪನ್ಮೂಲಗಳನ್ನು ಒದಗಿಸುವಲ್ಲಿ ಮುಂದಾಗಬೇಕಾಗಿದೆ.

ಇದೆಲ್ಲದರೆ ಜೊತೆಗೆ ಭಾರತಕ್ಕೆ ವಿಶಿಷ್ಟವಾದ ಕೆಲವು ಸಮಸ್ಯೆಗಳಿವೆ. ಭಾರತವು ಬಹುಭಾಷಿಕ, ಬಹುಸಂಸ್ಕೃತಿ, ಮತ್ತು ಬಹುಧರ್ಮೀಯ ರಾಷ್ಟ್ರ. ಇಲ್ಲಿಯ ಸಾಮಾಜಿಕ ಸ್ತರೀಕರಣವೂ ವಿಭಿನ್ನವಾದುದೇ. ಈ ಎಲ್ಲ ಸಮಸ್ಯೆಗಳನ್ನೂ ಎಚ್ಚರಿಕೆಯಿಂದ ಗಮನಿಸಿಕೊಳ್ಳಬೇಕಾಗಿದೆ. ಅಸಾಮರ್ಥ್ಯತೆಯ ಸಮಸ್ಯೆ ಒಂದೆಡೆಯಾದರೆ ಸ್ತರೀಕರಣದ ಸಮಸ್ಯೆ ಮತ್ತೊಂದು ಕಡೆ. ಹೀಗಾಗಿ ಸಾಮಾಜಿಕ ಅಂತರ್ಗತತೆಯನ್ನೂ ವಿಶೇಷವಾಗಿ ಗಮನಿಸಿಕೊಳ್ಳಬೇಕಾಗಿದೆ. ಮನಃ ಪರಿವರ್ತನೆಯಾಗಬೇಕಾಗಿದೆ. ಇದು ಅತಿ ಪ್ರಮುಖವಾದ ಸವಾಲಾಗಿದೆ.

**ಸವಾಲುಗಳನ್ನು ಎದುರಿಸಲು ಮಾರ್ಗೋಪಾಯಗಳು :**

- ಅಧ್ಯಾಪಕರ ತರಬೇತಿ
- ನವೀನ ಮಾದರಿಯ ತರಬೇತಿಯ ವಿನ್ಯಾಸ
- ವಿವಿಧ ಸಚಿವಾಲಯಗಳ ಸಹಯೋಗ
- ಅಂತರ್ಗತ ಶಿಕ್ಷಣದಲ್ಲಿ ಸರ್ಕಾರೇತರ ಸಂಸ್ಥೆಗಳ ಭಾಗವಹಿಕೆ
- ಪರ್ಯಾಯ ಪರೀಕ್ಷಾ ವ್ಯವಸ್ಥೆ
- ಶಾಲಾ–ವಿಶ್ವವಿದ್ಯಾನಿಲಯದ ಪಾಲುದಾರಿಕೆ

ಈ ಮಾರ್ಗೋಪಾಯಗಳನ್ನು ಕುರಿತ ವಿವರಗಳನ್ನೂ ಜೊತೆಗೆ ಇವು ಅಂತರ್ಗತ ಶಿಕ್ಷಣದಲ್ಲಿ ಹೇಗೆ ಸಹಕಾರಿಯಾಗುತ್ತವೆ ಎಂಬುದನ್ನೂ ಚರ್ಚಿಸೋಣ.

**ಅಧ್ಯಾಪಕರ ತರಬೇತಿ :** ಭಾರತದಲ್ಲಿ ಅಂತರ್ಗತ ಶಿಕ್ಷಣ ಸಾಧ್ಯವಾಗಬೇಕಾದರೆ ಅಧ್ಯಾಪಕರ ತರಬೇತಿ ಆದ್ಯತೆಯ ವಿಷಯವಾಗಬೇಕು. ಭಾರತದ ಶೈಕ್ಷಣಿಕ ಪ್ರಾಧಿಕಾರಗಳು ಒಂದು ಶಾಲೆಯಿಂದ ಅಥವಾ ಒಂದು ಶಾಲಾ ಗುಂಪಿನಿಂದ ಒಂದು ಅಧ್ಯಾಪಕರಂತೆ ಆಯ್ಕೆ ಮಾಡಿ ತರಬೇತಿ ಕೊಡುವ ನಿಯಮವನ್ನು ಹೊರಡಿಸಬಹುದು. ಈ ಅಧ್ಯಾಪಕರಿಗೆ ಅತ್ಯಂತ ಆಳವೂ ಪರಿಣಾಮಕಾರಿಯೂ ಆದ ತರಬೇತಿಯನ್ನೊದಗಿಸಿದರೆ, ಈ ಅಧ್ಯಾಪಕರು ತಮ್ಮ ಹಾಗೂ ತಮ್ಮ ಸುತ್ತಲಿನ ಶಾಲಾ ಅಧ್ಯಾಪಕರನ್ನು ಅಂತರ್ಗತ ಸನ್ನಿವೇಶದಲ್ಲಿ ಬೋಧಿಸಲು ಮಾರ್ಗದರ್ಶನ

ಮಾಡುವುದರೊಂದಿಗೆ ಅವರನ್ನೂ ಈ ಸನ್ನಿವೇಶಕ್ಕೆ ಸಬಲೀಕರಿಸಬಹುದು. ಇದಲ್ಲದೆ ಸೇವಾಂತರ್ಗತ ಶಿಕ್ಷಕರಿಗೆ ಈ ಕುರಿತಂತೆ ಅವರ ಕೌಶಲಗಳನ್ನು ಜ್ಞಾನವನ್ನು ನವೀಕರಿಸಿಕೊಳ್ಳಲು ನಿರಂತರ ತರಬೇತಿ ಕಾರ್ಯಕ್ರಮಗಳನ್ನು ಯೋಜಿಸಬೇಕು. ಸಾಮಾನ್ಯ ಶಾಲೆಗಳಲ್ಲಿನ ಶಿಕ್ಷಕರಿಗೆ ಅಂತರ್ಗತ ಶಿಕ್ಷಣದ ಅನ್ವಯಕ್ಕೆ ಸಂಬಂಧಿಸಿದ ತರಬೇತಿ ಅಗತ್ಯವಿದೆ ಎಂಬುದು ಸ್ಪಷ್ಟ. ಈ ಕಾರ್ಯಕ್ರಮಗಳಲ್ಲಿ ಒಳಪಡಿಸಿಕೊಳ್ಳಬೇಕಾದ ವಿಷಯಗಳೇನು ಎಂಬುದನ್ನು ಗುರುತಿಸುವುದರ ಪ್ರಶ್ನೆ ಈ ಸಂದರ್ಭದಲ್ಲಿ ಏಳುತ್ತದೆ. ಭಾರತದ ಬೃಹತ್ ಪ್ರಮಾಣದ ವಿಭಿನ್ನತೆಯನ್ನೊಳಗೊಂಡಂತೆ ಈ ಕುರಿತ ಸಂಶೋಧನೆ ಅತಿ ತುರ್ತಾದ ವಿಷಯ. ಈ ಸಂದರ್ಭದಲ್ಲಿ ವಿಶೇಷ ಶಿಕ್ಷಣ, ಸಾಮಾನ್ಯ ಶಿಕ್ಷಣ, ಅಂತರ್ಗತ ಶಿಕ್ಷಣ ಎಲ್ಲ ಪರಿಕಲ್ಪನೆಗಳ ಹಿನ್ನೆಲೆಯಲ್ಲಿ, ಸಮಾಜದ ಸದಸ್ಯರು, ಅಸಾಮರ್ಥ್ಯವಿರುವ ಇಲ್ಲದಿರುವ ವಿದ್ಯಾರ್ಥಿಗಳ ಹೆತ್ತವರು, ಎರಡೂ ಸನ್ನಿವೇಶಗಳ ಶಿಕ್ಷಣತಜ್ಞರು, ಸಮಾಲೋಚಕರು, ವೈದ್ಯರು, ಆಡಳಿತಗಾರರು ಈ ಎಲ್ಲರ ಅಲೋಚನೆಗಳನ್ನು ಪರಿಗಣಿಸಿ ಎಲ್ಲರ ಸಹಕಾರದೊಂದಿಗೆ, ಈ ಸನ್ನಿವೇಶಗಳನ್ನು ಕುರಿತ ವಿಶೇಷ ವೀಕ್ಷಣೆಯೊಂದಿಗಿನ ಹಿಮ್ಮಾಹಿತಿಯೊಂದಿಗೆ ಸೇವಾಪೂರ್ವ ಹಾಗೂ ಸೇವಾನಿರತ ತರಬೇತಿಯ ವಿಷಯಗಳನ್ನು ನಿರ್ಧರಿಸಿ, ಮೌಲ್ಯೀಕರಿಸಬೇಕು. ಅಂತಹ ಪಠ್ಯಕ್ರಮ ಹಾಗೂ ತರಬೇತಿ ಸಾಮಗ್ರಿ ಮಾತ್ರ ಅಪೇಕ್ಷಿತ ಪರಿಣಾಮಗಳನ್ನು ಉಂಟುಮಾಡಬಲ್ಲುದು.

## ನವೀನ ಮಾದರಿಯ ತರಬೇತಿಯ ವಿನ್ಯಾಸ :

ಸಾಮಾನ್ಯ ಶಾಲೆಗಳ ಶಿಕ್ಷಕರನ್ನು ಸಾಮೂಹಿಕ ನೆಲೆಯಲ್ಲಿ ತರಬೇತುಗೊಳಿಸಿದರೆ ಮಾತ್ರ ಅಂತರ್ಗತ ಶಿಕ್ಷಣ ಯಶಸ್ವಿಯಾಗಬಲ್ಲುದು ಎಂದು ಅನೇಕ ಲೇಖಕರು ಎಚ್ಚರಿಸಿದ್ದಾರೆ. ತರಬೇತುಗೊಳಿಸಬೇಕಾದ ಅಧ್ಯಾಪಕರು ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದು ಸಾಂಪ್ರದಾಯಿಕ ಮಾರ್ಗಗಳು ಈ ಎಲ್ಲರನ್ನೂ ತರಬೇತಿಗೊಳಿಸುವಲ್ಲಿ ಸೋಲುತ್ತವೆ. ಹಾಗಾಗಿ ಸಾಮೂಹಿಕ ನೆಲೆಯಲ್ಲಿ ಅಧ್ಯಾಪಕರನ್ನು ತರಬೇತುಗೊಳಿಸುವ ನವೀನ ಮಾದರಿಯ ತರಬೇತಿ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸಬೇಕಾಗಿದೆ. ಇದಕ್ಕೆ ದೂರಶಿಕ್ಷಣ ಒಂದು ದಾರಿ ಎಂಬ ಸೂಚನೆಯೂ ಇದೆ. ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾನಿಲಯವು ಅನೇಕ ಕಾರ್ಯಕ್ರಮಗಳನ್ನು ದೂರಶಿಕ್ಷಣದ ಉಪಕ್ರಮದಲ್ಲಿ ಯಶಸ್ವಿಯಾಗಿಸಿದೆ. ಈ ವಿಶ್ವವಿದ್ಯಾನಿಲಯವು ಭಾರತದ ಪುನರ್ವಸತಿ ಕೌನ್ಸಿಲ್ ಜೊತೆಯಲ್ಲಿ ಅಧ್ಯಾಪಕರನ್ನೂ ಒಳಗೊಂಡಂತೆ ಅಸಾಮರ್ಥ್ಯವಿರುವವರನ್ನು ತರಬೇತಿಗೊಳಿಸುವವರಿಗೆ ಹಲವಾರು ಕೋರ್ಸುಗಳನ್ನು ನೀಡುತ್ತಿದೆ. ಇಂತಹ ಕಾರ್ಯಕ್ರಮಗಳು ಸೇವಾನಿರತ ಅಧ್ಯಾಪಕರಿಗೆ ಸಹಾಯವಾಗಬಹುದು. ಆದರೆ ಪ್ರಾಯೋಗಿಕ ಅಂಶಗಳನ್ನು ಕುರಿತ ತರಬೇತಿ ಕೊಡುವುದು ಈ ಕಾರ್ಯಕ್ರಮಗಳ ಸವಾಲೂ ಆಗಿರುತ್ತದೆ ಎಂಬುದು ಗಮನಾರ್ಹ.

## ವಿವಿಧ ಸಚಿವಾಲಯಗಳ ಸಹಯೋಗ :

ಭಾರತದ ವಿವಿಧ ಸಚಿವಾಲಯಗಳು ಅಸಾಮರ್ಥ್ಯವುಳ್ಳವರಿಗೆ ವಿವಿಧ ಸೇವೆಗಳನ್ನು ಒದಗಿಸುತ್ತವೆ. ಉದಾಹರಣೆಗೆ ಅಂತರ್ಗತ ಶಿಕ್ಷಣವು ಮಾನವ ಸಂಪನ್ಮೂಲ ಬೆಳವಣಿಗೆಯ ಸಚಿವಾಲಯಕ್ಕೆ ಸಂಬಂಧಿಸಿದುದು. ವಿಶೇಷಶಾಲಾ ಶಿಕ್ಷಣವು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯಕ್ಕೆ ಸಂಬಂಧಿಸಿದುದು. ಈ ರೀತಿ ಸೇವೆಗಳು ಹಂಚಿಹೋದಾಗ ಅಸ್ತಿತ್ವದಲ್ಲಿರುವ ಮಿತವಾದ ಸಂಪನ್ಮೂಲಗಳಲ್ಲಿ ಆಗಬಹುದಾದ ಸೋರಿಕೆ ಅಥವಾ ನಷ್ಟ ಸ್ಪಷ್ಟ. ಇದು ಒಂದು ಉದಾಹರಣೆಯಷ್ಟೇ. ಈ ರೀತಿಯ ಆಡಳಿತಾತ್ಮಕ ಮಾರ್ಪಾಡುಗಳನ್ನು ಮಾಡಿಕೊಳ್ಳಲು ಭಾರತದಲ್ಲಿ ಅವಕಾಶವಿದೆ. ಹೀಗಾಗಿ ಆಡಳಿತಾತ್ಮಕವಾದ ವಿನ್ಯಾಸ ಜೋಡಣೆಗಳನ್ನು ಮಾಡಿಕೊಂಡು ಅಸಾಮರ್ಥ್ಯವಿರುವವರಿಗೆ ಒದಗುವ ಆರ್ಥಿಕ ಸಹಾಯಗಳು ಯಶಸ್ವಿಯಾಗಿ ತಲುಪುವಂತೆ ಮಾಡಬೇಕಾಗಿದೆ.

**ಅಂತರ್ಗತ ಶಿಕ್ಷಣದಲ್ಲಿ ಸರ್ಕಾರೇತರ ಸಂಸ್ಥೆಗಳ ಭಾಗವಹಿಕೆ**

ಸರ್ಕಾರೇತರ ಸಂಸ್ಥೆಗಳನ್ನು ಕುರಿತ ಸಾಹಿತ್ಯದ ಪ್ರಕಾರ, ಭಾರತದಲ್ಲಿ ಒಂದು ಮಿಲಿಯನ್‌ಗಿಂತ ಹೆಚ್ಚು ಸಂಖ್ಯೆಯ ಸರ್ಕಾರೇತರ ಸಂಸ್ಥೆಗಳಿವೆ. ಎಲ್ಲವೂ ಶೈಕ್ಷಣಿಕ ಕ್ಷೇತ್ರದಲ್ಲೇ ಕ್ರಿಯಾಶೀಲವಾಗಿಲ್ಲದಿದ್ದರೂ ಬಹಳಷ್ಟು ಸಂಸ್ಥೆಗಳು ಅಸಾಮರ್ಥ್ಯವುಳ್ಳ ಮಕ್ಕಳ ಶಿಕ್ಷಣಕ್ಕೆ ಸೇವೆ ಸಲ್ಲಿಸುತ್ತಿವೆ. ಈ ಸಂಸ್ಥೆಗಳು ಭಾರತದಾದ್ಯಂತ ವಿಶಾಲವಾಗಿ ಹರಡಿಕೊಂಡಿದ್ದು, ನಗರ ಹಾಗೂ ಗ್ರಾಮೀಣ ಪ್ರದೇಶಗಳೆರಡರಲ್ಲೂ ವ್ಯಾಪಿಸಿರುವುದರಿಂದ ಅಂತರ್ಗತ ಶಿಕ್ಷಣದಲ್ಲಿ ವಿಶಿಷ್ಟ ಪಾತ್ರವನ್ನು ವಹಿಸಬಹುದು. ದುರದೃಷ್ಟವೆಂದರೆ, ಇಂದಿಗೂ ಅನೇಕ ಸರ್ಕಾರೇತರ ಸಂಸ್ಥೆಗಳು ಅಸಾಮರ್ಥ್ಯವಿರುವವರ ಶಿಕ್ಷಣ ಪ್ರತ್ಯೇಕ ವ್ಯವಸ್ಥೆಯಲ್ಲೇ ನಡೆಯಬೇಕು ಎಂದು ನಂಬುತ್ತವೆ. ಹಾಗಾಗಿ ಈ ಸಿಬ್ಬಂದಿಗಳಿಗೆ ಅಗತ್ಯ ತರಬೇತಿಯೊಂದಿಗೆ ಅರಿವು ಮೂಡಿಸಿ ಅಂತರ್ಗತ ಶಿಕ್ಷಣದಲ್ಲಿ ಒಲವು ಮೂಡುವಂತೆ ಮಾಡಬೇಕಾಗಿದೆ.

## ಪರ್ಯಾಯ ಪರೀಕ್ಷಾ ವ್ಯವಸ್ಥೆ

ಬಹಳಷ್ಟು ಶಾಲಾ ಆಡಳಿತಗಾರರು ಅಸಾಮರ್ಥ್ಯವಿರುವವರ ಸಮನ್ವಯವು ಶಾಲೆಯ ಒಟ್ಟು ಶೈಕ್ಷಣಿಕ ಫಲಿತಾಂಶಕ್ಕೆ ಅಡ್ಡಿಯಾಗುತ್ತದೆ ಎಂದು ಭಾವಿಸುತ್ತಾರೆ. ಏಕೆಂದರೆ, ಅಸಾಮರ್ಥ್ಯವಿರುವ ಮತ್ತು ಇಲ್ಲದಿರುವ ಮಕ್ಕಳೆಲ್ಲರನ್ನೂ ಒಂದೇ ಗುಣಮಟ್ಟದ ಅಡಿಯಲ್ಲಿ ಮೌಲ್ಯಮಾಪನ ಮಾಡಲಾಗುತ್ತದೆ. ಸಾಮಾನ್ಯ ಮಕ್ಕಳು ಹಾಗೂ ಅಸಾಮರ್ಥ್ಯವಿರುವ ಮಕ್ಕಳನ್ನು ಕುರಿತ ಗುಣಮಟ್ಟದಲ್ಲೂ ಒಂದು ಮಟ್ಟದ ವ್ಯತ್ಯಾಸ ಇರುತ್ತದೆ. ಹಾಗಾಗಿ ಅವರಿಗೇ ಪ್ರತ್ಯೇಕವಾದ ಮೌಲ್ಯಮಾಪನ ವ್ಯವಸ್ಥೆಯ ಅಗತ್ಯವಿದೆ. ಅಸಾಮರ್ಥ್ಯವಿರುವ ಮಕ್ಕಳಿಂದ ಅಪೇಕ್ಷಿಸುವ ಫಲಿತಾಂಶ ಮತ್ತು ಮೌಲ್ಯಮಾಪನ ಮಾಡುವ ಪ್ರಕ್ರಿಯೆ ಸಹಜವಾಗಿಯೇ ಭಿನ್ನವಾಗಿರುತ್ತದೆ. ಹೀಗಾಗಿ ಪರ್ಯಾಯ ಮೌಲ್ಯಮಾಪನ ವ್ಯವಸ್ಥೆ ಅಂತರ್ಗತತೆಯ ಅಗತ್ಯ. ಕೆಲವು ದೇಶಗಳಲ್ಲಿ ಇಂತಹ ಅಭ್ಯಾಸಗಳಿವೆ. ಅಲ್ಲಿ ಅಸಾಮರ್ಥ್ಯವಿರುವ ಮಕ್ಕಳ ಅಸಾಮರ್ಥ್ಯವನ್ನು ಪರೀಕ್ಷಿಸುವುದಕ್ಕಿಂತ ಅವರಿಗಿರುವ ಸಾಮರ್ಥ್ಯಗಳನ್ನು ಮೌಲ್ಯಮಾಪನ ಮಾಡಲಾಗುತ್ತದೆ. ಹೀಗಾದಾಗ ಭಾರತದಲ್ಲೂ ಶಾಲೆಗಳು ಇಂತಹ ಮಕ್ಕಳನ್ನು ಹೆಚ್ಚು ಸ್ವಾಗತಿಸುವ ಅವಕಾಶಗಳಿವೆ.

## ಶಾಲಾ–ವಿಶ್ವವಿದ್ಯಾನಿಲಯದ ಪಾಲುದಾರಿಕೆ

ಭಾರತದ ಬಹುಭಾಷಿಕ, ಬಹುಸಾಂಸ್ಕೃತಿಕ ಮತ್ತು ಬಹುಧಾರ್ಮಿಕ ಸನ್ನಿವೇಶ ಯಾವುದೇ ಶೈಕ್ಷಣಿಕ ಸುಧಾರಣೆಯನ್ನು ತರುವಲ್ಲಿ ಒಂದು ಸವಾಲಾಗಿದೆ ಎಂದು ಹೇಳಲಾಗುತ್ತದೆ. ರಾಜ್ಯಗಳಲ್ಲಿನ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಸ್ಥಳೀಯ ವಿಶ್ವವಿದ್ಯಾನಿಲಯಗಳು ಈ ಸವಾಲನ್ನು ಎದುರಿಸುವಲ್ಲಿ ವಿಶಿಷ್ಟ ಪಾತ್ರವನ್ನು ವಹಿಸಬಹುದು. ಸ್ಥಳೀಯ ಶಾಲೆಗಳ ಭಾಗವಹಿಕೆಯೊಂದಿಗೆ ಪ್ರತಿ ಪ್ರಾಂತ್ಯಕ್ಕೆ ಸೂಕ್ತವಾದ ಮಾರ್ಗೋಪಾಯಗಳನ್ನು ವಿಶ್ವವಿದ್ಯಾನಿಲಯಗಳು ಪ್ರಾಯೋಗಿಕ ಯೋಜನೆಗಳ ಮೂಲಕ ಕಂಡುಕೊಳ್ಳಬಹುದು. ಅಲ್ಲದೆ, ಆ ಸಂಬಂಧವಾದ ಸಾಹಿತ್ಯವನ್ನು ಸ್ಥಳೀಯ ಭಾಷೆಗಳಲ್ಲಿ ಪ್ರಕಟಿಸಬಹುದು. ಸಹಕಾರಿ ಯೋಜನೆಗಳು ಈ ದಿಶೆಯಲ್ಲಿ ಹೆಚ್ಚು ಪರಿಣಾಮಕಾರಿಯಾಗುವುದನ್ನು ವಿದೇಶೀ ಯೋಜನೆಗಳು ತೋರಿಸಿಕೊಟ್ಟಿವೆ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–4

ಕೆಳಗೆ ಅಂತರ್ಗತತೆಯ ಸವಾಲುಗಳನ್ನು ಎದುರಿಸಲು ಸೂಕ್ತವಾದ ಮಾರ್ಗೋಪಾಯಗಳನ್ನೂ ಅದಕ್ಕೆ ಸಂಬಂಧಿಸಿದ ಕಾರ್ಯಗಳನ್ನೂ ನೀಡಲಾಗಿದೆ. ಅವುಗಳನ್ನು ಹೊಂದಿಸಿ.

| | | | |
|---|---|---|---|
| a | ಅಧ್ಯಾಪಕರ ತರಬೇತಿ | ಸಾಂಪ್ರದಾಯಿಕ ವಿಧಾನಗಳ ಬದಲಿಗೆ ಪರ್ಯಾಯ ಮಾರ್ಗೋಪಾಯಗಳನ್ನು ಆಲೋಚಿಸಿ | 1 |
| b | ನವೀನ ಮಾದರಿಯ ತರಬೇತಿಯ ವಿನ್ಯಾಸ | ಉನ್ನತ ಮಟ್ಟದ ಶಿಕ್ಷಣ ಸಂಸ್ಥೆಗಳು ಸಮೂಹ ಶಿಕ್ಷಣದ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. | 2 |
| c | ವಿವಿಧ ಸಚಿವಾಲಯಗಳ ಸಹಯೋಗ | ಅವರ ಆಲೋಚನೆಯನ್ನು ಪ್ರತ್ಯೇಕತೆಯ ಕಡೆಯಿಂದ ಅಂತರ್ಗತತೆಯ ಕಡೆಗೆ ತಿರುಗಿಸಿ. | 3 |
| d | ಅಂತರ್ಗತ ಶಿಕ್ಷಣದಲ್ಲಿ ಸರ್ಕಾರೇತರ ಸಂಸ್ಥೆಗಳ ಭಾಗವಹಿಕೆ | ಅವರ ಅಸಾಮರ್ಥ್ಯಗಳಿಗಿಂತ ಸಾಮರ್ಥ್ಯಗಳನ್ನು ತೋರಿಸುವಂತೆ ಮಾಡಿರಿ. | 4 |
| e | ಪರ್ಯಾಯ ಪರೀಕ್ಷಾ ವ್ಯವಸ್ಥೆ | ಅಸಾಮರ್ಥ್ಯವಿರುವವರ ಜೊತೆಯಲ್ಲಿ ಕೆಲಸಮಾಡಲು ಪರಿಣಾಮಕಾರಿ ತರಬೇತಿ ಕೊಡಿರಿ. | 5 |
| f | ಶಾಲಾ–ವಿಶ್ವವಿದ್ಯಾನಿಲಯದ ಪಾಲುದಾರಿಕೆ | ಆಡಳಿತಾತ್ಮಕ ವ್ಯವಸ್ಥೆಯನ್ನು ಸುಗಮಗೊಳಿಸಿ | 6 |

## 1.2.4. ಸಾರಾಂಶಿಸೋಣ

- ಅಸಾಮರ್ಥ್ಯಮಕ್ಕಳ ಸಾಕ್ಷರತೆಯ ಮಟ್ಟದಲ್ಲಿ ಇಂದಿಗೂ ಇರುವ ತಾರತಮ್ಯ ಸ್ಪಷ್ಟವಾಗಿ ಎದ್ದು ಕಾಣುತ್ತದೆ.
- ಭಾರತದ ಬಹಳಷ್ಟು ರಾಜ್ಯಗಳಲ್ಲಿ ಅಸಾಮರ್ಥ್ಯವಿರುವ ಮಕ್ಕಳ ಸಾಕ್ಷರತೆಯ ಮಟ್ಟಕ್ಕೆ ಅಸಾಮರ್ಥ್ಯವಿಲ್ಲದಿರುವ ಮಕ್ಕಳ ಸಾಕ್ಷರತೆಯ ಮಟ್ಟವನ್ನು ಹೊಂದಿಸಲು ಸಾಧ್ಯವಾಗಿಯೇ ಇಲ್ಲ.
- 1994 ರಲ್ಲಿ ಸಲಮಂಕದಲ್ಲಿ ವಿಶೇಷ ಅಗತ್ಯಗಳ ಶಿಕ್ಷಣವನ್ನು ಕುರಿತು ಸ್ಪೈನ್‌ನಲ್ಲಿ ನಡೆದ ಸಮ್ಮೇಳನವೇ ಅಂತರ್ಗತ ಶಿಕ್ಷಣದ ಪ್ರಮುಖ ಬೆಂಬಲ ಶಕ್ತಿ.
- 1964–66 ರ ಕೊಠಾರಿ ಆಯೋಗವೂ ಸಾಮಾನ್ಯ ಶಾಲೆಗಳಲ್ಲಿ ಅಂಗವಿಕಲ ಮಕ್ಕಳನ್ನು ಸಮನ್ವಯ ಮಾಡಿಕೊಳ್ಳಬೇಕು ಎಂದು ಶಿಫಾರ್ಸು ಮಾಡಿತು. 1986ರಲ್ಲಿ ಎನ್.ಸಿ.ಇ.ಆರ್.ಟಿ. ಯು ಅಸಾಮರ್ಥ್ಯವಿರುವ ಮಕ್ಕಳಿಗೆ ಯೋಜನಾ ಸಮನ್ವಯ ಶಿಕ್ಷಣವನ್ನು ರೂಪಿಸಲಾಯಿತು.
- ಅಸಾಮಾರ್ಥ್ಯವಿರುವ ಮಕ್ಕಳ ಶಿಕ್ಷಣದ ಇತಿಹಾಸದಲ್ಲಿ ಕಾಣಬರುವ ವಿಶೇಷ ಶಿಕ್ಷಣದ ವಿಧಗಳನ್ನು ಅರ್ಥಮಾಡಿಕೊಳ್ಳುವ ಮೊದಲಿಗೆ ಅಂತರರಾಷ್ಟ್ರೀಯ ಬೆಳವಣಿಯ ಕ್ಷೇತ್ರದಲ್ಲಿ ಚರ್ಚಿತವಾಗಿರುವ ಅಸಾಮರ್ಥ್ಯದ ಎರಡು ಸಾಮಾನ್ಯ ಮಾದರಿಗಳನ್ನು ತಿಳಿಯುವುದು ಮುಖ್ಯವಾಗುತ್ತದೆ. ಅವೆಂದರೆ ಸಾಮಾಜಿಕ ಹಾಗೂ ವೈದ್ಯಕೀಯ ಮಾದರಿಗಳು.
- ವಿಭಿನ್ನ ಅಗತ್ಯಗಳನ್ನುಳ್ಳ ಮಕ್ಕಳಿಗೆ ವಿಶೇಷ ಶಿಕ್ಷಣವನ್ನು ನೀಡಲಾಗುತ್ತದೆ. ಅವುಗಳಲ್ಲಿ ಮುಖ್ಯವಾದ ವರ್ಗಗಳೆಂದರೆ, ಬುದ್ಧಿಮಾಂದ್ಯರು, ಕಲಿಕಾ ಅಸಾಮರ್ಥ್ಯವುಳ್ಳವರು, ಶ್ರವಣ ದೋಷವಿರುವವರು,

ದೃಷ್ಟಿ ದೋಷವಿರುವವರು, ವಾಕ್ ದೋಷವಿರುವವರು, ಮೂಳೆಸಂಬಂಧಿ ದೋಷವುಳ್ಳವರು, ವಿಭಿನ್ನ ಮತ್ತು ತೀವ್ರತರ ದೋಷವಿರುವವರು.

- ಅಂತರ್ಗತ ಶಿಕ್ಷಣ ಎಂಬುದು ಒಂದು ಪದಗುಚ್ಛ ಮಾತ್ರವಲ್ಲ; ಅದಕ್ಕಿಂತ ತುಂಬಾ ಮಿಗಿಲಾದುದು. ಇದು ಯಾವುದೇ ಭೇದಭಾವವಿಲ್ಲದೆ ಎಲ್ಲ ಮಕ್ಕಳನ್ನೂ ಸಾಮಾನ್ಯ ಶಾಲೆಗೆ ಸ್ವಾಗತಿಸುವ ವಿಶಿಷ್ಟ ಪರಿಕಲ್ಪನೆ.
- ಅಂತರ್ಗತ ಶಿಕ್ಷಣದ ಹಾದಿಯಲ್ಲಿ ಅನೇಕ ಸವಾಲುಗಳಿವೆ. ಅದನ್ನು ಎದುರಿಸಲು ಅನೇಕ ಮಾರ್ಗೋಪಾಯಗಳನ್ನು ಅನ್ವಯಿಸಿಕೊಳ್ಳಬೇಕಾಗಿದೆ.

## 1.2.5 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1 ಮತ್ತು 2

### ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

1. ಸ್ವಾಭಾವಿಕ
2. 25 ಮಿಲಿಯನ್
3. ಸಲಮಂಚ ಸ್ಪೈನ್
4. ವ್ಯಕ್ತಿಗತ
5. ಸಮನ್ವಯ ಶಿಕ್ಷಣ

### ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–2

1 –ತಪ್ಪು, 2 – ಸರಿ, 3– ತಪ್ಪು, 4–ಸರಿ, 5– ತಪ್ಪು

### ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–3

1,2,3–ವಿ.ಶಿ, 4–ಅಂ.ಶಿ, 5–ಸ.ಶಿ, 6–ವಿ.ಶಿ,7–ವಿ.ಶಿ,8–ವಿ.ಶಿ,9– ಅಂ.ಶಿ,10– ಅಂ.ಶಿ, 11– ಅಂ.ಶಿ,12– ಅಂ.ಶಿ.

### ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–4

a-6, b-1, c-6, d-3, e-4, f-2

## 1.2.6 ಘಟಕಾಂತ್ಯ ಅಭ್ಯಾಸಗಳು

1) ಒಂದು ಜಾಗತಿಕ ಪರಿಕಲ್ಪನೆಯಾಗಿ ಅಂತರ್ಗತ ಶಿಕ್ಷಣದ ಇತಿಹಾಸವನ್ನು ಗುರುತಿಸಿ.
2) ಶಾಲೆಯ ಪ್ರಸ್ತುತ ಸನ್ನಿವೇಶದಲ್ಲಿ ಅಂತರ್ಗತ ಶಿಕ್ಷಣದ ಅಗತ್ಯವನ್ನು ವಿಶ್ಲೇಷಿಸಿ.
3) ಸಮನ್ವಯ ಮತ್ತು ಅಂತರ್ಗತ ಶಿಕ್ಷಣದ ನಡುವಿನ ವ್ಯತ್ಯಾಸವನ್ನು ಉದಾಹರಣೆಗಳೊಂದಿಗೆ ಸ್ಪಷ್ಟೀಕರಿಸಿ.
4) ಅಂತರ್ಗತ ಶಿಕ್ಷಣದ ಪ್ರಸ್ತುತ ಸವಾಲುಗಳು ಮತ್ತು ಅವುಗಳನ್ನು ಎದುರಿಸಲು ಮಾರ್ಗೋಪಾಯಗಳನ್ನು ವಿವರಿಸಿ.

## 1.2.7. ಪರಾಮರ್ಶನ ಸೂಚಿ


1. Singh, J.P. Dash, M.K., (2005) 'Disability Development in India' Rehabilitation Council of India, New Delhi, in Association with Kanishka Publishers Distributors
2. Special Needs: From Segregation to Inclusion, New Delhi ; Sage Publications.
3. Discrimination based on caste, religion, disability-Handbook sensitizing teachers and teacher educators (Inclusive Education) published by NCTE 2004 under the agencies of Human Rights Commission.
4. Das Ashima and et al., (2013) 'Inclusive Education', concept publishing company Pvt. Ltd., New Delhi.
5. Pearson series in Education, (2012) 'Special Education', Dorling Kindersley (India) Pvt. Ltd.,
6. Sharma Prem Lata et al., (2012) 'Inclusive Education: What, Why and How', – A book on Teacher Education, RIE Mysuru, NCERT Vani Press, Mysuru.
7. Angela Kohama (2012) Inclusive Education in India: A Country in Transition, An Undergraduate Honors Thesis Presented to the Department of International Studies at the University of Oregon, cpb-us-e1.wpmucdn.com.


****************

# ಬ್ಲಾಕ್–1 : ಶಿಕ್ಷಣದಲ್ಲಿ ಅಂತರ್ಗತತೆಯನ್ನು ಅರ್ಥಮಾಡಿಕೊಳ್ಳುವುದು

## ಘಟಕ–3 : ನಿಯಮಗಳ ನೋಟ : ಅಂತರ್ಗತ ಶಿಕ್ಷಣವನ್ನು ಉತ್ತೇಜಿಸಲು ಪ್ರಯತ್ನಗಳು

### ಘಟಕದ ರಚನೆ


1.3.1 ಕಲಿಕಾ ಉದ್ದೇಶಗಳು

1.3.2. ಪೀಠಿಕೆ

1.3.3 ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

1.3.3.1. ನೀತಿ ನಿಯಮಗಳ ನೋಟ: ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟಗಳಲ್ಲಿ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 1

1.3.3.2 ಅಂತರ್ಗತ ಶಿಕ್ಷಣವನ್ನು ಉತ್ತೇಜಿಸಲು ಪ್ರಯತ್ನಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 2

1.3.4. ಸಾರಾಂಶಿಸೋಣ

1.3.5 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1 ಮತ್ತು 2

1.3.6 ಘಟಕಾಂತ್ಯ ಅಭ್ಯಾಸಗಳು

1.3.7. ಪರಾಮರ್ಶನ ಸೂಚಿ


### 1.3.1 ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಅಂತರ್ಗತತೆಯನ್ನು ಕುರಿತಂತೆ ರಾಷ್ಟ್ರಮಟ್ಟದಲ್ಲಿನ ನಿಯಮಗಳನ್ನು ಸ್ಪಷ್ಟೀಕರಿಸುವರು;
- ಅಂತರ್ಗತತೆಯನ್ನು ಕುರಿತಂತೆ ಅಂತರರಾಷ್ಟ್ರೀಯ ಮಟ್ಟದಲ್ಲಿನ ನಿಯಮಗಳನ್ನು ಸ್ಪಷ್ಟೀಕರಿಸುವರು;ಮತ್ತು
- ಅಂತರ್ಗತ ಶಿಕ್ಷಣವನ್ನು ಉತ್ತೇಜಿಸುವಲ್ಲಿನ ಪ್ರಯತ್ನಗಳನ್ನು ವಿಶ್ಲೇಷಿಸುವರು.

## 1.3.2. ಪೀಠಿಕೆ

ನಮಗೆ ತಿಳಿದಿರುವಂತೆ ಅಸಾಮರ್ಥ್ಯವುಳ್ಳವರ ಸಮಸ್ಯೆಗಳು ಸಂಕೀರ್ಣವಾದವು. ಅವರಿಗೆ ಸಿಗುವ ಸೌಲಭ್ಯಗಳೂ ವಿರಳ. ಅವರನ್ನು ಕುರಿತ ಸಾಮಾಜಿಕ ಮನೋಭಾವವೂ ಅಷ್ಟೇನೂ ಧನಾತ್ಮಕವಾದುದಲ್ಲ. ಈ ಗುಂಪಿನವರ ಏಳಿಗೆಗೆ ಏಕರೂಪವಾಗಿ ಏನಾದರೂ ಮಾಡುವುದಾದರೆ ಅದು ಕಾನೂನುಗಳಿಂದ ಮಾತ್ರ ಸಾಧ್ಯ. ಕೇವಲ ಕಾನೂನುಗಳಿಂದ ಮಾತ್ರ ಸಮಾಜದ ಎಲ್ಲ ಅಂಶಗಳನ್ನೂ ಕ್ಷಣಮಾತ್ರದಲ್ಲಿ ಸಾಧಿಸಲು ಸಾಧ್ಯವಿಲ್ಲವಾದರೂ ಅಸಾಮರ್ಥ್ಯವಿರುವವರ ಶಿಕ್ಷಣ, ಉದ್ಯೋಗ, ಸಾರಿಗೆ, ಸಂವಹನ ಇವುಗಳಿಗೆ ಅದು ಅವಕಾಶಗಳನ್ನು ತೆರೆದಿಡುತ್ತದೆ.

ಸಮಾಜವನ್ನು ರೂಪಿಸುವಲ್ಲಿ ಶಿಕ್ಷಣದ ಪಾತ್ರ ಮಹತ್ವದ್ದು. ಒಂದು ರಾಷ್ಟ್ರದ ಮುಂಗಾಣ್ಕೆ ಮತ್ತು ಸಂವಿಧಾನಾತ್ಮಕ ಬದ್ಧತೆಗಳು ಆ ರಾಷ್ಟ್ರದ ನೀತಿ ನಿಯಮಗಳನ್ನು ಪ್ರತಿಬಿಂಬಿಸುತ್ತದೆ. ಇದು ಸಮಾಜಕ್ಕೆ ಮಾರ್ಗದರ್ಶಕವಾಗುತ್ತದೆ. ಭಾರತದ ಅಸಮಾನತೆ ಮತ್ತು ವೈವಿಧ್ಯತೆಗಳು ಅದರ ನಿರ್ದೇಶನಾತ್ಮಕ ತತ್ವಗಳಲ್ಲಿ ವ್ಯಕ್ತವಾಗುತ್ತದೆ. ಇವು ಐತಿಹಾಸಿಕವಾಗಿ ಆಗಿರುವ ದೋಷಗಳನ್ನು ಸರಿಪಡಿಸಲು ಸಮಕಾಲೀನವಾದ ಕ್ರಮಗಳಾಗಿರುತ್ತವೆ. ಇದು ಸಮಾಜದ ಅಂಚಿನಲ್ಲಿರುವ ಅಥವಾ ಸೌಲಭ್ಯವಂಚಿತರಾಗಿರುವವರಿಗೆ ಸದವಕಾಶಗಳನ್ನು ಕಲ್ಪಿಸಿ ಅವರ ಪ್ರಗತಿಯನ್ನು ಉದ್ದೇಶಿಸಿದ್ದಾಗಿರುತ್ತದೆ. ಭಾರತೀಯ ಸಮಾಜವು ಅಂತರ್ಗತತೆಯ ಲಕ್ಷಣವನ್ನು ಹೊಂದಿರುವುದರಿಂದ ಅದರ ಶೈಕ್ಷಣಿಕ ನೀತಿಗಳೂ ಅಂತರ್ಗತೀಯವಾಗಿಯೇ ಇರಬೇಕು.

ರಾಷ್ಟ್ರೀಯ ಶಿಕ್ಷಣ ನೀತಿ(1986) ಮತ್ತು ಅದರ ಕ್ರಿಯಾ ಕಾರ್ಯಕ್ರಮ(1992), ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು(2005), ಅಸಾಮರ್ಥ್ಯವುಳ್ಳ ವ್ಯಕ್ತಿಗಳ ರಾಷ್ಟ್ರೀಯ ನೀತಿಸಂಹಿತೆ (2005), ಮತ್ತು 6–14 ರ ವಯೋಮಾನದ ಮಕ್ಕಳಿಗೆ ಮುಕ್ತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು ಇವೆಲ್ಲವೂ ಪ್ರತ್ಯೇಕತೆಯ ವಿರುದ್ಧವಾಗಿ ಅಂತರ್ಗತತೆಯನ್ನು ಕುರಿತಂತೆ ನಿರ್ದಿಷ್ಟ ನಿರ್ದೇಶನಗಳನ್ನು ಒಳಗೊಂಡಿವೆ.

ತರಗತಿ ಕೋಣೆ ಒಂದು ಚಿಕ್ಕ ಸಮಾಜವೇ. ಶಾಲೆಯಲ್ಲಿನ ವೈವಿಧ್ಯತೆಯನ್ನು ಎದುರಿಸಲು ಅಂತರ್ಗತತೆಯ ತತ್ವವನ್ನು ಕೇವಲ ಅಧ್ಯಾಪಕರು ಮಾತ್ರವಲ್ಲ; ಇಡೀ ಶಾಲೆಯೇ ಅಳವಡಿಸಿಕೊಳ್ಳಬೇಕು. ಇದರಿಂದಾಗಿ ಒಟ್ಟು ಶೈಕ್ಷಣಿಕ ಕಾರ್ಯಕ್ರಮವೇ ಅರ್ಥಪೂರ್ಣವೂ ಸಮರ್ಪಕವೂ ಆಗುತ್ತದೆ. ಈ ಸನ್ನಿವೇಶದಲ್ಲಿ ಅಧ್ಯಾಪಕರು ಅವರ ಸಂಪೂರ್ಣ ಜವಾಬ್ದಾರಿಯನ್ನು ಅರಿತಿರಬೇಕು.

ಅಸಾಮರ್ಥ್ಯವುಳ್ಳವರ ಏಳಿಗೆಗಾಗಿ ಭಾರತ ಹಾಗೂ ಜಗತ್ತಿನಾದ್ಯಂತ ಅನೇಕ ಪ್ರಯತ್ನಗಳನ್ನು ಮಾಡಲಾಗಿದೆ. ಇವುಗಳನ್ನು ನಿಯಮಗಳು ಮತ್ತು ಅನ್ವಯಗಳು ಎಂದು ಎರಡು ಭಾಗಗಳಾಗಿ ಗಮನಿಸಬಹುದು. ಎಲ್ಲ ನಿಯಮಗಳನ್ನೂ ಆಯಾ ರಾಷ್ಟ್ರಗಳ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ನೆಲೆಗಳಲ್ಲಿ ಅರ್ಥಮಾಡಿಕೊಳ್ಳಬೇಕು. ಅಸಾಮರ್ಥ್ಯವಿರುವವರ ಏಳಿಗೆಗೆ ರೂಪಿಸಲಾಗಿರುವ ಈ ನೀತಿ ನಿಯಮಗಳನ್ನೂ ಪ್ರಯತ್ನಗಳನ್ನೂ ಮುಂದೆ ಅರ್ಥಮಾಡಿಕೊಳ್ಳೋಣ.

## 1.3.3 ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 1.3.3.1. ನೀತಿ ನಿಯಮಗಳ ನೋಟ: ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟಗಳಲ್ಲಿ

ಅಂತರ್ಗತ ಶಿಕ್ಷಣ ಎಂಬುದು ಎಲ್ಲ ಕಲಿಕೆದಾರರ ಮೂಲಭೂತ ಕಲಿಕಾ ಅಗತ್ಯಗಳನ್ನು ಪೂರೈಸುವ ಮತ್ತು ಅವರ ಬದುಕನ್ನು ಶ್ರೀಮಂತಗೊಳಿಸುವ ಗುಣಮಟ್ಟದ ಶಿಕ್ಷಣವನ್ನು ಕುರಿತ ಹಕ್ಕು ಎಂಬುದು ನಿಮಗೆ

ಈಗಾಗಲೇ ತಿಳಿದಿದೆ. ದುರ್ಬಲರು ಮತ್ತು ಅಪಾಯದ ಅಂಚಿನಲ್ಲಿರುವವರನ್ನು ಒಳಗೊಂಡಂತೆ ಪ್ರತಿ ವ್ಯಕ್ತಿಯನ್ನು ಸಂಪೂರ್ಣವಾಗಿ ಬೆಳೆಸುವುದು ಇದರ ಉದ್ದೇಶ. ಜೊತೆಗೆ ಎಲ್ಲ ರೀತಿಯ ಭೇದಭಾವವನ್ನು ಹೋಗಲಾಡಿಸಿ ಸಾಮಾಜಿಕ ಐಕ್ಯತೆಯನ್ನು ಸಾಧಿಸುವುದು ಇದರ ಗುರಿ.

ಎಲ್ಲರಿಗೂ ಸಮನಾದ ಅವಕಾಶಗಳನ್ನು ಒದಗಿಸುವ ಉದ್ದೇಶದಿಂದ ಮೂಡಿಬಂದ ಪರಿಕಲ್ಪನೆ ಅಂತರ್ಗತತೆ. ಸಮನಾದ ಅವಕಾಶ ಎಂದರೆ ಎಲ್ಲರಿಗೂ ಒಂದೇ ರೀತಿಯ ಅವಕಾಶಗಳನ್ನು ಒದಗಿಸುವುದು ಎಂದರ್ಥವಲ್ಲ. ಇಲ್ಲಿ ಸಮತೆಯನ್ನೂ ಕಾಪಾಡಿಕೊಳ್ಳಬೇಕು. ಹಾಗಾಗಿ ಪ್ರತಿ ವ್ಯಕ್ತಿಯ ವೈಯಕ್ತಿಕ ಅಗತ್ಯಗಳ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು ಸಮನಾದ ಅವಕಾಶವನ್ನೊದಗಿಸಬೇಕು ಎಂಬುದು ಇದರ ಅರ್ಥ. ಹೀಗಾಗಿ ಕೆಲವೊಮ್ಮೆ ಅಗತ್ಯಕ್ಕೆ ತಕ್ಕಂತೆ ಹೆಚ್ಚುವರಿ ಅವಕಾಶಗಳನ್ನೂ ಸೌಲಭ್ಯಗಳನ್ನೂ ಒದಗಿಸಬೇಕಾಗಬಹುದು.

## ನೀತಿನಿಯಮಗಳನ್ನು ರೂಪಿಸುವುದಾದರೂ ಏಕೆ?

ಎಲ್ಲರೂ ಒಟ್ಟಾಗಿ ಕಲೆತು ಭಾಗವಹಿಸುವ, ಶಿಕ್ಷಣದ ಹಕ್ಕನ್ನು ಸಾಧಿಸುವುದೇ ನಿಜವಾದ ಅರ್ಥದಲ್ಲಿ ಅಂತರ್ಗತ ಸಮಾಜಕ್ಕೆ ಅಡಿಪಾಯವಾದ ಅಂಶ. ಇಂದಿಗೂ 77 ಮಿಲಿಯ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದು 781 ಮಿಲಿಯ ವಯಸ್ಕರು ಅನಕ್ಷರಸ್ಥರಾಗಿಯೇ ಉಳಿದಿದ್ದಾರೆ. ಈ ಸನ್ನಿವೇಶ ಪ್ರಮುಖವಾಗಿ ಅಸಾಮರ್ಥ್ಯವುಳ್ಳ ವ್ಯಕ್ತಿಗಳಲ್ಲಿ ನಿಬಿಡವಾಗಿ ಕಾಣುತ್ತದೆ. ಅಸಾಮರ್ಥ್ಯವಿರುವವರಲ್ಲಿ ಸುಮಾರು ಶೇ 97ರಷ್ಟು ವಯಸ್ಕರಿಗೆ ಮೂಲಭೂತವಾದ ಸಾಕ್ಷರತಾ ಕೌಶಲಗಳು ಇಲ್ಲವಾಗಿದೆ. ಪ್ರಗತಿಶೀಲ ರಾಷ್ಟ್ರಗಳಲ್ಲಿ ಶಾಲೆಗೆ ಹೋಗುವ ಅಸಾಮರ್ಥ್ಯವಿರುವ ಮಕ್ಕಳ ಪ್ರಮಾಣ ಶೇ1 ರಿಂದ ಶೇ5 ಎಂದು ಹೇಳಲಾಗುತ್ತದೆ. ಇವರಿಗೆ ಗುಣಮಟ್ಟದ ಶಿಕ್ಷಣ ಕೊಡುವುದು ನಮ್ಮ ಕಾಲದ ಅತಿ ದೊಡ್ಡ ಸವಾಲಾಗಿದೆ. ಆದರೂ ಅವರಿಗೆ ಸಂಬಂಧಪಟ್ಟ ನೀತಿನಿಯಮಗಳ ಅನ್ವಯದಿಂದ ಅಂತರ್ಗತತೆಯ ಪ್ರಪಂಚವನ್ನು ಕಟ್ಟುವುದು ಸಾಧ್ಯವಿದೆ. ಅರಿವೇ ಈ ದಿಶೆಯಲ್ಲಿ ನಮ್ಮನ್ನು ಮುಂದೆ ತರುವಂತಹುದು. ಆದುದರಿಂದ, ನಾವು ಈ ನಿಟ್ಟಿನಲ್ಲಿ ಜನಜಾಗೃತಿ ಉಂಟುಮಾಡುವ ಕೈಂಕರ್ಯವನ್ನು ಮಾಡಬೇಕಾಗಿದೆ. ಅಂತರ್ಗತತೆಯ ಪ್ರಪಂಚಕ್ಕೆ ಅಗತ್ಯವಾದ ಪರಿಣಾಮಕಾರಿ ನೀತಿಗಳನ್ನು ಹೆಚ್ಚು ರೂಪಿಸಬೇಕಾಗಿದೆ. ಅಂತರ್ಗತತೆಗೆ ಸಂಬಂಧಪಟ್ಟ ಕನಸುಗಳನ್ನು, ಮುಂಗಾಣ್ಕೆಯನ್ನು ಮತ್ತು ಬದ್ಧತೆಗಳನ್ನು ಸ್ಪಷ್ಟ ಸತ್ಯತೆಯೊಂದಿಗೆ ಮೂಡಿಸುವಲ್ಲಿ ನಮ್ಮೆಲ್ಲರ ಜಂಟಿ ಜವಾಬ್ದಾರಿ ಇದೆ. ಪ್ಯಾರಿಸ್‌ನಲ್ಲಿ ಯುನೆಸ್ಕೊವಿನ 33ನೇ ಸಾಮಾನ್ಯ ಸಮ್ಮೇಳನದ ಶಿಕ್ಷಣ ಮತ್ತು ಆರ್ಥಿಕ ಬೆಳವಣಿಗೆಯ ಚರ್ಚೆಯಲ್ಲಿ ಭಾಗವಹಿಸಿದ ಸುಮಾರು 100 ದೇಶಗಳ ಶಿಕ್ಷಣ ಸಚಿವಾಲಯದ ಪ್ರತಿನಿಧಿಗಳು ಗುಣಮಟ್ಟದ ಶಿಕ್ಷಣ ಪ್ರತಿಯೊಬ್ಬರ ಹಕ್ಕು ಎಂಬುದನ್ನು ಕುರಿತಂತೆ ತಮ್ಮ ಬದ್ಧತೆಯನ್ನು ಪುನರ್‌ದೃಢೀಕರಿಸಿದ್ದಾರೆ. ಇದು ಸಾಮಾಜಿಕ ಸ್ಥಿರತೆ, ಶಾಂತಿ ಮತ್ತು ಘರ್ಷಣೆಯ ಪರಿಹಾರಕ್ಕೆ ಸೂಕ್ತ ಶಕ್ತಿಯಾಗಬಹುದು

ಅಂತರ್ಗತ ಶಿಕ್ಷಣವನ್ನು ಬೆಳೆಸುವಲ್ಲಿ ಭಾರತ ಸರ್ಕಾರದ ಮೊದಲ ಹೆಜ್ಜೆ ಎಂದರೆ **ಅಸಾಮರ್ಥ್ಯವಿರುವ ಮಕ್ಕಳ ಅಂತರ್ಗತ ಶಿಕ್ಷಣ ಕಾರ್ಯಕ್ರಮ (Inclusive Education of Disabled Children - IEDC)**. 1974 ರಲ್ಲಿ, ಕೇಂದ್ರ ಸರ್ಕಾರದ ಕಲ್ಯಾಣ ಸಚಿವಾಲಯವು ಸಾಮಾನ್ಯ ಶಾಲೆಗಳಲ್ಲಿ ಸರಳ ಮತ್ತು ಸಾಧಾರಣ ಅಸಾಮರ್ಥ್ಯವುಳ್ಳ ಮಕ್ಕಳ ಸಮನ್ವಯವನ್ನು ಪ್ರೋತ್ಸಾಹಿಸಲು ಈ ಕಾರ್ಯಕ್ರಮವನ್ನು ಮೊದಲುಮಾಡಿತು. ಅಸಾಮರ್ಥ್ಯವುಳ್ಳ ಮಕ್ಕಳನ್ನು ಸಾಮಾನ್ಯ ಶಾಲೆಗಳಲ್ಲೇ ಉಳಿಸಿಕೊಳ್ಳುವುದಕ್ಕಾಗಿಯೂ ಇದನ್ನು ವಿನ್ಯಾಸಗೊಳಿಸಲಾಯಿತು. ಇದರ ಪ್ರಕಾರ ಈ ಮಕ್ಕಳಿಗೆ ಪುಸ್ತಕಗಳು, ಓದುವ ಸಾಮಗ್ರಿಗಳು, ಶಾಲಾ ಸಮವಸ್ತ್ರಗಳು ಮತ್ತು ವಿಶೇಷ ಉಪಕರಣಗಳಿಗಾಗಿ ಆರ್ಥಿಕ ನೆರವನ್ನು ಒದಗಿಸಲು ಅವಕಾಶವಿದ್ದಿತು. ಈ

ಕಾರ್ಯಕ್ರಮವನ್ನು ಸಾಮಾನ್ಯ ಶಾಲೆಗಳಲ್ಲಿ ಅಳವಡಿಸಲು ರಾಜ್ಯ ಸರ್ಕಾರಗಳಿಗೆ ಶೇ 50ರಷ್ಟು ಧನಸಹಾಯವನ್ನೂ ಒದಗಿಸಲಾಯಿತು.

ಭಾರತ ದೇಶದ ಶಿಕ್ಷಣದಲ್ಲಿ ಅಸಾಮರ್ಥ್ಯವುಳ್ಳ ಮಕ್ಕಳ ಸಂಪೂರ್ಣ ಭಾಗವಹಿಕೆಯನ್ನು ದೃಢೀಕರಿಸಿಕೊಳ್ಳುವ ಮೊದಲ ಪ್ರಯತ್ನವೆಂದರೆ, **ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಕಾಯಿದೆ (Persons With Disabilities Act, 1995)**. ಸಮಾನ ಅವಕಾಶ, ಸಂಪೂರ್ಣ ಭಾಗವಹಿಕೆ ಮತ್ತು ಹಕ್ಕುಗಳ ಸಂರಕ್ಷಣೆ ಇದರ ಗುರಿ. ಈ ಕಾಯಿದೆಯು ಪುನರ್ವಸತಿಯ ನಿವಾರಣಾತ್ಮಕವೂ ಉತ್ತೇಜನಕಾರಿಯೂ ಆದ ಅಂಶಗಳಾದ ಶಿಕ್ಷಣ ಉದ್ಯೋಗ, ಉದ್ಯೋಗಾತ್ಮಕ ತರಬೇತಿ, ಮೀಸಲಾತಿ, ಸಂಶೋಧನೆ, ಮಾನವಶಕ್ತಿ ಬೆಳವಣಿಗೆ, ಅಡ್ಡಿಮುಕ್ತ ಸನ್ನಿವೇಶಗಳ ರೂಪಣೆ, ಉದ್ಯೋಗ ಮತ್ತು ಬಡ್ತಿ, ವಿಶೇಷ ವಿಮೆ, ಜೊತೆಗೆ ತೀವ್ರ ಅಸಾಮರ್ಥ್ಯವನ್ನನುಭವಿಸುತ್ತಿರುವವರಿಗೆ ವಸತಿ ಸೌಲಭ್ಯಗಳ ಸ್ಥಾಪನೆ ಇತ್ಯಾದಿಗಳನ್ನು ಒದಗಿಸಲು ಅವಕಾಶ ಮಾಡಿಕೊಡುತ್ತದೆ. ಅಸಾಮರ್ಥ್ಯವಿರುವ ವ್ಯಕ್ತಿಗಳಿಗೆ ಯಾವುದೇ ರೀತಿಯ ಭೇದಭಾವಗಳನ್ನು ನಿವಾರಿಸುವ ಶಾಸನಗಳನ್ನು ರೂಪಿಸುವುದಕ್ಕೂ ಇದು ದಾರಿಮಾಡಿಕೊಟ್ಟಿದೆ.

1995ರ ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಕಾಯಿದೆಯ ಮೊದಲಿಗೆ 1992ರಲ್ಲಿ ಜಾರಿಗೆ ಬಂದ ಮತ್ತೊಂದು ಪ್ರಮುಖ ಪ್ರಯತ್ನವೆಂದರೆ, **ಭಾರತದ ಪುನರ್ವಸತಿ ಕೌನ್ಸಿಲ್‌ನ(Rehabilitation Council of India)** ಸ್ಥಾಪನೆ. ಇದನ್ನು 1986ರಲ್ಲಿ ಒಂದು ನೋಂದಣಿಯಾದ ಸಂಸ್ಥೆಯಾಗಿ ಸ್ಥಾಪಿಸಲಾಗಿದ್ದು, RCI ಕಾಯಿದೆಯ ಪ್ರಕಾರ ಜೂನ್ 22, 1993ರಂದು ಇದು ಒಂದು ಶಾಸನಬದ್ಧ ಸಂಸ್ಥೆಯಾಯಿತು. ಇದು ಮುಂದೆ ಹೆಚ್ಚು ಸಮಗ್ರವಾಗುವಂತೆ, 2000ದಲ್ಲಿ ಪಾರ್ಲಿಮೆಂಟ್‌ನಿಂದ ಮಾರ್ಪಾಡುಗೊಂಡಿತು. ಇದಕ್ಕೆ, ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಸೇವೆಗಳ ನಿಯಂತ್ರಣ ಮತ್ತು ಮೇಲ್ವಿಚಾರಣೆ, ಪಠ್ಯವಸ್ತುವಿನ ಪ್ರಮಾಣೀಕರಣ, ಪುನರ್ವಸತಿ ಮತ್ತು ವಿಶೇಷ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಎಲ್ಲ ಅರ್ಹ ವೃತ್ತಿಪರರು ಮತ್ತು ಸಿಬ್ಬಂದಿಗಳ ಕೇಂದ್ರೀಕೃತ ಪುನರ್ವಸತಿ ದಾಖಲೆಯ ನಿರ್ವಹಣೆಗೆ ಸಂಬಂಧಿಸಿದಂತೆ ಆಜ್ಞೆ ಹೊರಡಿಸುವ ಅವಕಾಶವಿದೆ.

**ನ್ಯಾಷನಲ್ ಟ್ರಸ್ಟ್ ಆಕ್ಟ್, 1999** (ಸ್ವಲೀನತೆ, ಸೆರೆಬ್ರಲ್ ಪಾಲ್ಸಿ, ಬುದ್ಧಿಮಾಂದ್ಯತೆ ಮತ್ತು ಬಹುವಿಧ ಅಸಾಮರ್ಥ್ಯತೆಯುಳ್ಳವರಿಗಾಗಿ) ಕಾರಣದಿಂದಾಗಿ ರಾಷ್ಟ್ರೀಯ ಟ್ರಸ್ಟ್ ಅಥವಾ ನ್ಯಾಷನಲ್ ಟ್ರಸ್ಟ್ ಮೂಡಿಬಂದಿತು. ಅಸಾಮರ್ಥ್ಯವುಳ್ಳವರು ಸಾಧ್ಯವಿರುವಷ್ಟು ಸ್ವತಂತ್ರವಾಗಿ ಸಮುದಾಯಕ್ಕೆ ಹತ್ತಿರವಾಗಿ ಬದುಕುವಂತೆ ಸಶಕ್ತರಾಗಿಸುವುದು ಇದರ ಉದ್ದೇಶವಾಗಿದ್ದಿತು. ಇದರ ಉದ್ದೇಶಗಳ ಸಾಧನೆಗೆ ಸಹಾಯಾಮಾಡಲು ಜಿಲ್ಲಾವಾರು ಸಮಿತಿಗಳೂ ಮತ್ತು ನೋಂದಾಯಿತ ಪೋಷಕ ಸಂಘಗಳೂ ಸರ್ಕಾರೇತರ ಸಂಸ್ಥೆಗಳೂ ಇವೆ.

**ಮಾನಸಿಕ ಸ್ವಾಸ್ಥ್ಯ ಕಾಯಿದೆ(1987)**ಯು ಮಾನಸಿಕ ಕಾಯಿಲೆ ಇರುವ ವ್ಯಕ್ತಿಗಳನ್ನು ಬುದ್ಧಿಮಾಂದ್ಯ ವ್ಯಕ್ತಿಗಳಿಂದ ಸ್ಪಷ್ಟವಾಗಿ ಬೇರ್ಪಡಿಸಿದೆ. ಇದು ಪ್ರಮುಖವಾಗಿ ಮಾನಸಿಕವಾಗಿ ಅಸ್ವಸ್ಥವಾಗಿರುವವರ ಚಿಕಿತ್ಸೆ ಮತ್ತು ಸಾಂಸ್ಥೀಕರಣವನ್ನು ಮತ್ತು ಅವರ ಆಸ್ತಿಗಳ ರಕ್ಷಣೆ ಮತ್ತು ನಿರ್ವಹಣೆಯನ್ನು ಗಮನಿಸಿಕೊಳ್ಳುತ್ತದೆ.

2006ರಲ್ಲಿ **ಅಸಾಮರ್ಥ್ಯವುಳ್ಳ ವ್ಯಕ್ತಿಗಳಿಗಾಗಿ ರಾಷ್ಟ್ರೀಯ ನೀತಿ (National Policy for Persons with Disabilities)**ಯನ್ನು ರೂಪಿಸಲಾಯಿತು. ಇದು ಅಸಾಮರ್ಥ್ಯವುಳ್ಳ ವ್ಯಕ್ತಿಗಳ ದೈಹಿಕ, ಶೈಕ್ಷಣಿಕ ಮತ್ತು ಆರ್ಥಿಕ ಪುನರ್ವಸತಿಯನ್ನು ಗಮನಿಸಿಕೊಳ್ಳುತ್ತದೆ. ಇದರ ಜೊತೆಗೆ ಅಸಾಮರ್ಥ್ಯವುಳ್ಳ ಹೆಂಗಸರ ಮತ್ತು ಮಕ್ಕಳ ಪುನರ್ವಸತಿ, ಅಡ್ಡಿಮುಕ್ತ ಪರಿಸರ, ಸಾಮಾಜಿಕ ಸುರಕ್ಷತೆ, ಸಂಶೋಧನೆ ಇತ್ಯಾದಿ ಅಂಶಗಳನ್ನೂ ಗಣನೆಗೆ ತೆಗೆದುಕೊಳ್ಳುತ್ತದೆ. ಅಸಾಮರ್ಥ್ಯವುಳ್ಳ ವ್ಯಕ್ತಿಗಳು ರಾಷ್ಟ್ರಕ್ಕೆ ಮೌಲಿಕವಾದ ಮಾನವ ಸಂಪನ್ಮೂಲ.

ಹಾಗಾಗಿ ಅವರಿಗೆ ಸಮಾನ ಅವಕಾಶ, ಹಕ್ಕುಗಳ ರಕ್ಷಣೆ ಮತ್ತು ಸಮುದಾಯದಲ್ಲಿ ಸಂಪೂರ್ಣ ಅವಕಾಶಗಳಿಗೆ ಸನ್ನಿವೇಶಗಳನ್ನೊದಗಿಸಬೇಕು ಎಂಬುದನ್ನು ಈ ರಾಷ್ಟ್ರೀಯ ನೀತಿ ಗುರುತಿಸುತ್ತದೆ. ಈ ನೀತಿಯ ಪ್ರಮುಖ ಅಂಶಗಳು ಕೆಳಕಂಡಂತಿವೆ:

ಅಸಾಮರ್ಥ್ಯ ಉಂಟಾಗದಂತೆ ತಡೆಗಟ್ಟುವಿಕೆ : ಬಹಳಷ್ಟು ಸನ್ನಿವೇಶದಲ್ಲಿ ಅಸಾಮರ್ಥ್ಯವಾಗದಂತೆ ತಡೆಯುಬಹುದಾದ್ದರಿಂದ, ಇದರ ಕುರಿತ ನೀತಿಯು ಹೆಚ್ಚು ಪ್ರಾಮುಖ್ಯತೆ ನೀಡುತ್ತದೆ. ಅಸಾಮರ್ಥ್ಯಗಳನ್ನುಂಟುಮಾಡುವ ರೋಗಗಳ ನಿವಾರಣೆ ಮತ್ತು ನಿವಾರಣೆಗಾಗಿ ಗರ್ಭಿಣಿ ತಾಯಿಯರು ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತ ಅರಿವು ಮೂಡಿಸುವುದು ಇತ್ಯಾದಿ ಕಾರ್ಯಕ್ರಮಗಳನ್ನು ಇದು ಪ್ರೋತ್ಸಾಹಿಸುತ್ತದೆ.

ಪುನರ್ವಸತಿ ಕ್ರಮಗಳು: ಇದನ್ನು ಮೂರು ವಿವಿಧ ಗುಂಪುಗಳಲ್ಲಿ ವರ್ಗೀಕರಿಸಬಹುದು: ಅಸಾಮರ್ಥ್ಯವುಂಟಾಗದಂತೆ ಪೂರ್ವದಲ್ಲಿಯೇ ತೆಗೆದುಕೊಳ್ಳಬಹುದಾದ ಮುಂಜಾಗ್ರತಾ ಕ್ರಮಗಳು, ಸಮಾಲೋಚನೆ, ವೈದ್ಯಕೀಯ ಕ್ರಮಗಳು, ಅಗತ್ಯವಾದ ಉಪಕರಣಗಳನ್ನು ಒದಗಿಸುವಿಕೆ ಇತ್ಯಾದಿಗಳನ್ನೊಳಗೊಂಡ ದೈಹಿಕ ಪುನರ್ವಸತಿ. ಇದು ಪುನರ್ವಸತಿ ವೃತ್ತಿಪರರನ್ನು ಸಿದ್ಧಗೊಳಿಸುವುದನ್ನೂ ಒಳಗೊಳ್ಳುತ್ತದೆ. ಎರಡನೆಯದು ಔದ್ಯೋಗಿಕ ಶಿಕ್ಷಣವನ್ನೂ ಒಳಗೊಂಡ ಶೈಕ್ಷಣಿಕ ಪುನರ್ವಸತಿ ಮತ್ತು ಮೂರನೆಯದಾಗಿ ಸಮಾಜದಲ್ಲಿ ಗೌರವಯುತ ಬದುಕಿಗಾಗಿ ಆರ್ಥಿಕ ಪುನರ್ವಸತಿ.

ಅಸಾಮರ್ಥ್ಯವುಳ್ಳ ಮಹಿಳೆಯರಿಗಾಗಿ ನಿಯಮಗಳು: ಇಂತಹ ಮಹಿಳೆಯರಿಗೆ ಶೋಷಣೆ ಮತ್ತು ನಿಂದನೆಯ ವಿರುದ್ಧ ರಕ್ಷಣೆ ಅಗತ್ಯ. ಮಹಿಳೆಯರ ಶಿಕ್ಷಣ, ಉದ್ಯೋಗ ಮತ್ತು ಇತರ ಪುನರ್ವಸತಿಗೆ ಕಾರ್ಯಕ್ರಮಗಳನ್ನು ಯೋಜಿಸುವುದು, ಪರಿತ್ಯಕ್ತ ಮಹಿಳೆಯರ ಪುನರ್ವಸತಿ, ವಸತಿ ಇತ್ಯಾದಿಗಳು ಈ ನೀತಿಯ ಉದ್ದೇಶ.

ಅಸಾಮರ್ಥ್ಯವುಳ್ಳ ಮಕ್ಕಳಿಗಾಗಿ ನಿಯಮಗಳು: ಇವರು ಅತಿ ಹೆಚ್ಚಿನ ಅಪಾಯಕ್ಕೆ ಒಳಗಾಗುವವರು. ಹಾಗಾಗಿ ಇವರಿಗೆ ವಿಶೇಷ ಗಮನ ಅಗತ್ಯ. ಈ ನೀತಿಯು ಇವರ ರಕ್ಷಣೆ, ಗಮನ ಮತ್ತು ಭದ್ರತೆಗಳ ಹಕ್ಕನ್ನು ಖಚಿತಪಡಿಸುತ್ತದೆ. ಮಕ್ಕಳು ತಮ್ಮ ಹಕ್ಕುಗಳನ್ನು ಚಲಾಯಿಸಲು ಸಾಧ್ಯವಾಗುವ, ಸಮಾನ ಅವಕಾಶ ಮತ್ತು ಸಂಪೂರ್ಣ ಭಾಗವಹಿಕೆಯನ್ನು ಸಾಧ್ಯವಾಗಿಸುವ ಸನ್ನಿವೇಶವನ್ನು ಸೃಷ್ಟಿಸುವುದರ ಮೂಲಕ ಗೌರವ ಮತ್ತು ಸಮಾನತೆಯೊಂದಿಗಿನ  ಬೆಳವಣಿಗೆಯನ್ನು ಖಚಿತಪಡಿಸುತ್ತದೆ. ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ,ಸಚಿವಾಲಯವು ನಿರಂತರ ಉಪ ಸಚಿವಾಲಯಗಳೊಂದಿಗಿನ ಸಂಪರ್ಕಗಳ ಮೂಲಕ ಈ ರಾಷ್ಟ್ರೀಯ ನೀತಿಯ ವಿವಿಧ ಪ್ರಾವಧಾನಗಳ ಅಳವಡಿಕೆಯ ಪ್ರಗತಿಯನ್ನು ಗಮನಿಸಿಕೊಳ್ಳುತ್ತದೆ.

ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಕಾಯಿದೆಯ 26ನೇ ಭಾಗವು ಭಾರತವು ಅಸಾಮರ್ಥ್ಯವುಳ್ಳ ಮಕ್ಕಳಿಗೆ 18ವರ್ಷಗಳವರೆಗೆ ಮುಕ್ತ ಶಿಕ್ಷಣ ನೀಡಬೇಕೆಂಬುದನ್ನು ಸ್ಪಷ್ಟಪಡಿಸುತ್ತದೆ. ಸಾಮಾನ್ಯ ಮಕ್ಕಳು 14ವರ್ಷಗಳಲ್ಲಿ ಪಡೆಯುವ ಸಾಮರ್ಥ್ಯಗಳನ್ನು ಈ ಮಕ್ಕಳು ಪಡೆಯಲು ಹೆಚ್ಚುವರಿ ನಾಲ್ಕು ವರ್ಷಗಳ ಅವಕಾಶವನ್ನು ಸೃಷ್ಟಿಸಲಾಗಿದೆ. 86ನೇ ತಿದ್ದುಪಡಿಯ ಪ್ರಾವಧಾನಗಳು ಅಸಾಮರ್ಥ್ಯವುಳ್ಳ ಮಕ್ಕಳಿಗೆ ಹೆಚ್ಚು ಸಮರ್ಪಕವಾದವು. ಅಸಾಮರ್ಥ್ಯವ್ಯಕ್ತಿಗಳ ಕಾಯಿದೆಯ 5ನೇ ಅಧ್ಯಾಯವು ವಯೋಮಾನಕ್ಕನುಗುಣವಾದ ಪರಿಸರದಲ್ಲಿ 18ನೇ ವಯಸ್ಸಿನವರೆಗೆ ಮುಕ್ತ ಶಿಕ್ಷಣವನ್ನು ಖಾತರಿಮಾಡುತ್ತದಲ್ಲದೆ ವಿಶೇಷ ಅವಕಾಶಗಳೊಂದಿಗಿನ ಸಮನ್ವಯ ಶಿಕ್ಷಣವನ್ನು ನೀಡುವುದು ಆಯಾ ಸರ್ಕಾರಗಳ ಕರ್ತವ್ಯ ಎಂದು ಹೇಳುತ್ತದೆ. ಶಿಕ್ಷಣ ಹಕ್ಕು ಕಾಯಿದೆ(2009)ಯೂ 14ನೇ ವಯೋಮಾನದವರೆಗಿನ ಎಲ್ಲ ಮಕ್ಕಳಿಗೂ ಶಿಕ್ಷಣ ನೀಡುವುದನ್ನು ಕಡ್ಡಾಯವಾಗಿಸಿದೆ. ಇದು ರಾಜ್ಯಗಳ

ಗಂಭೀರವಾದ ಜವಾಬ್ದಾರಿಯಾಗಿದ್ದು, ಸಮರ್ಪಕ ಪಠ್ಯಕ್ರಮ ವ್ಯತ್ಯಾಸಗಳೊಂದಿಗೆ, ಅಧ್ಯಾಪಕರನ್ನು ತರಬೇತಿಗೊಳಿಸುವ ಅಗತ್ಯವನ್ನು ಉಂಟುಮಾಡಿದೆ.

**ಅಂತರರಾಷ್ಟ್ರೀಯ ಮಟ್ಟದ ನೀತಿ/ನಿಯಮಗಳ ನೋಟ :**

**ಅಸಾಮರ್ಥ್ಯವಿರುವ ವ್ಯಕ್ತಿಗಳನ್ನು ಕುರಿತ ಜಾಗತಿಕ ಕಾರ್ಯಯೋಜನೆ 1982**

ಅಂತರರಾಷ್ಟ್ರೀಯ ದುರ್ಬಲರ ವರ್ಷದ ಫಲಶ್ರುತಿ ಎಂದರೆ ಅಸಾಮರ್ಥ್ಯವಿರುವ ವ್ಯಕ್ತಿಗಳ ಕುರಿತಾದ ಜಾಗತಿಕವಾದ ಕಾರ್ಯಯೋಜನೆ. ಇದನ್ನು 3ನೇ ಡಿಸೆಂಬರ್ 1982ರಂದು ಸಂಯುಕ್ತ ರಾಷ್ಟ್ರಗಳ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಿಕೊಳ್ಳಲಾಯಿತು. ಈ ಕಾರ್ಯಯೋಜನೆಯು ಅಸಾಮರ್ಥ್ಯಗಳನ್ನು ತಡೆಗಟ್ಟುವಿಕೆಗೆ ಕ್ರಮಗಳೊಂದಿಗೆ, ಅಸಾಮರ್ಥ್ಯವುಳ್ಳವರಿಗೆ ಪುನರ್ವಸತಿ ಮತ್ತು ಸಮಾನಾವಕಾಶಗಳನ್ನು ವಿಸ್ತರಿಸಿ ಸಾಮಾಜಿಕ ಬದುಕಿನಲ್ಲಿ ಸಂಪೂರ್ಣ ಭಾಗವಹಿಕೆಯ ಮೂಲಕ ರಾಷ್ಟ್ರೀಯ ಬೆಳವಣಿಗೆಗೆ ಅನುವು ಮಾಡಿಕೊಡುವ ಉದ್ದೇಶದಿಂದ ಮೂಡಿಬಂದುದು. ಇದು ಅಸಾಮರ್ಥ್ಯವನ್ನು ಮಾನವ ಹಕ್ಕುಗಳ ದೃಷ್ಟಿಕೋನದಿಂದ ಪರಿಗಣಿಸುವ ಉಪಕ್ರಮದ ಅಗತ್ಯವನ್ನೂ ಮುಂದಿಟ್ಟಿದೆ. ವಿಶ್ವ ಆರೋಗ್ಯ ಸಂಸ್ಥೆಯು ಆರೋಗ್ಯ ಅನುಭವದ ಸನ್ನಿವೇಶದಲ್ಲಿ ಅಸಾಮರ್ಥ್ಯತೆಗೆ ಸಂಬಂಧಿಸಿದ ಕೆಲವು ವ್ಯಾಖ್ಯೆಗಳನ್ನು ಮುಂದಿಟ್ಟಿದೆ. ಈ ವ್ಯಾಖ್ಯೆಗಳು ಈ ಕಾರ್ಯಯೋಜನೆಯ ಒಟ್ಟು ಅಂಶಗಳನ್ನು ಅರಿತುಕೊಳ್ಳಲು ಮುಖ್ಯವಾಗುತ್ತದೆ:

- **ದುರ್ಬಲತೆ(Impairment)** : ಮನೋವೈಜ್ಞಾನಿಕ, ಶಾರೀರಿಕವಾದ ಅಥವಾ ಅಂಗರಚನಾತ್ಮಕವಾದ ಹಾಗೂ ಕ್ರಿಯಾತ್ಮಕವಾದ ಯಾವುದೇ ಹಾನಿ ಅಥವಾ ಅಸಹಜತೆ.
- **ಅಸಾಮರ್ಥ್ಯ(Disability)** : ವ್ಯಕ್ತಿಸಹಜವಾಗಿ ಸಾಮಾನ್ಯವೆಂದು ಪರಿಗಣಿಸುವ ರೀತಿಯಲ್ಲಿ ಒಂದು ಕೆಲಸವನ್ನು ಮಾಡಲು ಅಗತ್ಯವಾದ ಸಾಮರ್ಥ್ಯದಲ್ಲಿನ ಕೊರತೆ ಅಥವಾ ಅಡ್ಡಿ(ದುರ್ಬಲತೆಯ ಕಾರಣದಿಂದಾಗಿ)
- **ಅಂಗವಿಕಲತೆ (Handicap)** : ಒಬ್ಬ ವ್ಯಕ್ತಿಗೆ, ದುರ್ಬಲತೆ ಅಥವಾ ಅಸಾಮರ್ಥ್ಯದ ಕಾರಣದಿಂದಾಗಿ, ವಯೋಮಾನ, ಲಿಂಗತ್ವ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳಿಗನುಗುಣವಾಗಿ ಆ ವ್ಯಕ್ತಿಗೆ ಸಾಮಾನ್ಯವೆಂದು ಪರಿಗಣಿತವಾಗಿರುವ ಪಾತ್ರವನ್ನು ನಿರ್ವಹಿಸಲು ತಡೆಯಾಗುವ ಕೊರತೆ.

ಹಾಗಾಗಿ ಅಂಗವಿಕಲತೆ ಎಂಬುದು ಅಸಾಮರ್ಥ್ಯವಿರುವ ವ್ಯಕ್ತಿ ಮತ್ತು ಅವರ ಪರಿಸರದ ಸಂಬಂಧವನ್ನು ಕುರಿತ ಕ್ರಿಯೆ, ಸಮುದಾಯದ ಬದುಕಿನಲ್ಲಿ ಇತರರ ಮಟ್ಟದಲ್ಲಿ ಭಾಗವಹಿಸಲು ಒದಗಿರುವ ಅವಕಾಶಗಳ ಕೊರತೆ ಅಥವಾ ಮಿತಿ ಎಂದು ಹೇಳಬಹುದು.

ಈ ಕಾರ್ಯಯೋಜನೆಯಲ್ಲಿ ಮೂರು ಅಂಶಗಳನ್ನು ಗಮನಿಸಿಕೊಳ್ಳಲಾಗಿದೆ. ತಡೆಗಟ್ಟುವಿಕೆ, ಪುನರ್ವಸತಿ ಮತ್ತು ಸಮಾನಾವಕಾಶಗಳನ್ನು ಒದಗಿಸುವಿಕೆ. ತಡೆಗಟ್ಟುವಿಕೆ ಎಂದರೆ ಬೌದ್ಧಿಕ, ದೈಹಿಕ ಅಥವಾ ಐಂದ್ರಿಯಾತ್ಮಕವಾದ ದುರ್ಬಲತೆಗಳನ್ನು ತಡೆಗಟ್ಟುವ ಅಥವಾ ದುರ್ಬಲತೆಗಳು ಒದಗಿಬಂದಾಗ ಅವುಗಳನ್ನು ಋಣಾತ್ಮಕ ದೈಹಿಕ, ಮನೋವೈಜ್ಞಾನಿಕ ಅಥವಾ ಸಾಮಾಜಿಕ ಪರಿಣಾಮಗಳಿಂದ ತಡೆಗಟ್ಟುವ ಕ್ರಮಗಳು.

ಪುನರ್ವಸತಿ ಎಂದರೆ ದುರ್ಬಲವ್ಯಕ್ತಿಯನ್ನು ಗರಿಷ್ಠ ಮಟ್ಟದ ಬೌದ್ಧಿಕ, ದೈಹಿಕ ಅಥವಾ/ಮತ್ತು ಸಾಮಾಜಿಕ ಕ್ರಿಯಾಶೀಲತೆಯ ಮಟ್ಟಕ್ಕೆ ತಲುಪಲು ಸಮರ್ಥರಾಗಿಸುವ ಗುರಿ ನಿರ್ದೇಶಿತವಾದ ಅಥವಾ ಕಾಲನಿಯತವಾದ

ಪ್ರಕ್ರಿಯೆ. ಇದರ ಮೂಲಕ ಅವರ ಬದುಕನ್ನು ಬದಲಿಸಿಕೊಳ್ಳಲು ಸಾಧನಗಳನ್ನು ಒದಗಿಸಿಕೊಡುವ ಉದ್ದೇಶವಿದು. ಒಂದು ಕ್ರಿಯೆಯ ನಷ್ಟವನ್ನು ಅಥವಾ ಕ್ರಿಯಾತ್ಮಕ ಕೊರತೆಯನ್ನು ತುಂಬಿಕೊಡಲು ಅಗತ್ಯವಾದ ಕ್ರಮಗಳನ್ನೂ (ಉದಾಹರಣೆಗೆ ತಂತ್ರಜ್ಞಾನಾತ್ಮಕವಾದ ಉಪಕರಣವನ್ನು ಒದಗಿಸಿಕೊಡುವುದು) ಸಾಮಾಜಿಕ ಹೊಂದಾಣಿಕೆ ಅಥವಾ ಮರುಹೊಂದಾಣಿಕೆಗಾಗಿ ಅಗತ್ಯವಾದ ಕ್ರಮಗಳ ಕೈಗೊಳ್ಳುವಿಕೆಯನ್ನೂ ಇದು ಒಳಗೊಳ್ಳುತ್ತದೆ. ಅವಕಾಶಗಳ ಸಮಾನತೆ ಎಂದರೆ ಸಮಾಜದ ಸಾಮಾನ್ಯ ವ್ಯವಸ್ಥೆಯ ಮೂಲಕ ಭೌತಿಕ ಮತ್ತು ಸಾಂಸ್ಕೃತಿಕ ಪರಿಸರ, ಮನೆ ಮತ್ತು ಸಾರಿಗೆ, ಸಾಮಾಜಿಕ ಮತ್ತು ಆರೋಗ್ಯ ಸೇವೆಗಳು, ಶೈಕ್ಷಣಿಕ ಹಾಗೂ ಉದ್ಯೋಗ ಅವಕಾಶಗಳು, ಸಾಂಸ್ಕೃತಿಕ ಮತ್ತು ಸಾಮಾಜಿಕ ಬದುಕು, ಕ್ರೀಡೆ ಮತ್ತು ಮನರಂಜನಾ ಸೌಕರ್ಯಗಳು ಇವುಗಳಿಗೆ ಎಲ್ಲರಿಗೂ ಸಮಾನ ಅವಕಾಶವನ್ನು ಒದಗಿಸಿಕೊಡುವ ಪ್ರಕ್ರಿಯೆ.

ಈ ಕಾರ್ಯಯೋಜನೆಯು ಕೆಲವು ಪ್ರಮುಖವಾದ ಅಂಶಗಳನ್ನು ಕಾರ್ಯಯೋಜನೆಯಲ್ಲಿ ಒಳಪಡಿಸಿ ಜಾಗತಿಕ ಸಮಾಜದ ಮುಂದೆ ಇಟ್ಟಿದ್ದು ಇವುಗಳನ್ನು ಸಂಯುಕ್ತ ರಾಷ್ಟ್ರಗಳು ಅಂಗೀಕರಿಸಿವೆ.

- ಸಮಾಜಗಳು ಕೆಲವೊಮ್ಮೆ ದೈಹಿಕವಾಗಿ ಮಾನಸಿಕವಾಗಿ ಎಲ್ಲವೂ ಸಮಸ್ಥಿತಿಯಲ್ಲಿರುವವರ ಅಗತ್ಯಗಳನ್ನು ಪೂರೈಸುತ್ತವೆ. ನಿವಾರಣಾತ್ಮಕವಾದ ಕ್ರಮಗಳನ್ನು ಕೈಗೊಂಡಿದ್ದರೂ ದುರ್ಬಲರೂ ಅಸಾಮರ್ಥ್ಯವುಳ್ಳವರೂ ಅಂಗವಿಕಲರೂ ಸಮಾಜದಲ್ಲಿರುತ್ತಾರೆ. ಅವರ ಭಾಗವಹಿಕೆಗೆ ಅಡ್ಡಿಯಾಗುವ ಅಂಶಗಳನ್ನು ನಿವಾರಿಸಿ ಅವರ ಬೆಳವಣಿಗೆಗೆ ಅವಕಾಶಮಾಡಿಕೊಡಬೇಕಾದುದು ಎಲ್ಲ ಸಮುದಾಯಗಳ ಕರ್ತವ್ಯ. ಹಾಗಾಗಿ ಸಾಧ್ಯವಾಗುವ ಸನ್ನಿವೇಶಗಳಲ್ಲೆಲ್ಲಾ ಶಿಕ್ಷಣವು ಸಾಮಾನ್ಯ ಶಾಲಾ ವ್ಯವಸ್ಥೆಯಲ್ಲಿ ಸಾಗಬೇಕು. ಉದ್ಯೋಗಾವಕಾಶಗಳೂ ತೆರೆದ ವ್ಯವಸ್ಥೆಯಲ್ಲಿದ್ದು, ಜನಸಾಮಾನ್ಯರಿಗೆ ಒದಗಿಸುವ ವಸತಿಗೆ ಎಲ್ಲರಿಗೂ ಅವಕಾಶವಿರಬೇಕು. ವಿಕಾಸಾತ್ಮಕ ಕಾರ್ಯಕ್ರಮಗಳ ಪ್ರಯೋಜನಗಳು ಅಸಾಮರ್ಥ್ಯವಿರುವವರನ್ನೂ ತಲುಪುವಂತೆ ನೋಡಿಕೊಳ್ಳುವುದು ಎಲ್ಲ ಸರ್ಕಾರಗಳ ಜವಾಬ್ದಾರಿ. ಎಲ್ಲ ಸಮುದಾಯದ ಸಾಮಾನ್ಯ ಯೋಜನಾ ಪ್ರಕ್ರಿಯೆ ಮತ್ತು ಆಡಳಿತಾತ್ಮಕ ರಚನೆಯು ಈ ಅಂಶಗಳನ್ನು ಒಡಮೂಡಿಸಿಕೊಳ್ಳಬೇಕು. ಅಸಾಮರ್ಥ್ಯವಿರುವವರಿಗೆ ಅಗತ್ಯವಾದ ಹೆಚ್ಚುವರಿ ಸೇವೆಗಳು ಬಹಳಮಟ್ಟಿಗೆ ರಾಷ್ಟ್ರದ ಸಾಮಾನ್ಯ ಸೇವೆಗಳ ಭಾಗವಾಗಿರಬೇಕು.
- ಮೇಲಿನ ಅಂಶಗಳು ಕೇವಲ ಸರ್ಕಾರಗಳಿಗೆ ಮಾತ್ರ ಅನ್ವಯವಾಗುವಂತಹುದಲ್ಲ. ಯಾವುದೇ ರೀತಿಯ ಸಂಸ್ಥೆಯ ಪ್ರತಿನಿಧಿಯಾದರೂ ಅಸಾಮರ್ಥ್ಯವುಳ್ಳವರಿಗೆ ಅವಕಾಶಗಳನ್ನೊದಗಿಸಬೇಕು. ಇದು ವಿವಿಧ ಹಂತಗಳಲ್ಲಿನ ಸಾರ್ವಜನಿಕ ನಿಯೋಗಗಳಿಗೂ ಸರ್ಕಾರೇತರ ಸಂಸ್ಥೆಗಳಿಗೂ ಇತರ ಸಂಸ್ಥೆಗಳಿಗೂ ಖಾಸಗಿ ವ್ಯಕ್ತಿಗಳಿಗೂ ಅನ್ವಯಿಸುತ್ತದೆ. ಅಂತರರಾಷ್ಟ್ರೀಯ ಮಟ್ಟದಲ್ಲೂ ಅನ್ವಯವಾಗುವ ಅಂಶವಿದು.
- ಮನೆ ಮತ್ತು ಸಮುದಾಯದಲ್ಲಿ ಸಹಜವಾಗಿ ಬದುಕಲು ಸಮುದಾಯ ಬೆಂಬಲ ಸೇವೆಗಳ, ಉಪಕರಣಗಳ ಅಗತ್ಯವಿರುವ ಶಾಶ್ವತ ಅಸಾಮರ್ಥ್ಯವುಳ್ಳ ವ್ಯಕ್ತಿಗಳಿಗೂ ಈ ಮೇಲಿನ ಸೇವೆಗಳನ್ನು ಒದಗಿಸಬೇಕು. ಅಸಾಮರ್ಥ್ಯವುಳ್ಳ ವ್ಯಕ್ತಿಗಳಿಗೆ ಬೆಂಬಲವಾಗಿ ಬದುಕುತ್ತಿರುವ ವ್ಯಕ್ತಿಗಳೂ ಸಮರ್ಪಕ ವಿಶ್ರಾಂತಿ ಮತ್ತು ವಿರಾಮಗಳೊಂದಿಗೆ ಅವರ ಅಗತ್ಯಗಳನ್ನು ಪೂರೈಸಿಕೊಳ್ಳಲು ಬೆಂಬಲ ಸೇವೆಗಳನ್ನು ಪಡೆಯಬೇಕು.

- ಪ್ರತಿ ವ್ಯಕ್ತಿಯ ಅಗತ್ಯವನ್ನೂ ಸಮಪ್ರಮಾಣದಲ್ಲಿ ಗಣನೆಗೆ ತೆಗೆದುಕೊಳ್ಳಬೇಕು ಎಂಬುದು ಅಸಾಮರ್ಥ್ಯವುಳ್ಳವರಿಗೆ ಮತ್ತು ಇಲ್ಲದವರಿಗೆ ಸಮಾನ ಹಕ್ಕುಗಳು ಎಂಬ ತತ್ವದ ಅರ್ಥ. ಸಮಾಜಗಳಲ್ಲಿನ ಯೋಜನೆಗೆ ಈ ಅಗತ್ಯಗಳನ್ನೇ ಮೂಲವಾಗಿಟ್ಟುಕೊಳ್ಳಬೇಕು ಮತ್ತು ಎಲ್ಲ ವ್ಯಕ್ತಿಗಳಿಗೂ ಭಾಗವಹಿಕೆಗೆ ಸಮಾನ ಅವಕಾಶ ಒದಗಿ ಬರುವಂತೆ ಸಂಪನ್ಮೂಲಗಳನ್ನು ವಿತರಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಎಲ್ಲ ಸಮುದಾಯ ಸೇವೆಗಳೂ ಅಸಾಮರ್ಥ್ಯವುಳ್ಳವರಿಗೂ ಉಪಲಬ್ಧವಿವೆ ಎಂಬುದನ್ನು ಅಸಾಮರ್ಥ್ಯ ನೀತಿಯು ಸ್ಪಷ್ಟಪಡಿಸಿಕೊಳ್ಳಬೇಕು.
- ಅಸಾಮರ್ಥ್ಯವಿರುವ ವ್ಯಕ್ತಿಗಳಿಗೆ ಸಮಾನ ಹಕ್ಕುಗಳಂತೆ ಸಮಾನ ಕರ್ತವ್ಯಗಳೂ ಇವೆ. ಸಮಾಜದ ಕಟ್ಟುವಿಕೆಯಲ್ಲಿ ಅವರ ಪಾತ್ರವಿದೆ. ಅಸಾಮರ್ಥ್ಯವಿರುವ ವ್ಯಕ್ತಿಗಳು ಸಮಾಜಕ್ಕೆ ಕೊಡುವ ಕೊಡುಗೆಯ ಮಟ್ಟವನ್ನು ಹೆಚ್ಚಿಸುವುದು ಸಮಾಜಗಳ ಕೆಲಸ. ಹೀಗೆ ಮಾಡುವಲ್ಲಿ ಅವರ ಮಾನವ ಸಂಪನ್ಮೂಲವನ್ನು ಸಮಾಜದ ರಚನಾತ್ಮಕ ಬದಲಾವಣೆಗೆ ಬಳಸಿಕೊಳ್ಳಬೇಕು. ಅಂದರೆ, ಅಸಾಮರ್ಥ್ಯವಿರುವ ಯುವಸಮುದಾಯಕ್ಕೆ ಉತ್ತಮ ಉದ್ಯೋಗಾವಕಾಶಗಳನ್ನು ನೀಡಬೇಕೇ ವಿನಾ ಪೂರ್ವ ಸೇವಾ ನಿವೃತ್ತಿ ಪಿಂಚಣಿ ಅಥವಾ ಸಾರ್ವತ್ರಿಕ ಸೇವೆಗಳನ್ನಲ್ಲ.
- ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಸಂಘಟನೆಗಳು ವಿಶ್ವದಾದ್ಯಂತ ಮೊದಲಾಗಿವೆ. ಅವರು ತಮ್ಮ ಹಕ್ಕುಗಳಿಗಾಗಿ ಹೋರಾಡಲು ಮುಂದಾಗಿದ್ದಾರೆ. ಅವರಿಗೆ ಸಮಾಜದಲ್ಲಿ ದನಿಯೆತ್ತುವ, ಅವರ ಅಗತ್ಯಗಳನ್ನು ಪರಿಗಣಿಸುವ, ಅವರ ಆದ್ಯತೆಗಳನ್ನು ಅಭಿವ್ಯಕ್ತಿಸುವ, ಸೇವೆಗಳನ್ನು ಮೌಲ್ಯಮಾಪನ ಮಾಡುವ, ಬದಲಾವಣೆಗಳನ್ನು ತರುವ, ಸಾರ್ವಜನಿಕ ಜನಜಾಗೃತಿಯನ್ನುಂಟುಮಾಡುವ ಬೇಡಿಕೆಗಳನ್ನು ಅವರು ಮುಂದಿಡುತ್ತಿದ್ದಾರೆ. ಸ್ವ ವಿಕಾಸದ ಸಾಧನವಾಗಿ ಈ ಸಂಘಟನೆಗಳು ಸಂಘಟನಾ ಸಾಮರ್ಥ್ಯ, ಪರಸ್ಪರ ಬೆಂಬಲ, ಮಾಹಿತಿ ಹಂಚಿಕೆ ಮತ್ತು ಔದ್ಯೋಗಿಕ ಕೌಶಲಗಳು ಮತ್ತು ಅವಕಾಶಗಳಿಗೆ ದಾರಿಮಾಡಿಕೊಡುತ್ತಿವೆ. ಅವರ ಸಮಭಾಗಿತ್ವದ ಪ್ರಾಮುಖ್ಯತೆಯ ಹಿನ್ನೆಲೆಯಲ್ಲಿ ಅವರ ಬೆಳವಣಿಗೆಯನ್ನು ಪ್ರೋತ್ಸಾಹಿಸಬೇಕು.
- ಸಮಾಜಗಳು ಅಸಾಮರ್ಥ್ಯವಿರುವ ವ್ಯಕ್ತಿಗಳ ಸ್ಥಿತಿಯನ್ನು ಉತ್ತಮಪಡಿಸಲು ಅಗತ್ಯವಾದ ಮಾಹಿತಿಯನ್ನು ತಯಾರಿಸಿ ಪ್ರಸಾರ ಮಾಡಬೇಕು. ಎಲ್ಲ ಸಾರ್ವಜನಿಕ ಮಾಧ್ಯಮಗಳ ಸಹಕಾರವನ್ನು ಪಡೆದುಕೊಳ್ಳಬೇಕು. ಇದು ಅಸಾಮರ್ಥ್ಯವಿರುವವರ ಹಕ್ಕುಗಳನ್ನು ಕುರಿತ ಅರಿವನ್ನು ಅಸಾಮರ್ಥ್ಯವಿರುವವರಿಗೂ ಮತ್ತು ಇತರರಿಗೂ ಉಂಟುಮಾಡುತ್ತದೆ. ಇದು ಸಾಂಪ್ರದಾಯಿಕ ರೂಢಕಲ್ಪನೆಗಳನ್ನು ನಿವಾರಿಸುವಲ್ಲಿ ಸಹಾಯಕವಾಗುತ್ತದೆ.

ಮುಂದೆ 1994ರ ಸಲಮಂಕ ಹೇಳಿಕೆ ಮತ್ತು ಚರ್ಚೆಗಳು ಅಸಾಮರ್ಥ್ಯವಿರುವವರ ಶಿಕ್ಷಣದ ನಡೆಯಲ್ಲಿ ಒಂದು ಆಶಾಕಿರಣವಾಯಿತು. ಇದರಿಂದಾಗಿ ಬಹಳಷ್ಟು ಸಂಖ್ಯೆಯ ಪ್ರಗತಿಪರ ರಾಷ್ಟ್ರಗಳು ತಮ್ಮ ನೀತಿಗಳನ್ನು ಪರಿಷ್ಕರಿಸಿಕೊಂಡು ಅಸಾಮರ್ಥ್ಯವುಳ್ಳ ಮಕ್ಕಳನ್ನು ಮೂಲವಾಹಿನಿಗೆ ತರಲು ಪ್ರಾರಂಭಿಸಿದವು. ಬಹಳಷ್ಟು ಪ್ರಗತಿಶೀಲ ರಾಷ್ಟ್ರಗಳಲ್ಲಿ–ಅಮೆರಿಕಾ ಸಂಯುಕ್ತ ಸಂಸ್ಥಾನ, ಕೆನಡ, ಆಸ್ಟ್ರೇಲಿಯಾ ಇತ್ಯಾದಿ– ಅಂತರ್ಗತ ಶಿಕ್ಷಣದ ನೀತಿ ನಿಯಮಗಳು ಈಗಾಗಲೇ ಜಾರಿಯಲ್ಲಿ ಇವೆಯಾದರೂ ಹಲವಾರು ಪ್ರಗತಿಪರ ರಾಷ್ಟ್ರಗಳು ಅಸಾಮರ್ಥ್ಯವುಳ್ಳ ಮಕ್ಕಳಿಗೇ ಇನ್ನೂ ಪ್ರತ್ಯೇಕ ಸನ್ನಿವೇಶದಲ್ಲೇ ಶಿಕ್ಷಣ ನೀಡುತ್ತಿವೆ.

ನಿಜವಾಗಿ, ಅಂತರ್ಗತ ಶಿಕ್ಷಣ ಎಂದರೆ ಅಸಾಮರ್ಥ್ಯವುಳ್ಳ ಮಕ್ಕಳನ್ನು ಮೂಲಭೂತವಾಗಿ ಸಾಮಾನ್ಯ ಶಿಕ್ಷಣ ಸನ್ನಿವೇಶದಲ್ಲಿಯೇ ಸಾಮಾನ್ಯ ಅಧ್ಯಾಪಕರ ಸಮಕ್ಷಮದಲ್ಲಿ ಅವರ ಜವಾಬ್ದಾರಿಯೊಳಗೇ ಇರಿಸುವುದು. ಅವರಿಗೆ ಪ್ರತ್ಯೇಕ ವ್ಯವಸ್ಥೆಯ ಶಿಕ್ಷಣದ ಅಗತ್ಯ ಸಾಬೀತಾದರೆ, ಆ ಅವಧಿಗೆ ಅವರನ್ನು ವಿವಿಧ ಸನ್ನಿವೇಶಗಳಿಗೆ –ಸಂಪನ್ಮೂಲ ಕೊಠಡಿ ಇತ್ಯಾದಿ– ತೆರೆದಿಡುವುದು. ಐತಿಹಾಸಿಕವಾಗಿ ಹಲವಾರು ಶೈಕ್ಷಣಿಕ ವ್ಯವಸ್ಥೆಗಳು ಅಂತರ್ಗತ ಶಿಕ್ಷಣದ ಮಾದರಿಯನ್ನು ಅಂತರ್ಗತ ಶಿಕ್ಷಣದ ಹಾದಿಯಲ್ಲಿ ಮಧ್ಯಂತರ ಉಪಕ್ರಮವಾಗಿ ಅನ್ವಯಿಸಿಕೊಂಡಿವೆ. ಅಂತರ್ಗತ ಶಿಕ್ಷಣದ ಮಾದರಿಯಲ್ಲಿ ಸಾಧ್ಯವಿರುವಾಗ ಅಸಾಮರ್ಥ್ಯವಿರುವ ಮಕ್ಕಳು ಸಾಮಾನ್ಯ ಶಾಲೆಯಲ್ಲಿ ಹಾಜರಿರುತ್ತಾರೆ. ಇದರಲ್ಲಿ ವಿದ್ಯಾರ್ಥಿಯನ್ನು ವ್ಯವಸ್ಥೆಗೆ ಹೊಂದಿಸುವುದಾಗಿದೆಯೇ ವಿನಾ ವ್ಯವಸ್ಥೆಯನ್ನು ವಿದ್ಯಾರ್ಥಿಗೆ ಹೊಂದಿಸುವುದಾಗಿಲ್ಲ. ಭಾರತದ ಅಂತರ್ಗತ ಶಿಕ್ಷಣದಲ್ಲಿ ಅಂತರ್ಗತತೆಗೆ ಸುಲಭವೆನಿಸುವ 'ಸಾಧಾರಣ ಮಟ್ಟ'ದ ಅಸಾಮರ್ಥ್ಯವಿರುವ ಮಕ್ಕಳನ್ನು ಶಾಲಾ ಕಾರ್ಯಕ್ರಮಗಳಲ್ಲಿ ಅಂತರ್ಗತಗೊಳಿಸಿಕೊಳ್ಳಲಾಗುತ್ತದೆ. ತೀವ್ರತರವಾದ ಅಸಾಮರ್ಥ್ಯವಿರುವ ಮಕ್ಕಳು ಹೆಚ್ಚಾಗಿ ಮನೆಯಲ್ಲಿಯೇ ಇರುತ್ತಾರೆ. ಇಲ್ಲವೇ ವಿಶೇಷ ಶಾಲೆಗಳಿಗೆ ಹೋಗುತ್ತಾರೆ.

ಪ್ರತಿ ಮಗುವೂ ಅನನ್ಯವಾದುದು ಮತ್ತು ಭಿನ್ನವಾದುದು ಎಂಬುದು ನಮಗೆ ತಿಳಿದಿದೆ. ಅವರಿಗೆ ವಿಭಿನ್ನ ರೀತಿಯ ಸಾಮರ್ಥ್ಯಗಳಿರುತ್ತವೆ. ಅವರು ವಿಭಿನ್ನ ರೀತಿಗಳಲ್ಲಿ, ವಿಭಿನ್ನ ವೇಗದಲ್ಲಿ ಕಲಿಯುತ್ತಾರೆ. ಆದುದರಿಂದಲೇ ಜಗತ್ತಿನಾದ್ಯಂತ ಎಲ್ಲ ಶಾಲೆಗಳಲ್ಲೂ ಸಮುದಾಯಗಳಲ್ಲೂ ಅವರಿಗೆ ಅಂತರ್ಗತ, ಕಲಿಕಾ ಸ್ನೇಹಿ, ತಡೆ ಮುಕ್ತ ಪರಿಸರಗಳನ್ನು ರೂಪಿಸಬೇಕು.ಇದರಿಂದಾಗಿ ಅವರು ಗರಿಷ್ಠ ಮಟ್ಟದಲ್ಲಿ ತಮ್ಮ ಶೈಕ್ಷಣಿಕ, ಸಾಮಾಜಿಕ, ಭಾವನಾತ್ಮಕ ಮತ್ತು ದೈಹಿಕ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ. ಈ ವಿವಿಧ ಅಂಶಗಳು ಮಗುವಿನ ಬೆಳವಣಿಗೆಗೆ ಪರಸ್ಪರ ಪೂರಕವಾಗಿರುವುದರಿಂದ ಒಂದೇ ಒಂದು ಆಯಾಮವನ್ನು ಬೆಳೆಸಲು ಮಾಡುವ ಪ್ರಯತ್ನ ಅರ್ಥಹೀನವಾಗುತ್ತದೆ. ಸಮಗ್ರ ಸಿದ್ಧತಾ ವ್ಯವಸ್ಥೆ ಇಲ್ಲದಿದ್ದರೆ ಅಸಾಮರ್ಥ್ಯವಿರುವ ಮಕ್ಕಳು ಶಾಲೆಗೆ ಬರುವುದೇ ಇಲ್ಲ, ಇಲ್ಲವೇ ಮಧ್ಯೆ ಬಿಟ್ಟುಬಿಡುತ್ತಾರೆ. ಇದರಿಂದಾಗಿ ಅವರ ಸಂಪೂರ್ಣ ಸಾಮರ್ಥ್ಯಸಾಧನೆಗೆ ಅವಕಾಶವಿಲ್ಲದಂತಾಗುತ್ತದೆ. ವೈಯಕ್ತಿಕ ಒತ್ತಾಸೆಯನ್ನು ಮೊದಲಿಗೆ ಅಧ್ಯಾಪಕರೇ ಕೊಡಬೇಕು. ಅವರು ಸಹಾಯಕ ಸಿಬ್ಬಂದಿಯ ಸೇವೆಯನ್ನು ಬಳಸಿಕೊಂಡು ಮಗುವಿಗೆ, ಅವುಗಳ ಅಗತ್ಯಕ್ಕನುಗುಣವಾಗಿ ಗುಣಮಟ್ಟದ ಸೇವೆ ಸಿಗುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬಹುದು. ಒಟ್ಟಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅಸಾಮರ್ಥ್ಯವಿರುವ ಮಕ್ಕಳು ಸಾಮಾನ್ಯ ಶಾಲೆಗಳಿಗೆ ದಾಖಲಾಗುವುದು ಅಂತರ್ಗತ ಶಿಕ್ಷಣದ ಯಶಸ್ಸಿನ ಮೊದಲ ಹೆಜ್ಜೆ.

**ಯುನೆಸ್ಕೊ(2005) :** ಗರಿಷ್ಟ ಮಟ್ಟದಲ್ಲಿ ಶಿಕ್ಷಣದ ಅವಕಾಶಗಳನ್ನು ವಿಸ್ತರಿಸುವುದು ಜಾಗತಿಕವಾದ ಒಂದು ಕಾರ್ಯಸೂಚಿ. ಸಂಯುಕ್ತ ರಾಷ್ಟ್ರಗಳ ಎಲ್ಲರಿಗೂ ಶಿಕ್ಷಣವನ್ನು ಕುರಿತ ಮೊದಲ ಪ್ರಯತ್ನ ಶತಮಾನದ ಬೆಳವಣಿಗೆಯ ಗುರಿಗಳಲ್ಲಿ ಪ್ರಮುಖವಾದ ಅಂಶ. ಮಾನವನ ಬೆಳವಣಿಗೆಗೆ ಶಿಕ್ಷಣ ಅತಿ ಮುಖ್ಯವಾದುದು ಮತ್ತು ಬಹಳಷ್ಟು ಮಕ್ಕಳಿಗೆ ಈ ಶಿಕ್ಷಣಕ್ಕೆ ಅವಕಾಶವಿಲ್ಲ ಎಂಬ ಗ್ರಹಿಕೆ ಇದಕ್ಕೆ ಭಾಗಶಃ ಕಾರಣ. (UNESCO, 2005). ಅಂತರ್ಗತ ಶಿಕ್ಷಣವೆಂಬುದು ಕಲಿಕಾ ಸಂಸ್ಕೃತಿಗಳಲ್ಲಿ ಮತ್ತು ಸಮುದಾಯಗಳಲ್ಲಿ, ಹೆಚ್ಚಿನ ಭಾಗವಹಿಕೆ ಮತ್ತು ಶಿಕ್ಷಣದೊಳಗೆ ಮತ್ತು ಶಿಕ್ಷಣದಿಂದ ವಂಚಿತರಾಗುವಿಕೆಯನ್ನು ಕಡಿಮೆ ಮಾಡುವುದರ ಮೂಲಕ ಅಗತ್ಯಗಳ ವೈವಿಧ್ಯತೆಯನ್ನು ಎದುರಿಸುವ ಮತ್ತು ಅದಕ್ಕೆ ಪ್ರತಿಕ್ರಿಯಿಸುವ ಪ್ರಕ್ರಿಯೆ. ಇದು ವಿಷಯ, ಉಪಕ್ರಮಗಳು ಮತ್ತು ಮಾರ್ಗೋಪಾಯಗಳಲ್ಲಿ ಅಸಾಮರ್ಥ್ಯವಿರುವವರಿಗೆ ಅಗತ್ಯವಾದ ಬದಲಾವಣೆಗಳನ್ನು ಗಮನಕ್ಕೆ ತೆಗೆದುಕೊಳ್ಳುತ್ತದೆ. ಹೆಚ್ಚು ಕಡಿಮೆ ಒಂದೇ ಮಟ್ಟದ ವಯೋಮಾನದ ಮಕ್ಕಳನ್ನು ಕುರಿತ ಮುಂಗಾಣ್ಕೆ

ಇಟ್ಟುಕೊಂಡು ಎಲ್ಲ ಮಕ್ಕಳಿಗೆ ಶಿಕ್ಷಣ ಕೊಡುವುದು ಸಾಮಾನ್ಯ ಶಾಲಾ ವ್ಯವಸ್ಥೆಯ ಅಧ್ಯಾಪಕರ ಜವಾಬ್ದಾರಿ ಎಂಬ ಬದ್ಧತೆಯೊಂದಿಗೆ ಇದು ಕಾರ್ಯಪ್ರವೃತ್ತವಾಗುತ್ತದೆ. ಅಂತರ್ಗತತೆಯು ಕಲಿಕೆಯ ವಿಶಾಲ ಹರಹುಗಳಿಗೆ ಮತ್ತು ಅಗತ್ಯಗಳಿಗೆ ಔಪಚಾರಿಕವಾದ ಹಾಗೂ ಔಪಚಾರಿಕೇತರವಾದ ಸನ್ನಿವೇಶಗಳಲ್ಲಿ ಪ್ರತಿಕ್ರಿಯಿಸುವ ಕಾಳಜಿಯಿಂದ ಎಲ್ಲರನ್ನೂ ಒಳಗೊಳ್ಳುವ ಮೂಲ ಉದ್ದೇಶವುಳ್ಳದಾಗಿದೆ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 1

1. ಕೆಳಗಿನವುಗಳ ಸಂಪೂರ್ಣರೂಪಗಳನ್ನು ಬರೆಯಿರಿ.

   a) IEDC

   -----------------------------------------------------

   b) RCI

   -----------------------------------------------------

   c) PWD

   -----------------------------------------------------

   d) RTE

   -----------------------------------------------------

2. ಕೆಳಗಿನ ಕಾಯಿದೆಗಳ ಪ್ರಮುಖ ಅಂಶಗಳನ್ನು ಸಂಗ್ರಹಿಸಿ.

   a) 1974 ರ ಕಾಯಿದೆ

   -----------------------------------------------------
   -----------------------------------------------------
   -----------------------------------------------------
   -----------------------------------------------------
   -----------------------------------------------------

b) 1995 ರ ಕಾಯಿದೆ

   -----------------------------------------------------
   -----------------------------------------------------
   -----------------------------------------------------
   -----------------------------------------------------
   -----------------------------------------------------

c) 2009 ರ ಕಾಯಿದೆ -------------------------------------------

-------------------------------------------------------

-------------------------------------------------------

-------------------------------------------------------

-------------------------------------------------------

-------------------------------------------------------

## 1.3.3.2. ಅಂತರ್ಗತ ಶಿಕ್ಷಣವನ್ನು ಉತ್ತೇಜಿಸಲು ಪ್ರಯತ್ನಗಳು

ಅಸಾಮರ್ಥ್ಯವುಳ್ಳ ಮಕ್ಕಳನ್ನು ಮೂಲವಾಹಿನಿಯ ಶಾಲೆಗಳಿಗೆ ಕಳುಹಿಸುವ ಅಂತರ್ಗತ ಶಿಕ್ಷಣದ ನೀತ್ಯಾತ್ಮಕ ಶಿಫಾರಸುಗಳನ್ನು ಮೊದಲಿಗೆ 1944ರ ಸಾರ್ಜೆಂಟ್ ವರದಿಯಲ್ಲೂ ನಂತರ 1964ರ ಕೊಠಾರಿ ಆಯೋಗದ ವರದಿಯಲ್ಲೂ ಕಾಣಬಹುದು. ಆದರೂ ಈ ದಿಶೆಯಲ್ಲಿನ ಬದಲಾವಣೆ ಅತ್ಯಂತ ನಿಧಾನವಾಗಿ ಆಗುತ್ತಾ ಬಂದಿದೆ. ವಿಶೇಷ ಶಾಲೆಗಳ ಪ್ರತ್ಯೇಕ ಸನ್ನಿವೇಶದ ಶಿಕ್ಷಣ ಈಚಿನವರೆಗೆ ಹೆಚ್ಚು ಪ್ರಬಲವಾದುದೂ ಇದಕ್ಕೆ ಕಾರಣವಾಯಿತು. ಭಾರತದ ಹಲವಾರು ರಾಜ್ಯಗಳಲ್ಲಿ ಅಸಾಮರ್ಥ್ಯವಿಲ್ಲದಿರುವವರ ಮತ್ತು ಇರುವವರ ಸಾಕ್ಷರತೆಯ ಪ್ರಮಾಣದಲ್ಲಿ ಗಮನಾರ್ಹ ಅಂತರವಿದೆ. ಅಸಾಮರ್ಥ್ಯವಿರುವ ಮಕ್ಕಳನ್ನು ಸಾಮಾನ್ಯ ಶಾಲೆಗಳಲ್ಲಿ ಕುಳ್ಳಿರಿಸಿದ ಮಾತ್ರಕ್ಕೆ ಅಂತರ್ಗತತೆ ಸಾರ್ಥಕವಾಯಿತು ಎಂದುಕೊಳ್ಳುವಂತಿಲ್ಲ ಎಂಬುದು ಸ್ಪಷ್ಟ. ಅಂತರ್ಗತ ಶಾಲೆಗಳು ಎಲ್ಲ ವಿಷಯಗಳಲ್ಲೂ ಸಂಪೂರ್ಣವಾಗಿ ಸಜ್ಜುಗೊಂಡಿದ್ದು, ಅಸಾಮರ್ಥ್ಯವಿರುವ ಮಕ್ಕಳ ಅಗತ್ಯಗಳನ್ನು ಪೂರೈಸಿ ಎಲ್ಲ ಮಕ್ಕಳಿಗೂ ಗುಣಮಟ್ಟದ ಶಿಕ್ಷಣವನ್ನು ನೀಡುವಷ್ಟರ ಮಟ್ಟಿಗೆ ಸಶಕ್ತವಾಗಿರಬೇಕು.

**ವಿವಿಧ ನಿಯಮಾವಳಿಗಳ ಮೂಲಕ ಅಂತರ್ಗತ ಶಿಕ್ಷಣದ ಉತ್ತೇಜನಕ್ಕೆ ಮಾಡಿದ ಪ್ರಮುಖ ಪ್ರಯತ್ನಗಳು ಕೆಳಕಂಡಂತಿವೆ:**

- ಸಂವಿಧಾನದ 93ನೇ ತಿದ್ದುಪಡಿಯು 6ರಿಂದ 14 ವಯೋಮಾನದ ಮಕ್ಕಳ ಶಿಕ್ಷಣವನ್ನು ಮೂಲಭೂತ ಮಾನವ ಹಕ್ಕು ಎಂದು ಪರಿಗಣಿಸಿದೆ. ಆ ಮೂಲಕ ಎಲ್ಲ ಮಕ್ಕಳನ್ನೂ ಶಿಕ್ಷಣದ ಪರಿಧಿಯೊಳಗೆ ತರುವುದನ್ನು ಕಡ್ಡಾಯವಾಗಿಸಿದೆ. ಇದು ಅಸಾಮರ್ಥ್ಯವಿರುವ ಮಕ್ಕಳನ್ನೂ ಒಳಗೊಳ್ಳುತ್ತದೆ.
- 1995ರ ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಕಾಯಿದೆಯು ಅಸಾಮರ್ಥ್ಯವಿರುವ ಮಕ್ಕಳಿಗೆ 18ನೇ ವರ್ಷದವರೆಗೆ ಸಮರ್ಪಕ ಪರಿಸರದಲ್ಲಿ ಮುಕ್ತ ಶಿಕ್ಷಣಕ್ಕೆ ಅವಕಾಶವನ್ನು ಮಾಡಿಕೊಟ್ಟಿದೆ.
- 14ರಿಂದ 18 ವಯೋಮಾನದ ಅಸಾಮರ್ಥ್ಯವನ್ನುಳ್ಳ ವ್ಯಕ್ತಿಗಳ ಶೈಕ್ಷಣಿಕ ಅಗತ್ಯಗಳನ್ನು ಅಸಾಮರ್ಥ್ಯವುಳ್ಳ ಮಕ್ಕಳ ಮತ್ತು ಯುವಜನರ ಅಂತರ್ಗತ ಶಿಕ್ಷಣಕ್ಕೆ ಪರಿಷ್ಕೃತ ಯೋಜನೆಯನ್ನೂ (Revised Plan for Inclusive Education of Children and Youth with Disabilities -IECYD) ಒಳಗೊಂಡಂತೆ ಹಲವಾರು ಯೋಜನೆಗಳ ಮೂಲಕ ಪೂರೈಸಲಾಗಿದೆ.
- ಮಾನವ ಹಕ್ಕುಗಳ ಸಾರ್ವತಿಕ ಘೋಷಣೆ(1949), ಸಂಯುಕ್ತ ರಾಷ್ಟ್ರಗಳ ಸಾಮಾನ್ಯ ಸಭೆಯ ಸನ್ನದು(1959), ಮಕ್ಕಳ ಹಕ್ಕುಗಳನ್ನು ಕುರಿತ ಸಂಯುಕ್ತ ರಾಷ್ಟ್ರಗಳ ಸಮಾವೇಶ(1989)ಈ ಎಲ್ಲವೂ ಶಿಕ್ಷಣವನ್ನು ಮಾನವ ಹಕ್ಕು ಎಂದು ಒಪ್ಪಿಕೊಂಡಿವೆ.

- ಎಲ್ಲರಿಗೂ ಶಿಕ್ಷಣವನ್ನು ಕುರಿತ ವಿಶ್ವ ಸಮ್ಮೇಳನ(1990),ಅಸಾಮರ್ಥ್ಯವುಳ್ಳ ವ್ಯಕ್ತಿಗಳಿಗೆ ಸಮಾನ ಅವಕಾಶಗಳನ್ನು ಕುರಿತ ಸಂಯುಕ್ತ ರಾಷ್ಟ್ರಗಳ ಪ್ರಮಾಣೀಕೃತ ನಿಯಮಗಳು(1993), ಶಿಕ್ಷಣ ಎಲ್ಲರ ಮೂಲಭೂತ ಹಕ್ಕು ಎಂಬುದನ್ನು ಪುನರುಚ್ಚರಿಸಿವೆ. ಇದರಿಂದ ಕೆಲವು ಗುಂಪುಗಳು ಹೊರಗಿವೆ ಎಂಬುದನ್ನು ಗುರುತಿಸಿವೆ. ವಿವಿಧ ಸರ್ಕಾರಗಳು ಮತ್ತು ನಿಯೋಗಗಳ ಕಾರ್ಯಯೋಜನೆಯಲ್ಲಿ 'ಅಂತರ್ಗತ' ಎಂಬ ಪದ ಬಳಕೆಯಾಗಿರುವುದಾದರೂ ಅಸಾಮರ್ಥ್ಯ ಮಕ್ಕಳನ್ನು ನಿರ್ದಿಷ್ಟವಾಗಿ ಗುರುತಿಸಲಾಗಿಲ್ಲ ಎಂಬುದನ್ನೂ ಗಮನಿಸಿವೆ. ಹಾಗಾಗಿ, ಅಂತರ್ಗತತೆಯ ಪರಿಕಲ್ಪನೆ ಪ್ರಮುಖವಾಗಿ ಮಾನವ ಹಕ್ಕುಗಳು, ಸಮಾನ ಅವಕಾಶಗಳು, ಸಾಮಾಜಿಕ ನ್ಯಾಯ ಮತ್ತು ಎಲ್ಲರ ಭಾಗವಹಿಕೆಯನ್ನು ಆಧರಿಸಿದೆ. ಅಂತರ್ಗತತೆಯು ಎಲ್ಲ ವಿದ್ಯಾರ್ಥಿಗಳನ್ನೂ ಬದುಕಿನಲ್ಲಿ ಸಂಪೂರ್ಣವಾಗಿ ಭಾಗವಹಿಸುವಂತೆ ಮಾಡುವುದು ಮತ್ತು ಅವರ ಅಗತ್ಯಗಳು ಏನೇ ಆದರೂ ಮೂಲವಾಹಿನಿಯ ವ್ಯವಸ್ಥೆಯಲ್ಲಿ ಕೆಲಸಮಾಡುವುದು ಇವುಗಳನ್ನು ಸೂಚಿಸುತ್ತದೆ.
- ಮಾನವ ಸಂಪನ್ಮೂಲ ಸಚಿವಾಲಯವು ಅಸಾಮರ್ಥ್ಯವಿರುವ ಮಕ್ಕಳು ಮತ್ತು ಯುವಜನರಿಗಾಗಿ ಒಂದು ಸಮಗ್ರ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿದೆ. ರಾಷ್ಟ್ರೀಯ ಶಿಕ್ಷಣ ನೀತಿ(1986), ಕ್ರಿಯಾಯೋಜನಾ ಕಾರ್ಯಕ್ರಮ (1992)ಮತ್ತು ಅಸಾಮರ್ಥ್ಯವ್ಯಕ್ತಿಗಳ ಕಾಯಿದೆ (1995) ಇವುಗಳ ಚೌಕಟ್ಟಿನಲ್ಲಿಯೇ ಇಲ್ಲಿನ ಮಾರ್ಗೋಪಾಯಗಳನ್ನು ಸೂಚಿಸಲಾಗಿದೆ. ಈ ಕ್ರಿಯಾಯೋಜನೆಯ ಉದ್ದೇಶಗಳು ಹೀಗಿವೆ: ಮೂಲವಾಹಿನಿಯ ಶಿಕ್ಷಣಕ್ಕೆ ಯಾವುದೇ ಮಗುವಿಗೆ ಪ್ರವೇಶವನ್ನು ನಿರಾಕರಿಸದಿರುವುದನ್ನು ಖಚಿತಪಡಿಸಿಕೊಳ್ಳುವುದು, ಎಲ್ಲ ಮಕ್ಕಳಿಗೂ ಅಂಗನವಾಡಿ ಮತ್ತು ಶಾಲಾ ಪ್ರವೇಶವನ್ನು ಖಚಿತಪಡಿಸಿಕೊಳ್ಳುವುದರ ಜೊತೆಗೆ ಅಸಾಮರ್ಥ್ಯತೆಯ ಕಾರಣಕ್ಕಾಗಿ ಯಾವುದೇ ಮಗುವಿಗೆ ಶಾಲಾ ಪ್ರವೇಶಾತಿಯನ್ನು ನಿರಾಕರಿಸದಿರುವುದನ್ನು ಖಚಿತಪಡಿಸಿಕೊಳ್ಳುವುದು, ಅಸಾಮರ್ಥ್ಯವಿರುವವರಿಗೆ ಸಹಾಯಮಾಡುತ್ತಿರುವ ಮೂಲವಾಹಿನಿಯ ಹಾಗೂ ವಿಶೇಷ ತರಬೇತಿ ಸಂಸ್ಥೆಗಳು, ಅವು ಸರ್ಕಾರಿ ಅಥವಾ ಸರ್ಕಾರೇತರ ಸಂಸ್ಥೆಗಳಾಗಿರಲಿ, ಅಂತರ್ಗತತೆಯ ಚೌಕಟ್ಟಿನೊಳಗೆ ಒಂದು ಶಿಕ್ಷಕ ಸಮೂಹವನ್ನು ತರಬೇತಿಗೊಳಿಸುವುದನ್ನು ಖಚಿತಪಡಿಸಿಕೊಳ್ಳುವುದು, ಹೆಣ್ಣುಮಕ್ಕಳು ಮತ್ತು ಗ್ರಾಮೀಣ ಹಾಗೂ ದೂರದಲ್ಲಿರುವ ಮಕ್ಕಳಿಗೆ ಹಾಸ್ಟೆಲ್ ಸೌಲಭ್ಯ ಸಿಗುವಂತೆ ಅವಕಾಶಮಾಡಿಕೊಡುವುದು, ತೀವ್ರ ಅಸಾಮರ್ಥ್ಯ, ಬಹುವಿಧದ ಅಸಾಮರ್ಥ್ಯವುಳ್ಳವರಿಗೆ ಮತ್ತು ಬುದ್ಧಿಮಾಂದ್ಯರಿಗೆ ಮನೆಯಲ್ಲೇ ಕಲಿಕೆಯ ಅವಕಾಶವನ್ನು ನೀಡುವುದು, ವೈಯಕ್ತಿಕ ವೇಗದಲ್ಲಿ ಕಲಿಯುವವರಿಗೆ ದೂರಶಿಕ್ಷಣವನ್ನು ಒದಗಿಸುವುದು, ಉದ್ಯೋಗ ತರಬೇತಿ ಮತ್ತು ಉದ್ಯೋಗಾಧಾರಿತ ತರಬೇತಿಗೆ ಪ್ರಾಮುಖ್ಯತೆ ನೀಡುವುದು, ಅರಿವು ಮೂಡಿಸುವ, ಪ್ರೇರಣಾತ್ಮಕ ಮತ್ತು ಸಂವೇದನಾತ್ಮಕ ಕಾರ್ಯಕ್ರಮಗಳ ಮೂಲಕ ದಾನಧರ್ಮದ ಪರಿಕಲ್ಪನೆಯಿಂದ ಬೆಳವಣಿಗೆಯ ಕಡೆಗಿನ ಅರಿವಿನ ಪಲ್ಲಟವನ್ನು ಕಾರ್ಯರೂಪಕ್ಕೆ ತರುವುದು.
- ಈ ಎಲ್ಲ ನೀತಿನಿಯಮಗಳು, ಕಾರ್ಯಯೋಜನೆಗಳು, ಶಿಫಾರಸುಗಳು ಅಸಾಮರ್ಥ್ಯವಿರುವ ವ್ಯಕ್ತಿಗಳ ಶಿಕ್ಷಣಕ್ಕೆ ವಿಭಿನ್ನ ರೀತಿಯಲ್ಲಿ ಅನುವುಮಾಡಿಕೊಟ್ಟಿವೆ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 2

**ಕೆಳಗಿನವುಗಳಲ್ಲಿ ಅಸಾಮರ್ಥ್ಯವಿರುವವರನ್ನು ಕುರಿತಾಗಿ ಚರ್ಚಿತವಾಗಿಲ್ಲದ ದಾಖಲೆಗಳನ್ನು ಗುರುತಿಸಿ:**

ಸಂವಿಧಾನದ 93ನೇ ತಿದ್ದುಪಡಿ, 1995ರ ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಕಾಯಿದೆ, ಅಂತರ್ಗತ ಶಿಕ್ಷಣಕ್ಕೆ ಪರಿಷ್ಕೃತ ಯೋಜನೆ, ಮಾನವ ಹಕ್ಕುಗಳ ಸಾರ್ವತಿಕ ಘೋಷಣೆ(1949), ವುಡ್ಸ್ ವರದಿ, ಅಲ್ಪಸಂಖ್ಯಾತರ ಕಾಯಿದೆ, ರಾಧಾಕೃಷ್ಣನ್ ವರದಿ, ಸಂಯುಕ್ತ ರಾಷ್ಟ್ರಗಳ ಸಾಮಾನ್ಯ ಸಭೆಯ ಸನ್ನದು, ಸಂಯುಕ್ತ ರಾಷ್ಟ್ರಗಳ ಪ್ರಮಾಣೀಕೃತ ನಿಯಮಗಳು, ಮಾನವ ಸಂಪನ್ಮೂಲ ಸಚಿವಾಲಯದ ಸಮಗ್ರ ಕ್ರಿಯಾಯೋಜನೆ.

## 1.3.4. ಸಾರಾಂಶಿಸೋಣ

- ಭಾರತೀಯ ಸಮಾಜವು ಅಂತರ್ಗತತೆಯ ಲಕ್ಷಣವನ್ನು ಹೊಂದಿರುವುದರಿಂದ ಅದರ ಶೈಕ್ಷಣಿಕ ನೀತಿಗಳೂ ಅಂತರ್ಗತೀಯವಾಗಿಯೇ ಇರಬೇಕು.
- ರಾಷ್ಟ್ರೀಯ ಶಿಕ್ಷಣ ನೀತಿ(1986) ಮತ್ತು ಅದರ ಕ್ರಿಯಾ ಕಾರ್ಯಕ್ರಮ(1992), ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು(2005), ಅಸಾಮರ್ಥ್ಯವುಳ್ಳ ವ್ಯಕ್ತಿಗಳ ರಾಷ್ಟ್ರೀಯ ನೀತಿಸಂಹಿತೆ (2005), ಮತ್ತು 6–14 ರ ವಯೋಮಾನದ ಮಕ್ಕಳಿಗೆ ಮುಕ್ತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು ಇವೆಲ್ಲವೂ ಪ್ರತ್ಯೇಕತೆಯ ವಿರುದ್ಧವಾಗಿ ಅಂತರ್ಗತತೆಯನ್ನು ಕುರಿತಂತೆ ನಿರ್ದಿಷ್ಟ ನಿರ್ದೇಶನಗಳನ್ನು ಒಳಗೊಂಡಿವೆ.
- ಎಲ್ಲರಿಗೂ ಸಮನಾದ ಅವಕಾಶಗಳನ್ನು ಒದಗಿಸುವ ಉದ್ದೇಶದಿಂದ ಮೂಡಿಬಂದ ಪರಿಕಲ್ಪನೆ ಅಂತರ್ಗತತೆ. ಸಮನಾದ ಅವಕಾಶ ಎಂದರೆ ಎಲ್ಲರಿಗೂ ಒಂದೇ ರೀತಿಯ ಅವಕಾಶಗಳನ್ನು ಒದಗಿಸುವುದು ಎಂದರ್ಥವಲ್ಲ. ಇಲ್ಲಿ ಸಮತೆಯನ್ನೂ ಕಾಪಾಡಿಕೊಳ್ಳಬೇಕು.
- ಅಂತರ್ಗತ ಶಿಕ್ಷಣವನ್ನು ಬೆಳೆಸುವಲ್ಲಿ ಭಾರತ ಸರ್ಕಾರದ ಮೊದಲ ಹೆಜ್ಜೆ ಎಂದರೆ ಅಸಾಮರ್ಥ್ಯವಿರುವ ಮಕ್ಕಳ ಅಂತರ್ಗತ ಶಿಕ್ಷಣ ಕಾರ್ಯಕ್ರಮ.
- ಭಾರತ ದೇಶದ ಶಿಕ್ಷಣದಲ್ಲಿ ಅಸಾಮರ್ಥ್ಯವುಳ್ಳ ಮಕ್ಕಳ ಸಂಪೂರ್ಣ ಭಾಗವಹಿಕೆಯನ್ನು ದೃಢೀಕರಿಸಿಕೊಳ್ಳುವ ಮೊದಲ ಪ್ರಯತ್ನವೆಂದರೆ, ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಕಾಯಿದೆ, 1995.
- 1995ರ ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಕಾಯಿದೆಯ ಮೊದಲಿಗೆ 1992ರಲ್ಲಿ ಜಾರಿಗೆ ಬಂದ ಮತ್ತೊಂದು ಪ್ರಮುಖ ಪ್ರಯತ್ನವೆಂದರೆ, ಭಾರತದ ಪುನರ್ವಸತಿ ಕೌನ್ಸಿಲ್‌ನ ಸ್ಥಾಪನೆ.
- ನ್ಯಾಷನಲ್ ಟ್ರಸ್ಟ್ ಆಕ್ಟ್, 1999(ಸ್ವಲೀನತೆ, ಸೆರೆಬ್ರಲ್ ಪಾಲ್ಸಿ, ಬುದ್ಧಿಮಾಂದ್ಯತೆ ಮತ್ತು ಬಹುವಿಧ ಅಸಾಮರ್ಥ್ಯತೆಯುಳ್ಳವರಿಗಾಗಿ)ರ ಕಾರಣದಿಂದಾಗಿ ರಾಷ್ಟ್ರೀಯ ಟ್ರಸ್ಟ್ ಅಥವಾ ನ್ಯಾಷನಲ್ ಟ್ರಸ್ಟ್ ಮೂಡಿಬಂದಿತು.
- ಮಾನಸಿಕ ಸ್ವಾಸ್ಥ್ಯ ಕಾಯಿದೆ (1987)ಯು ಮಾನಸಿಕ ಕಾಯಿಲೆ ಇರುವ ವ್ಯಕ್ತಿಗಳನ್ನು ಬುದ್ಧಿಮಾಂದ್ಯ ವ್ಯಕ್ತಿಗಳಿಂದ ಸ್ಪಷ್ಟವಾಗಿ ಬೇರ್ಪಡಿಸಿದೆ.
- 2006ರಲ್ಲಿ ಅಸಾಮರ್ಥ್ಯವುಳ್ಳ ವ್ಯಕ್ತಿಗಳಿಗಾಗಿ ರಾಷ್ಟ್ರೀಯ ನೀತಿಯನ್ನು ರೂಪಿಸಲಾಯಿತು.

- ಅಂತರರಾಷ್ಟ್ರೀಯ ದುರ್ಬಲರ ವರ್ಷದ ಫಲಶ್ರುತಿ ಎಂದರೆ ಅಸಾಮರ್ಥ್ಯವಿರುವ ವ್ಯಕ್ತಿಗಳ ಕುರಿತಾದ ಜಾಗತಿಕವಾದ ಕಾರ್ಯಯೋಜನೆ, ಇದನ್ನು 3ನೇ ಡಿಸೆಂಬರ್ 1982, ರಂದು ಸಂಯುಕ್ತ ರಾಷ್ಟ್ರಗಳ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಿಕೊಳ್ಳಲಾಯಿತು. ಈ ಕಾರ್ಯಯೋಜನೆಯು ಕೆಲವು ಪ್ರಮುಖವಾದ ಅಂಶಗಳನ್ನು ಕಾರ್ಯಯೋಜನೆಯಲ್ಲಿ ಒಳಪಡಿಸಿ ಜಾಗತಿಕ ಸಮಾಜದ ಮುಂದೆ ಇಟ್ಟಿದ್ದು ಇವುಗಳನ್ನು ಸಂಯುಕ್ತ ರಾಷ್ಟ್ರಗಳು ಅಂಗೀಕರಿಸಿವೆ.
- 1994ರ ಸಲಮಂಕ ಹೇಳಿಕೆ ಮತ್ತು ಚರ್ಚೆಗಳು ಅಸಾಮರ್ಥ್ಯವಿರುವವರ ಶಿಕ್ಷಣದ ನಡೆಯಲ್ಲಿ ಒಂದು ಆಶಾಕಿರಣ.
- ಅಂತರ್ಗತ ಶಿಕ್ಷಣವನ್ನು ಉತ್ತೇಜಿಸಲು ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಅನೇಕ ಪ್ರಯತ್ನಗಳು ನಡೆದಿವೆ.

## 1.3.5 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1 ಮತ್ತು 2

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

a) IEDC - Integrated Education of the Disabled Children

b) RCI - Rehabilitation Council of India

c) PWD - Persons with Disabilities

d) RTE - Right to Free and Compulsory Education

**2. ಈ ಘಟಕದಲ್ಲಿ ಈ ಕುರಿತ ಚರ್ಚೆಯನ್ನು ಗಮನಿಸಿಕೊಳ್ಳಿ.**

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ವುಡ್ಸ್ ವರದಿ, ಅಲ್ಪಸಂಖ್ಯಾತರ ಕಾಯಿದೆ, ರಾಧಾಕೃಷ್ಣನ್ ವರದಿ

## 1.3.6. ಘಟಕಾಂತ್ಯ ಅಭ್ಯಾಸಗಳು

1. ರಾಷ್ಟ್ರಮಟ್ಟದಲ್ಲಿ ಅಸಾಮರ್ಥ್ಯವಿರುವ ಮಕ್ಕಳಿಗೆ ಸಂಬಂಧಿಸಿದ ನೀತಿ, ನಿಯಮಗಳನ್ನು ವಿವರಿಸಿ.
2. ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ನೀತಿನಿಯಮಗಳ ಅಸಾಮರ್ಥ್ಯವಿರುವ ವ್ಯಕ್ತಿಗಳಿಗೆ ಹೇಗೆ ಪ್ರಯೋಜನಕಾರಿಯಾಗಿದೆ ಎಂಬುದನ್ನು ಸ್ಪಷ್ಟಪಡಿಸಿ. ಈ ಕುರಿತು ನೀವು ಗಮನಿಸಿರುವ ಅಂಶಗಳನ್ನು ಸಂಗ್ರಹಿಸಿ ಬರೆಯಿರಿ.
3. ಅಸಾಮರ್ಥ್ಯವಿರುವ ಮಕ್ಕಳಿಗೆ ಸಂಬಂಧಿಸಿದ ನೀತಿ, ನಿಯಮಗಳನ್ನು ಸಾರ್ವಜನಿಕರಿಗೆ ಮತ್ತು ಅಸಾಮರ್ಥ್ಯವಿರುವವರಿಗೆ ಹೇಗೆ ಪ್ರಸಾರ ಮಾಡುವಿರಿ ಎಂಬುದನ್ನು ವಿವರಿಸಿ.

## 1.3.7. ಪರಾಮರ್ಶನ ಸೂಚಿ


1. Alur, M. (2010). Education and Children with Special Needs: From Segregation to Inclusion. New Delhi. Sage Publications.
2. MSJE (2010). Disability in India, Ministry of Social Justice and Empowerment, GOI, Office of the Chief Commissioner for Persons with Disabilities. Retrieved on 23 July 2010 from http//www.ccdisabilities.nic.in/disability.in.india.htm.
3. Education and Children with Special Needs: From Segregation to Inclusion. Constitution of India (1949), Ministry of Law and Justice Website.
4. Dasgupta, P. R. (2002). Education for the Disabled (1998). Social Exclusion.
5. Disability Handbook (2004). 'Sensitizing teachers and teacher educators (Inclusive Education) published by NCTE 2004 under the agencies of the Human Rights Commission.


****************

# ಬ್ಲಾಕ್–1 : ಶಿಕ್ಷಣದಲ್ಲಿ ಅಂತರ್ಗತತೆಯನ್ನು ಅರ್ಥಮಾಡಿಕೊಳ್ಳುವುದು

## ಘಟಕ–4 : ಅಸಾಮರ್ಥ್ಯವಿರುವ ವ್ಯಕ್ತಿಗಳ ಹಕ್ಕುಗಳನ್ನು ಕುರಿತ ಸಂಯುಕ್ತ ರಾಷ್ಟ್ರಗಳ ಸಮಾಲೋಚನೆ(UNCRPD) ಮತ್ತು ಎಲ್ಲರಿಗೂ ಶಿಕ್ಷಣ (EFA-MDG)

**ಘಟಕದ ರಚನೆ**


1.4.1 ಕಲಿಕಾ ಉದ್ದೇಶಗಳು

1.4.2. ಪೀಠಿಕೆ

1.4.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

1.4.3.1. ಅಸಾಮರ್ಥ್ಯವಿರುವ ವ್ಯಕ್ತಿಗಳ ಹಕ್ಕುಗಳನ್ನು ಕುರಿತ ಸಂಯುಕ್ತ ರಾಷ್ಟ್ರಗಳ ಸಮಾಲೋಚನೆ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 1

1.4.3.2 ಎಲ್ಲರಿಗೂ ಶಿಕ್ಷಣ ಕಾಯಿದೆ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 2

1.4.4. ಸಾರಾಂಶಿಸೋಣ

1.4.5 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1 ಮತ್ತು 2

1.4.6 ಘಟಕಾಂತ್ಯ ಅಭ್ಯಾಸಗಳು

1.4.7. ಪರಾಮರ್ಶನ ಸೂಚಿ


### 1.4.1 ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು:

- UNCRPD ಯ ತಾತ್ವಿಕತೆಯನ್ನು ವಿವರಿಸುವರು;
- UNCRPD ಯ ವಿಸ್ತೃತ ರೂಪವನ್ನು ತಿಳಿಸುವರು;
- UNCRPDಯ ತತ್ವಗಳನ್ನು ಗುರುತಿಸುವರು;
- EFA(MDG) ಯ ಅರ್ಥವನ್ನು ವಿವರಿಸುವರು;
- EFA(MDG) ಯ ಶಿಫಾರಸುಗಳನ್ನು ಗುರುತಿಸುವರು; ಮತ್ತು
- EFA(MDG) ಯ ತತ್ವಗಳನ್ನು ವಿವರಿಸುವರು.

## 1.4.2. ಪೀಠಿಕೆ

ಎಲ್ಲ ಮಕ್ಕಳನ್ನೂ ಒಟ್ಟಾಗಿ ಒಂದೇ ತರಗತಿ ಕೋಣೆ ಮತ್ತು ಸಮುದಾಯದೊಳಗೆ ತಂದು ಅವರ ಸಾಮರ್ಥ್ಯ ಅಸಾಮರ್ಥ್ಯಗಳ ಗಮನಕ್ಕಿಂತ ಮಿಗಿಲಾಗಿ ಎಲ್ಲರ ಶಕ್ತಿಯನ್ನು ಗರಿಷ್ಟ ಮಟ್ಟದಲ್ಲಿ ಬೆಳೆಸುವುದು ಅಂತರ್ಗತ ಶಿಕ್ಷಣದ ಉದ್ದೇಶ ಎಂಬುದು ನಮಗೆ ತಿಳಿದಿದೆ. ಅಂತರ್ಗತತೆಯು ಎಲ್ಲರಿಗೂ ಗುಣಮಟ್ಟದ ಮತ್ತು ಸಮತೆಯ ಶಿಕ್ಷಣವನ್ನು ಒದಗಿಸುತ್ತದೆ. ಅಸಾಮರ್ಥ್ಯ, ಲಿಂಗತ್ವ, ಭಾವನಾತ್ಮಕ ಅಥವಾ ವರ್ತನಾತ್ಮಕ ಸಮಸ್ಯೆಗಳು, ಕೌಟುಂಬಿಕ ಹಿನ್ನೆಲೆ, ವಾಂಶಿಕತೆ, ವಲಸೆ, ಬಡತನ, ದೃಷ್ಟಿ ಅಥವಾ ಶ್ರವಣ ದೋಷ, ಭಾಷಾ ಸಾಮರ್ಥ್ಯದಲ್ಲಿ ಅಡೆತಡೆ, ಇವುಗಳ ಕಾರಣದಿಂದಾಗಿ ಸಮಾಜದ ಅಂಚಿನಲ್ಲಿರುವಂತಾದ ಎಲ್ಲರನ್ನೂ ಇದು ತನ್ನ ತೆಕ್ಕೆಯೊಳಗೆ ಸೇರಿಸಿಕೊಳ್ಳುತ್ತದೆ. ಸಂವಹನ ಮತ್ತು ಭಾಗವಹಿಕೆಯ ಮೂಲಕ ಈ ಎಲ್ಲರಲ್ಲೂ ಅಪೇಕ್ಷಣೀಯ ಬದಲಾವಣೆಯನ್ನು ತರಲು ಶಾಲಾಜೀವನವನ್ನು ಒಂದು ಸಾಧನವಾಗಿ ಬಳಸಿಕೊಳ್ಳುತ್ತದೆ. ಸುಮಾರು ಶೇ 15 ರಷ್ಟು ಜಾಗತಿಕ ಜನಸಂಖ್ಯೆ ಯಾವುದಾದರೊಂದು ಅಸಮರ್ಥತೆಯಿಂದ ಬಳಲುತ್ತಿದೆ. ಪ್ರಪಂಚದಲ್ಲಿ 93 ಮಿಲಿಯ ಮಕ್ಕಳು ಸಾಧಾರಣದಿಂದ ತೀವ್ರತರವಾದ ಅಸಾಮರ್ಥ್ಯಗಳಿಗೆ ಒಳಗಾಗಿದ್ದಾರೆ. ಇವರಲ್ಲಿ ಬಹಳ ಪಾಲು ಮಕ್ಕಳು ಶಾಲೆಯ ಹೊರಗಿದ್ದಾರೆ. ಅವರು ಸಶಕ್ತರಾಗಿ ಆಮೂಲಕ ಸಮುದಾಯಗಳನ್ನು ಬೆಂಬಲಿಸುವ ಅವಕಾಶದಿಂದ ವಂಚಿತರಾಗಿದ್ದಾರೆ. ಅಸಾಮರ್ಥ್ಯವಿರುವ ಮಕ್ಕಳು ಈ ರೀತಿಯಲ್ಲಿ ಬದುಕಿನ ಹಾಗೂ ಶಿಕ್ಷಣದ ಅವಕಾಶಗಳಿಂದ ಹೊರಗಿರುವ ಈ ವಿಚಾರವನ್ನು ತುರ್ತಾಗಿ ಗಮನಿಸಿಕೊಳ್ಳುವ ಪ್ರಯತ್ನಗಳಾಗಬೇಕಾಗಿದೆ. ಈ ರೀತಿಯ ಪ್ರಯತ್ನಗಳಲ್ಲಿ ಅತ್ಯಂತ ಪ್ರಮುಖವೂ ವಿಶಿಷ್ಟವೂ ಆಗಿ ಕಾಣಬರುವ ಪ್ರಯತ್ನ ಎಂದರೆ ಅಸಾಮರ್ಥ್ಯವಿರುವ ವ್ಯಕ್ತಿಗಳ ಹಕ್ಕುಗಳನ್ನು ಕುರಿತ ಸಂಯುಕ್ತ ರಾಷ್ಟ್ರಗಳ ಸಮಾಲೋಚನೆ (UNCRPD) ಮತ್ತು ಎಲ್ಲರಿಗೂ ಶಿಕ್ಷಣ ಕಾಯಿದೆ (EFA)

ಈ ವಿಷಯಗಳಿಗೆ ಸಂಬಂಧಿಸಿದಂತೆ ಆಗಿರುವ ಆಗುತ್ತಿರುವ ಪ್ರಯತ್ನಗಳು, ಆಲೋಚನೆಗಳು ಮತ್ತು ಕಾರ್ಯಗಳನ್ನು ಈ ಘಟಕದಲ್ಲಿ ವಿವರವಾಗಿ ಕಲಿಯೋಣ.

## 1.4.3 ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 1.4.3.1. ಅಸಾಮರ್ಥ್ಯವಿರುವ ವ್ಯಕ್ತಿಗಳ ಹಕ್ಕುಗಳನ್ನು ಕುರಿತ ಸಂಯುಕ್ತ ರಾಷ್ಟ್ರಗಳ ಸಮಾಲೋಚನೆ (United Nations Convention on the Rights of Persons with Disabilities)

ಈ ಭೂಮಿಯ ಮೇಲಿರುವ ಪ್ರತಿಯೊಬ್ಬ ವ್ಯಕ್ತಿಗೂ ಸಾಮಾನ್ಯವಾದ ಬದುಕನ್ನು ಬದುಕುವ ಹಕ್ಕು ಇದೆ. ಆದರೆ ಜಾತಿ, ಮತ, ಆರ್ಥಿಕತೆ, ಅಸಾಮರ್ಥ್ಯ ಇವುಗಳ ಕಾರಣದಿಂದಾಗಿ ವ್ಯಕ್ತಿಗಳಲ್ಲಿ ಭೇದಭಾವಮಾಡುವುದು ನಮಗೆ ದಿನನಿತ್ಯದ ಅನುಭವಕ್ಕೆ ಬಂದಿರುವ ವಿಷಯ. ಈ ಭೇದಭಾವ ಸಂಪೂರ್ಣವಾಗಿ ಮಾಯವಾಗಿ ಎಲ್ಲರೂ ಘನತೆವೆತ್ತ ಬದುಕನ್ನು ಬದುಕುವಂತೆ ಮಾಡುವುದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯ. ಈ ದಿಶೆಯಲ್ಲಿ ಸ್ಥಳೀಯ, ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಅನೇಕ ಸಂಸ್ಥೆಗಳು ಕಾರ್ಯನಿರತವಾಗಿವೆ. ಇದರಲ್ಲಿ ಜಾಗತಿಕ ನೆಲೆಯಲ್ಲಿ ಆದ ಅತಿ ಮುಖ್ಯವಾದ ಪ್ರಯತ್ನ ಎಂದರೆ ಅಸಾಮರ್ಥ್ಯವಿರುವ ವ್ಯಕ್ತಿಗಳ ಹಕ್ಕುಗಳನ್ನು ಕುರಿತ ಸಂಯುಕ್ತ ರಾಷ್ಟ್ರಗಳ ಸಮಾಲೋಚನೆ.

ಜಗತ್ತಿನಾದ್ಯಂತ ಅಸಾಮರ್ಥ್ಯದ ಹಿನ್ನೆಲೆಯಲ್ಲಿ ಪಕ್ಷಪಾತ ಅಥವಾ ಭೇದಭಾವ ಇದೆ ಎಂಬುದನ್ನು ಈ ಸಮಾಲೋಚನೆ ಸ್ಪಷ್ಟಪಡಿಸಿದೆ. ಈ ಭೇದಭಾವದ ಸ್ವರೂಪವನ್ನೂ ಇದು ತೆರೆದಿಟ್ಟಿದೆ. ಅಸಾಮರ್ಥ್ಯವಿರುವವರ

ಹಿನ್ನೆಲೆಯಲ್ಲಿ ಭೇದಭಾವ ಎಂದರೆ, ಅಸಾಮರ್ಥ್ಯದ ನೆಪದಲ್ಲಿ ಇತರರಿಗೆ ಸಮನಾಗಿ ರಾಜಕೀಯ, ಆರ್ಥಿಕ, ಸಾಮಾಜಿಕ, ನಾಗರಿಕ ಅಥವಾ ಇತರ ಯಾವುದೇ ಕ್ಷೇತ್ರಗಳಲ್ಲಿ ಮಾನವಹಕ್ಕುಗಳನ್ನು ಮತ್ತು ಮೂಲಭೂತ ಸ್ವಾತಂತ್ರ್ಯವನ್ನು ಊನಗೊಳಿಸುವ ಅಥವಾ ಇಲ್ಲವಾಗಿಸುವ ಉದ್ದೇಶದ ಯಾವುದೇ ಭೇದಭಾವ, ಹೊರಹಾಕುವಿಕೆ ಅಥವಾ ನಿರ್ಬಂಧ. ಇದು ಸಮಂಜಸವಾದ ವಸತಿಯ ನಿರಾಕರಣೆಯನ್ನೂ ಒಳಗೊಂಡಂತೆ ಎಲ್ಲ ರೀತಿಯ ಪಕ್ಷಪಾತ ಅಥವಾ ತಾರತಮ್ಯಗಳನ್ನು ಒಳಗೊಳ್ಳುತ್ತದೆ. ಇಪ್ಪತ್ತೊಂದನೇ ಶತಮಾನದ ಪ್ರಪ್ರಥಮ ಮಾನವಹಕ್ಕುಗಳ ಒಪ್ಪಂದವಾದ ಈ ಸಮಾಲೋಚನೆಯ ದಾಖಲೆ ಅಸಾಮರ್ಥ್ಯವಿರುವ ವ್ಯಕ್ತಿಗಳ ಹಕ್ಕುಗಳ ಸಾಧನೆಯಲ್ಲಿ ಪ್ರಮುಖ ಹೆಜ್ಜೆಯಾಗಿದೆ. ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಎಲ್ಲ ಮಾನವಹಕ್ಕುಗಳು ಮತ್ತು ಮೂಲಭೂತ ಸ್ವಾತಂತ್ರವನ್ನು ಅವರು ಇತರರಿಗೆ ಸಮನಾಗಿ ಅನುಭವಿಸುವಂತೆ ಉತ್ತೇಜಿಸುವುದು, ರಕ್ಷಿಸುವುದು ಮತ್ತು ಖಚಿತಪಡಿಸಿಕೊಳ್ಳುವುದು ಈ ಸಮಾಲೋಚನೆಯ ಮೂಲಭೂತ ಉದ್ದೇಶ. ದೀರ್ಘಕಾಲದ ಬೌದ್ಧಿಕ, ದೈಹಿಕ, ಮಾನಸಿಕ ಹಾಗೂ ಇಂದ್ರೀಯ ಊನಗಳಿಂದಾಗಿ ಹಲವಾರು ಅಡೆತಡೆಗಳ ಕಾರಣದಿಂದ ಇತರರಿಗೆ ಸಮಾನವಾಗಿ ಸಮಾಜದಲ್ಲಿ ಭಾಗವಹಿಸಲು ಅವಕಾಶವಿಲ್ಲದಿರುವವರೆಲ್ಲರೂ ಅಸಾಮರ್ಥ್ಯತೆಯ ಪರಿಧಿಯೊಳಗೆ ಬರುತ್ತಾರೆ. ಅಸಾಮರ್ಥ್ಯವುಳ್ಳ ವ್ಯಕ್ತಿಗಳು ಹೇಗೆ ಎಲ್ಲ ಹಕ್ಕುಗಳಿಗೂ ಭಾಜನರಾಗುತ್ತಾರೆ ಮತ್ತು ಅರ್ಹರಾಗುತ್ತಾರೆ ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆ. ಈ ಹಕ್ಕುಗಳನ್ನು ಚಲಾಯಿಸಲು ಯಾವ ಕ್ಷೇತ್ರಗಳಲ್ಲಿ ಮಾರ್ಪಾಡುಗಳನ್ನು ಮಾಡಬೇಕು ಎಂಬುದನ್ನು ತೋರಿಸಿಕೊಟ್ಟಿದೆ. ಯಾವ ಯಾವ ರೀತಿಗಳಲ್ಲಿ ಈ ಹಕ್ಕುಗಳ ಉಲ್ಲಂಘನೆಯಾಗಿದೆ ಅವುಗಳನ್ನು ಹೇಗೆ ಸರಿಪಡಿಸಬೇಕು ಎಂಬುದನ್ನೂ ಈ ದಾಖಲೆ ಗುರುತಿಸಿದೆ.

ಅಸಾಮರ್ಥ್ಯರನ್ನು ಕುರಿತ ಸಂಯುಕ್ತ ರಾಷ್ಟ್ರಗಳ ಈ ಸಮಾಲೋಚನೆಯ ಒಪ್ಪಂದವು 2006ರ ಡಿಸೆಂಬರ್ 13ರಂದು ನ್ಯೂಯಾರ್ಕ್ ಯುನೈಟೆಡ್ ನೇಷನ್ಸ್ ಪ್ರಧಾನ ಕಛೇರಿಯಲ್ಲಿ ಅಂಗಿಕೃತವಾಗಿ, ಮೇ 3, 2008ರಂದು ಜಾರಿಗೆ ಬಂದಿತು.

ಅಸಾಮರ್ಥ್ಯರನ್ನು ಕುರಿತ ಮನೋಭಾವ ಮತ್ತು ಉಪಕ್ರಮಗಳಿಗೆ ಸಂಬಂಧಿಸಿದಂತೆ ಈ ಸಮಾಲೋಚನೆಯು ಒಂದು ವಿಶಿಷ್ಟ ಧನಾತ್ಮಕ ಪಲ್ಲಟವನ್ನು ಕ್ರಾಂತಿಕಾರಿಯಾಗಿ ಸಾಧಿಸಿತು. ದಾನಧರ್ಮ, ವೈದ್ಯಕೀಯ ಸೇವೆ, ಸಮಾಜರಕ್ಷಣೆಗೆ ಭಾಜನರಾಗುವ ಘಟಕಗಳು ಎಂಬ ಒಟ್ಟು ಪರಿಕಲ್ಪನೆಯನ್ನೇ ಹೋಗಲಾಡಿಸಿ ಅವರು ತಮ್ಮದೇ ಹಕ್ಕುಗಳನ್ನುಳ್ಳ, ಹಕ್ಕುಗಳನ್ನು ಮುಟ್ಟಬಲ್ಲ ತಮ್ಮ ಒಪ್ಪಿಗೆಯ ಆಧಾರದ ಮೇಲೆಯೇ ಬದುಕನ್ನು ಕಟ್ಟಿಕೊಳ್ಳಬಲ್ಲ ಹಾಗೂ ಸಾಮಾಜಿಕವಾಗಿ ಕ್ರಿಯಾಶೀಲರಾಗಿರಬಲ್ಲ 'ವ್ಯಕ್ತಿ'ಗಳು ಎಂಬ ವಿಶಿಷ್ಟ ಸಾಮಾಜಿಕ ಪಲ್ಲಟವನ್ನೇ ಪ್ರತ್ಯಕ್ಷವಾಗಿಸಿಬಿಟ್ಟಿತು.

**ಸಮಾಲೋಚನಾ ದಾಖಲೆಯ ತತ್ವಗಳು :**

- ಸ್ವಆಯ್ಕೆಗಳನ್ನು ಮಾಡುವ ಸ್ವಾತಂತ್ರ್ಯ ಮತ್ತು ವ್ಯಕ್ತಿಸ್ವಾತಂತ್ರ್ಯವನ್ನೂ ಒಳಗೊಂಡಂತೆ ಆನುವಂಶಿಕವಾದ ಘನತೆ ಮತ್ತು ವೈಯಕ್ತಿಕ ಸ್ವಾಯತ್ತತೆ ಇವುಗಳನ್ನು ಕುರಿತ ಗೌರವ;
- ನಿಷ್ಪಕ್ಷಪಾತ;
- ಸಂಪೂರ್ಣ ಮತ್ತು ಪರಿಣಾಮಕಾರಿ ಭಾಗವಹಿಕೆ ಮತ್ತು ಸಮಾಜದಲ್ಲಿ ಅಂತರ್ಗತತೆ;
- ವಿಭಿನ್ನತೆಗೆ ಗೌರವ ಮತ್ತು ಅಸಾಮರ್ಥ್ಯವಿರುವ ವ್ಯಕ್ತಿಗಳನ್ನು ಮಾನವ ವೈವಿಧ್ಯದ ಭಾಗವಾಗಿ ಮಾನವೀಯತೆಯಿಂದ ಸ್ವೀಕಾರ.

- ಅವಕಾಶಗಳಲ್ಲಿ ಸಮಾನತೆ;
- ಅವಕಾಶಗಳ ಎಟುಕುವಿಕೆ;
- ಪುರುಷ ಮತ್ತು ಮಹಿಳೆಯರ ಸಮಾನತೆ; ಮತ್ತು
- ಅಸಾಮರ್ಥ್ಯವಿರುವ ಮಕ್ಕಳಲ್ಲಿ ಮೂಡುತ್ತಿರುವ ಸಾಮರ್ಥ್ಯಗಳಿಗೆ ಗೌರವ ಮತ್ತು ಅಸ್ಮಿತೆಯನ್ನು ಉಳಿಸಿಕೊಳ್ಳಲು ಅವರ ಹಕ್ಕುಗಳ ಕುರಿತ ಗೌರವ.

ಅಸಾಮರ್ಥ್ಯವಿರುವವರ ಕುರಿತಾದ ಈ ಸಮಾಲೋಚನೆಯ ಮೂರು ದಶಕಗಳ ಚಳುವಳಿ ಅತಿ ದೊಡ್ಡ ಯಶಸ್ಸನ್ನು ಸಾಧಿಸಿದೆ. ಅಸಾಮರ್ಥ್ಯವಿರುವ ವ್ಯಕ್ತಿಗಳ ಏಳಿಗೆಗೆ ಇದೊಂದು ಪ್ರಮುಖ ಪೂರ್ವಸೂಚನೆಯಾಗಿದೆ. ಅಸಾಮರ್ಥ್ಯವಿರುವವರನ್ನು ಹೇಗೆ ಕಾಣುತ್ತಿದ್ದೇವೆ ಮತ್ತು ಹೇಗೆ ಕಾಣಬೇಕು ಎಂಬುದರ ಕುರಿತು ಜಗತ್ತನ್ನು ಕಣ್ಣುತೆರೆಸಿದ ವಿಶಿಷ್ಟ ದಾಖಲೆ ಇದಾಗಿದೆ.ಜಾಗತಿಕ ವಿಷಯವಾಗಿ ಶಿಕ್ಷಣದಲ್ಲಿ ಅಸಮಾನತೆಯ ವಿಚಾರವನ್ನು ಈ ದಾಖಲೆ ಸಾಂಗವಾಗಿ ವಿಮರ್ಶಿಸಿ ಕಾರ್ಯಯೋಜನೆಗೆ  ಅಗತ್ಯವಾದ ಸಲಹೆಗಳನ್ನು ನೀಡಿದೆ.

ಈ ಸಮಾಲೋಚನೆಯ ಅಂಶಗಳು ಸಂಯುಕ್ತ ರಾಷ್ಟ್ರಗಳ ಸಭೆಯ ಮೂರು ವರ್ಷಗಳಷ್ಟು ದೀರ್ಘಕಾಲದ ಆಲೋಚನೆ ಮತ್ತು ಕಾರ್ಯಗಳ ಫಲಶ್ರುತಿಯಾಗಿದೆ. ಇದನ್ನು ಅಸಾಮರ್ಥ್ಯತೆಯ ಚಳುವಳಿಗಳು ಸ್ವಾಗತಿಸಿದವಾದರೂ ಬಹಳಷ್ಟು ವಿಷಯಗಳು ವಿವಾದಾಸ್ಪದವಾಗಿದ್ದು ಇದರಲ್ಲಿ ಅಂತರ್ಗತ ಶಿಕ್ಷಣವೂ ಒಂದಾಗಿದೆ. ಇದರಲ್ಲಿ ಅನೇಕ ವಿಷಯಗಳನ್ನು ಪ್ರಸ್ತಾಪಿಸಲಾಗಿದ್ದು,  ಆರೋಗ್ಯ, ಶಿಕ್ಷಣ, ಉದ್ಯೋಗ, ನ್ಯಾಯ ಲಭ್ಯತೆ, ವೈಯಕ್ತಿಕ ಸುರಕ್ಷೆ ಮತ್ತು ಮಾಹಿತಿಗೆ ಅವಕಾಶ ಇವು ಪ್ರಮುಖವಾಗಿವೆ.

ಸಮಾಲೋಚನಾ ದಾಖಲೆಯ ಪ್ರತಿ ವಿಧಿಯ ವಿಷಯವನ್ನು ಕೆಳಗೆ ಕೊಡಲಾಗಿದೆ. ಇವುಗಳ ವಿವರಗಳನ್ನು ನೀವು ಅಂತರ್ಜಾಲದಲ್ಲಿ ಗುರುತಿಸಿ, ಕಲಿಯಿರಿ.

**ಪೀಠಿಕೆ**

ವಿಧಿ 1 – ಉದ್ದೇಶ

ವಿಧಿ 2 – ವ್ಯಾಖ್ಯೆಗಳು

ವಿಧಿ 3 – ಸಾಮಾನ್ಯ ತತ್ವಗಳು

ವಿಧಿ 4 – ಸಾಮಾನ್ಯ ಬದ್ಧತೆಗಳು

ವಿಧಿ 5 – ಸಮಾನತೆ ಮತ್ತು ನಿಷ್ಪಕ್ಷಪಾತ

ವಿಧಿ 6 – ಅಸಾಮರ್ಥ್ಯವಿರುವ ಮಹಿಳೆಯರು

ವಿಧಿ 7 – ಅಸಾಮರ್ಥ್ಯವಿರುವ ಮಕ್ಕಳು

ವಿಧಿ 8 – ಜಾಗೃತಿ ಮೂಡಿಸುವಿಕೆ

ವಿಧಿ 9 – ಅವಕಾಶಗಳ ಎಟುಕುವಿಕೆ

ವಿಧಿ 10 – ಬದುಕುವ ಹಕ್ಕು

ವಿಧಿ 11 – ಅಪಾಯದ ಹಕ್ಕುಗಳು ಮತ್ತು ಮಾನವೀಯ ತುರ್ತುಕ್ರಮಗಳು, ಕಾನೂನಿನ ಮುಂದೆ ಸಮಾನ ಗಣನೆ, ನ್ಯಾಯ

ವಿಧಿ 12 – ಕಾನೂನಿನ ಮುಂದೆ ಸಮಾನ ಪರಿಗಣನೆ

ವಿಧಿ 13 – ನ್ಯಾಯ ಲಭ್ಯತೆ

ವಿಧಿ 14 – ಸ್ವಾತಂತ್ರ್ಯ ಮತ್ತು ವೈಯಕ್ತಿಕ ಸುರಕ್ಷೆ

ವಿಧಿ 15 – ಹಿಂಸೆ ಮತ್ತು ಕ್ರೌರ್ಯ, ಅಮಾನವೀಯ ಅಥವಾ ಅಗೌರವಯುತವಾದ ಪರಿಗಣನೆಯಿಂದ ಮುಕ್ತಿ

ವಿಧಿ 16 – ಶೋಷಣೆ, ಹಿಂಸೆ, ಮತ್ತು ನಿಂದೆ ಇವುಗಳಿಂದ ಮುಕ್ತಿ

ವಿಧಿ 17 – ವ್ಯಕ್ತಿಯ ಸಮಗ್ರತೆಯ ರಕ್ಷಣೆ

ವಿಧಿ 18 – ಸಂಚಾರ ಸ್ವಾತಂತ್ರ್ಯ ಮತ್ತು ರಾಷ್ಟ್ರೀಯತೆ

ವಿಧಿ 19 – ಸ್ವತಂತ್ರ ಬದುಕು ಮತ್ತು ಸಮುದಾಯ ಅಂತರ್ಗತೆ

ವಿಧಿ 20 – ವೈಯಕ್ತಿಕ ಚಲನೆ

ವಿಧಿ 21 – ಅಭಿವ್ಯಕ್ತಿ ಮತ್ತು ಅಭಿಪ್ರಾಯ ಸ್ವಾತಂತ್ರ್ಯ, ಮಾಹಿತಿ ಲಭ್ಯತೆ

ವಿಧಿ 22 – ಗೌಪ್ಯತೆಗೆ ಗೌರವ

ವಿಧಿ 23 – ಮನೆ ಮತ್ತು ಕುಟುಂಬಕ್ಕೆ ಗೌರವ

ವಿಧಿ 24 – ಶಿಕ್ಷಣ

ವಿಧಿ 25 – ಆರೋಗ್ಯ

ವಿಧಿ 26 – ವಸತಿ ಮತ್ತು ಪುನರ್ವಸತಿ

ವಿಧಿ 27 – ಕೆಲಸ ಮತ್ತು ಉದ್ಯೋಗ

ವಿಧಿ 28 – ಸಮರ್ಪಕ ಗುಣಮಟ್ಟದ ಬದುಕು ಮತ್ತು ಸಾಮಾಜಿಕ ರಕ್ಷಣೆ

ವಿಧಿ 29 – ರಾಜಕೀಯ ಮತ್ತು ಸಾರ್ವಜನಿಕ ಬದುಕಿನಲ್ಲಿ ಭಾಗವಹಿಕೆ

ವಿಧಿ 30 – ಸಾಂಸ್ಕೃತಿಕ ಬದುಕು, ಮನರಂಜನೆ, ವಿಶ್ರಾಂತಿ ಮತ್ತು ಕ್ರೀಡೆಗಳಲ್ಲಿ ಭಾಗವಹಿಕೆ

ವಿಧಿ 31 – ಸಂಖ್ಯಾಗಣನೆ ಮತ್ತು ದತ್ತ ಸಂಗ್ರಹಣೆ

ವಿಧಿ 32 – ಅಂತರರಾಷ್ಟ್ರೀಯ ಸಹಕಾರ

ವಿಧಿ 33 – ರಾಷ್ಟ್ರೀಯ ಅನ್ವಯ ಮತ್ತು ಮೇಲ್ವಿಚಾರಣೆ

ವಿಧಿ 34 – ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಹಕ್ಕುಗಳನ್ನು ಕುರಿತ ಸಮಿತಿ

ವಿಧಿ 35 – ರಾಷ್ಟ್ರಪಕ್ಷಗಳಿಂದ ವರದಿ

ವಿಧಿ 36 – ವರದಿಗಳ ಪರಿಗಣನೆ

ವಿಧಿ 37 – ರಾಷ್ಟ್ರಪಕ್ಷಗಳು ಮತ್ತು ಸಮಿತಿಗಳ ನಡುವಿನ ಸಹಕಾರ

ವಿಧಿ 38 – ಇತರ ಸಂಸ್ಥಾಂಗಗಳೊಂದಿಗೆ ಸಮಿತಿಗಳ ಸಂಬಂಧ

ವಿಧಿ 39 – ಸಮಿತಿಯ ವರದಿ

ವಿಧಿ 40 – ರಾಷ್ಟ್ರ ಪಕ್ಷಗಳ ಸಮ್ಮೇಳನ

ವಿಧಿ 41 – ಠೇವಣಿ

ವಿಧಿ 42 – ಸಹಿ

ವಿಧಿ 43 – ಬದ್ಧರಾದವರ ಒಪ್ಪಿಗೆ

ವಿಧಿ 44 – ಪ್ರಾಂತೀಯ ಸಮನ್ವಯ ಸಂಸ್ಥೆಗಳು

ವಿಧಿ 45 – ಚಾಲನೆಗೆ ಪ್ರವೇಶ

ವಿಧಿ 46 – ಮೀಸಲಾತಿ

ವಿಧಿ 47 – ತಿದ್ದುಪಡಿ

ವಿಧಿ 48 – ಖಂಡನೆ

ವಿಧಿ 49 – ಲಭ್ಯರೂಪ

ವಿಧಿ 50 – ಅಧಿಕೃತ ಪಠ್ಯಗಳು

ಅಸಾಮರ್ಥ್ಯವಿರುವ ವ್ಯಕ್ತಿಗಳ ಹಕ್ಕುಗಳನ್ನು ಕುರಿತ ಸಂಯುಕ್ತ ರಾಷ್ಟ್ರಗಳ ಸಮಾಲೋಚನೆಯ (UNCRPD) ಕೆಲವು ವಿಧಿಗಳ ವಿಷಯ ವಿವರಣೆಯನ್ನು ಕೆಳಗೆ ಕೊಡಲಾಗಿದೆ. ಇವುಗಳನ್ನು ಓದಿ ತಿಳಿದು ಇದರ ಶೈಕ್ಷಣಿಕ ನಿಹಿತಾರ್ಥಗಳನ್ನು ಗುರುತಿಸಿಕೊಳ್ಳಿ.

## ವಿಧಿ–1 ಉದ್ದೇಶ :

ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಎಲ್ಲ ಮಾನವಹಕ್ಕುಗಳು ಮತ್ತು ಮೂಲಭೂತ ಸ್ವಾತಂತ್ರವನ್ನು ಅವರು ಇತರರಿಗೆ ಸಮನಾಗಿ ಅನುಭವಿಸುವಂತೆ ಉತ್ತೇಜಿಸುವುದು, ರಕ್ಷಿಸುವುದು ಮತ್ತು ಖಚಿತಪಡಿಸಿಕೊಳ್ಳುವುದು ಈ ಸಮಾಲೋಚನೆಯ ಮೂಲಭೂತ ಉದ್ದೇಶ.

ದೀರ್ಘಕಾಲದ ಬೌದ್ಧಿಕ, ದೈಹಿಕ, ಮಾನಸಿಕ ಹಾಗೂ ಐಂದ್ರೀಯ ಊನಗಳಿಂದಾಗಿ ಹಲವಾರು ಅಡೆತಡೆಗಳ ಕಾರಣದಿಂದ ಇತರರಿಗೆ ಸಮಾನವಾಗಿ ಸಮಾಜದಲ್ಲಿ ಭಾಗವಹಿಸಲು ಅವಕಾಶವಿಲ್ಲದಿರುವವರೆಲ್ಲರೂ ಅಸಾಮರ್ಥ್ಯತೆಯ ಪರಿಧಿಯೊಳಗೆ ಬರುತ್ತಾರೆ.

## ವಿಧಿ – 7 ಅಸಾಮರ್ಥ್ಯತೆಯುಳ್ಳ ಮಕ್ಕಳು

1. ಅಸಾಮರ್ಥ್ಯವಿರುವ ಮಕ್ಕಳು ಇತರ ಮಕ್ಕಳಂತೆಯೇ ಎಲ್ಲ ಮಾನವಹಕ್ಕುಗಳನ್ನು ಮತ್ತು ಮೂಲಭೂತ ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಲು, ರಾಷ್ಟ್ರ ಪಕ್ಷಗಳು ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು.
2. ಅಸಾಮರ್ಥ್ಯವುಳ್ಳ ಮಕ್ಕಳನ್ನು ಕುರಿತ ಎಲ್ಲ ಕಾರ್ಯಗಳಲ್ಲಿಯೂ ಮಕ್ಕಳ ಅಗತ್ಯವನ್ನು ಪ್ರಮುಖವಾಗಿ ಪರಿಗಣಿಸಬೇಕು.
3. ಅಸಾಮರ್ಥ್ಯವಿರುವ ಮಕ್ಕಳು ಅವರನ್ನು ಪ್ರಭಾವಿಸುವ ಎಲ್ಲ ಅಂಶಗಳ ಕುರಿತು ತಮ್ಮ ಅಭಿಪ್ರಾಯಗಳನ್ನು ಸರಾಗವಾಗಿ ವ್ಯಕ್ತಪಡಿಸುವ ಹಕ್ಕುಗಳನ್ನು ಹೊಂದಿದ್ದಾರೆ ಎಂಬುದನ್ನು ರಾಷ್ಟ್ರ ಪಕ್ಷಗಳು ಖಚಿತಪಡಿಸಿಕೊಳ್ಳಬೇಕು. ಇತರರಂತೆಯೇ ಅವರ ವಯಸ್ಸು ಮತ್ತು ಪಕ್ವತೆಗೆ ಅನುಗುಣವಾಗಿ ಅವರ ಅಭಿಪ್ರಾಯಗಳಿಗೆ ಗಮನಕೊಡಬೇಕು. ಅವರ ಹಕ್ಕುಗಳನ್ನು ಅನುಭವಿಸಲು ಅಗತ್ಯವಾದ ವಯಸ್ಸಿಗನುಗುಣವಾದ ನೆರವು ನೀಡಬೇಕು.

## ವಿಧಿ– 14 ವ್ಯಕ್ತಿಯ ಸ್ವಾತಂತ್ರ್ಯ ಮತ್ತು ಸುರಕ್ಷೆ

1. ಕೆಳಗಿನ ವಿಷಯಗಳಲ್ಲಿ ಅಸಾಮರ್ಥ್ಯವುಳ್ಳ ವ್ಯಕ್ತಿಗಳನ್ನು ಇತರರಿಗೆ ಸಮನಾಗಿ ಪರಿಗಣಿಸಲಾಗಿದೆ ಎಂಬುದನ್ನು ರಾಷ್ಟ್ರಪಕ್ಷಗಳು ಖಚಿತಪಡಿಸಿಕೊಳ್ಳಬೇಕು.
   (a) ವ್ಯಕ್ತಿಯ ಸ್ವಾತಂತ್ರ್ಯ ಮತ್ತು ಸುರಕ್ಷೆಯನ್ನು ಅನುಭವ;
   (b) ಕಾನೂನೇತರವಾಗಿ ಅಥವಾ ಯಾದೃಚ್ಛಿಕವಾಗಿ ಅವರ ಸ್ವಾತಂತ್ರ್ಯದಿಂದ ವಂಚಿತರಾಗದಂತೆ; ಯಾವುದೇ ರೀತಿಯ ಸ್ವಾತಂತ್ರ್ಯದ ವಂಚನೆ ಕಾನೂನಾತ್ಮಕವಾಗಿರುವಂತೆ, ಯಾವುದೇ ಕಾರಣಕ್ಕೂ ಸ್ವಾತಂತ್ರ್ಯದ ವಂಚನೆಯನ್ನು ಅಸಾಮರ್ಥ್ಯದ ಅಧಾರದ ಮೇಲೆ ಸಮರ್ಥಿಸಿಕೊಳ್ಳದಂತೆ;
2. ಯಾವುದೇ ಪ್ರಕ್ರಿಯೆಯ ಮೂಲಕ ಅಸಾಮರ್ಥ್ಯವಿರುವ ವ್ಯಕ್ತಿಗಳು ಸ್ವಾತಂತ್ರ್ಯದಿಂದ ವಂಚಿತರಾದರೆ, ರಾಷ್ಟ್ರಪಕ್ಷಗಳು, ಇತರರಿಗೆ ಸಮನಾಗಿ ಅಂತರರಾಷ್ಟ್ರೀಯ ಮಾನವಹಕ್ಕುಗಳ ಆಶ್ವಾಸನೆಗಳಿಗೆ ಅರ್ಹರಾಗಿದ್ದಾರೆಂಬುದನ್ನು ಮತ್ತು ಪ್ರಸ್ತುತ ಸಮಾಲೋಚನೆಯ ಗುರಿಗಳು ಮತ್ತು ತತ್ವಗಳಿಗನುಗಣವಾಗಿ ಅವರನ್ನು– ಸಮರ್ಪಕ ವಸತಿಯನ್ನೂ ಒಳಗೊಂಡಂತೆ– ಪರಿಗಣಿಸಲಾಗಿದೆ ಎಂಬುದನ್ನೂ ಖಚಿತಪಡಿಸಿಕೊಳ್ಳಬೇಕು.

## ವಿಧಿ– 21 ಅಭಿವ್ಯಕ್ತಿ ಮತ್ತು ಅಭಿಪ್ರಾಯ ಸ್ವಾತಂತ್ರ್ಯ, ಮತ್ತು ಮಾಹಿತಿಯ ಹಕ್ಕು

ಅಸಾಮರ್ಥ್ಯವಿರುವ ವ್ಯಕ್ತಿಗಳು ಅಭಿವ್ಯಕ್ತಿ ಮತ್ತು ಅಭಿಪ್ರಾಯ ಸ್ವಾತಂತ್ರ್ಯವನ್ನು ಚಲಾಯಿಸಲು, ಈ ಸಮಾಲೋಚನೆಯ ವಿಧಿ 2 ಕ್ಕೆ ಅನುಗುಣವಾಗಿ ಇತರರಿಗೆ ಸಮನಾಗಿ ಅವರ ಆಯ್ಕೆಯ ಸಂವಹನದ ಎಲ್ಲ ರೀತಿಗಳಲ್ಲಿ ಮಾಹಿತಿಯನ್ನು ಬಯಸುವ, ಪಡೆಯುವ, ಕೊಡುವ ಹಕ್ಕನ್ನು ಚಲಾಯಿಸಬಹುದು ಎಂಬುದನ್ನು ಎಲ್ಲ ರಾಷ್ಟ್ರಪಕ್ಷಗಳೂ ಖಚಿತಪಡಿಸಿಕೊಳ್ಳಬೇಕು. ಇದು ಕೆಳಗಿನ ಅಂಶಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕು.

(a) ಸಾಮಾನ್ಯ ಸಾರ್ವಜನಿಕರಿಗೆ ಕೊಡಬಯಸುವ ಮಾಹಿತಿಯನ್ನು ಅಸಾಮರ್ಥ್ಯವುಳ್ಳವರಿಗೂ ಅವರಿಗೆ ಅಗತ್ಯವಾದ, ಅವರು ಗ್ರಹಿಸಬಹುದಾದ ರೂಪ ಮತ್ತು ತಂತ್ರಜ್ಞಾನದ ಮೂಲಕ ಸಕಾಲಿಕವಾಗಿ ಯಾವುದೇ ಹೆಚ್ಚುವರಿ ಹಣವಿಲ್ಲದೆ ಕೊಡುವುದು;

(b) ಕಛೇರಿ ಅಂತರ್‌ಕ್ರಿಯೆಗಳಲ್ಲಿ ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಆಯ್ಕೆಗನುಗುಣವಾಗಿ ಸಂಕೇತ ಭಾಷೆಗಳು, ಬ್ರೈಲ್, ಬೆಂಬಲವಾಗುವ ಪರ್ಯಾಯ ಸಂವಹನ ಕ್ರಮಗಳು, ಮತ್ತು ಲಭ್ಯವಿರುವ ಎಲ್ಲ ಸಾಧನಗಳು, ಮಾರ್ಗಗಳು ಮತ್ತು ಸಂವಹನ ರೀತಿಗಳನ್ನು ಒಪ್ಪಿಕೊಳ್ಳಬೇಕು ಮತ್ತು ಅವರಿಗೆ ಸಿಗುವಂತೆ ಅನುಕೂಲಿಸಬೇಕು;

(c) ಸಾಮಾನ್ಯ ಸಾರ್ವಜನಿಕರಿಗೆ ಸೇವೆಕೊಡುವ ನಿಯೋಗಗಳನ್ನು, ಅಂತರ್ಜಾಲಗಳನ್ನೂ ಒಳಗೊಂಡಂತೆ, ಅಸಾಮರ್ಥ್ಯವಿರುವವರಿಗೂ ಅವರಿಗೆ ಅಗತ್ಯವಾದ, ಮಾಹಿತಿ ಮತ್ತು ಸೇವೆಯನ್ನು, ಅವರು ಗ್ರಹಿಸಬಹುದಾದ ರೂಪ ಮತ್ತು ತಂತ್ರಜ್ಞಾನದ ಮೂಲಕ ಒದಗಿಸುವಂತೆ ಒತ್ತಾಯಿಸುವುದು;

(d) ಸಮೂಹಮಾಧ್ಯಮಗಳನ್ನು, ಅಂತರ್ಜಾಲದ ಮೂಲಕ ಮಾಹಿತಿಕೊಡುವವರನ್ನೂ ಒಳಗೊಂಡಂತೆ, ಅವರ ಸೇವೆಗಳು ಅಸಾಮರ್ಥ್ಯವಿರುವ ವ್ಯಕ್ತಿಗಳಿಗೂ ಸಿಗುವಂತೆ ಮಾಡಲು ಪ್ರೋತ್ಸಾಹಿಸುವುದು; ಮತ್ತು

(e) ಸಂಕೇತ ಭಾಷೆಗಳ ಬಳಕೆಯನ್ನು ಗುರುತಿಸುವುದು ಮತ್ತು ಉತ್ತೇಜಿಸುವುದು.

## 24 ನೇ ವಿಧಿ–ಅಸಾಮರ್ಥ್ಯವುಳ್ಳವರ ಶಿಕ್ಷಣ

1. ರಾಷ್ಟ್ರಪಕ್ಷಗಳು ಅಸಾಮರ್ಥ್ಯವಿರುವವರ ಶಿಕ್ಷಣದ ಹಕ್ಕನ್ನು ಗುರುತಿಸಬೇಕು. ಯಾವುದೇ ತಾರತಮ್ಯವಿಲ್ಲದೆ ಈ ಹಕ್ಕುಗಳನ್ನು ಸಾಧಿಸುವ ಹಿನ್ನೆಲೆಯಲ್ಲಿ, ರಾಷ್ಟ್ರಪಕ್ಷಗಳು ಎಲ್ಲ ಹಂತಗಳಲ್ಲೂ ಅಂತರ್ಗತ ಶಿಕ್ಷಣವನ್ನು ಮತ್ತು ಜೀವನ ಪರ್ಯಂತ ಕಲಿಕೆಯನ್ನು ಖಚಿತಪಡಿಸಿಕೊಳ್ಳಬೇಕು. ಇವು ಕೆಳಕಂಡ ಅಂಶಗಳ ಕಡೆಗೆ ನಿರ್ದೇಶಿತವಾಗಿರಬೇಕು:

    a) ಮಾನವಶಕ್ತಿಯ ಸಂಪೂರ್ಣ ವಿಕಾಸ ಮತ್ತು ಘನತೆ, ಸ್ವಸಾರ್ಥಕ್ಯತೆಯ ಭಾವ, ಮಾನವ ಹಕ್ಕುಗಳು, ಮೂಲಭೂತ ಸ್ವಾತಂತ್ರ್ಯ ಮತ್ತು ಮಾನವ ವೈವಿಧ್ಯತೆ – ಇವುಗಳ ಕುರಿತ ಗೌರವವನ್ನು ಹೆಚ್ಚಿಸುವುದು;

    b) ಅಸಾಮರ್ಥ್ಯವಿರುವ ವ್ಯಕ್ತಿಗಳ ವ್ಯಕ್ತಿತ್ವ, ಪ್ರತಿಭೆ ಮತ್ತು ಸೃಜನಶೀಲತೆಯ ವಿಕಾಸ, ಜೊತೆಗೆ ಅವರ ಮಾನಸಿಕ ಹಾಗೂ ದೈಹಿಕ ಸಾಮರ್ಥ್ಯಗಳ ಗರಿಷ್ಠ ಬೆಳವಣಿಗೆ; ಮತ್ತು

    c) ಅಸಾಮರ್ಥ್ಯವಿರುವ ವ್ಯಕ್ತಿಗಳು ಮುಕ್ತ ಸಮಾಜದಲ್ಲಿ ಭಾಗವಹಿಸಲು ಸಮರ್ಥರಾಗುವಂತೆ ಮಾಡುವುದು.

2. ಈ ಹಕ್ಕನ್ನು ಸಾಧಿಸುವ ಮಾರ್ಗದಲ್ಲಿ, ರಾಷ್ಟ್ರಪಕ್ಷಗಳು ಕೆಳಗಿನ ವಿಷಯಗಳನ್ನು ಖಚಿತ ಪಡಿಸಿಕೊಳ್ಳಬೇಕು:

a) ಅಸಾಮರ್ಥ್ಯವಿರುವ ವ್ಯಕ್ತಿಗಳನ್ನು ಅಸಾಮರ್ಥ್ಯದ ಆಧಾರದ ಮೇಲೆ ಸಾಮಾನ್ಯ ಶಿಕ್ಷಣ, ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ, ಸೆಕೆಂಡರಿ ಶಿಕ್ಷಣದಿಂದ ಹೊರಗಿಟ್ಟಿರಬಾರದು

b) ಅಸಾಮರ್ಥ್ಯವಿರುವ ವ್ಯಕ್ತಿಗಳಿಗೆ ಅವರು ಬದುಕುವ ಸಮುದಾಯದ ಇತರರಂತೆಯೇ ಅಂತರ್ಗತ ವ್ಯವಸ್ಥೆಯ, ಗುಣಮಟ್ಟದ ಮತ್ತು ಉಚಿತವಾದ ಪ್ರಾಥಮಿಕ ಶಿಕ್ಷಣ ಮತ್ತು ಸೆಕೆಂಡರಿ ಶಿಕ್ಷಣಕ್ಕೆ ಅವಕಾಶವಿರಬೇಕು.

c) ವ್ಯಕ್ತಿಯ ಅಗತ್ಯಕ್ಕೆ ತಕ್ಕಂತೆ ಸಮರ್ಪಕ ವಸತಿ ವ್ಯವಸ್ಥೆಯನ್ನು ಒದಗಿಸಬೇಕು.

d) ಅಸಾಮರ್ಥ್ಯವಿರುವ ವ್ಯಕ್ತಿಗಳಿಗೆ ಸಾಮಾನ್ಯ ಶಿಕ್ಷಣ ವ್ಯವಸ್ಥೆಯೊಳಗೆ ಪರಿಣಾಮಕಾರಿ ಶಿಕ್ಷಣವನ್ನು ಅನುಕೂಲಿಸಲು ಅಗತ್ಯವಾದ ಬೆಂಬಲ ಸಿಗಬೇಕು. ಮತ್ತು

e) ಸಂಪೂರ್ಣ ಅಂತರ್ಗತತೆಯ ಗುರಿಯಾದ ಗರಿಷ್ಟ ಶೈಕ್ಷಣಿಕ ಮತ್ತು ಸಾಮಾಜಿಕ ಬೆಳವಣಿಗೆಯನ್ನುಂಟುಮಾಡುವ ಪರಿಸರದಲ್ಲಿ ಪರಿಣಾಮಕಾರಿಯಾದ ವೈಯಕ್ತಿಕ ಬೆಂಬಲ ಕ್ರಮಗಳನ್ನು ಒದಗಿಸಬೇಕು.

3. ಸಮುದಾಯದ ಸದಸ್ಯರಾಗಿ ಮತ್ತು ಶಿಕ್ಷಣದಲ್ಲಿ ಸಮನಾದ ಭಾಗವಹಿಕೆಯನ್ನು ಉತ್ತೇಜಿಸಲು ರಾಷ್ಟ್ರಪಕ್ಷಗಳು ಅಸಾಮರ್ಥ್ಯವಿರುವವರಲ್ಲಿ ಜೀವನ ಕೌಶಲಗಳು ಮತ್ತು ಸಾಮಾಜಿಕ ಬೆಳವಣಿಗೆಯ ಕೌಶಲಗಳನ್ನು ಬೆಳೆಸಬೇಕು.ಇದಕ್ಕಾಗಿ ರಾಷ್ಟ್ರಪಕ್ಷಗಳು ಸಮರ್ಪಕ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದ್ದು ಅವು ಈ ಕೆಳಗಿನವುಗಳನ್ನು ಒಳಗೊಂಡಿರಬೇಕು:

a) ಬ್ರೈಲ್ ಕಲಿಕೆ, ಪರ್ಯಾಯ ಲಿಪಿ, ಸಂವಹನದ ಅನಿರ್ಬಂಧಿತ ಮತ್ತು ಪರ್ಯಾಯ ಮಾರ್ಗಗಳು, ಹೊಂದಾಣಿಕೆಯ ಹಾಗೂ ಚಲನೆಯ ಕೌಶಲಗಳು ಮತ್ತು ಗೆಳೆಯರ ಬೆಂಬಲ ಮತ್ತು ನಿರ್ವಹಣೆಯನ್ನು ಅನುಕೂಲಿಸುವಿಕೆ.

b) ಕಿವುಡರ ಸಮುದಾಯದ ಸಂಕೇತ ಭಾಷಾಕಲಿಕೆಯನ್ನು ಉತ್ತೇಜಿಸುವಿಕೆ ಮತ್ತು ಭಾಷಿಕ ಅಸ್ಮಿತೆಯನ್ನು ಅನುಕೂಲಿಸುವಿಕೆ; ಮತ್ತು

c) ಅಂಧರು, ಕಿವುಡರು ಅಥವಾ ಕಿವುಡು ಅಂಧರು ಇವರಿಗೆ ಸಮರ್ಪಕವಾದ ಭಾಷೆ ಅಥವಾ ಅಭಿವ್ಯಕ್ತಿಗೆ ಅಗತ್ಯವಾದ ಸಂವಹನ ಕ್ರಮದಲ್ಲಿ ಅವರ ಶೈಕ್ಷಣಿಕ ಮತ್ತು ಸಾಮಾಜಿಕ ಬೆಳವಣಿಗೆಯನ್ನು ಗರಿಷ್ಟಗೊಳಿಸುವ ಪರಿಸರದಲ್ಲಿ ಶಿಕ್ಷಣ ನೀಡುವುದನ್ನು ಖಚಿತಪಡಿಸಿಕೊಳ್ಳುವುದು.

4. ಈ ಹಕ್ಕುಗಳ ಸಾಧಿತವಾಗಿವೆ ಎಂಬುದನ್ನು ಖಚಿತಪಡಿಸಿಕೊಳ್ಳಲು, ರಾಷ್ಟ್ರಪಕ್ಷಗಳು ಸಂಕೇತ ಭಾಷೆಯಲ್ಲಿ, ಬ್ರೈಲ್ ಭಾಷೆಯಲ್ಲಿ ಅರ್ಹತೆ ಪಡೆದಿರುವ, ಅಸಾಮರ್ಥ್ಯತೆ ಇರುವ ಅಧ್ಯಾಪಕರನ್ನು ಉದ್ಯೋಗಕ್ಕೆ ಸೇರಿಸಿಕೊಳ್ಳುವ, ಶಿಕ್ಷಣದ ಎಲ್ಲ ಹಂತಗಳಲ್ಲಿ ಈ ರೀತಿಯ ಮಕ್ಕಳೊಂದಿಗೆ ಕೆಲಸಮಾಡುವ ಎಲ್ಲರನ್ನೂ ತರಬೇತಿಗೊಳಿಸುವಂತಹ ಕ್ರಮಗಳನ್ನು ಕೈಗೊಳ್ಳಬೇಕು. ಈ ರೀತಿಯ ತರಬೇತಿಯು ಅಸಾಮರ್ಥ್ಯತೆಯ ಅರಿವು ಮೂಡಿಸುವಿಕೆ, ಸಮರ್ಪಕ ಪರ್ಯಾಯ ಕ್ರಮಗಳ ಬಳಕೆ, ಸಂವಹನದ ಪರ್ಯಾಯ ಮಾರ್ಗಗಳ ಅರಿವು, ಅಸಾಮರ್ಥ್ಯವಿರುವವರಿಗೆ ಬೆಂಬಲವಾಗುವ ಶೈಕ್ಷಣಿಕ ತಂತ್ರಗಳು ಮತ್ತು ಸಾಮಗ್ರಿಗಳ ಜ್ಞಾನ ಇವುಗಳನ್ನು ಒಳಗೊಳ್ಳಬೇಕು.

5. ಅಸಾಮರ್ಥ್ಯವಿರುವ ವ್ಯಕ್ತಿಗಳು ಸಾಮಾನ್ಯ ಶಿಕ್ಷಣವನ್ನು, ವೃತ್ತಿ ಶಿಕ್ಷಣವನ್ನು, ವಯಸ್ಕ ಶಿಕ್ಷಣವನ್ನು ಜೀವನ ಪರ್ಯಂತ ಕಲಿಕೆಯನ್ನು ಯಾವುದೇ ತಾರತಮ್ಯವಿಲ್ಲದೆ ಇತರರಿಗೆ ಸಮನಾಗಿ ಪಡಯಲು ಅವಕಾಶವಿದೆ ಎಂಬುದನ್ನು ರಾಷ್ಟ್ರಪಕ್ಷಗಳು ಖಚಿತಪಡಿಸಿಕೊಳ್ಳಬೇಕು. ಇದರ ಸಾಧನೆಗಾಗಿ, ಅಸಾಮರ್ಥ್ಯವಿರುವವರಿಗೆ ಸಮರ್ಪಕ ವಸತಿ ಒದಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

## ವಿಧಿ– 25 ಆರೋಗ್ಯ

ಅಸಾಮರ್ಥ್ಯವುಳ್ಳ ವ್ಯಕ್ತಿಗಳು ಅವರ ಅಸಾಮರ್ಥ್ಯದ ಆಧಾರದ ಮೇಲೆ ಯಾವುದೇ ತಾರತಮ್ಯವಿಲ್ಲದೆ, ಗರಿಷ್ಟ ಪಡೆಯಬಹುದಾದ ಆರೋಗ್ಯವನ್ನು ಅನುಭವಿಸುವ ಹಕ್ಕನ್ನು ಹೊಂದಿರುವರೆಂಬುದನ್ನು ರಾಷ್ಟ್ರಪಕ್ಷಗಳು ಖಚಿತಪಡಿಸಿಕೊಳ್ಳಬೇಕು. ಅಸಾಮರ್ಥ್ಯವಿರುವ ವ್ಯಕ್ತಿಗಳಿಗೆ ಎಲ್ಲ ಸಮರ್ಪಕ ಆರೋಗ್ಯ ಸೇವೆಗಳೂ–ಲಿಂಗ ಸಂವೇದನಾಶೀಲವಾದ, ಆರೋಗ್ಯ ಸಂಬಂಧಿ ಪುನರ್ವಸತಿಯನ್ನೂ ಒಳಗೊಂಡಂತೆ– ಲಭ್ಯವಾಗುತ್ತಿವೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ನಿರ್ದಿಷ್ಟವಾಗಿ, ರಾಷ್ಟ್ರಪಕ್ಷಗಳು:

(a) ಅಸಾಮರ್ಥ್ಯವುಳ್ಳ ವ್ಯಕ್ತಿಗಳಿಗೆ ಇತರರಿಗೆ ಒದಗಿಸುವ ರೀತಿಯಲ್ಲಿ, ಗುಣಮಟ್ಟದಲ್ಲಿ, ಮತ್ತು ಅವರಿಗೆ ಸಾಧ್ಯವಿರುವ ಬೆಲೆಯಲ್ಲಿ ಆರೋಗ್ಯ ಸೇವೆ ಮತ್ತು ಕಾರ್ಯಕ್ರಮಗಳನ್ನು ಒದಗಿಸಬೇಕು. ಇದು ಲೈಂಗಿಕ ಮತ್ತು ಸಂತಾನೋತ್ಪತ್ತಿ ಆರೋಗ್ಯ ಮತ್ತು ಜನಸಂಖ್ಯೆ ಆಧಾರಿತ ಸಾರ್ವಜನಿಕ ಆರೋಗ್ಯ ಕಾರ್ಯಕ್ರಮಗಳ ಕ್ಷೇತ್ರಗಳನ್ನೂ ಒಳಗೊಂಡಿರಬೇಕು.

(b) ಅಸಾಮರ್ಥ್ಯವಿರುವವರಿಗೆ ಈ ಆರೋಗ್ಯ ಸೇವೆಗಳನ್ನು ನಿರ್ದಿಷ್ಟವಾಗಿ ಅವರ ಅಸಾಮರ್ಥ್ಯಗಳ ಕಾರಣದಿಂದಾಗಿ ಕೊಡಬೇಕು ಮಾತ್ರವಲ್ಲ, ಈ ಅಸಾಮರ್ಥ್ಯಗಳನ್ನು ಶೀಘ್ರವಾಗಿ ಪತ್ತೆಹಚ್ಚಿ ಅದಕ್ಕೆ ಅಗತ್ಯವಾದ ಮಧ್ಯವರ್ತಿ ಕಾರ್ಯಕ್ರಮಗಳನ್ನು ಮತ್ತು ಅಸಾಮರ್ಥ್ಯಗಳನ್ನು ಕಡಿಮೆ ಮಾಡಲು ಮುಂದೆ ಒದಗಬಹುದಾದ ಅಸಾಮರ್ಥ್ಯಗಳನ್ನು ತಡೆಯಲು ವಿನ್ಯಾಸಗೊಳಿಸಿದ ಸೇವೆಗಳನ್ನು ಮಕ್ಕಳಿಗೆ ಮತ್ತು ವಯಸ್ಕರಿಬ್ಬರಿಗೂ ನೀಡಬೇಕು.

(c) ಗ್ರಾಮೀಣ ಪ್ರದೇಶಗಳೂ ಸೇರಿದಂತೆ, ಈ ಆರೋಗ್ಯ ಸೇವೆಗಳನ್ನು ವ್ಯಕ್ತಿಗಳ ಸಮುದಾಯದ ಸಮೀಪದಲ್ಲಿಯೇ ಕೊಡಬೇಕು;

(d) ಸಾರ್ವಜನಿಕ ಮತ್ತು ಖಾಸಗಿ ಆರೋಗ್ಯ ಸೇವೆಗಳಲ್ಲಿರುವವರಿಗೆ ಮಾನವ ಹಕ್ಕುಗಳ ಅರಿವನ್ನು ಬೆಳೆಸುತ್ತಾ, ಘನತೆ, ಸ್ವಾತಂತ್ರ್ಯ ಮತ್ತು ಅಸಾಮರ್ಥ್ಯವಿರುವವರ ಅಗತ್ಯಗಳನ್ನು ತರಬೇತಿ ಮತ್ತು ನೈತಿಕ ಗುಣಮಟ್ಟಗಳ ಪ್ರಸಾರದೊಂದಿಗೆ ಬೆಳೆಸುತ್ತಲೇ ಅಗತ್ಯವಿರುವ ಆರೋಗ್ಯ ವೃತ್ತಿಪರರನ್ನು ಇತರರಂತೆ ಅಸಾಮರ್ಥ್ಯವುಳ್ಳವರಿಗೂ ಅದೇ ಗುಣಮಟ್ಟದಲ್ಲಿ ಮುಕ್ತವಾಗಿ ಮತ್ತು ಮಾಹಿತಿ ಕೊಟ್ಟು ಅವರ ಒಪ್ಪಿಗೆಯ ಮೇರೆಗೆ, ಒದಗಿಸಬೇಕು.

(e) ಆರೋಗ್ಯ ವಿಮೆ ಮತ್ತು ಜೀವವಿಮೆಗೆ ರಾಷ್ಟ್ರೀಯ ಕಾನೂನಿನಲ್ಲಿ ಅವಕಾಶವಿರುವಾಗ ಅಸಾಮರ್ಥ್ಯವಿರುವವರಿಗೆ ತಾರತಮ್ಯವಾಗುವುದನ್ನು ತಡೆಗಟ್ಟಿ, ಅದನ್ನು ಸಮರ್ಪಕವೂ ನ್ಯಾಯವೂ ಆದ ರೀತಿಯಲ್ಲಿ ಒದಗಿಸಬೇಕು.

(f) ಅಸಾಮರ್ಥ್ಯತೆಯ ಆಧಾರದ ಮೇಲೆ ಆರೋಗ್ಯ ಸೇವೆ ಅಥವಾ ಆಹಾರ ಅಥವಾ ದ್ರವಗಳನ್ನು ಒದಗಿಸುವುದರಲ್ಲಿ ನಿರಾಕರಣೆಯನ್ನು ತಡೆಹಿಡಿಯಬೇಕು.

## ವಿಧಿ– 26 ವಸತಿ ಮತ್ತು ಪುನರ್ವಸತಿ

1. ಸಮಾನವಯಸ್ಕರ ಬೆಂಬಲವನ್ನೂ ಒಳಗೊಂಡಂತೆ, ರಾಷ್ಟ್ರಪಕ್ಷಗಳು ಅಸಾಮರ್ಥ್ಯವುಳ್ಳವರು ಗರಿಷ್ಠಮಟ್ಟದಲ್ಲಿ ಸ್ವತಂತ್ರರಾಗಿರುವಂತೆ ಮಾಡಲು ಅವರಲ್ಲಿ ಸಂಪೂರ್ಣ ದೈಹಿಕ, ಮಾನಸಿಕ, ಸಾಮಾಜಿಕ ಮತ್ತು ಔದ್ಯೋಗಿಕ ಸಾಮರ್ಥ್ಯಗಳನ್ನು ಬೆಳೆಸಲು, ಮತ್ತು ಬದುಕಿನ ಎಲ್ಲ ವಿಷಯಗಳಲ್ಲಿ ಸಂಪೂರ್ಣ ಅಂತರ್ಗತತೆಯನ್ನು ಮತ್ತು ಭಾಗವಹಿಕೆಯನ್ನು ಸಾಧಿಸಲು ಪರಿಣಾಮಕಾರಿ ಮತ್ತು ಸಮರ್ಪಕ ಕ್ರಮಗಳನ್ನು ಕೈಗೊಳ್ಳಬೇಕು. ಇದಕ್ಕಾಗಿ ರಾಷ್ಟ್ರ ಪಕ್ಷಗಳು, ಮುಖ್ಯವಾಗಿ ಆರೋಗ್ಯ, ಉದ್ಯೋಗ, ಶಿಕ್ಷಣ ಮತ್ತು ಸಮಾಜ ಸೇವೆಗಳಲ್ಲಿ ಸಮಗ್ರ ವಸತಿ ಮತ್ತು ಪುನರ್ವಸತಿ ಸೇವೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಸಂಘಟಿಸಬೇಕು, ಬಲಗೊಳಿಸಬೇಕು ಮತ್ತು ವಿಸ್ತರಿಸಬೇಕು. ಇವುಗಳನ್ನು

   (a) ಸಾಧ್ಯವಾದಷ್ಟು ಬೇಗನೆ ಪ್ರಾರಂಭಿಸುವುದರ ಜೊತೆಗೆ ಇವು ವ್ಯಕ್ತಿಯ ಅಗತ್ಯ ಮತ್ತು ಸಾಮರ್ಥ್ಯಗಳ ಬಹುವಿಷಯಕ ಮಾಪನದ ಮೇಲೆ ಆಧರಿತವಾಗಿರಬೇಕು.

   (b) ಸಮುದಾಯ ಮತ್ತು ಸಮಾಜದ ಎಲ್ಲ ವಿಷಯಗಳಲ್ಲೂ ಭಾಗವಹಿಕೆ ಮತ್ತು ಅಂತರ್ಗತತೆಯನ್ನು ಸ್ವಯಂಪ್ರೇರಿತವಾಗಿ ಬೆಂಬಲಿಸಬೇಕು ಮತ್ತು ಇದು ಗ್ರಾಮೀಣ ಪ್ರದೇಶವನ್ನೂ ಒಳಗೊಂಡಂತೆ, ಅಸಾಮರ್ಥ್ಯವಿರುವವರಿಗೆ ಅವರ ಸಮೀಪದಲ್ಲೇ ಸಿಗುವಂತೆ ನೋಡಿಕೊಳ್ಳಬೇಕು.

2. ರಾಷ್ಟ್ರಪಕ್ಷಗಳು ವಸತಿ ಹಾಗೂ ಪುನರ್ವಸತಿ ಸೇವೆಗಳಲ್ಲಿ ಕೆಲಸಮಾಡುತ್ತಿರುವ ವೃತ್ತಿಪರರಿಗೆ ಮತ್ತು ಸಿಬ್ಬಂದಿವರ್ಗದವರಿಗೆ ಪ್ರಾರಂಭಿಕ ಮತ್ತು ನಿರಂತರ ತರಬೇತಿಯ ಬೆಳವಣಿಗೆಯನ್ನು ಪ್ರೋತ್ಸಾಹಿಸಬೇಕು.

3. ರಾಷ್ಟ್ರಪಕ್ಷಗಳು ಅಸಾಮರ್ಥ್ಯವಿರುವ ವ್ಯಕ್ತಿಗಳಿಗಾಗಿ ವಿನ್ಯಾಸಗೊಂಡ ಸಹಾಯಕ ಸಾಧನಗಳು ಮತ್ತು ತಂತ್ರಜ್ಞಾನಗಳ ಲಭ್ಯತೆ, ಜ್ಞಾನ ಮತ್ತು ಬಳಸುವಿಕೆಯನ್ನು ಉತ್ತೇಜಿಸಬೇಕು.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 1

ಕೆಳಗಿ ವಿಧಿಗಳ ಸಂಖ್ಯೆಗಳನ್ನು ಕೊಡಲಾಗಿದೆ. ಸಂಖ್ಯೆಗೆ ಅನುಗುಣವಾಗಿ ಕೊಟ್ಟಿರುವ ವಿಧಿಗಳ ವಿಷಯಗಳನ್ನು ಹೊಂದಿಸಿ.

| | | | |
|---|---|---|---|
| 1 | ವಿಧಿ–1 | ಅಭಿವ್ಯಕ್ತಿ ಸ್ವಾತಂತ್ರ್ಯ | a) |
| 2 | ವಿಧಿ–7 | ಶಿಕ್ಷಣ | B) |
| 3 | ವಿಧಿ–14 | ಆರೋಗ್ಯ | c) |
| 4 | ವಿಧಿ–21 | ಅಸಾಮರ್ಥ್ಯವುಳ್ಳ ಮಕ್ಕಳು | d) |
| 5 | ವಿಧಿ–24 | ಉದ್ದೇಶ | e) |
| 6 | ವಿಧಿ–25 | ಪುನರ್ವಸತಿ | f) |
| 7 | ವಿಧಿ–26 | ವ್ಯಕ್ತಿಯ ಸ್ವಾತಂತ್ರ್ಯ ಮತ್ತು ರಕ್ಷಣೆ | g) |

## 1.4.3.2. ಎಲ್ಲರಿಗೂ ಶಿಕ್ಷಣ EFA (MILLENNIUM DEVELOPMENT GOALS)

ಎಲ್ಲರಿಗೂ ಶಿಕ್ಷಣ ಎಂಬುದು ಸಂಯುಕ್ತ ರಾಷ್ಟ್ರಗಳ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯ ಮುಂದಾಳತ್ವದಲ್ಲಿ ನಡೆದ ಜಾಗತಿಕ ಚಳುವಳಿ. 2015ರ ವೇಳೆಗೆ ಎಲ್ಲ ಮಕ್ಕಳ, ಯುವಜನರ ಮತ್ತು ವಯಸ್ಕರ ಕಲಿಕಾ ಅಗತ್ಯಗಳನ್ನು ಪೂರೈಸುವುದು ಇದರ ಗುರಿಯಾಗಿದ್ದಿತು.

ಆಫ್ರಿಕಾದ ಸೆನೆಗಲ್‌ನಲ್ಲಿರುವ 'ವರ್ಲ್ಡ್ ಎಜುಕೇಷನ್ ಫೋರಮ್'ನಲ್ಲಿ ಏಪ್ರಿಲ್ 2000ದಲ್ಲಿ ದಕ್ಕರ್ ಫ್ರೇಮ್ ವರ್ಕ್ ಎಲ್ಲರಿಗೂ ಶಿಕ್ಷಣ ಚಳುವಳಿಯನ್ನು ಪ್ರಾರಂಭಿಸಿತು. ಎಲ್ಲ ಮಕ್ಕಳೂ ಅವರಿಗೆ ಅಗತ್ಯವಾದ ಅಥವಾ ಅವರು ಬಯಸುವ ಶಿಕ್ಷಣವನ್ನು ಪಡೆಯಲು ಸಾಧ್ಯವಿಲ್ಲದ ಹಿನ್ನೆಲೆಯಲ್ಲಿ ಅಂತಹ ಮಕ್ಕಳಿಗೆ ಸಹಾಯಮಾಡಲು 'ಎಲ್ಲರಿಗೂ ಶಿಕ್ಷಣ' ಎಂಬ ಗುರಿಯನ್ನು ಅಳವಡಿಸಿಕೊಳ್ಳಲಾಯಿತು.

ಈ ಬೃಹತ್ ಚಳುವಳಿಯನ್ನು ಮುನ್ನಡೆಸಲು ಮತ್ತು ಎಲ್ಲರಿಗೂ ಶಿಕ್ಷಣ ದೊರಕುವಂತೆ ಅಂತರರಾಷ್ಟ್ರೀಯ ಪಯತ್ನಗಳನ್ನು ಸಂಯೋಜಿಸಲು ಯುನೆಸ್ಕೊ ಸಂಸ್ಥೆಗೆ ಆದೇಶಿಸಲಾಯಿತು. ಸರ್ಕಾರಗಳು, ವಿಕಾಸಾತ್ಮಕ ಆಯೋಗಗಳು, ನಾಗರಿಕ ಸಮಾಜಗಳು, ಸರ್ಕಾರೇತರ ಸಂಸ್ಥೆಗಳು, ಮತ್ತು ಮಾಧ್ಯಮಗಳು ಈ ಗುರಿಯನ್ನು ಸಾಧಿಸುವ ಪಾಲುದಾರಿಕೆಯನ್ನು ವಹಿಸಿಕೊಂಡಿದ್ದವು. ಇದೇ ಸಂದರ್ಭದಲ್ಲಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ತ್ವರಿತಗೊಳಿಸುವ ಗುರಿಯನ್ನು ಹೊಂದಿರುವ 'ಎಲ್ಲರಿಗೂ ಶಿಕ್ಷಣ'ದ ಚಳುವಳಿಯನ್ನು ಕಾರ್ಯಗತಗೊಳಿಸಲು, ಗುಣಮಟ್ಟದ ಸಾರ್ವತ್ರಿಕ ಶಿಕ್ಷಣದ ಪ್ರಗತಿಯನ್ನು ಚುರುಕುಗೊಳಿಸಲು 'ಫಾಸ್ಟ್ ಟ್ರಾಕ್ ಇನಿಶಿಯೇಟೀವ್' (ವೇಗದ ಹಾದಿಯಲ್ಲಿ ಉಪಕ್ರಮ) ಅನ್ನು ಯೋಜಿಸಿಕೊಳ್ಳಲಾಯಿತು.

ವಿಶ್ವದಾದ್ಯಂತ ಇತರರೊಡನೆ ಪರಸ್ಪರ ಅರಿವಿನೊಂದಿಗೆ ಒಟ್ಟಾಗಿ ಕೆಲಸಮಾಡುವ ಗುರಿಯನ್ನು ತಲುಪಲು ಯುನೆಸ್ಕೊ ಸಂಸ್ಥೆಯು ಪ್ರಯತ್ನಿಸುತ್ತದೆ. ಇದು ಅಂತರರಾಷ್ಟ್ರೀಯ ಸಹಕಾರವನ್ನು ಸಂಯೋಜಿಸಿ ಆ ಮೂಲಕ ಶಿಕ್ಷಣ, ವಿಭಿನ್ನ ಸಮುದಾಯದಲ್ಲಿ ಬೆಳೆಯುವ ಮತ್ತು ಕಲಿಯುವ ಅವಕಾಶ, ತಂತ್ರಜ್ಞಾನದ ಬೆಳವಣಿಗೆಯ ಮೂಲಕ ಕಲಿಕೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಇವುಗಳಿಗೆ ಎಡೆಮಾಡಿಕೊಡುತ್ತದೆ. ಈ ಸಹಕಾರವು ಜಗತ್ತಿನಾದ್ಯಂತ ಮಕ್ಕಳಿಗಾಗಿ ಮತ್ತು ಇತರರಿಗಾಗಿ ಅವಕಾಶಗಳನ್ನು ತೆರೆದಿಡಲು ಸಾಧ್ಯಮಾಡಿಕೊಡುತ್ತದೆ. ಎಲ್ಲ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣವನ್ನು ನೀಡುವ ಗುರಿಗಳನ್ನು ರೂಪಿಸಿಕೊಳ್ಳಲಾಗಿದೆ. ಈ ಸಹಕಾರದಿಂದಲೇ ಶೈಕ್ಷಣಿಕ ಕಾರ್ಯಕ್ರಮಗಳನ್ನೂ ರೂಪಿಸಲಾಗಿದೆ.

ಎಲ್ಲರಿಗೂ ಶಿಕ್ಷಣದ ಚಳುವಳಿಯು ಸಹಸ್ರಮಾನದ ಅಭಿವೃದ್ಧಿಯ ಎಂಟು ಗುರಿಗಳನ್ನು ಸಾಧಿಸುವಲ್ಲಿಯೂ ಕೊಡುಗೆಯನ್ನಿತ್ತಿದೆ. ಅದರಲ್ಲಿ ಪ್ರಮುಖವಾಗಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಕುರಿತ ಎರಡನೆಯ ಮತ್ತು ಶಿಕ್ಷಣದಲ್ಲಿ ಲಿಂಗ ಸಮಾನತೆಯನ್ನು ಕುರಿತ ಮೂರನೆಯ ಗುರಿಗಳಿಗೆ ಹೆಚ್ಚಿನ ಗಮನವನ್ನು ಕೊಟ್ಟಿದೆ.

ಯುನೆಸ್ಕೊವು 'ಎಲ್ಲರಿಗೂ ಶಿಕ್ಷಣ'ವನ್ನು ಕುರಿತಂತೆ ವಾರ್ಷಿಕ ಜಾಗತಿಕ ಮೇಲ್ವಿಚಾರಣಾ ವರದಿಯನ್ನೂ ತಯಾರಿಸುತ್ತದೆ.

## ಎಲ್ಲರಿಗೂ ಶಿಕ್ಷಣ ಮತ್ತು ಅಂತರ್ಗತತೆ

ಎಲ್ಲರಿಗೂ ಶಿಕ್ಷಣದ ಪ್ರಮುಖ ಅಂಶ ಅಂತರ್ಗತತೆ. ಎಲ್ಲರಿಗೂ ಶಿಕ್ಷಣ ಎಂಬುದು ಒಂದು ಜಾಗತಿಕ ಚಳುವಳಿಯಾಗಿರುವುದರಿಂದ, ವಿವಿಧ ಸಂಸ್ಕೃತಿ, ಧರ್ಮ ಮತ್ತು ಅಸಾಮರ್ಥ್ಯ ಇತ್ಯಾದಿ ಭಿನ್ನತೆ ಇರುವ ಎಲ್ಲ ಮಕ್ಕಳೂ ಇದರ ಒಳಗೆ ಬರುತ್ತಾರೆ. ವಿವಿಧ ರಾಷ್ಟ್ರಗಳು ಅಂತರ್ಗತತೆಯನ್ನು ಹೇಗೆ ಅರ್ಥೈಸುತ್ತವೆ ಎಂಬುದು ಇಲ್ಲಿ ಎದುರಾಗುವ ಸಮಸ್ಯೆ. ಮತ್ತೂ ನಿರ್ದಿಷ್ಟವಾಗಿ ಹೇಳುವುದಾದರೆ, ವಿಶೇಷ ಅವಶ್ಯಕತೆಗಳ ವ್ಯಾಖ್ಯೆ ಸಮಸ್ಯೆಗೆ ಮೂಲವಾಗುತ್ತದೆ. ಈ ಮಕ್ಕಳು ಉದ್ದೇಶಿತ ಗುರಿಯನ್ನು ತಲುಪುವಲ್ಲಿ ಈ ಅರ್ಥವಂತಿಕೆ ಅಡ್ಡಿಯಾಗುವುದೇ ಎಂಬುದೂ ಪ್ರಶ್ನೆಯೇ. ಎಲ್ಲ ಮಕ್ಕಳನ್ನೂ ಶಿಕ್ಷಣದೊಳಗೆ ಒಳಪಡಿಸಿಕೊಳ್ಳಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಶಾಲೆಗಳು ಎಲ್ಲ ಮಕ್ಕಳೂ ಉದ್ದೇಶಿತ ಗುರಿಗಳನ್ನು ಹೇಗೆ ತಲುಪಬಲ್ಲರು ಎಂಬುದನ್ನು ಕಂಡುಕೊಳ್ಳಲು ಒಟ್ಟಿಗೆ ಕೆಲಸ ಮಾಡುತ್ತವೆ. ಕೆಲವರಿಗೆ ಇದು ಸವಾಲಿನ ಕೆಲಸವಾದರೂ ಎಲ್ಲರಿಗೂ ಶಿಕ್ಷಣ ಎಂಬಲ್ಲಿ 'ಎಲ್ಲರೂ' ಎಂಬ ಪದದ ನಿಜವಾದ ಅರ್ಥ ಏನು ಎಂಬುದು ಇಲ್ಲಿ ಮುಖ್ಯವಾಗುತ್ತದೆ. ಈ ಉತ್ತರವೇ ರಾಷ್ಟ್ರದಿಂದ ರಾಷ್ಟ್ರಕ್ಕೆ ಭಿನ್ನವಾಗಿರುವಂತಹುದು. 2025ರ ವೇಳೆಗೆ ಅಸಾಮರ್ಥ್ಯವಿರುವ ಮಕ್ಕಳ ಸಂಖ್ಯೆ ಹೆಚ್ಚಾಗುತ್ತದೆ ಎಂದು ಊಹಿಸಲಾಗಿದೆ. ಆ ಸಂಖ್ಯೆಯ ಗರಿಷ್ಟ ಸಂಖ್ಯೆಯ ಮಕ್ಕಳು ಪ್ರಗತಿಪರ ರಾಷ್ಟ್ರಗಳಲ್ಲಿರುತ್ತಾರೆ. ಆದ್ದರಿಂದ, ರೂಪಿಸಿಕೊಂಡಿರಲಾಗಿರುವ ಕಲಿಕೆ ಹಾಗೂ ಶಿಕ್ಷಣದ ಗುರಿಗಳಲ್ಲಿ ಈ ಎಲ್ಲ ಮಕ್ಕಳನ್ನೂ ಒಳಮಾಡಿಕೊಳ್ಳುವುದು ಹೇಗೆ ಎಂಬುದಕ್ಕೆ ಉತ್ತರ ಕಂಡುಕೊಳ್ಳಬೇಕಾಗಿದೆ. ತಂತ್ರಜ್ಞಾನದಂತೆ ಅಂತರ್ಗತತೆಯೂ ಮುಂದುವರಿದು ಶಾಲೆಗಳಲ್ಲಿ ಸಾಮಾನ್ಯವಾದ ಅಂಶವಾಗಬಹುದು ಎಂದು ಆಶಿಸಬಹುದು.

2015ರ ಒಳಗೆ ಸಹಸ್ರಮಾನದ ಅಭಿವೃದ್ಧಿಯ ಶೈಕ್ಷಣಿಕ ಗುರಿಗಳನ್ನು ಸಾಧಿಸುವುದು ಅತ್ಯಂತ ಅವಶ್ಯಕವಾಗಿತ್ತು(ಈ ಅವಧಿ ಈಗಾಗಲೇ ಮುಗಿದಿದೆ). ಆಂತಹ ಜಾಗತಿಕ ಗುರಿಯನ್ನು ಸಾಧಿಸುವುದಕ್ಕಾಗಿಯೇ ಅಸಾಮರ್ಥ್ಯವಿರುವವರಿಗೆ ಶಿಕ್ಷಣದ ಹಕ್ಕು ಎಂಬ ಹೆಸರಿನಲ್ಲಿ 'ಎಲ್ಲರಿಗೂ ಶಿಕ್ಷಣ'ದ ಸಾರಥ್ಯವನ್ನು ರೂಪಿಸಲಾಯಿತು. ಈ ಘಟಕದಲ್ಲಿ ಅಸಾಮರ್ಥ್ಯವಿರುವವರ ಹಕ್ಕುಗಳನ್ನು ಆಧರಿಸಿದ ಸನ್ನಿವೇಶವನ್ನು, ಮೂಲಭೂತ ಶೈಕ್ಷಣಿಕ ಅವಕಾಶಗಳ ಲಭ್ಯತೆ ಮತ್ತು ಸಮಗ್ರವಾದ ಎಲ್ಲರಿಗೂ ಶಿಕ್ಷಣದ ಧ್ಯೇಯವನ್ನು ಸಾಧಿಸುವ ದೃಷ್ಟಿಯಿಂದ ಮಾತ್ರವಲ್ಲ, ಪ್ರಮುಖವಾಗಿ ಅದಕ್ಕೆ ಅಗತ್ಯವಾದ ಎಲ್ಲ ಹಂತಗಳಲ್ಲಿನ ನೀತಿನಿಯಮಗಳು ಮತ್ತು ಪ್ರಕ್ರಿಯೆಗಳ ಚೌಕಟ್ಟಿನಲ್ಲಿ ವಿವರಿಸಲಾಗುತ್ತದೆ.

ಅಸಾಮರ್ಥ್ಯತೆಯ ಚಳುವಳಿ ಅಪೇಕ್ಷಿತ ಬದಲಾವಣೆಗಳಿಗಾಗಿ ಜಾಗತಿಕ ಶಕ್ತಿಯಾಗಿ ಪರಿಣಮಿಸುತ್ತಿದೆ. ಇದು ಅಸಾಮರ್ಥ್ಯತೆಯುಳ್ಳ ವ್ಯಕ್ತಿಗಳ ಗುಂಪುಗಳಲ್ಲಿನೊಳಗಿನ, ಅಸಾಮರ್ಥ್ಯ ಸಮುದಾಯ ಮತ್ತು ಸರ್ಕಾರದ ಜೊತೆಗಿನ ಹಾಗೂ ಅಸಾಮರ್ಥ್ಯರ ಸಮುದಾಯ ಮತ್ತು ಮಾನವ ಹಕ್ಕು ಸಮುದಾಯದ ನಡುವಿನ ಸಹಯೋಗದೊಂದಿಗೆ ಮುಂದುವರಿಯುತ್ತಿದೆ. ಸಂಯುಕ್ತ ರಾಷ್ಟ್ರಗಳ ವಿಶೇಷ ವರದಿಯು "ಕಲಿಕೆಗೆ ಅಡೆತಡೆಯಿರುವ ಕಲಿಕೆದಾರರ ಶಿಕ್ಷಣವು ಕೆಲವು ರಾಷ್ಟ್ರಗಳಲ್ಲಿ, ಕಳೆದ ದಶಕದಲ್ಲಿ ಬೃಹತ್ತಾದ ಬದಲಾವಣೆಯನ್ನು

ಕಂಡಿದೆ. ಇವರ ಶಿಕ್ಷಣಕ್ಕೆ ಸಂಬಂಧಿಸಿದ ಮನೋಭಾವ ಮತ್ತು ಜಾಗೃತಿಗಳಲ್ಲಿ ವಿಶಿಷ್ಟವಾದ ಪಲ್ಲಟಗಳಾಗಿವೆ. ಉದಾಹರಣೆಗೆ, ಅಸಾಮರ್ಥ್ಯವಿರುವ ಮಕ್ಕಳನ್ನು ಇತರರಿಗೆ ಕಾಣದಂತೆ ಅಡಗಿಸಿಡುವುದು ಈಗ ಅಷ್ಟೇನೂ ಸಾಮಾನ್ಯವಾಗಿ ಕಾಣುವುದಿಲ್ಲ. ಈ ವಿದ್ಯಾರ್ಥಿಗಳ ಹೆತ್ತವರಿಗೆ ಈ ಮಕ್ಕಳಿಗೆ ಶಿಕ್ಷಣ ಕೊಡಬೇಕಾದ ಅಗತ್ಯ ಮನವರಿಕೆಯಾಗಿದೆ. ಈ ಬದಲಾವಣೆಗಳು ಅಸಾಮರ್ಥ್ಯವಿರುವ ಮಕ್ಕಳಿಗೆ ಮಾತ್ರ ಪ್ರಯೋಜನವಾಗಿ ಅವರ ಬದುಕನ್ನು ಶ್ರೀಮಂತಗೊಳಿಸುತ್ತಿರುವುದು ಮಾತ್ರವಲ್ಲ, ಎಲ್ಲ ಮಕ್ಕಳ ಕಲಿಕಾ ಅನುಭವಗಳನ್ನು ವಿಸ್ತರಿಸುತ್ತಿವೆ" ಎಂದು ವರದಿ ಮಾಡಿದೆ.

'ಎಲ್ಲರಿಗೂ ಶಿಕ್ಷಣ' ಚಳುವಳಿಯ ಸಾರಥ್ಯದ ಪ್ರಯತ್ನವು 'ಎಲ್ಲರಿಗೂ ಶಿಕ್ಷಣ' ಎಂಬುದು ಮೂಲಭೂತ ಮಾನವ ಹಕ್ಕು, ಅಸಾಮರ್ಥ್ಯವಿರುವವರನ್ನು ಒಳಪಡಿಸಿಕೊಳ್ಳದೆ ಇದನ್ನು ಸಾಧಿಸುವುದು ಸಾಧ್ಯವಿಲ್ಲ ಎಂಬ ಅಂಶದ ಕಡೆಗೆ ಜಾಗತಿಕ ಗಮನವನ್ನು ಸೆಳೆದಿದೆ.

ಎಲ್ಲರಿಗೂ ಶಿಕ್ಷಣದ ಮೂಲಭೂತ ಆಶ್ವಾಸನೆಗಳನ್ನು 1990ರಲ್ಲಿ ಥೈಲೆಂಡ್‌ನ ಜಾಮ್‌ಟಿಯನ್‌ನಲ್ಲಿ ವರ್ಲ್ಡ್ ಬ್ಯಾಂಕ್, ಯುನೆಸ್ಕೊ, ಯೂನಿಸೆಫ್, ಯುಎನ್‌ಡಿಪಿ ಮತ್ತು 155 ರಾಷ್ಟ್ರಗಳನ್ನು ಒಳಗೊಂಡ ಒಕ್ಕೂಟದ ಘೋಷಣೆಯೊಂದಿಗೆ ಮಾಡಲಾಯಿತು. ಇದೇ ವರ್ಷದಲ್ಲಿ ಯು ಎನ್ ಡಿ ಪಿ ಮಾನವ ಬೆಳವಣಿಗೆಯ ಮೊದಲ ವರದಿ (UNDP Human Development Report)ಯು ಬೆಳವಣಿಗೆಗೆ ಅಡಿಪಾಯವಾಗಿ ಶಿಕ್ಷಣದ ಪ್ರಾಮುಖ್ಯತೆಯನ್ನು ದಾಖಲಿಸಿತ್ತು. ಜಾಮಟಿಯನ್ ವಿಶ್ವ ಸಮ್ಮೇಳನವು ಅಸಾಮಾನ್ಯ ಘಟನೆಯಾಗಿ ಮೂಡಿಬಂದು, ಯಾವುದೇ ರಾಷ್ಟ್ರದ ಮೂಲ ಶಿಕ್ಷಣದಲ್ಲಿ 'ಕೆಲವರಿಗಾಗಿ ಶಿಕ್ಷಣ' ಎಂಬುದು ಸ್ವೀಕಾರಾರ್ಹವಾದ ಗುರಿಯಲ್ಲ ಎಂಬುದನ್ನು ಜಾಗತಿಕ ಅಂಗೀಕಾರವನ್ನು ಸಾಂಕೇತಿಸಿತು. ಜಾಮಟಿಯನ್ ಘೋಷಣೆಯ 3ನೇ ವಿಧಿಯು ಅವಕಾಶಗಳ ಸಾರ್ವತ್ರೀಕರಣ ಮತ್ತು ಸಮತೆಯ ಪ್ರಚಾರ ಇವು ಮೂಲ ಶಿಕ್ಷಣದ ಅವಶ್ಯಕ ಗುರಿಗಳು ಎಂದು ಸಂಬೋಧಿಸಿ "ಇದನ್ನು ಅಗತ್ಯವಿರುವ ಎಲ್ಲ ಮಕ್ಕಳಿಗೆ, ಯುವಕರಿಗೆ ಮತ್ತು ವಯಸ್ಕರಿಗೆ ಒದಗಿಸಬೇಕು" ಎಂದು ಘೋಷಿಸಿತು. 5ನೇ ಪರಿಚ್ಛೇದವು "ಅಸಾಮರ್ಥ್ಯವಿರುವ ಎಲ್ಲ ವರ್ಗಗಳಿಗೂ ಶಿಕ್ಷಣವನ್ನು ಒದಗಿಸಲು ಕ್ರಮಗಳನ್ನು ಕೈಗೊಳ್ಳಬೇಕು" ಎಂದು ತಿಳಿಸಿತು. ಇಷ್ಟಾದರೂ ಈ ಆಶ್ವಾಸನೆಯು ಇನ್ನೂ ಕೈಗೆ ಎಟುಕದ್ದಾಗಿದೆ.

ಅಸಾಮರ್ಥ್ಯತೆ ಎಂಬುದನ್ನು ಶಾಲಾ ಬಾಹಿರರಾಗಿರುವವರ, ಶಾಲೆ ಬಿಟ್ಟವರ ಅಥವಾ ಶಾಲಾ ಪ್ರವೇಶ ಮಾಡದಿರುವವರ ಪ್ರಮುಖ ಅಂಶವಾಗಿ ನೋಡಲಾಗುತ್ತದೆ. ಇಂತಹವರನ್ನು ಕುರಿತ ಮಾಹಿತಿ ಇಂದಿಗೂ ನಂಬಲರ್ಹವಾಗುವಂತೆ ಸಿಕ್ಕಿಲ್ಲವಾದರೂ ಪ್ರಗತಿಪರ ರಾಷ್ಟ್ರಗಳಲ್ಲಿ ಒಟ್ಟು 115 ಮಿಲಿಯನ್ ಮಕ್ಕಳಲ್ಲಿ 40 ಮಿಲಿಯನ್ ಸಂಖ್ಯೆಯಲ್ಲಿ ಈ ಮಕ್ಕಳಿದ್ದಾರೆ ಎಂದು ಒಂದು ಅಂದಾಜು ಹೇಳುತ್ತದೆ. ಇದರಲ್ಲಿ ಬಹಳಷ್ಟು ಮಕ್ಕಳು ಕಣ್ಣಿಗೆ ಕಾಣಿಸಿಕೊಳ್ಳದಿರುವವರು ಅಥವಾ ಅಸಾಮರ್ಥ್ಯವನ್ನು ಸ್ಪಷ್ಟವಾಗಿ ಗಮನಿಸದೇ ಇರುವವರು. ಅಸಾಮರ್ಥ್ಯವನ್ನು ಅಸಹಜ ಎಂದು ಪರಿಗಣಿಸಬೇಕಾಗಿಲ್ಲ. ನಿಜವಾಗಿ, ಒಂದು ಸಮಾಜದಲ್ಲಿ ಅಸಾಮರ್ಥ್ಯತೆ ಇರುವವರ ಅಸ್ತಿತ್ವ ಬದುಕಿನ ಸಹಜ ಅಂಶವೇ. ಅಸಾಮರ್ಥ್ಯ ಇಲ್ಲವೇ ಇಲ್ಲ ಎಂಬುದೇ ಅಸಾಮಾನ್ಯವಾದ ಅಂಶ. ಅಸಾಮರ್ಥ್ಯತೆ ಅಂಗವಿಕಲತೆಗೆ ಎಡೆಕೊಡಬಹುದು. ಈ ಅಂಗವಿಕಲತೆಗೆ ಪರಿಸರ ಅಥವಾ ಸಮಾಜದಿಂದ ಅಗತ್ಯವಾದವುಗಳ ಬೇಡಿಕೆ ಇರುತ್ತದೆ. ಹೀಗಾಗಿ ಸಾಮಾಜಿಕ ಮತ್ತು ಭೌತಿಕ ಪರಿಸರ ವ್ಯಕ್ತಿಯ ಕ್ರಿಯಾಶೀಲತೆಯ ಮೇಲೆ ಪರಿಣಾಮಬೀರುತ್ತದೆ. ಕೆಲವು ಮಕ್ಕಳಿಗೆ ಈ ರೀತಿಯ ಬೇಡಿಕೆಗಳ ಪೂರೈಕೆಗೆ ವಿಶೇಷ ಸೇವೆಗಳ ಅಗತ್ಯವಿದೆ ಎಂದು ಪರಿಗಣಿಸಲಾಗುತ್ತದೆ. ಇದರಿಂದಾಗಿಯೇ 'ವಿಶೇಷ ಅಗತ್ಯವುಳ್ಳ ಮಕ್ಕಳು' ಎಂಬ ಪದ ಮತ್ತು ಸಂಬಂಧಿ ಕಾರ್ಯಕ್ರಮಗಳು ಹುಟ್ಟಿಕೊಂಡಿವೆ.

## ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

ಅಂತರ್ಗತ ಶಿಕ್ಷಣ ಮತ್ತು ಜೀವನ ಪರ್ಯಂತ ಕಲಿಕೆಯ ಖಚಿತತೆ (1), ಹಕ್ಕುಗಳನ್ನು ಸಾಧಿಸುವ ಮಾರ್ಗ(2), ಸಮುದಾಯದ ಸದಸ್ಯರಾಗಿ ಮತ್ತು ಶಿಕ್ಷಣದಲ್ಲಿ ಸಮನಾದ ಭಾಗವಹಿಕೆಯ ಉತ್ತೇಜನ(3) ಹಕ್ಕುಗಳ ಸಾಧನೆಯನ್ನು ಖಚಿತಪಡಿಸಿಕೊಳ್ಳುವಿಕೆ (4) –ಇವುಗಳಿಗೆ ಸಂಬಂಧಿಸಿದಂತೆ ಅಸಾಮರ್ಥ್ಯವಿರುವ ವ್ಯಕ್ತಿಗಳ ಹಕ್ಕುಗಳನ್ನು ಕುರಿತ ಸಂಯುಕ್ತ ರಾಷ್ಟ್ರಗಳ ಸಮಾಲೋಚನೆ (UNCRPD) ಸೂಚಿಸಿರುವ ಅಂಶಗಳನ್ನು ಕೆಳಗೆ ಕೊಡಲಾಗಿದೆ. ಅವುಗಳನ್ನು ಆಯಾ ಶೀರ್ಷಿಕೆಯ ಜೊತೆಯಲ್ಲಿ ಹೊಂದಿಸಿರಿ.

a) ಅಧ್ಯಾಪಕರನ್ನು, ಸಂಕೇತ ಭಾಷೆಯಲ್ಲಿ, ಬ್ರೈಲ್ ಭಾಷೆಯಲ್ಲಿ ಅರ್ಹತೆ ಪಡೆದಿರುವ, ಅಸಾಮರ್ಥ್ಯತೆ ಇರುವ ಅಧ್ಯಾಪಕರನ್ನು ಉದ್ಯೋಗಕ್ಕೆ ಸೇರಿಸಿಕೊಳ್ಳುವಿಕೆ.

b) ಮಾನವಶಕ್ತಿಯ ಸಂಪೂರ್ಣ ವಿಕಾಸ ಮತ್ತು ಘನತೆ, ಸ್ವಸಾರ್ಥಕ್ಯತೆಯ ಭಾವ, ಮಾನವ ಹಕ್ಕುಗಳು, ಮೂಲಭೂತ ಸ್ವಾತಂತ್ರ್ಯ ಮತ್ತು ಮಾನವ ವೈವಿಧ್ಯತೆ – ಇವುಗಳ ಕುರಿತ ಗೌರವವನ್ನು ಹೆಚ್ಚಿಸುವುದು.

c) ಅಸಾಮರ್ಥ್ಯವಿರುವ ವ್ಯಕ್ತಿಗಳ ವ್ಯಕ್ತಿತ್ವ ಪ್ರತಿಭೆ ಮತ್ತು ಸೃಜನಶೀಲತೆಯ ವಿಕಾಸ, ಜೊತೆಗೆ ಅವರ ಮಾನಸಿಕ ಹಾಗೂ ದೈಹಿಕ ಸಾಮರ್ಥ್ಯಗಳ ಗರಿಷ್ಟ ಬೆಳವಣಿಗೆ.

d) ಅಸಾಮರ್ಥ್ಯವಿರುವ ವ್ಯಕ್ತಿಗಳಿಗೆ ಅವರು ಬದುಕುವ ಸಮುದಾಯದ ಇತರರಂತೆಯೇ ಅಂತರ್ಗತ ವ್ಯವಸ್ಥೆಯ, ಗುಣಮಟ್ಟದ ಮತ್ತು ಉಚಿತವಾದ ಪ್ರಾಥಮಿಕ ಶಿಕ್ಷಣ ಮತ್ತು ಸೆಕೆಂಡರಿ ಶಿಕ್ಷಣಕ್ಕೆ ಅವಕಾಶ.

e) ಅಂಧರು, ಕಿವುಡರು ಅಥವಾ ಕಿವುಡು ಅಂಧರು ಇವರಿಗೆ ಸಮರ್ಪಕವಾದ ಭಾಷೆ ಅಥವಾ ವ್ಯಕ್ತಿಗೆ ಅಗತ್ಯವಾದ ಸಂವಹನ ಕ್ರಮದಲ್ಲಿ ಅವರ ಶೈಕ್ಷಣಿಕ ಮತ್ತು ಸಾಮಾಜಿಕ ಬೆಳವಣಿಗೆಯನ್ನು ಗರಿಷ್ಟಗೊಳಿಸುವ ಪರಿಸರದಲ್ಲಿ ಶಿಕ್ಷಣ ನೀಡುವುದನ್ನು ಖಚಿತಪಡಿಸಿಕೊಳ್ಳುವಿಕೆ.

f) ಶಿಕ್ಷಣದ ಎಲ್ಲ ಹಂತಗಳಲ್ಲಿ ಈ ರೀತಿಯ ಮಕ್ಕಳೊಂದಿಗೆ ಕೆಲಸಮಾಡುವ ಎಲ್ಲರನ್ನೂ ತರಬೇತಿಗೊಳಿಸುವಂತಹ ಕ್ರಮಗಳನ್ನು ಕೈಗೊಳ್ಳುವಿಕೆ.

g) ಅಸಾಮರ್ಥ್ಯವಿರುವ ವ್ಯಕ್ತಿಗಳಿಗೆ ಸಾಮಾನ್ಯ ಶಿಕ್ಷಣ ವ್ಯವಸ್ಥೆಯೊಳಗೆ ಪರಿಣಾಮಕಾರಿ ಶಿಕ್ಷಣವನ್ನು ಅನುಕೂಲಿಸಲು ಅಗತ್ಯವಾದ ಬೆಂಬಲ.

h) ಬ್ರೈಲ್ ಕಲಿಕೆ, ಪರ್ಯಾಯ ಲಿಪಿ, ಸಂವಹನದ ಅನಿರ್ಬಂಧಿತ ಮತ್ತು ಪರ್ಯಾಯ ಮಾರ್ಗಗಳು ಹೊಂದಾಣಿಕೆಯ ಹಾಗೂ ಚಲನೆಯ ಕೌಶಲಗಳು ಮತ್ತು ಗೆಳೆಯರ ಬೆಂಬಲ ಮತ್ತು ನಿರ್ವಹಣೆಯನ್ನು ಅನುಕೂಲಿಸುವಿಕೆ.

## 1.4.4. ಸಾರಾಂಶಿಸೋಣ

- ಭೂಮಿಯ ಮೇಲಿರುವ ಭೇದಭಾವವನ್ನು ಹೋಗಲಾಡಿಸಿ ಎಲ್ಲರೂ ಘನತೆವೆತ್ತ ಬದುಕನ್ನು ಬದುಕುವಂತೆ ಮಾಡಲು ಜಾಗತಿಕ ನೆಲೆಯಲ್ಲಿ ಆದ ಅತಿ ಮುಖ್ಯವಾದ ಪ್ರಯತ್ನ ಎಂದರೆ ಅಸಾಮರ್ಥ್ಯವಿರುವ ವ್ಯಕ್ತಿಗಳ ಹಕ್ಕುಗಳನ್ನು ಕುರಿತ ಸಂಯುಕ್ತ ರಾಷ್ಟ್ರಗಳ ಸಮಾಲೋಚನೆ.

- ಜಗತ್ತಿನಾದ್ಯಂತ ಅಸಾಮರ್ಥ್ಯದ ಹಿನ್ನೆಲೆಯಲ್ಲಿ ಪಕ್ಷಪಾತ ಅಥವಾ ಭೇದಭಾವ ಇದೆ ಎಂಬುದನ್ನು ಈ ಸಮಾಲೋಚನೆ ಸ್ಪಷ್ಟಪಡಿಸಿದೆ.
- ಅಸಾಮರ್ಥ್ಯರನ್ನು ಕುರಿತ ಸಂಯುಕ್ತ ರಾಷ್ಟ್ರಗಳ ಈ ಸಮಾಲೋಚನೆಯ ಒಪ್ಪಂದವು 2006ರ ಡಿಸೆಂಬರ್ 13ರಂದು ನ್ಯೂಯಾರ್ಕ್ ಯುನೈಟೆಡ್ ನೇಷನ್ಸ್ ಪ್ರಧಾನ ಕಛೇರಿಯಲ್ಲಿ ಅಂಗಿಕೃತವಾಗಿ, ಮೇ 3, 2008ರಂದು ಜಾರಿಗೆ ಬಂದಿತು.
- ಅಸಾಮರ್ಥ್ಯವುಳ್ಳವರನ್ನು ಕುರಿತ ಮನೋಭಾವ ಮತ್ತು ಉಪಕ್ರಮಗಳಿಗೆ ಸಂಬಂಧಿಸಿದಂತೆ ಈ ಸಮಾಲೋಚನೆಯು ಒಂದು ವಿಶಿಷ್ಟ ಧನಾತ್ಮಕ ಪಲ್ಲಟವನ್ನು ಕ್ರಾಂತಿಕಾರಿಯಾಗಿ ಸಾಧಿಸಿತು.
- ಈ ದಾಖಲೆಯು ಅನೇಕ ಗಮನಾರ್ಹ ತತ್ವಗಳನ್ನು ಒಳಗೊಂಡಿದೆ.
- ಈ ದಾಖಲೆಯಲ್ಲಿ ಒಟ್ಟು 50 ವಿಧಿಗಳಿವೆ.
- ಎಲ್ಲರಿಗೂ ಶಿಕ್ಷಣ ಎಂಬುದು ಸಂಯುಕ್ತ ರಾಷ್ಟ್ರಗಳ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯ ಮುಂದಾಳತ್ವದಲ್ಲಿ ನಡೆದ ಜಾಗತಿಕ ಚಳುವಳಿ. 2015ರ ವೇಳೆಗೆ ಎಲ್ಲ ಮಕ್ಕಳ, ಯುವಜನರ ಮತ್ತು ವಯಸ್ಕರ ಕಲಿಕಾ ಅಗತ್ಯಗಳನ್ನು ಪೂರೈಸುವುದು ಇದರ ಗುರಿಯಾಗಿದ್ದಿತು.
- ಈ ಬೃಹತ್ ಚಳುವಳಿಯನ್ನು ಮುನ್ನಡೆಸುವ ಮತ್ತು ಎಲ್ಲರಿಗೂ ಶಿಕ್ಷಣ ದೊರಕುವಂತೆ ಅಂತರರಾಷ್ಟ್ರೀಯ ಪಯತ್ನಗಳನ್ನು ಸಂಯೋಜಿಸಲು ಯುನೆಸ್ಕೊ ಸಂಸ್ಥೆಗೆ ಆದೇಶಿಸಲಾಯಿತು.
- ಎಲ್ಲರಿಗೂ ಶಿಕ್ಷಣದ ಚಳುವಳಿಯು ಸಹಸ್ರಮಾನದ ಅಭಿವೃದ್ಧಿಯ ಎಂಟು ಗುರಿಗಳನ್ನು ಸಾಧಿಸುವಲ್ಲಿಯೂ ಕೊಡುಗೆಯನ್ನಿತ್ತಿದೆ. ಅದರಲ್ಲಿ ಪ್ರಮುಖವಾಗಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಕುರಿತ ಎರಡನೆಯ ಮತ್ತು ಶಿಕ್ಷಣದಲ್ಲಿ ಲಿಂಗ ಸಮಾನತೆಯನ್ನು ಕುರಿತ ಮೂರನೆಯ ಗುರಿಗಳಿಗೆ ಹೆಚ್ಚಿನ ಗಮನವನ್ನು ಕೊಟ್ಟಿದೆ.
- ಎಲ್ಲರಿಗೂ ಶಿಕ್ಷಣದ ಪ್ರಮುಖ ಅಂಶ ಅಂತರ್ಗತತೆ.
- 'ಎಲ್ಲರಿಗೂ ಶಿಕ್ಷಣ' ಚಳುವಳಿಯ ಸಾರಥ್ಯದ ಪ್ರಯತ್ನವು 'ಎಲ್ಲರಿಗೂ ಶಿಕ್ಷಣ' ಎಂಬುದು ಮೂಲಭೂತ ಮಾನವ ಹಕ್ಕು, ಅಸಾಮರ್ಥ್ಯವಿರುವವರನ್ನು ಒಳಪಡಿಸಿಕೊಳ್ಳದೆ ಇದನ್ನು ಸಾಧಿಸುವುದು ಸಾಧ್ಯವಿಲ್ಲ ಎಂಬ ಅಂಶದ ಕಡೆಗೆ ಜಾಗತಿಕ ಗಮನವನ್ನು ಸೆಳೆದಿದೆ.

## 1.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1 ಮತ್ತು 2

### ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

1–e, 7–d, 14–g, 21–a, 24–b, 25–c, 26–f

### ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

a)–4, b)–1, c)–1, d)–2, e)–3, f)–4, g)–2, h)–3

## 1.4.6. ಘಟಕಾಂತ್ಯ ಅಭ್ಯಾಸಗಳು

1. ಸಮಾಲೋಚನೆಯ ಅಂಶಗಳು ಅಸಾಮರ್ಥ್ಯವುಳ್ಳವರ ಕುರಿತಂತೆ ಮನೋಭಾವ ಮತ್ತು ಉಪಕ್ರಮಗಳಲ್ಲಿನ ಪಲ್ಲಟವನ್ನು ಸೂಚಿಸುತ್ತದೆ. ಇದನ್ನು ಹೇಗೆ ಮತ್ತು ಎಷ್ಟರಮಟ್ಟಿಗೆ ಸಾಧಿಸಬಹುದು?
2. ಅಸಾಮರ್ಥ್ಯರನ್ನು ಕುರಿತ ಸಂಯುಕ್ತ ರಾಷ್ಟ್ರಗಳ ಈ ಸಮಾಲೋಚನೆಯ ಒಪ್ಪಂದದ ಪ್ರಮುಖ ಅಂಶಗಳನ್ನು ವಿವರಿಸಿ.
3. ಜಾಗತಿಕ ಗಮನ ಸೆಳೆದ 'ಎಲ್ಲರಿಗೂ ಶಿಕ್ಷಣ' ಜಾಗತಿಕ ಚಳುವಳಿಯ ಅಂಶಗಳನ್ನು ವಿವರಿಸಿ.

## 1.4.7. ಪರಾಮರ್ಶನ ಸೂಚಿ


1. Report: http://www.unesco.org/en/efareport. This report has been replaced by the Global Education Monitoring Report.[4]
2. "The EFA movement". United Nations Educational, Scientific and Cultural Organization. Retrieved 11 Sep. 2010.
3. United Nations Educational, Scientific and Cultural Organization (2002), EFA global monitoring report, UNESCO Pub, retrieved 19 October 2015
4. Education For All - International Coordination, UNESCO.
5. World Declaration on Education For All: Meeting Basic Learning Needs ("Jomtien Declaration")6.Education For All Global Monitoring Report7.{http://en.unesco.org/gem-report/ Global Education Monitoring Report]


***************

# ಬ್ಲಾಕ್–1 : ಶಿಕ್ಷಣದಲ್ಲಿ ಅಂತರ್ಗತತೆಯನ್ನು ಅರ್ಥಮಾಡಿಕೊಳ್ಳುವುದು

## ಘಟಕ–5: ರಾಷ್ಟ್ರೀಯ ಗಮನ–ವಿಭಿನ್ನ ಸಮೂಹಗಳ ಶಿಕ್ಷಣಕ್ಕೆ ಸಂವಿಧಾನಾತ್ಮಕ ಬದ್ಧತೆಗಳು; ರಾಷ್ಟ್ರೀಯ ಶಿಕ್ಷಣ ನೀತಿ (1986–92); ಭಾರತದ ಪುನರ್ವಸತಿ ಕೇಂದ್ರ ಕಾಯಿದೆ(1992); ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಕಾಯಿದೆ (1995); ಅಸಾಮರ್ಥ್ಯವುಳ್ಳ ವ್ಯಕ್ತಿಗಳ ರಾಷ್ಟ್ರೀಯ ನೀತಿ (2006); ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2005), ನ್ಯಾಷನಲ್ ಫೋಕಸ್ ಗ್ರೂಪ್ ಪೇಪರ್; ಸರ್ವ ಶಿಕ್ಷಾ ಅಭಿಯಾನ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಕಾಯಿದೆ; ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳ ಕುರಿತ ರಾಷ್ಟ್ರೀಯ ಸಮಿತಿ, ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಶಿಕ್ಷಣ ಆಯೋಗ

---

**ಘಟಕದ ರಚನೆ**

---


1.5.1 ಕಲಿಕಾ ಉದ್ದೇಶಗಳು

1.5.2. ಪೀಠಿಕೆ

1.5.3 ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

1.5.3.1. ರಾಷ್ಟ್ರೀಯ ಗಮನ– ಭಾಗ 1: ವಿಭಿನ್ನ ಸಮೂಹಗಳ ಶಿಕ್ಷಣಕ್ಕೆ ಸಂವಿಧಾನಾತ್ಮಕ ಬದ್ಧತೆಗಳು, ರಾಷ್ಟ್ರೀಯ ಶಿಕ್ಷಣ ನೀತಿ (1986–92), ಭಾರತದ ಪುನರ್ವಸತಿ ಮಂಡಳಿ ಕಾಯಿದೆ(1992); ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಕಾಯಿದೆ 1995; ಅಸಾಮರ್ಥ್ಯವುಳ್ಳ ವ್ಯಕ್ತಿಗಳ ರಾಷ್ಟ್ರೀಯ ನೀತಿ 2006

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 1

1.5.3.2 ರಾಷ್ಟ್ರೀಯ ಗಮನ– ಭಾಗ 2: ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005, ನ್ಯಾಷನಲ್ ಫೋಕಸ್ ಗ್ರೂಪ್ ಪೇಪರ್; ಸರ್ವ ಶಿಕ್ಷಾ ಅಭಿಯಾನ, ರಾಷ್ಟ್ರೀಯ ಶಿಕ್ಷಣ ಮಾಧ್ಯಮಿಕ ಶಿಕ್ಷಣ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 2

1.5.3.3 ರಾಷ್ಟ್ರೀಯ ಗಮನ– ಭಾಗ 3: ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳ ಕುರಿತ ರಾಷ್ಟ್ರೀಯ ಸಮಿತಿ, ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಶಿಕ್ಷಣ ಆಯೋಗ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 3

1.5.4. ಸಾರಾಂಶಿಸೋಣ

1.5.5 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1, 2, ಮತ್ತು 3

1.5.6 ಘಟಕಾಂತ್ಯ ಅಭ್ಯಾಸಗಳು

1.5.7. ಪರಾಮರ್ಶನ ಸೂಚಿ

## 1.2.1 ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ವಿಭಿನ್ನ ಸಮೂಹಗಳ ಶಿಕ್ಷಣಕ್ಕೆ ಸಂವಿಧಾನಾತ್ಮಕ ಬದ್ಧತೆಗಳು; ರಾಷ್ಟ್ರೀಯ ಶಿಕ್ಷಣ ನೀತಿ (1986–92); ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಕಾಯಿದೆ 1995; ಅಸಾಮರ್ಥ್ಯವುಳ್ಳ ವ್ಯಕ್ತಿಗಳ ರಾಷ್ಟ್ರೀಯ ನೀತಿ 2006; ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಪರಿಷ್ಕೃತ ರಾಷ್ಟ್ರೀಯ ಮಸೂದೆ; ಭಾರತದ ಪುನರ್ವಸತಿ ಕೇಂದ್ರ ಕಾಯಿದೆ – ಈ ದಾಖಲೆಗಳಲ್ಲಿ ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಶಿಕ್ಷಣವನ್ನು ಕುರಿತ ಶಿಫಾರಸುಗಳನ್ನು ವಿವರಿಸುವರು;
- ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005, ನ್ಯಾಷನಲ್ ಫೋಕಸ್ ಗ್ರೂಪ್ ಪೇಪರ್; ಸರ್ವ ಶಿಕ್ಷಾ ಅಭಿಯಾನ, ರಾಷ್ಟ್ರೀಯ ಶಿಕ್ಷಣ ಮಾಧ್ಯಮಿಕ ಶಿಕ್ಷಣ – ಈ ದಾಖಲೆಗಳಲ್ಲಿ ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಶಿಕ್ಷಣವನ್ನು ಕುರಿತ ಶಿಫಾರಸುಗಳನ್ನು ವಿವರಿಸುವರು;
- ರಾಷ್ಟ್ರೀಯ ಶಿಕ್ಷಣ ಮಾಧ್ಯಮಿಕ ಶಿಕ್ಷಣ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳ ಕುರಿತ ರಾಷ್ಟ್ರೀಯ ಸಮಿತಿ, ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಶಿಕ್ಷಣ ಆಯೋಗ– ಈ ದಾಖಲೆಗಳಲ್ಲಿ ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಶಿಕ್ಷಣವನ್ನು ಕುರಿತ ಶಿಫಾರಸುಗಳನ್ನು ವಿವರಿಸುವರು; ಮತ್ತು
- ಮೇಲಿನ ಆಯೋಗ ಮತ್ತು ಸಮಿತಿಗಳ ಶೈಕ್ಷಣಿಕ ನಿಹಿತಾರ್ಥಗಳನ್ನು ಗುರುತಿಸುವರು.

## 1.5.2. ಪೀಠಿಕೆ

ಸಮಾಜವನ್ನು ರೂಪಿಸುವಲ್ಲಿ ಶಿಕ್ಷಣವು ಪ್ರಮುಖ ಪಾತ್ರವನ್ನು ವಹಿಸುತ್ತದೆ ಎಂಬುದು ನಮಗೆ ತಿಳಿದಿದೆ. ಒಂದು ದೇಶದ ಕಾಣ್ಕೆ ಮತ್ತು ಅದರ ಸಂವಿಧಾನಾತ್ಮಕ ಬದ್ಧತೆಗಳು ಅದರ ನೀತಿ ನಿಯಮಗಳಲ್ಲಿ ಬಿಂಬಿತವಾಗಿರುತ್ತದೆ. ಹೀಗಾಗಿ, ಅವುಗಳಿಗೆ ಪ್ರತಿಕ್ರಿಯಿಸಲು ಸಮಾಜವನ್ನು ಮಾರ್ಗದರ್ಶನ ಮಾಡುತ್ತದೆ. ಭಾರತದ ಸಮಾಜದಲ್ಲಿರುವ ವಿಭಿನ್ನತೆ ಮತ್ತು ತಾರತಮ್ಯಗಳು ಅದರ ಸಂವಿಧಾನಾತ್ಮಕ ನಿರ್ದೇಶನಗಳಲ್ಲಿ ಬಿಂಬಿತವಾಗಿವೆ. ಇದು ದೇಶದ ವಿವಿಧ ಸೌಲಭ್ಯವಂಚಿತರ/ ಸಮಾಜದ ಅಂಚಿನಲ್ಲಿರುವ ಪೌರರ ಕುರಿತು ಇತಿಹಾಸದಲ್ಲಾಗಿರುವ ತಪ್ಪುಗಳನ್ನು ಸರಿಪಡಿಸಲು ಅಗತ್ಯವಾದ ಸಮಕಾಲೀನ ಕ್ರಮಗಳನ್ನು ಸೂಚಿಸುತ್ತದೆ. ಭಾರತದ ಸಮಾಜವು ಅಂತರ್ಗತೀಯ ಲಕ್ಷಣ ಉಳ್ಳದ್ದರಿಂದ, ಶಿಕ್ಷಣದ ಯಾವುದೇ ನೀತಿಯೂ ಅಂತರ್ಗತವಾಗಿಯೇ ಇರಬೇಕಾಗುತ್ತದೆ.

ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಶಿಕ್ಷಣಕ್ಕಾಗಿ ಭಾರತ ಸರ್ಕಾರವು ಅನೇಕ ಕ್ರಮಗಳನ್ನು ತೆಗೆದುಕೊಂಡಿದೆ. ಇಂಥಹವರ ಶಿಕ್ಷಣಕ್ಕೆ ಆಗಿಂದಾಗ್ಗೆ ರಾಷ್ಟ್ರಮಟ್ಟದಲ್ಲಿ ಸತತವಾಗಿ ಅನೇಕ ಸಮಿತಿಗಳು, ಆಯೋಗಗಳು, ಸಂಸ್ಥೆಗಳು ರೂಪುಗೊಂಡು, ಆ ಕುರಿತಂತೆ ಚರ್ಚೆಗಳನ್ನು ಮಾಡಿ ಶಿಫಾರಸುಗಳನ್ನು ಕ್ರಮಗಳನ್ನು ಸೂಚಿಸಿವೆ. ಈ ವಿವಿಧ ಸಮಿತಿಗಳು, ಆ ಸಮಿತಿಗಳು ಅಸಾಮರ್ಥ್ಯವುಳ್ಳವರ ಶಿಕ್ಷಣವನ್ನು ಕುರಿತಂತೆ ಚರ್ಚಿಸಿದ ವಿಚಾರಗಳು, ಸೂಚಿಸಿದ ಕ್ರಮಗಳು ಮತ್ತು ಶಿಫಾರಸುಗಳು ಮತ್ತು ಅವುಗಳಿಗೆ ಸಂಬಂಧಿಸಿದ ಶೈಕ್ಷಣಿಕ ನಿಹಿತಾರ್ಥಗಳನ್ನು ಈ ಘಟಕದಲ್ಲಿ ಚರ್ಚಿಸೋಣ.

**ಅಭ್ಯಾಸ – I**

| |
|---|
| ಅಸಾಮರ್ಥ್ಯವಿರುವ ಮಕ್ಕಳ ಶಿಕ್ಷಣಕ್ಕೆ ಭಾರತ ಸರ್ಕಾರ ರಾಷ್ಟ್ರಮಟ್ಟದಲ್ಲಿ ಮಾಡಿರುವ ಕೆಲವು ಪ್ರಯತ್ನಗಳಾದರೂ ನಿಮಗೆ ತಿಳಿದಿದೆ. ಅದನ್ನು ನೀವು ನಿಮ್ಮ ಶಾಲಾ ಜೀವನದಲ್ಲಿ ಅಳವಡಿಸಿಕೊಂಡಿದ್ದೀರಿ ಕೂಡ. ಅಂತಹ ಯಾವುದಾದರೂ ಐದು ಕ್ರಮಗಳನ್ನು ಪಟ್ಟಿಮಾಡಿ. |
| 1. |
| 2. |
| 3. |
| 4. |
| 5. |

## 1.5.3. ರಾಷ್ಟ್ರೀಯ ಗಮನ – ಭಾಗ 1 :

### (I) ಅಸಾಮರ್ಥ್ಯವಿರುವ ವ್ಯಕ್ತಿಗಳ ಶಿಕ್ಷಣಕ್ಕೆ ಸಂವಿಧಾನಾತ್ಮಕ ಬದ್ಧತೆಗಳು :

ನಾವೆಲ್ಲರೂ ಬೃಹತ್ ಭಾರತದ ಪ್ರಜೆಗಳಾದ್ದರಿಂದ, ಅದರ ಸ್ವರೂಪದ ಅರಿವು ನಮಗಿದೆ. ಇದು ವಿಭಿನ್ನತೆಯ ವಿಶಿಷ್ಟ ಲಕ್ಷಣವನ್ನುಳ್ಳ ದೇಶ. ಇದು ನಮಗೆ ವರವಾಗಿರುವಂತೆಯೇ, ಇದನ್ನು ನಿಭಾಯಿಸುವುದು ಒಂದು ಸವಾಲೂ ಆಗಿದೆ. ಇದು ಬಹುಭಾಷಿಕ, ಬಹುಸಾಂಸ್ಕೃತಿಕ ದೇಶಕ್ಕೆ ಒಂದು ಉತ್ತಮ ಉದಾಹರಣೆ. ಇದು ಅಸಂಖ್ಯಾತ ಭಾಷೆಗಳ, ವಂಶಗಳ, ಸಂಸ್ಕೃತಿಗಳ ಬೀಡು. ವಿಭಿನ್ನತೆ ಇಲ್ಲಿಯ ಶಕ್ತಿ ಕೂಡ. ಆದರೆ ನ್ಯಾಯ, ಸಮಾನತೆ ಮತ್ತು ಸಮತೆಯ ಸಮಸ್ಯೆ ಬಂದಾಗ ಇದು ಸವಾಲಿನ ಸನ್ನಿವೇಶಗಳನ್ನೂ ಉಂಟುಮಾಡುತ್ತದೆ. ಸಾಂಸ್ಕೃತಿಕ ಭಿನ್ನತೆಗಳ ಪ್ರಾಮುಖ್ಯತೆಯನ್ನು ಗುರುತಿಸುವಲ್ಲಿ, ರಕ್ಷಿಸುವಲ್ಲಿ ಮತ್ತು ಪಸರಿಸಿ ಮುಂದುವರಿಸುವುದರ ಪ್ರಾಮುಖ್ಯತೆಗೆ ಸಂಬಂಧಿಸಿದಂತೆ ಭಾರತ ಅತ್ಯಂತ ಸಂವೇದನಾಶೀಲವಾಗಿದೆ. ಇದರ ಜೊತೆಗೆ ಭಿನ್ನ ಸಮಸ್ಯೆಗಳುಳ್ಳ, ಆ ಕಾರಣದಿಂದಾಗಿ ವಿವಿಧ ರೀತಿಯ ಅಸಾಮರ್ಥ್ಯಗಳನ್ನುಳ್ಳ ವ್ಯಕ್ತಿಗಳು ಇತರ ದೇಶಗಳಂತೆ ಇಲ್ಲಿಯೂ ಕಾಣಬರುತ್ತಾರೆ. ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ವಿವಿಧ ವರ್ಗಗಳ, ವಿವಿಧ ಸಾಮರ್ಥ್ಯಗಳುಳ್ಳ ವ್ಯಕ್ತಿಗಳಿಗೆ ಶಿಕ್ಷಣವನ್ನೊದಗಿಸುವ ಕೆಲಸ ಅತ್ಯಂತ ಜಾಗರೂಕವಾಗಿ ಸಾಗಬೇಕು. ಇದನ್ನು ಭಾರತ ಮೊದಲಿಂದಲೂ ಗಮನಿಸಿಕೊಂಡು ಬಂದಿದೆ. ಭಾರತದ ವಿವಿಧ ರಾಷ್ಟ್ರೀಯ ಹಾಗೂ ಶೈಕ್ಷಣಿಕ ದಾಖಲೆಗಳು ಈ ಅಂಶವನ್ನು ಗಮನಿಸಿ ಪರಿಹಾರವನ್ನು ಸೂಚಿಸುತ್ತಲೇ ಬಂದಿವೆ. ಇವುಗಳಲ್ಲಿ ಪ್ರಮುಖವಾದ ನಮ್ಮ ಸಂವಿಧಾನವು ಈ ಕುರಿತು ಏನು ಹೇಳಿದೆ ಎಂಬುದನ್ನು ಗಮನಿಸೋಣ.

ಸಾಮಾಜಿಕ ಅಂತರ್ಗತತೆಯು ಶಿಕ್ಷಣದ ಬಹು ಮುಖ್ಯ ಗುರಿ. ಹಾಗಾಗಿ ಅಂತರ್ಗತ ಶಿಕ್ಷಣದ ಸನ್ನಿವೇಶಗಳಲ್ಲಿ ವಿಶೇಷ ಶಿಕ್ಷಣದ ಅಡಿಯಲ್ಲಿ ಬರುವ ವ್ಯಕ್ತಿಗಳ ಜೊತೆಜೊತೆಯಲ್ಲೇ ಸಾಮಾಜಿಕವಾಗಿ ಸಮಸ್ಯೆಯನ್ನು, ಆ ಕಾರಣದಿಂದಾಗಿ ಅಸಾಮರ್ಥ್ಯಗಳನ್ನು ಎದುರಿಸುತ್ತಿರುವ ವ್ಯಕ್ತಿಗಳನ್ನೂ ಗಮನಿಸಿಕೊಳ್ಳಬೇಕು. ಹಾಗಾಗಿ, ಸಾಮಾಜಿಕ ಅಂತರ್ಗತತೆಯ ಅಗತ್ಯವಿರುವವರನ್ನೂ ಒಳಗೊಂಡಂತೆ ವಿಭಿನ್ನ ಗುಂಪುಗಳ ಶಿಕ್ಷಣಕ್ಕೆ ಸಂಬಂಧಿಸಿದ ಚರ್ಚೆ ಮತ್ತು ಪ್ರಾವಧಾನಗಳನ್ನು ಈ ಮುಂದೆ ಚರ್ಚಿಸಲಾಗಿದೆ.

**ಭಾರತದ ವಿಭಿನ್ನ ಗುಂಪುಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಂವಿಧಾನಾತ್ಮಕ ಬದ್ಧತೆ/ ಪ್ರಾವಧಾನಗಳು.**

**ವಿಧಿ 21A: ಶಿಕ್ಷಣದ ಹಕ್ಕು :** ರಾಜ್ಯವು, ಕಾನೂನಿನ ಮೂಲಕ ತಾನು ನಿರ್ಧರಿಸಬಹುದಾದಂಥ ರೀತಿಯಲ್ಲಿ ಆರರಿಂದ ಹದಿನಾಲ್ಕು ವರ್ಷಗಳ ವಯಸ್ಸಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸತಕ್ಕದ್ದು.

**ವಿಧಿ 46 :** ಅನುಸೂಚಿತ ಜಾತಿಗಳ, ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ದುರ್ಬಲ ವರ್ಗಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳ ಸಂವರ್ಧನೆ: ರಾಜ್ಯವು ದುರ್ಬಲ ವರ್ಗಗಳ, ವಿಶೇಷವಾಗಿ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಜನತೆಯ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ವಿಶೇಷ ಜಾಗರೂಕತೆಯಿಂದ ಸಂವರ್ಧಿಸತಕ್ಕದ್ದು ಮತ್ತು ಅವರನ್ನು ಸಾಮಾಜಿಕ ಅನ್ಯಾಯದಿಂದ ಮತ್ತು ಎಲ್ಲಾ ರೀತಿಯ ಶೋಷಣೆಯಿಂದ ಸಂರಕ್ಷಿಸತಕ್ಕದ್ದು.

**ವಿಧಿ 350A : ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣ ಸೌಲಭ್ಯಗಳು :** ಭಾಷಾ ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದ ಮಕ್ಕಳಿಗೆ ವಿದ್ಯಾಭ್ಯಾಸದ ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣಕ್ಕಾಗಿ ಸಾಕಷ್ಟು ಸೌಲಭ್ಯಗಳನ್ನು ಒದಗಿಸಲು ಪ್ರತಿಯೊಂದು ರಾಜ್ಯವು ಮತ್ತು ಆ ರಾಜ್ಯದಲ್ಲಿನ ಪ್ರತಿಯೊಂದು ಸ್ಥಳೀಯ ಪ್ರಾಧಿಕಾರವೂ ಪ್ರಯತ್ನಿಸತಕ್ಕದ್ದು ಮತ್ತು ಅಂಥ ಸೌಲಭ್ಯಗಳನ್ನು ಒದಗಿಸುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ರಾಷ್ಟ್ರಪತಿಯು ತಾನು ಅವಶ್ಯವೆಂದು ಅಥವಾ ಯುಕ್ತವೆಂದು ಭಾವಿಸುವಂಥ ನಿರ್ದೇಶನಗಳನ್ನು ಯಾವುದೇ ರಾಜ್ಯಕ್ಕೆ ಕೊಡಬಹುದು.

**ವಿಧಿ 29 : ಅಲ್ಪಸಂಖ್ಯಾತರ ಹಿತಾಸಕ್ತಿಗಳ ರಕ್ಷಣೆ:** (1) ಭಾರತದ ರಾಜ್ಯಕ್ಷೇತ್ರದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ವಾಸವಾಗಿರುವ ನಾಗರಿಕರ ಯಾವುದೇ ವಿಭಾಗವು ತನ್ನದೇ ಆದ ಯಾವುದೇ ವಿಭಿನ್ನ ಭಾಷೆ, ಲಿಪಿ ಅಥವಾ ಸಂಸ್ಕೃತಿಯನ್ನು ಹೊಂದಿದ್ದರೆ, ಆ ವಿಭಾಗವು ಅವುಗಳನ್ನು ಸಂರಕ್ಷಿಸಿಕೊಳ್ಳುವ ಹಕ್ಕನ್ನು ಹೊಂದಿರತಕ್ಕದ್ದು.

(2) ರಾಜ್ಯವು ನಿರ್ವಹಿಸುವ ಅಥವಾ ರಾಜ್ಯನಿಧಿಗಳಿಂದ ನೆರವನ್ನು ಪಡೆಯುವ ಯಾವುದೇ ಶೈಕ್ಷಣಿಕ ಸಂಸ್ಥೆಗೆ ಧರ್ಮ, ಮೂಲವಂಶ, ಜಾತಿ, ಭಾಷೆ, ಅಥವಾ ಅವುಗಳಲ್ಲಿ ಯಾವುದೇ ಒಂದರ ಆಧಾರದ ಮೇಲೆ ಮಾತ್ರವೇ ಯಾರೇ ನಾಗರಿಕನಿಗೆ ಪ್ರವೇಶಾವಕಾಶವನ್ನು ನಿರಾಕರಿಸತಕ್ಕದ್ದಲ್ಲ.

**ವಿಧಿ 30 : ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವುದಕ್ಕೆ ಮತ್ತು ಅವುಗಳ ಆಡಳಿತ ನಡೆಸುವುದಕ್ಕೆ ಅಲ್ಪಸಂಖ್ಯಾತರ ಹಕ್ಕು: –**

(1) ಧರ್ಮದ ಅಥವಾ ಭಾಷೆಯ ಮೇಲೆ ಆಧಾರಿತವಾದ ಎಲ್ಲಾ ಅಲ್ಪಸಂಖ್ಯಾತ ವರ್ಗಗಳವರೂ ತಮ್ಮ ಇಷ್ಟಕ್ಕನುಗುಣವಾಗಿ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ಮತ್ತು ಅವುಗಳ ಆಡಳಿತವನ್ನು ನಡೆಸಲು ಹಕ್ಕುಳ್ಳವರಾಗಿರತಕ್ಕದ್ದು.

(1A) ಖಂಡದಲ್ಲಿ ಉಲ್ಲೇಖಿಸಲಾದ ಅಲ್ಪಸಂಖ್ಯಾತ ವರ್ಗವು ಸ್ಥಾಪಿಸಿದ ಮತ್ತು ಆಡಳಿತ ನಡೆಸುತ್ತಿರುವ ಯಾವುದೇ ಶೈಕ್ಷಣಿಕ ಸಂಸ್ಥೆಯ ಯಾವುದೇ ಸ್ವತ್ತನ್ನು ಕಡ್ಡಾಯವಾಗಿ ಆರ್ಜನೆ ಮಾಡುವುದಕ್ಕಾಗಿ ಉಪಬಂಧ ಕಲ್ಪಿಸುವ ಯಾವುದೇ ಕಾನೂನನ್ನು ಮಾಡುವಾಗ ರಾಜ್ಯವು, ಅಂಥ ಸ್ವತ್ತಿನ ಆರ್ಜನೆಗಾಗಿ ಅಂಥ ಕಾನೂನಿನ ಮೂಲಕ ನಿಗದಿಪಡಿಸಿದ ಅಥವಾ ಅದರ ಮೇರೆಗೆ ನಿರ್ಧರಿಸಿದ ಮೊಬಲಗು ಆ ಖಂಡದ ಮೇರೆಗೆ

ಖಾತ್ರಿಗೊಳಿಸಿದ ಹಕ್ಕನ್ನು ನಿರ್ಬಂಧಿಸುವುದಿಲ್ಲವೆಂದು ಅಥವಾ ಅಂಥ ಹಕ್ಕನ್ನು ರದ್ದುಪಡಿಸುವುದಿಲ್ಲವೆಂದು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

**ವಿಧಿ 15(1) :** ರಾಜ್ಯವು ಯಾರೇ ನಾಗರಿಕನ ವಿರುದ್ಧ ಧರ್ಮ, ಮೂಲವಂಶ, ಜಾತಿ, ಲಿಂಗ, ಜನ್ಮಸ್ಥಳದ ಅಥವಾ ಅವುಗಳಲ್ಲಿ ಯಾವುದೇ ಒಂದರ ಆಧಾರದ ಮೇಲೆ ಮಾತ್ರವೇ ಯಾವುದೇ ತಾರತಮ್ಯವನ್ನು ಮಾಡತಕ್ಕದ್ದಲ್ಲ.

**ವಿಧಿ 15(2) :** ಧರ್ಮ, ಮೂಲವಂಶ, ಜಾತಿ, ಲಿಂಗ, ಜನ್ಮಸ್ಥಳ ಅಥವಾ ಇವುಗಳಲ್ಲಿ ಯಾವುದೇ ಒಂದರ ಆಧಾರದ ಮೇಲೆ ಮಾತ್ರವೇ ಯಾರೇ ನಾಗರಿಕನು,– (ಎ) ಅಂಗಡಿಗಳು, ಸಾರ್ವಜನಿಕ ಉಪಾಹಾರ ಗೃಹಗಳು, ಹೋಟೆಲುಗಳು ಮತ್ತು ಸಾರ್ವಜನಿಕ ಮನೋರಂಜನ ಸ್ಥಳಗಳಿಗೆ ಪ್ರವೇಶಿಸುವ ಸಂಬಂಧದಲ್ಲಿ; ಅಥವಾ (ಬಿ) ಪೂರ್ಣವಾಗಿ ಅಥವಾ ಭಾಗಶಃ ರಾಜ್ಯನಿಧಿಗಳಿಂದ ಪೋಷಿತವಾದ ಅಥವಾ ಸಾರ್ವಜನಿಕರ ಉಪಯೋಗಕ್ಕಾಗಿ ಸಮರ್ಪಿತವಾದ ಬಾವಿಗಳನ್ನು, ಕೆರೆಗಳನ್ನು, ಸ್ನಾನಘಟ್ಟಗಳನ್ನು, ರಸ್ತೆಗಳನ್ನು ಮತ್ತು ಸಾರ್ವಜನಿಕರು ಸೇರುವ ಸ್ಥಳಗಳನ್ನು ಉಪಯೋಗಿಸುವ ಸಂಬಂಧದಲ್ಲಿ– ಯಾವುದೇ ಅಸಮರ್ಥತೆಗೆ, ಹೊಣೆಗಾರಿಕೆಗೆ, ನಿರ್ಬಂಧಕ್ಕೆ ಅಥವಾ ಷರತ್ತಿಗೆ ಒಳಪಟ್ಟಿರತಕ್ಕದ್ದಲ್ಲ. (3) ಈ ಅನುಚ್ಛೇದದಲ್ಲಿ ಇರುವುದು ಯಾವುದೂ ಹೆಂಗಸರು ಮತ್ತು ಮಕ್ಕಳಿಗಾಗಿ ವಿಶೇಷ ಉಪಬಂಧವನ್ನು ಮಾಡದಂತೆ ರಾಜ್ಯವನ್ನು ಪ್ರತಿಬಂಧಿಸತಕ್ಕದ್ದಲ್ಲ. 1[(4) ಈ ಅನುಚ್ಛೇದದಲ್ಲಿ ಅಥವಾ 29ನೆಯ ಅನುಚ್ಛೇದದ (2)ನೆಯ ಖಂಡದಲ್ಲಿ ಇರುವುದು ಯಾವುದೂ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ನಾಗರಿಕರ ಯಾವುದೇ ವರ್ಗಗಳ ಪುರೋಭಿವೃದ್ಧಿಗಾಗಿ ಅಥವಾ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಸಲುವಾಗಿ ರಾಜ್ಯವು ಯಾವುದೇ ವಿಶೇಷ ಉಪಬಂಧವನ್ನು ಮಾಡದಂತೆ ಪ್ರತಿಬಂಧಿಸತಕ್ಕದ್ದಲ್ಲ. 2 [(5) ಈ ಅನುಚ್ಛೇದದಲ್ಲಿ ಅಥವಾ 19ನೇ ಅನುಚ್ಛೇದದ (1)ನೇ ಖಂಡದ (ಜಿ) ಉಪಖಂಡದಲ್ಲಿರುವುದಾವುದೂ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ನಾಗರಿಕರ ಯಾವದೇ ವರ್ಗಗಳ ಪುರೋಭಿವೃದ್ಧಿಗಾಗಿ ಅಥವಾ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಸಲುವಾಗಿ ಕಾನೂನಿನ ಮೂಲಕ ಯಾವುದೇ ವಿಶೇಷ ಉಪಬಂಧಗಳನ್ನು ಮಾಡದಂತೆ, ಆ ವಿಶೇಷ ಉಪಬಂಧಗಳು 30ನೇ ಅನುಚ್ಛೇದದ (1)ನೇ ಖಂಡದಲ್ಲಿ ಹೇಳಲಾದ ಅಲ್ಪಸಂಖ್ಯಾತ ಶೈಕ್ಷಣಿಕ ಸಂಸ್ಥೆಗಳನ್ನು ಹೊರತುಪಡಿಸಿ ರಾಜ್ಯದಿಂದ ಅನುದಾನ ಪಡೆದಿರುವ ಅಥವಾ ಅನುದಾನ ಪಡೆಯದಿರುವ ಖಾಸಗಿ ಶೈಕ್ಷಣಿಕ ಸಂಸ್ಥೆಗಳೂ ಸೇರಿದಂತೆ ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶಕ್ಕೆ ಸಂಬಂಧಿಸಿರುವಷ್ಟರ ಮಟ್ಟಿಗೆ, ರಾಜ್ಯವನ್ನು ಪ್ರತಿಬಂಧಿಸತಕ್ಕದ್ದಲ್ಲ.

**ವಿಧಿ 16 (1) :** ರಾಜ್ಯದ ಅಧೀನದಲ್ಲಿರುವ ಯಾವುದೇ ಪದಕ್ಕೆ ಸಂಬಂಧಿಸಿದಂತೆ ನಿಯೋಜನೆ ಅಥವಾ ನೇಮಕದ ವಿಷಯದಲ್ಲಿ ಎಲ್ಲ ನಾಗರಿಕರಿಗೂ ಸಮಾನ ಅವಕಾಶವಿರತಕ್ಕದ್ದು.

**ವಿಧಿ 16(2) :** ಧರ್ಮ, ಮೂಲವಂಶ, ಜಾತಿ, ಲಿಂಗ, ಸಂತತಿ, ಜನ್ಮಸ್ಥಳ, ನಿವಾಸದ ಅಥವಾ ಇವುಗಳಲ್ಲಿ ಯಾವುದೇ ಒಂದರ ಆಧಾರದ ಮೇಲೆ ಮಾತ್ರವೇ ಯಾರೇ ನಾಗರಿಕನು ರಾಜ್ಯದ ಅಧೀನದಲ್ಲಿರುವ ಯಾವುದೇ ನಿಯೋಜನೆಗೆ ಅಥವಾ ಪದಕ್ಕೆ ಸಂಬಂಧಿಸಿದಂತೆ ಅನರ್ಹತೆಗೆ ಒಳಗಾಗತಕ್ಕದ್ದಲ್ಲ ಅಥವಾ ಅವನ ವಿರುದ್ಧ ತಾರತಮ್ಯವನ್ನು ಮಾಡತಕ್ಕದ್ದಲ್ಲ.

**ವಿಧಿ 51A–(5)–(6)–(11) :** ಕೆಳಕಂಡ ಕರ್ತವ್ಯಗಳನ್ನು ಪಾಲಿಸುವುದು ಭಾರತದ ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿರತಕ್ಕದ್ದು ಎಂದರೆ:–

- ಧಾರ್ಮಿಕ, ಭಾಷಾ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭೇದ–ಭಾವಗಳಿಂದ ಅತೀತವಾಗಿ, ಭಾರತದ ಎಲ್ಲಾ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಸಮಾನ ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು ಮತ್ತು ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಗಳನ್ನು ಕೈಬಿಡುವುದು;
- ನಮ್ಮ ಸಮ್ಮಿಶ್ರ ಸಂಸ್ಕೃತಿಯ ಭವ್ಯಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು;
- ತಂದೆ– ತಾಯಿ ಅಥವಾ ಪೋಷಕನು, ಸಂದರ್ಭಾನುಸಾರ ಆರರಿಂದ ಹದಿನಾಲ್ಕು ವಯಸ್ಸಿನ ತಮ್ಮ ಮಗುವಿಗೆ ಅಥವಾ ತಮ್ಮ ಪರಿಪಾಲಿತ ಮಗುವಿಗೆ ಶಿಕ್ಷಣ ಪಡೆಯಲು ಅವಕಾಶಗಳನ್ನು ಒದಗಿಸುವುದು.

**ವಿಧಿ 350:** ಕುಂದುಕೊರತೆಗಳ ನಿವಾರಣೆಗಾಗಿ ಕೋರಿ ಸಲ್ಲಿಸುವ ಮನವಿಗಳಲ್ಲಿ ಬಳಸಬೇಕಾದ ಭಾಷೆ:– ಪ್ರತಿಯೊಬ್ಬ ವ್ಯಕ್ತಿಯು, ಯಾವುದೇ ಕುಂದುಕೊರತೆಯ ನಿವಾರಣೆಗಾಗಿ ಒಕ್ಕೂಟದ ಅಥವಾ ಒಂದು ರಾಜ್ಯದ ಯಾರೇ ಅಧಿಕಾರಿಗೆ ಅಥವಾ ಪ್ರಾಧಿಕಾರಕ್ಕೆ ಒಕ್ಕೂಟದಲ್ಲಿ ಅಥವಾ ಸಂದರ್ಭಾನುಸಾರ ಆ ರಾಜ್ಯದಲ್ಲಿ ಬಳಸುವ ಭಾಷೆಗಳ ಪೈಕಿ ಯಾವುದೇ ಭಾಷೆಯಲ್ಲಿ ಮನವಿಯನ್ನು ಸಲ್ಲಿಸಲು ಹಕ್ಕುಳ್ಳವನಾಗಿರತಕ್ಕದ್ದು.

**350 A. ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣ ಸೌಲಭ್ಯಗಳು :** ಭಾಷಾ ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದ ಮಕ್ಕಳಿಗೆ ವಿದ್ಯಾಭ್ಯಾಸದ ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣಕ್ಕಾಗಿ ಸಾಕಷ್ಟು ಸೌಲಭ್ಯಗಳನ್ನು ಒದಗಿಸಲು ಪ್ರತಿಯೊಂದು ರಾಜ್ಯವು ಮತ್ತು ಆ ರಾಜ್ಯದಲ್ಲಿನ ಪ್ರತಿಯೊಂದು ಸ್ಥಳೀಯ ಪ್ರಾಧಿಕಾರವೂ ಪ್ರಯತ್ನಿಸತಕ್ಕದ್ದು ಮತ್ತು ಅಂಥ ಸೌಲಭ್ಯಗಳನ್ನು ಒದಗಿಸುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ರಾಷ್ಟ್ರಪತಿಯು ತಾನು ಅವಶ್ಯವೆಂದು ಅಥವಾ ಯುಕ್ತವೆಂದು ಭಾವಿಸುವಂಥ ನಿರ್ದೇಶನಗಳನ್ನು ಯಾವುದೇ ರಾಜ್ಯಕ್ಕೆ ಕೊಡಬಹುದು.

## (II) ರಾಷ್ಟ್ರೀಯ ಶಿಕ್ಷಣ ನೀತಿ (1986–92)

ರಾಷ್ಟ್ರೀಯ ಶಿಕ್ಷಣ ನೀತಿಯು ಶಿಕ್ಷಣದ ಪ್ರಾಥಮಿಕ ಹಂತದಿಂದ ವಿಶ್ವವಿದ್ಯಾನಿಲಯದ ಹಂತದವರೆಗೆ, ವಯಸ್ಕರ ಶಿಕ್ಷಣವನ್ನೂ ಒಳಗೊಂಡಂತೆ ಎಲ್ಲ ಅಂಶಗಳನ್ನೂ ಒಳಗೊಂಡಿರುವ ವಿಸ್ತಾರವಾದ ದಾಖಲೆ. ಸೌಲಭ್ಯವಂಚಿತರು ಮತ್ತು ಅಸಾಮರ್ಥ್ಯವುಳ್ಳವರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಈ ದಾಖಲೆ ಚರ್ಚಿಸಿರುವ ವಿಚಾರಗಳನ್ನು ಮತ್ತು ಶಿಫಾರಸುಗಳನ್ನು ಗಮನಿಸಿ:

### ಎ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳ ಶಿಕ್ಷಣ :

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಶಿಕ್ಷಣದ ಪ್ರಮುಖ ಗಮನ ಎಂದರೆ ಶಿಕ್ಷಣದ ಎಲ್ಲ ಹಂತದಲ್ಲೂ ಇವರು ಈ ಪಂಗಡದವರಲ್ಲದವರಿಗೆ ಸರಿಸಮನಾಗುವಂತೆ ಮಾಡುವುದು. ಇದಕ್ಕಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ 6ರಿಂದ 11ನೇ ವಯಸ್ಸಿನ ಎಲ್ಲ ಮಕ್ಕಳೂ ಶಾಲೆಗೆ ದಾಖಲಾಗುವುದನ್ನು ಮತ್ತು ಸಂಪೂರ್ಣಗೊಳಿಸುವುದನ್ನು ಅಥವಾ ಔಪಚಾರಿಕೇತರ ಮಾದರಿಯಲ್ಲಿ ಇದಕ್ಕೆ ಸಮನಾದುದನ್ನು 1990ರ ಒಳಗೆ ಸಾಧಿಸುವುದನ್ನು ಖಚಿತಪಡಿಸಿಕೊಳ್ಳಬೇಕು. ಇದಕ್ಕಾಗಿ ಅವರಿಗೆ ವಿಶೇಷ ಅನುಕೂಲತೆಗಳನ್ನು ಒದಗಿಸಬೇಕು.( ಈ ಕುರಿತು ದಾಖಲೆಯಲ್ಲಿ ವಿಸ್ತಾರವಾಗಿ ಪ್ರಸ್ತಾಪಿಸಲಾಗಿದೆ. ಇದಕ್ಕಾಗಿ ಮೂಲ ದಾಖಲೆಯನ್ನು ಪರಾಮರ್ಶಿಸಿ)

## ಬಿ) ಅಲ್ಪಸಂಖ್ಯಾತರ ಶಿಕ್ಷಣ

ಅಲ್ಪಸಂಖ್ಯಾತರ ಕೆಲವು ಗುಂಪುಗಳು ಶೈಕ್ಷಣಿಕವಾಗಿ ಹಿಂದುಳಿದಿವೆ. ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ಒದಗಿಸುವ ಹಿನ್ನೆಲೆಯಲ್ಲಿ ಇವರ ಶಿಕ್ಷಣಕ್ಕೆ ಹೆಚ್ಚಿನ ಗಮನವನ್ನು ಕೊಡಲಾಗುತ್ತದೆ. ಇದು ಸಂವಿಧಾನಾತ್ಮಕ ಬದ್ಧತೆಯಂತೆ ಅಲ್ಪಸಂಖ್ಯಾತರಿಗೆ ಅವರದೇ ಆದ ಸಂಸ್ಥೆಗಳನ್ನು ಸ್ಥಾಪಿಸಿ ನಡೆಸುವುದನ್ನೂ ಅವರ ಭಾಷೆ ಹಾಗೂ ಸಂಸ್ಕೃತಿಗಳನ್ನು ರಕ್ಷಿಸಿಕೊಳ್ಳುವುದನ್ನೂ ಒಳಗೊಳ್ಳುತ್ತದೆ. ಇದರ ಜೊತೆಗೆ ಮೂಲ ಪಠ್ಯಕ್ರಮಕ್ಕೆ ಅನುಗುಣವಾಗಿ ಪಠ್ಯಪುಸ್ತಕಗಳನ್ನು ರಚಿಸುವಲ್ಲಿ ಮತ್ತು ಶಾಲೆಯ ಎಲ್ಲ ಚಟುವಟಿಕೆಗಳಲ್ಲಿ ವಸ್ತುನಿಷ್ಟತೆಯನ್ನು ಕಾಪಾಡಿಕೊಂಡು ಸಾಮಾನ್ಯ ರಾಷ್ಟ್ರೀಯ ಗುರಿ ಮತ್ತು ಆದರ್ಶಗಳನ್ನು ಪ್ರಶಂಸಿಸುವುದನ್ನು ಆಧರಿಸಿದ, ಸಂಯೋಜನೆಯನ್ನು ಬಲಪಡಿಸುವ, ಎಲ್ಲ ಕ್ರಮಗಳನ್ನೂ ಕೈಗೊಳ್ಳಲಾಗುತ್ತದೆ.

## ಸಿ) ಅಂಗವಿಕಲರ ಶಿಕ್ಷಣ

ಸಾಧ್ಯವಿರುವೆಡೆಯಲ್ಲೆಲ್ಲಾ ಚಲನಾತ್ಮಕ ಅಂಗವಿಕಲರ ಮತ್ತು ಇತರ ಸಾಧಾರಣ ಮಟ್ಟದ ಅಂಗವಿಕಲರ ಶಿಕ್ಷಣ ಇತರರ ಜೊತೆಯಲ್ಲೇ ನಡೆಯಬೇಕು ಎಂಬುದನ್ನು ರಾಷ್ಟ್ರೀಯ ಶಿಕ್ಷಣ ನೀತಿ ನಿರ್ಬಂಧಿಸುತ್ತದೆ. ತೀವ್ರತರವಾದ ಅಂಗವಿಕಲತೆ ಇರುವವರು ವಸತಿ ಸೌಕರ್ಯದೊಂದಿಗೆ ತಾಲ್ಲೂಕು ಕೇಂದ್ರಗಳ ವಿಶೇಷ ಶಾಲೆಗಳಲ್ಲಿ ದಾಖಲಾಗಬೇಕೆಂದು ಸೂಚಿಸಿದೆ. ಅಂಗವಿಕಲ ಮಕ್ಕಳ ಸಮರ್ಪಕ ಪೂರ್ವ ಶಾಲಾ ಶಿಕ್ಷಣ, ಇತರರ ಜೊತೆಯಲ್ಲಿ ಮತ್ತು ವಿಶೇಷ ಉದ್ಯೋಗ ಕೇಂದ್ರಗಳಲ್ಲಿ ಉದ್ಯೋಗ ಶಿಕ್ಷಣವನ್ನೂ ಈ ದಾಖಲೆ ಎದುರುನೋಡುತ್ತದೆ.

ರಾಷ್ಟ್ರೀಯ ಶಿಕ್ಷಣ ನೀತಿಯು ಅಂಗವಿಕಲರಿಗೆ ಪ್ರೋತ್ಸಾಹಕಗಳನ್ನೊಳಗೊಂಡ ಕೆಳಗಿನ ಸೌಕರ್ಯ/ ಸವಲತ್ತುಗಳನ್ನು ಶಿಫಾರಸು ಮಾಡುತ್ತದೆ:

- ಆಯಾ ಕ್ಷೇತ್ರದಲ್ಲಿ ಅಗತ್ಯವಾದ ಸಲಕರಣೆಗಳು ಮತ್ತು ಉಪಕರಣಗಳನ್ನು ಒದಗಿಸುವುದು
- ಸಮರ್ಪಕವಾದ, ಸಾರಿಗೆ ಭತ್ಯೆ(ತಿಂಗಳಿಗೆ ರೂ 50)
- ಹತ್ತಕ್ಕಿಂತ ಹೆಚ್ಚು ಅಂಗವಿಕಲ ಮಕ್ಕಳಿದ್ದರೆ ಅವರ ಸಾರಿಗೆ ಅಗತ್ಯಕ್ಕಾಗಿ ರಿಕ್ಷಾ ಖರೀದಿಸಲು ಮೂಲ ಹಣ.
- ಹತ್ತಕ್ಕಿಂತ ಹೆಚ್ಚು ಅಂಗವಿಕಲ ಮಕ್ಕಳಿದ್ದರೆ ಶಾಲಾ ಕಟ್ಟಡದಲ್ಲಿ ಅಡೆತಡೆಗಳ ನಿವಾರಣೆ.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಕೊಡುವಂತೆ ಉಚಿತವಾಗಿ ಪಠ್ಯಪುಸ್ತಕಗಳು ಮತ್ತು ಸಮವಸ್ತ್ರ ವಿತರಣೆ
- ಹೆಣ್ಣು ಮಕ್ಕಳು ಮತ್ತು ಪರಿಶಿಷ್ಟ ವರ್ಗದ ಮಕ್ಕಳಿಗೆ ಕೊಡುವಂತೆ ಹಾಜರಾತಿ ಪ್ರೋತ್ಸಾಹಕಗಳು.
- ಶಾಲಾ ಶಿಕ್ಷಣಕ್ಕಾಗಿ ಈ ಮಕ್ಕಳಿಗೆ ಪೂರ್ವ ಬಾಲ್ಯ ಕೇಂದ್ರಗಳಲ್ಲಿ ಸಿದ್ಧತೆಗೆ ಕ್ರಮಗಳು.
- ಶಾಲಾ ಪ್ರವೇಶಕ್ಕೆ ಇತರ ಮಕ್ಕಳಿಗೆ ನಿಗದಿಯಾದ ವಯಸ್ಸಿನಲ್ಲಿ ಹೆಚ್ಚಿನ ರಿಯಾಯತಿ(6 ವರ್ಷಗಳ ಬದಲಿಗೆ 8ರಿಂದ 9ವರ್ಷಗಳು)

## ಡಿ) ವಯಸ್ಕ ಶಿಕ್ಷಣ

ವಯಸ್ಕ ಶಿಕ್ಷಣವು ಆರ್ಥಿಕ, ಸಾಮಾಜಿಕ ಹಾಗೂ ಲಿಂಗಾತ್ಮಕವಾದ ತಾರತಮ್ಯಗಳನ್ನು ಕಡಿಮೆಮಾಡುವ ಸಾಧನವಾಗುತ್ತದೆ. ವಯಸ್ಕ ಶಿಕ್ಷಣಕ್ಕೆ ಹೊಸ ರಾಷ್ಟ್ರೀಯ ಕಾರ್ಯಕ್ರಮದ ಪ್ರಮುಖ ಗುರಿ ಎಂದರೆ, ಸುಮಾರು ನೂರು ಮಿಲಿಯನ್‌ಗಳ ಅಂದಾಜಿರುವ 15–35 ವರ್ಷಗಳ ವಯೋಮಾನದ ಜನಸಂಖ್ಯೆಗೆ ಸಾಕ್ಷರತೆಯನ್ನು ಒಳಗೊಂಡ ಶಿಕ್ಷಣವನ್ನು ನೀಡುವುದು. ಕಲಿಯುವವರ ದಿನನಿತ್ಯದ ಅಗತ್ಯಗಳಿಗೆ ಸಮರ್ಪಕವಾದ ಪ್ರಾಯೋಗಿಕ ಮಾಹಿತಿ ಮತ್ತು ಕೌಶಲಗಳನ್ನು ಕೂಡಿಕೊಂಡ ವಯಸ್ಕ ಶಿಕ್ಷಣದ ಕಾರ್ಯಕ್ರಮಗಳು ಮಾತ್ರ ಅರ್ಥಪೂರ್ಣವಾಗಬಹುದು ಎಂಬುದನ್ನು ಹಿಂದಿನ ಅನುಭವಗಳು ತೋರಿಸಿಕೊಟ್ಟಿವೆ. ಆದುದರಿಂದ ರಾಷ್ಟ್ರೀಯ ವಯಸ್ಕ ಶಿಕ್ಷಣ ನೀತಿಯು ಕೌಶಲ ಬೆಳವಣಿಗೆಯ ಜೊತೆಗೆ ಕಲಿಯುವವರಿಗೆ, ರಾಷ್ಟ್ರೀಯ ಗುರಿಗಳು ಹಾಗೂ ವಿಮೋಚನಾ ಪರವಾದ ಹಾಗೂ ದಬ್ಬಾಳಿಕೆಯ ವಿರುದ್ಧವಾದ ವಿಕಾಸಾತ್ಮಕ ಕಾರ್ಯಕ್ರಮಗಳ ಅರಿವನ್ನು ಮೂಡಿಸುವಿಕೆಗೆ ಒತ್ತುನೀಡುತ್ತದೆ.

## (III) ಭಾರತೀಯ ಪುನರ್ವಸತಿ ಮಂಡಳಿ ಕಾಯಿದೆ 1992 :

ಇದು 1993ರ ಜೂನ್ 22ರಂದು ಶಾಸನಬದ್ಧ ಮಂಡಳಿಯಾಗಿ ಅಸ್ತಿತ್ವಕ್ಕೆ ಬಂದಿತು. ಹೆಚ್ಚು ಸಮಗ್ರವಾಗಿಸುವ ಹಿನ್ನೆಲೆಯಲ್ಲಿ ಇದರ ಕಾನೂನುಗಳನ್ನು ಮುಂದೆ 2000ದಲ್ಲಿ ತಿದ್ದುಪಡಿ ಮಾಡಲಾಯಿತು. ಅಸಾಮರ್ಥ್ಯವುಳ್ಳವರಿಗೆ ಕೊಡುವ ಸೇವೆಗಳು, ಪಠ್ಯವಸ್ತುವಿನ ಪ್ರಮಾಣೀಕರಣ ಮತ್ತು ಪುನರ್ವಸತಿ ಮತ್ತು ವಿಶೇಷ ಶಿಕ್ಷಣ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಎಲ್ಲ ವೃತ್ತಿಪರರ ಕೇಂದ್ರೀಯ ಪುನರ್ವಸತಿ ರಿಜಿಸ್ಟರನ್ನು ನಿರ್ವಹಿಸುವುದು ಇತ್ಯಾದಿಗಳ ಕುರಿತು ಆದೇಶ ಹೊರಡಿಸುವುದು ಈ ಮಂಡಳಿಗೆ ವಹಿಸಿದ ಪ್ರಮುಖ ಕೆಲಸವಾಗಿತ್ತು.

ಭಾರತದಲ್ಲಿ ಅಸಾಮರ್ಥ್ಯವುಳ್ಳವರ ಪುನರ್ವಸತಿಯ ವಿಷಯ ಕಳೆದ ಐದು ದಶಕಗಳಿಂದೀಚೆಗೆ ಗಮನ ಸೆಳೆಯುತ್ತಿದೆ. ಆದರೆ ಪುನರ್ವಸತಿಯಲ್ಲಿ ಸಹಾಯಕವಾಗುವ ಮಾನವ ಸಂಪನ್ಮೂಲವನ್ನು ಬೆಳೆಸಲು ಯಾವುದೇ ಯೋಜಿತ ಪ್ರಯತ್ನಗಳು ನಡೆಯುತ್ತಿಲ್ಲ. 1981ನೇ ವರ್ಷವನ್ನು ಸಂಯುಕ್ತ ರಾಷ್ಟ್ರಗಳು 'ಅಂತರರಾಷ್ಟ್ರೀಯ ವಿಕಲಾಂಗರ ವರ್ಷ' ಎಂದು ಘೋಷಿಸಿದುದು ಸ್ವಾಗತಾರ್ಹವಾಗಿದ್ದು, ಜನಜಾಗೃತಿಗೆ ಇದೊಂದು ಉತ್ತಮ ಮಾರ್ಗವಾಯಿತು. ಪುನರ್ವಸತಿಗೆ ಸಂಬಂಧಿಸಿದ ತರಬೇತಿ ಕಾರ್ಯಕ್ರಮಗಳು ಪ್ರತ್ಯೇಕವಾಗಿದ್ದು, ಮಿತವಾದ ಉದ್ದೇಶಗಳನ್ನುಳ್ಳದ್ದಾಗಿತ್ತು. ಇದಕ್ಕೆ ಪ್ರಮಾಣೀಕೃತವಾದ ಪಠ್ಯವಸ್ತುವೂ ಇರಲಿಲ್ಲ. ವಿವಿಧ ಸಂಸ್ಥೆಗಳ ಸ್ನಾತಕಪೂರ್ವ, ಸ್ನಾತಕ ಹಾಗೂ ಸ್ನಾತಕೋತ್ತರ ಮಟ್ಟದ ಪಠ್ಯಕ್ರಮಗಳಲ್ಲಿ ಈ ವಿಷಯವನ್ನು ಕುರಿತ ಏಕರೂಪತೆಯೂ ಇರಲಿಲ್ಲ. ಇದಕ್ಕಾಗಿ ಭಾರತ ಸರ್ಕಾರವು ಈ ಕೌನ್ಸಿಲ್ಲನ್ನು ಸ್ಥಾಪಿಸಬೇಕೆಂಬ ನಿರ್ಧಾರವನ್ನು ಕೈಗೊಂಡು ಕೆಳಗಿನ ಜವಾಬ್ದಾರಿಗಳನ್ನು ವಹಿಸಿತು.

- ತರಬೇತಿ ನಿಯಮಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸುವುದು;
- ಅಸಾಮರ್ಥ್ಯವಿರುವವರನ್ನು ಕುರಿತ ತರಬೇತಿ ಕೋರ್ಸುಗಳನ್ನು ಪ್ರಮಾಣೀಕರಿಸುವುದು;
- ಈ ತರಬೇತಿ ಕೋರ್ಸುಗಳನ್ನು ನಡೆಸುವ ಸಂಸ್ಥೆಗಳಿಗೆ ಮಾನ್ಯತೆ ನೀಡುವುದು;
- ಪುನರ್ವಸತಿ ವೃತ್ತಿಪರರ ಒಂದು ರಿಜಿಸ್ಟರ್ ಅನ್ನು ನಿರ್ವಹಿಸುವುದು; ಮತ್ತು

- ಪುನರ್ವಸತಿ ಮತ್ತು ವಿಶೇಷ ಶಿಕ್ಷಣದಲ್ಲಿ ಸಂಶೋಧನೆಯನ್ನು ಉತ್ತೇಜಿಸುವುದು.

ಈ ಕೌನ್ಸಿಲ್ಲಿಗೆ ಅದರ ಕರ್ತವ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವಂತೆ ಆದೇಶಾತ್ಮಕ ಅಧಿಕಾರವನ್ನು ಕೊಡಲು ಈ ಮಸೂದೆಯು ಸಂಸತ್ತಿನಲ್ಲಿ ಅಂಗೀಕೃತವಾಗಿ 1993ರ ಜೂನ್ ತಿಂಗಳಲ್ಲಿ ಈ ಮಸೂದೆಯು ಅಸ್ತಿತ್ವಕ್ಕೆ ಬಂದಿತು.

**ಇದರ ಉದ್ದೇಶಗಳು :**

- ಅಸಾಮರ್ಥ್ಯವಿರುವ ವ್ಯಕ್ತಿಗಳ ಪುನರ್ವಸತಿ ಕ್ಷೇತ್ರದಲ್ಲಿನ ತರಬೇತಿ ನಿಯಮಗಳನ್ನು ಮತ್ತು ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ನಡೆಸುವುದು;
- ಅಸಾಮರ್ಥ್ಯವಿರುವ ವ್ಯಕ್ತಿಗಳ/ವೃತ್ತಿಪರರ ತರಬೇತಿ ಕೋರ್ಸುಗಳನ್ನು ಪ್ರಮಾಣೀಕರಿಸುವುದು;
- ಇಡೀ ರಾಷ್ಟ್ರದ ಪುನರ್ವಸತಿ ತರಬೇತಿ ಕಾರ್ಯಕ್ರಮಗಳಲ್ಲಿ ಕನಿಷ್ಠಮಟ್ಟದ ಗುಣಮಟ್ಟವನ್ನು ನಿಗದಿಪಡಿಸಿ ಏಕರೂಪತೆಯನ್ನು ತರುವುದು;
- ಈ ಕನಿಷ್ಠ ಗುಣಮಟ್ಟವನ್ನು ರಾಷ್ಟ್ರವ್ಯಾಪಿಯಾಗಿ ಎಲ್ಲ ತರಬೇತಿ ಸಂಸ್ಥೆಗಳಲ್ಲೂ ಇರುವಂತೆ ಗಮನಿಸಿಕೊಳ್ಳುವುದು;
- ಪುನರ್ವಸತಿ ಕ್ಷೇತ್ರದಲ್ಲಿ ವಿಶ್ವವಿದ್ಯಾನಿಲಯಗಳು/ ಸಂಸ್ಥೆಗಳು ಕೊಡಮಾಡಿದ ಪರದೇಶೀಯ ಪದವಿಗಳು/ ಡಿಪ್ಲೊಮಗಳು/ ಪ್ರಮಾಣಪತ್ರಗಳನ್ನು ಪರಸ್ಪರ ಮಾನ್ಯತೆಯ ಆಧಾರದ ಮೇಲೆ ಮಾನ್ಯಗೊಳಿಸುವುದು;
- ಮಾನ್ಯಮಾಡಿರುವ ಅರ್ಹತೆಯನ್ನು ಪಡೆದಿರುವ ವೃತ್ತಿಪರರ ಕೇಂದ್ರೀಯ ದಾಖಲೆಯನ್ನು ನಿರ್ವಹಿಸುವುದು;
- ಭಾರತದಲ್ಲಿ ಮತ್ತು ಪರದೇಶದಲ್ಲಿ ಅಸಾಮರ್ಥ್ಯವಿರುವವರ ಪುನರ್ವಸತಿಯು ಕ್ಷೇತ್ರದಲ್ಲಿಕೆಲಸಮಾಡುತ್ತಿರುವ ಸಂಸ್ಥೆಗಳಲ್ಲಿನ ಶಿಕ್ಷಣ ಮತ್ತು ತರಬೇತಿಯನ್ನು ಕುರಿತು ಕ್ರಮಪ್ರಕಾರವಾಗಿ ಮಾಹಿತಿ ಸಂಗ್ರಹಿಸುವುದು.
- ಅಸಾಮರ್ಥ್ಯವಿರುವವರ ಪುನರ್ವಸತಿ ಕ್ಷೇತ್ರದಲ್ಲಿ ಕೆಲಸಮಾಡುತ್ತಿರುವ ಸಂಘಟನೆಗಳೊಂದಿಗೆ ಸಂಯೋಜನೆಗೊಳ್ಳುವುದರ ಮೂಲಕ ಪುನರ್ವಸತಿ ಶಿಕ್ಷಣವನ್ನು ಮುಂದುವರಿಸಲು ಪ್ರೋತ್ಸಾಹಿಸುವುದು; ಮತ್ತು
- ವಿಶೇಷ ಶಿಕ್ಷಣ ಮತ್ತು ಪುನರ್ವಸತಿಯಲ್ಲಿ ಸಂಶೋಧನೆಯನ್ನು ಉತ್ತೇಜಿಸುವುದು.

**(IV) ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಕಾಯಿದೆ 1995(Persons with Disabilities Act– 1995)**

ಭಾರತವು ರಾಷ್ಟ್ರವನ್ನು ಕಟ್ಟುವಿಕೆಯಲ್ಲಿ ಅಸಾಮರ್ಥ್ಯವುಳ್ಳವರ ಸಂಪೂರ್ಣ ಭಾಗವಹಿಕೆಯನ್ನು ಖಚಿತಪಡಿಸಿಕೊಳ್ಳಲು ಇಟ್ಟ ಮೊದಲ ಹೆಜ್ಜೆ ಎಂದರೆ ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಕಾಯಿದೆ 1995 (ಸಮಾನವಾದ ಅವಕಾಶ, ಸಂಪೂರ್ಣ ಭಾಗವಹಿಕೆ ಮತ್ತು ಹಕ್ಕುಗಳ ರಕ್ಷಣೆ). ರಾಷ್ಟ್ರವನ್ನು ಕಟ್ಟುವಿಕೆಯಲ್ಲಿ ಅವರದ್ದೂ ಪ್ರಮುಖವಾದ ಪಾತ್ರವಿದೆ ಎಂಬುದನ್ನು ಸ್ಥಿರಪಡಿಸಲು ಭಾರತಸರ್ಕಾರ ಈ ಕಾಯಿದೆಯನ್ನು ಜಾರಿಗೆ

ತಂದಿದೆ. ಇದು 1996 ಫೆಬ್ರವರಿ 7 ರಂದು ಬೆಳಕಿಗೆ ಬಂದಿತು. ಅಸಾಮರ್ಥ್ಯವುಳ್ಳವರಿಗೆ ಸಮಾನ ಅವಕಾಶದ ಖಚಿತತೆಯನ್ನೂ ಇದು ಸ್ಥಾಪಿಸಿತು. ಇದು ಶಿಕ್ಷಣ, ಉದ್ಯೋಗ, ಔದ್ಯೋಗಿಕ ತರಬೇತಿ, ಮೀಸಲಾತಿ, ಸಂಶೋಧನೆ, ತಡೆ ಮುಕ್ತ ಪರಿಸರದ ನಿರ್ಮಾಣ, ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಪುನರ್ವಸತಿ, ನಿರುದ್ಯೋಗ ಭತ್ಯೆ, ಸಾ,ಮಾಜಿಕ ಭದ್ರತೆ, ಅಸಾಮರ್ಥ್ಯ ಉದ್ಯೋಗಿಗಳಿಗೆ ವಿಶೇಷ ವಿಮಾ ಯೋಜನೆ, ತೀವ್ರತರವಾದ ಅಸಾಮರ್ಥ್ಯವಿರುವವರಿಗೆ ವಸತಿ ವ್ಯವಸ್ಥೆ ಮತ್ತು ಮಾನವಶಕ್ತಿ ಬೆಳವಣಿಗೆ ಮುಂತಾದ ಅನೇಕ ಪ್ರಗತಿಪರ ಅಂಶಗಳ ಜೊತೆಗೆ ಅಸಾಮರ್ಥ್ಯವನ್ನು ತಡೆಗಟ್ಟುವ ಕ್ರಮಗಳಿಗೂ ಅವಕಾಶ ಮಾಡಿಕೊಟ್ಟಿದೆ.  ಈ ಕಾಯಿದೆಯ ಕಾನೂನಿನಲ್ಲಿ 'ಅಂಧತ್ವ', 'ಅಲ್ಪ ದೃಷ್ಟಿ', 'ಕುಷ್ಟರೋಗ ನಿವಾರಣೆ', ಶ್ರವಣ ದೋಷ, ಚಲನಾತ್ಮಕ ಅಸಾಮರ್ಥ್ಯ, ಬೌದ್ಧಿಕ ಅಸಾಮರ್ಥ್ಯ ಮತ್ತು ಬೌದ್ಧಿಕ ಅನಾರೋಗ್ಯ – ಹೀಗೆ ಏಳು ವರ್ಗದ ಅಸಾಮರ್ಥ್ಯಗಳಿಗೆ ಪರಿಹಾರ ಸೂಚಿಸಲಾಗಿದೆ.

ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಕಾಯಿದೆಯ ಪ್ರಕಾರ, ಕೇಂದ್ರ, ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳು ಅಸಾಮರ್ಥ್ಯವ್ಯಕ್ತಿಗಳಿಗೆ 18 ವರ್ಷದವರೆಗೆ 'ಮುಕ್ತ ಮತ್ತು ಸಮರ್ಪಕ' ಶಿಕ್ಷಣಕ್ಕೆ ಅವಕಾಶ ಕೊಡಬೇಕು. ಈ ಮೂರು ರೀತಿಯ ಸರ್ಕಾರಗಳು 'ಅಂತರ್ಗತ ಶಿಕ್ಷಣ'ವನ್ನೂ ಬೆಳೆಸಬೇಕು ಎಂದು ಕರೆಕೊಡಲಾಗಿದೆ. ಇದೇ ವಿಶೇಷ ಅಗತ್ಯವಿರುವ ಮಕ್ಕಳಿಗಾಗಿ ಈ ಕಾನೂನು ಸಾರಿಗೆ ಸೌಲಭ್ಯ, ಅಡ್ಡಿಮುಕ್ತ ಕಟ್ಟಡ ವ್ಯವಸ್ಥೆ, ಉಚಿತ ಪುಸ್ತಕಗಳು ಮತ್ತು ಅಧ್ಯಯನ ಸಾಮಗ್ರಿಗಳು, ಶಿಷ್ಯ ವೇತನ, ಪಠ್ಯಕ್ರಮ ಪುನಾರಚನೆ, ಪರ್ಯಾಯ ಪರೀಕ್ಷಾವ್ಯವಸ್ಥೆ ಇವುಗಳನ್ನೊಳಗೊಂಡಂತೆ ಸಮಗ್ರ ಶಿಕ್ಷಣ ಯೋಜನೆಯನ್ನು ಮುಂದಿಟ್ಟಿದೆ. ಈ ಕಾಯಿದೆಯ ಪ್ರಮುಖ ಅವಕಾಶಗಳೆಂದರೆ:

- ಅಸಾಮರ್ಥತೆಯ ಕಾರಣವನ್ನು ಖಚಿತಪಡಿಸಿಕೊಳ್ಳಲು ಸರ್ವೇಕ್ಷಣೆ, ತನಿಖೆ ಮತ್ತು ಸಂಶೋಧನೆಯನ್ನು ಕೈಗೊಳ್ಳಬೇಕು.
- ಅಸಾಮರ್ಥ್ಯತೆಯನ್ನು ತಡೆಗಟ್ಟಲು ವಿವಿಧ ಕ್ರಮಗಳನ್ನು ತೆಗೆದುಕೊಳ್ಳಬೇಕು; ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿರುವ ಸಿಬ್ಬಂದಿಯನ್ನು ಈ ಕೆಲಸಕ್ಕೆ ತರಬೇತಿಗೊಳಿಸಬೇಕು.
- ಅಪಾಯದಂಚಿನಲ್ಲಿರುವ' ಸನ್ನಿವೇಶಗಳನ್ನು ಗುರುತಿಸಲು ಎಲ್ಲ ಮಕ್ಕಳನ್ನೂ ವರ್ಷಕ್ಕೊಮ್ಮೆ ತಪಾಸಣೆ ಮಾಡಬೇಕು.
- ಮಾಹಿತಿ ಪ್ರಸಾರಕ್ಕಾಗಿ ಜಾಗೃತಿ ಕಾರ್ಯಕ್ರಮಗಳನ್ನು ಯೋಜಿಸಬೇಕು.
- ತಾಯಿಯರಿಗೆ ಮತ್ತು ಮಕ್ಕಳಿಗೆ ಜನನ ಪೂರ್ವ, ಜನನ ಕಾಲದ, ಮತ್ತು ಜನನಾನಂತರದ ಪೋಷಣಾ ಸೇವೆಗಳನ್ನು ಒದಗಿಸಬೇಕು.

**ಶಿಕ್ಷಣ**

- ಅಸಾಮರ್ಥ್ಯವಿರುವ ಎಲ್ಲ ಮಕ್ಕಳಿಗೂ 18 ನೇ ವಯಸ್ಸಿನವರೆಗೆ ಸಮನ್ವಯ ಸನ್ನಿವೇಶದಲ್ಲಿ ಅಥವಾ ವಿಶೇಷ ಶಾಲೆಗಳಲ್ಲಿ ಉಚಿತ ಶಿಕ್ಷಣ ಪಡೆಯುವ ಹಕ್ಕು ಇದೆ.
- ಅಸಾಮರ್ಥ್ಯವಿರುವ ಮಕ್ಕಳಿಗೆ ಸಮರ್ಪಕ ಸಾರಿಗೆ, ಅಡ್ಡಿಮುಕ್ತ ಕಟ್ಟಡಗಳು, ಪರೀಕ್ಷಾವ್ಯವಸ್ಥೆಯ ಪುನಾರಚನೆ ಇವುಗಳನ್ನು ಖಚಿತಪಡಿಸಿಕೊಳ್ಳಬೇಕು.

- ಅಸಾಮರ್ಥ್ಯವಿರುವ ಮಕ್ಕಳಿಗೆ ಉಚಿತ ಪುಸ್ತಕ, ಶಿಷ್ಯವೇತನ, ಸಮವಸ್ತ್ರ ಮತ್ತು ಕಲಿಕಾ ಉಪಕರಣಗಳಿಗೆ ಹಕ್ಕು ಇದೆ.
- ಅಸಾಮರ್ಥ್ಯವಿರುವವರಿಗಾಗಿ ಇರುವ ವಿಶೇಷ ಶಾಲೆಗಳು ಉದ್ಯೋಗ ಕೇಂದ್ರಗಳನ್ನು ಸಜ್ಜುಗೊಳಿಸಿಕೊಳ್ಳಬೇಕು.ಅಸಾಮರ್ಥ್ಯವಿರುವ ಮಕ್ಕಳಿಗೆ ಔಪಚಾರಿಕೇತರ ಶಿಕ್ಷಣವನ್ನು ಪ್ರೋತ್ಸಾಹಿಸಬೇಕು.
- ಅಗತ್ಯವಾದ ಮಾನವ ಸಂಪನ್ಮೂಲವನ್ನು ಪಡೆಯಲು ಅಧ್ಯಾಪಕ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಬೇಕು.
- ಪೋಷಕರು ತಮ್ಮ ಅಸಾಮರ್ಥ್ಯದ ಮಕ್ಕಳ ಸ್ಥಾನೀಕರಣಕ್ಕೆ ಸಂಬಂಧಿಸಿದ ಸಮಸ್ಯೆಗಳ ಪರಿಹಾರಕ್ಕಾಗಿ ಪೋಷಕರು ಸಮರ್ಪಕ ಕೇಂದ್ರಗಳನ್ನು ಸಂಪರ್ಕಿಸಬೇಕು.

## ಉದ್ಯೋಗ

- ಸರ್ಕಾರದ ಉದ್ಯೋಗಗಳಲ್ಲಿ ಶೇ.3ರಷ್ಟನ್ನು ಅಸಾಮರ್ಥ್ಯವಿರುವ ವ್ಯಕ್ತಿಗಳಿಗೂ ಶೇ.1ರಷ್ಟನ್ನು ಕೆಳಗಿನ ಸಮಸ್ಯೆಗಳಿಂದ ಬಳಲುತ್ತಿರುವವರಿಗೂ ಮೀಸಲಿಡಬೇಕು.
- ಅಂಧರು ಮತ್ತು ಅಲ್ಪದೃಷ್ಟಿಯುಳ್ಳವರು
- ಶ್ರವಣದೋಷ ಉಳ್ಳವರು ಮತ್ತು
- ಚಲನ ಅಸಾಮರ್ಥ್ಯತೆ ಮತ್ತು ಸೆರೆಬ್ರಲ್ ಪಾಲ್ಸಿ ಇರುವವರು

**ಅಸಾಮರ್ಥ್ಯವುಳ್ಳ ವ್ಯಕ್ತಿಗಳಿಗಾಗಿ ಕೆಳಗಿನ ಯೋಜನೆಗಳನ್ನು ರೂಪಿಸಬೇಕು :**

- ಅಸಾಮರ್ಥ್ಯವುಳ್ಳ ವ್ಯಕ್ತಿಗಳಿಗೆ ತರಬೇತಿ ಮತ್ತು ಕಲ್ಯಾಣ ಕಾರ್ಯಕ್ರಮಗಳು
- ಗರಿಷ್ಟ ವಯಸ್ಸು ಎಂದು ಸೂಚಿತವಾಗಿರುವ ಕಡೆ ರಿಯಾಯಿತಿ.
- ಉದ್ಯೋಗ ಕ್ರಮಗೊಳಿಸುವಿಕೆ ಮತ್ತು
- ಅಸಾಮರ್ಥ್ಯವಿರುವವರು ಉದ್ಯೋಗದಲ್ಲಿರುವ ಸ್ಥಳಗಳಲ್ಲಿ ಆರೋಗ್ಯ ಮತ್ತು ಸುರಕ್ಷಾ ಕ್ರಮಗಳು ಮತ್ತು ವಿಕಲಾಂಗತೆಯಾಗದಿರುವ ಪರಿಸರ ಸೃಷ್ಟಿ.
- ಸರ್ಕಾರಿ ಶಿಕ್ಷಣ ಸಂಸ್ಥೆಗಳು ಮತ್ತು ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಇತರ ಶಿಕ್ಷಣ ಸಂಸ್ಥೆಗಳು ಸಂಸ್ಥೆಗಳು ಕನಿಷ್ಟ ಶೇ 3ರಷ್ಟು ಉದ್ಯೋಗವನ್ನು ಅಸಾಮರ್ಥ್ಯವಿರುವ ವ್ಯಕ್ತಿಗಳಿಗೆ ಮೀಸಲಿಡಬೇಕು. ಸೇವಾವಧಿಯಲ್ಲಿ ಅಸಾಮರ್ಥ್ಯತೆಗೆ ಒಳಗಾಗುವ ಯಾವ ವ್ಯಕ್ತಿಯನ್ನೂ ಅದೇ ವೇತನಕ್ಕೆ ಮತ್ತೊಂದು ಉದ್ಯೋಗಕ್ಕೆ ವರ್ಗಾಂತರಿಸಬಹುದಾದರೂ ಕೆಲಸದಿಂದ ತೆಗೆದುಹಾಕುವುದಾಗಲೀ ಹಿಂಬಡ್ತಿ ಮಾಡುವುದಾಗಲೀ ಮಾಡಬಾರದು. ಅಸಾಮರ್ಥ್ಯತೆಯ ಕಾರಣದಿಂದ ಯಾವುದೇ ರೀತಿಯ ಬಡ್ತಿಯನ್ನೂ ನಿರಾಕರಿಸುವಂತಿಲ್ಲ.

## ಮಾಡಲೇಬೇಕಾದ ಕಾರ್ಯಗಳು

- ಅಸಾಮರ್ಥ್ಯವುಳ್ಳವರಿಗೆ ಅಗತ್ಯವಾದ ಉಪಕರಣಗಳನ್ನು ಸಾಧನಗಳನ್ನು ಒದಗಿಸಬೇಕು. ಅಸಾಮರ್ಥ್ಯವಿರುವವರಿಗಾಗಿ ವಿನಾಯಿತಿ ದರದಲ್ಲಿ ಕೆಳಗಿನ ಕಾರಣಗಳಿಗೆ ಭೂಮಿಯನ್ನು ಕೊಂಡುಕೊಳ್ಳಲು ಅವಕಾಶಮಾಡಿಕೊಡಬೇಕು:
- ವಸತಿ, ವ್ಯವಹಾರ, ವಿಶೇಷ ಮನರಂಜನಾ ಕೇಂದ್ರಗಳು, ವಿಶೇಷ ಶಾಲೆಗಳು, ಸಂಶೋಧನಾ ಕೇಂದ್ರಗಳು ಮತ್ತು ಅಸಾಮರ್ಥ್ಯವಿರುವವ ಉದ್ಯಮಶೀಲರ ಕೈಗಾರಿಕೆಗಳು.

## ತಾರತಮ್ಯವಿಲ್ಲದಿರುವಿಕೆ

- ಸಾರ್ವಜನಿಕ ಕಟ್ಟಡಗಳು, ರೈಲ್ವೆ ಬೋಗಿಗಳು, ಬಸ್ಸು, ಹಡಗು, ವಿಮಾನ ಇವುಗಳು ಅಸಾಮರ್ಥ್ಯರಿಗೆ ಸುಲಭವಾಗುವಂತೆ ವಿನ್ಯಾಸಗೊಳ್ಳಬೇಕು; ಎಲ್ಲ ಸಾರ್ವಜನಿಕ ಸ್ಥಳಗಳು ಮತ್ತು ವಿರಾಮ ಕೊಠಡಿಗಳ ಶೌಚಗೃಹಗಳಲ್ಲಿ ವೀಲ್‌ಚೇರ್‌ಗಳ ಬಳಕೆಗೆ ಅವಕಾಶ ಕಲ್ಪಿಸಿರಬೇಕು;
- ಎಲ್ಲ ಲಿಫ್ಟ್‌ಗಳಲ್ಲಿ ಬ್ರೈಲ್ ಮತ್ತು ಶ್ರವಣ ಸಂಕೇತಗಳ ವ್ಯವಸ್ಥೆ ಇರಬೇಕು. ಸಾರ್ವಜನಿಕ ಬಳಕೆಗೆ ತೆರೆದಿರುವ ಎಲ್ಲ ಸ್ಥಳಗಳಲ್ಲೂ ರ್‍ಯಾಂಪ್‌ಗಳಿಗೆ ಅವಕಾಶಮಾಡಿಕೊಟ್ಟು ಅಡಚಣೆ ಮುಕ್ತವಾಗಿರುವಂತೆ ನೋಡಿಕೊಳ್ಳಬೇಕು.

## ಸಂಶೋಧನೆ ಮತ್ತು ಮಾನವಶಕ್ತಿ ಬೆಳವಣಿಗೆ :

**ಕೆಳಗಿನ ಕ್ಷೇತ್ರಗಳಲ್ಲಿ ಸಂಶೋಧನೆಗೆ ಪ್ರಾಯೋಜನೆ ಮತ್ತು ಬೆಳವಣಿಗೆಗೆ ಅವಕಾಶ ನೀಡಬೇಕು:**

- ಅಸಾಮರ್ಥ್ಯತೆಯ ನಿಯಂತ್ರಣ, ಸಮುದಾಯ ಆಧಾರಿತ ಪುನರ್ವಸತಿಯನ್ನೂ ಒಳಗೊಂಡಂತೆ ಪುನರ್ವಸತಿ, ಸಹಾಯಕ ಸಾಧನಗಳ ಅಭಿವೃದ್ಧಿ, ಉದ್ಯೋಗ ಗುರುತಿಸುವಿಕೆ, ಕಛೇರಿ ಮತ್ತು ಕೈಗಾರಿಕೆಗಳನ್ನು ಇರುವ ಸ್ಥಳದಲ್ಲೇ ಮಾರ್ಪಡಿಸುವಿಕೆ; ಮತ್ತು ವಿಶೇಷ ಶಿಕ್ಷಣ, ಪುನರ್ವಸತಿ ಮತ್ತು ಮಾನವಶಕ್ತಿ ಬೆಳವಣಿಗೆಯನ್ನು ಕುರಿತು ಸಂಶೋಧನೆ ಮಾಡುವ ವಿಶ್ವವಿದ್ಯಾನಿಲಯಗಳು, ಇತರ ಉನ್ನತ ಶಿಕ್ಷಣ ಸಂಸ್ಥೆಗಳು, ವೃತ್ತಿಪರ ಸಂಸ್ಥೆಗಳು ಮತ್ತು ಸರ್ಕಾರೇತರ ಸಂಶೋಧನಾ ಘಟಕಗಳು ಅಥವಾ ಸಂಸ್ಥೆಗಳಿಗೆ ಆರ್ಥಿಕ ಸಹಾಯವನ್ನು ನೀಡಬಹುದು.

## ಸಾಮಾಜಿಕ ಭದ್ರತೆ

- ಅಸಾಮರ್ಥ್ಯವಿರುವವರ ಪುನರ್ವಸತಿಗಾಗಿ ಸರ್ಕಾರೇತರ ಸಂಘ ಸಂಸ್ಥೆಗಳಿಗೆ ಆರ್ಥಿಕ ಧನ ಸಹಾಯ, ಅಸಾಮರ್ಥ್ಯವಿರುವ ಸರ್ಕಾರಿ ಉದ್ಯೋಗಸ್ಥರಿಗೆ ವಿಮಾ ಪೂರೈಕೆ, ವಿಶೇಷ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಒಂದು ವರ್ಷಕ್ಕಿಂತಲೂ ಹೆಚ್ಚು ಸಮಯದವರೆಗೆ ನೋಂದಣಿಯಾಗಿದ್ದು, ಉದ್ಯೋಗ ದೊರೆತಿಲ್ಲದ ಅಸಾಮರ್ಥ್ಯವುಳ್ಳ ವ್ಯಕ್ತಿಗಳಿಗೆ ನಿರುದ್ಯೋಗ ಭತ್ಯೆಯನ್ನು ಒದಗಿಸಬೇಕು.

## ಕುಂದುಕೊರತೆಗಳ ಪರಿಹಾರ

- ಈ ಕಾಯಿದೆಯಲ್ಲಿ ಉಕ್ತವಾಗಿರುವ ಹಕ್ಕುಗಳ ಉಲ್ಲಂಘನೆಯಾದರೆ, ಅಸಾಮರ್ಥ್ಯವುಳ್ಳ ವ್ಯಕ್ತಿಗಳು ಈ ಕೇಂದ್ರದ ಮುಖ್ಯ ಆಯುಕ್ತರು, ಅಥವಾ ರಾಜ್ಯಮಟ್ಟದ ಅಸಾಮರ್ಥ್ಯ ವ್ಯಕ್ತಿಗಳ ಆಯುಕ್ತರಿಗೆ ಅರ್ಜಿ ಸಲ್ಲಿಸಬಹುದು.

## (V) ಅಸಾಮರ್ಥ್ಯವುಳ್ಳ ವ್ಯಕ್ತಿಗಳ ರಾಷ್ಟ್ರೀಯ ನೀತಿ 2006 (National Policy for PWD 2006)

**ಅಸಾಮರ್ಥ್ಯವುಳ್ಳ ವ್ಯಕ್ತಿಗಳ ರಾಷ್ಟ್ರೀಯ ನೀತಿಯ ಗಮನ ಮತ್ತು ಅನುಷ್ಠಾನ ಮಾಡಲು ಬಯಸಿದ ಕ್ರಮಗಳ ವಿವರಗಳು ಕೆಳಗಿನಂತಿವೆ.**

1. **ಅಸಾಮರ್ಥ್ಯತೆಯನ್ನು ತಡೆಗಟ್ಟುವಿಕೆ :** ಅಸಾಮರ್ಥ್ಯವುಳ್ಳ ವ್ಯಕ್ತಿಗಳ ರಾಷ್ಟ್ರೀಯ ನೀತಿಯು ಈವರೆಗೆ ಸಮಾನತೆಯಿಂದ ವಂಚಿತರಾಗಿರುವವರ ನಿರ್ದಿಷ್ಟ ಅಗತ್ಯಗಳನ್ನು ಪೂರೈಸುವುದರ ಮೂಲಕ ತಾರತಮ್ಯಗಳನ್ನು ಹೋಗಲಾಡಿಸಿ ಶೈಕ್ಷಣಿಕ ಅವಕಾಶಗಳಲ್ಲಿ ಸಮಾನತೆಯನ್ನು ಸಾಧಿಸುವುದಕ್ಕೆ ಒತ್ತು ನೀಡುತ್ತದೆ.

2. **ಪುನರ್ವಸತಿ :** ಭಾರತ ಸಂವಿಧಾನವು ಸಮಾನತೆ, ಸ್ವಾತಂತ್ರ್ಯ, ನಾಯ ಮತ್ತು ಎಲ್ಲ ವ್ಯಕ್ತಿಗಳ ಘನತೆಯನ್ನು ಖಚಿತಪಡಿಸಿದೆ. ಈಚಿನ ವರ್ಷಗಳಲ್ಲಿ ಅಸಾಮರ್ಥ್ಯ ವ್ಯಕ್ತಿಗಳನ್ನು ಕುರಿತ ಸಾಮಾಜಿಕ ಮನೋಭಾವದಲ್ಲಿ ಹೆಚ್ಚಿನ ಬದಲಾವಣೆಗಳು ಕಂಡುಬಂದಿವೆ. ಅಸಾಮರ್ಥ್ಯವಿರುವ ವ್ಯಕ್ತಿಗಳಿಗೆ ಉತ್ತಮವಾದ ಅವಕಾಶಗಳನ್ನು ಕೊಟ್ಟು ಸಮರ್ಪಕ ಪುನರ್ವಸತಿ ಸೌಕರ್ಯಗಳನ್ನು ಕಲ್ಪಿಸಿದರೆ ಅವರಿಗೆ ಹೆಚ್ಚಿನ ಗುಣಮಟ್ಟದ ಬದುಕನ್ನು ಬದುಕಲು ಸಾಧ್ಯವಿದೆ ಎಂಬ ಅರಿವು ಮೂಡಿದೆ. ಅಸಾಮರ್ಥ್ಯವಿರುವ ವ್ಯಕ್ತಿಗಳ ಸಾಮರ್ಥ್ಯವನ್ನು ಗುರುತಿಸುವ ಮತ್ತು ಅದರ ಆಧಾರದ ಮೇಲೆ ಅವರನ್ನು ಮೂಲವಾಹಿನಿಗೆ ಸೇರಿಸುವ ಆಶಯಗಳು ಮೂಡಿಬರುತ್ತಿವೆ. ರಾಷ್ಟ್ರೀಯ ನೀತಿಯು ಅಸಾಮರ್ಥ್ಯವುಳ್ಳವರು ರಾಷ್ಟ್ರದ ಮೌಲಿಕ ಮಾನವ ಸಂಪನ್ಮೂಲ ಎಂಬುದನ್ನು ಗುರುತಿಸಿದೆ. ಹಾಗಾಗಿ ಅವರಿಗೆ ಸಮಾನ ಅವಕಾಶ, ಹಕ್ಕುಗಳ ರಕ್ಷಣೆ ಮತ್ತು ಸಮಾಜದಲ್ಲಿ ಸಂಪೂರ್ಣ ಭಾಗವಹಿಕೆಯನ್ನು ಉಂಟುಮಾಡುವ ಪರಿಸರವನ್ನು ಸೃಷ್ಟಿಸುವ ಆಶಯವನ್ನು ಹೊಂದಿದೆ.

**ಈ ನೀತಿಯು ಸೂಚಿಸುವ ಪುನರ್ವಸತಿ ಕ್ರಮಗಳನ್ನು ಮೂರು ಪ್ರತ್ಯೇಕ ಗುಂಪುಗಳಾಗಿ ವಿಂಗಡಿಸಬಹುದು:**

- **ದೈಹಿಕ ಪುನರ್ವಸತಿ:** ಆರಂಭದಲ್ಲೇ ಅಸಾಮರ್ಥ್ಯವನ್ನು ಪತ್ತೆಹಚ್ಚುವುದು ಮತ್ತು ಅಗತ್ಯ ಕಾರ್ಯಕ್ರಮಗಳನ್ನು ಕೈಗೊಳ್ಳುವುದು, ವೈದ್ಯಕೀಯ ಚಿಕಿತ್ಸೆ, ಅಗತ್ಯವಾದ ಸಲಕರಣೆಗಳನ್ನು ಒದಗಿಸುವುದು, ಇದು ವೃತ್ತಿಪರರ ಪುನರ್ವಸತಿ ಮತ್ತು ಅಭಿವೃದ್ಧಿಯನ್ನೂ ಒಳಗೊಂಡಿರುತ್ತದೆ.
- **ಶೈಕ್ಷಣಿಕ ಪುನರ್ವಸತಿ :** ಸಾಮಾನ್ಯ ಮತ್ತು ವೃತ್ತಿಪರ ಶಿಕ್ಷಣಗಳೆರಡನ್ನೂ ಸೇರಿದಂತೆ.
- **ಆರ್ಥಿಕ ಪುನರ್ವಸತಿ :** ಇದು ಅಸಾಮರ್ಥ್ಯವುಳ್ಳವರು ಘನತೆವೆತ್ತ ಜೀವನವನ್ನು ಸಾಗಿಸುವುದಕ್ಕಾಗಿ.

3. **ಅಸಾಮರ್ಥ್ಯವಿರುವ ಮಹಿಳೆಯರ ಕುರಿತು:** ಅಸಾಮರ್ಥ್ಯವಿರುವ ಮಹಿಳೆಯರಿಗೆ ಶೋಷಣೆ ಮತ್ತು ದುರುಪಯೋಗದ ವಿರುದ್ಧ ರಕ್ಷಣೆಯ ಅಗತ್ಯವಿದೆ. ಅವರ ವಿಶೇಷ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ಶಿಕ್ಷಣ, ಉದ್ಯೋಗ ಮತ್ತು ಇತರ ಪುನರ್ವಸತಿ ಸೇವೆಗಳಿಗೆ ಕಾರ್ಯಕ್ರಮಗಳನ್ನು ರೂಪಿಸಲಾಗುವುದು. ವೃತ್ತಿ ತರಬೇತಿ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಅಳವಡಿಸಲಾಗುವುದು. ಅವರನ್ನು ದತ್ತು ತೆಗೆದುಕೊಳ್ಳಲು ಪ್ರೋತ್ಸಾಹ, ಉದ್ಯೋಗ ತರಬೇತಿ, ಇವುಗಳ ಮೂಲಕ ಪುನರ್ವಸತಿ ಕಾರ್ಯಕ್ರಮಗಳನ್ನು ಯೋಜಿಸಿಕೊಳ್ಳಲಾಗುವುದು.

4. **ಅಸಾಮರ್ಥ್ಯವಿರುವ ಮಕ್ಕಳ ಕುರಿತು:** ಅಸಾಮರ್ಥ್ಯವಿರುವ ಮಕ್ಕಳು ದುರ್ಬಲ ವರ್ಗದವರಾಗಿದ್ದು ಅವರಿಗೆ ವಿಶೇಷ ಗಮನದ ಆವಶ್ಯಕತೆ ಇದೆ. ಇದಕ್ಕಾಗಿ ವಿಕಲಾಂಗ ಮಕ್ಕಳ ಆರೈಕೆ, ರಕ್ಷಣೆ ಮತ್ತು ಭದ್ರತೆಯ ಹಕ್ಕನ್ನು ಖಚಿತಪಡಿಸಿಕೊಳ್ಳಬೇಕು; ಮಕ್ಕಳು ತಮ್ಮ ಹಕ್ಕುಗಳನ್ನು ಚಲಾಯಿಸುವ, ಸಮಾನ ಅವಕಾಶದೊಂದಿಗೆ ವಿವಿಧ ಕಾನೂನುಗಳಿಗೆ ಅನುಗುಣವಾಗಿ ಪೂರ್ಣವಾಗಿ ಭಾಗವಹಿಸುವ ಪರಿಸರವನ್ನು ಸೃಷ್ಟಿಸುವುದರೊಂದಿಗೆ ಘನತೆ ಮತ್ತು ಸಮಾನತೆಯೊಂದಿಗಿನ ಅಭಿವೃದ್ಧಿಯ ಹಕ್ಕನ್ನು ಖಚಿತಪಡಿಸಿಕೊಳ್ಳಲಾಗುವುದು; ಶಿಕ್ಷಣ, ಆರೋಗ್ಯ ಮತ್ತು ಔದ್ಯೋಗಿಕ ತರಬೇತಿಗೆ ಅವಕಾಶವಿರುವುದರೊಂದಿಗೆ ವಿಶೇಷ ಪುನರ್ವಸತಿ ಸೇವೆಗಳನ್ನು ಖಚಿತಪಡಿಸಿಕೊಳ್ಳಲಾಗುವುದು; ತೀವ್ರತರವಾದ ಅಸಾಮರ್ಥ್ಯವಿರುವ ಮಕ್ಕಳ ಅಭಿವೃದ್ಧಿ ಮತ್ತು ವಿಶೇಷ ಅಗತ್ಯ ಮತ್ತು ಸೇವೆಗಳ ಗುರುತಿಸುವಿಕೆ, ಜೊತೆಗೆ ಅವರ ರಕ್ಷಣೆಯನ್ನು ಖಚಿತಪಡಿಸಿಕೊಳ್ಳಲಾಗುವುದು.

5. **ಅಡ್ಡಿಮುಕ್ತ ಪರಿಸರ :** ಅಡ್ಡಿಮುಕ್ತ ಪರಿಸರವು ಅಸಾಮರ್ಥ್ಯವಿರುವವರಿಗೆ ಸುಲಭವಾಗಿ ಮತ್ತು ಸುರಕ್ಷಿತವಾಗಿ ನಡೆದಾಡಲು ಮತ್ತು ಅವರಿರುವ ಪರಿಸರದಲ್ಲಿನ ಸೌಲಭ್ಯಗಳನ್ನು ಬಳಸಿಕೊಳ್ಳಲು ಅನುವುಮಾಡಿಕೊಡುತ್ತದೆ. ಯಾರ ಸಹಾಯವೂ ಇಲ್ಲದೆ ದೈನಂದಿನ ಚಟುವಟಿಕೆಗಳಲ್ಲಿ ಅವರು ಭಾಗವಹಿಸುವಂತೆ ಸ್ವತಂತ್ರವಾಗಿ ಕೆಲಸಮಾಡಿಕೊಳ್ಳಲು ಉತ್ತೇಜಿಸುವುದು ಅಡ್ಡಿಮುಕ್ತಪರಿಸರವನ್ನುಂಟುಮಾಡುವುದರ ಗುರಿ. ಆದ್ದರಿಂದ, ಸಾರ್ವಜನಿಕ ಬಳಕೆಗೆ ಗರಿಷ್ಟ ಮಟ್ಟದಲ್ಲಿ ಕಟ್ಟಡಗಳು/ಸ್ಥಳಗಳು/ ಸಾರಿಗೆ ವ್ಯವಸ್ಥೆಗಳನ್ನು ಅಡ್ಡಿಮುಕ್ತಗೊಳಿಸಲಾಗುವುದು.

6. **ಅಸಾಮರ್ಥ್ಯತೆ (ಅಂಗವೈಕಲ್ಯ) ಪ್ರಮಾಣ ಪತ್ರಗಳ ವಿತರಣೆ :** ಭಾರತಸರ್ಕಾರವು ಅಸಾಮರ್ಥ್ಯತೆ ಮತ್ತು ಮೌಲ್ಯಮಾಪನ ಪ್ರಕ್ರಿಯೆಗೆ ಸಂಬಂದಿಸಿದಂತೆ ಮಾರ್ಗದರ್ಶಿ ಸೂತ್ರಗಳನ್ನು ಸೂಚಿಸಿದೆ. ಅಸಾಮರ್ಥ್ಯವುಳ್ಳ ವ್ಯಕ್ತಿಗಳು ಯಾವುದೇ ತೊಂದರೆ ಇಲ್ಲದೆ ಸಾಧ್ಯವಿರುವ ಅತಿ ಕಡಿಮೆ ಸಮಯದಲ್ಲಿ ಸರಳವಾದ, ಪಾರದರ್ಶಕ ಮತ್ತು ವ್ಯಕ್ತಿ ಸ್ನೇಹಿ ಕಾರ್ಯವಿಧಾನದ ಮೂಲಕ ಅಸಾಮರ್ಥ್ಯತೆಯ ಪ್ರಮಾಣ ಪತ್ರವನ್ನು ಪಡೆದುಕೊಳ್ಳುತ್ತಾರೆ ಎಂದು ಸರ್ಕಾರವು ಖಚಿತಪಡಿಸುತ್ತದೆ.

7. **ಸಾಮಾಜಿಕ ಭದ್ರತೆ :** ಅಸಾಮರ್ಥ್ಯವುಳ್ಳ ವ್ಯಕ್ತಿಗಳು, ಅವರ ಕುಟುಂಬಗಳು ಮತ್ತು ಅವರಿಗೆ ಆರೈಕೆ ನೀಡುವವರಿಗೆ ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಆರೈಕೆ, ಸಾರಿಗೆ, ಸಹಾಯಕ ಸಾಧನಗಳು ಇತ್ಯಾದಿಗಳಿಗಾಗಿ ಹೆಚ್ಚಿನ ಹಣ ಖರ್ಚಾಗುತ್ತದೆ. ಆದ್ದರಿಂದ ಅವರಿಗೆ ವಿವಿಧ ವಿಧಾನಗಳಿಂದ ಸಾಮಾಜಿಕ ಭದ್ರತೆಯನ್ನೊದಗಿಸುವ ಅಗತ್ಯವಿದೆ. ಕೇಂದ್ರಸರ್ಕಾರವು ಅಸಾಮರ್ಥ್ಯವಿರುವವರಿಗೆ ಮತ್ತು ಅವರ ಪೋಷಕರಿಗೆ ತೆರಿಗೆ ವಿನಾಯಿತಿಯನ್ನು ಕೊಡಲಾಗುವುದು. ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ನಿರುದ್ಯೋಗ ಭತ್ಯೆ ಅಥವಾ ಅಸಾಮರ್ಥ್ಯ ಪಿಂಚಣಿಯನ್ನೊದಗಿಸಲಾಗುತ್ತದೆ. ಇವರಿಗೆ ಸಮಗ್ರ ಸಾಮಾಜಿಕ ಭದ್ರತಾ ನೀತಿಯನ್ನು ಅಭಿವೃದ್ಧಿ ಪಡಿಸಲು ರಾಜ್ಯಸರ್ಕಾರಗಳನ್ನು ಪ್ರೋತ್ಸಾಹಿಸಲಾಗುವುದು.

8. **ಸರ್ಕಾರೇತರ ಸಂಸ್ಥೆಗಳಿಗೆ ಉತ್ತೇಜನ :** ರಾಷ್ಟ್ರೀಯ ನೀತಿಯು ಸರ್ಕಾರದ ಪ್ರಯತ್ನಗಳಿಗೆ ಪೂರಕವಾದ ಸೇವೆಗಳನ್ನೊದಗಿಸುವಲ್ಲಿ ಸರ್ಕಾರೇತರ ಸಂಸ್ಥೆಗಳನ್ನು ಒಂದು ಪ್ರಮುಖ ಸಂಸ್ಥೀಯ

ವ್ಯವಸ್ಥೆಯಾಗಿ ಗುರುತಿಸಿಕೊಳ್ಳುತ್ತದೆ. ಈ ಸರ್ಕಾರೇತರ ಸಂಸ್ಥೆಗಳು ಸ್ಪಂದನಶೀಲವಾಗಿದ್ದು, ಪ್ರಗತಿಪರವಾಗಿ ಕೆಲಸಮಾಡುತ್ತಿವೆ. ಅಸಾಮರ್ಥ್ಯವಿರುವವರಿಗೆ ಸೇವೆಗಳನ್ನು ಒದಗಿಸುವಲ್ಲಿ ಇವು ಪ್ರಮುಖ ಪಾತ್ರ ವಹಿಸಿವೆ. ಕೆಲವು ಸರ್ಕಾರೇತರ ಸಂಸ್ಥೆಗಳು ಮಾನವ ಸಂಪನ್ಮೂಲ ಬೆಳವಣಿಗೆ ಮತ್ತು ಸಂಶೋಧನಾ ಕ್ಷೇತ್ರಗಳಲ್ಲಿ ಕಾರ್ಯನಿರತವಾಗಿವೆ. ಸರ್ಕಾರವೂ ನೀತಿರೂಪಣೆ, ಯೋಜನೆ, ಅನುಷ್ಠಾನ ಮತ್ತು ಮೇಲ್ವಿಚಾರಣೆಯ ಕಾರ್ಯಗಳಲ್ಲಿ ಅವುಗಳನ್ನು ಕ್ರಿಯಾಶೀಲವಾಗಿ ಒಳಪಡಿಸಿಕೊಂಡಿದೆ. ಅಸಾಮರ್ಥ್ಯವಿರುವವರ ವಿವಿಧ ವಿಚಾರಗಳಿಗೆ ಸಂಬಂಧಿಸಿದಂತೆ ಅವರ ಸಲಹೆಗಳನ್ನು ಬಯಸುತ್ತದೆ. ವಿವಿಧ ಅಸಾಮರ್ಥ್ಯಗಳ ವಿಚಾರಗಳನ್ನು ಕುರಿತ ಯೋಜನೆ, ನೀತಿರೂಪಣೆ ಮತ್ತು ಅನುಷ್ಠಾನಕ್ಕಾಗಿ ಈ ಸರ್ಕಾರೇತರ ಸಂಸ್ಥೆಗಳೊಂದಿಗಿನ ಅಂತರ್ ಕ್ರಿಯೆಯನ್ನು ವಿಸ್ತರಿಸಿಕೊಳ್ಳಲಾಗುತ್ತದೆ. ಇವರೊಂದಿಗಿನ ಕಾರ್ಯಜಾಲ, ಮಾಹಿತಿ ವಿನಿಮಯ ಮತ್ತು ಉತ್ತಮ ಅಭ್ಯಾಸಗಳನ್ನು ಪ್ರೋತ್ಸಾಹಿಸಿ ಹೆಚ್ಚಿಸಿಕೊಳ್ಳಲಾಗುತ್ತದೆ. ಕಡಿಮೆ ಸೇವೆಗಳಿಗೆ ಒಳಗಾಗಿರುವ ಮತ್ತು ತಲುಪಲಾಗದ ಕ್ಷೇತ್ರಗಳಲ್ಲಿ ಕೆಲಸಮಾಡುತ್ತಿರುವ ಸರ್ಕಾರೇತರ ಸಂಸ್ಥೆಗಳನ್ನು ಪ್ರೋತ್ಸಾಹಿಸಲು ಮತ್ತು ಅವರಿಗೆ ಆದ್ಯತೆ ನೀಡಲು ಕ್ರಮಗಳನ್ನು ಕೈಗೊಳ್ಳಲಾಗುವುದು. ಪ್ರಖ್ಯಾತ ಸಂಘಟನೆಗಳು ಅಂತಹ ಕ್ಷೇತ್ರಗಳಲ್ಲಿ ಯೋಜನೆಗಳನ್ನು ಕೈಗೊಳ್ಳಲು ಪ್ರೋತ್ಸಾಹಿಸಲಾಗುವುದು.

9. **ಅಸಾಮರ್ಥ್ಯ ಹೊಂದಿರುವ ವ್ಯಕ್ತಿಗಳ ಕುರಿತ ವ್ಯವಸ್ಥಿತ ಮಾಹಿತಿ ಸಂಗ್ರಹ :** ಅಸಾಮರ್ಥ್ಯವ್ಯಕ್ತಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಕುರಿತ ವ್ಯವಸ್ಥಿತ ಮಾಹಿತಿಯ ಸಂಗ್ರಹ ಮತ್ತು ಕ್ರೋಢೀಕರಿಸುವಿಕೆಯ ಅಗತ್ಯವಿದೆ. ರಾಷ್ಟ್ರೀಯ ದತ್ತಾಂಶ ಸರ್ವೇಕ್ಷಣಾ ಸಂಸ್ಥೆಯು 1981 ರಿಂದಲೂ ಹತ್ತು ವರ್ಷಗಳಿಗೊಮ್ಮೆ ಇಂತಹ ಮಾಹಿತಿಯನ್ನು ಸಂಗ್ರಹಿಸುತ್ತದೆ. 2001ನೇ ಇಸವಿಯಿಂದ ಗಣತಿ ಪ್ರಕ್ರಿಯೆಯಲ್ಲೂ ಈ ಕುರಿತ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ರಾಷ್ಟ್ರೀಯ ದತ್ತಾಂಶ ಸರ್ವೇಕ್ಷಣಾ ಸಂಸ್ಥೆಯು ಐದು ವರ್ಷಗಳಿಗೆ ಒಮ್ಮೆಯಾದರೂ ಈ ಮಾಹಿತಿಯನ್ನು ಸಂಗ್ರಹಿಸಬೇಕು.

10. **ಸಂಶೋಧನೆ :** ಅಸಾಮರ್ಥ್ಯವಿರುವ ವ್ಯಕ್ತಿಗಳ ಜೀವನ ಮಟ್ಟವನ್ನು ಸುಧಾರಿಸುವುದಕ್ಕಾಗಿ, ಅವರ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸನ್ನಿವೇಶಗಳಲ್ಲಿ –ಅಸಾಮರ್ಥ್ಯಗಳ ಕಾರಣಗಳು, ಪೂರ್ವ ಬಾಲ್ಯ ಶಿಕ್ಷಣ ವಿಧಾನಗಳು, ಬಳಕೆದಾರ ಸ್ನೇಹಿ ಉಪಕರಣಗಳು ಮತ್ತು ಅವರ ಬದುಕನ್ನು ಹಸನುಗೊಳಿಸುವ ಮತ್ತು ಅವರ ಕಾಳಜಿಗಳಿಗೆ ನಾಗರಿಕ ಸಮಾಜದ ಪ್ರತಿಕ್ರಿಯೆಯನ್ನು ಬದಲಿಸುವ ಎಲ್ಲ ವಿಷಯಗಳ ಕುರಿತಾದ ಸಂಶೋಧನೆಯನ್ನು ಬೆಂಬಲಿಸಲಾಗುತ್ತದೆ. ಸಂಶೋಧನಾ ಅಧ್ಯಯನಗಳಲ್ಲಿ ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಭಾಗವಹಿಕೆಗೆ ಅವರ ಕುಟುಂಬದವರಿಂದ ಅಥವಾ ಪೋಷಕರಿಂದ ಅನುಮತಿ ಪಡೆದುಕೊಳ್ಳುವುದು ಕಡ್ಡಾಯವಾಗಿರುತ್ತದೆ.

11. **ಕ್ರೀಡೆ, ಮನರಂಜನೆ ಮತ್ತು ಸಾಂಸ್ಕೃತಿಕ ಜೀವನ:** ಅಸಾಮರ್ಥ್ಯತೆಗೆ ಸಂಬಂಧಿಸಿದಂತೆ ಅದರ ಚಿಕಿತ್ಸಕ ಮತ್ತು ಸಮುದಾಯದ ಆಸಕ್ತಿಗಳ ವಿಷಯದಲ್ಲಿ ಕ್ರೀಡೆಯ ಕೊಡುಗೆ ಅದ್ವಿತೀಯ. ಅಸಾಮರ್ಥ್ಯವುಳ್ಳವರು ಕ್ರೀಡೆ, ಮನರಂಜನೆ ಮತ್ತು ಸಾಂಸ್ಕೃತಿಕ ಸೌಲಭ್ಯಗಳ ಅವಕಾಶದ ಹಕ್ಕಿಗೆ ಭಾಜನರಾಗಿರುತ್ತಾರೆ. ಅವರು ವಿವಿಧ ಕ್ರೀಡೆ, ಮನರಂಜನೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ಅಗತ್ಯವಾದ ಕ್ರಮಗಳನ್ನು ಸರ್ಕಾರವು ತೆಗೆದುಕೊಳ್ಳುತ್ತದೆ.

**ಅನುಷ್ಠಾನ :**

- ಈ ನೀತಿಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಎಲ್ಲ ವಿಷಯಗಳನ್ನು ಸಂಯೋಜಿಸಲು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ಸಂಪರ್ಕ ಸಚಿವಾಲಯವಾಗಿರುತ್ತದೆ.

- ರಾಷ್ಟ್ರೀಯ ನೀತಿಯ ಅನುಷ್ಠಾನಕ್ಕೆ ಸಂಬಂಧಿಸಿದ ವಿಷಯಗಳನ್ನು ಸಂಯೋಜಿಸಲು ಒಂದು ಅಂತರ್ ಸಚಿವಾಲಯ ಮಂಡಲಿಯನ್ನು ರೂಪಿಸಲಾಗುತ್ತದೆ. ಸರ್ಕಾರೇತರ ಸಂಸ್ಥೆಗಳು, ಅಸಾಮರ್ಥ್ಯವಿರುವವರ ಸಂಘಟನೆಗಳು, ವಕೀಲ ಗುಂಪುಗಳು, ಪೋಷಕರ ಸಂಘಗಳು, ತಜ್ಞರು, ವೃತ್ತಿಪರರು ಸೇರಿದಂತೆ ಎಲ್ಲ ಪಾಲುದಾರರೂ ಈ ಮಂಡಳಿಯ ಪ್ರತಿನಿಧಿಗಳಾಗಿರುತ್ತಾರೆ. ರಾಜ್ಯ ಮತ್ತು ಜಿಲ್ಲಾ ಹಂತಗಳಲ್ಲೂ ಈ ವ್ಯವಸ್ಥೆಯನ್ನೇ ಪ್ರೋತ್ಸಾಹಿಸಲಾಗುತ್ತದೆ. ಈ ನೀತಿಯ ಅನುಷ್ಠಾನದ ವಿಚಾರಗಳನ್ನು ಸಂಯೋಜಿಸಲು ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಸ್ಥಳೀಯ ನಗರ ಮಂಡಳಿಗಳನ್ನೂ ಜಿಲ್ಲಾ ಅಸಾಮರ್ಥ್ಯರ ಪುನರ್ವಸತಿ ಕೇಂದ್ರಗಲ್ಲಿನ ಜಿಲ್ಲಾ ಮಟ್ಟದ ಸಮಿತಿಗಳ ಸಹಾಯವನ್ನು ಪಡೆದುಕೊಳ್ಳಲಾಗುತ್ತದೆ.

- ಗೃಹ ವ್ಯವಹಾರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ, ಯುವ ವ್ಯವಹಾರ ಮತ್ತು ಕ್ರೀಡೆಗಳು, ವಿಜ್ಞಾನ ಮತ್ತು ತಂತ್ರಜ್ಞಾನ, ಅಂಕಿ ಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ, ಕಾರ್ಮಿಕ, ಪಂಚಾಯತ್ ರಾಜ್ ಮತ್ತು ಪ್ರಾಥಮಿಕ ಶಿಕ್ಷಣ ಮತ್ತು ಸಾಕ್ಷರತಾ ವಿಭಾಗಗಳು, ಸೆಕೆಂಡರಿ ಮತ್ತು ಉನ್ನತ ಶಿಕ್ಷಣ, ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳು, ಸಾರ್ವಜನಿಕ ಉದ್ದಿಮೆಗಳು, ಆದಾಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಮಾಹಿತಿ ತಂತ್ರಜ್ಞಾನ ಮತ್ತು ಸಿಬ್ಬಂದಿ ತರಬೇತಿ ಇವುಗಳು ನೀತಿಯ ಅನುಷ್ಠಾನಕ್ಕೆ ಅಗತ್ಯವಾದ ವ್ಯವಸ್ಥೆಯನ್ನು ಅಳವಡಿಸುತ್ತದೆ. ಪ್ರತಿ ಸಚಿವಾಲಯ/ವಿಭಾಗವು ಐದು ವರ್ಷಗಳ ದೃಷ್ಟಿಕೋನದಲ್ಲಿ ಮತ್ತು ವಾರ್ಷಿಕವಾಗಿ ಗುರಿಗಳು ಮತ್ತು ಹಣಕಾಸು ಹಂಚಿಕೆಗಳನ್ನು ಸಿದ್ಧಪಡಿಸುವುವು. ಈ ಸಚಿವಾಲಯಗಳ ವರದಿಗಳು ವಾರ್ಷಿಕ ಪ್ರಗತಿಯನ್ನು ಸೂಚಿಸುತ್ತವೆ.

- ಕೇಂದ್ರಮಟ್ಟದಲ್ಲಿ ಅಸಾಮರ್ಥ್ಯರ ಪ್ರಮುಖ ಆಯುಕ್ತರು ಮತ್ತು ರಾಜ್ಯಮಟ್ಟದಲ್ಲಿ ರಾಜ್ಯಆಯುಕ್ತರು ತಮ್ಮ ಕಾನೂನುಬದ್ಧ ಜವಾಬ್ದಾರಿಗಳನ್ನು ಹೊರತುಪಡಿಸಿ ರಾಷ್ಟ್ರೀಯ ನೀತಿಯನ್ನು ಅನುಷ್ಠಾನಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುವರು.

- ಸ್ಥಳೀಯ ಮಟ್ಟದ ಸಮಸ್ಯೆಗಳನ್ನು ಬಗೆಹರಿಸಲು ರಾಷ್ಟ್ರೀಯ ನೀತಿ ಅನುಷ್ಠಾನದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಜಿಲ್ಲೆಯ ಮತ್ತು ರಾಜ್ಯ ಯೋಜನೆಗಳೊಂದಿಗೆ ಸಂಯೋಜಿತವಾದ ಸೂಕ್ತ ಕಾರ್ಯಕ್ರಮಗಳನ್ನೂ ರೂಪಿಸುತ್ತವೆ. ಈ ಸಂಸ್ಥೆಗಳು ತಮ್ಮ ಯೋಜನೆಗಳಲ್ಲಿ ಅಸಾಮರ್ಥ್ಯರಿಗೆ ಸಂಬಂಧಿಸಿದ ಅಂಶಗಳನ್ನು ಒಳಗೊಂಡಿರುತ್ತವೆ.

- ಅನುಷ್ಠಾನ ಸಂದರ್ಭದಲ್ಲಿ ರೂಪಿಸಲಾದ ಮೂಲಭೂತ ಸೌಕರ್ಯಗಳನ್ನು ಬಹಳ ಕಾಲದವರೆಗೆ ನಿರ್ವಹಿಸಿ ಪರಿಣಾಮಕಾರಿಯಾಗಿ ಬಳಸಬೇಕಾಗುತ್ತದೆ. ಸಮುದಾಯಗಳು ಸಂಪನ್ಮೂಲಗಳನ್ನು ಸಜ್ಜುಗೊಳಿಸುವಲ್ಲಿ ಮುಂದಾಳತ್ವವನ್ನು ವಹಿಸಬೇಕು ಅಥವಾ ಖಾಸಗಿ ವಲಯದ

ಸಂಘಟನೆಗಳಿಂದ ಮೂಲಭೂತ ಸೌಕರ್ಯವನ್ನು ಬಳಸಲು ಮತ್ತು ನಿರ್ವಹಿಸಲು ಬೇಕಾದ ಸಂಪನ್ಮೂಲವನ್ನು ಚಾಲನೆಗೊಳಿಸಬೇಕು. ಈ ಕ್ರಮವು ರಾಜ್ಯ ಸಂಪನ್ಮೂಲಗಳ ಮೇಲಿನ ಹೊರೆಯನ್ನು ಕಡಿಮೆ ಮಾಡುತ್ತದೆಯಲ್ಲದೆ ಸಮುದಾಯ ಮತ್ತು ಖಾಸಗಿ ಉದ್ಯಮಗಳ ಜವಾಬ್ದಾರಿಯನ್ನು ಮನಗಾಣಿಸುತ್ತದೆ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–1

2006ರ ಅಸಾಮರ್ಥ್ಯವುಳ್ಳ ವ್ಯಕ್ತಿಗಳ ರಾಷ್ಟ್ರೀಯ ನೀತಿಯ ಪ್ರಮುಖ ಅಂಶಗಳನ್ನು ನೀವೀಗ ಕಲಿತಿದ್ದೀರಿ. ಈ ಅಂಶಗಳ ಐದು ಶೈಕ್ಷಣಿಕ ನಿಹಿತಾರ್ಥಗಳನ್ನು ಕೆಳಗೆ ಪಟ್ಟಿಮಾಡಲಾಗಿದೆ. ಇದನ್ನು ಬಿಟ್ಟಂತೆ ಉಳಿದ ಯಾವುದಾದರೂ ಐದು ಶೈಕ್ಷಣಿಕ ನಿಹಿತಾರ್ಥಗಳನ್ನು ಪಟ್ಟಿಮಾಡಿ.

1. ಜಿಲ್ಲಾ ಮಟ್ಟದಲ್ಲಿ ಅಸಾಮರ್ಥ್ಯವಿರುವವರಿಗೆ ಸಂಬಂಧಿಸಿರುವಂತೆ ಇರುವ ಸಂಸ್ಥೆಗಳೊಂದಿಗೆ ಕಲೆತು ಕೆಲಸಮಾಡಲು ವಿದ್ಯಾರ್ಥಿಗಳನ್ನು ಉತ್ತೇಜಿಸಬೇಕು.
2. ಈ ರೀತಿಯ ವಿವಿಧ ಸರ್ಕಾರಿ ನೀತಿನಿಯಮಗಳನ್ನು ತಿಳಿದುಕೊಂಡು ಇದನ್ನು ಸಮುದಾಯದ ಸದಸ್ಯರಿಗೆ ತಿಳಿಸುವ ಸಣ್ಣ ಕಾರ್ಯಕ್ರಮಗಳನ್ನು ಯೋಜಿಸಲು ಪ್ರೋತ್ಸಾಹಿಸಬೇಕು.
3. ಸಮುದಾಯದಲ್ಲಿ ಅಸಾಮರ್ಥ್ಯವಿರುವವರಿಗೆ ಸರ್ಕಾರದ ಈ ಅವಕಾಶಗಳನ್ನು ತಿಳಿದು ಹೇಳಬೇಕು.
4. ಅಸಾಮರ್ಥ್ಯವಿರುವವರನ್ನು ಕುರಿತಂತೆ ವಿದ್ಯಾರ್ಥಿಗಳ ಜವಾಬ್ದಾರಿಯನ್ನು ತಿಳಿಯಲು ಅನುವು ಮಾಡಿಕೊಡಬೇಕು. ಅವರ ಸಾಮಗ್ರಿ ಸಲಕರಣೆಗಳನ್ನು ಜೋಪಾನಮಾಡುವಲ್ಲಿ ಸಹಕಾರ, ಸಮಾಜದಲ್ಲಿ ಅವರೂ ಕ್ರಿಯಾಶೀಲರಾಗಿ ತೊಡಗಿಕೊಳ್ಳಲು ಬೇಕಾದ ಒತ್ತಾಸೆ ಇವುಗಳನ್ನು ಹೇಗೆ ಮಾಡಬಹುದು ಎಂಬುದನ್ನು ಕುರಿತಂತೆ ಚರ್ಚೆಗಳಲ್ಲಿ ಭಾಗವಹಿಸುವಂತೆ ಮಾಡಬೇಕು.
5. ಅಸಾಮರ್ಥ್ಯವುಳ್ಳವರ ಅಸಾಮರ್ಥ್ಯಗಳನ್ನು ಎತ್ತಿ ಆಡುವುದಕ್ಕಿಂತ ಅವರ ಸಾಮರ್ಥ್ಯಗಳನ್ನು ಗುರುತಿಸುವ ಮನೋಭಾವವನ್ನು ಬೆಳೆಸಬೇಕು.
6.
7.
8.
9.
10.

---

## 1.5.3.2. ರಾಷ್ಟ್ರೀಯ ಗಮನ : ಭಾಗ 2 :

---

### (I) ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 (National Curriculum Framework 2005)

ಅಂತರ್ಗತ ಶಿಕ್ಷಣ ವ್ಯವಸ್ಥೆಯನ್ನು ಕುರಿತಂತೆ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 ಕೆಳಗಿನ ಶಿಫಾರಸುಗಳನ್ನು ಮತ್ತು ಬದಲಾವಣೆಗಳನ್ನು ಮುಂದಿಟ್ಟಿದೆ.

- ನಮ್ಮ ಶಿಕ್ಷಣದ ವ್ಯವಸ್ಥೆಯಲ್ಲಿ ಮತ್ತು ಎಲ್ಲ ಶಾಲೆಗಳಲ್ಲಿ ಅಂತರ್ಗತತೆಯ ನಿಯಮವನ್ನು ಅಳವಡಿಸಬೇಕು; ಎಲ್ಲ ಮಕ್ಕಳೂ ಅವರ ಬದುಕಿನ ಎಲ್ಲ ಕ್ಷೇತ್ರಗಳಲ್ಲಿ, ಶಾಲೆಯ ಒಳಗೆ ಮತ್ತು ಹೊರಗೆ ಭಾಗವಹಿಸುವುದನ್ನು ಖಚಿತಪಡಿಸಿಕೊಳ್ಳಬೇಕು. ಶಾಲೆಗಳು ಮಕ್ಕಳನ್ನು ಬದುಕಿಗೆ ಸಿದ್ಧಪಡಿಸುವ ಕೇಂದ್ರಗಳಾಗಬೇಕು, ಮತ್ತು ಎಲ್ಲ ಮಕ್ಕಳೂ ವಿಶೇಷವಾಗಿ ಭಿನ್ನ ಸಾಮರ್ಥ್ಯವಿರುವವರು, ಸಮಾಜದ ಅಂಚಿನಲ್ಲಿರುವವರ ವರ್ಗಗಳ ಮತ್ತು ಕ್ಲಿಷ್ಟ ಸನ್ನಿವೇಶದಲ್ಲಿರುವ ಮಕ್ಕಳು ಶಿಕ್ಷಣದ ನಿರ್ಣಾಯಕ ಕ್ಷೇತ್ರದಿಂದ ಗರಿಷ್ಟ ಪ್ರಯೋಜನ ಪಡೆಯುತ್ತಾರೆಂಬುದನ್ನು ಖಚಿತಪಡಿಸಿಕೊಳ್ಳಬೇಕು.
- ಉತ್ಕೃಷ್ಟತೆ ಮತ್ತು ಸಾಮರ್ಥ್ಯವನ್ನು ನಿರ್ದಿಷ್ಟವಾಗಿ ಪ್ರಶಂಸಿಸಬಹುದು. ಆದರೆ ಎಲ್ಲ ಮಕ್ಕಳಿಗೂ ಸಮನಾದ ಅವಕಾಶಗಳನ್ನು ಕಲ್ಪಿಸಿಕೊಡಬೇಕು ಅವರ ನಿರ್ದಿಷ್ಟ ಸಾಮರ್ಥ್ಯಗಳನ್ನು ಗುರುತಿಸಿ ಪ್ರಶಂಸಿಸಬೇಕು.
- ಹೆಚ್ಚು ಒತ್ತಾಸೆಯನ್ನು ಬಯಸುವ ಅಥವಾ ಕೊಟ್ಟ ಕೆಲಸವನ್ನು ಪೂರ್ಣಗೊಳಿಸಲು ಹೆಚ್ಚು ಸಮಯ ತೆಗೆದುಕೊಳ್ಳುವ, ಅಸಾಮರ್ಥ್ಯವಿರುವ ಮಕ್ಕಳನ್ನು ಅಧ್ಯಾಪಕರು ಗಮನಿಸಬೇಕು. ಅಂತಹವರಿಗಾಗಿ ಚಟುವಟಿಕೆಗಳನ್ನು ಯೋಜಿಸುವಾಗ ಅಧ್ಯಾಪಕರು, ಪ್ರತಿ ಮಗುವಿಗೂ ಕೊಡುಗೆ ಕೊಡಲು ಅವಕಾಶವಿರುವುದನ್ನು ಖಚಿತಪಡಿಸಿಕೊಳ್ಳಬೇಕು.
- ಎಲ್ಲ ಮಕ್ಕಳ ಭಾಗವಹಿಕೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಅಧ್ಯಾಪಕರ ಪಾತ್ರ ಪ್ರಮುಖವಾದುದು. ಕಲಿಕೆಯು ಅಂತರ್ಗತ ಭಾಗವಾಗಿರಬೇಕಾದರೆ, ಮಕ್ಕಳು ತಪ್ಪುಗಳನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಮತ್ತು 'ನೂರಕ್ಕೆ ನೂರು' ಅಂಕ ಪಡೆಯಲಿಲ್ಲವೆಂಬ ಭಯವನ್ನು ಹೋಗಲಾಡಿಸಬೇಕು.
- ಕೊಠಾರಿ ಆಯೋಗವು ನಾಲ್ಕು ಶತಮಾನಗಳ ಹಿಂದೆ ಹೇಳಿದ ಸಾಮಾನ್ಯ ಶಾಲೆಯ ಆದರ್ಶ ಇಂದಿಗೂ ಸಮರ್ಪಕವೇ. ಏಕೆಂದರೆ ಅದು ನಮ್ಮ ಸಂವಿಧಾನವು ಎತ್ತಿ ಹಿಡಿದಿರುವ ಮೌಲ್ಯಗಳನ್ನು ಬಿಂಬಿಸುತ್ತದೆ.

ಆದುದರಿಂದ, ಎನ್ ಸಿ ಎಫ್ 2005 ಶಿಫಾರಸು ಮಾಡಿರುವಂತೆ ಶಾಲೆಗಳಲ್ಲಿ ಅಂತರ್ಗತತೆಯ ಪರಿಕಲ್ಪನಾತ್ಮಕ ತತ್ವಗಳೆಂದರೆ,

- ಅಂತರ್ಗತ ಶಿಕ್ಷಣ ಎಲ್ಲರನ್ನೂ ಒಳಗೊಳ್ಳುವುದು.
- ಅಂತರ್ಗತತೆ ಒಂದು ಸಾಮಾಜಿಕ ಜವಾಬ್ದಾರಿ–ಅದನ್ನು ಒಪ್ಪಿಕೊಳ್ಳುವುದು.
- ಅಸಾಮರ್ಥ್ಯವಿರುವವರಿಗೆ ಪ್ರವೇಶಾತಿಯನ್ನು ನಿರಾಕರಿಸಲು ಯಾವುದೇ ಆಯ್ಕೆಯ ವಿಧಾನಗಳನ್ನು ಅಳವಡಿಸದಿರುವುದು.
- ವಿದ್ಯಾರ್ಥಿಗಳು ಸೋಲುವುದಿಲ್ಲ; ಅವರು ಶಾಲೆಯ ಸೋಲನ್ನು ಸೂಚಿಸುತ್ತಾರೆಯಷ್ಟೇ.
- ವ್ಯತ್ಯಾಸಗಳನ್ನು ಒಪ್ಪಿಕೊಳ್ಳಬೇಕು; ವಿಭಿನ್ನತೆಯನ್ನು ಸಂಭ್ರಮಿಸಬೇಕು.
- ಅಂತರ್ಗತತೆ ಕೇವಲ ಅಸಾಮರ್ಥ್ಯವಿರುವವರಿಗೆ ಮಾತ್ರವಲ್ಲ; ಇದು ಅಂತರ್ಗತತೆ ಇಲ್ಲದಿರುವಿಕೆಯನ್ನೂ ಸೂಚಿಸುತ್ತದೆ.

- ಅಂಕವಿಕಲತೆ ಒಂದು ಸಾಮಾಜಿಕ ನಿರ್ಮಿತಿ; ಅದನ್ನು ಕೆಡವಬೇಕು.
- ಅವಕಾಶಗಳನ್ನು ಕಲ್ಪಿಸಬೇಕು–ಅಡೆತಡೆಗಳನ್ನಲ್ಲ, ಮಗುವಿನ ಅಗತ್ಯಗಳಿಗೆ ಹೊಂದಾಣಿಕೆ ಮಾಡಿಕೊಳ್ಳಬೇಕು.
- ಭೌತಿಕ, ಸಾಮಾಜಿಕ ಮತ್ತು ಮನೋಭಾವನಾತ್ಮಕ ತಡೆಗಳನ್ನು ಕಿತ್ತೊಗೆಯಬೇಕು.
- ಶಾಲೆ–ಸಮುದಾಯ; ಅಧ್ಯಾಪಕ–ಅಧ್ಯಾಪಕ; ಅಧ್ಯಾಪಕ–ಮಕ್ಕಳು; ಮಕ್ಕಳು–ಮಕ್ಕಳು; ಅಧ್ಯಾಪಕರು–ಹೆತ್ತವರು; ಶಾಲೆಯ ಒಳವ್ಯವಸ್ಥೆ ಮತ್ತು ಶಾಲೆಯ ಹೊರವ್ಯವಸ್ಥೆ;– ಈ ರೀತಿಯ ಪಾಲುದಾರಿಕೆ ನಮ್ಮ ಶಕ್ತಿ.
- ಬೋಧನೆಯ ಎಲ್ಲ ಉತ್ತಮ ಅಭ್ಯಾಸಗಳೂ ಅಂತರ್ಗತತೆಯ ಅಭ್ಯಾಸಗಳೇ.
- ಕೂಡಿ ಕಲಿಯುವುದು ಎಲ್ಲ ಮಕ್ಕಳಿಗೂ ಪ್ರಯೋಜನಕಾರಿ.
- ಬೆಂಬಲ ಸೇವೆಗಳು ಆವಶ್ಯಕ ಸೇವೆಗಳು.
- ಬೋಧಿಸಬೇಕೆನಿಸಿದರೆ, ಮಗುವಿನಿಂದ ಕಲಿಯಬೇಕು. ಗುಣಗಳನ್ನು ಮತ್ತು ಮಿತಿಗಳನ್ನು ಗುರುತಿಸಿಕೊಳ್ಳಬೇಕು.
- ಪರಸ್ಪರ ಗೌರವ ಮತ್ತು ಪರಸ್ಪರ ಅವಲಂಬನೆಯನ್ನು ಕಲಿಸಬೇಕು.
- ಅಸಾಮರ್ಥ್ಯವಿರುವವರನ್ನೂ ಸೇರಿದಂತೆ, ಎಲ್ಲ ಮಕ್ಕಳ ಅಗತ್ಯಗಳಿಗೆ ಹೊಂದಿಕೆಯಾಗುವ ನಮನೀಯತೆಯುಳ್ಳ ಪಠ್ಯಕ್ರಮವನ್ನು ಅನುಸರಿಸಲು ಅಂತರ್ಗತ ಶಿಕ್ಷಣಕ್ಕೆ ಮಹತ್ವವನ್ನು ನೀಡಬೇಕು. ಹೀಗಾಗಿ ಅಂತರ್ಗತತೆಯ ಒಂದು ನಿಯಮವನ್ನು ಶಿಕ್ಷಣವ್ಯಾಪಿಯಾಗಿ ಎಲ್ಲ ಶಾಲೆಗಳಲ್ಲೂ ಅಳವಡಿಸಿಕೊಳ್ಳಬೇಕು.

## (II) ನ್ಯಾಷನಲ್ ಫೋಕಸ್ ಗ್ರೂಪ್ ಪೇಪರ್ (National Focus Group Paper)

ಈ ಪತ್ರಿಕೆಯು ಶಿಕ್ಷಣಕ್ಷೇತ್ರದ ತಜ್ಞರ ಒಂದು ತಂಡದಿಂದ ಮೂಡಿಬಂದಿತು. ಈ ಪತ್ರಿಕೆಯಲ್ಲಿ ವಿಶೇಷ ಶೈಕ್ಷಣಿಕ ಅಗತ್ಯಗಳುಳ್ಳ ಮಕ್ಕಳ ಅವಕಾಶಗಳು, ಅಭ್ಯಾಸಗಳು ಮತ್ತು ಪಠ್ಯಕ್ರಮ ಕಾಳಜಿಗಳನ್ನು ಕುರಿತಾದ ವಿಚಾರಗಳನ್ನು ಚರ್ಚಿಸಲಾಗಿದೆ. ವಿಶೇಷ ಶೈಕ್ಷಣಿಕ ಅಗತ್ಯತೆ ಅನೇಕ ಅಂಶಗಳಿಂದ ಉಂಟಾಗಬಹುದಾದರೂ ಈ ಪತ್ರಿಕೆಯ ಮಿತಿಯಲ್ಲಿ ದೈಹಿಕ, ಐಂದ್ರಿಯಾತ್ಮಕ ಮತ್ತು ಬೌದ್ಧಿಕ ಅಸಾಮರ್ಥ್ಯಗಳಿಂದ ಫಲಿಸಬಹುದಾದ ವಿಶೇಷ ಶೈಕ್ಷಣಿಕ ಅಗತ್ಯಗಳನ್ನು ಗಮನಿಸಲಾಗಿದೆ.

### ರಾಷ್ಟ್ರೀಯ ಗಮನ ತಂಡ ಪತ್ರಿಕೆಯ ಪ್ರಮುಖ ಶಿಫಾರಸುಗಳು ಕೆಳಕಂಡಂತಿವೆ :

ಎಲ್ಲ ಪೂರ್ವ ಶಿಕ್ಷಣ ಪಾಲನಾ ಕಾರ್ಯಕ್ರಮಗಳೂ( 0–6 ವರೆಗಿನ) ಮಕ್ಕಳ ವಿಶೇಷ ಅಗತ್ಯಗಳಿಗೆ ಸ್ಪಂದಿಸುವಂತಿರಲಿ. ಇವು ಅಸಾಮರ್ಥ್ಯಗಳುಳ್ಳ ಮಕ್ಕಳ ಅಗತ್ಯಗಳನ್ನು ಗುರುತಿಸುವಿಕೆ, ವಯೋ ಸಮರ್ಪಕ ಕ್ರೀಡೆ ಮತ್ತು ಕಲಿಕಾ ಸಾಮಗ್ರಿಗಳ ಬಳಕೆ ಮತ್ತು ಪೋಷಕರ ಸಮಾಲೋಚನೆಯನ್ನೊಳಗೊಂಡ ಅಂಗನವಾಡಿ ಕಾರ್ಯಕರ್ತರ ತರಬೇತಿಗೂ ಅನ್ವಯಿಸುತ್ತದೆ. ಎಲ್ಲ ಶಾಲೆಗಳನ್ನೂ ಕೆಳಗಿನ ಅಂಶಗಳ ಪಾಲನೆಯಿಂದ ಅಂತರ್ಗತವಾಗಿಸಿ:

- ಯಾವುದೇ ಅಪವಾದವಿಲ್ಲದೆ ನೆರೆಕೆರೆ ಶಾಲಾ ನಿಯಮದ ಅನ್ವಯದ ಮೂಲಕ;
- ಭೌತಿಕ ಅಡೆತಡೆಗಳನ್ನು ನಿವಾರಿಸುವ ಮೂಲಕ ;
- ಪ್ರವೇಶಾತಿ ವಿಧಾನಗಳಲ್ಲಿನ ಅಡಚಣೆಯನ್ನು (ಪರಿಶೀಲನೆ, ಗುರುತಿಸುವಿಕೆ, ಪೋಷಕರೊಂದಿಗೆ ಮಾತುಕತೆ, ಆಯ್ಕೆ ಮತ್ತು ಮಾಪನ) ವಿಮರ್ಶಿಸುವ ಮೂಲಕ;
- ಅಂತರ್ಗತ ಸನ್ನಿವೇಶದಲ್ಲಿ ಕೆಲಸಮಾಡಲು ಅಧ್ಯಾಪಕರಲ್ಲಿ ಸಾಮರ್ಥ್ಯವನ್ನು ಬೆಳೆಸುವುದರ ಮೂಲಕ;
- ಸಂಜ್ಞಾನಾತ್ಮಕ ಮತ್ತು ಸಂಜ್ಞಾನಾತ್ಮಕೇತರ ಕ್ಷೇತ್ರಗಳಲ್ಲಿ ಅಸಾಮರ್ಥ್ಯವಿರುವ ಶಾಲಾ ಮಕ್ಕಳನ್ನು ಒಳಗೊಳ್ಳುವಂತೆ ನಮನೀಯವೂ ಸಮರ್ಪಕವೂ ಆದ ರೀತಿಯಲ್ಲಿ ಪಠ್ಯಕ್ರಮವನ್ನು ರೂಪಿಸುವುದರ ಮೂಲಕ;
- ತಂತ್ರಜ್ಞಾನದ ರೂಪದಲ್ಲಿ(ಮಾಹಿತಿ ಸಂವಹನ ತಂತ್ರಜ್ಞಾನವನ್ನೂ ಒಳಗೊಂಡಂತೆ) ಬೆಂಬಲ ಸೇವೆಗಳು, ಬೋಧನಾ–ಕಲಿಕಾ ಸಾಮಗ್ರಿಗಳು, ಮತ್ತು ಅಧ್ಯಾಪಕರು ಒದಗುವಂತೆ ನೋಡಿಕೊಳ್ಳುವುದರ ಮೂಲಕ;
- ಶಿಕ್ಷಣದ ಎಲ್ಲ ಹಂತಗಳಲ್ಲಿ ಪೋಷಕರು, ಕುಟುಂಬ ಮತ್ತು ಸಮುದಾಯವನ್ನು ಒಳಗುಮಾಡಿಕೊಳ್ಳುವುದರ ಮೂಲಕ;
- ಎಲ್ಲ ಶಿಕ್ಷಕ ತರಬೇತಿ ಕಾರ್ಯಕ್ರಮಗಳೂ(ಸೇವಾ ಪೂರ್ವ ಮತ್ತು ಸೇವಾನಿರತ) ಅಂತರ್ಗತ ತರಗತಿಗಳಲ್ಲಿ ಅಗತ್ಯವಾದ ಬೋಧನಾ ವಿಧಾನಾತ್ಮಕ ಕೌಶಲಗಳ ಬೆಳವಣಿಗೆಯನ್ನು ಬೆಳೆಸುವುದರ ಕಡೆಗೆ ಗಮನಿಸಬೇಕು;
- ವಿಶೇಷ ಶಾಲೆಗಳು ಅಂತರ್ಗತ ಶಾಲೆಗಳಿಗೆ ಬೆಂಬಲ ನೀಡುವ ಸಂಪನ್ಮೂಲ ಕೇಂದ್ರಗಳಾಗುವಂತೆ ಚಾಲನೆಗೊಳಿಸಬೇಕು;
- ಅಸಾಮರ್ಥ್ಯವಿರುವ ಮಕ್ಕಳು ಶಿಕ್ಷಣದ ಎಲ್ಲ ವಿಷಯಗಳಲ್ಲಿ ಭಾಗವಹಿಸುವುದನ್ನು ಉತ್ತೇಜಿಸಲು ಉನ್ನತ ಕಲಿಕೆಯ ಸಂಸ್ಥೆಗಳು, ಸರ್ಕಾರಿ ಸಂಘಟನೆಗಳು ಮತ್ತು ಸರ್ಕಾರೇತರ ಸಂಸ್ಥೆಗಳೊಂದಿಗೆ ಸಹಭಾಗಿತ್ವವನ್ನು ಬೆಳೆಸಿಕೊಳ್ಳಬೇಕು;
- ವಿಶೇಷ ಶೈಕ್ಷಣಿಕ ಅಗತ್ಯವುಳ್ಳ ಮಕ್ಕಳು ತರಗತಿಯಲ್ಲಿದ್ದರೆ ಅದರ ಗಾತ್ರ ಗರಿಷ್ಟ 20 ಮಕ್ಕಳು ಮತ್ತು ಇತರ ಸನ್ನಿವೇಶಗಳಲ್ಲಿ ಗರಿಷ್ಟ 30 ಇರುವಂತೆ ನೋಡಿಕೊಳ್ಳಬೇಕು;
- ತರಗತಿಯ ಎಲ್ಲ ಮಕ್ಕಳಿಗೂ ತರಗತಿ ಅಧ್ಯಾಪಕರೇ ಜವಾಬ್ದಾರರಾಗುವಂತೆ ಮಾಡಬೇಕು; ವಿಶೇಷ ಶೈಕ್ಷಣಿಕ ಅಗತ್ಯವುಳ್ಳ ಮಕ್ಕಳಿದ್ದರೆ ಅದು ತರಗತಿ ಅಧ್ಯಾಪಕರಿಗೆ ಸಿಗುವ ಸಹಾಯದ ರೀತಿಯಲ್ಲಿರಬೇಕು;
- ಒಂದು ಶಾಲಾ ಸನ್ನಿವೇಶದಲ್ಲಿನ ಎಲ್ಲ ವಿಶೇಷ ಶಿಕ್ಷಕರನ್ನೂ ಶಾಲಾ ಸಮುದಾಯದ ಸಂಪೂರ್ಣ ಸದಸ್ಯರು ಎಂದು ಪರಿಗಣಿಸಬೇಕು;

- ಪಠ್ಯಕ್ರಮ ಸಂಬಂಧಿಯಾದ ಎಲ್ಲ ನಿಯಮ ಮತ್ತು ಕಾರ್ಯಕ್ರಮಗಳು ವಿಶೇಷ ಶೈಕ್ಷಣಿಕ ಅಗತ್ಯವುಳ್ಳ ಮಕ್ಕಳಿಗೆ ತಕ್ಕುದಾಗುವಂತೆ ಅಂತರ್ಗತತೆಯ ಸ್ವರೂಪವನ್ನು ಹೊಂದಿಕೊಂಡಿರಬೇಕು;
- ಅಂತರ್ಗತತೆಯ ತಾತ್ವಿಕತೆಯ ಆಧಾರದ ಮೇಲೆ ಕಾರ್ಯಕ್ರಮಗಳನ್ನು ಯೋಜಿಸಲು ಮತ್ತು ಅನುಷ್ಠಾನಗೊಳಿಸಲು ಶಾಲಾ ಮುಖ್ಯಸ್ಥರನ್ನೂ ಒಳಗೊಂಡಂತೆ ಎಲ್ಲ ಸಿಬ್ಬಂದಿವರ್ಗದವರಲ್ಲಿ ಅಗತ್ಯವಾದ ಪರಿಕಲ್ಪನೆಗಳನ್ನು ಮತ್ತು ಕೌಶಲಗಳನ್ನು ಬೆಳೆಸಬೇಕು;
- ಎಲ್ಲ ಮಕ್ಕಳ ಮಿತಿಗಳನ್ನು ಗುರುತಿಸುವ ಬದಲಿಗೆ ಅವರ ಸಾಮರ್ಥ್ಯ ಮತ್ತು ಶಕ್ತಿಗಳನ್ನು ಬೆಳೆಸಬೇಕು;
- ಮಕ್ಕಳ ಅಗತ್ಯಗಳಲ್ಲಿನ ವೈವಿಧ್ಯತೆಗನುಗುಣವಾಗಿ ಶ್ರವಣ ದೋಷವಿರುವ ಮಕ್ಕಳಿಗೆ ಸಂಕೇತ ಭಾಷೆ, ದೃಷ್ಟಿ ದೋಷವಿರುವ ಮಕ್ಕಳಿಗೆ ಬ್ರೈಲ್ ಈ ರೀತಿಯಲ್ಲಿ ಬೋಧನಾ ಮಾಧ್ಯಮವನ್ನು ಅಳವಡಿಸಬೇಕು. ಹಾಗೆಯೇ ಎಲ್ಲ ಮಕ್ಕಳಿಗೂ ಸಂಕೇತ ಭಾಷೆ, ಬ್ರೈಲ್, ಬೆರಳು ಬ್ರೈಲ್ ಮುಂತಾದವು ಐಚ್ಛಿಕ/ ಮೂರನೆಯ ಭಾಷಾ ವಿಷಯವಾಗಿರಬೇಕು.
- ಸ್ವಾವಲಂಬನೆ ಮತ್ತು ನಿಭಾಯಿಸುವ ಕೌಶಲಗಳನ್ನು ಬೆಳೆಸಲು ಅಂತರ್ಗತ ಶಿಕ್ಷಣವು ಸ್ವತಂತ್ರವಾಗಿ ಬದುಕುವ ಕೌಶಲಗಳು, ವಿಮರ್ಶಾತ್ಮಕ ಆಲೋಚನೆ, ನಿರ್ಧಾರ ಕೈಗೊಳ್ಳುವಿಕೆ, ಸಮಸ್ಯಾಪರಿಹಾರ ಕೌಶಲಗಳ ಬೆಳವಣಿಗೆ ಮತ್ತು ಅವರ ಕಾಳಜಿಗಳನ್ನು ಅಭಿವ್ಯಕ್ತಿಸುವುದಕ್ಕೆ ಅವಕಾಶವಿರಬೇಕು;
- ಮಕ್ಕಳಲ್ಲಿ ಸಮನ್ವಯ ಜ್ಞಾನದ ಬೆಳವಣಿಗೆಯನ್ನು ಪೋಷಿಸಲು ಏಕಶಿಕ್ಷಕ ವ್ಯವಸ್ಥೆಯನ್ನು ಐದನೇ ತರಗತಿಯವರೆಗೆ ಅಳವಡಿಸಿಕೊಳ್ಳಬೇಕು;
- ಅಂತರ್ಗತ ವಿಧಾನದಲ್ಲಿ ಪರಿಣಾಮಕಾರಿ ಶಿಕ್ಷಣವನ್ನು ನೀಡಲು, ಎಲ್ಲ ಹಂತಗಳ ಶಿಕ್ಷಕ ಶಿಕ್ಷಣವನ್ನು ಪುನಾರಚಿಸಬೇಕು;
- ಸಂಕೀರ್ಣವಾದ ಪರಿಕಲ್ಪನೆಗಳನ್ನು ವಿವಿಧ ಕಲಿಕಾ ಶೈಲಿಗಳೊಂದಿಗೆ – ಬ್ರೈಲ್, ಸಂಕೇತಭಾಷೆಗಳನ್ನೂ ಒಳಗೊಂಡಂತೆ–ಪರಿಣಾಮಕಾರಿಯಾಗಿ ಸಂವಹನ ಮಾಡಲು ಒಂದು ವ್ಯವಸ್ಥೆಯನ್ನು ರೂಪಿಸುವುದು ಶಿಕ್ಷಣದ ಗುರಿಯಾಗಬೇಕು;
- ವೈವಿಧ್ಯತೆ ಮತ್ತು ಅಂತರ್ಗತ ಸಮಾಜದ ಕುರಿತಾದ ಗೌರವವನ್ನು ಬೆಳೆಸಲು ಶಿಕ್ಷಕ ಶಿಕ್ಷಣ ಕಾರ್ಯಕ್ರಮಗಳು ಮತ್ತು ಪಠ್ಯಕ್ರಮ ಚೌಕಟ್ಟುಗಳಲ್ಲಿ ಮಾನವ ಹಕ್ಕುಗಳ ಶಿಕ್ಷಣದ ಅಂಶವನ್ನು ಸೇರಿಸಬೇಕು;
- ವ್ಯಕ್ತಿತ್ವದ ಎಲ್ಲ ಆಯಾಮಗಳನ್ನು ಪೋಷಿಸಲು–ಸಂಜ್ಞಾನಾತ್ಮಕ, ಭಾವನಾತ್ಮಕ ಮತ್ತು ಮನೋ ಭೌತಿಕ– ಕ್ರೀಡೆ, ನೃತ್ಯ, ನಾಟಕ, ಸಂಗೀತ ಮತ್ತು ಕೈಕೆಲಸ ಇವುಗಳಿಗೆ ಸಮನಾದ ಪ್ರಾಮುಖ್ಯತೆಯನ್ನೂ ಬೆಲೆಯನ್ನೂ ಕೊಡಬೇಕು;
- ಶಿಕ್ಷಣದಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಎಲ್ಲ ಮಕ್ಕಳ ಪ್ರವೇಶಾತಿ, ಉಳಿಕೆ ಮತ್ತು ಸಂಪೂರ್ಣ ಭಾಗವಹಿಕೆ ಇವು ಯಾವುದೇ ರೀತಿಯ ಮಾಪನ ಪರೀಕ್ಷೆ, ವೃತ್ತಿಪರರು ಅಥವಾ ತಜ್ಞರ ನಿರ್ಣಯಗಳು, ಮನೋ–ವೈದ್ಯಕೀಯ ಪ್ರಮಾಣಪತ್ರ ಇತ್ಯಾದಿಗಳ ಮಾನದಂಡಗಳಿಗೆ ಒಳಪಡಬಾರದು;
- ಅಸಾಮರ್ಥ್ಯವಿರುವ ಯಾವ ಮಗುವಿಗೂ ಪ್ರವೇಶ, ಪರೀಕ್ಷೆ, ಬೆಂಬಲ ಸೌಲಭ್ಯಗಳು, ಶಿಷ್ಯವೇತನ ಇವುಗಳಿಗಾಗಿ ಪ್ರಮಾಣಪತ್ರ ಸಲ್ಲಿಸಲು ಹೇಳಬಾರದು;

- ಮಕ್ಕಳನ್ನು ನಪಾಸುಮಾಡುವ ನಿಯಮವನ್ನು ಕೈಬಿಟ್ಟು ಜೊತೆಜೊತೆಯಲ್ಲೇ ಮಕ್ಕಳಿಗೆ ಅಸಾಮರ್ಥ್ಯದ ಗ್ರಹಿಕೆಯನ್ನು ಮೀರಿ ಹೊರಬರಲು ಸಹಾಯಮಾಡಬೇಕು; ಮತ್ತು
- ವಿಶೇಷ ಶಿಕ್ಷಣ ಅಗತ್ಯದ ಪರಿಕಲ್ಪನೆಯನ್ನು ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಕಾಯಿದೆಯ ಪರಿಮಿತಿಯಲ್ಲಲ್ಲದೆ ಹೆಚ್ಚು ಸಮಗ್ರವಾಗಿ ವ್ಯಾಖ್ಯಾನಿಸಬೇಕು.

## (III) ಸರ್ವಶಿಕ್ಷಾ ಅಭಿಯಾನ

ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣದ ಹಕ್ಕನ್ನು ಅನುಷ್ಠಾನಕ್ಕೆ ತರಲು ಜಾಗತಿಕ ಮತ್ತು ರಾಷ್ಟ್ರೀಯ ಹಂತದಲ್ಲಿ ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸರ್ವಶಿಕ್ಷಾ ಅಭಿಯಾನವು ಸಮುದಾಯ ಮಾಲೀಕತ್ವದ ಮೂಲಕ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ಪ್ರಯತ್ನಗಳಲ್ಲಿ ಪ್ರಮುಖವಾದುದು. ದೇಶದಾದ್ಯಂತ ಗುಣಮಟ್ಟದ ಮೂಲಶಿಕ್ಷಣಕ್ಕೆ ಪ್ರತಿಕ್ರಿಯೆಯಾಗಿ ಇದು ಪ್ರಾರಂಭವಾಯಿತು. ಜೊತೆಗೆ ಇದು ಪ್ರಚಾರರೂಪದಲ್ಲಿ ಸಮುದಾಯದ ನಾಯಕತ್ವದೊಂದಿಗೆ ಎಲ್ಲ ಮಕ್ಕಳಲ್ಲೂ ಮಾನವ ಸಾಮರ್ಥ್ಯಗಳನ್ನು ಉತ್ತಮಪಡಿಸುವ ಅವಕಾಶಗಳನ್ನು ಒದಗಿಸುವ ಪ್ರಯತ್ನವೂ ಆಯಿತು.

### ಶಿಕ್ಷಣದ ಹಕ್ಕು ಕಾಯಿದೆ ಮತ್ತು ಸರ್ವಶಿಕ್ಷಾ ಅಭಿಯಾನ– ನೀತಿ ಹಸ್ತಕ್ಷೇಪಗಳು

ಸರ್ವಶಿಕ್ಷಾ ಅಭಿಯಾನವು ಅಸಾಮರ್ಥ್ಯದ ಸ್ವರೂಪ, ವರ್ಗ ಮತ್ತು ತೀವ್ರತೆಗೆ ಗಮನಕೊಡದೆ ವಿಶೇಷ ಅಗತ್ಯವುಳ್ಳ ಎಲ್ಲ ಮಕ್ಕಳಿಗೂ ಅರ್ಥಪೂರ್ಣವಾದ ಗುಣಮಟ್ಟದ ಶಿಕ್ಷಣವನ್ನು ಖಾತ್ರಿಪಡಿಸುತ್ತದೆ. ಇದಕ್ಕಾಗಿ ಸರ್ವಶಿಕ್ಷಾ ಅಭಿಯಾನವು 'ಶೂನ್ಯ ನಿರಾಕರಣ ನೀತಿ'ಯನ್ನು ಅಳವಡಿಸಿಕೊಂಡಿದೆ. ವಿಶೇಷ ಅಗತ್ಯವುಳ್ಳ ಯಾವುದೇ ಮಗುವೂ ಶಿಕ್ಷಣದ ಹಕ್ಕಿನಿಂದ ವಂಚಿತವಾಗುವಂತಿಲ್ಲ ಮತ್ತು ಆ ಎಲ್ಲ ಮಕ್ಕಳಿಗೂ ಅವರ ಕಲಿಕಾ ಅಗತ್ಯಗಳಿಗೆ ಸೂಕ್ತವಾದ ಪರಿಸರದಲ್ಲಿ ಶಿಕ್ಷಣ ನೀಡಬೇಕು ಎಂಬುದೇ ಇದರ ಅರ್ಥ. ಇವು ವಿಶೇಷ ಶಾಲೆಗಳು, ಶಿಕ್ಷಣ ಖಾತರಿ ಯೋಜನೆ ಮತ್ತು ಪರ್ಯಾಯ ಆವಿಷ್ಕಾರಾತ್ಮಕ ಶಿಕ್ಷಣ ಮತ್ತು ಗೃಹ ಆಧಾರಿತ ಶಿಕ್ಷಣವನ್ನೂ ಒಳಗೊಳ್ಳುತ್ತದೆ. ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಔಪಚಾರಿಕ ಪ್ರಾಥಮಿಕ ಶಾಲೆಯ ವ್ಯವಸ್ಥೆಗೆ ಸೇರಿಸುವುದು ಸರ್ವಶಿಕ್ಷಾ ಅಭಿಯಾನದ ಪ್ರಮುಖ ಗುರಿ.

ವಿಶೇಷ ಅಗತ್ಯವಿರುವ ಪ್ರತಿ ಮಗುವನ್ನೂ ಅಗತ್ಯವಿರುವ ಬೆಂಬಲ ಸೇವೆಗಳೊಂದಿಗೆ ನೆರೆಕೆರೆಯ ಶಾಲೆಗೆ ಸೇರಿಸಬೇಕು. ಈ ಮಕ್ಕಳು ಕೆಲವು ವಿಶೇಷ ಕೌಶಲಗಳನ್ನು ಪಡೆಯಲು ಅನುಕೂಲಿಸಬೇಕು. ಈ ಕೌಶಲಗಳು ಕಾಯಿದೆಯಲ್ಲಿ ಹೇಳಿರುವಂತೆ ಅವರು ಪ್ರಾಥಮಿಕ ಶಿಕ್ಷಣವನ್ನು ಪಡೆಯಲು ಸಮರ್ಥರನ್ನಾಗಿಸುತ್ತವೆ. ಉದಾಹರಣೆಗೆ, ಅವರಿಗೆ ಚಲನಾತ್ಮಕ ಕೌಶಲಗಳು, ಬ್ರೈಲ್ ತರಬೇತಿ, ಸಂಕೇತ ಭಾಷೆ, ಭಂಗಿ ತರಬೇತಿ ಇತ್ಯಾದಿಗಳ ಅಗತ್ಯವಿರಬಹುದು. ಹೀಗೆ ವಿಶೇಷ ಅಗತ್ಯವಿರುವ ಮಕ್ಕಳಿಗೆ 'ವಿಶೇಷ ತರಬೇತಿ'ಯ ಮೂಲಕ ಶಿಕ್ಷಣದ ಹಕ್ಕು ಕಾಯಿದೆಯಲ್ಲಿ ಹೇಳಿರುವಂತೆ ಶಾಲಾ ಸಿದ್ಧತೆಯನ್ನು ಖಚಿತಪಡಿಸಿಕೊಳ್ಳಬೇಕು. ಈ ತರಬೇತಿಯು ಅಗತ್ಯಕ್ಕೆ ತಕ್ಕಂತೆ ವಸತಿ ಸಹಿತ ಅಥವಾ ವಸತಿ ರಹಿತ ಇಲ್ಲವೇ ಮನೆ ಆಧಾರಿತವಾಗಿರಬಹುದು. ಈಗ ಅಸಾಮರ್ಥ್ಯವಿರುವ ಮಕ್ಕಳಿಗೆ ಅಸ್ತಿತ್ವದಲ್ಲಿರುವ ಔಪಚಾರಿಕೇತರ ಮತ್ತು ಪರ್ಯಾಯ ಶಾಲೆಗಳ(ಗೃಹ ಆಧಾರಿತ ಶಿಕ್ಷಣವನ್ನೂ ಒಳಗೊಂಡಂತೆ) ಆಯ್ಕೆಯನ್ನು 'ವಿಶೇಷ ತರಬೇತಿ'ಯಾಗಿ ಮಾರ್ಪಡಿಸಬಹುದು. ಅಂದರೆ ಈವರೆಗೆ ಶಾಲೆಗೆ ದಾಖಲಾಗದ ಅಥವಾ ಶಾಲೆ ಬಿಟ್ಟ ಮಕ್ಕಳು ಅವರ ವಯೋಮಾನಕ್ಕನುಗುಣವಾದ

ತರಗತಿಗಳಿಗೆ ನೇರೆಕೆರೆ ಶಾಲೆಯಲ್ಲಿ ದಾಖಲಾಗಬೇಕು. ಇವರು ಶಾಲೆಯ ಅಧ್ಯಾಪಕರಿಂದ ಅಥವಾ ಇದಕ್ಕಾಗಿಯೇ ನೇಮಕರಾದ ಅಧ್ಯಾಪಕರಿಂದ 'ವಿಶೇಷ ತರಬೇತಿ'ಗೆ ಅರ್ಹರಾಗಿರುತ್ತಾರೆ.

ಸರ್ವಶಿಕ್ಷಾ ಅಭಿಯಾನವು ಹೆಚ್ಚು ಸಮಗ್ರವಾದ ಮತ್ತು ವಿಶಾಲಾರ್ಥವುಳ್ಳ ಅಂತರ್ಗತತೆಯ ಪರಿಕಲ್ಪನೆಯನ್ನು ಅಳವಡಿಸಿಕೊಂಡಿದೆ. ಇದರ ಪ್ರಕಾರ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಬಹು–ಆಯ್ಕೆಯ ಮಾದರಿಯ ಶಿಕ್ಷಣವನ್ನು ತೆರೆದಿಟ್ಟಿದೆ. ಈ ಮಾದರಿಯನ್ನು ಅಳವಡಿಸಿಕೊಳ್ಳಲು ಎರಡು ಉದ್ದೇಶಗಳಿವೆ. ಒಂದು, ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಸರ್ವಶಿಕ್ಷಾ ಅಭಿಯಾನದ ಪರಿಧಿಯೊಳಗೆ ತರುವುದು ಮತ್ತು ಅವರಿಗೆ ಅಗತ್ಯವಾದ–ಔದ್ಯೋಗಿಕ, ಕ್ರಿಯಾಶೀಲ, ಅಥವಾ ದಿನನಿತ್ಯದ ಸಾಮಾನ್ಯ ಚಟುವಟಿಕೆಗಳು– ಕೌಶಲಗಳನ್ನು ಬೆಳೆಸುವುದು. ಅಲ್ಲದೆ, ಈ ಕೌಶಲಗಳನ್ನು ಹೆಚ್ಚು ಸಮರ್ಪಕವಾದ ಕಲಿಕಾ ಪರಿಸರದಲ್ಲಿ ಕೊಡಲು ಪ್ರಯತ್ನಗಳನ್ನು ಮಾಡಲಾಗಿದೆ.

ಸರ್ವಶಿಕ್ಷಾ ಅಭಿಯಾನದ ಅಡಿಯಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಹಲವಾರು ಅವಕಾಶಗಳಿವೆ. ಆಯಾ ವಾರ್ಷಿಕ ಪ್ರಸ್ತಾವನೆಗನುಗುಣವಾಗಿ, ಅಸಾಮರ್ಥ್ಯವಿರುವ ಮಕ್ಕಳ ಅಂತರ್ಗತತೆಗೆ ರೂ 3000/ ನೀಡಲಾಗುತ್ತದೆ. ವಿಶೇಷ ಅಗತ್ಯವುಳ್ಳ ಮಕ್ಕಳಿಗಾಗಿ ಮಗುವೊಂದಕ್ಕೆ ರೂ 3,000 ದಂತೆ ಜಿಲ್ಲಾವಾರು ಯೋಜನೆಯನ್ನು ರೂಪಿಸಲಾಗಿದ್ದು, ಇದರಲ್ಲಿ 1000 ರೂಗಳನ್ನು ಸಂಪನ್ಮೂಲ ಅಧ್ಯಾಪಕರಿಗಾಗಿ ಎಂದು ಗುರುತಿಸಲಾಗಿದೆ. ಸರ್ವಶಿಕ್ಷಾ ಅಭಿಯಾನದ ಅಡಿಯಲ್ಲಿ ಅಂತರ್ಗತ ಶಿಕ್ಷಣದ ಪ್ರಕ್ರಿಯೆಯಲ್ಲಿ ಅಸಾಮರ್ಥ್ಯವಿರುವ ಮಕ್ಕಳನ್ನು ಗುರುತಿಸುವಿಕೆ, ಕ್ರಿಯಾಶೀಲ ಮತ್ತು ಔಪಚಾರಿಕ ಮಾಪನ, ಶೈಕ್ಷಣಿಕ ಸ್ಥಾನೀಕರಣ, ವೈಯಕ್ತೀಕರಿಸಿದ ಶೈಕ್ಷಣಿಕ ಯೋಜನೆ, ಉಪಕರಣಗಳು ಮತ್ತು ಸಾಧನಗಳನ್ನು ಒದಗಿಸುವಿಕೆ, ಅಧ್ಯಾಪಕ ತರಬೇತಿ, ಸಂಪನ್ಮೂಲ ಬೆಂಬಲ, ಕಟ್ಟಡದಲ್ಲಿನ ಅಡೆತಡೆಗಳ ನಿವಾರಣೆ, ಸಂಶೋಧನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ – ಈ ಕಾರ್ಯಗಳನ್ನು ಗುರುತಿಸಿಕೊಳ್ಳಲಾಗಿದೆ. ಹೆಣ್ಣುಮಕ್ಕಳ ವಿಶೇಷ ಅಗತ್ಯಗಳಿಗೆ ಹೆಚ್ಚಿನ ಗಮನ ನೀಡಲಾಗುತ್ತದೆ.

## (IV) ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ –2009 (Rashtriya Madhyamik Shiksha Abhiyaan)

15–16 ವಯೋಮಾನದ ಎಲ್ಲ ಯುವಜನರಿಗೂ ಉತ್ತಮ ಗುಣಮಟ್ಟದ ಸೆಕೆಂಡರಿ ಶಿಕ್ಷಣ ದೊರೆಯುವಂತೆ ಮಾಡುವ ಉದ್ದೇಶದಿಂದ 2009ರಲ್ಲಿ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನವನ್ನು ಪ್ರಾರಂಭಿಸಲಾಯಿತು. ಸಮತೆಯೊಂದಿಗೆ, ಸೆಕೆಂಡರಿ ಶಿಕ್ಷಣದ ಅಂದರೆ 8ರಿಂದ 10ನೇ ತರಗತಿಗಳ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವುದು ಇದರ ಗುರಿ. ಈ ಅಭಿಯಾನಕ್ಕೆ ರಾಷ್ಟ್ರವ್ಯಾಪಿಯಾಗಿ ಎಲ್ಲರಿಗೂ 5 ಕಿ. ಮೀ. ದೂರದಲ್ಲಿ ಒಂದು ಸೆಕೆಂಡರಿ ಶಾಲೆಯನ್ನು ಒದಗಿಸುವುದರ ಮೂಲಕ ರಾಷ್ಟ್ರದ ಮೂಲೆಮೂಲೆಯಲ್ಲಿರುವವರಿಗೂ ಸೆಕೆಂಡರಿ ಶಿಕ್ಷಣವನ್ನು ನೀಡುವುದು ಇದರ ಆಶಯ. 2017ರ ವೇಳೆಗೆ ಸೂಚಿತ ಮಾನಕಗಳಿಗನುಗುಣವಾಗಿ ಎಲ್ಲ ಶಾಲೆಗಳಲ್ಲೂ ಸೆಕೆಂಡರಿ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವ ಯೋಜನೆಯೊಂದಿಗೆ ಇದು ಕಾರ್ಯಗತವಾಯಿತು. ಲಿಂಗತಾರತಮ್ಯ, ಸಾಮಾಜಿಕ, ಆರ್ಥಿಕ ಹಾಗೂ ಅಸಾಮರ್ಥ್ಯದ ಅಡೆತಡೆಗಳು, ಇವುಗಳನ್ನು ಹೋಗಲಾಡಿಸಿ 2020ರವೇಳೆಗೆ ಸಾರ್ವತ್ರಿಕ ಉಳಿಕೆಯನ್ನು ಸಾಧಿಸುವುದೂ ಇದರ ಗಮನದಲ್ಲಿದೆ. ಕೇಂದ್ರ ಪ್ರಾಯೋಜಿತ ಯೋಜನೆಗಳಾದ ಶಾಲೆಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ, ಬಾಲಕಿಯರಿಗೆ ವಸತಿ ನಿಲಯಗಳು ಮತ್ತು ಅಸಾಮರ್ಥ್ಯವಿರುವವರಿಗೆ ಸೆಕೆಂಡರಿ ಹಂತದಲ್ಲಿ ಅಂತರ್ಗತ ಶಿಕ್ಷಣ, ಇವುಗಳನ್ನು 2013–14ರಲ್ಲಿ ಈ ಯೋಜನೆಯೊಳಗೆ ಸೇರಿಸಲಾಯಿತು. ಈ ಯೋಜನೆಗಳನ್ನು ರಾಷ್ಟ್ರೀಯ ಮಾಧ್ಯಮಿಕ

ಶಿಕ್ಷಣ ಅಭಿಯಾನದಲ್ಲಿ ವಿಲೀನಗೊಳಿಸಿದುದರಿಂದ ಗಮನೀಯವಾದ ಹಣಕಾಸಿನ ಉಳಿತಾಯವಾಯಿತು. ಹೀಗೆ ವಿಲೀನಗೊಳಿಸಿದುದು ಸಮನ್ವಯ ಮತ್ತು ಅಂತರ್ಗತ ಶಿಕ್ಷಣದ ಯೋಜನೆಗೆ ದಾರಿ ಮಾಡಿಕೊಟ್ಟಿದೆ.

ಮೊದಲಿನ ಅಸಾಮರ್ಥ್ಯವಿರುವ ಮಕ್ಕಳ ಸಮನ್ವಯ ಯೋಜನೆಗೆ ಪರ್ಯಾಯವಾಗಿ ಅಸಾಮರ್ಥ್ಯವಿರುವವರ ಸೆಕೆಂಡರಿ ಶಿಕ್ಷಣ ಯೋಜನೆ 2009–10ರಲ್ಲಿ ಜಾರಿಗೆ ಬಂದಿತು. ಈ ಯೋಜನೆಯು ಅಸಾಮರ್ಥ್ಯವಿರುವ 8ರಿಂದ 10ನೇ ತರಗತಿಯ ಮಕ್ಕಳ ಅಂತರ್ಗತ ಶಿಕ್ಷಣಕ್ಕೆ ಸಹಾಯಮಾಡುತ್ತಿದ್ದು 2013ರಿಂದ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದಲ್ಲಿ ಸೇರ್ಪಡೆಯಾಯಿತು.ಇದರ ಗುರಿಗಳು ಹೀಗಿವೆ:

- ಅಸಾಮರ್ಥ್ಯವಿರುವ ಎಲ್ಲ ವಿದ್ಯಾರ್ಥಿಗಳೂ ಅಂತರ್ಗತ ಸನ್ನಿವೇಶದಲ್ಲಿ ಎಂಟು ವರ್ಷದ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಿ ಮುಂದಿನ ನಾಲ್ಕು ವರ್ಷಗಳ ಶಿಕ್ಷಣವನ್ನು ಕೈಗೊಳ್ಳುವಂತೆ ಮಾಡುವುದು.

- ಎಲ್ಲ ಸೆಕೆಂಡರಿ ಶಾಲೆಗಳು ಸೂಚಿತ ಮಾನಕಗಳಿಗೆ ಬದ್ಧರಾಗಿರುವಂತೆ ಮಾಡುವುದರ ಮೂಲಕ ಸೆಕೆಂಡರಿ ಹಂತದಲ್ಲಿ ನೀಡಲಾಗುತ್ತಿರುವ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವುದು. ಲಿಂಗಾತ್ಮಕ, ಸಾಮಾಜಿಕ ಮತ್ತು ಆರ್ಥಿಕ ತಾರತಮ್ಯಗಳನ್ನು ಹೋಗಲಾಡಿಸುವುದು,2017ರೊಳಗೆ ಸಾರ್ವತ್ರಿಕ ಸೆಕೆಂಡರಿ ಶಿಕ್ಷಣದ ಅವಕಾಶವನ್ನು ನೀಡುವುದು, ಹೆಣ್ಣುಮಕ್ಕಳಿಗೆ ಸೆಕೆಂಡರಿ ಶಾಲೆಗಳ ಪ್ರವೇಶಕ್ಕೆ ಅವಕಾಶ ದೊರೆಯುವಂತೆ ವಿಶೇಷ ಗಮನ ನೀಡುವುದು, 2020ರ ವೇಳೆಗೆ ಸಾರ್ವತ್ರಿಕ ಉಳಿಕೆಯನ್ನು ಸಾಧಿಸುವುದು.

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನವು ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಸೆಕೆಂಡರಿ ಶಿಕ್ಷಣವನ್ನು ಒದಗಿಸುವ ಗುರಿಯನ್ನು ಮಾತ್ರವಲ್ಲದೆ ಇತರ ವರ್ಗಗಳಾದ ಪರಿಶಿಷ್ಟ ಜಾತಿ, ಪರಿಶಿಷ್ಟ ಜನಾಂಗ, ಅಲ್ಪಸಂಖ್ಯಾತರು, ಬಾಲಕಿಯರು ಇವರುಗಳನ್ನೂ ತನ್ನ ಗುರಿಸಾಧನೆಯ ಹಾದಿಯಲ್ಲಿ ಸೇರಿಸಿಕೊಂಡಿದೆ. ಇದಕ್ಕಾಗಿ ಆಯಾ ವರ್ಗದವರನ್ನು ಗುರುತಿಸುವ, ಅಗತ್ಯಗಳನ್ನು ಮಾಪನಮಾಡುವ, ಅಂತರವನ್ನು ಮಾರ್ಗೋಪಾಯಗಳ ಮೂಲಕ ಅಂದಾಜುಮಾಡುವ, ಯೋಜನಾಧಾರಿತ ಪ್ರಸ್ತಾವನೆಯನ್ನು ಸಿದ್ಧಪಡಿಸುವ, ಮಾರ್ಗಗಳನ್ನು ಅಳವಡಿಸಿಕೊಂಡಿದೆ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 2

ಕೆಳಗೆ ಮೂರು ಕಾಲಂಗಳಲ್ಲಿ ಭಿನ್ನ ಅಂಶಗಳನ್ನು ಕೊಡಲಾಗಿದೆ. ಅವುಗಳ ನಡುವಿನ ಸಂಬಂಧವನ್ನು ಗುರುತಿಸಿ ಸಮರ್ಪಕವಾಗಿ ಹೊಂದಿಸಿ.

| | | |
|---|---|---|
| 1. ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ | a. ಶೂನ್ಯ ನಿರಾಕರಣ ನೀತಿ | i) ವ್ಯತ್ಯಾಸಗಳನ್ನು ಒಪ್ಪಿಕೊಳ್ಳಿ; ವಿಭಿನ್ನತೆಯನ್ನು ಸಂಭ್ರಮಿಸಿ. |
| 2. ಸರ್ವಶಿಕ್ಷಾ ಅಭಿಯಾನ | b. 2009 | ii) ಶಿಕ್ಷಣ ಕ್ಷೇತ್ರದ ತಜ್ಞರ ಗುಂಪು |
| 3. ರಾಷ್ಟ್ರೀಯ ಗಮನ ತಂಡ ಪತ್ರಿಕೆ | c. 2005 | iii) ಸಮತೆಯೊಂದಿಗೆ, ಸೆಕೆಂಡರಿ ಶಿಕ್ಷಣದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವುದು |
| 4. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು | d. ವಿಶೇಷ ಶೈಕ್ಷಣಿಕ ಅಗತ್ಯವುಳ್ಳ ತರಗತಿಯ ಮಕ್ಕಳ ಸಂಖ್ಯೆ 20 | iv) ಮಗುವೊಂದಕ್ಕೆ ರೂ 3000 |

### 1.5.3.3. ರಾಷ್ಟ್ರೀಯ ಗಮನ : ಭಾಗ 3 :

## (I) ಅಲ್ಪಸಂಖ್ಯಾತರ ಶೈಕ್ಷಣಿಕ ಸಂಸ್ಥೆಗಳ ರಾಷ್ಟ್ರೀಯ ಆಯೋಗ (National Commission on Minority Education Institutions)

ಈ ಆಯೋಗವು ಅಲ್ಪಸಂಖ್ಯಾತರ ರಾಷ್ಟ್ರೀಯ ಆಯೋಗ 1992ರ ಕಾಯಿದೆಗನುಗಣವಾಗಿ ಒಕ್ಕೂಟ ಸರ್ಕಾರದಿಂದ ಸ್ಥಾಪಿತವಾಯಿತು. ಇದರಲ್ಲಿ ಆರು ಧರ್ಮ ಸಮುದಾಯಗಳನ್ನು–ಮುಸ್ಲಿಮರು, ಕ್ರಿಶ್ಚಿಯನ್ನರು, ಸಿಕ್ಕರು, ಬೌದ್ಧರು, ಜೋರಾಷ್ಟ್ರಿಯನ್ನರು ಮತ್ತು ಜೈನರು–ಅಲ್ಪಸಂಖ್ಯಾತರು ಎಂದು ಒಕ್ಕೂಟ ಸರ್ಕಾರದಿಂದ ಸೂಚಿಸಲಾಗಿದೆ. ಭಾರತದಲ್ಲಿ ಅಲ್ಪಸಂಖ್ಯಾತರಿಂದ ಸ್ಥಾಪಿತವಾದ ಸಂಸ್ಥೆಗಳನ್ನು ಸಂರಕ್ಷಿಸಲು ಈ ಆಯೋಗವನ್ನು ಸ್ಥಾಪಿಸಲಾಗಿದೆ. ಇದು ಅಲ್ಪಸಂಖ್ಯಾತರು ಅವರ ಆಯ್ಕೆಯಂತ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಮತ್ತು ನಿರ್ವಹಿಸಲು ಸಂವಿಧಾನವು ಕೊಡಮಾಡಿರುವ ಹಕ್ಕನ್ನೂ(ವಿಧಿ 30) ಖಚಿತಪಡಿಸುತ್ತದೆ.

ಈ ಆಯೋಗದಲ್ಲಿ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ, ಉಚ್ಚನ್ಯಾಯಲಯದಲ್ಲಿ ತೀರ್ಪುಗಾರರಾಗಿದ್ದ ಒಬ್ಬರು ಅಧ್ಯಕ್ಷರು, ಕೇಂದ್ರ ಸರ್ಕಾರದಿಂದ ನಾಮಕರಣಗೊಂಡ ಇಬ್ಬರು ಸದಸ್ಯರೂ ಇರುತ್ತಾರೆ. ಈ ಸದಸ್ಯರು ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದವರಾಗಿದ್ದು, ಹಿರಿಮೆಯುಳ್ಳವರೂ ಸಮರ್ಥರೂ ಪ್ರಾಮಾಣಿಕರೂ ಆಗಿರಬೇಕು.

**ಆಯೋಗದ ಕಾರ್ಯಗಳು :**

- ರಾಜ್ಯ ಮತ್ತು ಒಕ್ಕೂಟಗಳಲ್ಲಿ ಅಲ್ಪಸಂಖ್ಯಾತರ ಬೆಳವಣಿಗೆಯ ಏಳಿಗೆಯನ್ನು ಮಾಪನ ಮಾಡುವುದು;
- ಅಲ್ಪಸಂಖ್ಯಾತರ ರಕ್ಷಣೆಗೆ ಸಂಸತ್ತು ಮತ್ತು ರಾಜ್ಯ ಶಾಸನಗಳು ಹೊರಡಿಸಿದ ನಿಯಮಗಳಲ್ಲಿ ಮತ್ತು ಸಂವಿಧಾನದ ರಕ್ಷಣಾಂಶಗಳು ಕಾರ್ಯಗತಗೊಳ್ಳುತ್ತಿವೆಯೋ ಎಂಬುದನ್ನು ನೋಡಿಕೊಳ್ಳುವುದು;
- ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ವತಿಯಿಂದ ಅಲ್ಪಸಂಖ್ಯಾತರ ಆಸಕ್ತಿಗಳ ರಕ್ಷಣೆಗೆ ಒದಗಿಸಿರುವ ಅಂಶಗಳ ಪರಿಣಾಮಕಾರಿ ಅನ್ವಯಕ್ಕೆ ಶಿಫಾರಸುಗಳನ್ನು ಮಾಡುವುದು;

- ಹಕ್ಕುಗಳ ಚ್ಯುತಿ ಮತ್ತು ಅಲ್ಪಸಂಖ್ಯಾತರ ರಕ್ಷಣೆಗೆ ಸಂಬಂಧಿಸಿದ ನಿರ್ದಿಷ್ಟ ದೂರುಗಳನ್ನು ಗಮನಿಸಿಕೊಂಡು ಅವುಗಳನ್ನು ಸೂಕ್ತ ಅಧಿಕಾರಗಳ ಗಮನಕ್ಕೆ ತರುವುದು;
- ಅಲ್ಪಸಂಖ್ಯಾತರ ವಿರುದ್ಧವಾದ ತಾರತಮ್ಯದಿಂದ ಹುಟ್ಟಿಕೊಳ್ಳುವ ಸಮಸ್ಯೆಗಳ ವ್ಯಕ್ತಿ/ ಸನ್ನಿವೇಶ ಅಧ್ಯಯನಗಳನ್ನು ಮಾಡುವುದು ಮತ್ತು ಅವುಗಳನ್ನು ಹೋಗಲಾಡಿಸಲು ಕ್ರಮ ಕೈಗೊಳ್ಳುವುದು;
- ಅಲ್ಪಸಂಖ್ಯಾತರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಬೆಳವಣಿಗೆಗೆ ಸಂಬಂಧಿಸಿದ ವಿಚಾರಗಳ ಅಧ್ಯಯನ, ಸಂಶೋಧನೆ ಮತ್ತು ವಿಶ್ಲೇಷಣೆಗಳನ್ನು ಕೈಗೊಳ್ಳುವುದು;
- ಯಾವುದೇ ಅಲ್ಪಸಂಖ್ಯಾತರ ಕುರಿತು ತೆಗೆದುಕೊಳ್ಳಬೇಕಾದ ಸಮರ್ಪಕ ಕ್ರಮಗಳನ್ನು ಸೂಚಿಸುವುದು; ಮತ್ತು
- ಅಲ್ಪಸಂಖ್ಯಾತರಿಗೆ ಸಂಬಂಧಿಸಿದ ಯಾವುದೇ ವಿಷಯವನ್ನು ಕುರಿತಂತೆ, ನಿರ್ದಿಷ್ಟವಾಗಿ ಅವರು ಎದುರಿಸುವ ತೊಂದರೆಗಳನ್ನು ಕುರಿತಂತೆ ನಿಯತಕಾಲಗಳ ವರದಿ ಅಥವಾ ವಿಶೇಷ ವರದಿ ತಯಾರಿಸಿ ಕೇಂದ್ರ ಸರ್ಕಾರಕ್ಕೆ ಒಪ್ಪಿಸುವುದು.

**ಈ ಆಯೋಗಕ್ಕೆ ಕೆಳಗಿನ ಅಧಿಕಾರಗಳಿವೆ :**

- ಭಾರತದ ಯಾವುದೇ ಭಾಗದಿಂದ ಯಾವುದೇ ವ್ಯಕ್ತಿಯನ್ನು ಕರೆಸುವುದು ಅಥವಾ ಅವರ ಹಾಜರಾತಿಯನ್ನು ಒತ್ತಾಯಿಸುವುದು ಮತ್ತು ಪ್ರಮಾಣಮಾಡಲು ಹೇಳುವುದು;
- ಯಾವುದೇ ದಾಖಲೆಯನ್ನು ಪರಾಮರ್ಶಿಸುವುದು;
- ಶಪಥಪತ್ರಕ್ಕೆ ಆಧಾರ ದಾಖಲೆ ಪಡೆಯುವುದು.
- ಯಾವುದೇ ಕೋರ್ಟು ಅಥವಾ ಕಛೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆಯನ್ನು ಕೇಳುವುದು.

## (II) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೊದಲ ಆಯೋಗ 1978ರಲ್ಲಿ ಸ್ಥಾಪಿತವಾಯಿತು. ಈ ಆಯೋಗವು ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಾಲ್ವರು ಸದಸ್ಯರನ್ನು ಒಳಗೊಂಡಿರುತ್ತದೆ. 1990ರಲ್ಲಿ ಈ ಆಯೋಗವನ್ನು ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟು ಆಯೋಗ ಎಂದು ಮರುನಾಮಕರಣ ಮಾಡಲಾಯಿತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟು ಜನಾಂಗದ ಸಮಗ್ರವಾದ ನೀತಿ ಸಂಬಂಧಕವಾದ ವಿಚಾರಗಳು ಮತ್ತು ಅವರ ಅಭಿವೃದ್ಧಿಯ ಮಟ್ಟ ಇವುಗಳನ್ನುಕುರಿತು ಸರಕಾರಕ್ಕೆ ಸಲಹೆ ನೀಡಲು ಅದನ್ನು ಒಂದು ರಾಷ್ಟ್ರೀಯ ಸಲಹಾ ಮಂಡಳಿಯಾಗಿ ರೂಪಿಸಲಾಯಿತು.

ಸಂವಿಧಾನದ 89ನೇ ತಿದ್ದುಪಡಿಗೆ ಅನುಗುಣವಾಗಿ 2003ರ ನಂತರ ಈ ಆಯೋಗವನ್ನು ವಿಭಜಿಸಿ, ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗ ಮತ್ತು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗ ಎಂದು ಕರೆಯಲಾಗಿದೆ. ಈ ಆಯೋಗಗಳು ಭಾರತೀಯ ಸಾಮಾಜಿಕ ಸಂವಿಧಾನದ ಅಂಗವಾಗಿದ್ದು, ಅವರ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಹಿತಾಸಕ್ತಿಗಳನ್ನು ಉತ್ತೇಜಿಸಲು ಮತ್ತು ರಕ್ಷಿಸಲು ಪರಿಶಿಷ್ಟ ಜಾತಿ ಮತ್ತು ಪಂಘಡಗಳ ಶೋಷಣೆಗೆ ವಿರುದ್ಧವಾಗಿ ರಕ್ಷಿಸುವ ದೃಷ್ಟಿಯಿಂದ ಸ್ಥಾಪಿತವಾಗಿವೆ. ಈ

ಕುರಿತಂತೆ ಸಂವಿಧಾನದಲ್ಲಿ ವಿಶೇಷ ನಿಬಂಧನೆಗಳೀವೆ. ಭಾರತೀಯ ಸಂವಿಧಾನದ ವಿಧಿ338 ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗಕ್ಕೂ ಮತ್ತು 338A ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗಕ್ಕೆ ಸಂಬಂಧಪಟ್ಟಿರುತ್ತವೆ. ವಿಧಿ 341 ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗದ ಅಧಿಸೂಚನೆಗೂ, ಮತ್ತು ವಿಧಿ 342 ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗದ ಅಧಿಸೂಚನೆಗೂ ಸಂಬಂಧಪಟ್ಟಿವೆ. ಈ ಆಯೋಗಗಳ ಕಾರ್ಯಗಳು ಕೆಳಗಿನಂತಿವೆ:

- ಈ ಸಂವಿಧಾನದ ಅಡಿಯಲ್ಲಿ ಅಥವಾ ಯಾವುದೇ ಕಾನೂನಡಿಯಲ್ಲಿ ಅಥವಾ ಸರ್ಕಾರದ ಯಾವುದೇ ಆದೇಶದ ಅಡಿಯಲ್ಲಿ ಪರಿಶಿಷ್ಟ ಜಾತಿ / ಪಂಗಡಗಳಿಗೆ ಒದಗಿಸಿದ ರಕ್ಷಣೋಪಾಯಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ತನಿಖೆ ಮಾಡುವುದು, ಮೇಲ್ವಿಚಾರಣೆ ಮಾಡುವುದು ಹಾಗೂ ಮೌಲ್ಯಮಾಪನ ಮಾಡುವುದು.
- ಪರಿಶಿಷ್ಟ ಜಾತಿ / ಪಂಗಡಗಳ ಹಕ್ಕುಗಳು ಮತ್ತು ರಕ್ಷಣೋಪಾಯಗಳ ಅಭಾವದ ಬಗ್ಗೆ ನಿರ್ದಿಷ್ಟ ದೂರುಗಳನ್ನು ವಿಚಾರಣೆ ಮಾಡುವುದು;
- ಪರಿಶಿಷ್ಟ ಜಾತಿ / ಪಂಗಡಗಳ ಸಾಮಾಜಿಕ – ಆರ್ಥಿಕ ಅಭಿವೃದ್ಧಿಯ ಯೋಜನಾ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ಮತ್ತು ಸಲಹೆ ನೀಡುವುದು ಹಾಗೂ ಒಕ್ಕೂಟ ಮತ್ತು ರಾಜ್ಯಗಳಲ್ಲಿ ತಮ್ಮ ಅಭಿವೃದ್ಧಿಯ ಪ್ರಗತಿಯನ್ನು ಮೌಲ್ಯಮಾಪನ ಮಾಡುವುದು;
- ಅಧ್ಯಕ್ಷರಿಗೆ ವಾರ್ಷಿಕವಾಗಿ ಅಥವಾ ಆಯೋಗ ಬಯಸಿದ ಇತರ ಸಮಯಗಳಲ್ಲಿ ರಕ್ಷಣಾ ಕಾರ್ಯಗಳ ಕಾರ್ಯನಿರ್ವಹಣೆಯನ್ನು ಕುರಿತ ವರದಿ ಸಲ್ಲಿಸುವುದು;
- ಆ ವರದಿಗಳಲ್ಲಿ ಒಕ್ಕೂಟ ಮತ್ತು ರಾಜ್ಯಗಳಲ್ಲಿ ರಕ್ಷಣಾ ಕಾರ್ಯಗಳ ಸಮರ್ಪಕ ಅಳವಡಿಕೆಗೆ ಹಾಗೂ ಪರಿಶಿಷ್ಟ ಜಾತಿ / ಪಂಗಡಗಳ ಸಾಮಾಜಿಕ– ಆರ್ಥಿಕ ಬೆಳವಣಿಗೆಗೆ ಮತ್ತು ಕಲ್ಯಾಣಕ್ಕೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಶಿಫಾರಸುಗಳನ್ನು ಮಾಡುವುದು; ಮತ್ತು ಪರಿಶಿಷ್ಟ ಜಾತಿ / ಪಂಗಡಗಳ ರಕ್ಷಣೆ, ಕಲ್ಯಾಣ, ಬೆಳವಣಿಗೆ ಮತ್ತು ಪ್ರಗತಿಯನ್ನು ಕುರಿತ ಇತರ ಕಾರ್ಯಗಳನ್ನು ಕೈಗೊಳ್ಳುವುದು.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 3

ಕೆಳಗೆ ಎರಡುಪಟ್ಟಿಗಳಲ್ಲಿ ವಿವಿಧ ಅಂಶಗಳನ್ನು ಕೊಡಲಾಗಿದೆ. ಸಂಬಂಧವಿರುವ ಅಂಶಗಳನ್ನು ಗುರುತಿಸಿ ಸೂಚಿಸಿರಿ.

| | | | |
|---|---|---|---|
| ಅ | ಭಾರತೀಯ ಸಂವಿಧಾನದ ವಿಧಿ 338 | ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗಕ್ಕೆ ಸಂಬಂಧಿಸಿದುದು | 1 |
| ಆ | ಅಲ್ಪಸಂಖ್ಯಾತರ ರಾಷ್ಟ್ರೀಯ ಆಯೋಗ | ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗದ ಅಧಿಸೂಚನೆಗೆ ಸಂಬಂಧಿಸಿದುದು | 2 |
| ಇ | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೊದಲ ಆಯೋಗ | ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗಕ್ಕೆ ಸಂಬಂಧಿಸಿದುದು | 3 |
| ಈ | ಭಾರತೀಯ ಸಂವಿಧಾನದ ವಿಧಿ 338 | 1978ರಲ್ಲಿ ಸ್ಥಾಪಿತವಾದುದು | 4 |
| ಉ | ಭಾರತೀಯ ಸಂವಿಧಾನದ ವಿಧಿ 342 | 1992ರ ಕಾಯಿದೆಗನುಗಣವಾಗಿ ಸ್ಥಾಪಿತವಾದುದು | 5 |

## 1.5.4. ಸಾರಾಂಶಿಸೋಣ

ಭಾರತದ ವಿಭಿನ್ನ ಗುಂಪುಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಂವಿಧಾನವೂ ಸೇರಿದಂತೆ ಅನೇಕ ಆಯೋಗಗಳು, ಕಾರ್ಯಕ್ರಮಗಳು, ನೀತಿಗಳನ್ನು ರೂಪಿಸಿಕೊಂಡು ಅವುಗಳಿಗೆ ಬದ್ಧವಾಗಿ ವಿಭಿನ್ನ ಗುಂಪುಗಳ ಸಾಮಾನ್ಯ ಮತ್ತು ಶೈಕ್ಷಣಿಕ ಬೆಳವಣಿಗೆಗೆ ನಿರಂತರವಾಗಿ ಪ್ರಯತ್ನಿಸಲಾಗುತ್ತಿದೆ. ಅವುಗಳಲ್ಲಿ ಮುಖ್ಯವಾದವುಗಳು

- ಭಾರತದ ಸಂವಿಧಾನ–(ಸಂವಿಧಾನಾತ್ಮಕ ಪ್ರಾವಧಾನಗಳು : ವಿಧಿ 21A: ವಿಧಿ 46: ವಿಧಿ 350A: ವಿಧಿ 29: ವಿಧಿ 30: ವಿಧಿ 15(1): ವಿಧಿ 16 (1) : ವಿಧಿ 16(2 ವಿಧಿ 51Aವಿಧಿ 350)
- ಭಾರತೀಯ ಪುನರ್ವಸತಿ ಮಂಡಳಿ ಕಾಯಿದೆ 1992
- ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಕಾಯಿದೆ 1995
- ಅಸಾಮರ್ಥ್ಯವುಳ್ಳ ವ್ಯಕ್ತಿಗಳ ರಾಷ್ಟ್ರೀಯ ನೀತಿ 2006
- ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಕಾಯಿದೆ 1995
- ಅಸಾಮರ್ಥ್ಯವುಳ್ಳ ವ್ಯಕ್ತಿಗಳ ರಾಷ್ಟ್ರೀಯ ನೀತಿ 2006
- ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005ರಾಷ್ಟ್ರೀಯ ಗಮನ ತಂಡ ಪತ್ರಿಕೆ
- ಸರ್ವಶಿಕ್ಷಾ ಅಭಿಯಾನ
- ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ –2009 ಅಲ್ಪಸಂಖ್ಯಾತರ ಶೈಕ್ಷಣಿಕ ಸಂಸ್ಥೆಗಳ ರಾಷ್ಟ್ರೀಯ ಆಯೋಗ
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗ

ಈ ಎಲ್ಲವೂ ಅಸಾಮರ್ಥ್ಯವುಳ್ಳ ಮಕ್ಕಳ ಶಿಕ್ಷಣಕ್ಕೆ ವಿಶಿಷ್ಟ ಕೊಡುಗೆಯನ್ನಿತ್ತಿವೆ.

## 1.5.5. ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಲು ಉತ್ತರಗಳು

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 1

ನೀವು ಗುರುತಿಸಿರುವ ನಿಹಿತಾರ್ಥಗಳನ್ನು ಸಹೋದ್ಯೋಗಿಗಳೊಂದಿಗೆ ಚರ್ಚಿಸಿ, ಮೌಲ್ಯೀಕರಿಸಿಕೊಳ್ಳಿ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 2

1 – b- iii)

2 – a- iv)

3 – d- ii)

4 – c - i)

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 3 :

ಅ–3, ಆ–5, ಇ–4, ಈ–1, ಉ–2

## 1.5.6. ಘಟಕಾಂತ್ಯ ಅಭ್ಯಾಸಗಳು

ಅಸಾಮರ್ಥ್ಯವಿರುವ ಮಕ್ಕಳ ಶಿಕ್ಷಣಕ್ಕಾಗಿ ಭಾರತದ ಸನ್ನಿವೇಶದಲ್ಲಿ ವಿವಿಧ ನೀತಿಗಳು, ಆಯೋಗಗಳು ಮತ್ತು ಕಾರ್ಯಕ್ರಮಗಳನ್ನು ವಿವರಿಸಿ.

## 1.5.7. ಪರಾಮರ್ಶನ ಸೂಚಿ


1. "No minority status to educational institutions on Linguistic basis". www.pib.nic.in. Retrieved 2018-10-07.
2. "NCMEI". NCMEI. Retrieved 2013-07-25.
3. Wikisource: Constitution of India/Part III#Article 30 .7BRight of minorities to establish and administer educational institutions.
4. "Press Information Bureau English Releases". Pib.nic.in. Retrieved 2013-07-25.
5. Rashtriya Madhyamik Shiksha Abhiyan (Integrated) | Government of mhrd.gov.in › School Education.
6. Basu, D. D. (2013). Introduction to the Constitution of India. India: LexisNexis.
7. Curriculum Framework for Teacher Education (2004), NCERT.
8. National Curriculum Framework (2005), NCERT.
9. National Curriculum Framework for Teacher Education (2009), NCERT.
10. Rashtriya Uchchatar Shiksha Abhiyan (2013). Ministry of Human Resource Development in association with Tata Institute of Social Sciences. Retrieved from http://mhrd.gov.in/sites/upload_files/mhrd/files/RUSA_final090913.pdf

11. Report of National Knowledge Commission (2007). Government of India. Retrieved from http://knowledgecommissionarchive.nic.in/downloads/documents/nkc_se.pdf

12. Report of the Secondary Education Commission, Mudaliar Commission

13. Report (1952).Ministry of Education, Government of India. Retrieved from http://www.teindia.nic.in/Files/Reports/CCR/Secondary_Education_Commission_Report.pd14. Sarva Shikshan Abhiyan. Ministry of Human Resource Development, Department of School Education and Literacy. Retrieved from http://mhrd.gov.in/sites/upload_files/mhrd/files/upload_document/ SSA-Frame-work.pdf

15. The Constitution of India. Ministry of Law and Justice, Government of India. Retrieved from http://lawmin.nic.in/coi/coiason29july08.pdf

16. The Right to Children to Free and Compulsory Act (2009), The Gazette of Indian Extraordinary, Ministry of Law and Justice, Government of India. Retrieved from http://ssa.nic.in/rte-docs/free%20and%20compulsory.pdf

17. http://vikaspedia.in/social-welfare/differently-abled-welfare/policies-and-standards/national-policy-for-persons-with-disabilities-2006.

18. http://www.ncert.nic.in/new_ncert/ncert/rightside/links/pdf/focus_group/special_ed_final1.pdf

    https://en.wikipedia.org/wiki/National_Commission_for_Scheduled_Castes.

19. Jaswant K Virk, Raminderjit Kaur and Rajvir Kaur: Creating an Inclusive School, Twenty First Century Publications, Patiala 2019

20. Sharat Sharma : Creating an Inclusive School, R Lall Book Depot, Meerut (U.P.)

****************

# ಬ್ಲಾಕ್–1 :  ಶಿಕ್ಷಣದಲ್ಲಿ ಅಂತರ್ಗತತೆಯನ್ನು ಅರ್ಥಮಾಡಿಕೊಳ್ಳುವುದು

## ಘಟಕ–6 : ಅಂತರ್ಗತ ಸನ್ನಿವೇಶದ ಅಸಾಮರ್ಥ್ಯವುಳ್ಳ ಮಕ್ಕಳಿಗೆ ಶೈಕ್ಷಣಿಕ ರಿಯಾಯತಿಗಳು, ಸೌಲಭ್ಯಗಳು, ಮತ್ತು ಅವಕಾಶಗಳು

### ಘಟಕದ ರಚನೆ


1.6.1 ಕಲಿಕಾ ಉದ್ದೇಶಗಳು

1.6.2. ಪೀಠಿಕೆ

1.6.3 ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

1.6.3.1. ಅಂತರ್ಗತ ಮಕ್ಕಳಿಗೆ ಶೈಕ್ಷಣಿಕ ರಿಯಾಯತಿಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 1

1.6.3.2. ಅಂತರ್ಗತ ಮಕ್ಕಳಿಗೆ ಶೈಕ್ಷಣಿಕ ಸೌಲಭ್ಯಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 2

1.6.3.3. ಅಂತರ್ಗತ ಮಕ್ಕಳಿಗೆ ಶೈಕ್ಷಣಿಕ ಅವಕಾಶಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 3

1.6.4. ಸಾರಾಂಶಿಸೋಣ

1.6.5 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1, 2, ಮತ್ತು3

1.6.6 ಘಟಕಾಂತ್ಯ ಅಭ್ಯಾಸಗಳು

1.6.7. ಪರಾಮರ್ಶನ ಸೂಚಿ


### 1.6.1 ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಅಂತರ್ಗತ ಮಕ್ಕಳಿಗೆ ದೊರೆಯುವ ಶೈಕ್ಷಣಿಕ ರಿಯಾಯಿತಿಗಳನ್ನು ವಿವರಿಸುವರು ;
- ಅಂತರ್ಗತ ಮಕ್ಕಳಿಗೆ ದೊರೆಯುವ ಶೈಕ್ಷಣಿಕ ಸೌಲಭ್ಯಗಳನ್ನು ವಿವರಿಸುವರು; ಮತ್ತು
- ಅಂತರ್ಗತ ಮಕ್ಕಳಿಗೆ ದೊರೆಯುವ ಶೈಕ್ಷಣಿಕ ಅವಕಾಶಗಳನ್ನು ವಿವರಿಸುವರು.

### 1.6.2. ಪೀಠಿಕೆ

ಶಾಲೆಗೆ ಬರುವ ಪ್ರತಿಯೊಂದು ಮಗುವೂ ಅನನ್ಯವಾದುದು ಎಂಬುದು ನಮಗೆ ತಿಳಿದಿದೆ. ಅವರಿಗೆ ವಿಭಿನ್ನ ಸಾಮರ್ಥ್ಯಗಳಿರುತ್ತವೆ. ಅವರು ವಿಭಿನ್ನ ರೀತಿಗಳಲ್ಲಿ ವಿಭಿನ್ನ ಸ್ಥಳಗಳಲ್ಲಿ ಕಲಿಯುತ್ತಾರೆ. ನಿರ್ದಿಷ್ಟವಾಗಿ ಶಾಲೆಗಳು ಮತ್ತು ಸಾಮಾನ್ಯವಾಗಿ ಸಮುದಾಯಗಳು ಮಕ್ಕಳಿಗೆ ಅವರು ಸಾಮಾಜಿಕ, ಭಾವನಾತ್ಮಕ, ಶೈಕ್ಷಣಿಕ, ದೈಹಿಕ ಇತ್ಯಾದಿ ಎಲ್ಲ ಆಯಾಮಗಳಲ್ಲಿ ಬೆಳೆಯುವಂತಹ ಪರಿಸರವನ್ನು ಸೃಷ್ಟಿಸಬೇಕು. ಮಗುವಿನ ಶೈಕ್ಷಣಿಕ

ಸಾಮರ್ಥ್ಯವನ್ನು ಇತರ ಆಯಾಮಗಳ ಸಾಮರ್ಥ್ಯದಿಂದ ಪ್ರತ್ಯೇಕವಾಗಿ ಬೆಳೆಸುವುದು ಸಾಧ್ಯವಿಲ್ಲ. ಈ ಪ್ರತಿಯೊಂದು ಆಯಾಮವೂ ಒಂದಕ್ಕೊಂದು ಪೂರಕವಾದವುಗಳು. ಹಾಗಾಗಿ ಈ ರೀತಿಯ ಬೆಳವಣಿಗೆಗೆ ಒಂದು ಸಮಗ್ರ ಬೆಂಬಲ ವ್ಯವಸ್ಥೆ ಅವಶ್ಯಕ. ಇಂತಹ ಒಂದು ಬೆಂಬಲ ವ್ಯವಸ್ಥೆ ಇಲ್ಲದ ಕಾರಣ ಅಸಾಮರ್ಥ್ಯವುಳ್ಳ ಬಹಳಷ್ಟು ಮಕ್ಕಳು ಮನೆಯ ಒಳಗೇ ಉಳಿದುಬಿಡುತ್ತಾರೆ , ಇಲ್ಲವೇ ಅರ್ಧದಲ್ಲೇ ಶಾಲೆ ಬಿಟ್ಟುಬಿಡುತ್ತಾರೆ, ಉಳಿದ ಮಕ್ಕಳು ತಮ್ಮ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುವಲ್ಲಿ ಸೋಲುತ್ತಾರೆ. ವೈಯಕ್ತಿಕವಾದ ಬೆಂಬಲ ಮೊದಲಿಗೆ ಅಧ್ಯಾಪಕರಿಂದ ದೊರೆಯಬೇಕು. ಅಧ್ಯಾಪಕರೂ ಒಬ್ಬಂಟಿಗರಾಗಿ ಈ ಕೆಲಸವನ್ನು ಸಮರ್ಥವಾಗಿ ಮಾಡಲಾರರು. ಅವರಿಗೆ ಶಾಲಾ ಆಧರಿತ ಸಂಚಾರಿ ಸಂಪನ್ಮೂಲ ಅಧ್ಯಾಪಕರ ಬೆಂಬಲ ಬೇಕಾಗುತ್ತದೆ. ಅಸಾಮರ್ಥ್ಯವುಳ್ಳ ಮಕ್ಕಳನ್ನು ಅರ್ಥಮಾಡಿಕೊಳ್ಳುವಲ್ಲಿ ಅವರಿಗೆ ಯಾವ ರೀತಿಯ ವಿಶೇಷ ಬೆಂಬಲ ಸೇವೆ ಅಗತ್ಯ ಎಂಬುದನ್ನು ನಿರ್ಧರಿಸುವಲ್ಲಿ ಮತ್ತು ನೀಡುವಲ್ಲಿ ಈ ವಿಶೇಷ ಶಿಕ್ಷಕರ ಸಹಾಯ ಅಧ್ಯಾಪಕರಿಗೆ ಅನಿವಾರ್ಯ. ಹೀಗಾಗಿ ಅಸಾಮರ್ಥ್ಯವಿರುವ ಮಕ್ಕಳಿಗೆ ಅಧ್ಯಾಪಕರು, ಶಾಲೆ, ಹಾಗೂ ಸಮುದಾಯದಿಂದ ಸಮಗ್ರವಾದ ರೀತಿಯಲ್ಲಿ ಬೆಂಬಲ ಅಗತ್ಯವಿರುತ್ತದೆ. ಈ ಬೆಂಬಲವು ಅವರಿಗೆ ಒದಗಿಸಬಹುದಾದ ರಿಯಾಯಿತಿಗಳು, ಸೌಲಭ್ಯಗಳು ಮತ್ತು ಕೊಡುವ ಅವಕಾಶಗಳ ರೀತಿಯಲ್ಲಿ ವ್ಯಕ್ತವಾಗುತ್ತವೆ. ನಮ್ಮ ಸಮಾಜವು ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಈಗಾಗಲೇ ಈ ವಿಷಯವನ್ನು ಮನಗಂಡು ಅಸಾಮರ್ಥ್ಯವುಳ್ಳ ಮಕ್ಕಳಿಗೆ/ ವಯಸ್ಕರಿಗೆ ಅನೇಕ ರೀತಿಯ ಬೆಂಬಲವನ್ನು ನೀಡುತ್ತಿದೆ. ಈ ಬೆಂಬಲವನ್ನೇ ನಾವು ಈ ಘಟಕದಲ್ಲಿ ಮೂರು ಅಂಶಗಳಲ್ಲಿ ಕಲಿಯುತ್ತಿದ್ದೇವೆ. ಅವೆಂದರೆ ಅಸಾಮರ್ಥ್ಯವಿರುವವರಿಗೆ ಲಭ್ಯವಿರುವ ರಿಯಾಯಿತಿಗಳು, ಸೌಲಭ್ಯಗಳು ಮತ್ತು ಅವಕಾಶಗಳು.

## 1.6.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 1.6.3.1. ಶೈಕ್ಷಣಿಕ ರಿಯಾಯಿತಿಗಳು

- ಅಸಾಮರ್ಥ್ಯವುಳ್ಳ ಮಕ್ಕಳು ಅತಿ ದೊಡ್ಡ ಸಂಖ್ಯೆಯಲ್ಲಿದ್ದು ಅದರಲ್ಲಿ ಬಹಳಷ್ಟು ಮಕ್ಕಳು ಶಾಲೆಯಿಂದ ಹೊರಗಿರುವ ಈ ಸನ್ನಿವೇಶದಲ್ಲಿ ಅಂತಹ ಮಕ್ಕಳು ಎಂಟು ವಯಸ್ಸಿನ ಮೇಲಿನವರಾಗಿದ್ದರೆ ಸಾಮಾನ್ಯ ಶಾಲೆಗಳಲ್ಲಿ ಅಂತರ್ಗತ ಸನ್ನಿವೇಶದಲ್ಲಿ ಶಿಕ್ಷಣ ಪಡೆಯುವ ಅವಕಾಶವನ್ನು ಸರ್ಕಾರವು ಕಲ್ಪಿಸಿಕೊಟ್ಟಿದೆ.
- ವಯಸ್ಕ ಸಮುದಾಯದಲ್ಲಿ ವಹಿಸುವ ಪಾತ್ರಗಳನ್ನು ಕಲಿಯಲು ಶಾಲೆ ಸಮರ್ಪಕವಾದ ಸ್ಥಳ ಎಂಬುದು ನಿರ್ವಿವಾದ. ಆದುದರಿಂದ ಅಸಾಮರ್ಥ್ಯವಿರುವ ವಿದ್ಯಾರ್ಥಿಗಳು ತಮ್ಮ ನೆರೆಕೆರೆಯವರಿಂದ ಭಿನ್ನವಾದ ಪ್ರತ್ಯೇಕ ಸನ್ನಿವೇಶದಲ್ಲಿ ಅಂದರೆ ವಿಶೇಷ ಶಾಲೆಗಳಲ್ಲಿ ಅಗತ್ಯವಾದ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ನಿರೀಕ್ಷಿಸುವುದೂ ಸರಿಯಾಗದು. ಅಂತಹ ಸನ್ನಿವೇಶದಲ್ಲಿ ಬೆಳೆದು ಸಮಾಜದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತಾಗಲು ಅವರಿಗೂ ಕಷ್ಟವಾಗುತ್ತದೆ. ಈ ಕಾರಣದಿಂದಾಗಿ ಅಂತರ್ಗತ ಶಿಕ್ಷಣವು ಪ್ರತ್ಯೇಕ ಸನ್ನಿವೇಶದಲ್ಲಿನ ಶಾಲೆಗಳನ್ನು, ಅಂದರೆ ವಿಶೇಷ ಶಾಲೆಗಳನ್ನು ನಿರಾಕರಿಸುತ್ತದೆ. ಸಾಮಾನ್ಯ ಶಿಕ್ಷಣ ಮತ್ತು ಅಂತರ್ಗತ ಶಿಕ್ಷಣದಲ್ಲಿ ಯಾವುದೇ ಭಿನ್ನತೆಯನ್ನೂ ಪರಿಗಣಿಸದೆ, ಶಿಕ್ಷಣ ಪಡೆಯಲು ಅಸಾಮರ್ಥ್ಯವಿರುವ ಮಕ್ಕಳು ಬದಲಾಗಬೇಕು ಎಂಬುದಕ್ಕಿಂತ ಶಾಲೆಯೇ ಬದಲಾಗಬೇಕು ಎಂಬ ತಾತ್ವಿಕತೆಯೇ ಅಂತರ್ಗತ ಶಿಕ್ಷಣದ ಮೂಲತತ್ವ.

- ಯಾವುದೇ ಅಸಾಮರ್ಥ್ಯಗಳಿರಲಿ, ಶಿಕ್ಷಣ, ಅದರಲ್ಲೂ ಗುಣಾತ್ಮಕ ಶಿಕ್ಷಣಕ್ಕೆ ಅವರಿಗೂ ಸಮಾನವಾದ ಹಕ್ಕು ಇದೆ. ಇದನ್ನು ಯಾವ ಶಾಲೆಯೂ ವ್ಯಕ್ತಿಯೂ ಅಲ್ಲಗಳೆಯುವಂತಿಲ್ಲ. ಇದನ್ನು ಸಾಧಿಸುವುದಕ್ಕಾಗಿಯೇ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಅಂತಹ ಮಕ್ಕಳಿಗೆ ವಿಶೇಷ ರಿಯಾಯಿತಿಗಳನ್ನು ಒದಗಿಸಿದೆ.

## ಅಸಾಮರ್ಥ್ಯವುಳ್ಳ ಮಕ್ಕಳಿಗೆ ಸರ್ಕಾರಿ ರಿಯಾಯಿತಿಗಳು :

ರಿಯಾಯಿತಿಯ ಪ್ರತಿ ವರ್ಗಕ್ಕೂ ಅರ್ಹತಾ ಅಗತ್ಯಗಳಿಗೆ ಹೊರತಾಗಿ, ಸೇವೆಯ ರೀತಿ, ಅಸಾಮರ್ಥ್ಯದ ವ್ಯಾಖ್ಯೆ, ಅರ್ಜಿಸಲ್ಲಿಸಬೇಕಾದ ನಮೂನೆಗೆ ಮಾರ್ಗದರ್ಶನ, ರಿಯಾಯಿತಿ ಪಡೆಯಬಹುದಾದ ವಿಧಾನ ಇತ್ಯಾದಿ ಎಲ್ಲ ಅಂಶಗಳನ್ನೂ ಕಾಲಕಾಲಕ್ಕೆ ಸ್ಪಷ್ಟಪಡಿಸಲಾಗುತ್ತಿರುತ್ತದೆ. ಈ ರಿಯಾಯಿತಿಗಳು ಕೆಳಕಂಡಂತಿವೆ:

- ಸವಾಲುಗಳುಳ್ಳ ವ್ಯಕ್ತಿಗಳಿಗೆ ಅಂತರ್ಗತ ಶಿಕ್ಷಣ: ಕೇಂದ್ರದಿಂದ ಪ್ರಾಯೋಜಿತವಾಗಿರುವ ಈ ಯೋಜನೆ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 1974 ರಲ್ಲಿ ಪ್ರಾರಂಭವಾಗಿ 1982ರಿಂದ ಶಿಕ್ಷಣ ಇಲಾಖೆಗೆ ವರ್ಗಾವಣೆಯಾಗಿದೆ. ಇದರ ಪ್ರಕಾರ ಅಸಾಮರ್ಥ್ಯವುಳ್ಳ ಮಕ್ಕಳು ಸಾಮಾನ್ಯ ಶಾಲೆಗಳಲ್ಲಿ ಶಿಕ್ಷಣ ಪಡೆಯಬಹುದು. ಈ ಯೋಜನೆಯಲ್ಲಿ ಕೆಳ ಕಂಡ ಭತ್ಯೆಗಳನ್ನು ಮತ್ತು ಸೌಲಭ್ಯಗಳನ್ನು ಒದಗಿಸಲಾಗಿದೆ.(ಇವುಗಳನ್ನು ಕಾಲದಿಂದ ಕಾಲಕ್ಕೆ ಮಾರ್ಪಡಿಸಲಾಗುತ್ತಿರುತ್ತದೆ).
- ಪುಸ್ತಕ ಮತ್ತು ಇತರ ಶೈಕ್ಷಣಿಕ ಸಾಮಗ್ರಿಗಳಿಗಾಗಿ(ಸ್ಟೇಷನರಿ): ವರ್ಷಕ್ಕೆ ರೂ 400/
- ಸಮವಸ್ತ್ರ ಭತ್ಯೆ: ವರ್ಷಕ್ಕೆ ರೂ 50/
- ಸಾರಿಗೆ ಭತ್ಯೆ: ತಿಂಗಳಿಗೆ ರೂ 50/(ಈ ಯೋಜನೆಯಡಿ ಪ್ರವೇಶಪಡೆದ ಮಕ್ಕಳು ಶಾಲೆಯ ಹಾಸ್ಟೆಲ್‌ನಲ್ಲಿದ್ದರೆ ಸಾರಿಗೆ ಭತ್ಯೆಗೆ ಅರ್ಹರಲ್ಲ)
- ಅಂಧರಿಗೆ ಓದುವವರ ಭತ್ಯೆ–5ನೇ ತರಗತಿಯ ನಂತರ: ತಿಂಗಳಿಗೆ ರೂ 50/
- ತೀವ್ರ ಅಸಾಮರ್ಥ್ಯತೆ ಇರುವವರಿಗೆ –ಬೆಂಗಾವಲಿರುವವರಿಗೆ– ತಿಂಗಳಿಗೆ ರೂ75/
- ಅಗತ್ಯ ಉಪಕರಣಗಳಿಗಾಗಿ ವಿದ್ಯಾರ್ಥಿಗೆ– ರೂ 2000/ ಐದು ವರ್ಷಗಳ ಅವಧಿಗೆ

ಅಂತರ್ಗತ ಶಿಕ್ಷಣ ಎಂದರೆ ಅಸಾಮರ್ಥ್ಯವಿರುವ ಮಕ್ಕಳನ್ನು ಅಸಾಮರ್ಥ್ಯವಿಲ್ಲದಿರುವ ಮಕ್ಕಳೊಂದಿಗೆ ಕೂರಿಸಿ ಶಿಕ್ಷಣ ಕೊಡುವುದು ಎಂದಷ್ಟೇ ಅರ್ಥವಲ್ಲ. ಅವರ ಭೌತಿಕ ಸನ್ನಿವೇಶವನ್ನೇ ಇವರೂ ಹಂಚಿಕೊಳ್ಳಬೇಕು ಎಂಬುದಷ್ಟೆ ಎಂದೂ ಹೇಳಲಾಗದು. ಅಂತರ್ಗತ ಶಿಕ್ಷಣವು ಆ ಮಕ್ಕಳೆಲ್ಲರನ್ನೂ ಸಾಂಪ್ರದಾಯಿಕ ತರಗತಿಗಳಿಗಿಂತ ಬೇರೆಯದೇ ಆದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದನ್ನು ಬಯಸುತ್ತದೆ.

## ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದಿಂದ ವಿಶೇಷ ಅವಕಾಶಗಳು.

1955ರಿಂದಲೂ ಕಲ್ಯಾಣ ಒಕ್ಕೂಟ ಸಚಿವಾಲಯವು ರಾಜ್ಯ ಸರ್ಕಾರಗಳು ಮತ್ತು ಒಕ್ಕೂಟಗಳ ಮೂಲಕ ಸರ್ಕಾರೇತರ ಸಂಸ್ಥೆಗಳು ನಡೆಸುತ್ತಿರುವ ವಿಶೇಷ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವ ಅಸಾಮರ್ಥ್ಯವುಳ್ಳ ವ್ಯಕ್ತಿಗಳಿಗೆ ಶಿಷ್ಯವೇತನ ಕೊಡುವಿಕೆ.

**ಮಕ್ಕಳ ಶೈಕ್ಷಣಿಕ ಭತ್ಯೆ:**

- ಸರ್ಕಾರಿ ನೌಕರರು ಅವರ ಕಾರ್ಯಸ್ಥಾನಕ್ಕಿಂತ ದೂರದಲ್ಲಿರುವ ಶಾಲೆಗೆ ತಮ್ಮ ಮಕ್ಕಳನ್ನು ಕಳುಹಿಸಬೇಕಾಗಿ ಬಂದರೆ 'ಮಕ್ಕಳ ಶಿಕ್ಷಣ ಭತ್ಯೆ'ಯನ್ನು ಪಡೆಯಲು ಅರ್ಹರಾಗುತ್ತಾರೆ. ಮಾನಸಿಕ ಸವಾಲುಗಳುಳ್ಳ ಮಕ್ಕಳಿಗಾಗಿ ಪಾವತಿಸಿದ ಬೋಧನಾ ಶುಲ್ಕವನ್ನು ತಿಂಗಳಿಗೆ ರೂ. 50/– ರಂತೆ ಹೆತ್ತವರು ಹಿಂಪಡೆಯಬಹುದು.

**ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ, ಭಾರತ ಸರ್ಕಾರದಿಂದ ಅಸಾಮರ್ಥ್ಯವಿರುವವರಿಗಾಗಿ ಯೋಜನೆಗಳು:**

- ರಾಜ್ಯ ಸರ್ಕಾರದ ವತಿಯಿಂದ: 9ನೇ ತರಗತಿಗೆ ಮೇಲ್ಪಟ್ಟವರಿಗೆ ಶಿಷ್ಯವೇತನ.
- ಕೃತಕ ಅಂಗಗಳು ಅಥವಾ ಮೂಳೆದೋಷ ಅಥವಾ ಶ್ರವಣ ದೋಷ ಸಂಬಂಧಿತ ಸಹಾಯಕ ಸಾಧನಗಳು. ತಿಂಗಳಿಗೆ ರೂ. 5,000ಕ್ಕಿಂತ ಕಡಿಮೆ ವರಮಾನವಿರುವ ಕುಟುಂಬಗಳಿಗೆ ಸಂಪೂರ್ಣ ರಿಯಾಯಿತಿ, ತಿಂಗಳಿಗೆ ವರಮಾನ ರೂ. 5,000ದಿಂದ ರೂ. 8,000ಇರುವವರಿಗೆ ಶೇ 50ರಷ್ಟು ಶುಲ್ಕ.
- ಸ್ವಯಂ ಸೇವಾ ಸಂಸ್ಥೆಗಳಿಗೆ ಅನುದಾನ: ಸರ್ಕಾರೇತರ ಸಂಸ್ಥೆಗಳನ್ನು ಅಸಾಮರ್ಥ್ಯವಿರುವವರಿಗಾಗಿ ಕೆಲಸಮಾಡುವಂತೆ ಉತ್ತೇಜಿಸಲು ಸಮಾಜ ನೋಂದಣಿ ಕಾಯಿದೆಯಡಿ (Society's Registration Act) ದಾಖಲಾಗಿರುವ ಸಂಸ್ಥೆಗಳಿಗೆ ಅನುದಾನ ನೀಡಲಾಗುತ್ತದೆ. ಸಾರ್ವಜನಿಕ ಟ್ರಸ್ಟ್ ಆಕ್ಟ್ (Public Trust Act) ಪ್ರಕಾರ ಅವರು ಕನಿಷ್ಟ ಎರಡು ವರ್ಷಗಳಿಂದ ಕ್ರಿಯಾಶೀಲರಾಗಿರಬೇಕು ಮತ್ತು ಲಾಭಕ್ಕಾಗಿ ಕೆಲಸ ಮಾಡುತ್ತಿರಬಾರದು.
- ಭಾರತ ಸರ್ಕಾರದ ಕಾರ್ಮಿಕ ಸಚಿವಾಲಯವು ಅಸಾಮರ್ಥ್ಯವಿರುವವರಿಗೆ ದೇಶದ ವಿವಿಧ ರಾಜ್ಯಗಳಲ್ಲಿ ಪುನರ್ವಸತಿ ಕೇಂದ್ರಗಳನ್ನು ಮತ್ತು ಅವರಿಗೆ ಉದ್ಯೋಗ ದೊರೆಯುವಂತೆ ಸಹಾಯಮಾಡಲು ವಿಶೇಷ ಉದ್ಯೋಗ ವಿನಿಮಯ ಕೇಂದ್ರಗಳನ್ನೂ ನಡೆಸುತ್ತಿದೆ.
- ಭಾರತ ಸರ್ಕಾರದ ಶಿಕ್ಷಣ ಸಚಿವಾಲಯವು ಅಸಾಮರ್ಥ್ಯವಿರುವವರಿಗೆ ಅಂತರ್ಗತ ಶಿಕ್ಷಣ ಯೋಜನೆಯನ್ನು ಅಳವಡಿಸಿದೆ. ರಾಜ್ಯ ಸರ್ಕಾರದ ವತಿಯಿಂದ ಈ ಯೋಜನೆಯಡಿ ಸಾಮಾನ್ಯ ಶಾಲೆಗಳಲ್ಲಿ, ಎಂಟು ಅಸಾಮರ್ಥ್ಯವುಳ್ಳ ಮಕ್ಕಳಿಗೆ ಒಬ್ಬರಂತೆ ಸಂಪನ್ಮೂಲ ಅಧ್ಯಾಪಕರನ್ನು ಒದಗಿಸಲಾಗುತ್ತದೆ. ಇದರ ಜೊತೆಗೆ, ಪುಸ್ತಕಗಳು, ಶೈಕ್ಷಣಿಕ ಉಪಕರಣಗಳು, ಸಮವಸ್ತ್ರ, ಸಾರಿಗೆ, ಅಂಧರಿಗೆ 'ಓದುಗರು', ಬೆಂಗಾವಲಿಗರಿಗೆ ಭತ್ಯೆ, ಮತ್ತು ಸಹಾಯಕ ಉಪಕರಣಗಳ ಮೂಲ ಬೆಲೆ–ಇವುಗಳಿಗೂ ಅವಕಾಶವಿದೆ.
- ಭಾರತ ಸರ್ಕಾರದ ಆರೋಗ್ಯ ಸಚಿವಾಲಯವು ಗ್ರಾಮೀಣ ಪ್ರದೇಶಗಳಲ್ಲಿ ಅಸಾಮರ್ಥ್ಯವಿರುವವರ ಪುನರ್ವಸತಿಗಾಗಿ ಪುನರ್ವಸತಿ ಕೇಂದ್ರಗಳನ್ನು ನಡೆಸುತ್ತಿದೆ.

**ಅಸಾಮರ್ಥ್ಯವಿರುವವರಿಗಾಗಿ ಶಿಷ್ಯವೇತನಗಳು :**

- 1955ರಿಂದಲೂ ಕಲ್ಯಾಣ ಒಕ್ಕೂಟ ಸಚಿವಾಲಯವು ರಾಜ್ಯ ಸರ್ಕಾರಗಳು ಮತ್ತು ಒಕ್ಕೂಟಗಳ ಮೂಲಕ ಸರ್ಕಾರೇತರ ಸಂಸ್ಥೆಗಳು ನಡೆಸುತ್ತಿರುವ ವಿಶೇಷ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವ

ಅಸಾಮರ್ಥ್ಯವುಳ್ಳ ವ್ಯಕ್ತಿಗಳಿಗೆ ಶಿಷ್ಯವೇತನವನ್ನು ಕೊಡುವ ಯೋಜನೆಯನ್ನು ನಡೆಸಿಕೊಂಡು ಬರುತ್ತಿದೆ. ಈ ಶಿಷ್ಯವೇತನವನ್ನು ಚಿಕಿತ್ಸಕ ಮನೋವಿಜ್ಞಾನಿಗಳಿಂದ ಅಥವಾ ಮನೋರೋಗ ವೈದ್ಯರಿಂದ ಪ್ರಮಾಣಪತ್ರ ಪಡೆದ ಬುದ್ಧಿಮಾಂದ್ಯ ಮಕ್ಕಳಿಗೆ ನೀಡಲಾಗುತ್ತದೆ. ಕೆಳವರ್ಗದ ಸಾಮಾಜಿಕ ಆರ್ಥಿಕ ಬಂದ ಮಕ್ಕಳಿಗೆ ವಾರ್ಷಿಕ ರೂ 1000/ ನೀಡಲಾಗುತ್ತದೆ. ಇದನ್ನು ಪ್ರತಿವರ್ಷವೂ ನವೀಕರಿಸಬಹುದು. ತೀವ್ರವಾದ ಅಸಾಮರ್ಥ್ಯವಿರುವವರಿಗೆ ಸಾರಿಗೆಗಾಗಿ ರೂ50/ ಅಥವಾ ತಗಲುವಷ್ಟು ಖರ್ಚು ಇವುಗಳಲ್ಲಿ ಯಾವುದು ಕಡಿಮೆ ಇರುತ್ತದೆಯೋ ಅದನ್ನು ಕೊಡಲಾಗುವುದು. ಇವು ಅಸಾಮರ್ಥ್ಯವುಳ್ಳವರಿಗೆ ಸರ್ಕಾರವು ಕೊಡುವ ಪ್ರಮುಖ ರಿಯಾಯತಿಗಳು.

ಈ ಮಕ್ಕಳೊಡನೆ ಕೆಲಸಮಾಡುವ ಅಧ್ಯಾಪಕರು ಮಕ್ಕಳಿಗೆ ಅಥವಾ ಅವರ ಹೆತ್ತವರಿಗೆ ಈ ರಿಯಾಯಿತಿಗಳ ಕುರಿತ ಅರಿವು ಮೂಡಿಸಬೇಕು. ಅವರು ಅದನ್ನು ಪಡೆಯಲು ಸಹಾಯಮಾಡಬೇಕು. ಅಸಾಮರ್ಥ್ಯವುಳ್ಳವರು ಶಿಕ್ಷಣ ಪಡೆದು ಸ್ವತಂತ್ರ ಜೀವನ ನಡೆಸಲು ಸಾಧ್ಯವಾಗುವಂತೆ ಅನುವು ಮಾಡಿಕೊಡಬೇಕು.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 1

ಕೇಂದ್ರದಿಂದ ಪ್ರಾಯೋಜಿತವಾಗಿರುವ 'ಸವಾಲುಗಳುಳ್ಳ ವ್ಯಕ್ತಿಗಳಿಗೆ ಅಂತರ್ಗತ ಶಿಕ್ಷಣ' ಯೋಜನೆಯ ಪ್ರಕಾರ ಸಿಗುವ ರಿಯಾಯಿತಿಗಳಿಗೆ ಸಂಬಂಧಿಸಿದಂತೆ ಕೆಳಗೆ ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಮಾಹಿತಿಯಿಂದ ಪೂರ್ಣಗೊಳಿಸಿ:

1. ಅಗತ್ಯ ಉಪಕರಣಗಳಿಗಾಗಿ ವಿದ್ಯಾರ್ಥಿಗೆ ಐದು ವರ್ಷಗಳ ಅವಧಿಗೆ ಸಿಗುವ ಮೊಬಲಗು ____________________
2. ಕಾರ್ಯಸ್ಥಾನಕ್ಕಿಂತ ದೂರದಲ್ಲಿರುವ ಶಾಲೆಗೆ ಮಕ್ಕಳನ್ನು ಕಳುಹಿಸುವ ಸರ್ಕಾರಿ ನೌಕರರಿಗೆ ಸಿಗುವ 'ಮಕ್ಕಳ ಶಿಕ್ಷಣ ಭತ್ಯೆ____________
3. ಅಂಧರಿಗೆ ಸಿಗುವ ಓದುವವರ ಭತ್ಯೆ–5ನೇ ತರಗತಿಯ ನಂತರ: ತಿಂಗಳಿಗೆ____________
4. ತೀವ್ರ ಅಸಾಮರ್ಥ್ಯತೆ ಇರುವವರಿಗೆ –ಬೆಂಗಾವಲಿರುವವರಿಗೆ– ತಿಂಗಳಿಗೆ ____________
5. ಪುಸ್ತಕ ಮತ್ತು ಇತರ ಶೈಕ್ಷಣಿಕ ಸಾಮಗ್ರಿಗಳಿಗಾಗಿ (ಸ್ಟೇಷನರಿ) ವರ್ಷಕ್ಕೆ ____________

## 1.6.3.2 ಸೌಲಭ್ಯಗಳು

ಅಸಾಮರ್ಥ್ಯವುಳ್ಳವರನ್ನು ಅಂತರ್ಗತಶಾಲೆಗಳಲ್ಲಿರಿಸಲು ಅನೇಕ ಅಡಚಣೆಗಳಿವೆ. ಸಾಮಾನ್ಯ ಶಾಲೆಗಳಲ್ಲಿ ಅಸಾಮರ್ಥ್ಯವಿರುವವರಿಗೆ ಶಿಕ್ಷಣ ಕೊಡುವಲ್ಲಿ ಅವರಿಗೆ ಅನೇಕ ಸೌಲಭ್ಯಗಳ ಅಗತ್ಯವಿರುತ್ತದೆ. ಇಂತಹ ಸೌಲಭ್ಯಗಳನ್ನು ಒದಗಿಸಿದಾಗ ಮಾತ್ರ ಅವರಿಗೆ ಆ ಸನ್ನಿವೇಶದಲ್ಲಿರಲು ಸುಲಭವೂ ಹರ್ಷದಾಯಕವೂ ಆಗುತ್ತದೆ. ಈ ಸೌಲಭ್ಯಗಳು ಅವರಿಗೆ ಅಸಾಮರ್ಥ್ಯವಿಲ್ಲದವರ ಜೊತೆಯಲ್ಲಿ ಕ್ರಿಯಾಶೀಲವಾಗಿರಲು ಸಹಕಾರಿಯಾಗುತ್ತದೆ. ಈ ರೀತಿಯ ಸೌಲಭ್ಯಗಳಲ್ಲಿ ಅವರಿಗೆ ಈಗ ಯಾವ ರೀತಿಯ ಸೌಲಭ್ಯಗಳನ್ನು ಕೊಡಲಾಗುತ್ತಿದೆ ಎಂಬುದನ್ನು ಗಮನಿಸೋಣ.

ಅಸಾಮರ್ಥ್ಯವಿರುವವರಿಗೆ ಶಿಕ್ಷಣ ಕೊಡುವಲ್ಲಿ ಮೊದಲಿಗೆ ಅಡ್ಡಿಯಾದ ಅಡಚಣೆ ಎಂದರೆ ಅವರ ಬಡತನ. ಅಸಾಮರ್ಥ್ಯತೆ ಮತ್ತು ಬಡತನಕ್ಕೆ ನಂಟು ಇದೆ. ಅಸಾಮರ್ಥ್ಯ ಬಡತನವನ್ನು ಸೃಷ್ಟಿಸಬಹುದು ಅಥವಾ ಬಡತನ ಅಸಾಮರ್ಥ್ಯವನ್ನು ಫಲಿಸಬಹುದು. ಭಾರತದ ಈ ಸನ್ನಿವೇಶ ಅಂತರ್ಗತ ಶಿಕ್ಷಣದ ಸನ್ನಿವೇಶದಲ್ಲಿ ವಿಶಿಷ್ಟ ಸವಾಲುಗಳನ್ನು ಸೃಷ್ಟಿಸುತ್ತದೆ.

ಅಂತರ್ಗತ ಶಿಕ್ಷಣ ಎಂದರೆ ಅಸಾಮರ್ಥ್ಯವಿರುವ ಮಕ್ಕಳನ್ನು ಅಸಾಮರ್ಥ್ಯವಿಲ್ಲದಿರುವ ಮಕ್ಕಳೊಂದಿಗೆ ಕೂರಿಸಿ ಶಿಕ್ಷಣ ಕೊಡುವುದು ಎಂದಷ್ಟೇ ಅರ್ಥವಲ್ಲ. ಅವರ ಭೌತಿಕ ಸನ್ನಿವೇಶವನ್ನೇ ಇವರೂ ಹಂಚಿಕೊಳ್ಳಬೇಕು ಎಂಬುದಷ್ಟೆ ಎಂದೂ ಹೇಳಲಾಗದು. ಅಂತರ್ಗತ ಶಿಕ್ಷಣವು ಆ ಮಕ್ಕಳೆಲ್ಲರನ್ನೂ ಸಾಂಪ್ರದಾಯಿಕ ತರಗತಿಗಳಿಗಿಂತ ಬೇರೆಯದೇ ಆದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದನ್ನು ಬಯಸುತ್ತದೆ. ಹೀಗಾಗಿ ಅಂತರ್ಗತೆ ಗುರಿಯಾದಾಗ ಅಧ್ಯಾಪಕರು, ಹೆತ್ತವರು ಮತ್ತು ಮಕ್ಕಳು ಎಲ್ಲರೂ ಅದರ ಸ್ವರೂಪ ಮತ್ತು ಮೌಲ್ಯವನ್ನು ಸ್ಪಷ್ಟವಾಗಿ ಅಂತರ್ಗತಗೊಳಿಸಿಕೊಳ್ಳಬೇಕು. ಆಗಲೇ ಅದು ಎಲ್ಲರಿಗೂ ಉಪಯುಕ್ತವಾಗುವುದು. ಇದು ಸಾಧ್ಯವಾಗಬೇಕಾದರೆ ಒಟ್ಟು ಸನ್ನಿವೇಶದಲ್ಲಿ ವಿಶೇಷ ಸೌಲಭ್ಯಗಳು ಅನಿವಾರ್ಯವಾಗುತ್ತವೆ. ಈ ಸೌಲಭ್ಯಗಳೂ ಇದ್ದರೆ ಸಾಕಾಗುವುದಿಲ್ಲ. ಈ ಸಂಪನ್ಮೂಲಗಳು, ಒಟ್ಟು ಶಾಲೆಯ ಸದ್ಭಾವನೆ ಮತ್ತು ನಿರ್ವಹಣೆ ಈ ಮೂರರ ತ್ರಿವೇಣಿ ಸಂಗಮವನ್ನು ಅಂತರ್ಗತ ಶಿಕ್ಷಣ ಬಯಸುತ್ತದೆ.

### ಅಸಾಮರ್ಥ್ಯವಿರುವವರಿಗೆ ಶಾಲೆಯಲ್ಲಿ ಉತ್ತಮ ಭೌತಿಕ ಅವಕಾಶಕ್ಕೆ ಎಡೆಮಾಡಿಕೊಡುವುದು:

ಅಸಾಮರ್ಥ್ಯವಿರುವವರಿಗೆ ಅವರ ಚಲನೆ ಮತ್ತು ಕೆಲಸಗಳು ಸುಗಮವಾಗಲು ಪರಿಸರ ಅಡ್ಡಿಮುಕ್ತವಾಗಿರಬೇಕು. ಬಹಳಷ್ಟು ಶಾಲೆಗಳ ಕಟ್ಟಡಗಳು ಈ ರೀತಿ ಅಡ್ಡಿಮುಕ್ತವಾಗಿರುವುದಿಲ್ಲ. ಇದು ಅಸಾಮರ್ಥ್ಯವುಳ್ಳವರಿಗೆ ತೊಂದರೆಯುಂಟುಮಾಡುತ್ತದೆ. ಅಸಾಮರ್ಥ್ಯವುಳ್ಳವರ ಕಾಯಿದೆ 1995 ಅಸ್ತಿತ್ವದಲ್ಲಿರುವ ಮತ್ತು ಮುಂದೆ ಕಟ್ಟಲಾಗುವ ಎಲ್ಲ ಶಾಲಾ ಕಟ್ಟಡಗಳನ್ನೂ ಅಡ್ಡಿಮುಕ್ತವಾಗಿಸಿ ಅಸಾಮರ್ಥ್ಯವುಳ್ಳವರ ಸ್ನೇಹಿಯಾಗಿಸಲಾಗುತ್ತದೆ ಎಂದು ಆಶ್ವಾಸನೆ ನೀಡಿದೆ. ಹಾಗಾಗಿ ಶಿಕ್ಷಣ ಸಂಸ್ಥೆಗಳು ಇಳಿಜಾರುಗಳು, ಜಾರು ನೆಲಗಳು, ವಿಶೇಷ ಶೌಚಾಲಯಗಳು, ವಿಶೇಷ ಮಾರ್ಪಾಡುಗಳುಳ್ಳ ತರಗತಿಗಳು ಮತ್ತು ಅಗತ್ಯವಾದ ಇತರ ಸೌಕರ್ಯಗಳನ್ನು ಗಮನಿಸಿ ಅವುಗಳು ಒದಗುವಂತೆ ನೋಡಿಕೊಳ್ಳಬೇಕು. ಅಸಾಮರ್ಥ್ಯವುಳ್ಳವರಿಗೆ ಅಗತ್ಯವಾಗಿ ಮಾಡಬೇಕಾದ ಭೌತಿಕ ಸೌಲಭ್ಯಗಳ ಮಾರ್ಗದರ್ಶಿಯನ್ನು ಅಸಾಮರ್ಥ್ಯರ ಕಛೇರಿಯ ಮುಖ್ಯ ಆಯೋಜಕರ ಕಛೇರಿ ಒದಗಿಸಿದೆ.

### ಅಸಾಮರ್ಥ್ಯವಿರುವವರಿಗೆ ಶೈಕ್ಷಣಿಕ ಸೇವೆಗಳನ್ನು ಹೆಚ್ಚಿಸಲು ವಿಶೇಷ ಉಪಕರಣಗಳನ್ನು ಒದಗಿಸುವಿಕೆ

ಅಸಾಮರ್ಥ್ಯವಿರುವವರ ದೈನಂದಿನ ಕೆಲಸಗಳಿಗೆ ವಿಶೇಷ ಸಾಧನಗಳ ಮತ್ತು ಉಪಕರಣಗಳ ಅಗತ್ಯವಿರುತ್ತದೆ. ಈ ಸಾಧನಗಳು ಮತ್ತು ಉಪಕರಣಗಳು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ವಿವಿಧ ಯೋಜನೆಗಳ ಅಡಿಯಲ್ಲಿ ಸಿಗುತ್ತವೆ.

### ಅಸಾಮರ್ಥ್ಯವಿರುವವರಿಗೆ ಅಗತ್ಯವಾದ ಸಾಧನಗಳನ್ನು ಕೊಳ್ಳಲು ಸಹಾಯ :

ಒಕ್ಕೂಟ ಕಲ್ಯಾಣ ಸಚಿವಾಲಯದಲ್ಲಿ ಈ ಉದ್ದೇಶಕ್ಕಾಗಿ ಕೆಲವು ಯೋಜನೆಗಳಿವೆ. ಇದು ಅಸಾಮರ್ಥ್ಯವುಳ್ಳ ಎಲ್ಲ ಉದ್ಯೋಗಿಗಳಿಗೂ, ಸ್ವ-ಉದ್ಯೋಗಿಗಳಿಗೂ ಪಿಂಚಣಿದಾರರಿಗೂ ಅವರ ಮಾಸಿಕ ಆದಾಯ

ರೂ. 2500 ಮೀರದಿದ್ದರೆ ಸಿಗುತ್ತದೆ. ಈ ಸೇವೆಯ ಧನಸಹಾಯ ರೂ25 ರಿಂದ ರೂ 3600ರ ವ್ಯಾಪ್ತಿಯಲ್ಲಿದೆ. ಅಸಾಮರ್ಥ್ಯವುಳ್ಳವರ ಮಾಸಿಕ ಆದಾಯ ರೂ 1200ರವರೆಗಿದ್ದರೆ ಆ ಸಾಧನ ಅಥವಾ ಉಪಕರಣದ ಸಂಪೂರ್ಣ ಬೆಲೆಯಷ್ಟು ಹಣವನ್ನು, ರೂ. 1,202/ಮತ್ತು 2500ರೂಗಳ ನಡುವೆ ಇದ್ದರೆ ಅರ್ಧದಷ್ಟು ಹಣವನ್ನು ಮರುಪಾವತಿಸಲಾಗುತ್ತದೆ.

## ಆದ್ಯತೆಯ ಮೇರೆಗೆ ಮನೆ ನಿವೇಶನಗಳ ಹಂಚಿಕೆ :

ಬಹಳಷ್ಟು ಹೌಸಿಂಗ್ ಬೋರ್ಡ್‌ಗಳು ಮತ್ತು ನಗರ ಕಲ್ಯಾಣ ಪ್ರಾಧಿಕಾರಗಳು ಅಸಾಮರ್ಥ್ಯವಿರುವವರಿಗೆ ಆದ್ಯತೆಯ ಮೇರೆಗೆ ಮನೆ ನಿವೇಶನಗಳ ಹಂಚಿಕೆ ಮಾಡುವ ಯೋಜನೆಗಳನ್ನು ಹೊಂದಿವೆ. ಕಟ್ಟಿರುವ ಮನೆಗಳನ್ನು ಹಂಚಿಕೆಯ ಸಂದರ್ಭದಲ್ಲಿ ಅಸಾಮರ್ಥ್ಯವುಳ್ಳವರಿಗೆ ಆದ್ಯತೆ ನೀಡಲಾಗುತ್ತದೆ.

## ಉದ್ಯೋಗಕ್ಕೆ ಸಂಬಂಧಿಸಿದ ನೇಮಕಾತಿ ಮಾಡುವ ಸಂದರ್ಭಗಳಲ್ಲಿ ಆದ್ಯತೆ

ಭಾರತ ಸರ್ಕಾರ, ಸಿಬ್ಬಂದಿ ಮತ್ತು ತರಬೇತಿ ವಿಭಾಗವು (vide O.M.-No. AB-14017/41/90-Estt (RR) DT 15th February 1991) ಬುದ್ಧಿಮಾಂದ್ಯವಿರುವ ಮಕ್ಕಳ ಹೆತ್ತವರು ಸರ್ಕಾರಿ ಸೇವೆಯಲ್ಲಿದ್ದರೆ, ಅನುಕಂಪದ ನೆಲೆಯಲ್ಲಿ ಅವರಿಗೆ ಅವರ ಆದ್ಯತೆ ಇರುವ ಸ್ಥಳದಲ್ಲಿ ಅವಕಾಶ ಮಾಡಿಕೊಡಲು ಸರ್ಕಾರಿ ವಿಭಾಗಗಳು ಮತ್ತು ಸಚಿವಾಲಯಗಳನ್ನು ವಿನಂತಿಸಿಕೊಳ್ಳಲಾಗಿದೆ.

## ವಿಶೇಷ ಅಗತ್ಯವಿರುವ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ

ಸಾಮರ್ಥ್ಯವಿರುವ ಮಕ್ಕಳಿಗೆ ಸಮರ್ಪಕವಾದ ಉಪಕ್ರಮಗಳು, ಆಯ್ಕೆಗಳು ಮತ್ತು ಮಾರ್ಗೋಪಾಯಗಳಿಗೆ ಸಂಬಂಧಿಸಿದಂತೆ ವಿಶಾಲವಾದ ಆಯ್ಕೆ ಇದೆ. ಇವು ಕೆಳಗಿನವುಗಳನ್ನು ಒಳಗೊಳ್ಳುತ್ತದೆ.

- **ಬೆಂಬಲ ಸೇವೆಗಳು:** ಅಸಾಮರ್ಥ್ಯವಿರುವವರನ್ನು ಶಾಲೆಯಲ್ಲಿ ಉಳಿಸಿಕೊಳ್ಳಲು ನಿರಂತರವಾದ ಪ್ರಧಾನ ಆವಶ್ಯಕ ಸೇವೆಗಳು ಅವಶ್ಯಕ. ಇವು ವರ್ಗ(ಅಸಾಮರ್ಥ್ಯದ) ವಿಶಿಷ್ಟವಾಗಿದ್ದು, ಮಗುವಿನ ಅಗತ್ಯಕ್ಕೆ ಅನುಗುಣವಾಗಿ ಇವುಗಳನ್ನು ಒದಗಿಸಬೇಕು. ಮಗುವಿನ ಅಗತ್ಯಕ್ಕೆ ಅನುಗುಣವಾಗಿ ಉಪಕರಣಗಳನ್ನು/ ಸಾಧನಗಳನ್ನು ಕಾಲಕಾಲಕ್ಕೆ ಉನ್ನತೀಕರಿಸುವುದು, ಪರ್ಯಾಯ ಸಂವಹನ ಸಾಧನದ ಪರಿಣಾಮವನ್ನು ಹೆಚ್ಚಿಸಲು ತಂತ್ರಜ್ಞಾನಾತ್ಮಕವಾದ ಒತ್ತಾಸೆಗಳನ್ನು ನೀಡುವುದು ಇತ್ಯಾದಿ. ಅಸಾಮರ್ಥ್ಯವುಳ್ಳ ಮಕ್ಕಳಿಗೆ ಸಂಬಂಧಿಸಿದಂತೆ ಗರಿಷ್ಟ ಪ್ರಮಾಣದ ಬೆಂಬಲ ಸೇವೆಗಳನ್ನು ನೀಡಬೇಕು.
- **ಪಠ್ಯಕ್ರಮ ಹೊಂದಾಣಿಕೆ :** ಅಂತರ್ಗತ ಶಿಕ್ಷಣದಲ್ಲಿ ಮಾಡಬೇಕಾದ ಪಠ್ಯಕ್ರಮ ಹೊಂದಾಣಿಕೆಯ ವಿಷಯ ಎಲ್ಲ ಶಿಕ್ಷಕ ತರಬೇತಿ ಕಾರ್ಯಕ್ರಮಗಳ ಪ್ರಮುಖ ಭಾಗವಾಗಬೇಕು. ಅಂತರ್ಗತ ಬೋಧನೆಯಲ್ಲಿ, ಅಸಾಮರ್ಥ್ಯವುಳ್ಳ ಮಕ್ಕಳ ಅಗತ್ಯಗಳನ್ನು ಪೂರೈಸುವ ಹೊಂದಾಣಿಕೆ ಮಾಡುವುದು ಅತ್ಯಂತ ಪ್ರಮುಖವಾಗುತ್ತದೆ.
- **ಅಧ್ಯಾಪಕ ಶಿಕ್ಷಣ :** ಅಧ್ಯಾಪಕ ಶಿಕ್ಷಣದಲ್ಲಿನ ಹೂಡಿಕೆ ಅಸಾಮರ್ಥ್ಯವುಳ್ಳವರ ಶಿಕ್ಷಣವನ್ನು ಪರಿಣಾಮಕಾರಿಯಾಗಿಸುವ ಮತ್ತೊಂದು ಅಂಶ. ಸೇವಾಪೂರ್ವ ಮತ್ತು ಸೇವಾನಿರತ ತರಬೇತಿಗಳೆರಡರಲ್ಲೂ ಈ ವಿಷಯಕ್ಕೆ ವಿಶೇಷ ಆದ್ಯತೆ ನೀಡಬೇಕು. ಅಧ್ಯಾಪಕರು ಈ

ಸನ್ನಿವೇಶವನ್ನು ಪರಿಣಾಮಕಾರಿಯಾಗಿ ಎದುರಿಸಲು ಸಮರ್ಥರನ್ನಾಗಿಸಬೇಕು. ಎನ್.ಸಿ.ಟಿ.ಇ. ಸಂಸ್ಥೆಯು ಶಿಕ್ಷಕ ಶಿಕ್ಷಣ ಕೋರ್ಸಿನಲ್ಲಿ ಈ ಕುರಿತ ಒಂದು ಪ್ರತ್ಯೇಕ ಪತ್ರಿಕೆಯನ್ನು ನಿಗದಿಪಡಿಸಿದೆ. ಭಾರತದ ಪುನರ್ವಸತಿ ಮಂಡಳಿಯು ಈ ನಿರ್ದಿಷ್ಟ ಅಸಾಮರ್ಥ್ಯಗಳನ್ನು ಕುರಿತ ವಿಶೇಷ ಶಿಕ್ಷಣ ಕೋರ್ಸುಗಳನ್ನು ನೀಡುತ್ತಿದೆ. ಸಾಮಾನ್ಯ ಶಿಕ್ಷಕ ತರಬೇತಿ ಕೋರ್ಸುಗಳನ್ನು ಪುನಾರಚಿಸಿ ಎಲ್ಲ ಶಿಕ್ಷಕರೂ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಶಿಕ್ಷಣ ನೀಡುವಂತಾದರೆ ಮಾತ್ರ ತಜ್ಞ ಸಿಬ್ಬಂದಿಗಳ ಕೊರತೆಯನ್ನು ನೀಗಿಸಬಹುದು. ಸಾಮಾನ್ಯ ಶಾಲೆಗಳ ಶಿಕ್ಷಕರಿಗೆ ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣಕ್ಕೆ ಮಾಡಿಕೊಳ್ಳಬೇಕಾದ ಹೊಂದಾಣಿಕೆಯನ್ನು ಕುರಿತ ತರಬೇತಿ ನೀಡುವುದು ಆದ್ಯತೆಯ ವಿಷಯವಾಗಬೇಕು. ಪುನಶ್ಚೇತನ ಮತ್ತು ತರಬೇತಿ ಕಾರ್ಯಕ್ರಮಗಳಿಂದ ಇದನ್ನು ಮಾಡಲು ಸಾಧ್ಯವಿದೆ.

- **ಸಂಪನ್ಮೂಲ ಬೆಂಬಲ :** ವಿವಿಧ ರೀತಿಯ ಅಸಾಮರ್ಥ್ಯಗಳಿಗೆ ನಿರ್ದಿಷ್ಟ ಸಂಪನ್ಮೂಲ ಅಧ್ಯಾಪಕರು ಮತ್ತು ವಾಕ್ ಚಿಕಿತ್ಸಕರು, ಭೌತಚಿಕಿತ್ಸಕರು (Physiotherapist)ಗಳನ್ನು ಬ್ಲಾಕ್ ಮತ್ತು ಕ್ಲಸ್ಟರ್ ಹಂತಗಳಲ್ಲಿ ಅಸಾಮರ್ಥ್ಯ ಮಕ್ಕಳ ಸಂಖ್ಯೆಗನುಗುಣವಾಗಿ 1:5 ರ ಅನುಪಾತದಲ್ಲಿ ನಿಯೋಜಿಸಿಕೊಳ್ಳಬಹುದು. ಇವರು ಸೆಕೆಂಡರಿ ಹಾಗೂ ಉನ್ನತ ಸೆಕೆಂಡರಿ ಹಂತಗಳಲ್ಲಿ ಸಾಮಾನ್ಯ ಅಧ್ಯಾಪಕರ ಗುಂಪುಗಳೊಂದಿಗೆ ಕೆಲಸ ಮಾಡಬಹುದು. ನಿರ್ದಿಷ್ಟ ವಿಷಯಗಳನ್ನು ಬೋಧಿಸಲು ಸಾಮಾನ್ಯ ಶಿಕ್ಷಕರು ಇದ್ದೇ ಇರುತ್ತಾರೆ. ಆದರೆ ಸಂಪನ್ಮೂಲ ಅಧ್ಯಾಪಕರು ವಿವಿಧ ಅಸಾಮರ್ಥ್ಯತೆಯ ವಿಷಯಗಳಲ್ಲಿ, ಉದಾಹರಣೆಗೆ, ದೃಷ್ಟಿದೋಷ, ಶ್ರವಣ ದೋಷ, ಕಲಿಕಾ ಕ್ಲಿಷ್ಟತೆಗಳು ಇತ್ಯಾದಿ ಪ್ರಾವೀಣ್ಯತೆ ಹೊಂದಿರಬೇಕು. ಈ ಗುಂಪಿನ ಸಂಪನ್ಮೂಲ ಅಧ್ಯಾಪಕರನ್ನು ಬ್ಲಾಕ್ ಹಂತದಲ್ಲಿ ಸ್ಥಾಪಿಸಲಾಗಿರುವ ಸಂಪನ್ಮೂಲ ಕೊಠಡಿಯಲ್ಲಿ ಕೆಲಸಮಾಡುವಂತೆ ನಿಯೋಜಿಸಬಹುದು. ಈ ಸಂಪನ್ಮೂಲ ಅಧ್ಯಾಪಕರಿಗೆ ಬಹುವರ್ಗದ ಅಸಾಮರ್ಥ್ಯಗಳ ನಿರ್ವಹಣೆಯಲ್ಲಿ ತರಬೇತಿ ಕೊಡಬೇಕು. ಈ ಸಂಪನ್ಮೂಲ ಅಧ್ಯಾಪಕರು ಸಂಚಾರಿ ಅಧ್ಯಾಪಕರ ರೀತಿಯಲ್ಲಿ ಕೆಲಸಮಾಡಿ ಬ್ಲಾಕ್ ಮತ್ತು ಕ್ಲಸ್ಟರ್ ಹಂತಗಳಲ್ಲಿ ಅಸಾಮರ್ಥ್ಯವಿರುವವರ ದಾಖಲಾಗಿ ಆಗಿರುವ ಕಡೆಗಳಲ್ಲಿ ಕ್ರಿಯಾಶೀಲರಾಗಿರಬಹುದು. ಇವರನ್ನು ಶೈಕ್ಷಣಿಕ ವರ್ಷದ ಮೊದಲಲ್ಲೆ ನಿಯೋಜಿಸಿಕೊಳ್ಳಬೇಕು.

## ರೈಲಿನಲ್ಲಿ ಪ್ರಯಾಣ

ಬುದ್ಧಿಮಾಂದ್ಯರಿಗೆ ಮತ್ತು ಅವರ ಬೆಂಗಾವಲಿಗರಿಗೆ ರೈಲಿನಲ್ಲಿ ಮೊದಲ ಮತ್ತು ಎರಡನೇ ದರ್ಜೆಯಲ್ಲಿ ಪ್ರಯಾಣಿಸಲು ಮೂಲ ದರದ ಶೇ 75 ಮಾಡುವಾಗ ಅನ್ವಯವಾಗುತ್ತದೆ. ಇದರ ಪ್ರಯೋಜನ ಪಡೆಯಲು ವಿದ್ಯಾರ್ಥಿಗಳು ಮಾನ್ಯತೆ ಪಡೆದ ಸರ್ಕಾರಿ ಶಾಲೆಯ ಅಥವಾ ಸಂಸ್ಥೆಗಳಲ್ಲಿರಬೇಕು. ಇದಕ್ಕಾಗಿ ಸ್ಥಳೀಯ ರೈಲ್ವೆ ಸ್ಟೇಷನ್ನಿನ 'ಸ್ಟೇಷನ್ ಮಾಸ್ಟರ್' ಅವರಿಗೆ ನಿಗದಿತ ನಮೂನೆಯಲ್ಲಿ ರಿಯಾಯಿತಿ ಪ್ರಮಾಣಪತ್ರದೊಂದಿಗೆ ಅರ್ಜಿ ಸಲ್ಲಿಸಬೇಕು.

ಭಾರತೀಯ ರೈಲ್ವೆ ನಗರ ಹಾಗೂ ಉಪನಗರ ಮತ್ತು ಉಪನಗರೇತರ ವಿಭಾಗಗಳಲ್ಲಿ (suburban and non- suburban) ಮಾಸಿಕ/ತ್ರೈಮಾಸಿಕ ಅವಧಿ ರಿಯಾಯಿತಿಗಳು ಮೊದಲ ಮತ್ತು ಎರಡನೇ ದರ್ಜೆಗೆ ಅವಕಾಶವಿದೆ. ಈ ರಿಯಾಯಿತಿ ಟಿಕೆಟ್‌ಗಳನ್ನು, ಸರ್ಕಾರಿ ವೈದ್ಯ/ ಆಸ್ಪತ್ರೆಯಿಂದ ಪಡೆದ ದೃಢೀಕರಿಸಿದ

ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ಸಲ್ಲಿಸುವುದರ ಮೂಲಕ ಸ್ಟೇಷನ್ ಮಾಸ್ಟರ್ ಅವರಿಂದ ನೇರವಾಗಿ ಪಡೆಯಬಹುದು. ಇದರ ಜೊತೆಗೆ, ಸಾಮಾನ್ಯ ಸಾರ್ವಜನಿಕರಿಗೆ MST ಮತ್ತು QST (Monthly Season Ticket and Quarterly Season Ticket) ಅನ್ವಯವಾಗುವ ಎಲ್ಲ ನಿಯಮಗಳೂ ಇವರಿಗೂ ಅನ್ವಯವಾಗುತ್ತವೆ. ಸರ್ಕಾರಿ ವೈದ್ಯರಿಂದ ಪಡೆದ ಪ್ರಮಾಣ ಪತ್ರವು ಮೂರು ವರ್ಷಗಳವರೆಗೆ ಸಿಂಧುವಾಗಿರುತ್ತದೆ.

### ಉಚಿತ ಬಸ್ ಪಾಸ್

ಬಹಳಷ್ಟು ರಾಜ್ಯ ಸರ್ಕಾರಗಳು ನಗರ ಹಾಗೂ ಗ್ರಾಮೀಣ ಮಾರ್ಗಗಳಲ್ಲಿ ಅಸಾಮರ್ಥ್ಯವುಳ್ಳವರಿಗೆ ರಿಯಾಯಿತಿ ದರದಲ್ಲಿ/ಉಚಿತವಾಗಿ ಬಸ್ ಪ್ರಯಾಣಕ್ಕೆ ಅವಕಾಶ ಮಾಡಿಕೊಟ್ಟಿವೆ. ಬುದ್ಧಿಮಾಂದ್ಯರ ಜೊತೆಗಿರುವ ಬೆಂಗಾವರಿಗರಿಗೂ ಈ ಅವಕಾಶವಿದೆ. ಇದಕ್ಕಾಗಿ, ಸರ್ಕಾರಿ ಸೇವೆಯಲ್ಲಿರುವ ವೈದ್ಯಕೀಯ ಅಭ್ಯಾಸಿಯಿಂದ ಪ್ರಮಾಣಪತ್ರವನ್ನು ನೀಡಬೇಕು. ಉದಾಹರಣೆಗೆ, ಆಂದ್ರಪ್ರದೇಶದಲ್ಲಿ ಅಸಾಮರ್ಥ್ಯವಿರುವವರಿಗೆ ಪೂರ್ಣ ರಿಯಾಯಿತಿ ಮತ್ತು ಬೆಂಗಾವಲಿಗರಿಗೆ ಶೇ. 50 ರಿಯಾಯಿತಿ ಪ್ರಯಾಣಕ್ಕೆ ಅವಕಾಶವಿದೆ.

### ಆದ್ಯತೆಯ ಮೇರೆಗೆ ಸಾರ್ವಜನಿಕ ಟೆಲಿಫೋನ್ ಬೂತ್‌ಗಳ ಹಂಚಿಕೆ :

ಟೆಲಿಫೋನ್ ವಿಭಾಗವು ಸಾರ್ವಜನಿಕರಿಗೆ ನಿಗದಿತ ದರದಲ್ಲಿ ಟೆಲಿಫೋನ್ ಕಾಲ್ ಗಳನ್ನು ಮಾಡಲು ಸಾರ್ವಜನಿಕ ಟೆಲಿಫೋನ್ ಗಳನ್ನು ನೀಡುತ್ತದೆ. ಬುದ್ಧಿಮಾಂದ್ಯರಿಗೆ ಪೋಷಣೆ, ಉದ್ಯೋಗ ಪುನರ್ವಸತಿ ಮತ್ತು ಆದಾಯ ಉತ್ಪಾದನೆಯ ಹಿನ್ನೆಲೆಯಲ್ಲಿ ಸಾರ್ವಜನಿಕ ಟೆಲಿಫೋನ್‌ಗಳನ್ನು ಆದ್ಯತೆಯ ಮೇಲೆ ನೀಡುತ್ತದೆ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 2

**ಕೆಳಗಿನ ಹೇಳಿಕೆಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ:**

1. ಅಸಾಮರ್ಥ್ಯವಿರುವವರಿಗೆ ಶಿಕ್ಷಣ ಕೊಡುವಲ್ಲಿ ಮೊದಲಿಗೆ ಅಡ್ಡಿಯಾದ ಅಡಚಣೆ ಎಂದರೆ

   ______________________________

   ಅ : ಬಡತನ, ಆ : ಸಂಪನ್ಮೂಲ ಅಧ್ಯಾಪಕರ ಕೊರತೆ, ಇ: ಸಮಾಜದ ಋಣಾತ್ಮಕ ಮನೋಭಾವ, ಈ : ಸರ್ಕಾರದ ಅಸಹಕಾರ.

2. ನಿರ್ದಿಷ್ಟ ಅಸಾಮರ್ಥ್ಯಗಳನ್ನು ಕುರಿತ ಕೋರ್ಸುಗಳನ್ನು ನಡೆಸುವ ಸಂಸ್ಥೆ

   ______________________________

   ಅ : ಎನ್.ಸಿ.ಟಿ.ಇ., ಆ : ಎನ್.ಸಿ.ಇ.ಆರ್.ಟಿ., ಇ: ಭಾರತದ ಪುನರ್ವಸತಿ ಮಂಡಳಿ, ಈ : ಸ್ಥಳೀಯ ಪ್ರಾಧಿಕಾರಗಳು

3. ಅಸಾಮರ್ಥ್ಯವಿರುವವರಿಗೆ ಗುಣಮಟ್ಟದ ಶಿಕ್ಷಣವನ್ನು ಕೊಡಲು ಅಗತ್ಯವಾದ ಅಂಶ

   ಅ : ಪಠ್ಯಕ್ರಮ ಹೊಂದಾಣಿಕೆ, ಆ : ಪೋಷಕರ ಸಹಕಾರ, ಇ: ಉಪಕರಣಗಳನ್ನು ಖರೀದಿಸಲು ರಿಯಾಯಿತಿ, ಈ : ಸರ್ಕಾರದ ಸಹಕಾರ.

4. ಸಂಪನ್ಮೂಲ ಅಧ್ಯಾಪಕರನ್ನು ನಿಯೋಜಿಸಿಕೊಳ್ಳಲು ಅಗತ್ಯವಾದ ವಿದ್ಯಾರ್ಥಿ ಶಿಕ್ಷಕ ಅನುಪಾತ

ಅ : 20:1, ಆ : 10:1, ಇ: 15:1, ಈ : 5:1.

## 1.6.3.3. ಅವಕಾಶಗಳು

ಭಾರತ ಸಂವಿಧಾನ (26 ನವೆಂಬರ್ 1949) ಅದರ ಪೀಠಿಕೆಯಲ್ಲಿ ಸಮಾನ ಸ್ಥಾನಮಾನ ಹಾಗೂ ಅವಕಾಶಗಳ ಹಕ್ಕು ಇದೆ ಎಂಬುದನ್ನು ಸ್ಪಷ್ಟಪಡಿಸಿದೆ. ವಿಧಿ 41ರ ನಿರ್ದೇಶಕ ತತ್ವಗಳ ಅಡಿಯಲ್ಲಿ ಸಂವಿಧಾನವು ಕೆಲಸ ಮಾಡುವ, ಶಿಕ್ಷಣ ಪಡೆಯುವ ಮತ್ತು ನಿರುದ್ಯೋಗ, ವೃದ್ಧಾಪ್ಯ, ರೋಗ ಮತ್ತು ಅಸಮರ್ಥತೆಯ ಮತ್ತು ಇತರ ಅನಿವಾರ್ಯ ದೈನ್ಯಾವಸ್ಥೆಯ ಸಂದರ್ಭಗಳಲ್ಲಿ ಸರ್ಕಾರದ ಸಹಾಯವನ್ನು ಪಡೆಯುವ ಹಕ್ಕನ್ನು ಬೆಂಬಲಿಸುತ್ತದೆ. ಮುಂದೆ ವಿಧಿ 45, 14ರ ವಯೋಮಿತಿಯವರೆಗಿನ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಬದ್ಧವಾಗಿದೆ. ಇದರ ಆಧಾರದ ಮೇಲೆ (86ನೇ ತಿದ್ದುಪಡಿ) 2002ರಲ್ಲಿ ಶಿಕ್ಷಣವನ್ನು 6–14 ವಯೋಮಾನದ ಮಕ್ಕಳ ಮೂಲಭೂತ ಹಕ್ಕನ್ನಾಗಿ ಘೋಷಿಸಲಾಗಿದೆ. ಸಂವಿಧಾನದ 93ನೇ ತಿದ್ದುಪಡಿಯು (ಈಗ 86ನೆಯದಾಗಿ ಪುನರ್‌ಪರಿಗಣಿತವಾಗಿರುವ) 6–14 ನೇ ವಯೋಮಾನದ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನೊದಗಿಸುವುದು ಸರ್ಕಾರದ ಕಡ್ಡಾಯ ಕಾರ್ಯವಾಗಿಸಿದೆ. 'ಎಲ್ಲ' ಎಂಬ ಪದ ಅಸಾಮರ್ಥ್ಯವಿರುವ ಮಕ್ಕಳನ್ನೂ ಒಳಗೊಳ್ಳುತ್ತದೆ ಎಂಬುದನ್ನೂ ಸ್ಪಷ್ಟಪಡಿಸಿದೆ. ಆದರೂ ಇಂತಹ ವಿಧಿಗಳ ಕೆಲವು ಅಸ್ಪಷ್ಟತೆಗಳು ಹಾಗೆಯೇ ಉಳಿದಿವೆ.

ವಿಶೇಷ ಅಗತ್ಯವಿರುವ ಮಕ್ಕಳನ್ನು ಇತರ ಗುಂಪುಗಳ ಮಕ್ಕಳೊಂದಿಗೆ ಸಮನ್ವಯಗೊಳಿಸಬೇಕಾದ ಅಗತ್ಯವನ್ನು ರಾಷ್ಟ್ರೀಯ ಶಿಕ್ಷಣ ನೀತಿ (NPE, 1986) ಮತ್ತು ನಂತರದ ಕ್ರಿಯಾಯೋಜನೆಗಳು (1992) ಸ್ಪಷ್ಟಪಡಿಸಿವೆ. ಅವರನ್ನು ಸಹಜವಾದ ಬೆಳವಣಿಗೆಗೆ ಮತ್ತು ಧೈರ್ಯ ಮತ್ತು ಆತ್ಮವಿಶ್ವಾಸದೊಂದಿಗೆ ಅವರು ಬದುಕನ್ನು ಎದುರಿಸುವಂತೆ ಮಾಡುವುದು ಇದರ ಉದ್ದೇಶ. ಶಾಲೆಗೆ ಅಸಾಮರ್ಥ್ಯವಿರುವ ಮಕ್ಕಳ ಹಾಜರಾತಿ ಇದರ ಕಾಳಜಿ.

ಈ ಉದ್ದೇಶಗಳನ್ನು ಸಾಧಿಸಲು, ಶಾಲೆ, ಬ್ಲಾಕ್, ಜಿಲ್ಲೆ, ರಾಜ್ಯ ಹಾಗೂ ರಾಷ್ಟ್ರೀಯ ಹಂತಗಳಲ್ಲಿ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಲಾಗಿದೆ. ಸರ್ವಶಿಕ್ಷಾ ಅಭಿಯಾನವು ಕೇಂದ್ರ ಸರ್ಕಾರದಿಂದ ಪ್ರಾಯೋಜಿತವಾದ ಯೋಜನೆಯಾಗಿದ್ದು, ಎಲ್ಲ ರಾಜ್ಯಗಳಿಂದಲೂ ಅಳವಡಿಸಿಕೊಳ್ಳಲಾಗಿದ್ದು, ಭಾರತದಲ್ಲಿ ಎಲ್ಲ ಮಕ್ಕಳಿಗೆ ಶಿಕ್ಷಣವನ್ನು ಖಚಿತಪಡಿಸಿಕೊಳ್ಳುವ ಉದ್ದೇಶವನ್ನು ಹೊಂದಿದೆ. ಈ ಅಭಿಯಾನವು ದೊಡ್ಡ ಸಂಖ್ಯೆಯ ವಿಶೇಷ ಶಿಕ್ಷಕರನ್ನು ನೇಮಿಸಿಕೊಳ್ಳುವ ಮತ್ತು ಪರಿಣಾಮಕಾರಿ ಅಧ್ಯಾಪಕರನ್ನು ತರಬೇತಿಗೊಳಿಸುವ ಕಡೆ ಗಮನ ವಹಿಸಿದೆ.

ಭಾರತೀಯ ಪುನರ್ವಸತಿ ಮಂಡಳಿಯು ಪುನರ್ವಸತಿ ವೃತ್ತಿಪರರ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳುವ ಸಂಸ್ಥೆ. ಇದು ರಾಷ್ಟ್ರದಾದ್ಯಂತ ವಿಶೇಷ ಶಿಕ್ಷಣದಲ್ಲಿ ಮಾನವ ಸಂಪನ್ಮೂಲವನ್ನು ರೂಪಿಸುತ್ತದೆ. ಇಂತಹ ಸಂಪನ್ಮೂಲ ವ್ಯಕ್ತಿಗಳನ್ನು ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣದ ಗುರಿಗಳನ್ನು ಸಾಧಿಸಲು ಸರ್ವಶಿಕ್ಷಾಅಭಿಯಾನದ ಮೂಲಕ ಗ್ರಾಮೀಣ , ಬ್ಲಾಕ್, ಜಿಲ್ಲೆ ಹಾಗೂ ರಾಜ್ಯ ಹಂತಗಳಲ್ಲಿ ನಿಯೋಜಿಸಿಕೊಳ್ಳಲಾಗಿದೆ. ಬ್ಲಾಕ್‌ಗಳಲ್ಲಿ ಅಗತ್ಯವಿರುವ ಶಾಲೆಗಳಿಗೆ ಸಂಪನ್ಮೂಲ ಉಪಕರಣಗಳನ್ನೊದಗಿಸುವ ಮತ್ತು ವೃತ್ತಿಪರ ಬೆಂಬಲವನ್ನೊದಗಿಸುವ ಉದ್ದೇಶದಿಂದ ಕೆಲವು ರಾಜ್ಯಗಳಲ್ಲಿ ಬ್ಲಾಕ್ ಸಂಪನ್ಮೂಲ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಸಂಪನ್ಮೂಲ ಶಿಕ್ಷಕರು ಕಾಲಾನುಕ್ರಮವಾಗಿ ಸಂಚಾರಿ ತರಬೇತಿ ಮಾದರಿಯಲ್ಲಿ ಅಗತ್ಯವಿರುವ ಶಾಲೆಗಳಿಗೆ ಭೇಟಿಕೊಟ್ಟು

ಆಯಾ ಶಾಲೆಗಳ ಅಧ್ಯಾಪಕರೊಂದಿಗೆ ಸಂಯೋಜನೆಗೊಂಡು ಕೆಲಸ ಮಾಡುತ್ತಾರೆ. ಈ ವ್ಯವಸ್ಥೆಯು ರಾಷ್ಟ್ರವ್ಯಾಪಿಯಾಗಿ ವಿಶೇಷ ಅಗತ್ಯವಿರುವ ಎಲ್ಲ ಮಕ್ಕಳನ್ನೂ ತಲುಪುತ್ತದೆ ಎಂದು ಆಶಿಸಲಾಗಿದೆ.

## ನ್ಯಾಷನಲ್ ಟ್ರಸ್ಟ್

ನ್ಯಾಷನಲ್ ಟ್ರಸ್ಟ್ ಎಂಬುದು ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಅಡಿಯಲ್ಲಿ ಕೆಲಸಮಾಡುವ ಶಾಸನಬದ್ಧ ಸಂಸ್ಥೆ. ಇದರ ಪ್ರಮುಖ ಉದ್ದೇಶಗಳು ಹೀಗಿವೆ:

- ಅಸಾಮರ್ಥ್ಯವಿರುವ ವ್ಯಕ್ತಿಗಳು ಸಾಧ್ಯವಾದಷ್ಟೂ ಸ್ವತಂತ್ರವಾಗಿ ಮತ್ತು ಅವರು ವಾಸಿಸುವ ಸಮುದಾಯಕ್ಕೆ ಹತ್ತಿರವಾಗಿ ಬದುಕಲು ಸಮರ್ಥರನ್ನಾಗಿಸುವುದು;
- ಅಸಾಮರ್ಥ್ಯವಿರುವ ವ್ಯಕ್ತಿಗಳು ತಮ್ಮ ಕುಟುಂಬಗಳಲ್ಲೇ ವಾಸಿಸಲು ಬೆಂಬಲಕೊಡಲು ಸೌಲಭ್ಯಗಳನ್ನು ಉತ್ತಮಪಡಿಸುವುದು;
- ಅಸಾಮರ್ಥ್ಯವಿರುವ ವ್ಯಕ್ತಿಗಳ ಕುಟುಂಬಗಳಿಗೆ ಅಪಾಯದ ಸಂದರ್ಭಗಳಲ್ಲಿ ಆಗತ್ಯಗಳ ಆಧಾರದ ಮೇಲೆ ಸಹಾಯಮಾಡಲು ನೋಂದಾಯಿತ ಸಂಸ್ಥೆಗಳಿಗೆ ಬೆಂಬಲ ನೀಡುವುದು;
- ಕುಟುಂಬ ಬೆಂಬಲ ಇಲ್ಲದಿರುವ ಅಸಾಮರ್ಥ್ಯವಿರುವ ವ್ಯಕ್ತಿಗಳ ಸಮಸ್ಯೆಗಳನ್ನು ವಿಚಾರಮಾಡುವುದು;
- ಅಸಾಮರ್ಥ್ಯವಿರುವ ವ್ಯಕ್ತಿಗಳ ಹೆತ್ತವರು ಅಥವಾ ಪೋಷಕರು ಮೃತರಾದ ಸಂದರ್ಭಗಳಲ್ಲಿ ಅವರ ಸೇವೆ ಮತ್ತು ರಕ್ಷಣೆಗೆ ಕ್ರಮಗಳನ್ನು ತೆಗೆದುಕೊಳ್ಳುವುದು;
- ಅಂತಹ ರಕ್ಷಣೆಯ ಅಗತ್ಯವಿರುವ ಅಸಾಮರ್ಥ್ಯವಿರುವ ವ್ಯಕ್ತಿಗಳಿಗೆ ರಕ್ಷಕರು ಅಥವಾ ಟ್ರಸ್ಟಿಗಳನ್ನು ನೇಮಿಸುವ ವಿಧಾನಗಳನ್ನು ರೂಪಿಸುವುದು;
- ಅಸಾಮರ್ಥ್ಯವಿರುವ ವ್ಯಕ್ತಿಗಳ ಸಮಾನಾವಕಾಶ, ರಕ್ಷಣಾ ಹಕ್ಕುಗಳು ಮತ್ತು ಸಂಪೂರ್ಣ ಭಾಗವಹಿಕೆಯನ್ನು ಪೋಷಿಸುವುದು; ಮತ್ತು
- ಅಸಾಮರ್ಥ್ಯವಿರುವ ವ್ಯಕ್ತಿಗಳಿಗೆ ಆಕಸ್ಮಿಕವಾಗುವ ಇತರ ಅಗತ್ಯಗಳನ್ನು ಪೂರೈಸುವ ಕೆಲಸಗಳನ್ನು ಮಾಡುವುದು.

## ರೂಪಿತ ಯೋಜನೆಗಳು ;

- ವಿಲೀನತೆ, ಸೆರೆಬ್ರಲ್ ಪಾಲ್ಸಿ, ಬುದ್ಧಿಮಾಂದ್ಯತೆ ಮತ್ತು ಬಹುವಿಧ ಅಸಾಮರ್ಥ್ಯತೆಯುಳ್ಳ ವ್ಯಕ್ತಿಗಳ ಕಲ್ಯಾಣಕ್ಕಾಗಿ ಎರಡು ಯೋಜನೆಗಳಿವೆ: ಅವೆಂದರೆ, ಸಾಂಸ್ಥಿಕ ಆರೈಕೆ ಮತ್ತು ಆರೈಕೆ ಕೊಡುವವರ ತರಬೇತಿಗಳಿಗಾಗಿ ಪರಿಹಾರ ಸಂಸ್ಥೆಗಳು. ಈ ಯೋಜನೆಗಳು ಸಂಬಂಧಪಟ್ಟ ಸಚಿವಾಲಯಗಳಿಂದ ಆಡಳಿತಾತ್ಮಕ ಅನುಮೋದನೆ ಪಡೆದಿವೆ.
- ತೆರಿಗೆ ವಿನಾಯಿತಿ: ನ್ಯಾಷನಲ್ ಟ್ರಸ್ಟ್ ಶೇ100ರಷ್ಟು ತೆರಿಗೆ ವಿನಾಯಿತಿ ಪಡೆದಿದೆ.

- ಸ್ಥಳೀಯ ಸ್ತರದ ಸಮಿತಿಯು ನ್ಯಾಷನಲ್ ಟ್ರಸ್ಟ್ ಕಾಯಿದೆಯನ್ನು ಕಾರ್ಯಗತಗೊಳಿಸುವ ಸಮಿತಿಯಾಗಿದ್ದು ಈ ಕಾಯಿದೆಯ ಅನನ್ಯ ಲಕ್ಷಣ ಹಾಗೂ ವಿಷಯಗಳು ಇದರಿಂದಲೇ ವ್ಯಕ್ತವಾಗುತ್ತದೆ.
- ವಿಲೀನತೆ, ಸೆರೆಬ್ರಲ್ ಪಾಲ್ಸಿ, ಬುದ್ಧಿಮಾಂದ್ಯತೆ ಮತ್ತು ಬಹುವಿಧ ಅಸಾಮರ್ಥ್ಯತೆಯುಳ್ಳ ವ್ಯಕ್ತಿಗಳ ಹಕ್ಕುಗಳನ್ನು ರಕ್ಷಿಸುವುದು ಮತ್ತು ಅವರಿಗೆ ಅಗತ್ಯವಾದ ಕಾರ್ಯಗಳನ್ನು ಕೈಗೊಳ್ಳುವುದು ಸ್ಥಳೀಯ ಸ್ತರದ ಸಮಿತಿಯು ಪಾತ್ರವಾಗಿರುತ್ತದೆ.

**ವಿಶೇಷ ಮಗುವಿನ ಹಕ್ಕುಗಳು**

ಅಸಾಮರ್ಥ್ಯವುಳ್ಳ ಅಥವಾ ವಿಶೇಷ ಮಕ್ಕಳ ಹಕ್ಕುಗಳನ್ನು ಯೂನಿಸೆಫ್(ಗುಖಅಇಈ) ಸಂಸ್ಥೆ ರೂಪಿಸಿದ್ದು ಇದನ್ನು ಸಾರ್ವತ್ರಿಕವಾಗಿ ಒಪ್ಪಿಕೊಳ್ಳಲಾಗಿದೆ. ಈ ಘೋಷಣೆಯ ಪ್ರಕಾರ

ಯಾವುದೇ ಅಪವಾದವಿಲ್ಲದೆ ಎಲ್ಲ ಮಕ್ಕಳೂ ಯಾವುದೇ ವ್ಯತ್ಯಾಸ ಅಥವಾ ತಾರತಮ್ಯವಿಲ್ಲದೆ ಕೆಳಗಿನ ಹಕ್ಕುಗಳಿಗೆ ಭಾಜನರಾಗಿರುತ್ತಾರೆ:

- ಹುಟ್ಟಿನಿಂದ ಹೆಸರು ಮತ್ತು ರಾಷ್ಟ್ರೀಯತೆಯ ಹಕ್ಕು;
- ಜನನ ಪೂರ್ವ ಮತ್ತು ಜನಾನಾನಂತರದ ಆರೈಕೆಯ ಹಕ್ಕು;
- ಸಮರ್ಪಕ ಪೋಷಣೆಯ ಹಕ್ಕು;
- ಸಮರ್ಪಕ ವಸತಿಯ ಹಕ್ಕು;
- ವೈದ್ಯಕೀಯ ಆರೈಕೆಯ ಹಕ್ಕು;
- ವಿಕಲಾಂಗತೆಯುಳ್ಳ ಮಕ್ಕಳಿಗೆ ವಿಶೇಷ ಆರೈಕೆಯ ಹಕ್ಕು;
- ಹೆತ್ತವರ ಪ್ರೀತಿ, ವಾತ್ಸಲ್ಯ ಮತ್ತು ಅರ್ಥಮಾಡಿಕೊಳ್ಳುವಿಕೆಯ ಹಕ್ಕು;
- ಶಿಕ್ಷಣದ ಹಕ್ಕು;
- ಸಮಾಜಕ್ಕೆ ಉಪಯುಕ್ತ ಸದಸ್ಯನಾಗುವಂತೆ ಕಲಿಯುವ ಹಕ್ಕು;
- ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುವ ಹಕ್ಕು;
- ವಿಪ್ಪತ್ತುಗಳ ಸಂದರ್ಭದಲ್ಲಿ ಮೊದಲಿಗರಾಗಿ ರಕ್ಷಣೆ ಪಡೆಯುವ ಹಕ್ಕು;
- ಕ್ರೀಡೆ ಮತ್ತು ಮನರಂಜನೆಗೆ ಸಂಪೂರ್ಣ ಅವಕಾಶ ಪಡೆಯುವ ಹಕ್ಕು.

**ಅಸಾಮರ್ಥ್ಯವುಳ್ಳವರಿಗೆ ಭಾರತದ ಕಾಯಿದೆಗಳಿಂದ ಮುಂದುವರಿದ ರಕ್ಷಣಾವಕಾಶಗಳು**

**ಅಸಾಮರ್ಥ್ಯವುಳ್ಳವರ ಕಾಯಿದೆ, 1995ರ ಆಶಯದ ಪ್ರಕಾರ ಎಲ್ಲ ಸಂಬಂಧಿತ ಸರ್ಕಾರಗಳು ಮತ್ತು ಸ್ಥಳೀಯ ಅಧಿಕಾರಗಳು :**

- ಅಸಾಮರ್ಥ್ಯತೆಯನ್ನು ತಡೆಗಟ್ಟಲು ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಳ್ಳಬೇಕು;
- ಅಸಾಮರ್ಥ್ಯತೆಯುಳ್ಳ ಮಕ್ಕಳಿಗೆ ಉಚಿತ ಶಿಕ್ಷಣವನ್ನು ನೀಡಬೇಕು;

- ಔಪಚಾರಿಕೇತರ ಶಿಕ್ಷಣ ಯೋಜನೆಗಳನ್ನು, ಕಾರ್ಯಕ್ರಮಗಳನ್ನು ರೂಪಿಸಬೇಕು;
- ಹೊಸ ಸಹಾಯಕ ಸಾಧನಗಳನ್ನು, ಬೋಧನೋಪಕರಣಗಳನ್ನು ವಿನ್ಯಾಸಗೊಳಿಸಲು ಸಂಶೋಧನೆಯನ್ನು ಕೈಗೊಳ್ಳಬೇಕು;
- ಅಸಾಮರ್ಥ್ಯವಿರುವ ಮಕ್ಕಳ ಶಾಲೆಗಳಿಗಾಗಿ ತರಬೇತಿ ಹೊಂದಿದ ಮಾನವ ಸಂಪನ್ಮೂಲವನ್ನೊದಗಿಸಲು ಶಿಕ್ಷಕ ಶಿಕ್ಷಣ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಬೇಕು;
- ಸಾರಿಗೆ, ಪುಸ್ತಕಗಳನ್ನು ಒದಗಿಸುವಿಕೆ ಇತ್ಯಾದಿ ಅಂಶಗಳನ್ನೊಳಗೊಂಡಂತೆ ಸಮಗ್ರ ಶಿಕ್ಷಣ ಯೋಜನೆಗಳನ್ನು ತಯಾರಿಸಬೇಕು;
- ದೃಷ್ಟಿದೋಷವುಳ್ಳವರಿಗೆ ಶಿಕ್ಷಣ ಸಂಸ್ಥೆಗಳು ಲಿಪಿಕಾರರನ್ನು ಒದಗಿಸಬೇಕು.

**ಉದ್ಯೋಗಕ್ಕೆ ಸಂಬಂಧಿಸಿದಂತೆ :**

- ಅಸಾಮರ್ಥ್ಯವುಳ್ಳವರಿಗೆ ಕಾಯ್ದಿರಿಸಬಹುದಾದ ಹುದ್ದೆಗಳನ್ನು ಗುರುತಿಸಬೇಕು;
- ವಿಶೇಷ ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ಹುದ್ದೆಗಳನ್ನು ಕಾಯ್ದಿರಿಸಬೇಕು;
- ಭರ್ತಿಯಾಗದ ಹುದ್ದೆಗಳು ಮುಂದುವರಿಯುವಂತೆ ಕ್ರಮ ಕೈಗೊಳ್ಳಬೇಕು;
- ಉದ್ಯೋಗದಾತರು ಅಸಾಮರ್ಥ್ಯವಿರುವ ಉದ್ಯೋಗಿಗಳ ವಿವರಗಳನ್ನು ಕುರಿತ ದಾಖಲೆಯನ್ನು ನಿರ್ವಹಿಸಬೇಕು;
- ಅಸಾಮರ್ಥ್ಯವಿರುವವರ ಉದ್ಯೋಗವನ್ನು ಖಚಿತಪಡಿಸುವ ಗರಿಷ್ಠ ವಯಸ್ಸು ನಿಗದಿ, ತರಬೇತಿ ಆವಶ್ಯಕತೆಗಳು ಇತ್ಯಾದಿ ಅಂಶಗಳನ್ನು ಅನುಮೋದಿಸುವ ಯೋಜನೆಗಳನ್ನು ಪ್ರೋತ್ಸಾಹಿಸಬೇಕು;
- ಎಲ್ಲ ಶಿಕ್ಷಣ ಸಂಸ್ಥೆಗಳೂ ಅಸಾಮರ್ಥ್ಯವಿರುವವರಿಗೆ ಸೀಟುಗಳನ್ನು ಕಾಯ್ದಿರಿಸಬೇಕು;
- ಬಡತನ ನಿರ್ಮೂಲನ ಯೋಜನೆಗಳು ಅಸಾಮರ್ಥ್ಯವಿರುವವರಿಗೆ ಸೀಟುಗಳನ್ನು ಕಾಯ್ದಿರಿಸಬೇಕು;
- ಒಟ್ಟು ನೌಕರರ ಸಂಖ್ಯೆಯಲ್ಲಿ ಶೇ5 ರಷ್ಟು ಅಸಾಮರ್ಥ್ಯವಿರುವವರನ್ನು ಒಳಪಡಿಸಿಕೊಂಡ ಉದ್ಯೋಗದಾತರಿಗೆ ಪ್ರೋತ್ಸಾಹಕಗಳನ್ನು ಕೊಡಬೇಕು;
- ಭೂಮಿ ಹಂಚಿಕೆಯಲ್ಲಿ ಆದ್ಯತೆ ನೀಡಬೇಕು.
- ಅಸಾಮರ್ಥ್ಯವಿರುವವರಿಗೆ ಅಗತ್ಯವಾದ ಸಾಧನಗಳನ್ನು ಉಪಕರಣಗಳನ್ನು ಒದಗಿಸುವಲ್ಲಿ ಸಕಾರಾತ್ಮಕವಾದ ಕ್ರಮಗಳನ್ನು ಕೈಗೊಳ್ಳಬೇಕು;
- ಸಾರಿಗೆ, ನೆಲಮಾರ್ಗ, ಪರಿಸರ ಮತ್ತು ಸರ್ಕಾರಿ ನೌಕರಿಗಳಲ್ಲಿ ತಾರತಮ್ಯವಿಲ್ಲದಿರುವಂತೆ ನೋಡಿಕೊಳ್ಳಬೇಕು;

ಭಾರತದ ಪುನರ್ವಸತಿ ಮಂಡಳಿಯು ಕಾಯಿದೆ 1992 (ಸಂಖ್ಯೆ 34) ಪುನರ್ವಸತಿ ವೃತ್ತಿಪರರನ್ನು ತರಬೇತಿಗೊಳಿಸುವುದಲ್ಲದೆ ಅಂತಹ ವೃತ್ತಿಪರರ ರಿಜಿಸ್ಟರನ್ನು ನಿರ್ವಹಿಸುತ್ತದೆ. ಇದರಿಂದಾಗಿ ಆಸಾಮರ್ಥ್ಯವುಳ್ಳವರರಿಗೆ ಸಹಾಯಮಾಡುವ ವೃತ್ತಿಪರರ ಗುಣಮಟ್ಟವನ್ನು ಮತ್ತು ಅವರ ಮೂಲಕ ಗುಣಮಟ್ಟದ ಸೇವೆಯನ್ನು ಖಚಿತಪಡಿಸುತ್ತದೆ.

## ರಾಷ್ಟ್ರೀಯ ತೆರೆದ ಶಾಲೆ (National Institute of Open Schooling) :

ರಾಷ್ಟ್ರೀಯ ತೆರೆದ ಶಾಲೆ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಕೆಲವು ಅವಕಾಶಗಳನ್ನು ಒದಗಿಸುತ್ತದೆ:

- ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಶೇ50ರಷ್ಟು ಶುಲ್ಕ ವಿನಾಯಿತಿ;
- ಐದು ವರ್ಷಗಳಿಗೆ ದೂರ ಕಲಿಕೆಗೆ ವಿದ್ಯಾರ್ಥಿಗಳು ನೋಂದಾಯಿತರಾಗಿದ್ದರೂ ಒಂದು ಕೋರ್ಸ್ ಅಥವಾ ಕಾರ್ಯಕ್ರಮದಲ್ಲಿ ಒಂಬತ್ತು ಸಲ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿದೆ;
- ಅವರು ಒಮ್ಮೆಗೆ ಅವರ ಸಿದ್ಧತೆಗೆ ಅನುಗುಣವಾಗಿ ಒಂದು ಅಥವಾ ಎರಡು ವಿಷಯಗಳಲ್ಲಿ ಪರೀಕ್ಷೆ ತೆಗೆದುಕೊಳ್ಳಬಹುದು. ಇಡೀ ಕೋರ್ಸಿನ ಆವಶ್ಯಕತೆಯನ್ನು ಯಶಸ್ವಿಯಾಗಿ ಪೂರೈಸುವವರೆಗೆ ಅವರ ಅಂಕಗಳನ್ನು ಒಟ್ಟುಗೂಡಿಸಲಾಗುತ್ತದೆ;
- ಅಧ್ಯಯನ ಕೇಂದ್ರಗಳೇ ಪರೀಕ್ಷಾ ಕೇಂದ್ರಗಳೂ ಆಗಿರುತ್ತವೆ;
- ಅಸಾಮರ್ಥ್ಯತೆಯ ಅಗತ್ಯಕ್ಕೆ ತಕ್ಕಂತೆ ಸಾಮಾನ್ಯ ಮತ್ತು ನಿರ್ದಿಷ್ಟ ವಿನಾಯಿತಿಗಳಿರುತ್ತವೆ: ಅಂಥರಿಗೆ ಲಿಪಿಕಾರರು, ಪರೀಕ್ಷಾ ದಿನಾಂಕಗಳಲ್ಲಿ ನಮನೀಯತೆ, ವಿಷಯಗಳ ಆಯ್ಕೆಯಲ್ಲಿ ನಮನೀಯತೆ, ವಯೋಮಿತಿಯ ನಿಗದಿ ಇಲ್ಲದಿರುವಿಕೆ ಇತ್ಯಾದಿ.

ರಾಷ್ಟ್ರೀಯ ತೆರೆದ ಶಾಲೆ ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣಕ್ಕೆ ಶೈಕ್ಷಣಿಕ ಸಾಮಗ್ರಿಗಳನ್ನು ತಯಾರಿಸಿದೆ. ಸೆಕೆಂಡರಿ ಶಿಕ್ಷಣವನ್ನು ಪೂರ್ಣಗೊಳಿಸಲು ರಾಜ್ಯಮಟ್ಟದಲ್ಲಿ ರಾಜ್ಯ ಸಂಯೋಜಕರು ಈ ಸಂಸ್ಥೆಯೊಂದಿಗೆ ನೋಡಲ್ ಅಧಿಕಾರಿಯಾಗಿ ಕೆಲಸ ನಿರ್ವಹಿಸಬೇಕು. ಇದೇ ಸಂಸ್ಥೆಯು ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣಕ್ಕಾಗಿ ಮುಕ್ತ ಮೂಲ ಶಿಕ್ಷಣ ಕಾರ್ಯಕ್ರಮವನ್ನೂ ನೀಡುತ್ತದೆ. ಇದು ಅಸಾಮರ್ಥ್ಯವಿರುವ ಮಕ್ಕಳನ್ನೂ ಒಳಗೊಳ್ಳುತ್ತದೆ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 3

ಕೆಳಗೆ 'ಎ' ಮತ್ತು 'ಬಿ' ಪಟ್ಟಿಗಳಲ್ಲಿ ಕೆಲವು ಅಂಶಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸಂಬಂಧವಿರುವುದನ್ನು ಕಂಡುಹಿಡಿದು ಎರಡನ್ನೂ ಹೊಂದಿಸಿ.

| | | | |
|---|---|---|---|
| 1 | UNICE ಈ ಹಕ್ಕುಗಳು | ವೃತ್ತಿಪರರ ಕೇಂದ್ರೀಯ ರಿಜಿಸ್ಟರ್‌ನ ನಿರ್ವಹಣೆ | a |
| 2 | ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಕಾಯಿದೆ, 1995 | ಪ್ರತಿ ಮಗುವಿಗೂ ಹೆಸರು ಮತ್ತು ರಾಷ್ಟ್ರೀಯತೆಯ ಹಕ್ಕು | b |
| 3 | ಭಾರತದ ಪುನರ್ವಸತಿ ಮಂಡಳಿ ಕಾಯಿದೆ1992 | ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಶೇ 50% ರಿಯಾಯಿತಿ | c |
| 4 | ಮುಕ್ತ ಶಾಲೆಯ ರಾಷ್ಟ್ರೀಯ ಸಂಸ್ಥೆ | ತರಬೇತಿ ಹೊಂದಿದ ಮಾನವ ಸಂಪನ್ಮೂಲವನ್ನು ಸಿದ್ಧಪಡಿಸಲು ಶಿಕ್ಷಕ ಶಿಕ್ಷಣ ಸಂಸ್ಥೆಗಳನ್ನು ತೆರೆಯುವುದು. | d |

## 1.6.5. ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಲು ಉತ್ತರಗಳು: 1, 2 ಮತ್ತು 3

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 1**

1. ರೂ. 2000/–
2. ರೂ. 50/–
3. ರೂ. 50/–
4. ರೂ. 75/–
5. ರೂ. 400/–

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 2**

1–ಅ, 2–ಆ, 3–ಇ, 4–ಈ

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 3**

1– b, 2– d, , 3– a, 4– c

## 1.6.6 ಘಟಕಾಂತ್ಯ ಅಭ್ಯಾಸಗಳು

1. ಅಂತರ್ಗತ ಸನ್ನಿವೇಶದಲ್ಲಿ ಅಭ್ಯಾಸಮಾಡುವ ಅಸಾಮರ್ಥ್ಯವುಳ್ಳ ಮಕ್ಕಳಿಗೆ ಸಿಗುವ ರಿಯಾಯಿತಿಗಳು, ಸೌಲಭ್ಯಗಳು ಮತ್ತು ಅವಕಾಶಗಳನ್ನು ವಿವರಿಸಿ.

## 1.6.7. ಪರಾಮರ್ಶನ ಸೂಚಿ


1. Kathy Cologon , 'Inclusion in education: Towards equality for students with disability' 24 OCT 2013 Children with Disability Australia .
2. Inclusion in education: Towards equality for students with disability K Cologon - 2013 - apo.org.au .
3. S Alper, Inclusion: Are We Abandoning or Helping Students? Roadmaps to Success: The Practicing Administrator's Leadership Series. - 1995 – ERIC.
4. mooc.nios.ac.in/mooc/pluginfile.php?file=/11557/course/summary/U-9.pdf.
5. www.fourstepsindia.org/government-concessions.php.


***************

# ಬ್ಲಾಕ್–2 : ಕಲಿಯುವವರ ವೈವಿಧ್ಯತೆಯನ್ನು ಚರ್ಚಿಸುವುದು ಮತ್ತು ಅರ್ಥಮಾಡಿಕೊಳ್ಳುವುದು

## ಘಟಕ–1 : ವಿವಿಧ ರೀತಿಯ ಅಸಾಮರ್ಥ್ಯಗಳನ್ನುಳ್ಳ ಮಕ್ಕಳ ವಿಶೇಷ ಅಗತ್ಯಗಳು

**ಘಟಕದ ರಚನೆ**


2.1.1 ಕಲಿಕಾ ಉದ್ದೇಶಗಳು

2.1.2. ಪೀಠಿಕೆ

2.1.3 ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.1.3.1. ಶ್ರವಣ ಮತ್ತು ದೃಷ್ಟಿ ಸಂಬಂಧಿ ಸವಾಲುಗಳನ್ನುಳ್ಳ ಮಕ್ಕಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 1

2.1.3.2 ಬೌದ್ಧಿಕ ಮತ್ತು ಕಲಿಕಾ ಸಂಬಂಧಿ ಸವಾಲುಗಳನ್ನುಳ್ಳ ಮಕ್ಕಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 2

2.1.3.3. ಮೂಳೆ ಸಂಬಂಧಿ ಮತ್ತು ಭಾವನಾತ್ಮಕ ವರ್ತನಾ ಸವಾಲುಗಳನ್ನುಳ್ಳ ಮಕ್ಕಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 3

2.1.3.4. ವಿಶೇಷ ಆರೋಗ್ಯ ಸಮಸ್ಯೆಗಳನ್ನುಳ್ಳ ಮಕ್ಕಳು ಮತ್ತು ಬಹು ಸವಾಲುಗಳನ್ನುಳ್ಳ ಮಕ್ಕಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 4

2.1.4. ಸಾರಾಂಶಿಸೋಣ

2.1.5 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1, 2, 3 ಮತ್ತು4

2.1.6 ಘಟಕಾಂತ್ಯ ಅಭ್ಯಾಸಗಳು

2.1.7. ಪರಾಮರ್ಶನ ಸೂಚಿ


### 2.1.1 ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- 'ಸವಾಲುಗಳುಳ್ಳ ಮಕ್ಕಳು' ಎಂಬುದರ ವ್ಯಾಖ್ಯೆ ನೀಡುವರು;
- ವಿಶೇಷ ಅಗತ್ಯವುಳ್ಳ ಮಕ್ಕಳು ಎಂಬ ಪರಿಕಲ್ಪನೆಯನ್ನು ವಿವರಿಸುವರು;
- ವಿವಿಧ ರೀತಿಯ ವಿಶೇಷ ಅಗತ್ಯವುಳ್ಳ ಮಕ್ಕಳ ಪರಿಕಲ್ಪನೆಯನ್ನು ಬೆಳೆಸಿಕೊಳ್ಳುವರು;
- ವಿವಿಧ ರೀತಿಯ ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಗುರುತಿಸುವರು; ಮತ್ತು
- ವಿವಿಧ ರೀತಿಯ ವಿಶೇಷ ಮಕ್ಕಳ  ಅಗತ್ಯಗಳನ್ನು ವಿಶ್ಲೇಷಿಸುವರು.

## 2.1.2. ಪೀಠಿಕೆ

### ಅಭ್ಯಾಸ I

ನಿಮ್ಮ ದಿನನಿತ್ಯದ ತರಗತಿಗಳ ಪರಿಚಯ ನಿಮಗಿದೆ. ನಿಮ್ಮ ತರಗತಿಯ ಮಕ್ಕಳಿಗೆ ಅನೇಕ ಅಗತ್ಯಗಳಿರುತ್ತವೆ. ಅದನ್ನು ನೀವು ಪೂರೈಸುತ್ತಿರುವಿರಿ. ಈ ಅಗತ್ಯಗಳು ಯಾವುವು ಎಂಬುದನ್ನು ಪಟ್ಟಿಮಾಡಿ.

| |
|---|
| |

ನಿಮ್ಮ ತರಗತಿಗೆ ಮೂವರು ಅಸಾಮರ್ಥ್ಯವಿರುವ ಮಕ್ಕಳು(ಉದಾಹರಣೆಗೆ, ದೃಷ್ಟಿ ದೋಷವಿರುವ) ದಾಖಲಾಗುತ್ತಾರೆ ಎಂದು ಕಲ್ಪಿಸಿಕೊಳ್ಳಿ. ಇವರಿಗಾಗಿ ನೀವು ಹೆಚ್ಚುವರಿ ಅಗತ್ಯಗಳನ್ನು ಪೂರೈಸಬೇಕಾಗುತ್ತದೆಯೇ? ನಿಮಗೆ ಹಾಗೆ ಅನ್ನಿಸಿದಲ್ಲಿ ಆ ಅಗತ್ಯಗಳ ಪಟ್ಟಿ ಮಾಡಿ.

| |
|---|
| |

ನಿಮ್ಮಲ್ಲಿ ಈಗ ಅಗತ್ಯಗಳ ಎರಡು ಪಟ್ಟಿಗಳಿವೆ. ಈ ಎರಡು ಪಟ್ಟಿಗಳಿಂದ ಅಸಾಮರ್ಥ್ಯವಿರುವ ಮಕ್ಕಳಿಗೆ ವಿಶೇಷ ಅಗತ್ಯಗಳಿವೆ ಎಂಬುದನ್ನು ನೀವು ಗಮನಿಸಿದ್ದೀರಿ ಎಂದಾಯಿತು. ಈ ವಿಶೇಷ ಅಗತ್ಯಗಳು ಅಸಾಮರ್ಥ್ಯತೆಯ ಸ್ವರೂಪ ಮತ್ತು ತೀವ್ರತೆಗನುಗುಣವಾಗಿ ಭಿನ್ನವಾಗಿರುತ್ತವೆ. ವಿವಿಧ ಮಟ್ಟದ, ವಿವಿಧ ಅಸಾಮರ್ಥ್ಯವಿರುವ ಮಕ್ಕಳ ಈ 'ವಿಶೇಷ ಅಗತ್ಯ'ಗಳನ್ನು ಈ ಘಟಕದಲ್ಲಿ ಚರ್ಚಿಸೋಣ

'ವಿಶೇಷ ಅಗತ್ಯ'ಗಳ ಕುರಿತು ಸ್ವಲ್ಪ ಹೆಚ್ಚಿನ ವಿವರಗಳನ್ನು ತಿಳಿಯೋಣ. ವಿಶೇಷ ಅಗತ್ಯಗಳು ಎಂಬುದು ಅಸಾಮರ್ಥ್ಯವಿರುವವರಿಗೆ ಸಂಬಂಧಿಸಿದ ಪದ. ಇದು ವಿಶೇಷ ಶಿಕ್ಷಣದ ಅಗತ್ಯಗಳು ಎಂಬುದರ ಸಂಕ್ಷಿಪ್ತ ರೂಪ. ಅಸಾಮರ್ಥ್ಯದ ಕಾರಣದಿಂದಾಗಿ ಅವರ ಕಲಿಕೆಯ ರೀತಿ ಮತ್ತು ವೇಗ ಇತರ ಮಕ್ಕಳಿಗೆ ಹೋಲಿಸಿದರೆ ಭಿನ್ನವೂ ನಿಧಾನವೂ ಆಗಬಹುದು. ಒಂದು ಮಗುವಿನ ಶೈಕ್ಷಣಿಕ ಕಾರ್ಯಕ್ರಮವನ್ನು 'ವೈಯಕ್ತಿಕ ಶಿಕ್ಷಣ ಯೋಜನೆ' ಯ ಮೂಲಕ ಉದ್ದೇಶಪೂರ್ವಕವಾಗಿ, ಸಾಮಾನ್ಯವಾಗಿ ಇತರ ಮಕ್ಕಳಿಗೆ ನೀಡುವ ರೀತಿಗಿಂತ ಮಾರ್ಪಡಿಸಿ ಅಳವಡಿಸಿಕೊಳ್ಳಲಾಗು ಶೈಕ್ಷಣಿಕ ಸನ್ನಿವೇಶಗಳಲ್ಲಿ ಈ 'ವಿಶೇಷ ಅಗತ್ಯ' ಎಂಬ ಪದ ಸಕ್ರಿಯವಾಗಿ ಬಳಕೆಯಾಗುತ್ತದೆ.

'ವಿಶೇಷ ಅಗತ್ಯ' ಎಂಬ ಪದಪುಂಜ ಬಹುಅರ್ಥಧಾರಿಯಾದುದು. ಇದು ವ್ಯಾಪಕವಾದ ಅಸಾಮರ್ಥ್ಯಗಳಿಗೆ ಅನ್ವಯವಾಗುತ್ತದೆ. ವಿಶೇಷಅಗತ್ಯವಿರುವ ಮಕ್ಕಳು ವಿಶಿಷ್ಟ ಲಕ್ಷಣಗಳೊಂದಿಗೆ, ಜೀವಾಂತ್ಯ ರೋಗದೊಂದಿಗೆ, ತೀವ್ರ ಸಂಜ್ಞಾನಾತ್ಮಕ ದುರ್ಬಲತೆಯೊಂದಿಗೆ ಅಥವಾ ಗಂಭೀರವಾದ ಮನೋರೋಗದ ಸಮಸ್ಯೆಗಳೊಂದಿಗೆ ಹುಟ್ಟಿರಬಹುದು. ವಿಶೇಷ ಅಗತ್ಯವುಳ್ಳ ಇತರ ಮಕ್ಕಳು ಕಲಿಕಾ ಅಸಾಮರ್ಥ್ಯಗಳು, ಆಹಾರದ ಅಲರ್ಜಿಗಳು, ವಿಕಾಸಾತ್ಮಕ ವಿಳಂಬತೆ ಅಥವಾ ತೀವ್ರತರವಾದ ಆಘಾತಗಳ ಪರಿಣಾಮವನ್ನನುಭವಿಸುತ್ತಿರಬಹುದು.

ಆದರೆ ನಮ್ಮ ವ್ಯಾಪ್ತಿಯಲ್ಲಿ ನಾವು, ಒಂದು ಅಂತರ್ಗತ ಶಾಲಾ ಸನ್ನಿವೇಶದಲ್ಲಿ ವಿದ್ಯಾರ್ಥಿಗಳು ಕಲಿತು ಗರಿಷ್ಠ ಪ್ರಮಾಣದಲ್ಲಿ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುವಂತೆ ಮಾಡಲು ಯಾವ ವಿಶೇಷ ಅಗತ್ಯಗಳನ್ನು ಚರ್ಚಿಸಿ ಸೂಕ್ತಕ್ರಮವನ್ನು ಕೈಗೊಳ್ಳಬೇಕು ಎಂಬುದನ್ನು ನೋಡೋಣ. ಹೆಚ್ಚು ನಮ್ಯತೆಯುಳ್ಳ ಮಕ್ಕಳ ವಿಶೇಷ ಅಗತ್ಯಗಳನ್ನು ಪೂರೈಸಲು ಸಮರ್ಥವಾದ ವ್ಯವಸ್ಥೆ ಎಲ್ಲರಿಗೂ ಶೈಕ್ಷಣಿಕ ಯಶಸ್ಸನ್ನು ಉಂಟುಮಾಡುತ್ತದೆ. ಇಷ್ಟಾದರೂ ನಾವು ಸಾರಾಂಶಿಸುವ ಕಲಿಕಾ ಅಗತ್ಯಗಳ ವಿವರಣೆ ಸಮಗ್ರವಾದುದು ಎಂದು ಭಾವಿಸುವಂತಿಲ್ಲ. ಅಂತರ್ಗತ ಶಿಕ್ಷಣದ ವ್ಯಾಪ್ತಿಯಲ್ಲಿ ವಿಶೇಷ ಅಗತ್ಯಗಳನ್ನು ಪೂರೈಸುವುದು ಅದರ ಯಶಸ್ಸಿಗೆ ಸರ್ವೌಷಧ ಎಂದೇನೂ ಇಲ್ಲ. ಇದು ಒಟ್ಟು ವ್ಯವಸ್ಥೆಯಲ್ಲಿ ಆಗಬೇಕಾದ ಸಿದ್ಧತೆಯ ಒಂದು ಭಾಗವಷ್ಟೆ. ಅಂದಮೇಲೆ, ಕಲಿಯುವವರೆಲ್ಲರ ಕಲಿಕೆ ಸಮರ್ಪಕವಾದುದಾಗಬೇಕಾದರೆ ಇದರ ಜೊತೆಗೆ ಮತ್ತೂ ಹಲವಾರು ಬದಲಾವಣೆಗಳಾಗಬೇಕು ಎಂಬ ಸತ್ಯದ ಅರಿವಿನ ಹಿನ್ನೆಲೆಯಲ್ಲೇ ನಾವು ಈ ಘಟಕವನ್ನು ಪ್ರಾರಂಭಿಸೋಣ.

## 2.1.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

## ವಿವಿಧ ರೀತಿಯ ಅಸಾಮರ್ಥ್ಯಗಳುಳ್ಳ ಮಕ್ಕಳ ವಿಶೇಷ ಅಗತ್ಯಗಳು

ಅಸಾಮರ್ಥ್ಯಗಳುಳ್ಳ ಮಕ್ಕಳ ವಿಶೇಷ ಅಗತ್ಯಗಳು ಎಂಬ ಮಾತು ಸಾಧಾರಣ ಅಸಾಮರ್ಥ್ಯವಿರುವ ಮಕ್ಕಳಿಂದ ಹಿಡಿದು ಜೀವನಪರ್ಯಂತ ಅಸಾಮರ್ಥ್ಯತೆ ಮುಂದುವರಿಯುವ ಮಕ್ಕಳವರೆಗೆ ಹರಡಿಕೊಂಡಿದೆ. ಈ ಮಕ್ಕಳಿಗೆ ಹೆಚ್ಚುವರಿ ಬೆಂಬಲ ಮತ್ತು ಸೇವೆಗಳ ಅಗತ್ಯವಿರುತ್ತದೆ. ಅವರ ಗುರಿಗಳು ವಿಭಿನ್ನವಾಗಿರುತ್ತದೆ. ಹಾಗಾಗಿ ಶೈಕ್ಷಣಿಕ, ಸಾಮಾಜಿಕ, ಭಾವನಾತ್ಮಕ ಮತ್ತು ವೈದ್ಯಕೀಯ ಮೈಲಿಗಲ್ಲುಗಳನ್ನು ತಲುಪಲು ಹೆಚ್ಚಿನ ಮಾರ್ಗದರ್ಶನ ಮತ್ತು ಸಹಾಯ ಬೇಕಾಗುತ್ತದೆ. ವಸತಿ, ಉದ್ಯೋಗ, ಸಾಮಾಜಿಕ ಭಾಗವಹಿಕೆ ಮತ್ತು ಹಣಕಾಸಿನ ವಿಷಯಗಳಿಗೆ ಸಂಬಂಧಿಸಿದಂತೆಯೂ ಅಸಾಮರ್ಥ್ಯವುಳ್ಳವರಲ್ಲಿ ಕೆಲವರಿಗೆ ಜೀವನಪರ್ಯಂತ ಮಾರ್ಗದರ್ಶನ ನೀಡಬೇಕಾಗುತ್ತದೆ.

ಅಸಾಮರ್ಥ್ಯವುಳ್ಳ ಮಕ್ಕಳು ಶೈಕ್ಷಣಿಕ, ಸಾಮಾಜಿಕ ಮತ್ತು ಭಾವನಾತ್ಮಕ ಸಾಮರ್ಥ್ಯಗಳನ್ನು ಗರಿಷ್ಠಮಟ್ಟದಲ್ಲಿ ಬೆಳೆಸಿಕೊಳ್ಳಲು ಅವರಿಗೆ ಅಸಾಮರ್ಥ್ಯತೆಯ ಸುಳಿವು ಸಿಕ್ಕ ಕೂಡಲೇ ಪರಿಹಾರ, ಸಹಾಯ ವ್ಯವಸ್ಥೆಯನ್ನು ಕೈಗೊಳ್ಳುವುದು ಅತ್ಯಗತ್ಯ. ಅಂದರೆ ಅವರ ವಿಕಾಸಾತ್ಮಕ ಸಾಮರ್ಥ್ಯಗಳ ಮಾಪನ ಇಲ್ಲಿ ಮೊದಲಾಗಬೇಕು. ಮಕ್ಕಳು ಯಾವ ಯಾವ ಹಂತದಲ್ಲಿ ಯಾವ ರೀತಿಯ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುತ್ತಾರೆ ಎಂಬುದರ ಕುರಿತ ಅರಿವು ಈಗಾಗಲೇ ಆ ಕುರಿತ ಸಾಹಿತ್ಯದಲ್ಲಿ ಮತ್ತು ನಮ್ಮ ದಿನನಿತ್ಯದ ಅನುಭವದಲ್ಲಿ ಸ್ಪಷ್ಟವಾಗಿದೆ. ಇದಕ್ಕೂ ನಾವು ವೀಕ್ಷಿಸುವಂತ ಮಗುವಿನ ಬೆಳವಣಿಗೆಗೂ ಏನಾದರೂ ವ್ಯತ್ಯಾಸವಿದ್ದಲ್ಲಿ ತಕ್ಷಣವೇ ಅಗತ್ಯ ಕ್ರಮ ಕೈಗೊಳ್ಳಬೇಕು.

ಯಾವ ಯಾವ ಅಸಾಮರ್ಥ್ಯಗಳಿಗೆ ಯಾವ ಕ್ರಮ ಎಂಬುದನ್ನು ಕುರಿತ ಕಾರ್ಯಕ್ರಮ ಲಭ್ಯವಿದೆ. ಇದು ಮಗುವಿನ ವಿಕಾಸಾತ್ಮಕ ಕೌಶಲಗಳನ್ನು ಬೆಳೆಸಲು ಮತ್ತು ವಿಕಾಸಾತ್ಮಕ ಬೆಳವಣಿಗೆಯನ್ನು ವೃದ್ಧಿಸಲು ಸಹಾಯಮಾಡುತ್ತದೆ.

ವಿಶಿಷ್ಟವಾಗಿ, ವಿಶೇಷ ಅಗತ್ಯಗಳುಳ್ಳ ವ್ಯಕ್ತಿಗಳ ಕುಟುಂಬಗಳು ಭಾವನಾತ್ಮಕವಾಗಿ ಮತ್ತು ಹಣಕಾಸಿನ ವಿಷಯವಾಗಿ ಜೀವನಪರ್ಯಂತ ಸವಾಲುಗಳೊಡನೆಯೇ ಪಯಣ ಬೆಳೆಸುತ್ತವೆ. ಆ ಕುಟುಂಬಗಳು ಅಸಂಖ್ಯಾತ ಭಾವನಾತ್ಮಕ ಕಷ್ಟಗಳನ್ನು ಅನುಭವಿಸುತ್ತವೆ. ಅಸಾಮರ್ಥ್ಯಗಳ ಕಾರಣದಿಂದಾಗಿ ಕೋಪ, ನಷ್ಟ, ದುಃಖ, ಮತ್ತು ನಿರಾಕರಣೆ ಇವು ಸರ್ವೇ ಸಾಮಾನ್ಯ. ಅಂತಹ ಸಂದರ್ಭಗಳಲ್ಲಿ ಅವರು

ತಾಳ್ಮೆಯಿಂದಿರುವುದೊಂದೇ ಅದನ್ನು ಜಯಿಸುವ ಮಾರ್ಗ. ಏಕೆಂದರೆ ಈ ಭಾವನೆಗಳು ಒಟ್ಟು ಪ್ರಕ್ರಿಯೆಯಲ್ಲಿ ಸ್ವಾಭಾವಿಕವಾದವುಗಳು. ಕಾಲಕಳೆದಂತೆ ಅದನ್ನು ಒಪ್ಪಿಕೊಂಡು ಮಗುವಿಗೆ ಸಹಾಯಮಾಡುವ ಶಕ್ತಿ ತುಂಬಿ ಬರುತ್ತದೆ.

ಮಕ್ಕಳ ವಿಶೇಷ ಅಗತ್ಯಗಳನ್ನು ಆಲೋಚಿಸುವಾಗ ನಮ್ಮ ಗಮನ ಪ್ರಮುಖವಾಗಿ ಅವರ ಆರೋಗ್ಯ, ಭದ್ರತೆ, ಶಿಕ್ಷಣ, ಸಂತೋಷ, ನೈತಿಕ ಬೆಂಬಲ, ಸಾಧನೆ , ಧನಾತ್ಮಕ ಕೊಡುಗೆಗಳು ಮತ್ತು ಅವರ ಯಶಸ್ಸಿನ ಕಡೆಗಿರಬೇಕು. ಕೆಲವೊಮ್ಮೆ ಅಸಾಮರ್ಥ್ಯವುಳ್ಳ ಕೆಲವು ಮಕ್ಕಳ ವಿಶೇಷ ಅಗತ್ಯಗಳು ಕಲಿಕಾ ಪ್ರಕ್ರಿಯೆಗೆ ವಿರುದ್ಧವಾಗಿರಬಹುದು. ಉದಾಹರಣೆಗೆ, ಮಗು ಅಸಾಮರ್ಥ್ಯದ ಹಿನ್ನೆಲೆಯಲ್ಲಿ ಇತರ ಮಕ್ಕಳಿಗೆ ದೈಹಿಕವಾಗಿ ಹಿಂಸೆ ಕೊಡಬಹುದು. ಅಂತಹ ಸಂದರ್ಭಗಳಲ್ಲಿ ಅಂತಹ ಮಕ್ಕಳನ್ನು ಪ್ರತ್ಯೇಕ ಸನ್ನಿವೇಶದಲ್ಲಿರಿಸಿ ಮೂಲವಾಹಿನಿಗೆ ಸೇರಿಸಿಕೊಳ್ಳುವಷ್ಟು ವರ್ತನಾ ಬದಲಾವಣೆಯಾದ ನಂತರ ಸಾಮಾನ್ಯ ಶಾಲೆಗಳಿಗೆ ಸೇರಿಸಬಹುದು. ಒಟ್ಟಿನಲ್ಲಿ ಯಾವುದೇ ಕ್ರಮ ಅಂತರ್ಗತತೆಯ ಸನ್ನಿವೇಶದಲ್ಲಿ ಅಸಾಮರ್ಥ್ಯವಿರುವ ಮಕ್ಕಳಿಗಾಗಲೀ ಇತರ ಮಕ್ಕಳಿಗಾಗಲಿ ತೊಂದರೆಯಾಗಬಾರದು, ಮಾತ್ರವಲ್ಲ ಇಬ್ಬರೂ ಬೆಳೆಯಲು ಅವಕಾಶವಾಗಬೇಕು.

ಈ ಘಟಕದಲ್ಲಿ ನಾವು ಪ್ರಮುಖವಾಗಿ ಕೆಳಗಿನ ಕ್ಷೇತ್ರಗಳಲ್ಲಿ ಅಸಾಮರ್ಥ್ಯ ಹೊಂದಿರುವ ಮಕ್ಕಳ ವಿಶೇಷ ಅಗತ್ಯಗಳಿಗೆ ಸಂಬಂಧಿಸಿದಂತೆ ಚರ್ಚಿಸೋಣ.

- ಸಂಜ್ಞಾನಾತ್ಮಕ ಮತ್ತು ಕಲಿಕಾ ಕ್ಷೇತ್ರ
- ವರ್ತನಾತ್ಮಕ ಮತ್ತು ಭಾವನಾತ್ಮಕ ಕ್ಷೇತ್ರ
- ಐಂದ್ರಿಯಾತ್ಮಕ ಮತ್ತು ದೈಹಿಕ ಕ್ಷೇತ್ರ.

ವಿಶೇಷ ಅಗತ್ಯಗಳನ್ನು ಪೂರೈಸುವ ದೃಷ್ಟಿಯಿಂದ ಅಸಾಮರ್ಥ್ಯವಿರುವವರನ್ನು ವರ್ಗೀಕರಿಸುವುದು ಮತ್ತು ಹೆಸರಿಸುವುದು ಅತ್ಯಂತ ಪ್ರಮುಖವಾಗುತ್ತದೆ. ಈ ವರ್ಗೀಕರಣವನ್ನು ಅಗತ್ಯವಿರುವ ಸಂದರ್ಭಗಳಲ್ಲಿ ಅವರನ್ನು ಭಿನ್ನವಾಗಿ ಗುರುತಿಸಲು ಮತ್ತು ನಿರ್ದಿಷ್ಟ ಅಸಾಮರ್ಥ್ಯವನ್ನು ಕುರಿತು ಅರ್ಥಪೂರ್ಣವಾಗಿ ಮತ್ತು ಸಮರ್ಪಕವಾಗಿ ಸಂವಹನ ಮಾಡಲು ಸಾಧ್ಯವಾಗುತ್ತದೆ. ಆದರೆ, ಈ ರೀತಿಯ ವರ್ಗೀಕರಣ ಕೆಲವೊಮ್ಮೆ ಅವರ ಋಣಾತ್ಮಕ ಅಂಶಗಳನ್ನು ಗಮನಿಸುವುದರಲ್ಲಿ ನಿರತವಾಗಿಬಿಡುತ್ತದೆ. ಇದರಿಂದ ಜನರು ಅವರ ಧನಾತ್ಮಕ ವೈಲಕ್ಷಣ್ಯಗಳು ಮತ್ತು ಶಕ್ತಿಗಳ ಬದಲಿಗೆ, ಅಸಾಮರ್ಥ್ಯಗಳ ಕಡೆಗೆ ನೋಡುವಂತಾಗಿಬಿಡಬಹುದು. ಅಂದಮಾತ್ರಕ್ಕೆ ವರ್ಗೀಕರಣವನ್ನೇ ಬಿಟ್ಟುಬಿಡಬೇಕೆಂದೇನೂ ಇಲ್ಲ. ಅದು ಅನಪೇಕ್ಷಿತ ಪರಿಣಾಮಗಳನ್ನುಂಟುಮಾಡದಂತೆ ಎಚ್ಚರಿಕೆಯಿಂದಿರಬೇಕಷ್ಟೆ.

ಅಸಾಮರ್ಥ್ಯವಿರುವ ಮಕ್ಕಳ ವಿಭಿನ್ನ ಅಗತ್ಯಗಳನ್ನು ಪೂರೈಸಲು ಯೋಜಿಸುವಾಗ ಅಂತರ್ಗತ ಶಿಕ್ಷಣದ ನಿಯಮಗಳು, ಸಂಶೋಧನೆ ಮತ್ತು ಅಭ್ಯಾಸಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಈ ಮಕ್ಕಳಿಗೆ ನಿರ್ದಿಷ್ಟ ಅಗತ್ಯಗಳ ಆಧಾರದ ಮೇಲೆ ಶಿಕ್ಷಣಕ್ಕೆ ಅವಕಾಶ ಮಾಡಿಕೊಡಲಾಗಿದೆ. ಮೊದಲಿಗೆ ಈ ಅವಕಾಶ ದಾನಧರ್ಮಗಳ ರೀತಿಯ ಪ್ರಯತ್ನಗಳಲ್ಲಿ ಪ್ರಾರಂಭವಾಯಿತು. ಆ ಸಮಯದಲ್ಲಿ ಈ ಮಕ್ಕಳಿಗೆ ಸಂಬಂಧಿಸಿದಂತೆ ಶಿಕ್ಷಣಕ್ಕಿಂತ ತರಬೇತಿಗೆ ಹೆಚ್ಚು ಒತ್ತುಕೊಡಲಾಗಿತ್ತು. ಈ ಸಂದರ್ಭದಲ್ಲಿ ಹೆತ್ತವರು ತಮ್ಮ ಈ ರೀತಿಯ ಮಕ್ಕಳಿಗೆ ತರಬೇತಿಗಿಂತ ಇತರ ಮಕ್ಕಳಂತೆ ಶಿಕ್ಷಣ ನೀಡಬೇಕೆಂದು ಬಯಸಿದರು. ಹೀಗಾಗಿ ವಿಭಿನ್ನ ಅಗತ್ಯಗಳಿರುವ ಮಕ್ಕಳಿಗೆ ಶೈಕ್ಷಣಿಕ ಅವಕಾಶಗಳನ್ನೊದಗಿಸಲು ಪೋಷಕ ಸಂಘಗಳು ಪ್ರಾರಂಭವಾದವು.

ಈ ವಿಷಯವನ್ನು ಕುರಿತು ಚರ್ಚೆಮಾಡಲು ಈವರೆಗೆ ಗಮನಿಸಲಾದ ಅಂಶಗಳು ಸಹಾಯಕವಾಗುವುವು. ಅಂತರ್ಗತ ಸನ್ನಿವೇಶದಲ್ಲಿ ಗಮನಿಸಲಾಗುವ ವಿವಿಧ ಸವಾಲುಗಳನ್ನುಳ್ಳ ಮಕ್ಕಳು ಮತ್ತು ಅವರ ಅಗತ್ಯಗಳನ್ನು ಮುಂದೆ ಗಮನಿಸೋಣ. ಅಂತರ್ಗತ ಸನ್ನಿವೇಶದಲ್ಲಿ ಕೆಳಕಂಡ ಸವಾಲುಗಳುಳ್ಳ ಮಕ್ಕಳ ವಿಶೇಷ ಅಗತ್ಯಗಳನ್ನು ಗಮನಿಸಲಾಗುತ್ತದೆ.

- ಶ್ರವಣ ಸಂಬಂಧಿ ಸವಾಲುಗಳುಳ್ಳ ಮಕ್ಕಳು
- ದೃಷ್ಟಿ ಸಂಬಂಧಿ ಸವಾಲುಗಳುಳ್ಳ ಮಕ್ಕಳು
- ಬುದ್ಧಿ ಸಂಬಂಧಿ ಸವಾಲುಗಳುಳ್ಳ ಮಕ್ಕಳು
- ಕಲಿಕಾ ಸಂಬಂಧಿ ಸವಾಲುಗಳುಳ್ಳ ಮಕ್ಕಳು
- ಮೂಳೆ ಸಂಬಂಧಿ ಸವಾಲುಗಳುಳ್ಳ ಮಕ್ಕಳು
- ಭಾವನಾತ್ಮಕ ವರ್ತನಾ ಸಂಬಂಧಿ ಸವಾಲುಗಳುಳ್ಳ ಮಕ್ಕಳು
- ವಿಶೇಷ ಆರೋಗ್ಯ ಸಮಸ್ಯೆಯುಳ್ಳ ಮಕ್ಕಳು
- ಬಹು ಸವಾಲುಗಳುಳ್ಳ ಮಕ್ಕಳು

## 2.1.3.1 ಶ್ರವಣ ಮತ್ತು ದೃಷ್ಟಿ ಸಂಬಂಧಿ ಸವಾಲುಗಳುಳ್ಳ ಮಕ್ಕಳು

### (I) ಶ್ರವಣ ಸಂಬಂಧಿ ಸವಾಲುಗಳುಳ್ಳ ಮಕ್ಕಳು

ಮೊದಲಿಗೆ ಶ್ರವಣ ಸಂಬಂಧಿತ ಸವಾಲುಗಳುಳ್ಳ ಮಕ್ಕಳ ಕುರಿತು ಕಲಿಯೋಣ. ಕೇಳುವ ವ್ಯವಸ್ಥೆಯಲ್ಲಿ (ಯಾಂತ್ರಿಕ) ದೋಷವಿರುವ ಮತ್ತು ಭಾಷಾ ಬೆಳವಣಿಗೆಯಲ್ಲಿ ತೊಂದರೆಯನ್ನು ಎದುರಿಸುವ ಮಕ್ಕಳು ಈ ವರ್ಗಕ್ಕೆ ಸೇರುತ್ತಾರೆ. ಇದನ್ನು ಕಿವುಡು ಎಂದೂ ಹೇಳಲಾಗುತ್ತದೆ. ಕೆಲವು ಮಕ್ಕಳಲ್ಲಿ ಕಿವುಡುತನ ಕಡಿಮೆ ಪ್ರಮಾಣದಲ್ಲಿದ್ದರೆ ಕೆಲವು ಮಕ್ಕಳಲ್ಲಿ ತೀವ್ರವಾಗಿರುತ್ತದೆ. ಶ್ರವಣ ಸಂಬಂಧಿ ಸವಾಲುಗಳುಳ್ಳ ಮಕ್ಕಳು ಪಾರ್ಶ್ವಿಕ ಕೇಳುಗರಾಗಿರಬಹುದು ಇಲ್ಲವೇ ಗಣನೀಯ ಮಟ್ಟದ ಶ್ರವಣ ದೋಷ ಉಳ್ಳವರಾಗಿರಬಹುದು.

ಕೇಳುವಿಕೆಯಲ್ಲಿ 20ರಿಂದ 50 ಡಿಬಿ (dB-decibel)ರವರೆಗಿನ ನಷ್ಟವಿದ್ದರೆ ಅವರನ್ನು ಪಾರ್ಶ್ವಿಕ ಕೇಳುಗರು ಎನ್ನುವರು. ಅಂದರೆ ಅವರು ಅತ್ಯಂತ ಗಟ್ಟಿಯಾಗಿ ಮಾತನಾಡಿದರೆ ಶ್ರವಣ ಸಾಧನವಿಲ್ಲದೆ ಕೇಳಬಲ್ಲರು. ಶ್ರವಣ ಸಾಧನವಿದ್ದರೆ ಇತರರಂತೆಯೇ ಅಂದರೆ ಶ್ರವಣದೋಷ ಇಲ್ಲದಿರುವವರಂತೆ ಕೇಳಬಲ್ಲರು.

ಕಿವಿಯು ಎಷ್ಟು ಗಟ್ಟಿಯಾಗಿ ಕೇಳಬಲ್ಲುದು ಎಂಬುದನ್ನು ಸಿಗ್ನಲ್‌ಗಳ ಶಕ್ತಿಯ ರೂಪದಲ್ಲಿ ಮಾಪನಮಾಡುವ ಮಾನ ಅಥವಾ ಅಳತೆಗೆ ಡೆಸಿಬೆಲ್ ಎನ್ನುವರು. ಈ ಡೆಸಿಬೆಲ್ ಎಂಬುದು ಗಂಟೆಯ (bell) 1/10 ಭಾಗವಾಗಿದ್ದು ಶಬ್ದದ ಒಂದು ಘಟಕ. ಇದನ್ನು ಅಲೆಕ್ಸಾಂಡರ್ ಗ್ರಹಾಂಬೆಲ್‌ನ(ಶಬ್ದವನ್ನು ಅಳೆಯುವ ತಂತ್ರವನ್ನು ಕಂಡುಹಿಡಿದವ) ನೆನಪಿನಲ್ಲಿ ಕರೆಯಲಾಗಿದೆ. ಆದರ್ಶ ಸನ್ನಿವೇಶಗಳಲ್ಲಿ ಶಬ್ದದಲ್ಲಿನ 1ಡಿಬಿ ಬದಲಾವಣೆಯನ್ನು ಗುರುತಿಸಲು ಸಾಧ್ಯವಾಗುತ್ತದೆ. ಮಾನವನ ಕಿವಿಯು ವಿಶಾಲ ವ್ಯಾಪ್ತಿಯ ಶಬ್ದಗಳನ್ನು ಕೇಳುತ್ತದೆ/ತಡೆದುಕೊಳ್ಳುತ್ತದೆ. ಈ ಕೇಳಬಹುದಾದ/ಗುರುತಿಸಬಹುದಾದ/ ತಡೆದುಕೊಳ್ಳಬಹುದಾದ ವ್ಯಾಪ್ತಿಯನ್ನು ಡಿಬಿಗಳಿಂದ ಅಳೆಯಲಾಗುತ್ತದೆ. ಭೂಕಂಪನಗಳನ್ನು ರಿಕ್ಟರ್ ಮಾಪನಗಳಲ್ಲಿ ಅಳೆಯುವಂತೆ.

| |
|---|
| ಮಾನವನ ಕಿವಿ/ಮಿದುಳು 130ಡಿಬಿಗಳನ್ನು ತಡೆದುಕೊಳ್ಳಬಲ್ಲುದು. ಪಿಸುಮಾತು 30ಡಿಬಿ, ಸಾಮಾನ್ಯ ಸಂಭಾಷಣೆ 60ಡಿಬಿ, ಒಂದು ಸಂಗೀತ ಕಛೇರಿ 100ರಿಂದ 115ಡಿಬಿ, ಅಗ್ನಿಶಾಮಕದಳದ ಗಂಟೆ ಅಥವಾ ಬಂದೂಕಿನ ಶಬ್ದ 175 ಡಿಬಿ ಎಂದು ಅಂದಾಜುಮಾಡಲಾಗಿದೆ. ಶಬ್ದ 140 ಡಿಬಿಯನ್ನು ದಾಟಿದಾಗಲೇ ಕಿವಿಗೆ ಹಾನಿಯಾಗಲು ಪ್ರಾರಂಭವಾಗುತ್ತದೆ. 20ಡಿಬಿ ಗಿಂತ ಕಡಿಮೆ ನಷ್ಟವನ್ನು ಅಥವಾ ಕಳೆದುಕೊಂಡಿರುವಿಕೆಯನ್ನು 'ಸಹಜ' ಎಂದು ಪರಿಗಣಿಸಲಾಗುತ್ತದೆ. |

ಗಟ್ಟಿಯಾಗಿ ಮಾತನಾಡಿದರೂ ಕೇಳಿಸದವರನ್ನು ತೀವ್ರ ಶ್ರವಣ ಸವಾಲುಳುಳ್ಳವರು ಅಥವಾ ಕಿವುಡರು ಎಂದು ಪರಿಗಣಿಸಲಾಗುತ್ತದೆ. ಶ್ರವಣ ಸಾಧನವನ್ನು ಬಳಸಿದರೂ ಅವರಿಗೆ ಸರಿಯಾಗಿ ಕೇಳಲು ಕಷ್ಟವಾಗುತ್ತದೆ. ಅವರಿಗೆ 65ರಿಂದ 120ಡಿಬಿ ವರೆಗೆ ಶ್ರವಣ ನಷ್ಟವಿರುತ್ತದೆ. ಅಂತಹ ಮಕ್ಕಳನ್ನು ಸಾಮಾನ್ಯ ಶಾಲೆಗೆ ಸೇರಿಸುವ ಮೊದಲೇ ಅವರಿಗೆ ವಿಶೇಷ ತಂತ್ರಗಳ ಮೂಲಕ ಮೂಲಭೂತ ಕೌಶಲಗಳಲ್ಲಿ ತರಬೇತಿ ಕೊಟ್ಟಿರಬೇಕು. ಉಳಿಕೆ ಕೇಳುವಿಕೆಯನ್ನು ಬಳಸುವ ಮೂಲಕ ಗ್ರಹಿಕೆಯನ್ನು ಸಕ್ರಿಯಗೊಳಿಸಲು ಅವರಿಗೆ ಶ್ರವಣ ಸಾಧನಗಳನ್ನು ಬಳಸಲಾಗುತ್ತದೆ. ಶ್ರವಣ ಸಂಬಂಧಿ ಸವಾಲುಗಳಿರುವ ಮಕ್ಕಳ ಗುಣಲಕ್ಷಣಗಳು ಕೆಳಕಂಡಂತಿವೆ:

- ಭಾಷೆಯ ತಡವಾದ ಬೆಳವಣಿಗೆಯಿಂದಾಗಿ ಈ ಮಕ್ಕಳು ಹೇಳಿದ ಸೂಚನೆಗಳನ್ನು ಪುನರುಚ್ಚರಿಸಲು ಕೇಳುತ್ತಾರೆ;
- ಈ ಮಕ್ಕಳಲ್ಲಿ ಗಮನರಾಹಿತ್ಯ ಮತ್ತು ಚಡಪಡಿಕೆ ಕಾಣುತ್ತದೆ;
- ಈ ಮಕ್ಕಳ ಕಿವಿಯಲ್ಲಿ ಕಾಣುವಂತಹ ಊನವಿರುತ್ತದೆ;
- ಆಗಿಂದಾಗ್ಗೆ ಕಿವಿಯಲ್ಲಿ ನೋವು ಎಂದು ಹೇಳುತ್ತಿರುತ್ತಾರೆ;
- ಕೊಟ್ಟ ಸೂಚನೆಗಳನ್ನು ಅನುಸರಿಸಲಾಗುವುದಿಲ್ಲ;
- ಮತ್ತೊಬ್ಬರು ಮಾತನಾಡುವುದನ್ನು ಕೇಳುವಾಗ ಅರ್ಥಮಾಡಿಕೊಳ್ಳಲು ಅವರ ಮುಖ ಮತ್ತು ತುಟಿಗಳ ಚಲನೆಯನ್ನು ಗಮನಿಸುತ್ತಿರುತ್ತಾರೆ;
- ಅಧ್ಯಾಪಕರು ತರಗತಿಯಲ್ಲಿ ಟಿಪ್ಪಣಿ ಕೊಡುವಾಗ ಪಕ್ಕದಲ್ಲಿರುವ ಮಕ್ಕಳ ಸಹಾಯ ಕೇಳುತ್ತಿರುತ್ತಾರೆ;
- ಸಂವಹನ ಸಂಬಂಧಿ ಸಮಸ್ಯೆಗಳಿರುವುದರಿಂದ ಅಂತರ್ ವ್ಯಕ್ತಿ ಸಂಬಂಧಗಳಲ್ಲಿ ಸಮಸ್ಯೆಗಳಿರುತ್ತವೆ;
- ಭಾಷಾ ಗ್ರಹಿಕೆ ಮತ್ತು ಅಭಿವ್ಯಕ್ತಿಗಳಲ್ಲಿರುವ ಸಮಸ್ಯೆಗಳು ಸಂಜ್ಞಾನಾತ್ಮಕ ಪ್ರಕ್ರಿಯೆಗಳಾದ ಸಮೀಕರಿಸಿಕೊಳ್ಳುವಿಕೆ, ಅಮೂರ್ತತೆಯನ್ನು ಗ್ರಹಿಸುವಿಕೆ, ವರ್ಗೀಕರಣ, ಸಾಮಾನ್ಯೀಕರಣ, ಇಂತಹವುಗಳ ಮೇಲೆ ಪ್ರಭಾವ ಬೀರುತ್ತವೆ. ಹಾಗಾಗಿ ಅಮೂರ್ತ ಪರಿಕಲ್ಪನೆಗಳ ಕಲಿಕೆಯು, ಉದಾಹರಣೆಗೆ ಬೀಜಗಣಿತ, ರೇಖಾಗಣಿತ ಇವು ಇಂತಹ ಮಕ್ಕಳಿಗೆ ಸವಾಲಾಗುತ್ತವೆ.
- ಈ ಮಕ್ಕಳು ಶೈಕ್ಷಣಿಕ ಸಾಧನೆಯಲ್ಲೂ ವಿವಿಧ ಪ್ರಮಾಣದ ದುರ್ಬಲರಾಗಿರುತ್ತಾರೆ. ಉದಾಹರಣೆಗೆ, ಭಾಷೆಯ ಸಮಸ್ಯೆ ಇರುವುದರಿಂದ ಓದುವ ಕೌಶಲಗಳನ್ನು ಬೆಳೆಸುವುದು ಕಷ್ಟವಾಗುತ್ತದೆ. ಓದುವಿಕೆಯಲ್ಲಿ ಯಶಸ್ಸು ಕಷ್ಟಸಾಧ್ಯ.

- ಇಂತಹ ಮಕ್ಕಳಲ್ಲಿ ಗಣಿತಕ್ಕೆ ಸಂಬಂಧಿಸಿದ ಸಮಸ್ಯೆಗಳು ತೀವ್ರವಾಗಿರುತ್ತವೆ. ಈ ವಿಷಯವೇ ಅಮೂರ್ತವಾಗಿರುವುದು ಇದಕ್ಕೆ ಕಾರಣ ಎಂದು ಹೇಳಲಾಗುತ್ತದೆ.
- ಈ ಸವಾಲುಗಳುಳ್ಳ ಮಕ್ಕಳಲ್ಲಿ ಸಾಮಾಜಿಕ ಹೊಂದಾಣಿಕೆಯ ಸಮಸ್ಯೆಯನ್ನೂ ಗಮನಿಸಲಾಗಿದೆ.

**ಅಧ್ಯಾಪಕರು ಏನು ತಿಳಿದಿರಬೇಕು?**

- ಕೆಲವು ಮಕ್ಕಳು ಶ್ರವಣ ದೋಷದೊಂದಿಗೆ ಹುಟ್ಟಿರುತ್ತಾರೆ ಮತ್ತೆಕೆಲವರು ಆಘಾತಗಳು, ಸೋಂಕು ಅಥವಾ ಅತಿ ಗಟ್ಟಿಯಾದ ಶಬ್ದಗಳ ಕೇಳುವಿಕೆ ಇತ್ಯಾದಿ ಸಂದರ್ಭಗಳಲ್ಲಿ ಶ್ರವಣ ಶಕ್ತಿಯನ್ನು ಕಳೆದುಕೊಳ್ಳುತ್ತಾರೆ.
- ಶ್ರವಣ ದೋಷವುಳ್ಳ ಮಕ್ಕಳು ಕಿವಿಯೊಳಗೆ ಅಥವಾ ಕಿವಿಯ ಹಿಂಭಾಗದಲ್ಲಿ ಸಿಕ್ಕಿಸಿಕೊಳ್ಳುವ ಶ್ರವಣ ಸಾಧನವನ್ನು ಬಳಸುವಿಕೆ. ಕೊಕ್ಲಿಯರ್ ಕಸಿಮಾಡಿಸಿಕೊಳ್ಳುಸಿಕೆ, ಅಧ್ಯಾಪಕರ ಬಳಿ ಒಂದು ಮೈಕ್ರೊಫೋನ್/ ಟ್ರಾನ್ಸ್ ಮಿಟರ್ ಮತ್ತು ವಿದ್ಯಾರ್ಥಿಯ ಬಳಿ ರಿಸೀವರ್ ಇರುವಂತೆ ಈಏಒ ಸಿಸ್ಟಮ್‌ಗಳ ಬಳಕೆ ಈ ಮುಂತಾದ ವ್ಯವಸ್ಥೆಗಳಿಂದ ಪಾರ್ಶ್ವ ಕೇಳುವಿಕೆಯವರು ಕೇಳುವಿಕೆಯನ್ನು ನಿರ್ವಹಿಸಬಹುದು.

> ಕೊಕ್ಲಿಯಾರ್ ಇಂಪ್ಲಾಂಟ್ ಒಂದು ಎಲೆಕ್ಟಾನಿಕ್ ವೈದ್ಯಕೀಯ ಸಾಧನವಾಗಿದ್ದು ಅದು ಒಳಕಿವಿಯ (ಕೊಕ್ಲಿಯ) ಹಾನಿಗೊಳಗಾದ ಭಾಗಗಳ ಕೆಲಸವನ್ನು ಅಂದರೆ ಮೆದುಳಿಗೆ ಧ್ವನಿ ಸಂಕೇತಗಳನ್ನು ತಲುಪಿಸುವ ಕೆಲಸವನ್ನು ಮಾಡುತ್ತದೆ. ಇದನ್ನು ಶಸ್ತ್ರಚಿಕಿತ್ಸೆಯ ಮೂಲಕ ಕಿವಿಯೊಳಗೆ ಇರಿಸಲಾಗುತ್ತದೆ. ಶ್ರವಣ ನರಗಳನ್ನು ಇದು ನೇರವಾಗಿ ಪ್ರಚೋದಿಸಿ ಧ್ವನಿಯ ಅನುಭವವನ್ನುಂಟುಮಾಡುತ್ತದೆ. ಇದು ನಷ್ಟವಾಗಿರುವ ಕೇಳುವಿಕೆಯನ್ನು ಸರಿಪಡಿಸುವುದಾಗಲೀ ಅಥವಾ ಹಿಂಪಡೆಯುವಂತಾಗಲೀ ಮಾಡುವುದಿಲ್ಲ. ತೀವ್ರ ಶ್ರವಣದೋಷವಿರುವವರಿಗೆ ಅಥವಾ ಕಿವುಡರಿಗೆ ಧ್ವನಿಯ ಅನುಭವವನ್ನು ಕೊಡಲು ಇದು ಒಂದು ಅವಕಾಶಮಾಡಿಕೊಡುತ್ತದೆ.

- ಇವರ ತರಗತಿಗಳಲ್ಲಿ ಬಳಸುವ ಯಾವುದೇ ಶ್ರವಣ–ದೃಕ್ ವೀಡಿಯೋಗಳಿಗೆ ಟೈಮ್ ಕ್ಯಾಪ್ಶನ್(ಕಾಲ ತೋರಿಸುವ ಉಪಶೀರ್ಷಿಕೆ)ಗಳಿರಬೇಕು.
- ಅವರ ಕಂಪ್ಯೂಟರ್‌ಗಳ ಮೇಲೆ ಧ್ವನಿ ಗುರುತಿಸುವ ತಂತ್ರಾಂಶಗಳಿರಬೇಕು (software). ಇದು ಟಿಪ್ಪಣಿ ತೆಗೆದುಕೊಳ್ಳಲು ಸಹಾಯಮಾಡುತ್ತದೆ.
- ಅವರು ಸನ್ನಿವೇಶದಲ್ಲಿ ಮಾತನಾಡುವವರ ಬಾಯಿಯ ಚಲನೆ, ಮೌಖಿಕ ಅಭಿವ್ಯಕ್ತಿ ಮತ್ತು ಸನ್ನೆಗಳಿಂದ ತುಟಿಗಳ ಚಲನೆಯ ಮೂಲಕ ಅರ್ಥವನ್ನು ಗ್ರಹಿಸುತ್ತಾರೆ. ಇದನ್ನು 'ತುಟಿ–ಓದುವಿಕೆ' ಅಥವಾ 'ಮಾತು–ಓದುವಿಕೆ' ಎಂದು ಹೇಳಲಾಗುತ್ತದೆ. ಇದರ ಪರಿಚಯ ಅಧ್ಯಾಪಕರಿಗಿರಬೇಕು.

ಭಾರತೀಯ ಸನ್ನೆ /ಸಂಕೇತ ಭಾಷೆ/ಕ್ಯೂಡ್ ಮಾತು, ಅಥವಾ ಇತರ ಮೂಕನುಡಿಯನ್ನು ಬಳಸಬೇಕು.




ಕ್ಯೂಡ್ ವ್ಯವಸ್ಥೆ ಎಂಬುದು ಒಂದು ದೃಶ್ಯ ಸಂವಹನ ವ್ಯವಸ್ಥೆ. ಕಿವುಡರು ಮತ್ತು ಅರೆ ಕೇಳುಗರಲ್ಲಿ ಇದನ್ನು ಬಳಸಲಾಗುತ್ತದೆ. ಇದು ಧ್ವನಿಮಾ ಅಧರಿತ ವ್ಯವಸ್ಥೆಯಾಗಿದ್ದು, ಕ್ಯೂಗಳ ಮೂಲಕ ಅಂದರೆ ಅಂಗೈ ಮತ್ತು ಬೆರಳುಗಳನ್ನೊಳಗೊಂಡಂತೆ ಕೈಯನ್ನು ಕೆಲವು ರೀತಿಗಳಲ್ಲಿ ಬಳಸುವುದರ ಮೂಲಕ (ವ್ಯಂಜನಗಳನ್ನು), ಬಾಯಿಯ ಬಳಿ ವಿವಿಧ ಸ್ಥಾನಗಳಲ್ಲಿ ಬೆರಳುಗಳನ್ನು ಬಳಸುವುದರ ಮೂಲಕ (ಸ್ವರಗಳನ್ನು) ಸಾಂಪ್ರದಾಯಿಕವಾಗಿ ಮಾತನಾಡುವ ಭಾಷೆಯ ಬಳಕೆಯಂತೆ ಸಂವಹನವನ್ನು ಸಾಧ್ಯವಾಗುವಂತೆ ಮಾಡುವುದು. ಇದು 'ತುಟಿ ಓದುವಿಕೆ'ಗೆ ಪರ್ಯಾಯ ಮಾರ್ಗ. ಇದು ಸಂಕೇತ ಭಾಷೆಗಿಂತ ಭಿನ್ನವಾದುದು.



ಭಾರತೀಯ ಸನ್ನೆ/ಸಂಕೇತ ಭಾಷೆ.

- ಭಾರತೀಯ ಸನ್ನೆ /ಸಂಕೇತ ಭಾಷೆ/ಕ್ಯೂಡ್ ಮಾತು, ಅಥವಾ ಇತರ ಮೂಕನುಡಿಯನ್ನು ಬಳಸಬೇಕು.
- ಸಂವಹನವನ್ನು ಪರಿಣಾಮಕಾರಿಯಾಗಿಸಲು ವ್ಯಾಖ್ಯಾನಕಾರರಿರಬೇಕು.
- ವಾಕ್ ಚಿಕಿತ್ಸೆಗೆ ಅವಕಾಶವಿರಬೇಕು.
- ತರಗತಿಯಲ್ಲಿ ತುಟಿ ಓದುವಿಕೆಗೆ ಅವಕಾಶವಿರುವಂತೆ ಮಕ್ಕಳ ಎದುರಿಗೆ ಹತ್ತಿರದಲ್ಲೇ ಕುಳಿತುಕೊಳ್ಳಬೇಕು.
- ಹೆಚ್ಚು ಗಲಾಟೆ ಇಲ್ಲದ ಸ್ಥಳದಲ್ಲಿ ಶಿಕ್ಷಣ ಕೊಡಬೇಕು. ಗಮನಹರಿಸಲು ಸಹಕಾರಿ.
- ಹೇಳಿದ ಸೂಚನೆಗಳನ್ನು ಪುನಃ ಪುನಃ ಹೇಳಬೇಕು.

## ಅಧ್ಯಾಪಕರು ಏನು ಮಾಡಬಹುದು?

- ಶ್ರವಣದೋಷವುಳ್ಳ ವಿದ್ಯಾರ್ಥಿಗಳು ಎಲ್ಲ ತರಗತಿ ಚಟುವಟಿಕೆಗಳಲ್ಲಿ ಮತ್ತು ಸಹಪಠ್ಯ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡಬೇಕು; ಶ್ರವಣ ದೋಷವುಳ್ಳ ಅನೇಕ ಮಕ್ಕಳಿಗೆ ತುಟಿಭಾಷೆ ಸಾಧ್ಯವಾಗುತ್ತದೆ. ಇದು ಮಗುವಿಗೆ ಸಂಬಂಧಿಸಿದಂತೆ ಎಷ್ಟು ಕೆಲಸಮಾಡುತ್ತದೆ ಎಂದು ಕಂಡುಕೊಳಬೇಕು. ಅವರಿಗೆ ಅದನ್ನು ಬಳಸಿಕೊಳ್ಳಲು ಸಾಧ್ಯವಾಗುವಂತೆ ನೀವು ನಿಧಾನವಾಗಿ, ಸ್ಪಷ್ಟವಾಗಿ ಸಾಧಾರಣ ಧ್ವನಿಯಲ್ಲಿ ಮಾತನಾಡಬೇಕು. ಅವರಲ್ಲಿ ಧ್ವನಿವರ್ಧಕಗಳಿರುವಾಗ ಸಾಧಾರಣ ಧ್ವನಿಯಲ್ಲಿ ಮಾತನಾಡಿದರೆ ಸಾಕಾಗುತ್ತದೆ. ಹಿನ್ನೆಲೆ ಶಬ್ದಗಳು/ ಗಲಾಟೆ ಇಲ್ಲದಂತೆ ನೋಡಿಕೊಳ್ಳಬೇಕು.

- ಚಿತ್ರಗಳು, ನಕ್ಷೆಗಳು ಮತ್ತು ಪಠ್ಯ ಶೀರ್ಷಿಕೆಗಳನ್ನು ಯಥೇಚ್ಛವಾಗಿ ಬಳಸಬೇಕು. ಕರಿಹಲಗೆಯಲ್ಲಿ ಬರೆಯುವಾಗ ಮಕ್ಕಳಿಗೆ ಬೆನ್ನು ಹಾಕಿ ಮಾತನಾಡಬಾರದು. ಬರೆಯುವುದು ಮುಗಿದ ನಂತರ ಮಾತನಾಡಬೇಕು. ಬಹಳಷ್ಟು ಶ್ರವಣದೋಷವಿರುವ ಮಕ್ಕಳು ದೃಶ್ಯ ಶೈಲಿಯ ಕಲಿಕಾದಾರರು.
- ಮಕ್ಕಳು ಅರ್ಧ ಚಂದ್ರಾಕೃತಿಯಲ್ಲಿ ಕುಳಿತುಕೊಳ್ಳುವಂತೆ ಏರ್ಪಾಡುಮಾಡಬೇಕು. ಅವರು ಅವರ ಸಹಪಾಠಿಗಳ ಜೊತೆ ಅಂತರ್ ಕ್ರಿಯೆಯಲ್ಲಿ ತೊಡಗಿಕೊಳ್ಳಲು ಇದು ಸಹಾಯಮಾಡುತ್ತದೆ.
- ವಿಶೇಷ ಶಿಕ್ಷಣ ಅಧ್ಯಾಪಕರು, ವಾಕ್ ತಜ್ಞರು, ಶಾಲಾ ದಾದಿ ಇವರುಗಳ ಜೊತೆಯಲ್ಲಿ ಚರ್ಚಿಸಿ ಮಗುವಿಗೆ ಯಾವುದಾದರೂ ಶ್ರವಣ ಸಾಧನ ಸಹಾಯವಾಗುತ್ತದೆಯೇ ಎಂದು ಕಂಡುಕೊಳ್ಳಬೇಕು.

## (II) ದೃಷ್ಟಿ ಸಂಬಂಧಿ ಸವಾಲುಗಳುಳ್ಳ ಮಕ್ಕಳು

ದೃಷ್ಟಿಗೆ ಸಂಬಂಧಿಸಿದ ಸಮಸ್ಯೆಗಳುಳ್ಳ ಮಕ್ಕಳು ದೃಷ್ಟಿ ಸಂಬಂಧಿ ಸವಾಲುಗಳುಳ್ಳ ಮಕ್ಕಳು. ಇಂತಹ ವರ್ಗಗಳ ಕೆಲವು ಮಕ್ಕಳು ದೊಡ್ಡದಾಗಿ ಮುದ್ರಿತವಾದ ಅಕ್ಷರಗಳನ್ನು ಓದಬಲ್ಲರು ಮತ್ತು ಅವರ ಪರಿಸರದಲ್ಲಿ ಸಕ್ರಿಯವಾಗಿರಬಲ್ಲರು. ಆದರೆ ಕೆಲವರಿಗೆ ತೀವ್ರತರವಾದ ದೃಷ್ಟಿದೋಷವಿದ್ದು ಅವರಿಗೆ ದೃಶ್ಯವಿಧಾನಗಳಿಂದ ಬೋಧಿಸಲಾಗುವುದಿಲ್ಲ.

ದೃಷ್ಟಿನಷ್ಟವನ್ನು ಮಾಪನ ಮಾಡುವ ಪ್ರಕ್ರಿಯೆಯಲ್ಲಿ ದೃಷ್ಟಿತೀಕ್ಷ್ಣತೆ ಮತ್ತು ದೃಷ್ಟಿ ಕ್ಷೇತ್ರ (visual acuity and visual field ) ಎಂಬ ಎರಡು ಅಂಶಗಳನ್ನು ಪರಿಗಣಿಸಲಾಗುತ್ತದೆ. ದೃಷ್ಟಿದೋಷವನ್ನು ಕುರಿತ ವ್ಯಾಖ್ಯೆಗಳು ಮತ್ತು ವರ್ಣನೆಗಳು ಮಾಪನದ ಅಥವಾ ವರ್ಣನೆಯ ಉದ್ದೇಶವನ್ನು ಅವಲಂಬಿಸಿರುತ್ತವೆ. ಅಂಧರನ್ನು ಕುರಿತಂತೆ, 'ಅಮೆರಿಕನ ಫೌಂಡೇಶನ್ ಫಾರ್‌ದ ಬ್ಲೈಂಡ್' ಸಂಸ್ಥೆಯ ವ್ಯಾಖ್ಯೆ ಹೀಗಿದೆ:

ದೃಷ್ಟಿದೋಷವನ್ನು ಪರಿಹರಿಸಲು ಸಾಧ್ಯವಿರುವ ಕ್ರಮ ತೆಗೆದುಕೊಂಡ ನಂತರವೂ ಯಾರ ದೃಷ್ಟಿತೀಕ್ಷ್ಣತೆ 20/200 ಅಥವಾ ಅದಕ್ಕಿಂತ ಕಡಿಮೆ ಇರುತ್ತದೆಯೋ ಅಥವಾ ಯಾರ ದೃಷ್ಟಿ ಕ್ಷೇತ್ರ 20ಡಿಗ್ರಿ ಅಥವಾ ಅದಕ್ಕಿಂತ ಕಡಿಮೆಯಾಗಿರುತ್ತದೆಯೋ ಅವರನ್ನು 'ಅಂಧರು' ಎಂದು ಗುರುತಿಸಬಹುದು. ಅಂದರೆ ಉತ್ತಮ ದೃಷ್ಟಿಯುಳ್ಳವರು 200 ಅಡಿಯಲ್ಲಿ ನೋಡಬಹುದಾದುದನ್ನು ಇವರು 20 ಅಡಿಗಳ ಅಂತರದಲ್ಲೂ ನೋಡಲಾರರು. ಹಾಗೆಯೇ ಇವರಿಗೆ ಕಾಣುವ ದೃಷ್ಟಿ ಕ್ಷೇತ್ರ 20% ಗಳಿಗಿಂತಲೂ ಕಡಿಮೆ ಇರುತ್ತದೆ.

ಯಾರ ದೃಷ್ಟಿ ತೀಕ್ಷ್ಣತೆ 20/200 ಮತ್ತು 20/70 ರ ನಡುವೆ ಇರುತ್ತದೆಯೋ ಅಥವಾ ಯಾರಿಗೆ ತಾತ್ಕಾಲಿಕ ಅಥವಾ ಶಾಶ್ವತ ವಿಶೇಷ ಶಿಕ್ಷಣ ಸೌಲಭ್ಯಗಳ ಅವಶ್ಯಕತೆ ಇದೆಯೋ ಅವರನ್ನು 'ಪಾರ್ಶ್ವಿಕ ದೃಷ್ಟಿಯುಳ್ಳವರು' ಎಂದು ಪರಿಗಣಿಸಬಹುದು.

ಶೈಕ್ಷಣಿಕವಾಗಿ ಬ್ರೈಲ್ ಅಥವಾ ಇತರ ಸ್ಪರ್ಶ ಅಥವಾ ಶ್ರವಣ ಸಾಮಗ್ರಿಗಳ ಮೂಲಕ ಶಿಕ್ಷಣ ನೀಡಬೇಕಾಗುತ್ತದೆ ಎಂಬುದನ್ನು ಗುರುತಿಸುವಷ್ಟರಮಟ್ಟಿಗೆ ದೃಷ್ಟಿದೋಷವುಳ್ಳವರನ್ನು ಅಂಧರು ಎಂದೂ ಬಳಸಬಹುದಾದ ಉಳಿಕೆಯ ದೃಷ್ಟಿ ಇದ್ದು, ಮುದ್ರಣ ಮತ್ತು ಇತರ ದೃಶ್ಯ ಸಾಮಗ್ರಿಗಳನ್ನು ಶೈಕ್ಷಣಿಕ ಕಾರ್ಯಕ್ರಮದ ಭಾಗವಾಗಿ ಬಳಸಿಕೊಳ್ಳಬಲ್ಲವರನ್ನು ಪಾರ್ಶ್ವಿಕ ದೃಷ್ಟಿಯುಳ್ಳವರು ಎಂದೂ ಗುರುತಿಸಲಾಗುತ್ತದೆ.

ಭಾರತ ಸರ್ಕಾರದ ಅಸಾಮರ್ಥ್ಯವುಳ್ಳವರ ಕಾಯಿದೆ 1995, ಕೆಳಗಿನವುಗಳಲ್ಲಿ ಯಾವುದಾದರೂ ಸನ್ನಿವೇಶವನ್ನು ಅನುಭವಿಸುತ್ತಿರುವವರನ್ನು ಅಂಧರು ಎಂದು ಪರಿಗಣಿಸುತ್ತದೆ.



- ಸಂಪೂರ್ಣವಾದ ದೃಷ್ಟಿನಾಶ.
- ದೃಷ್ಟಿ ತೀಕ್ಷ್ಣತೆ ಸ್ನೆಲನ್ ಚಾರ್ಟ್‌ನಲ್ಲಿ 6/60 ಅಥವಾ 20/200 ರ ಮೇಲೆ ಇಲ್ಲದಿರುವಿಕೆ
- ದೃಷ್ಟಿ ಕ್ಷೇತ್ರ20 ಡಿಗ್ರಿ ಅಥವಾ ಅದಕ್ಕಿಂತ ಕಡಿಮೆಯಾದ ಕೋನದಲ್ಲಿ ಬಾಗಿರುವಿಕೆ.

ಸ್ನೆಲೆನ್ ಚಾರ್ಟ್ ಎಂಬುದು ದೃಷ್ಟಿತೀಕ್ಷ್ಣತೆಯನ್ನು ಅಳೆಯುವ ಒಂದು ಚಾರ್ಟು. ಇದನ್ನು ಕಂಡುಹಿಡಿದವನು ಒಬ್ಬ ಡಚ್ ನೇತ್ರತಜ್ಞ ಹರ್ಮನ್ ಸ್ನೆಲೆನ್ ಎಂಬಾತ. ಅವನ ಹೆಸರಿನಲ್ಲೇ ಇದನ್ನು ಗುರುತಿಸಲಾಗಿದೆ. ಆತ ಇದನ್ನು 1862ರಲ್ಲೇ ತಯಾರಿಸಿದ. ಬಹಳಷ್ಟು ನೇತ್ರತಜ್ಞರು ಮತ್ತು ದೃಷ್ಟಿ ವಿಜ್ಞಾನಿಗಳು ಇಂದು ಇದೇ ಚಾರ್ಟನ್ನು ಅಥವಾ ಇದರ ಪರಿಷ್ಕೃತ ರೂಪವಾದ ಲಾಗ್ ಎಂಎಆರ್ ಚಾರ್ಟನ್ನು ದೃಷ್ಟಿತೀಕ್ಷ್ಣತೆಯನ್ನು ಕಂಡುಹಿಡಿಯಲು ಬಳಸುತ್ತಾರೆ.

**ದೃಷ್ಟಿಸಂಬಂಧಿ ಸವಾಲುಳ್ಳವರ ಗುಣಲಕ್ಷಣಗಳು :**

- ಆಗಾಗೆ ಕಣ್ಣು ಮಿಟುಕಿಸುತ್ತಿರುತ್ತಾರೆ;
- ಪುಸ್ತಕಗಳನ್ನೊಳಗೊಂಡಂತೆ ವಸ್ತುಗಳನ್ನು, ಕಣ್ಣಿಗೆ ಹತ್ತಿರವಾಗಿ ಹಿಡಿದು ನೋಡುತ್ತಾರೆ;
- ಕಣ್ಣನ್ನು ವಿಶೇಷವಾಗಿ ಉಜ್ಜುತ್ತಾರೆ;
- ಕಣ್ಣಿನ ಕೆಲಸ ಮಾಡಿದಾಗಲೆಲ್ಲಾ ತಲೆನೋವು ಎಂದು ಹೇಳುತ್ತಾರೆ;
- ಕರಿಹಲಗೆಯಿಂದ ಟಿಪ್ಪಣಿ ಬರೆದುಕೊಳ್ಳುವಾಗಲೆಲ್ಲ ಪಕ್ಕದಲ್ಲಿರುವವರಿಗೆ ಗಟ್ಟಿಯಾಗಿ ಹೇಳಲು ಹೇಳುತ್ತಾರೆ;
- ವಿಶೇಷವಾಗಿ ಓದುವ ಕೆಲಸ ಕೊಟ್ಟಾಗ ಆಸಕ್ತಿ ಕಳೆದುಕೊಳ್ಳುತ್ತಾರೆ;
- ಕಣ್ಣಿನಲ್ಲಿ ತುಂಬಾ ನೀರು ಸುರಿಯುತ್ತಿರುತ್ತದೆ;
- ನಡೆಯುವಾಗ ಎಡವುತ್ತಾರೆ;
- ಸುತ್ತಮುತ್ತಲಿನ ವಸ್ತುಗಳನ್ನು ಗುರುತಿಸಲಾಗುವುದಿಲ್ಲ; ಮತ್ತು
- ಬೆಳಕಿಗೆ ಕಣ್ಣುಮುಚ್ಚುತ್ತಾರೆ.

**ದೃಷ್ಟಿ ಸಂಬಂಧಿ ಸವಾಲುಳ್ಳವರ ಅಗತ್ಯಗಳು :**

- ಅಧ್ಯಾಪಕರು ಅವರಿಗೆ ಕಾಣುವಂತೆ ಆಸನಗಳ ವ್ಯವಸ್ಥೆ, ಬಿಳಿ, ಹಸಿರು ಹಲಗೆಗಳು, ಶಿರೋನ್ನತ ಹಲಗೆಗಳು–ಪ್ರಕಟಣೆಗಾಗಿ.

- ಕನ್ನಡಕ, ವರ್ಧಕಗಳು, ತರಗತಿ ಕೆಲಸಗಳಿಗೆ ಹೆಚ್ಚುವರಿ ಪ್ರಕಾಶ ಕೊಡುವ ಲೈಟ್‌ಗಳು.
- ದೊಡ್ಡ ಅಕ್ಷರಗಳಲ್ಲಿ ಮುದ್ರಿತವಾಗಿರುವ ಕೈಪಿಡಿಗಳು ಅಥವಾ ಓದುವುದಕ್ಕಾಗಿ ಕೇಳುವ ಪುಸ್ತಕಗಳು
- ಧ್ವನಿಸಕ್ರಿಯಗೊಳಿಸಿಗಿರುವ ಕಂಪ್ಯೂಟರ್ ಗಳು ಅಥವಾ ಸಹಾಯಕ ತಂತ್ರಜ್ಞಾನ
- ಟಿಪ್ಪಣಿ ತೆಗೆದುಕೊಳ್ಳಲು ಸಹಾಯಮಾಡುವ ವ್ಯಕ್ತಿಗಳು
- ತರಗತಿಯ ಮತ್ತು ಕೊಟ್ಟ ಇತರ ಕೆಲಸಗಳನ್ನು ಮಾಡಲು ಹೆಚ್ಚಿನ ಸಮಯ
- ಕಣ್ಣಿಗೆ ಸಂಬಂಧಿಸಿದ ಆರೈಕೆಗಾಗಿ ಶಾಲಾದಾದಿಗೆ ಹೋಗಲು ಅವಕಾಶ
- ಕಾಲಕಾಲದ ತಪಾಸಣೆಗೆ ವೈದ್ಯರ ಭೇಟಿ.

**ಅಧ್ಯಾಪಕರು ಏನು ಮಾಡಬಹುದು?**

- ದೃಷ್ಟಿ ಸಂಬಂಧಿ ಸವಾಲುಳ್ಳವರು ಶಾಲೆಯ ಎಲ್ಲ ಚಟುವಟಿಕೆಗಳಲ್ಲೂ ಭಾಗವಹಿಸುವಂತೆ ಪ್ರೋತ್ಸಾಹಿಸಬೇಕು;
- ತರಗತಿಗಳು ತಡೆಯಿಲ್ಲದೆ ಓಡಾಡಲು ಸರಾಗವಾಗಿರುವಂತೆ ನೋಡಿಕೊಳ್ಳಬೇಕು;
- ತಮ್ಮ ಸ್ಥಿತಿಯನ್ನು ಕುರಿತು ಅವರು ಸ್ವಯಂಪ್ರಜ್ಞೆಯಿಂದ ಬಳಲುವಂತಾಗಬಾರದು;
- ಇತರರ ಬೆದರಿಕೆಗೆ ಒಳಗಾಗುವಂತಾಗಬಾರದು;
- ಅವರಲ್ಲಿ ಧೈರ್ಯ, ಆತ್ಮವಿಶ್ವಾಸ, ಆತ್ಮಗೌರವ ಬೆಳೆಯುವಂತೆ ನೋಡಿಕೊಳ್ಳಬೇಕು;
- ಅವರ ಅಗತ್ಯಗಳು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ಆದ್ದರಿಂದ ಇಂತಹ ಪ್ರತಿ ಮಗುವಿನ ಅಗತ್ಯಗಳನ್ನು ಗುರುತಿಸಿಕೊಳ್ಳಬೇಕು.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 1

ಪಟ್ಟಿ 'A' ಅಂಶಗಳನ್ನು ಪಟ್ಟಿ 'B' ಅಂಶಗಳೊಂದಿಗೆ ಹೊಂದಿಸಿರಿ

| | ಪಟ್ಟಿ 'A' | ಪಟ್ಟಿ 'B' | |
|---|---|---|---|
| a | ದೃಷ್ಟಿ ಸವಾಲುಳ್ಳವರ ಗುಣಲಕ್ಷಣ | ದೃಷ್ಟಿ ತೀಕ್ಷ್ಣತೆಯನ್ನು ಅಳೆಯುತ್ತದೆ | 1 |
| b | ಸ್ನೆಲನ್ ಚಾರ್ಟ್ | ನಡೆಯುವಾಗ ತಪ್ಪು ಹೆಜ್ಜೆಗಳನ್ನಿಡುತ್ತಾರೆ | 2 |
| c | ಕೊಕ್ಲಿಯಾರ್ ಇಂಪ್ಲಾಂಟ್ | ಹೇಳಿದುದನ್ನೇ ಮತ್ತೆ ಹೇಳುವಂತೆ ಕೇಳುತ್ತಾರೆ. | 3 |
| d | ಶ್ರವಣ ದೌರ್ಬಲ್ಯವಿರುವವರ ಗುಣಲಕ್ಷಣ | ಶ್ರವಣ ನರವನ್ನು ಪ್ರಚೋದಿಸಿ ಧ್ವನಿಯ ಅನುಭವವನ್ನು ಕೊಡುತ್ತದೆ. | 4 |
| e | ಡೆಸಿಬೆಲ್ | ಸಂವಹನದ ದೃಶ್ಯ ವ್ಯವಸ್ಥೆ | 5 |
| f | ಕ್ಯೂಡ್ ಮಾತು | ಧ್ವನಿಯ ತೀವ್ರತೆಯನ್ನು ಅಳೆಯುವ ಮಾನ | 6 |

## 2.1.3.2 ಬೌದ್ಧಿಕ ಮತ್ತು ಕಲಿಕಾ ಸಂಬಂಧಿ ಸವಾಲುಗಳನ್ನುಳ್ಳ ಮಕ್ಕಳು

### (I) ಬೌದ್ಧಿಕ ಸವಾಲುಗಳನ್ನುಳ್ಳ ಮಕ್ಕಳು

ಕಾಲಕ್ರಮದಲ್ಲಿ ಮಾನಸಿಕವಾಗಿ ಹಿಂದುಳಿದ ಮಕ್ಕಳ ಕುರಿತ ಅನೇಕ ವ್ಯಾಖ್ಯೆಗಳು ಸೂಚಿತವಾಗಿವೆ. ಇವುಗಳಲ್ಲಿ ಎರಡನ್ನು ಸಾಮಾನ್ಯವಾಗಿ ಉಲ್ಲೇಖಿಸಲಾಗುತ್ತದೆ. ಇವು ವರ್ತನಾತ್ಮಕ ವ್ಯಾಖ್ಯೆಗಳಾಗಿದ್ದು ಅಮೆರಿಕಾದ ಮಾನಸಿಕ ಹಿಂದುಳಿಕೆಯ ಸಂಘದಿಂದ ಸೂಚಿತವಾಗಿದೆ.

ಮಾನಸಿಕ ಹಿಂದುಳಿಕೆ ಎಂಬುದು ತತ್ಕಾಲದ ಕಾರ್ಯಚಟುವಟಿಕೆಯಲ್ಲಿ ಗಣನಾರ್ಹವಾದ ಮಿತಿಗಳನ್ನು ಸೂಚಿಸುತ್ತದೆ. ಸಾಮಾನ್ಯ ಬೌದ್ಧಿಕ ಕ್ರಿಯಾಶೀಲತೆಯಲ್ಲಿ ಸರಾಸರಿಗಿಂತ ಕಡಿಮೆ ಮಟ್ಟದ ಸ್ಥಿತಿಯಿಂದ ಇದನ್ನು ಗುರುತಿಸಲಾಗುತ್ತದೆ. ಪ್ರಮಾಣೀಕೃತ ಬುದ್ಧಿಮತ್ತೆಯ ಪರೀಕ್ಷೆಯಲ್ಲಿ 70ಕ್ಕಿಂತ ಕಡಿಮೆ ಮಟ್ಟದ ಪ್ರಮಾಣ, ಜೊತೆಗೆ, ಯಾವುದಾದರೂ ಎರಡು ಅಥವಾ ಎರಡಕ್ಕಿಂತ ಹೆಚ್ಚು ಹೊಂದಾಣಿಕೆಯ ಕೌಶಲಕ್ಷೇತ್ರಗಳಲ್ಲಿನ– ಸಂವಹನ, ಸ್ವ ಪೋಷಣೆ, ಗೃಹ ಜೀವನ, ಸಾಮಾಜಿಕ ಕೌಶಲಗಳು, ಸಮುದಾಯದ ಬಳಕೆ, ಸ್ವ ನಿರ್ದೇಶನ, ಆರೋಗ್ಯ ಮತ್ತು ಭದ್ರತೆ, ಸಕ್ರಿಯ ಶಿಕ್ಷಣ ಕೌಶಲಗಳು, ವಿರಾಮ ಮತ್ತು ಕೆಲಸ– ಮಿತಿಗಳನ್ನು ಒಟ್ಟಾಗಿ ಮಾನಸಿಕ ಹಿಂದುಳಿಕೆ ಎಂದು ವ್ಯಾಖ್ಯೆ ಮಾಡಲಾಗುತ್ತದೆ. ಬೌದ್ಧಿಕ ಕ್ರಿಯಾಶೀಲತೆ ಎಂದರೆ, ವೈಯಕ್ತಿಕವಾಗಿ ಕೊಟ್ಟ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಪ್ರಮಾಣೀಕೃತ ಬುದ್ಧಿಮಾಪನ ಪರೀಕ್ಷೆಯಲ್ಲಿ ಪಡೆದ ಫಲಿತಾಂಶ ಎಂದರ್ಥ. ಮಾನಸಿಕ ಹಿಂದುಳಿಕೆ 18 ವರ್ಷಕ್ಕೆ ಮೊದಲೇ ಗೋಚರವಾಗುತ್ತದೆ.

1996ರ ಅಸಾಮರ್ಥ್ಯವುಳ್ಳವರ ಕಾಯಿದೆಯ ಪ್ರಕಾರ ಬುದ್ಧಿಮಾಂದ್ಯತೆ ಎಂದರೆ, ಮಿತಿಯುಳ್ಳ ಅಥವಾ ಅಸಂಪೂರ್ಣ ಬೆಳವಣಿಗೆಯಾಗಿರುವ ವ್ಯಕ್ತಿಯ ಮನಸ್ಸಿನ ಸ್ಥಿತಿ. ಸಾಮಾನ್ಯಮಟ್ಟದಲ್ಲಿಲ್ಲದಿರುವ ಬುದ್ಧಿಶಕ್ತಿ ಇದರ ಲಕ್ಷಣ.

ಶೈಕ್ಷಣಿಕ ಸನ್ನಿವೇಶದಲ್ಲಿ ಬುದ್ಧಿಮಾಂದ್ಯವಿರುವವರನ್ನು ಕೆಳಕಂಡಂತೆ ವರ್ಗೀಕರಿಸಲಾಗಿದೆ :

| ವರ್ಗ | ಬುದ್ಧಿಮತ್ತೆಯ ಮಟ್ಟ |
|---|---|
| ಶಿಕ್ಷಣಕ್ಕೆ ಸಮರ್ಥರಾದ ಬುದ್ಧಿಮಾಂದ್ಯರು | 70–50 |
| ತರಬೇತಿ ಪಡೆಯಲು ಸಮರ್ಥರಾದ ಬುದ್ಧಿಮಾಂದ್ಯರು | 50–25 |
| ತೀವ್ರವಾದ ಮತ್ತು ಗಾಢವಾದ ಬುದ್ಧಿಮಾಂದ್ಯತೆಯುಳ್ಳವರು | 25 ಕ್ಕಿಂತ ಕೆಳಗೆ |

**ಬೌದ್ಧಿಕ ಸವಾಲುಗಳುಳ್ಳವರ ಗುಣಲಕ್ಷಣಗಳು :**

ಬುದ್ಧಿಮಾಂದ್ಯವಿರುವ ಅನೇಕ ಮಕ್ಕಳನ್ನು ಶಾಲೆಗೆ ಪ್ರವೇಶಿಸುವವರೆಗೆ ಅಥವಾ ಶೈಕ್ಷಣಿಕವಾಗಿ ಹೆಚ್ಚು ಕಷ್ಟಕರವಾದ ಕೆಲಸಗಳನ್ನು ಮಾಡಬೇಕಾಗುವ ಸನ್ನಿವೇಶವಿರುವ ಎರಡು ಅಥವಾ ಮೂರನೆಯ ತರಗತಿಯವರೆಗೆ ಗುರುತಿಸಲಾಗಿರುವುದೇ ಇಲ್ಲ. ಸ್ವಲ್ಪಮಟ್ಟಿನ ಬುದ್ಧಿಮಾಂದ್ಯತೆ ಇರುವವರು ಸುಮಾರು ಏಳನೆಯ ತರಗತಿಯವರೆಗಿನ ಶೈಕ್ಷಣಿಕ ಕೌಶಲಗಳನ್ನು ಕಲಿತು, ಮುಂದೆ ಔದ್ಯೋಗಿಕವಾದ ಸರಳ ಕೌಶಲಗಳನ್ನು ಕಲಿಯಲು ಸಮರ್ಥರಾಗಿಬಿಡುತ್ತಾರೆ. ಇದರಿಂದ ಅವರು ಪೂರ್ಣವಾಗಿ ಅಥವಾ ಭಾಗಶಃ

ಸ್ವತಂತ್ರರಾಗಿಬಿಡುತ್ತಾರೆ. ಬುದ್ಧಿಮಾಂದ್ಯರೆಂದು ಗುರುತಿಸಲಾಗಿರುವ ಕೆಲವರು ಅತ್ಯುತ್ತಮ ಸಾಮಾಜಿಕ ಮತ್ತು ಸಂವಹನ ಕೌಶಲಗಳನ್ನು ಕಲಿತುಬಿಡುತ್ತಾರೆ. ಶಿಕ್ಷಣ ಮುಗಿಸುವ ವೇಳೆಗೆ ಅವರು ಬುದ್ಧಿಮಾಂದ್ಯರೆಂದು ತಿಳಿಯುವುದೂ ಇಲ್ಲ.

ಸಾಧಾರಣ ಮಟ್ಟದ ಬುದ್ಧಿಮಾಂದ್ಯತೆ ಇರುವ ಮಕ್ಕಳು ಕಲಿಕೆಯ ವೇಗದಲ್ಲಿ ಗಮನಾರ್ಹ ಮಟ್ಟದಲ್ಲಿ ಹಿಂದಿರುವುದು ಶಾಲಾಪೂರ್ವಹಂತದಲ್ಲಿಯೇ ಕಾಣಬರುತ್ತದೆ. ಅವರು ದೊಡ್ಡವರಾಗುತ್ತಿದ್ದಂತೆ, ಒಟ್ಟು ಬೌದ್ಧಿಕ ಬೆಳವಣಿಗೆಯಲ್ಲಿ ಮತ್ತು ಹೊಂದಾಣಿಕೆಯ ವಿಷಯಗಳಲ್ಲಿ ಅವರಿಗೂ ಅಸಾಮರ್ಥ್ಯವಿಲ್ಲದ ಅವರ ಜೊತೆಯವರಿಗೂ ಹೆಚ್ಚಿನ ಅಂತರ ಕಂಡುಬರುತ್ತದೆ. ಸಾಧಾರಣ ಮಟ್ಟದ ಬುದ್ಧಿಮಾಂದ್ಯತೆ ಇರುವ ಮಕ್ಕಳಲ್ಲಿ ಆರೋಗ್ಯ ಮತ್ತು ವರ್ತನಾ ಸಮಸ್ಯೆಗಳು ಅತಿ ಕಡಿಮೆ ಮಟ್ಟದ ಬುದ್ಧಿಮಾಂದ್ಯತೆ ಇರುವವರಿಗಿಂತ ಹೆಚ್ಚಿನ ಮಟ್ಟದಲ್ಲಿ ಕಂಡುಬರುತ್ತದೆ.

ತೀವ್ರ ಬುದ್ಧಿಮಾಂದ್ಯತೆ ಇರುವವರನ್ನು ಸಾಮಾನ್ಯವಾಗಿ ಜನನಕಾಲದಲ್ಲಿಯೇ ಅಥವಾ ನಂತರದ ಸ್ವಲ್ಪ ಕಾಲದಲ್ಲಿಯೇ ಗುರುತಿಸಲಾಗುತ್ತದೆ. ಇವರಲ್ಲಿ ಹೆಚ್ಚಿನ ಮಕ್ಕಳು ವಿಶೇಷವಾಗಿ ಕೇಂದ್ರ ನರಮಂಡಲ ವ್ಯವಸ್ಥೆಯ ಹಾನಿ ಅಥವಾ ತೊಂದರೆಗೆ ಒಳಗಾಗಿರುತ್ತಾರೆ. ಕೆಲವು ಮಕ್ಕಳಿಗೆ ಇದರ ಜೊತೆಗೆ ಇತರ ಅಸಾಮರ್ಥ್ಯಗಳು ಅಥವಾ ಅನಾರೋಗ್ಯಕರ ಸ್ಥಿತಿಗಳೂ ಇರುತ್ತವೆ. ಬುದ್ಧಿಮತ್ತೆಯ ಗುಣಾಂಕಗಳು ಗಾಢ ಹಾಗೂ ತೀವ್ರತರವಾದ ಬುದ್ಧಿಮಾಂದ್ಯತೆಯನ್ನು ಗುರುತಿಸಲು ಸಹಕಾರಿಯಾಗುವುದಾದರೂ ನಿಜವಾದ ವ್ಯತ್ಯಾಸ ಇರುವುದು ಅವರ ವರ್ತನೆ ಮತ್ತು ಕಾರ್ಯಸಾಮರ್ಥ್ಯಗಳಲ್ಲಿ.

**ಬೌದ್ಧಿಕ ಕಾರ್ಯಗಳು :**

ಬುದ್ಧಿಮಾಂದ್ಯತೆಗೆ ಸಂಬಂಧಿಸಿದ ಬೌದ್ಧಿಕ ಕಾರ್ಯಗಳಲ್ಲಿ ಕೊರತೆ ಮತ್ತು ಕಲಿಕಾ ಶೈಲಿಗಳ ಲಕ್ಷಣಗಳು ವಿಶೇಷವಾಗಿ ಕೆಲವು ವರ್ತನೆ ಅಥವಾ ಕಾರ್ಯಗಳಲ್ಲಿ ಕಂಡುಬರುತ್ತವೆ. ಸ್ಮರಣೆ ಅಥವಾ ನೆನಪಿನ ಶಕ್ತಿಯಲ್ಲಿ ಕೊರತೆ, ನಿಧಾನಗತಿಯ ಕಲಿಕೆ, ಗಮನ ಕೇಂದ್ರೀಕರಣದ ಸಮಸ್ಯೆಗಳು, ಸಾಮಾನ್ಯೀಕರಣ ಸಾಮರ್ಥ್ಯದ ಕೊರತೆ ಮತ್ತು ಅಭಿಪ್ರೇರಣೆಯ ಕೊರತೆ ಇತ್ಯಾದಿ.

- ನಿಧಾನಗತಿಯ ಪ್ರತಿಕ್ರಿಯೆ: ಇತರರು ಹೇಳಿದುದಕ್ಕೆ ಮತ್ತು ಅವರ ಪರಿಸರದಲ್ಲಿ ಆಗುವ ವಿದ್ಯಮಾನಗಳಿಗೆ ಅವರು ನಿಧಾನವಾಗಿ ಪ್ರತಿಕ್ರಿಯಿಸುತ್ತಾರೆ, ಕೆಲವೊಮ್ಮೆ ಪ್ರತಿಕ್ರಿಯೆ ವ್ಯಕ್ತಪಡಿಸುವುದೇ ಇಲ್ಲ.
- ಅಭಿವ್ಯಕ್ತಿಯ ಅಸಾಮರ್ಥ್ಯ: ಅವರಿಗೆ ಭಾವನೆಗಳನ್ನು, ಅಗತ್ಯಗಳನ್ನು ಆಲೋಚನೆಗಳನ್ನು ಅಭಿವ್ಯಕ್ತ ಪಡಿಸಲು ಬಹಳಮಟ್ಟಿಗೆ ಸಾಧ್ಯವಾಗುವುದಿಲ್ಲ.
- ನಿಧಾನಗತಿಯ ಕಲಿಕೆ: ಅವರು ಕಲಿಯುವ ವೇಗ ಇತರರಿಗಿಂತ ನಿಧಾನ. ಅವರಿಗೆ ಹೊಸದನ್ನು ಕಲಿಯುವುದು ಇತರರಿಗಿಂತ ಕಠಿಣವಾದ ಕೆಲಸ.
- ಕಡಿಮೆ ಅವಧಿಯ ಸ್ಮರಣೆ': ಇತರರಿಗೆ ಹೋಲಿಸಿದರೆ ಇವರ ಅವಧಾನದ ಅವಧಿ ಕಡಿಮೆ. ಕೇಳಿದುದನ್ನು ಅಥವಾ ಕಲಿತುದನ್ನು ಅವರು ಸ್ವಲ್ಪ ಕಾಲ ಮಾತ್ರ ನೆನಪಿಡಬಲ್ಲರು. ಕೆಲವೊಮ್ಮೆ ಕಲಿತುದುದು ಅವರಿಗೆ ನೆನಪಿರುವುದೇ ಇಲ್ಲ.

- ಕಡಿಮೆ ಮಟ್ಟದ ದೈಹಿಕ ಸಂಯೋಜನೆ: ದೈಹಿಕ ಕೌಶಲಗಳು ಇವರಿಗೆ ಇತರರಷ್ಟು ನಮ್ಯತೆಯಿಂದ ಕೂಡಿರುವುದಿಲ್ಲ. ಹಾಗಾಗಿ ಹಲ್ಲುಜ್ಜುವುದು, ಬಟ್ಟೆ ಹಾಕಿಕೊಳ್ಳುವುದು, ತಿನ್ನುವುದು, ಕೈಗಳನ್ನು ಬಳಸುವುದು ಮತ್ತು ಒಂದು ಕಡೆಯಿಂದ ಇನ್ನೊಂದು ಕಡೆಗೆ ಓಡಾಡುವುದು ಈ ರೀತಿಯ ಹೊಂದಾಣಿಕೆಯ ಕೌಶಲಗಳು ಇವರಿಗೆ ಕಠಿಣವಾಗುತ್ತವೆ.
- ಸಾಮಾಜೀಕರಣದಲ್ಲಿ ಕೊರತೆ: ಇವರಿಗೆ ಸಾಮಾಜಿಕ ಕೌಶಲಗಳು ಕಡಿಮೆ ಮತ್ತು ಸಾಮಾಜಿಕ ಸನ್ನಿವೇಶಗಳಲ್ಲಿ ಅಪಕ್ವತೆಯ ವರ್ತನೆಗಳೂ ಕಾಣಬರುತ್ತದೆ.
- ನಿಧಾನಗತಿಯ ವಿಕಾಸ: ಇವರ ಬೆಳವಣಿಗೆಯ ಎಲ್ಲ ಮೈಲಿಗಲ್ಲುಗಳಲ್ಲೂ ನಿಧಾನಗತಿ ಕಾಣಬರುತ್ತದೆ. ತಡವಾಗಿ ಮೊಗಚಿಬೀಳುವುದು, ಇತರರಿಗಿಂತ ನಿಧಾನವಾಗಿ ನಡೆಯಲು, ಮಾತನಾಡಲು, ಪ್ರಾರಂಭಿಸುವುದು, ತಲೆಯನ್ನು ನೆಟ್ಟಗೆ ನಿಲ್ಲಿಸುವುದು, ಕುಳಿತುಕೊಳ್ಳುವುದು, ತೆವಳುವುದು ಇತ್ಯಾದಿ ವಿಕಾಸಾತ್ಮಕ ಕಾರ್ಯಗಳು ನಿಧಾನವಾಗುತ್ತವೆ. ಅಲ್ಲದೆ ಸ್ವ ಪೋಷಣಾ ಕೌಶಲಗಳಾದ ಶೌಚಾಭ್ಯಾಸಗ'ಳೂ ತಡವಾಗಿ ಬರುತ್ತವೆ.
- ಗ್ರಹಿಕೆ, ನಿರ್ಧಾರ ತೆಗೆದುಕೊಳ್ಳುವಿಕೆ, ಭಾಷಾ ವಿಕಾಸ, ಭಾವನೆಗಳ ನಿಯಂತ್ರಣ ಇವುಗಳಲ್ಲೂ ಕೊರತೆ ಕಂಡುಬರುತ್ತದೆ.
- ಸಾಮಾನ್ಯೀಕರಣ, ಕಲ್ಪನೆ ಮತ್ತು ಆಲೋಚನೆ ಇವುಗಳಲ್ಲೂ ಇವರು ತೊಂದರೆಯನ್ನು ಅನುಭವಿಸುತ್ತಾರೆ. ಇದು ಪರಿಕಲ್ಪನಾ ರೂಪಣೆ, ಪರಿಕಲ್ಪನಾ ಗ್ರಹಿಕೆ ಇವುಗಳಿಗೆ ಅಡ್ಡಿಯುಂಟುಮಾಡುತ್ತವೆ.

**ಅಧ್ಯಾಪಕರು ಏನು ಮಾಡಬಹುದು?**

- ಗುಂಪು ಕಾರ್ಯ ಅಥವಾ ಗುಂಪು ಚಟುವಟಿಕೆಗಳಿಗೆ ಪ್ರೋತ್ಸಾಹಿಸಬೇಕು
- ಹೆಚ್ಚಿನ ಅಭ್ಯಾಸಗಳು ಮತ್ತು ಪುನರಾವರ್ತನೆಗೆ ಗಮನಕೊಡಬೇಕು;
- ಸಾಧ್ಯವಾದಾಗಲೆಲ್ಲಾ ಅವರ ಸಹಪಾಠಿಗಳಂತೆ ಮಾಡಲು ತೋರಿಸಿ ಹೇಳಬೇಕು.
- ಕಿರುನಾಟಕ, ಬೊಂಬೆಯಾಟ, ಸೃಜನಶೀಲ ಅಭಿನಯಗಳ ಮೂಲಕ ನೈಜ ಅನುಭವಗಳನ್ನು ಮತ್ತು ಪ್ರಾಯೋಗಿಕ ಹಾಗೂ ದಿನನಿತ್ಯದ ಕೌಶಲಗಳನ್ನು ಬೆಳೆಸಬೇಕು.
- ಇತರ ಅಧ್ಯಾಪಕರ, ವೃತ್ತಿಪರರ ಮತ್ತು ಸಹ ಸಿಬ್ಬಂದಿಗಳ ಸಹಾಯ ಪಡೆಯಬೇಕು
- ಸಮುದಾಯ ಸಹಾಯಕರು ಈ ಮಕ್ಕಳ ಬದುಕು ಸರಿಯಾಗಲು ಸಹಾಯಮಾಡಬೇಕು
- ಅಧ್ಯಾಪಕರು, ಪೋಷಕರು, ಅಜ್ಜಅಜ್ಜಿಯರು, ಶಾಲೆಯಲ್ಲಿ ಹೇಳಿಕೊಟ್ಟುದನ್ನು ಉಳಿಸಿಕೊಳ್ಳಲು ಸಹಾಯಮಾಡುವಂತೆ ತರಬೇತಿ ಕೊಡಬೇಕು.
- ವಿವಿಧ ವಿಷಯಗಳಿಗೆ ಸಂಬಂಧಿಸಿದ ವಿಶಿಷ್ಟವಾದ ಖುಷಿಯಾಗುವ ಚಟುವಟಿಕೆಗಳನ್ನು ಬಳಸಿಕೊಳ್ಳಬೇಕು

- ಆಟಿಕೆಗಳು, ಆಟಗಳು, ದೂರದರ್ಶನ ಕಾರ್ಯಕ್ರಮಗಳು, ಸಂಗೀತ, ಹಾಡುಗಳು ಮೊದಲಾದವು ಅವರ ಯಶಸ್ಸಿಗೆ ಅಭಿಪ್ರೇರಣೆ ನೀಡುತ್ತವೆ.
- ಒಂದು ಮಟ್ಟಿನ ಆಶ್ಚರ್ಯ, ವಿಸ್ಮಯ, ಹೊಸತನ ಇವರ ಕಲಿಕಾ ಪ್ರಕ್ರಿಯೆಯಲ್ಲಿ ಸಹಾಯಮಾಡುತ್ತವೆ.

## (II) ಕಲಿಕಾ ಸವಾಲುಗಳುಳ್ಳ ಮಕ್ಕಳು :

ಕಲಿಕಾ ಅಸಾಮರ್ಥ್ಯ ಎಂಬುದು, ಸರಾಸರಿ ಅಥವಾ ಸರಾಸರಿಗಿಂತ ಹೆಚ್ಚು ಬುದ್ಧಿಮಟ್ಟವಿದ್ದೂ ಕಲಿಕೆಯ ಕೆಲವು ಕ್ಷೇತ್ರಗಳಾದ ಓದುವಿಕೆ, ಬರೆವಣಿಗೆ ಮತ್ತು ಗಣಿತ ಇತ್ಯಾದಿ ವಿಷಯಗಳಲ್ಲಿ ನಿರ್ದಿಷ್ಟ ಸಮಸ್ಯೆಗಳನ್ನು ಎದುರಿಸುವ ಒಂದು ಸನ್ನಿವೇಶ. ಇದು ವಿಶಾಲವಾದ ವ್ಯಾಪ್ತಿಯುಳ್ಳದ್ದು, ಸಂಕೀರ್ಣವಾದುದು, ಹಾಗಾಗಿ ಇವುಗಳಿಗೆ ಸಂಬಂಧಿಸಿದ ಗುಣಲಕ್ಷಣಗಳ' ಕುರಿತ ಸ್ಪಷ್ಟವಾದ ಮತ್ತು ನಿಖರವಾದ ಅರಿವು ಅಗತ್ಯ. ಬೌದ್ಧಿಕ ವರ್ತನೆಗಳಿಗೆ ಸಂಬಂಧಿಸಿದಂತೆ ಈ ಮಕ್ಕಳು ಇತರ ಮಕ್ಕಳಂತೆಯೇ ಇರುತ್ತಾರೆ. ಇವರು ಬುದ್ಧಿಮಾಂದ್ಯರೂ ಅಲ್ಲ; ಇವರಿಗೆ ದೃಶ್ಯ ಅಥವಾ ಶ್ರವ್ಯ ಇತ್ಯಾದಿ ಸವಾಲುಗಳೂ ಇರುವುದಿಲ್ಲ. ಆದರೆ ಇವರಿಗೆ ಅಕ್ಷರ ಜೋಡಣೆ, ಬರೆವಣಿಗೆ, ಗಣಿತ, ಕೇಳಿ ಗ್ರಹಿಸುವಿಕೆ ಇತ್ಯಾದಿ ವಿಷಯಗಳಲ್ಲಿ ಸಮಸ್ಯೆ ಇರುತ್ತದೆ. ಈ ಸಮಸ್ಯೆಗಳು ಮಿದುಳಿನ ಅಪಸಾಮಾನ್ಯ ವರ್ತನೆಗಳಿಂದ/ಭಾವನಾತ್ಮಕ/ವರ್ತನಾತ್ಮಕ ಅಡಚಣೆಗಳಿಂದಾಗಿ ಇರಬಹುದು.ಆದರೆ ಬೌದ್ಧಿಕ ಸವಾಲುಗಳಿಂದಾಗಲೀ ಇಂದ್ರಿಯಾತ್ಮಕ ಅಥವಾ ಬೋಧನಾತ್ಮಕ ಅಭ್ಯಾಸಗಳಿಂದಾಗಲೀ ಅಲ್ಲ. ಈ ಅಸಾಮರ್ಥ್ಯದ ಮಟ್ಟಕ್ಕನುಗುಣವಾಗಿ ಇವುಗಳನ್ನು ಸ್ವಲ್ಪಮಟ್ಟದ ಕಲಿಕಾ ಅಸಾಮರ್ಥ್ಯ ಮತ್ತು ತೀವ್ರಮಟ್ಟದ ಕಲಿಕಾ ಅಸಾಮರ್ಥ್ಯ ಎಂದು ವರ್ಗೀಕರಿಸಬಹುದು.

ಸ್ವಲ್ಪಮಟ್ಟದ ಕಲಿಕಾ ಅಸಾಮರ್ಥ್ಯವುಳ್ಳವರಿಗೆ ಸಾಮಾನ್ಯ ಶಾಲೆಗಳಲ್ಲಿ ಶಿಕ್ಷಣ ನೀಡಬಹುದು. ಅವರು ಸಾಧಾರಣ ಶಾಲೆಗಳಲ್ಲೇ ಕಲಿಯಬೇಕು. ಅವರನ್ನು ಮೊದಲ ಹಂತಗಳಲ್ಲಿ ಗುರುತಿಸುವುದು ಕಷ್ಟ. ಅವರು ಮೂಲಭೂತ ಶೈಕ್ಷಣಿಕ ಕೌಶಲಗಳನ್ನು ಕಲಿಯುವಲ್ಲಿ ತೊಂದರೆಯನ್ನು ಅನುಭವಿಸುತ್ತಾರೆ. ಇದು ಕಲಿಕೆಯ ಒಂದು ಅಥವಾ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಕಂಡುಬರಬಹುದು. ಇದು ಸ್ವಲ್ಪಮಟ್ಟಿನ ಸಮಸ್ಯೆಯೂ ಆಗಿರಬಹುದು. ಹಾಗಾಗಿ ಕೆಲವು ಮಾರ್ಪಾಡುಗಳೊಂದಿಗೆ ಸಾಧಾರಣ ಶಾಲೆಗಳಲ್ಲಿ ಇವರನ್ನು ಸಮನ್ವಯಗೊಳಿಸಬಹುದು.

ಮೂಲಭೂತ ಶೈಕ್ಷಣಿಕ ಕೌಶಲಗಳಲ್ಲಿ ಪರಿಣತಿ ಹೊಂದಲು ಅಸಾಮರ್ಥ್ಯ ತೋರುವವರು ತೀವ್ರ ಕಲಿಕಾ ಅಸಾಮರ್ಥ್ಯವಿರುವವರ ಗುಂಪಿಗೆ ಸೇರುತ್ತಾರೆ. ಇದಕ್ಕೆ ಕಾರಣ ಮಿದುಳಿನ ಅಪವರ್ತನೆ ಅಥವಾ ಪರಿಸರಾತ್ಮಕವಾದ ಕೊರತೆ ಇರಬಹುದು.

### ಕಲಿಕಾ ಅಸಾಮರ್ಥ್ಯವಿರುವವರ ಗುಣಲಕ್ಷಣಗಳು :

- ಅತಿಯಾದ ಕ್ರಿಯಾಶೀಲತೆ
- ಗ್ರಹಣಾತ್ಮಕವಾದ ಚಲನ ಸಂಬಂಧಿ ತೊಂದರೆಗಳು
- ಭಾವನಾತ್ಮಕ ಅಸಾಮರ್ಥ್ಯ
- ಸಾಮಾನ್ಯ ಹೊಂದಾಣಿಕೆಯ ತೊಂದರೆಗಳು

- ಗಮನ ವಿಷಯಕವಾದ ತೊಂದರೆಗಳು
- ಉದ್ವೇಗ
- ಸ್ಮರಣೆ ಮತ್ತು ಆಲೋಚನಾತ್ಮಕವಾದ ತೊಂದರೆಗಳು
- ನಿರ್ದಿಷ್ಟ ಕಲಿಕಾ ಅಸಾಮರ್ಥ್ಯ
- ಮಾತು ಮತ್ತು ಕಲಿಕೆಯ ತೊಂದರೆಗಳು ಮತ್ತು
- ನರಸಂಬಂಧಿ ತೊಂದರೆಗಳು

ಕಲಿಕಾ ಅಸಾಮರ್ಥ್ಯವುಳ್ಳ ಎಲ್ಲ ಮಕ್ಕಳೂ ಮೇಲಿನ ಎಲ್ಲ ಗುಣಲಕ್ಷಣಗಳನ್ನೂ ತೋರ್ಪಡಿಸುತ್ತಾರೆ ಎಂದೇನೂ ಇಲ್ಲ. ಸಾಮಾನ್ಯವಾಗಿ ಪ್ರಾಥಮಿಕ ಹಂತಗಳಲ್ಲಿ ಮೂಲಭೂತ ಕಲಿಕಾ ಕೌಶಲಗಳನ್ನು ಕಲಿಯಲು ಮಗು ಕಷ್ಟಪಡುವ ಸಂದರ್ಭದಲ್ಲಿ ಗುರುತಿಸಲಾಗದ ಕಾರಣಗಳು ಗಮನಕ್ಕೆ ಬರುವಾಗ ಮಕ್ಕಳು ಕಲಿಕಾ ತೊಂದರೆಗಳನ್ನು ಅಥವಾ ಸವಾಲುಗಳನ್ನು ಎದುರಿಸುತ್ತಿದ್ದಾರೆ ಎಂಬುದು ಗಮನಕ್ಕೆ ಬರುತ್ತದೆ. ಇದರ ಜೊತೆಗೆ ಮಗುವು ಒಂದು ವಿಷಯದಲ್ಲಿ ಅತ್ಯಂತ ಉತ್ತಮ ಮಟ್ಟದಲ್ಲಿ ಸಾಧನೆಯನ್ನು ತೋರುತ್ತಿದ್ದು ಮತ್ತೊಂದು ವಿಷಯದಲ್ಲಿ(ಉದಾ: ಬರೆವಣಿಗೆ) ಅತಿ ಕಡಿಮೆ ಮಟ್ಟದ ಸಾಧನೆಯನ್ನು ತೋರಿದರೆ ಆಗಲೂ ತಕ್ಷಣ ಗುರುತಿಸಬಹುದಾದ ಯಾವ ಕಾರಣವೂ ಗೋಚರಕ್ಕೆ ಬಾರದಿದ್ದರೆ ಅಂತಹ ಸಂದರ್ಭಗಳಲ್ಲಿ ಈ ಮಕ್ಕಳು ಕಲಿಕಾ ಅಸಾಮರ್ಥ್ಯರುವವರಾಗಿರಬಹುದು ಎಂಬ ಸಂಶಯ ಬರುತ್ತದೆ. ಈ ಮಕ್ಕಳ ವರ್ತನಾತ್ಮಕ ಲಕ್ಷಣಗಳು ಭಿನ್ನವಾಗಿರುತ್ತವೆ. ಆದರೆ ಇವರೆಲ್ಲರಲ್ಲಿ ಸಮಾನವಾಗಿ ಕಾಣುವ ಒಂದು ಅಂಶವೆಂದರೆ, ಸಾಧನೆ ಮತ್ತು ಬೌದ್ಧಿಕ ಸಾಮರ್ಥ್ಯಗಳ ನಡುವಿನ ಅಂತರ. ಇದು ಅವರ ಮೂಲಭೂತ ಸಮಸ್ಯೆ. ಆದರೆ ಈ ಮೂಲ ಕಲಿಕಾ ಕೌಶಲಗಳನ್ನು ಕಲಿಯುವಲ್ಲಿನ ಅಸಾಮರ್ಥ್ಯತೆಗೆ ಸಂಬಂಧಿಸಿದಂತೆ ಭಾವನಾತ್ಮಕ ಅಥವಾ ಸಾಮಾಜಿಕ ಅಪಹೊಂದಾಣಿಕೆ ಇತ್ಯಾದಿ ಅಂಶಗಳೂ ಇರಬಹುದು.

**ಕಲಿಕಾ ಅಸಾಮರ್ಥ್ಯತೆಯನ್ನು ಕೆಳಕಂಡಂತೆ ವರ್ಗೀಕರಿಸಲಾಗಿದೆ:**

- ಸಾಮಾನ್ಯ ಕಲಿಕಾ ಅಸಾಮರ್ಥ್ಯಗಳು
- ವಿಶೇಷ ಕಲಿಕಾ ಅಸಾಮರ್ಥ್ಯಗಳು

**ಸಾಮಾನ್ಯ ಕಲಿಕಾ ಅಸಾಮರ್ಥ್ಯಗಳು :**

ಈ ರೀತಿಯ ಅಸಾಮರ್ಥ್ಯವಿರುವವರಿಗೆ ಶಿಕ್ಷಣದ ಸುಮಾರು ಎಲ್ಲ ಕ್ಷೇತ್ರಗಳಲ್ಲೂ ಕಲಿಕಾ ಅಸಾಮರ್ಥ್ಯತೆ ಇರುತ್ತದೆ. ಇತರ ಮಕ್ಕಳಿಗೆ ಹೋಲಿಸಿದರೆ ಅವರ ಸಾಧನೆ ಗಣನೀಯವಾಗಿ ಕೆಳಮಟ್ಟದಲ್ಲಿರುತ್ತದೆ. ಇವರನ್ನು ಶಿಕ್ಷಣದ ಮೊದಲ ಹಂತಗಳಲ್ಲಿ ಗುರುತಿಸುವುದು ಕಷ್ಟ. ಅವರು ಯಾವುದೇ ರೀತಿಯ ಶಿಕ್ಷಣ ಪಡೆಯುವಲ್ಲಿ ಈ ಅಸಾಮರ್ಥ್ಯತೆ ತಡೆಯೊಡ್ಡುವುದಿಲ್ಲ. ಅವರನ್ನು ಮೊದಲ ಹಂತಗಳಲ್ಲೇ ಗುರುತಿಸಿದರೆ, ಸೂಕ್ತ ತಂತ್ರಗಳನ್ನು ಬಳಸಿ ಅಸಾಮರ್ಥ್ಯತೆ ಅಡ್ಡಿಬಾರದಂತೆ ಸಹಾಯಮಾಡಬಹುದು. ವಿಶೇಷ ವಿಧಾನಗಳಿಂದ ಶಿಕ್ಷಣ ನೀಡುವಾಗ ಅವರು ಇತರ ಮಕ್ಕಳಿಗಿಂತ ಸ್ವಲ್ಪ ಹೆಚ್ಚು ಕಾಲ ತೆಗೆದುಕೊಳ್ಳುತ್ತಾರಷ್ಟೆ.

**ವಿಶೇಷ ಕಲಿಕಾ ಅಸಾಮರ್ಥ್ಯಗಳು:** ಈ ರೀತಿಯ ಅಸಾಮರ್ಥ್ಯವಿರುವವರ ಸಮಸ್ಯೆಗಳು ಶೈಕ್ಷಣಿಕ ಅಥವಾ ಕೌಶಲಗಳ ಕಲಿಕೆಗೆ ಸಂಬಂಧಿಸಿದ ನಿರ್ದಿಷ್ಟ ಕ್ಷೇತ್ರಗಳಿಗೆ ಸಂಬಂಧಿಸಿದವು. ಉದಾಹರಣೆಗೆ,

ಓದುವಿಕೆಯಲ್ಲಿ ತೊಂದರೆ, ಬರೆವಣಿಗೆಯಲ್ಲಿ ತೊಂದರ ಇತ್ಯಾದಿ. ಅವರಿಗೆ ವಿಶೇಷ ಗಮನ ಹಾಗೂ ನಿರ್ದಿಷ್ಟ ತಂತ್ರಗಳ ಅಳವಡಿಕೆ ಅಗತ್ಯವಾಗುತ್ತದೆ. ನಿರ್ದಿಷ್ಟ ಕಲಿಕಾ ತೊಂದರೆಗಳಿರುವ ಕ್ಷೇತ್ರಗಳು ಕೆಳಕಂಡಂತಿವೆ:

**ಓದುವ ಅಸಾಮರ್ಥ್ಯ:** ಈ ತೊಂದರೆಯಿರುವ ಮಕ್ಕಳಿಗೆ ಸರಾಗವಾಗಿ ಓದಲು ಸಾಧ್ಯವಾಗುವುದಿಲ್ಲ. ಇದು ಸ್ವಲ್ಪಮಟ್ಟದಲ್ಲಿರಬಹುದು ಇಲ್ಲವೇ ತೀವ್ರವಾಗಿರಬಹುದು. ಸ್ವಲ್ಪಮಟ್ಟದ ತೊಂದರೆ ಇರುವ ಮಕ್ಕಳಿಗೆ ಸಾಮಾನ್ಯ ಶಾಲೆಗಳಲ್ಲೇ ಸಹಾಯಮಾಡಬಹುದು. ಇವರಿಗೆ ಅಕ್ಷರಗಳನ್ನು ಗುರುತಿಸುವ, ಜೋಡಿಸಿ ಓದುವ ತೊಂದರೆಗಳಿರುತ್ತವೆ. ತೀಕ್ಷ್ಣತರ ಸಮಸ್ಯೆಗಳಿದ್ದರೆ ತಜ್ಞರಿಂದ ವಿಶೇಷ ಪರಿಹಾರಾತ್ಮಕ ತರಬೇತಿಯ ಅಗತ್ಯವಿರುತ್ತದೆ.

**ಬರೆವಣಿಗೆಯ ಅಸಾಮರ್ಥ್ಯ:** ಇವರಿಗೆ ನಿರರ್ಗಳವಾಗಿ, ಸಲೀಸಾಗಿ ಬರೆಯಲು ಸಾಧ್ಯವಾಗುವುದಿಲ್ಲ. ಇದರಲ್ಲಿಯೂ ಸ್ವಲ್ಪಮಟ್ಟಿನ ಮತ್ತು ತೀಕ್ಷ್ಣಮಟ್ಟದ ಅಸಾಮರ್ಥ್ಯವಿರಬಹುದು. ಸ್ವಲ್ಪಮಟ್ಟಿನ ಅಸಾಮರ್ಥ್ಯವಿರುವ ಮಕ್ಕಳಿಗೆ ಸ್ಪಷ್ಟವಾಗಿ ಬರೆಯಲು ಸಾಧ್ಯವಾಗದು. ಆದರೂ ಸಾಮಾನ್ಯಶಾಲೆಗಳಲ್ಲಿ ಕಲಿಯಬಹುದು. ಇವರ ಈ ಸಮಸ್ಯೆಯನ್ನು ಮೊದಲ ಹಂತಗಳಲ್ಲೇ ಗುರುತಿಸಿದರೆ ಕೆಲವು ಸರಳ ತಂತ್ರಗಳ ಅನ್ವಯದಿಂದ ಪರಿಹರಿಸಬಹುದು. ಸಮಸ್ಯೆ ತೀಕ್ಷ್ಣಮಟ್ಟದ್ದಾಗಿದ್ದರೆ, ಅವರಿಗೆ ನಕಲು ಮಾಡಲಾಗುತ್ತದೆ, ಅಡಚಣೆಇಲ್ಲದೆ ಬರೆಯಲು ಆಗುತ್ತದೆ, ಆದರೆ ಸರಾಗವಾಗಿ ಬರೆಯಲು ಸಾಧ್ಯವಾಗದು. ಇವರಿಗೆ ಪರಿಹಾರಾತ್ಮಕ ತರಬೇತಿ ಅಗತ್ಯವಾಗುತ್ತದೆ.

**ಗ್ರಹಿಕೆಯ ಅಸಾಮರ್ಥ್ಯ:** ಇವರಿಗೆ ಮಾತು, ಓದು, ಬರಹ ಇವುಗಳ ಮೂಲಕ ಸಂವಹನ ತೊಂದರೆಯಾಗುತ್ತದೆ. ಸ್ವಲ್ಪಮಟ್ಟಿನ ಅಸಾಮರ್ಥ್ಯವಿರುವ ಮಕ್ಕಳಿಗೆ ಆಡುಮಾತಿನ ಹಾಗೂ ಬರಹದ ಪಠ್ಯವನ್ನು ಗ್ರಹಿಸಲು ಕಷ್ಟವಾಗುತ್ತದೆ. ಇಂತಹ ಮಕ್ಕಳಿಗೆ ಚಿಹ್ನೆಗಳನ್ನು ಮತ್ತು ಸಂಕೇತಗಳನ್ನು ಅರ್ಥಮಾಡಿಕೊಳ್ಳುವುದೂ ಕಷ್ಟವೇ. ಇವರನ್ನು ತಿದ್ದುವ ಸಮರ್ಪಕ ಕ್ರಮಗಳಿಂದ ಸಾಮಾನ್ಯ ಶಾಲೆಗಳಲ್ಲೇ ಸಮನ್ವಯ ಮಾಡಿಕೊಳ್ಳಬಹುದು. ಪರಿಹಾರ ಕ್ರಮ ಸರಿಯಾಗಿಲ್ಲದಿದ್ದರೆ ಭಾಷಾತ್ಮಕವಾದ ಉಚ್ಚಾರಣೆ, ಮಾತು ಮತ್ತು ನಿರರ್ಗಳತೆಯ ಸಮಸ್ಯೆಗಳು ತಲೆದೋರಬಹುದು. ಸಮಸ್ಯೆ ತೀಕ್ಷ್ಣಮಟ್ಟದ್ದಾಗಿದ್ದರೆ, ಮಾತು ಮತ್ತು ಬರಹ ಎರಡನ್ನೂ ಗ್ರಹಿಸುವುದು ಕಷ್ಟವಾಗುತ್ತದೆ. ಇವರಿಗೆ ಮಾತನಾಡಲೂ ಬರೆಯಲೂ ಸಾಧ್ಯವಾಗುವುದಿಲ್ಲ. ಸಂಕೇತಗಳ ಮೂಲಕವೂ ಅಭಿವ್ಯಕ್ತಪಡಿಸಲಾಗುವುದಿಲ್ಲ. ಅವರಿಗೆ ವಿಶೇಷವಾದ ಪರಿಹಾರಾತ್ಮಕ ಅಭ್ಯಾಸಗಳು ಅವಶ್ಯವಾಗುತ್ತವೆ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 2

1. ಶಿಕ್ಷಣಕ್ಕೆ ಸಮರ್ಥರಾದ ಬುದ್ಧಿಮಾಂದ್ಯರ ಗುಣಮಟ್ಟದ ಅಂತರ ______________
   a) 70–50
   b) 50–25
   c) 25 ಕ್ಕಿಂತ ಕೆಳಗೆ
   d) 70 ಕ್ಕಿಂತ ಮೇಲೆ
2. ಬುದ್ಧಿಮಾಂದ್ಯತೆಯು ಸಂಬಂಧಿಸಿದ ಮಿತಿಯ ಕ್ಷೇತ್ರ ______________
   a) ಬೌದ್ಧಿಕ ಕಾರ್ಯಗಳು
   b) ಸಾಮಾಜಿಕ ಕಾರ್ಯಗಳು

c) ಭಾವನಾತ್ಮಕ ಕಾರ್ಯಗಳು

d) ಚಲನಾತ್ಮಕ ಕಾರ್ಯಗಳು

3. ಬೌದ್ಧಿಕ ಸವಾಲುಗಳುಳ್ಳ ಮಕ್ಕಳ ಗುಣಲಕ್ಷಣವಲ್ಲದುದು ______________

a) ನಿಧಾನಗತಿಯ ಪ್ರತಿಕ್ರಿಯೆ

b) ಕೆಳಮಟ್ಟದ ಅಭಿವ್ಯಕ್ತಿ

c) ನಿಧಾನ ಕಲಿಕೆ

d) ನಿಧಾನ ನಡಿಗೆ

4. ಬೌದ್ಧಿಕ ಸವಾಲುಗಳುಳ್ಳ ಮಕ್ಕಳ ವರ್ಗಗಳಲ್ಲಿ ಅಂತರ್ಗತ ಸನ್ನಿವೇಶದಲ್ಲಿ ನಿರ್ವಹಿಸಬಹುದಾದ ವರ್ಗ ______________

a) ತೀವ್ರವಾದ ಮತ್ತು ಗಾಢವಾದ ಬುದ್ಧಿಮಾಂದ್ಯತೆಯುಳ್ಳವರು

b) ಶಿಕ್ಷಣ ಪಡೆಯಲು ಸಮರ್ಥರಾದ ಬುದ್ಧಿಮಾಂದ್ಯತೆಯುಳ್ಳವರು

c) ತರಬೇತಿ ಪಡೆಯಲು ಸಮರ್ಥರಾದ ಬುದ್ಧಿಮಾಂದ್ಯತೆಯುಳ್ಳವರು

d) ಮೇಲಿನ ಯಾವ ವರ್ಗದವರೂ ಅಲ್ಲ.

## 2.1.3.3. ಮೂಳೆ ಸಂಬಂಧಿ ಸವಾಲುಗಳನ್ನುಳ್ಳ ಮಕ್ಕಳು, ಭಾವನಾತ್ಮಕ ಸವಾಲುಗಳನ್ನುಳ್ಳ ಮತ್ತು ವರ್ತನಾ ಸವಾಲುಗಳನ್ನುಳ್ಳ ಮಕ್ಕಳು

**1. ಮೂಳೆ ಸಂಬಂಧಿ ಸವಾಲುಗಳನ್ನುಳ್ಳ ಮಕ್ಕಳು :** ಅಸಾಮರ್ಥ್ಯಗಳುಳ್ಳ ವ್ಯಕ್ತಿಗಳ ಶಿಕ್ಷಣ ಕಾಯಿದೆಯ ಪ್ರಕಾರ ಮೂಳೆ ಸಂಬಂಧಿ ತೊಂದರೆ ಎಂದರೆ "ಮಗುವಿನ ಶಿಕ್ಷಣದ ಸಾಧನೆಯನ್ನು ವ್ಯತಿರಿಕ್ತವಾಗಿ ಅಡ್ಡಿಪಡಿಸುವ ತೀವ್ರತರವಾದ ಮೂಳೆ ಸಂಬಂಧಿ ತೊಂದರೆ". ಈ ಪದವು "ಜನ್ಮಜಾತವಾಗಿ ಬಂದ ತೊಂದರೆಗಳಿಗೂ, ಖಾಯಿಲೆಗಳಿಂದ ಬಂದ ತೊಂದರೆಗಳಿಗೂ (ಪೋಲಿಯೊ ಇತ್ಯಾದಿ), ಇತರ ಕಾರಣಗಳಿಂದ ಉಂಟಾದ (ಸೆರೆಬ್ರಲ್ ಪಾಲ್ಸಿ, ಬೆಂಕಿ ಅನಾಹುತಗಳು ಇತ್ಯಾದಿ) ಮೂಳೆ ಸಂಬಂಧಿ ತೊಂದರೆಗಳಿಗೂ ಅನ್ವಯಿಸುತ್ತದೆ. ಸಾಮಾನ್ಯವಾಗಿ, ಇದು ಶೈಕ್ಷಣಿಕ ಪ್ರಕ್ರಿಯೆಯ ಮೇಲೆ ಋಣಾತ್ಮಕ ಪ್ರಭಾವ ಬೀರುವ ದೈಹಿಕ ಅಸಾಮರ್ಥ್ಯವನ್ನು ಒಳಗೊಳ್ಳುತ್ತವೆ.

ಯಾವುದೇ ಅಸಾಮರ್ಥ್ಯವನ್ನು ಮೂಳೆಸಂಬಂಧಿ ದೌರ್ಬಲ್ಯ ಎಂದು ವರ್ಗೀಕರಿಸಬೇಕಾದರೆ, ಅದರ ಮೌಲ್ಯಮಾಪನ ಅಗತ್ಯ. ಇಂತಹ ಮಾಪನದ ಅಗತ್ಯಗಳು ವೈದ್ಯರಿಂದ ಮಾಡಲಾಗುವ ಮಾಪನವನ್ನು ಬಯಸುತ್ತದೆ. ವೈದ್ಯರು ಮಗುವನ್ನು ಅದರ ಶೈಕ್ಷಣಿಕ ಸನ್ನಿವೇಶದಲ್ಲಿ ವೀಕ್ಷಿಸಿ, ಪ್ರಸ್ತುತ ದೌರ್ಬಲ್ಯವು ಮಗುವಿನ ಸಾಧನೆಯಲ್ಲಿ ಹೇಗೆ ಪ್ರಭಾವ ಬೀರುತ್ತದೆ ಎಂದು ಗುರುತಿಸಬೇಕಾಗುತ್ತದೆ.

### ಮೂಳೆ ಸಂಬಂಧಿ ಸವಾಲುಗಳನ್ನುಳ್ಳ ಮಕ್ಕಳ ಗುಣಲಕ್ಷಣಗಳು :

- ಕೆಳಮಟ್ಟದ ಚಲನಾತ್ಮಕ ಸಂಯೋಜನೆ: ಮಗುವು ಯಾವುದೇ ಕೆಲಸವನ್ನು ಮಾಡುವಾಗ, ಎರಡು ಅಥವಾ ಹೆಚ್ಚಿನ ಸ್ನಾಯುಗುಂಪುಗಳನ್ನು ಸಂಯೋಜನೆ ಮಾಡಲು ಅಸಮರ್ಥವಾಗುತ್ತದೆ.

- ಕುಂಟುತ್ತಾ ನಡೆಯುತ್ತದೆ.
- ದೈಹಿಕ ವ್ಯಾಯಾಮ ಮಾಡುವಾಗ ನೋವುಂಟಾಗುವುದನ್ನು ವ್ಯಕ್ತಪಡಿಸುತ್ತದೆ.
- ನಡಿಗೆಯಲ್ಲಿ ಕೆಲವೊಮ್ಮೆ ನಡುಕವಿರುತ್ತದೆ.
- ಅತಿ ಬೇಗನೆ ಬೀಳುತ್ತದೆ.

**ಈ ಮಕ್ಕಳ ವಿಶೇಷ ಅಗತ್ಯಗಳು :**

ಮೂಳೆಸಂಬಂಧಿ ಸವಾಲುಗಳುಳ್ಳ ಮಕ್ಕಳ ಅಥವಾ ಚಲನಾತ್ಮಕ ಸವಾಲುಗಳುಳ್ಳ ಮಕ್ಕಳ ಸಮಸ್ಯೆಗಳು ಬಹಳ ಮಟ್ಟಿಗೆ ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದುವು. ಇವು ಇತರ ರೀತಿಯ ಅಸಾಮರ್ಥ್ಯವಿರುವ ಮಕ್ಕಳಿಗೆ ಹೋಲಿಸಿದರೆ ಅತಿಹೆಚ್ಚು ವಿಭಿನ್ನವಾದವುಗಳು. ಇವು ಮೂಳೆಗಳು, ಕೀಲುಗಳು, ಮತ್ತು ಸ್ನಾಯುಗಳಿಗೆ ಸಂಬಂಧಿಸಿದ ಕಾರ್ಯಗಳಲ್ಲಿ ಅನುಭವವಾಗುವ ತೊಂದರೆಗಳಿಗೆ ಸಂಬಂಧಿಸಿದವು. ಕೆಲವು ಸಂದರ್ಭಗಳಲ್ಲಿ ಕೃತಕ ಕೀಲುಗಳನ್ನು ಹೊಂದಿಸಬೇಕಾಗುವಷ್ಟು ಮಟ್ಟಿಗೆ ಸಮಸ್ಯೆಗಳು ತೀವ್ರವಾಗಿರುತ್ತವೆ. ಮತ್ತೆ ಕೆಲವು ಸನ್ನಿವೇಶಗಳಲ್ಲಿ ಅವರಿಗೆ ವಿಶೇಷ ಪೀಠೋಪಕರಣಗಳು, ಸಾಧನಗಳು, ವೀಲ್‌ಚೇರ್‌ಗಳು ಅಥವಾ ಊರುಗೋಲುಗಳು ಅವಶ್ಯವಾಗುತ್ತವೆ. ಈ ಮಕ್ಕಳಿಗೆ ದೈಹಿಕ ಅಸಾಮರ್ಥ್ಯಗಳಿದ್ದು, ಇವರಲ್ಲಿ ಬಹಳಷ್ಟು ಮಕ್ಕಳು ಇತರ ಮಕ್ಕಳಂತೆ ಕಲಿಯಲು, ಅವರದೇ ಪಠ್ಯಕ್ರಮವನ್ನು ಅನುಸರಿಸಲು ಸಾಧ್ಯವಾಗುತ್ತದೆ. ಉದಾಹರಣೆಗೆ, ಪೋಲಿಯೋ ಸಮಸ್ಯೆಯುಳ್ಳವರು ತರಗತಿಗಳಲ್ಲಿ ಅವರಿಗೆ ಅಗತ್ಯವಾದ ಹೊಂದಾಣಿಕೆಗಳನ್ನು ಉಪಕರಣಗಳು, ಸಾಧನಗಳು–ಮಾಡಿಕೊಟ್ಟರೆ ವಿಶೇಷವಾದ ಕಲಿಕಾ ಸಮಸ್ಯೆಗಳೇನನ್ನೂ ಎದುರಿಸುವುದಿಲ್ಲ.

**ಶೈಕ್ಷಣಿಕ ಅಗತ್ಯಗಳು :**

ಮೂಳೆಸಂಬಂಧಿ ಅಸಾಮರ್ಥ್ಯವುಳ್ಳವರ ಅಗತ್ಯಗಳು ಅವರ ಸಮಸ್ಯೆಗಳಿಗನುಗುಣವಾಗಿ ವೈವಿಧ್ಯಮಯವಾಗಿರುತ್ತದೆ. ಈ ಅಗತ್ಯಗಳು ಒಬ್ಬರಿಂದೊಬ್ಬರಿಗೆ ಭಿನ್ನವೂ ಆಗಿರಬಹುದು. ಹಾಗಾಗಿ ಅವರ ಅಗತ್ಯಗಳನ್ನು ಪೂರೈಸುವಾಗ ಅವರ ಸಮಸ್ಯೆಗಳನ್ನು ಅದಕ್ಕನುಗುಣವಾದ ಅಗತ್ಯಗಳನ್ನು ಮನವರಿಕೆ ಮಾಡಿಕೊಂಡು ಅದಕ್ಕನುಗುಣವಾದ ಸೇವೆ ಮತ್ತು ಶಿಕ್ಷಣವನ್ನು ನೀಡಬೇಕು.

**ಮೂಳೆಸಂಬಂಧಿ ಅಸಾಮರ್ಥ್ಯವುಳ್ಳವರಿಗೆ ಉಂಟಾಗಬಹುದಾದ ಅಡೆತಡೆಗಳು :**

- ಸಾರಿಗೆಯ ಅಲಭ್ಯತೆ
- ತರಗತಿಯ ಸುತ್ತಮುತ್ತ ಓಡಾಡಲು ತೊಂದರೆ
- ಶಾಲಾ ವಠಾರದಲ್ಲಿ ಓಡಾಡಲು ತೊಂದರೆ
- ಕಡ್ಡಾಯವಾಗಿ ಪೂರೈಸಬೇಕಾದ ದೈಹಿಕ ಶಿಕ್ಷಣಕ್ಕೆ ಸಂಬಂಧಿಸಿದಿ ಅಂಕ/ಕ್ರೆಡಿಟ್ ಗಳನ್ನು ಗಳಿಸುವಲ್ಲಿ ತೊಂದರೆ
- ಪರಿಣಾಮಕಾರಿ ಸಂವಹನದಲ್ಲಿ ತೊಂದರೆ

ಇಂತಹ ಮಕ್ಕಳಿಗೆ ಶಾಲೆಗಳು ಸಾರಿಗೆ ಸೌಕರ್ಯಗಳನ್ನು ಶಾಲೆಯ ಒಳಗೆ ಓಡಾಡಲು ಸುಲಭ ಮಾರ್ಗಗಳನ್ನು ಕಲ್ಪಿಸಿಕೊಡಬೇಕು. ಅವರಿಗೆ ಅಗತ್ಯವಾದ ಚಲನ ಸಾಧನಗಳನ್ನು(ವೀಲ್ ಚೇರ್ ಗಳು, ಊರುಗೋಲುಗಳು

ಇತ್ಯಾದಿ) ಗಮನದಲ್ಲಿಡಬೇಕು. ತರಗತಿಯಲ್ಲಿ ಪೀಠೋಪಕರಣಗಳನ್ನು ವ್ಯವಸ್ಥೆಮಾಡುವಾಗ ಈ ಮಕ್ಕಳಿಗೆ ಅನುಕೂಲಕರವಾಗುವಂತೆ, ಅವರ ಚಲನವಲನಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಉದಾಹರಣೆಗೆ 'ವಾಕರ್' ಬಳಸುವ ಮಗುವನ್ನು ಬಾಗಿಲುಗಳಿಗೆ ಹತ್ತಿರವಾಗಿ ಕೂರಿಸಬೇಕು.

## (II) ಭಾವನಾತ್ಮಕ ಅಸಾಮರ್ಥ್ಯಕ್ಕೆ ಸಂಬಂಧಿಸಿದ ವರ್ತನಾ ಸವಾಲುಗಳುಳ್ಳ ಮಕ್ಕಳು

ಚಂಡಿ ಹಿಡಿಯುವ, ಗಮನದ ಕೊರತೆ ಇರುವ, ಅಡ್ಡಿಯುಂಟುಮಾಡುವ ವರ್ತನಾತ್ಮಕ ಸಮಸ್ಯೆಗಳು, ಅತಿ ಕ್ರಿಯಾಶೀಲತೆಯ ಅಸ್ವಸ್ಥತೆ, ವರ್ತನಾ ತೊಂದರೆಗಳು ಇವು ಶಾಲಾಪೂರ್ವಹಂತಗಳಲ್ಲಿ ಮತ್ತು ಪ್ರಾಥಮಿಕ ಹಂತಗಳಲ್ಲಿ ಸಾಮಾನ್ಯವಾದವು. ಬಾಲ್ಯದ ವರ್ತನೆಗಳು ಮತ್ತು ಭಾವನಾತ್ಮಕ ಸಮಸ್ಯೆಗಳು ಅದಕ್ಕೆ ಸಂಬಂಧಿಸಿದ ಅವ್ಯವಸ್ಥೆಗಳು ಮಗು ಅಥವಾ ವ್ಯಕ್ತಿ, ಅವರ ಕುಟುಂಬ ಮತ್ತು ಸಮಾಜದ ಮೇಲೆ ಗಣನೀಯವಾದ ಋಣಾತ್ಮಕ ಪ್ರಭಾವವನ್ನು ಬೀರುತ್ತವೆ. ಇವುಗಳಿಂದಾಗಬಹುದಾದ ತೊಂದರೆಗಳು ಸಾಮಾನ್ಯವಾಗಿ ಶೈಕ್ಷಣಿಕ, ವೃತ್ತೀಯ ಕಾರ್ಯಗಳಿಗೆ ಸಂಬಂಧಿಸಿದುದು.

**ಭಾವನಾತ್ಮಕ ಅಸಾಮರ್ಥ್ಯಕ್ಕೆ ಸಂಬಂಧಿಸಿದ ವರ್ತನಾ ಸವಾಲುಗಳುಳ್ಳ ಮಕ್ಕಳ ಗುಣಲಕ್ಷಣಗಳು**

- ಆಕ್ರಮಣಕಾರಿ ಮತ್ತು ಸಮಾಜವಿರೋಧಿ ವರ್ತನೆಗಳು
- ಗಮನವಿಲ್ಲದಿರುವಿಕೆ
- ಗಮನ ವ್ಯತ್ಯಯ ಮತ್ತು ಆವೇಗದಿಂದ ಕೂಡಿದ ವರ್ತನೆಗಳು
- ಸಾಮಾಜಿಕ ಅಂತರ್ ಕ್ರಿಯೆಯ ದುರ್ಬಲತೆ
- ದಿನನಿತ್ಯದ ಸಾಮಾನ್ಯ ಕೆಲಸಗಳನ್ನು ಮಾಡುವಲ್ಲಿನ ಅಸಾಮರ್ಥ್ಯ
- ಗೀಳುಹಿಡಿದ ಅಥವಾ ಪುನಃಪುನಃ ಮಾಡುವ ವರ್ತನೆಗಳು
- ಋಣಾತ್ಮಕ ಅಂತರ್ ಕ್ರಿಯೆಗಳು ಅಥವಾ ಕೆಲಸ, ಅಧ್ಯಾಪಕರು ಮತ್ತು ಸಹಪಾಠಿಗಳ ಬಗ್ಗೆ ಋಣಾತ್ಮಕ ಮನೋಭಾವ
- ಅಂತರ್ಮುಖತೆ, ಆತಂಕ, ಡೋಲಾಯಮಾನವಾದ ಮನಸ್ಥಿತಿ

ಭಾವನಾತ್ಮಕ ಅಸಾಮರ್ಥ್ಯಕ್ಕೆ ಸಂಬಂಧಿಸಿದ ವರ್ತನಾ ಸವಾಲುಗಳುಳ್ಳ ಕೆಲವು ಮಕ್ಕಳಿಗೆ ಕೆಳಮಟ್ಟದ ಸ್ವ ಪರಿಕಲ್ಪನೆ ಮತ್ತು ಸ್ವ ಗೌರವವಿರುತ್ತದೆ. ಇಂತಹ ಮಕ್ಕಳು ತರಗತಿಯಲ್ಲಿ ಆಸಕ್ತಿ ಕಳೆದುಕೊಂಡು ಇತರ ಕಾರ್ಯಗಳಲ್ಲಿ ನಿರತರಾಗಿ ಇತರರ ಕಲಿಕೆಯನ್ನು ಪ್ರಭಾವಿಸುವ ಸನ್ನಿವೇಶಗಳಿರಬಹುದು. ಇವರು ಇತರರ ಮೇಲೆ ಅನವಶ್ಯಕ ಕೋಪ ತೋರಿಸುವುದರೊಂದಿಗ ಅಸಹಕಾರವನ್ನೂ ತೋರಬಹುದು.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 3

ಕೆಳಗೆ ಮೂಳೆ ಸಂಬಂಧಿ ಅಸಾಮರ್ಥ್ಯವಿರುವ ಮಕ್ಕಳ ಮತ್ತು ಭಾವನಾತ್ಮಕ ಸವಾಲುಗಳುಳ್ಳ ಮಕ್ಕಳ ವರ್ತನೆಗಳನ್ನು ಕೊಡಲಾಗಿದೆ. ಅವುಗಳನ್ನು ಗುರುತಿಸಿ, ಮೊದಲ ಗುಂಪಿನ ವರ್ತನೆಗಳನ್ನು 'ಮೂ' ಎಂಬ ಅಕ್ಷರದಿಂದಲೂ ಎರಡನೇ ಗುಂಪಿನ ವರ್ತನೆಗಳನ್ನು 'ಭಾ' ಎಂದೂ ಗುರುತಿಸಿ.

1. ಮಗುವು ಯಾವುದೇ ಕೆಲಸವನ್ನು ಮಾಡುವಾಗ, ಎರಡು ಅಥವಾ ಹೆಚ್ಚಿನ ಸ್ನಾಯುಗುಂಪುಗಳನ್ನು ಸಂಯೋಜನೆ ಮಾಡಲು ಅಸಮರ್ಥವಾಗುತ್ತದೆ.
2. ಗಮನವಿಲ್ಲದಿರುವಿಕೆ
3. ದೈಹಿಕ ವ್ಯಾಯಾಮ ಮಾಡುವಾಗ ನೋವುಂಟಾಗುವುದನ್ನು ವ್ಯಕ್ತಪಡಿಸುತ್ತದೆ.
4. ಸಾಮಾಜಿಕ ಅಂತರ್ ಕ್ರಿಯೆಯ ದುರ್ಬಲತೆ
5. ಅತಿ ಬೇಗನೆ ಬೀಳುತ್ತದೆ.
6. ಆಕ್ರಮಣಕಾರಿ ಮತ್ತು ಸಮಾಜವಿರೋಧಿ ವರ್ತನೆಗಳು
7. ಕುಂಟುತ್ತಾ ನಡೆಯುತ್ತದೆ.
8. ಗಮನ ವ್ಯತ್ಯಯ ಮತ್ತು ಆವೇಗದಿಂದ ಕೂಡಿದ ವರ್ತನೆಗಳು
9. ನಡಿಗೆಯಲ್ಲಿ ಕೆಲವೊಮ್ಮೆ ನಡುಕವಿರುತ್ತದೆ.
10. ದಿನನಿತ್ಯದ ಸಾಮಾನ್ಯ ಕೆಲಸಗಳನ್ನು ಮಾಡುವಲ್ಲಿನ ಅಸಾಮರ್ಥ್ಯ
11. ಗೀಳುಹಿಡಿದ ಅಥವಾ ಪುನಃಪುನಃ ಮಾಡುವ ವರ್ತನೆಗಳು

## 2.1.3.4. ವಿಶೇಷ ಆರೋಗ್ಯ ಸಮಸ್ಯೆಗಳು ಮತ್ತು ಬಹುಸವಾಲುಗಳುಳ್ಳ ಮಕ್ಕಳು

ವಿಶೇಷ ಆರೋಗ್ಯ ಅಗತ್ಯಗಳನ್ನುಳ್ಳ ಮಕ್ಕಳು ಹೆಚ್ಚಿನ ಅಪಾಯಸ್ಥಿತಿಯಲ್ಲಿದ್ದು, ತೀವ್ರತರವಾದ ವಿಕಾಸಾತ್ಮಕ, ವರ್ತನಾತ್ಮಕ ಮತ್ತು ಭಾವನಾತ್ಮಕ ಸ್ಥಿತಿಯನ್ನು ಹೊಂದಿರುವುದಲ್ಲದೆ, ಸಾಮಾನ್ಯ ಮಕ್ಕಳಿಗಿಂತ ಭಿನ್ನವೂ ವಿಶೇಷವೂ ಆದ ಸೇವೆಗಳ ಆವಶ್ಯಕತೆಯನ್ನು ಹೊಂದಿರುತ್ತಾರೆ. ಇಂತಹ ಮಕ್ಕಳ ವಿಶೇಷ ಅಗತ್ಯಗಳನ್ನು ಕುಟುಂಬ, ವೃತ್ತಿಪರರು, ಅಧ್ಯಾಪಕರು, ಶಾಲೆ ಮತ್ತು ಸಹಪಾಠಿಗಳ ಸಹಾಯದಿಂದ ಪೂರೈಸಬಹುದು. ಅವುಗಳಲ್ಲಿ ಕೆಲವು ಕೆಳಕಂಡಂತಿವೆ:

- ಕುಟುಂಬ/ವೃತ್ತಿಪರರ ಸಹಭಾಗಿತ್ವ
- ವೈದ್ಯಕೀಯ ಕೇಂದ್ರದ ಮೂಲಕ ಸಮಗ್ರ ಸೇವೆ
- ಸಮುದಾಯ ಸೇವೆಗಳ ಸಂಘಟನೆ
- ವಯಸ್ಕ ಸೇವೆ, ಉದ್ಯೋಗ ಮತ್ತು ಸ್ವಾತಂತ್ರ್ಯದ ಕಡೆಗೆ ಮಾರ್ಪಾಡು

### ಬಹುಸವಾಲುಗಳುಳ್ಳ ಮಕ್ಕಳು

ಏಕಕಾಲದಲ್ಲಿ ಹಲವು ಸವಾಲುಗಳನ್ನು ಹೊಂದಿದ್ದು ಇವು ಒಟ್ಟಾಗಿ ತೀವ್ರತರವಾದ ಶೈಕ್ಷಣಿಕ ಅಗತ್ಯಗಳನ್ನು ಉಂಟುಮಾಡುವ ಸ್ಥಿತಿಯಲ್ಲಿರುವ ಮಕ್ಕಳು ಈ ವರ್ಗಕ್ಕೆ ಸೇರುತ್ತಾರೆ. ಉದಾಹರಣೆಗೆ, ಬೌದ್ಧಿಕ–ಮೂಳೆಸಂಬಂಧಿ ದುರ್ಬಲತೆ, ಬೌದ್ಧಿಕ– ದೃಶ್ಯ ದುರ್ಬಲತೆ ಇತ್ಯಾದಿ. ಇವುಗಳು ತೀವ್ರತರವಾಗಿರುವ ಕಾರಣ, ಅವರನ್ನು ಯಾವುದಾದರೊಂದು ವಿಶೇಷ ಕಾರ್ಯಕ್ರಮದ ಅಡಿಯಲ್ಲಿ ದಾಖಲಿಸಿ ಅಗತ್ಯವಾದ ಸೇವೆ ಮತ್ತು ಅವರಿಗೆ ಸಾಧ್ಯವಾಗಬಹುದಾದ ಶಿಕ್ಷಣವನ್ನು ನೀಡಬೇಕಾಗುತ್ತದೆ. ಈ ಪದ ಶ್ರವಣ–ದೃಶ್ಯ ದೋಷದ ಗುಂಪಿಗೆ

ಅನ್ವಯವಾಗುವುದಿಲ್ಲ.ಇಂತಹ ಮಕ್ಕಳಿಗೆ ಏಕಕಾಲದಲ್ಲಿ ಬಹುವಿಧದ ಹೊಂದಾಣಿಕೆಯ ಅಗತ್ಯಸೇವೆಗಳನ್ನು ನೀಡಬೇಕಾಗುತ್ತದೆ.

**ಬಹುಸವಾಲುಗಳುಳ್ಳ ಮಕ್ಕಳಿಗೆ ಸಂಬಂಧಿಸಿದ ಸವಾಲುಗಳನ್ನು ಕೆಳಗಿನ ಗುಣಲಕ್ಷಣಗಳ ಆಧಾರದ ಮೇಲೆ ಗುರುತಿಸಬಹುದು**

ಏಕಕಾಲದಲ್ಲಿ ಬಹುವಿಧದ ಅಸಾಮರ್ಥ್ಯವು ಮಾತು ಮತ್ತು ಸಂವಹನ ಕೌಶಲಗಳ ದುರ್ಬಲತೆ, ಚಲನಾತ್ಮಕ ಸವಾಲುಗಳನ್ನು ಒಳಗೊಂಡಿದ್ದು ದೈನಂದಿನ ಚಟುವಟಿಕೆಗಳನ್ನು ಕೈಗೊಳ್ಳಲು ಮತ್ತೊಬ್ಬರ ಸಹಾಯದ ಅಗತ್ಯ ಇರುವ ಸನ್ನಿವೇಶಗಳಿರುತ್ತವೆ. ಇದರ ಜೊತೆಗೆ ಮೂರ್ಛೆ ಹೋಗುವುದು, ಮಿದುಳಿನಲ್ಲಿ ನೀರು ಸೇರಿರುವಿಕೆ ಇವೂ ಈ ವರ್ಗದ ಮಕ್ಕಳಲ್ಲಿ ಕಾಣಿಸಿಕೊಳ್ಳಬಹುದು.

ಈ ರೀತಿಯ ಅಸಾಮರ್ಥ್ಯಗಳು ಬಹುವಿಧದ ಶೈಕ್ಷಣಿಕ ಅಗತ್ಯಗಳನ್ನು ಬಯಸುತ್ತವೆ. ಉದಾಹರಣೆಗೆ, ಮೂರ್ಛೆರೋಗವಿರುವ ಮಕ್ಕಳಿಗೆ ತರಗತಿಯಲ್ಲಿ ಅವರ ಭದ್ರತೆಯನ್ನು ಕಾಪಾಡುವುದೂ ಒಂದು ಪ್ರಮುಖ ಅಂಶವಾಗುತ್ತದೆ. ಇತರ ಶೈಕ್ಷಣಿಕ ಸವಾಲುಗಳು ಕೆಳಗಿನ ವಿಚಾರಗಳನ್ನು ಅವಲಂಬಿಸಿರುತ್ತದೆ.

- ಅವರ ಬುದ್ಧಿಮಟ್ಟಕ್ಕನುಗುಣವಾದ ಸನ್ನಿವೇಶವನ್ನು ಕಂಡುಕೊಳ್ಳುವುದು.
- ಅಧ್ಯಾಪಕರು, ಸಹ ಸಿಬ್ಬಂದಿ ಮತ್ತು ಸಹಪಾಠಿಗಳೊಂದಿಗೆ ಮಗುವಿನ ಸಂವಹನ ಸಾಧ್ಯತೆಗಳು
- ತರಗತಿಯಲ್ಲಿ ಕ್ರಿಯಾಶೀಲವಾಗಿರುವಲ್ಲಿ ಮಗುವಿನ ಸಾಮರ್ಥ್ಯ
- ದೃಶ್ಯ ಮತ್ತು ಶ್ರವಣ ವೈಕಲ್ಯವನ್ನು ಸರಿದೂಗಿಸುವ ಸಾಧ್ಯತೆಗಳು

ಮೇಲೆ ಹೇಳಿದ ಸವಾಲುಗಳನ್ನು ಪರಿಗಣಿಸಿ, ಅಧ್ಯಾಪಕರು ಮತ್ತು ಪೋಷಕರು ಸಹಯೋಗದಲ್ಲಿ ಪ್ರಯತ್ನಿಸಿ ಅಂತಹ ಮಕ್ಕಳ ತೊಂದರೆಗಳನ್ನು ಕನಿಷ್ಠಮಟ್ಟಕ್ಕೆ ತರಲು ಪ್ರಯತ್ನಿಸಬೇಕು. ಬಹುಅಸಾಮರ್ಥ್ಯವನ್ನು ಅದಕ್ಕೆ ಸಂಬಂಧಿಸಿದ ಶೈಕ್ಷಣಿಕ ಸವಾಲುಗಳನ್ನು ಎದುರಿಸುವುದು ಅತ್ಯಂತ ಸಂಕೀರ್ಣವಾದ ಕೆಲಸ. ಇದನ್ನು ವಿದ್ಯಾರ್ಥಿಯ ವೈಯಕ್ತಿಕ ಶಿಕ್ಷಣ ಕಾರ್ಯಕ್ರಮದ ಅಡಿಯಲ್ಲಿ ( individualized education program) ಮಾತ್ರ ನಿಭಾಯಿಸಬಹುದು. ವೈದ್ಯಕೀಯ ಸನ್ನಿವೇಶಗಳ ಕುರಿತು ಎಚ್ಚರಿಕೆಯಿಂದಿರುವುದು ತರಗತಿಯಲ್ಲಿ ಇರಿಸುವಿಕೆ ಮತ್ತು ಉಳಿಸುವಿಕೆಗೆ ಸಹಾಯವಾಗುತ್ತದೆ. ಇದಕ್ಕೆ ವಿದ್ಯಾರ್ಥಿಗಳ ಬುದ್ಧಿಶಕ್ತಿ ಮಟ್ಟದ ಅರಿವಿರಬೇಕಷ್ಟೆ. 'ಪಠ್ಯದಿಂದ ಮಾತಿಗೆ' ತಂತ್ರಜ್ಞಾನ, ಕೇಳುವ ಉಪಕರಣಗಳು ಇತ್ಯಾದಿ ತಂತ್ರಜ್ಞಾನಾತ್ಮಕ ಸೇವೆಗಳು ಮತ್ತು ಮೂಕಭಾಷೆ ಇತ್ಯಾದಿ ಪರ್ಯಾಯ ಸಂವಹನ ವಿಧಾನಗಳು, ಸಂವಹನ ಸಂಬಂಧಿ ಸಮಸ್ಯೆಗಳಿಂದುಂಟಾಗುವ ಸಮಸ್ಯೆಗಳನ್ನು ಇಲ್ಲವಾಗಿಸುತ್ತವೆ.

ದೈಹಿಕ ಶುಶ್ರೂಷೆ ಮತ್ತು ವೃತ್ತೀಯ ಶುಶ್ರೂಷೆ ಇವು ದೈಹಿಕ ಸವಾಲುಗಳನ್ನು ಸುಲಭ ಮಾಡಬಹುದು ಮತ್ತು ತರಗತಿಯೊಳಗೆ ಮಗುವು ಸಕ್ರಿಯವಾಗಿರಲು ಸಹಾಯಮಾಡಬಹುದು.ಸಹಾಯಕ ತಂತ್ರಜ್ಞಾನ ಮತ್ತು ವಿಶೇಷ ಶಿಕ್ಷಣವೂ ಈ ರೀತಿಯ ಮಕ್ಕಳ ಸಹಾಯಕ್ಕೆ ಬರಬಹುದು. ಕೊನೆಯದಾಗಿ, ತರಗತಿಯಲ್ಲಿ ಅವರ ಅವಶ್ಯಕತೆಗೆ ಅನುಗುಣವಾಗಿ ಕುಳ್ಳಿರಿಸುವುದನ್ನು ಮೊದಲುಗೊಂಡು ಪರ್ಯಾಯ ಪಠ್ಯಗಳು(ಬ್ರೈಲ್, ಆಡಿಯೋ ಇತ್ಯಾದಿ), ಶ್ರವಣ ಸಾಧನಗಳು ಮತ್ತು ಮೂಕಭಾಷೆಯವರೆಗೆ ಪರಿಹಾರೋಪಾಯಗಳು ಅಡಗಿವೆ. ಮಗುವಿಗೆ ಇರುವ ಬಹು ಅಸಾಮರ್ಥ್ಯಗಳ ಸೂಕ್ಷ್ಮ ಅವಲೋಕನವು ಅವರಿಗೆ ಸಹಾಯ ಮಾಡಲು ಹೆಚ್ಚಿನ ಮಾಹಿತಿಯನ್ನು ಒದಗಿಸುತ್ತವೆ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 4

ವಿಶೇಷ ಆರೋಗ್ಯ ಸಮಸ್ಯೆಯುಳ್ಳ ಮಕ್ಕಳ ಸಮಸ್ಯೆಗಳನ್ನು '✓' ಚಿಹ್ನೆಯಿಂದ ಸೂಚಿಸಿ:

1. ತೀವ್ರತರವಾದ ವಿಕಾಸಾತ್ಮಕ, ವರ್ತನಾತ್ಮಕ ಸ್ಥಿತಿಯನ್ನು ಹೊಂದಿರುತ್ತಾರೆ
2. ಸಾಮಾನ್ಯ ಮಕ್ಕಳಿಗಿಂತ ಭಿನ್ನವೂ ವಿಶೇಷವೂ ಆದ ಸೇವೆಗಳ ಆವಶ್ಯಕತೆಯನ್ನು ಹೊಂದಿರುತ್ತಾರೆ.
3. ಪರಾವಲಂಬಿಗಳಾಗಿದ್ದು ಇತರರ ಸಹಾಯವನ್ನು ಬಯಸುತ್ತಾರೆ.
4. ನಿರ್ದಿಷ್ಟ ರೀತಿಯ ಆರೋಗ್ಯ ಸೇವೆಗಳ ಆವಶ್ಯಕತೆ ಇವರಿಗಿರುತ್ತದೆ.
5. ಕೆಳಮಟ್ಟದ ಬೌದ್ಧಿಕ ಮಟ್ಟ ಹೊಂದಿರುತ್ತಾರೆ.
6. ಶೀಘ್ರ ಗುರುತಿಸುವಿಕೆ ಮತ್ತು ನಿರಂತರ ಅನುಸರಣಾ ಸೇವೆಯ ಅಗತ್ಯವಿರುತ್ತದೆ.
7. ಶಾಲೆಗೆ ಬರಲು ಸಾಧ್ಯವಿಲ್ಲ.

## 2.1.4. ಸಾರಾಂಶಿಸೋಣ

- ವಿವಿಧ ರೀತಿಯ ಸವಾಲುಗಳುಳ್ಳ ಮಕ್ಕಳು ಪ್ರಮುಖವಾಗಿ ಈ ವರ್ಗಗಳಲ್ಲಿ ಕಾಣಿಸಿಕೊಳ್ಳುತ್ತಾರೆ: ಶ್ರವಣ ಸಂಬಂಧಿ ಸವಾಲುಗಳುಳ್ಳ ಮಕ್ಕಳು, ದೃಷ್ಟಿ ಸಂಬಂಧಿ ಸವಾಲುಗಳುಳ್ಳ ಮಕ್ಕಳು, ಬುದ್ಧಿ ಸಂಬಂಧಿ ಸವಾಲುಗಳುಳ್ಳ ಮಕ್ಕಳು, ಕಲಿಕಾ ಸಂಬಂಧಿ ಸವಾಲುಗಳುಳ್ಳ ಮಕ್ಕಳು, ಮೂಳೆ ಸಂಬಂಧಿ ಸವಾಲುಗಳುಳ್ಳ ಮಕ್ಕಳು, ಭಾವನಾತ್ಮಕ ವರ್ತನಾ ಸಂಬಂಧಿ ಸವಾಲುಗಳುಳ್ಳ ಮಕ್ಕಳು, ವಿಶೇಷ ಆರೋಗ್ಯ ಸಮಸ್ಯೆಯುಳ್ಳ ಮಕ್ಕಳು, ಮತ್ತು ಬಹು ಸವಾಲುಗಳುಳ್ಳ ಮಕ್ಕಳು
- ಕೇಳುವ ವ್ಯವಸ್ಥೆಯಲ್ಲಿ (ಯಾಂತ್ರಿಕ) ದೋಷವಿರುವ ಮತ್ತು ಭಾಷಾ ಬೆಳವಣಿಗೆಯಲ್ಲಿ ತೊಂದರೆಯನ್ನು ಎದುರಿಸುವ ಮಕ್ಕಳುಶ್ರವಣ ಸಂಬಂಧಿತ ಸವಾಲುಗಳುಳ್ಳ ಮಕ್ಕಳು. ಗಟ್ಟಿಯಾಗಿ ಮಾತನಾಡಿದರೂ ಕೇಳಿಸದವರನ್ನು ತೀವ್ರ ಶ್ರವಣ ಸವಾಲುಳುಳ್ಳವರು ಅಥವಾ ಕಿವುಡರು ಎಂದು ಪರಿಗಣಿಸಲಾಗುತ್ತದೆ. ಶ್ರವಣ ಸಾಧನವನ್ನು ಬಳಸಿದರೂ ಅವರಿಗೆ ಸರಿಯಾಗಿ ಕೇಳಲು ಕಷ್ಟವಾಗುತ್ತದೆ.
- ದೃಷ್ಟಿಗೆ ಸಂಬಂಧಿಸಿದ ಸಮಸ್ಯೆಗಳುಳ್ಳ ಮಕ್ಕಳನ್ನು ದೃಷ್ಟಿ ಸಂಬಂಧಿ ಸವಾಲುಗಳುಳ್ಳ ಮಕ್ಕಳು. ಇಂತಹ ವರ್ಗಗಳ ಕೆಲವು ಮಕ್ಕಳು ದೊಡ್ಡದಾಗಿ ಮುದ್ರಿತವಾದ ಅಕ್ಷರಗಳನ್ನು ಓದಬಲ್ಲರು ಮತ್ತು ಅವರ ಪರಿಸರದಲ್ಲಿ ಸಕ್ರಿಯವಾಗಿರಬಲ್ಲರು. ಆದರೆ ಕೆಲವರಿಗೆ ತೀವ್ರತರವಾದ ದೃಷ್ಟಿದೋಷವಿದ್ದು ಅವರಿಗೆ ದೃಶ್ಯವಿಧಾನಗಳಿಂದ ಬೋಧಿಸಲಾಗುವುದಿಲ್ಲ.
- ಮಾನಸಿಕ ಹಿಂದುಳಿಕೆ ಎಂಬುದು ತತ್ಕಾಲದ ಕಾರ್ಯಚಟುವಟಿಕೆಯಲ್ಲಿ ಗಣನಾರ್ಹವಾದ ಮಿತಿಗಳನ್ನು ಸೂಚಿಸುತ್ತದೆ. ಸಾಮಾನ್ಯ ಬೌದ್ಧಿಕ ಕ್ರಿಯಾಶೀಲತೆಯಲ್ಲಿ ಸರಾಸರಿಗಿಂತ ಕಡಿಮೆ ಮಟ್ಟದ ಸ್ಥಿತಿಯಿಂದ ಇದನ್ನು ಗುರುತಿಸಲಾಗುತ್ತದೆ. ಪ್ರಮಾಣೀಕೃತ ಬುದ್ಧಿಮತ್ತೆಯ ಪರೀಕ್ಷೆಯಲ್ಲಿ 70ಕ್ಕಿಂತ ಕಡಿಮೆ ಮಟ್ಟದ ಪ್ರಮಾಣ, ಜೊತೆಗೆ, ಯಾವುದಾದರೂ ಎರಡು ಅಥವಾ ಎರಡಕ್ಕಿಂತ ಹೆಚ್ಚು ಹೊಂದಾಣಿಕೆಯ ಕೌಶಲಕ್ಷೇತ್ರಗಳಲ್ಲಿನ–ಸಂವಹನ, ಸ್ವ ಪೋಷಣೆ, ಗೃಹ ಜೀವನ,

ಸಾಮಾಜಿಕ ಕೌಶಲಗಳು, ಸಮುದಾಯದ ಬಳಕೆ, ಸ್ವ ನಿರ್ದೇಶನ, ಆರೋಗ್ಯ ಮತ್ತು ಭದ್ರತೆ, ಸಕ್ರಿಯ ಶಿಕ್ಷಣ ಕೌಶಲಗಳು, ವಿರಾಮ ಮತ್ತು ಕೆಲಸ– ಮಿತಿಗಳನ್ನು ಒಟ್ಟಾಗಿ ಮಾನಸಿಕ ಹಿಂದುಳಿಕೆ ಎಂದು ವ್ಯಾಖ್ಯೆ ಮಾಡಲಾಗುತ್ತದೆ.

- ಕಲಿಕಾ ಅಸಾಮರ್ಥ್ಯ ಎಂಬುದು, ಸರಾಸರಿ ಅಥವಾ ಸರಾಸರಿಗಿಂತ ಹೆಚ್ಚು ಬುದ್ಧಿಮಟ್ಟವಿದ್ದೂ ಕಲಿಕೆಯ ಕೆಲವು ಕ್ಷೇತ್ರಗಳಾದ ಓದುವಿಕೆ, ಬರೆವಣಿಗೆ ಮತ್ತು ಗಣಿತ ಇತ್ಯಾದಿ ವಿಷಯಗಳಲ್ಲಿ ನಿರ್ದಿಷ್ಟ ಸಮಸ್ಯೆಗಳನ್ನು ಎದುರಿಸುವ ಒಂದು ಸನ್ನಿವೇಶ ಇದು ವಿಶಾಲವಾದ ವ್ಯಾಪ್ತಿಯುಳ್ಳದ್ದು, ಸಂಕೀರ್ಣವಾದುದು.

- ಮೂಳೆ ಸಂಬಂಧಿ ತೊಂದರೆ ಎಂದರೆ "ಮಗುವಿನ ಶಿಕ್ಷಣದ ಸಾಧನೆಯನ್ನು ವ್ಯತಿರಿಕ್ತವಾಗಿ ಅಡ್ಡಿಪಡಿಸುವ ತೀವ್ರತರವಾದ ಮೂಳೆ ಸಂಬಂಧಿ ತೊಂದರೆ". ಈ ಪದವು "ಜನ್ಮಜಾತವಾಗಿ ಬಂದ ತೊಂದರೆಗಳಿಗೂ, ಖಾಯಿಲೆಗಳಿಂದ ಬಂದ ತೊಂದರೆಗಳಿಗೂ(ಪೋಲಿಯೊ ಇತ್ಯಾದಿ), ಇತರ ಕಾರಣಗಳಿಂದ ಉಂಟಾದ(ಸೆರೆಬ್ರಲ್ ಪಾಲ್ಸಿ, ಬೆಂಕಿ ಅನಾಹುತಗಳು ಇತ್ಯಾದಿ) ಮೂಳೆ ಸಂಬಂಧಿ ತೊಂದರೆಗಳಿಗೂ ಅನ್ವಯಿಸುತ್ತದೆ.

- ಚಂಡಿ ಹಿಡಿಯುವಿಕೆ, ಗಮನದ ಕೊರತೆ ಇರುವ ಅಡ್ಡಿಯುಂಟುಮಾಡುವ ವರ್ತನಾತ್ಮಕ ಸಮಸ್ಯೆಗಳು, ಅತಿ ಕ್ರಿಯಾಶೀಲತೆಯ ಅಸ್ವಸ್ಥತೆ, ವರ್ತನಾ ತೊಂದರೆಗಳು ಇವು ಶಾಲಾಪೂರ್ವಹಂತಗಳಲ್ಲಿ ಮತ್ತು ಪ್ರಾಥಮಿಕ ಹಂತಗಳಲ್ಲಿ ಸಾಮಾನ್ಯವಾದವು. ಬಾಲ್ಯದ ವರ್ತನೆಗಳು ಮತ್ತು ಭಾವನಾತ್ಮಕ ಸಮಸ್ಯೆಗಳು ಅದಕ್ಕೆ ಸಂಬಂಧಿಸಿದ ಅವ್ಯವಸ್ಥೆಗಳು ಮಗು ಅಥವಾ ವ್ಯಕ್ತಿ, ಅವರ ಕುಟುಂಬ ಮತ್ತು ಸಮಾಜದ ಮೇಲೆ ಗಣನೀಯವಾದ ಋಣಾತ್ಮಕ ಪ್ರಭಾವವನ್ನು ಬೀರುತ್ತವೆ. ಇವುಗಳಿಂದಾಗಬಹುದಾದ ತೊಂದರೆಗಳು ಸಾಮಾನ್ಯವಾಗಿ ಶೈಕ್ಷಣಿಕ, ವೃತ್ತೀಯ ಹಾಗೂ ಕಾರ್ಯಗಳಿಗೆ ಸಂಬಂಧಿಸಿದುದು.

- ವಿಶೇಷ ಆರೋಗ್ಯ ಅಗತ್ಯಗಳನ್ನುಳ್ಳ ಮಕ್ಕಳು ಹೆಚ್ಚಿನ ಅಪಾಯಸ್ಥಿತಿಯಲ್ಲಿದ್ದು, ತೀವ್ರತರವಾದ ವಿಕಾಸಾತ್ಮಕ, ವರ್ತನಾತ್ಮಕ ಮತ್ತು ಭಾವನಾತ್ಮಕ ಸ್ಥಿತಿಯನ್ನು ಹೊಂದಿರುವುದಲ್ಲದೆ, ಸಾಮಾನ್ಯ ಮಕ್ಕಳಿಗಿಂತ ಭಿನ್ನವೂ ವಿಶೇಷವೂ ಆದ ಸೇವೆಗಳ ಆವಶ್ಯಕತೆಯನ್ನು ಹೊಂದಿರುತ್ತಾರೆ.

- ವಿಶೇಷ ಆರೋಗ್ಯ ಅಗತ್ಯಗಳನ್ನುಳ್ಳ ಮಕ್ಕಳು ಹೆಚ್ಚಿನ ಅಪಾಯಸ್ಥಿತಿಯಲ್ಲಿದ್ದು, ತೀವ್ರತರವಾದ ವಿಕಾಸಾತ್ಮಕ, ವರ್ತನಾತ್ಮಕ ಮತ್ತು ಭಾವನಾತ್ಮಕ ಸ್ಥಿತಿಯನ್ನು ಹೊಂದಿರುವುದಲ್ಲದೆ, ಸಾಮಾನ್ಯ ಮಕ್ಕಳಿಗಿಂತ ಭಿನ್ನವೂ ವಿಶೇಷವೂ ಆದ ಸೇವೆಗಳ ಆವಶ್ಯಕತೆಯನ್ನು ಹೊಂದಿರುತ್ತಾರೆ.

- ಏಕಕಾಲದಲ್ಲಿ ಹಲವು ಸವಾಲುಗಳನ್ನು ಹೊಂದಿದ್ದು ಇವು ಒಟ್ಟಾಗಿ ತೀವ್ರತರವಾದ ಶೈಕ್ಷಣಿಕ ಅಗತ್ಯಗಳನ್ನು ಉಂಟುಮಾಡುವ ಸ್ಥಿತಿಯಲ್ಲಿರುವ ಮಕ್ಕಳು ಈ ವರ್ಗಕ್ಕೆ ಸೇರುತ್ತಾರೆ. ಉದಾಹರಣೆಗೆ, ಬೌದ್ಧಿಕ –ಮೂಳೆಸಂಬಂಧಿ ದುರ್ಬಲತೆ, ಬೌದ್ಧಿಕ– ದೃಶ್ಯ ದುರ್ಬಲತೆ ಇತ್ಯಾದಿ.

## 2.1.5 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1, 2, 3 ಮತ್ತು 4

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 1

a–2, b–1, c–4, d–3, e–6, f–5

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 2

1–a, 2–a, 3–d, 4–b

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–3

ಮೂ : 1,3,5,7,9,

ಭಾ : 2,4,6,8,10,11

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 4

1–✓, 3–✓, 4–✓, 5–✓

## 2.1.6 ಘಟಕಾಂತ್ಯ ಅಭ್ಯಾಸಗಳು

1. ದೃಶ್ಯ ಮತ್ತು ಶ್ರವಣ ಸವಾಲುಗಳುಳ್ಳ ಮಕ್ಕಳ ಗುಣಲಕ್ಷಣಗಳು ಮತ್ತು ಅಗತ್ಯಗಳನ್ನು ವಿಶ್ಲೇಷಿಸಿ
2. ಬೌದ್ಧಿಕ ಸವಾಲುಗಳುಳ್ಳ ಮಕ್ಕಳ ವರ್ಗೀಕರಣ ಮತ್ತು ಅವರ ಗುಣಲಕ್ಷಣಗಳನ್ನು ವಿವರಿಸಿ, ಅವರ ಶಿಕ್ಷಣ ಮತ್ತು ನಿರ್ವಹಣೆಯಲ್ಲಿ ಅಧ್ಯಾಪಕರ ಪಾತ್ರವನ್ನು ವಿವರಿಸಿ.
3. ಕಲಿಕಾ ಸವಾಲುಗಳುಳ್ಳ ಮಕ್ಕಳ ವಿಧಗಳನ್ನು ಮತ್ತು ಅವರ ಶಿಕ್ಷಣದಲ್ಲಿ ಅಧ್ಯಾಪಕರ ಪಾತ್ರವನ್ನು ವಿವರಿಸಿ.
4. ಬಹು ಸವಾಲುಗಳುಳ್ಳ ಮತ್ತು ವಿಶೇಷ ಆರೋಗ್ಯ ಸಮಸ್ಯೆಗಳುಳ್ಳ ಮಕ್ಕಳ ಪರಿಕಲ್ಪನೆ, ಗುಣಲಕ್ಷಣಗಳು ಮತ್ತು ಶೈಕ್ಷಣಿಕ ನಿಹಿತಾರ್ಥಗಳನ್ನು ವಿಶ್ಲೇಷಿಸಿ.

## 2.1.7. ಪರಾಮರ್ಶನ ಸೂಚಿ


1. https://mchb.hrsa.gov/maternal-child-health-topics/children-and-youth-special-health-needs http://mchb.hrsa.gov/programs/index.html
2.
3. https://www.education.com › ... › Characteristics of Children with Mental Retardation
4. https://kidshealth.org/en/parents/vision-factsheet.html
5. https://kidshealth.org/en/parents/hearing-factsheet.html

*Snellen chart image by Jeff Dahl - Own work by uploader, Based on the public domain document: [1], CC BY-SA 3.0, https://commons.wikimedia.org/w/index.php?curid=4262200


***************

# ಬ್ಲಾಕ್–2 : ಕಲಿಯುವವರ ವೈವಿಧ್ಯತೆಯನ್ನು ಚರ್ಚಿಸುವುದು ಮತ್ತು ಅರ್ಥಮಾಡಿಕೊಳ್ಳುವುದು

## ಘಟಕ–2 : ಅಸಾಮರ್ಥ್ಯತೆಯುಳ್ಳ ಬಾಲಕಿಯರು/ಮಹಿಳೆಯರು–ವಿಚಾರಗಳು, ಸವಾಲುಗಳು ಮತ್ತು ಬೆಂಬಲಿಸುವ ಕಾರ್ಯಕ್ರಮಗಳು

**ಘಟಕದ ರಚನೆ**


2.2.1 ಕಲಿಕಾ ಉದ್ದೇಶಗಳು

2.2.2. ಪೀಠಿಕೆ

2.2.3 ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.2.3.1. ಅಸಾಮರ್ಥ್ಯತೆಯುಳ್ಳ ಬಾಲಕಿಯರು/ಮಹಿಳೆಯರ ವಿಚಾರಗಳು ಮತ್ತು ಸವಾಲುಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 1

2.2.3.2. ಅಸಾಮರ್ಥ್ಯತೆಯುಳ್ಳ ಬಾಲಕಿಯರು/ ಮಹಿಳೆಯರು–ಬೆಂಬಲಿಸುವ ಕಾರ್ಯಕ್ರಮಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 2

2.2.4. ಸಾರಾಂಶಿಸೋಣ

2.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1 ಮತ್ತು 2

2.2.6. ಘಟಕಾಂತ್ಯ ಅಭ್ಯಾಸಗಳು

2.2.7. ಪರಾಮರ್ಶನ ಸೂಚಿ


## 2.2.1 ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಅಸಾಮರ್ಥ್ಯತೆ ಇರುವ ಬಾಲಕಿಯರ ಕುರಿತ ವಿಚಾರಗಳನ್ನು ವಿವರಿಸುವರು;
- ಅಸಾಮರ್ಥ್ಯತೆ ಇರುವ ಬಾಲಕಿಯರ ಸವಾಲುಗಳನ್ನು ಸ್ಪಷ್ಟಪಡಿಸುವರು; ಮತ್ತು
- ಅಸಾಮರ್ಥ್ಯತೆ ಇರುವ ಬಾಲಕಿಯರಿಗೆ ಸಿಗುವ ಸೂಕ್ತ ಬೆಂಬಲ ಸೇವೆಗಳನ್ನು ಗುರುತಿಸುವರು

## 2.2.2. ಪೀಠಿಕೆ

ಅಸಾಮರ್ಥ್ಯವುಳ್ಳ ವ್ಯಕ್ತಿಗಳು ಸಮಾನತೆಯನ್ನು ದೊರಕಿಸಿಕೊಳ್ಳುವ ಹೋರಾಟದಲ್ಲಿ ಹಲವಾರು ತೊಡಕುಗಳನ್ನು ಎದುರಿಸುತ್ತಾರೆ ಎಂಬುದು ನಿಮಗೆ ತಿಳಿದಿದೆ. ಅಸಾಮರ್ಥ್ಯದ ಕಾರಣದಿಂದಾಗಿ ಪುರುಷರು ಮತ್ತು ಸ್ತ್ರೀಯರಿಬ್ಬರೂ

ತಾರತಮ್ಯಕ್ಕೆ ಒಳಗಾಗುತ್ತಾರಾದರೂ ಅಸಾಮರ್ಥ್ಯವಿರುವ ಸ್ತ್ರೀಯರು ಪುರುಷರಿಗಿಂತ ಹೆಚ್ಚು ತಾರತಮ್ಯಕ್ಕೆ ಒಳಗಾಗುತ್ತಾರೆ. ಅಸಾಮರ್ಥ್ಯದಿಂದಾಗುವ ತಾರತಮ್ಯ ಒಂದು ಕಡೆಯಾದರೆ ಲಿಂಗತ್ವದ ಹಿನ್ನೆಲೆಯಲ್ಲಿನ ತಾರತಮ್ಯ ಮತ್ತೊಂದು ಕಡೆ. ಹೀಗಾಗಿ ಅವರು ಹೆಚ್ಚಿನ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಅಸಾಮರ್ಥ್ಯವಿರುವ ವ್ಯಕ್ತಿಗಳಲ್ಲಿ ಲಿಂಗತ್ವ ಪರಿಗಣನೆ ಇಲ್ಲದ ಸನ್ನಿವೇಶವನ್ನೆದುರಿಸಿ ಅದರ ವಿರುದ್ಧ ಹೋರಾಡುವುದು ಮೊದಲು ಎದುರಿಸಬೇಕಾದ ಸವಾಲು. ಶಿಕ್ಷಣದ ಸನ್ನಿವೇಶದಲ್ಲಿ ಅಸಾಮರ್ಥ್ಯವಿರುವ ಬಾಲಕಿಯರಿಗಿಂತ ಹೆಚ್ಚು ಬಾಲಕರು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಅಸಾಮರ್ಥ್ಯವಿರುವವರಲ್ಲಿ ಬಾಲಕರು ಹೆಚ್ಚಾಗಿರುವುದರಿಂದ ಈ ಸನ್ನಿವೇಶವಿದೆ ಎಂದೂ ಹೇಳಲಾಗುತ್ತದೆ.

ಬಾಲಕರ ಮತ್ತು ಬಾಲಕಿಯರ ವಿಶೇಷ ಶಿಕ್ಷಣದ ಅಗತ್ಯಗಳನ್ನು ಗಮನಿಸಿದರೆ, ಲಿಂಗತ್ವ ಮತ್ತು ಅಸಾಮರ್ಥ್ಯವನ್ನು ಕುರಿತ ಸಂಶೋಧನೆಗಳು ಅತಿ ಕಡಿಮೆ ಪ್ರಮಾಣದಲ್ಲಿರುವುದು ಕಂಡುಬರುತ್ತದೆ. ಅದೇ ಸಮಯದಲ್ಲಿ ಬಾಲಕಿಯರಿಗಿಂತ ಮೂರು ಪಟ್ಟು ಹೆಚ್ಚು ಬಾಲಕರು ಶಿಕ್ಷಣ ಪಡೆಯುತ್ತಿದ್ದಾರೆ. ಬಾಲಕರು ಮತ್ತು ಬಾಲಕಿಯರಲ್ಲಿ ಅಸಾಮರ್ಥ್ಯತೆಯ ಪ್ರಮಾಣದ ಭಿನ್ನತೆಯಿಂದ ಈ ಸನ್ನಿವೇಶವಿದೆಯೋ ಅಥವಾ ಬಾಲಕಿಯರಲ್ಲಿ ನಿಜವಾಗಿ ಅಸಾಮರ್ಥ್ಯವನ್ನು ಗುರುತಿಸಿಲ್ಲದ ಕಾರಣವಾಗಿ ಅಥವಾ ಇತರ ಯಾವುದಾದರೂ ಕಾರಣದಿಂದಾಗಿ ಈ ರೀತಿಯ ಅಂಕಿ ಅಂಶಗಳು ಸಿಗುತ್ತವೆಯೋ ಎಂಬ ವಿಷಯ ಹೆಚ್ಚಿನ ಅಧ್ಯಯನವನ್ನು ಬಯಸುತ್ತದೆ ಎಂದಷ್ಟೇ ಹೇಳಬಹುದು. ಇದಕ್ಕೆ ನಮ್ಮ ದೇಶದ ಸಾಂಸ್ಕೃತಿಕ ಕಾರಣಗಳು ಇಲ್ಲವೆಂದು ಹೇಳಲಾಗುವುದಿಲ್ಲ.

ಸಂಯುಕ್ತ ರಾಷ್ಟ್ರಗಳ ಅಂದಾಜಿನ ಪ್ರಕಾರ, ಸುಮಾರು 600 ಮಿಲಿಯನ್ ಪ್ರಮಾಣದ ವ್ಯಕ್ತಿಗಳು ಅಥವಾ ಭೂಮಿಯ ಮೇಲೆ ವಾಸಿಸುತ್ತಿರುವವರಲ್ಲಿ ಸುಮಾರು ಶೇ 10ರಷ್ಟು ಜನರು ಒಂದಲ್ಲಾ ಒಂದು ರೀತಿಯ ಅಸಾಮರ್ಥ್ಯತೆಯಿಂದ ಬದುಕುತ್ತಿದ್ದಾರೆ. ಯಾವುದೇ ಅಸಾಮರ್ಥ್ಯವಿರಲಿ, ಎಲ್ಲ ವಯೋಮಾನದ ಬಾಲಕಿಯರು ಅಥವಾ ಸ್ತ್ರೀಯರು ಸಾಮಾನ್ಯವಾಗಿ ಹೆಚ್ಚು ಅಪಾಯಕ್ಕೊಳಗಾಗುವಂತಹವರು. ಅಸಾಮರ್ಥ್ಯವಿರುವವರಲ್ಲಿ ಶೇ5 ಕ್ಕಿಂತ ಕಡಿಮೆಯಷ್ಟು ಮಕ್ಕಳು ಮತ್ತು ಯುವಜನಾಂಗಕ್ಕೆ ಶಿಕ್ಷಣ ಹಾಗೂ ತರಬೇತಿಯ ಅವಕಾಶಗಳಿವೆ. ಅಸಾಮರ್ಥ್ಯವಿರುವವರಲ್ಲಿ ಬಾಲಕಿಯರು ಮತ್ತು ಯುವತಿಯರು ಸಾಮಾಜಿಕ ಜೀವನ ಮತ್ತು ಬೆಳವಣಿಗೆಯ ಅಂಶಗಳಲ್ಲಿ ಗಮನಾರ್ಹ ಅಡೆತಡೆಗಳನ್ನು ಎದುರಿಸುತ್ತಾರೆ. ಈ ಸನ್ನಿವೇಶದಲ್ಲಿರುವ ಬಾಲಕಿಯರು ಮತ್ತು ಯುವತಿಯರನ್ನು ಕುರಿತು ಈ ಘಟಕದಲ್ಲಿ ಚರ್ಚಿಸಲಿದ್ದೇವೆ.

### 2.2.3.1. ಅಸಾಮರ್ಥ್ಯತೆಯುಳ್ಳ ಬಾಲಕಿಯರು/ಮಹಿಳೆಯರು–ವಿಚಾರಗಳು ಮತ್ತು ಸವಾಲುಗಳು

### (I) ಅಸಾಮರ್ಥ್ಯತೆಯುಳ್ಳ ಬಾಲಕಿಯರು/ಮಹಿಳೆಯರು–ವಿಚಾರಗಳು

ಲಿಂಗತ್ವ ಎಂಬುದು ಸಾಮಾಜಿಕ ವ್ಯವಸ್ಥೆಯ ಪ್ರಮುಖ ಅಂಶ. ಆದರೂ ಅಸಾಮರ್ಥ್ಯವಿರುವವರನ್ನು ಸಾಮಾನ್ಯವಾಗಿ ಲಿಂಗತ್ವವಿಲ್ಲದ ವ್ಯಕ್ತಿಗಳಾಗಿ ಪರಿಗಣಿಸಲಾಗುತ್ತದೆ. ಪುರುಷರಿಗೆ ಮತ್ತು ಮಹಿಳೆಯರಿಗೆ ಸಂಬಂಧಿಸಿದ ಹಲವು ಜೈವಿಕ, ಮನೋವೈಜ್ಞಾನಿಕ, ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಅಂಶಗಳಿಂದಾಗಿ ಅಸಾಮರ್ಥ್ಯತೆ ಇರುವ ಪುರುಷರು ಮತ್ತು ಮಹಿಳೆಯರು ಬೇರೆಯದೇ ಆದ ಜೀವನಾನುಭವಗಳನ್ನು ಪಡೆದಿರುತ್ತಾರೆ. ಅವರ ಅನಾನುಕೂಲತೆಗಳ ವಿನ್ಯಾಸ ಅನೇಕ ಸಂದರ್ಭಗಳಲ್ಲಿ ಪುರುಷ ಅಥವಾ ಮಹಿಳೆಯ ಸಾಮಾಜಿಕ ಸ್ಥಾನಮಾನದ ವ್ಯತ್ಯಾಸಗಳಿಗೆ ಸಂಬಂಧಿಸಿರುತ್ತದೆ. ಈ ಲಿಂಗಭೇದಗಳು ಅಸಾಮರ್ಥ್ಯವಿರುವ ಮಹಿಳೆಯರ ಮತ್ತು ಪುರುಷರ ಜೀವನಾನುಭವಗಳಲ್ಲಿ ಬಿಂಬಿತವಾಗುತ್ತವೆ. ಕೆಲವು

ಸಂದರ್ಭಗಳಲ್ಲಿ ಅಸಾಮರ್ಥ್ಯವಿರುವ ಬಾಲಕಿಯರು ಮತ್ತು ಮಹಿಳೆಯರು ಅಸಾಮರ್ಥ್ಯವಿರುವ ಬಾಲಕರು ಅಥವಾ ಪುರುಷರಿಗಿಂತ ಹೆಚ್ಚಿನ ರೀತಿಯ ತಾರತಮ್ಯಗಳನ್ನು ಎದುರಿಸುತ್ತಾರೆ.

ಯಾವುದೇ ಅಸಾಮರ್ಥ್ಯವಿರಲಿ, ಎಲ್ಲ ವಯೋಮಾನದ ಬಾಲಕಿಯರು ಮತ್ತು ಮಹಿಳೆಯರು ಸಮಾಜದಲ್ಲಿ ಹೆಚ್ಚಿನ ಅಪಾಯ ಹಾಗೂ ಅವಗಣನೆಗೆ ಒಳಗಾಗುತ್ತಾರೆ. ಪ್ರತಿ ಐವರಲ್ಲಿ ಒಬ್ಬ ಮಹಿಳೆ ಅಸಾಮರ್ಥ್ಯತೆ ಹೊಂದಿದ್ದು, ಪುರುಷರಿಗಿಂತ ಮಹಿಳೆಯರಲ್ಲಿ ಅಸಾಮರ್ಥ್ಯತೆ ಹೆಚ್ಚು ಕಂಡುಬರುತ್ತದೆ ಎಂದು ಅಂದಾಜುಮಾಡಲಾಗಿದೆ(ಶೇ19.2–ಶೇ12). ಆದರೂ ಅಸಾಮರ್ಥ್ಯವಿರುವ ಬಾಲಕಿಯರು ಮತ್ತು ಮಹಿಳೆಯರು ಜಾಗತಿಕವಾಗಿ ಗಂಭೀರವಾದ ನಿರ್ಧಾರಗಳನ್ನು ತೆಗೆದುಕೊಳ್ಳುವ ಸನ್ನಿವೇಶಗಳಲ್ಲೂ ಸಮಾನತೆಗಾಗಿ ಹೋರಾಡುವ ಸಂದರ್ಭಗಳಲ್ಲೂ ಅವಗಣನೆಗೆ ಒಳಗಾಗಿದ್ದಾರೆ. ಮಹಿಳೆಯರಿಗಾಗಿ ಹೋರಾಡುವ ಸಂದರ್ಭದಲ್ಲಿಯಾಗಲೀ ಅಸಾಮರ್ಥ್ಯತೆಯುಳ್ಳವರಿಗಾಗಿ ಹೋರಾಡುವ ಸಂದರ್ಭದಲ್ಲಿಯಾಗಲೀ ಅಸಾಮರ್ಥ್ಯವಿರುವ ಮಹಿಳೆಯರ ಹಕ್ಕುಗಳನ್ನು ರಕ್ಷಿಸಲು ಗಮನಹರಿಸಿರುವಂತೆ ಕಂಡುಬರುವುದಿಲ್ಲ.

ವಿಶೇಷ ಶಿಕ್ಷಣದ ಅಗತ್ಯಗಳನ್ನು ಗಮನಿಸುವ ಸಂದರ್ಭದಲ್ಲಿ ಬಾಲಕಿಯರಿಗಿಂತ ಬಾಲಕರ ಅಸಾಮರ್ಥ್ಯತೆಯನ್ನು ಹೆಚ್ಚು ಗಮನಿಸಲಾಗಿದೆ ಎಂದು ಹಲವಾರು ಅಧ್ಯಯನಗಳು ಗುರುತಿಸಿವೆ. ಇದಕ್ಕೆ ಕಾರಣಗಳನ್ನು ಗುರುತಿಸುವ ಪ್ರಯತ್ನಗಳೂ ಆಗಿವೆ. ಇದು ಅಸಾಮರ್ಥ್ಯವಿರುವ ಬಾಲಕರ ಪರವಾದ ತಾರತಮ್ಯವನ್ನು ಸೂಚಿಸುತ್ತದೆ. ಜೊತೆಗೆ, ಸಾಮಾನ್ಯ ಶಿಕ್ಷಣದಿಂದ ಅವರು ವಂಚಿತರಾಗಿದ್ದಾರೆ ಎಂಬ ಅಂಶವನ್ನೂ ತಿಳಿಸುತ್ತದೆ. ಬಾಲಕರು ಬಾಲಕಿಯರಿಗಿಂತ ಹೆಚ್ಚು ತರಳೆ ಮಾಡುವುದರಿಂದ ಅವರನ್ನು ಹೆಚ್ಚು ಗುರುತಿಸಲಾಗುತ್ತದೆ ಎಂದು ಹೇಳಲಾಗುತ್ತದೆ. ಮತ್ತೆ ಕೆಲವು ಸನ್ನಿವೇಶಗಳಲ್ಲಿ ಬಾಲಕರ ಶಿಕ್ಷಣಕ್ಕೆ ಬಾಲಕಿಯರ ಶಿಕ್ಷಣಕ್ಕಿಂತ ಹೆಚ್ಚಿನ ಆದ್ಯತೆ ಇರುವುದರಿಂದ ಹೀಗಾಗುತ್ತದೆ. ಅವರು ಸ್ವಾವಲಂಬಿಗಳಾಗಬೇಕು ಮತ್ತು ಕುಟುಂಬವನ್ನು ಪೋಷಿಸಬೇಕು ಎಂಬ ಲಿಂಗಪಾತ್ರದ ದೃಷ್ಟಿಯೂ ಇದಕ್ಕೆ ಕಾರಣ. ಈ ಚರ್ಚೆಗಳು ವಿಶೇಷ ಶಿಕ್ಷಣ ಅಥವಾ ಅವಕಾಶಗಳಿಂದ ಅಸಾಮರ್ಥ್ಯವಿರುವ ಬಾಲಕಿಯರು ಹೇಗೆ ವಂಚಿತರಾಗಿದ್ದಾರೆ ಎಂಬುದನ್ನು ಮಾತ್ರವಲ್ಲದೆ, ಬಾಲಕಿಯರಲ್ಲಿ ಅಸಾಮರ್ಥ್ಯತೆಯನ್ನು ಗುರುತಿಸುವ ಪ್ರಯತ್ನಗಳು ನಡೆಯದೇ ಅವರ ಜೀವನ ಸಾಗುತ್ತದೆ ಎಂಬ ವಿಷಾದನೀಯ ಸಂಗತಿಯನ್ನು ಮನವರಿಕೆ ಮಾಡಿಕೊಡುತ್ತವೆ. ಈ ರೀತಿಯ ತಾರತಮ್ಯತೆಯು ಅಸಾಮರ್ಥ್ಯವಿರುವ ಬಾಲಕಿಯರನ್ನು, ಮಹಿಳೆಯರನ್ನು ಸಮಾಜ ನಿರ್ಲಕ್ಷಿಸಿದೆ ಎಂಬುದನ್ನು ತೋರಿಸಿಕೊಡುತ್ತದೆ.

ಐತಿಹಾಸಿಕವಾಗಿ ಹಾಗೂ ಮಹಿಳಾ ಚಳುವಳಿಗಳಲ್ಲಿ ಅಸಾಮರ್ಥ್ಯವಿರುವ ಮಹಿಳೆಯರನ್ನು ನಿರ್ಲಕ್ಷಿಸಿರುವುದಾದರೂ ಕಳೆದ ದಶಕದಲ್ಲಿ ಮಹಿಳೆಯರ ಅಸಾಮರ್ಥ್ಯತೆಯನ್ನು ಗುರುತಿಸುವ, ಈಗಾಗಲೇ ಗುರುತಿಸಲಾಗಿರುವ ಅಸಾಮರ್ಥ್ಯವುಳ್ಳ ಮಹಿಳೆಯರ ಬದುಕನ್ನು ಹಸನುಮಾಡುವ ಪ್ರಯತ್ನಗಳು ನಡೆದಿವೆ. ಇವು ಅಸಾಮರ್ಥ್ಯವಿರುವ ಮಹಿಳೆ ಇತರರೊಂದಿಗೆ ಹೇಗೆ ವ್ಯವಹರಿಸುತ್ತಾಳೆ ಹಾಗೂ ತನ್ನ ಅನುಭವಗಳನ್ನು ಹೇಗೆ ಪರಿಗಣಿಸುತ್ತಾಳೆ ಎಂಬುದನ್ನು ಅರಿತುಕೊಳ್ಳಲು ಪ್ರಯತ್ನಿಸಿವೆ. ಈ ವಿಚಾರಗಳನ್ನು ಮತ್ತು ಆಕೆ ಎದುರಿಸುವ ಸವಾಲುಗಳನ್ನು ಮುಂದೆ ಚರ್ಚಿಸೋಣ.

ಅಸಾಮರ್ಥ್ಯತೆ ಇಲ್ಲದಿರುವ ಬಾಲಕಿಯರು ಮತ್ತು ಮಹಿಳೆಯರೇ ಇಂದಿನ ಸಮಾಜದಲ್ಲಿ ಬಹಳಮಟ್ಟಿನ ತಾರತಮ್ಯವನ್ನು ಎದುರಿಸುತ್ತಿರುವಾಗ ಅಸಾಮರ್ಥ್ಯವಿರುವ ಬಾಲಕಿಯರು ಮತ್ತು ಮಹಿಳೆಯರ ಕುರಿತು ಹೆಚ್ಚು ಆಶಿಸುವುದಾದರೂ ಹೇಗೆ? ಅಸಾಮರ್ಥ್ಯವುಳ್ಳ ಬಾಲಕಿಯರನ್ನು ಸಾಮಾನ್ಯವಾಗಿ ಅಸಹಾಯಕರು,

ಮಗುಸಮಾನರು, ಪರಾವಲಂಬಿಗಳು, ಸಹಾಯ ಬಯಸುವವರು, ಬಲಿಪಶುಗಳು, ನಿಷ್ಕ್ರಿಯರು ಇತ್ಯಾದಿಯಾಗಿ ನೋಡಲಾಗುತ್ತದೆ. ಅಸಾಮರ್ಥ್ಯವಿರುವ ಹೆಂಗಸರು, ಯಾವುದೇ ವಯಸ್ಸಿನವರಿರಲಿ, ಆರೋಗ್ಯ ಸೇವೆಗಳ ಭೌತಿಕ ಅವಕಾಶ ಅವರಿಗೆ ಕಷ್ಟ. ಜನರಿಗೆ ಲಿಂಗತಾರತಮ್ಯ, ಹಿಂಸೆ, ಬಡತನ, ಯುದ್ಧಗಳು, ಸ್ಥಳ ಬದಲಾವಣೆ ಮತ್ತು ಇತರ ಸಾಮಾಜಿಕ ವಂಚನೆ ಇವುಗಳಿಂದ ಮಾನಸಿಕ ಆರೋಗ್ಯಕ್ಕೆ ಒದಗಬಹುದಾದ ಅವಗಡಗಳ ಸರಿಯಾದ ತಿಳಿವಳಿಕೆ ಇಲ್ಲದ ಕಾರಣ, ಸಾಮಾನ್ಯವಾಗಿ ಅಸಾಮರ್ಥ್ಯವುಳ್ಳ ಬಾಲಕಿಯರು ಬಾಲಕರಿಗಿಂತ ತೀವ್ರತರವಾದ ಅಪಾಯಗಳಿಗೆ ಗುರಿಯಾಗುತ್ತಾರೆ. ಅಸಾಮರ್ಥ್ಯವುಳ್ಳ ಮಹಿಳೆಯರು ಖಿನ್ನತೆ, ಒತ್ತಡ, ಕೆಳಮಟ್ಟದ ಆತ್ಮಗೌರವ, ಸಾಮಾಜಿಕ ಪ್ರತ್ಯೇಕತೆ ಇವುಗಳನ್ನು ಒಳಗೊಂಡಂತೆ ಪ್ರಮುಖ ಸಾಮಾಜಿಕ–ಮನೋವೈಜ್ಞಾನಿಕ ಸಮಸ್ಯೆಗಳನ್ನು ಎದುರಿಸುತ್ತಾರೆ. ಇವುಗಳು ಸಾಮಾನ್ಯವಾಗಿ ಗಣನೆಗೆ ಬರುವುದೇ ಇಲ್ಲ. ಇಂತಹ ಮಹಿಳೆಯರನ್ನು ಮನೆಯ ಕೆಲಸಗಳಿಗೆ ಮಿತಿಗೊಳಿಸಲಾಗುತ್ತದೆ. ಆದರೆ ಇಂತಹ ಪುರುಷರನ್ನು ಹೆಚ್ಚು ಸಾರ್ವಜನಿಕವಾದ ಮತ್ತು ಹೊರಜಗತ್ತಿನ ಕಾರ್ಯಗಳಲ್ಲಿ ಒಳಪಡಿಸಿಕೊಳ್ಳಲಾಗುತ್ತದೆ. ಲಿಂಗಪಡಿಯಚ್ಚುಗಳು ಸಂಸ್ಕೃತಿಯ ಮೂಲ ಅಂಶಗಳಾಗಿದ್ದು, ಮಹಿಳೆ ಮತ್ತು ಪುರುಷರಿಗೆ ಆಯಾ ಸಮುದಾಯದ ಸಂಸ್ಕೃತಿಯ ವ್ಯವಸ್ಥೆಯಲ್ಲಿ ಯಾವ ಸಂಬಂಧಗಳಿವೆ ಎಂಬುದರ ಮೇಲೆ ಮಾತ್ರ ಇದನ್ನು ಅರ್ಥಮಾಡಿಕೊಳ್ಳಬಹುದು. ಲಿಂಗ ಪಡಿಯಚ್ಚುಗಳು ಅಸಾಮರ್ಥ್ಯತೆಯ ಪಡಿಯಚ್ಚುಗಳೊಂದಿಗೆ ಬೆರೆತು ಸಮಾಜದಲ್ಲಿ ಒಂದು ಆಳವಾದ ಲಿಂಗತ್ವ ಆಧಾರಿತ ಜಾಲವನ್ನೇ ರೂಪಿಸಿಬಿಡುತ್ತದೆ. ಇವು ಎಲ್ಲ ಸಂಸ್ಕೃತಿಯಲ್ಲೂ ಅವುಗಳ ಐತಿಹಾಸಿಕ ಹಿನ್ನೆಲೆಯಲ್ಲಿ ತತ್ಕಾಲೀನ ಸಮಾಜದ ಮೇಲೆ ಪ್ರಭಾವಬೀರುತ್ತವೆ. ಹೀಗೆ ಸಂಸ್ಕೃತಿಗಳು ಲಿಂಗಾಧಾರಿತ ಅಸಾಮರ್ಥ್ಯತೆಯ ಸಾಮಾಜಿಕ ಸಂಬಂಧಗಳನ್ನು ಉಳಿಸಿಕೊಂಡುಬಿಡುತ್ತವೆ.

ಶಿಕ್ಷಣದ ಸನ್ನಿವೇಶದಲ್ಲಿ, ಲಿಂಗಾಧಾರಿತವಾದ ತಾರತಮ್ಯದ ಇರುವಿಕೆಯನ್ನು ಅನೇಕ ಸಂಶೋಧನೆಗಳು ವರದಿಮಾಡಿವೆ. ಏನೇ ಆದರೂ ಅಸಾಮರ್ಥ್ಯವಿರುವ ಬಾಲಕಿಯರನ್ನಾಗಲೀ, ಮಹಿಳೆಯರನ್ನಾಗಲೀ ಇವು ಒಳಗೊಂಡಿಲ್ಲ. ಹಾಗಾಗಿ ಅಸಾಮರ್ಥ್ಯವಿರುವ ಬಾಲಕಿಯರ ಮತ್ತು ಮಹಿಳೆಯರ ಅಗತ್ಯಗಳು ಇನ್ನಾವುದೇ ವರ್ಗಗಳ ಅಗತ್ಯಗಳಿಗಿಂತ ಹೆಚ್ಚು ಪ್ರಮುಖವಾಗಿದ್ದು, ಅದನ್ನು ತಕ್ಷಣವೇ ಗಮನಿಸಿ ಸೂಕ್ತ ಕ್ರಮ ಕೈಗೊಳ್ಳಬೇಕಾದ ಅಗತ್ಯ ಎದ್ದು ಕಾಣುತ್ತದೆ.

ಅಸಾಮರ್ಥ್ಯವಿರುವ ಬಾಲಕಿಯರ ಮತ್ತು ಮಹಿಳೆಯರ ಹಕ್ಕುಗಳನ್ನು ಇತರರ ಹಕ್ಕುಗಳಿಗೆ ಸಮಾನವಾಗಿ ಪರಿಗಣಿಸಲಾಗಿಲ್ಲ. ಇದಕ್ಕೆ ಆಯಾ ಸಮುದಾಯದ ಪರಂಪರೆ ಹಾಗೂ ಸಂಪ್ರದಾಯಗಳಲ್ಲಿ ಅವರಿಗಿರುವ ಕೆಳಮಟ್ಟದ ಸ್ಥಾನಮಾನ, ಅಥವಾ ಕಣ್ಣಿಗೆ ಕಾಣುವ ಇಲ್ಲವೇ ಕಾಣದಿರುವ ತಾರತಮ್ಯತೆಯ ಕಾರಣಗಳಿರಬಹುದು. ಇವರು ಪ್ರಮುಖವಾಗಿ ಶಿಕ್ಷಣ, ಕೆಲಸ ಮತ್ತು ಉದ್ಯೋಗ, ಕುಟುಂಬ ಹಾಗೂ ಸಂತಾನೋತ್ಪತ್ತಿ ಹಕ್ಕು, ಆರೋಗ್ಯ, ಹಿಂಸೆಮತ್ತು ನಿಂದೆಯಿಂದ ಮುಕ್ತಿ ಇತ್ಯಾದಿ ಕ್ಷೇತ್ರಗಳಲ್ಲಿ ವಂಚಿತರಾಗಿದ್ದಾರೆ.

ಅಸಾಮರ್ಥ್ಯವಿರುವ ಬಾಲಕಿಯರ ಬದುಕಿನ ನಿರ್ದಿಷ್ಟ ಕ್ಷೇತ್ರಗಳನ್ನು ಕುರಿತ ವಿಚಾರಗಳ ಕುರಿತು ಗಮನಹರಿಸೋಣ. ಈ ಕುರಿತ ಕ್ಷೇತ್ರಗಳನ್ನು ಕೆಳಕಂಡಂತೆ ಗುರುತಿಸಲಾಗಿದೆ.

**ಕುಟುಂಬ:** ಅಸಾಮರ್ಥ್ಯವಿರುವವರು ಹೆಣ್ಣು ಅಥವಾ ಗಂಡು ಎಂಬ ಕಾರಣಕ್ಕಾಗಿ, ಭಿನ್ನ ಕೌಟುಂಬಿಕ ಮತ್ತು ಜೀವನಾನುಭವಗಳನ್ನು ಪಡೆದಿರುತ್ತಾರೆ ಎಂಬುದು ನಮಗೆ ತಿಳಿದಿದೆ. ಇಬ್ಬರೂ ಅನೇಕ ರೀತಿಯ ಕೌಟುಂಬಿಕ ಹಾಗೂ ಸಾಮಾಜಿಕ ಅನನುಕೂಲತೆಗಳನ್ನು ಅನುಭವಿಸುವುದಲ್ಲದೆ, ಈ ಅನನುಕೂಲತೆಗಳ ವಿನ್ಯಾಸ ಅವರ ಸಾಮಾಜಿಕ ಸ್ಥಾನಮಾನಗಳಿಗೂ ಸಂಬಂಧಿಸಿರುತ್ತವೆ. ಸಮಾನ ಸನ್ನಿವೇಶದಲ್ಲಿ ಮಹಿಳೆಯರು

ಪುರುಷರಿಗಿಂತ ಹೆಚ್ಚು ತಾರತಮ್ಯವನ್ನೂ ಹೆಚ್ಚು ಅನನುಕೂಲತೆಗಳನ್ನೂ ಎದುರಿಸುತ್ತಾರೆ. ಬಹಳಷ್ಟು ಕುಟುಂಬಗಳಲ್ಲಿ ವಿಶೇಷವಾಗಿ ಅಸಾಮರ್ಥ್ಯವಿರುವ ಬಾಲಕಿಯರನ್ನು ಬೆಳಕಿಗೆ ತರುವುದೇ ಇಲ್ಲ. ಅಸಾಮರ್ಥ್ಯವನ್ನು ಪೂರ್ವಜನ್ಮದ ಕರ್ಮ ಎಂದೋ ಶಾಪ ಎಂದೋ ನಂಬಲಾಗುತ್ತದೆ. ಹೀಗೆ ಮನೆಯೊಳಗೇ ಅವರನ್ನು ಅಡಗಿಸಿಡುವುದರಿಂದ ಆ ಬಾಲಕಿಯರು ಶಿಕ್ಷಣ, ವಿವಾಹ, ಉದ್ಯೋಗ ಇವುಗಳಿಂದ ವಂಚಿತರಾಗಿ ಅವರ ಸಬಲೀಕರಣಕ್ಕೆ ಅವಕಾಶಗಳೇ ಇರುವುದಿಲ್ಲ. ಇದಲ್ಲದೆ ಅವರು ಬಾಲಕರು ಅಥವಾ ಪುರುಷರಿಗಿಂತ ಹೆಚ್ಚು ಕೌಟುಂಬಿಕ ಮತ್ತು ಸಾಂಸ್ಥಿಕ ಹಿಂಸೆಯನ್ನು ಎದುರಿಸುತ್ತಾರೆ. ಇವರು ಪುರುಷರಿಗಿಂತ ಹೆಚ್ಚು ಸನ್ನಿವೇಶಗಳಲ್ಲಿ ಏಕೈಕ ಪೋಷಕರಾಗಿ, ಅವರ ಪಾಡಿಗೆ ಅಥವಾ ಪೋಷಕರ ಕುಟುಂಬದೊಂದಿಗೆ ಬದುಕುತ್ತಾರೆ. ಇವರಿಗೆ ಪುರುಷರಿಗಿಂತ ಕಡಿಮೆ ಹಣಕಾಸಿನ ಸಂಪನ್ಮೂಲಗಳಿದ್ದು, ಇವರು ಪುರುಷರಿಗಿಂತ ಹೆಚ್ಚು ಸುರಕ್ಷಿತವಲ್ಲದ ಅಥವಾ ಅಸಮರ್ಪಕ ವಸತಿ ಸನ್ನಿವೇಶಗಳಲ್ಲಿ ಬದುಕು ನಡೆಸುತ್ತಾರೆ. ವಿವಾಹದ ನಂತರ ಅಸಾಮರ್ಥ್ಯವನ್ನು ಪಡೆದುಕೊಂಡವರು ಪುರುಷರಿಗಿಂತ ಹೆಚ್ಚು ಅಪಾಯದ ಸ್ಥಿತಿಯಲ್ಲಿದ್ದು, ಅವರ ಮಕ್ಕಳ ರಕ್ಷಣೆಯ ಕೆಲಸದಲ್ಲಿ ತೊಂದರೆಯನ್ನನುಭವಿಸುತ್ತಾರೆ.

**ಶಿಕ್ಷಣ :** ಅಸಾಮರ್ಥ್ಯವಿರುವ ಯುವಕರು ಮತ್ತು ಮಕ್ಕಳಲ್ಲಿ ಶೇ.30ಕ್ಕಿಂತ ಕಡಿಮೆಯಷ್ಟು ಜನರು ಶಿಕ್ಷಣ ಮತ್ತು ತರಬೇತಿ ಪಡೆಯುವ ಅವಕಾಶಗಳಿವೆ. ಬಾಲಕಿಯರು ಹಾಗೂ ಯುವತಿಯರು ಸಾಮಾಜಿಕ ಬದುಕು ಮತ್ತು ಬೆಳವಣಿಗೆಯನ್ನು ಕುರಿತಂತೆ ವಿಶಿಷ್ಟ ಅಡೆತಡೆಗಳನ್ನು ಅನುಭವಿಸುತ್ತಾರೆ. ಸಾಮಾಜಿಕ ಕಳಂಕದ ಕಾರಣದಿಂದಾಗಿ ಬಾಲಕಿಯರನ್ನು ಮನೆಯಿಂದ ಹೊರಗೆ ತರದ ಸನ್ನಿವೇಶದಲ್ಲಿ ಬಾಲಕಿಯರು ಶಿಕ್ಷಣದಿಂದ ವಂಚಿತರಾಗುತ್ತಾರೆ. ಅಸಾಮರ್ಥ್ಯವಿರುವ ಕೆಲವು ಬಾಲಕಿಯರು ಶಾಲೆಗೆ ದಾಖಲಾದರೂ ಅವರ ಉಳಿಕೆಯ ಪ್ರಮಾಣ ಕಡಿಮೆ.

**ಸಮಾಜ :** ಸಾಮಾಜಿಕ ಸಂಘಟನೆಗಳಲ್ಲಿ ಪ್ರಮುಖವಾಗಿ ಪ್ರಭಾವ ಬೀರುವ ಅಂಶ ಎಂದರೆ ಲಿಂಗತ್ವ. ಲಿಂಗತ್ವವು ಮಾನವ ಹಕ್ಕುಗಳನ್ನು ಅನುಭವಿಸುವಲ್ಲಿ ಅಡ್ಡಿಯಾಗುತ್ತದೆ. ಲಿಂಗತ್ವವು ಮಹಿಳೆ ಹಾಗೂ ಪುರುಷರ ನಡುವಿನ ಸಂಬಂಧಗಳು ಮತ್ತು ಸಾಮಾಜಿಕ ವ್ಯತ್ಯಾಸಗಳಿಗೆ ಸಂಬಂಧಪಟ್ಟುದಾಗಿರುತ್ತದೆ. ಇವು ಕಲಿತು ಬರುವಂತಹವು, ಅಂದರೆ ಸಹಜವಾದುದಲ್ಲ. ಸಮಾಜ ಮತ್ತು ಸಂಸ್ಕೃತಿಗಳ ನಡುವೆ ಭಿನ್ನವಾಗಿದ್ದು ಕಾಲಕಾಲಕ್ಕೆ ಬದಲಾಗುವಂತಹವು. ಯಾವುದೇ ಸಾಮಾಜಿಕ ಸನ್ನಿವೇಶದಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಮಹಿಳೆಯರು ಮತ್ತು ಪುರುಷರ ಪಾತ್ರಗಳು, ಜವಾಬ್ದಾರಿಗಳು, ತಡೆಗಳು, ಅವಕಾಶಗಳು ಮತ್ತು ಅಗತ್ಯಗಳನ್ನು ವಿಶ್ಲೇಷಿಸಲು 'ಲಿಂಗತ್ವ' ಎಂಬ ಪದವನ್ನು ಬಳಸಲಾಗುತ್ತದೆ. ಲಿಂಗ ಪಾತ್ರಗಳು ಒಂದು ಸಮಾಜದ, ಸಮುದಾಯದ ಅಥವಾ ಸಾಮಾಜಿಕ ಗುಂಪಿನ ಕಲಿತ ವರ್ತನೆಗಳಾಗಿರುತ್ತವೆ. ಇದು ಮಹಿಳೆಯರ ಕೆಲಸ; ಇದು ಪುರುಷರ ಕೆಲಸ ಎಂದು ಗುರುತಿಸುವಷ್ಟು ಸ್ಪಷ್ಟವಾಗಿ ಅವು ಆಯಾ ಸಮಾಜಗಳಲ್ಲಿ ಅಂತರ್ಗತವಾಗಿಬಿಟ್ಟಿರುತ್ತವೆ. ಕೌಟುಂಬಿಕ ಹಿಂಸೆ, ಲೈಂಗಿಕ ಹಿಂಸೆ, ಅತ್ಯಾಚಾರ ಇವುಗಳನ್ನು ಒಳಗೊಂಡಂತೆ ಲಿಂಗಾಧಾರಿತ ಹಿಂಸೆಗಳು ಹೆಚ್ಚಾಗಿ ಅಸಾಮರ್ಥ್ಯತೆಯ ಪರಿಣಾಮವಾಗಿ ಕಾಣಬರುತ್ತವೆ.

ಲಿಂಗಾಧಾರಿತ ಊಹೆಗಳು ಮತ್ತು ಅಪೇಕ್ಷೆಗಳು ಸಾಮಾನ್ಯವಾಗಿ ಅಸಾಮರ್ಥ್ಯವಿರುವ ಮಹಿಳೆಯರನ್ನು ಕಾರ್ಯನಿರ್ವಹಿಸುವ, ಸ್ವಾಯತ್ತರೆಂದು ಗುರುತಿಸಲಾಗುವ, ಸಂಪೂರ್ಣ ಸಮರ್ಥ ವಯಸ್ಕರೆಂದು ಗುರುತಿಸಲಾಗುವ ಸ್ವಾತಂತ್ರ್ಯ, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಬೆಳವಣಿಗೆಯಲ್ಲಿ ಸಂಪೂರ್ಣವಾಗಿ ಭಾಗವಹಿಸುವ, ಅವರ ಸನ್ನಿವೇಶಗಳಲ್ಲಿ ನಿರ್ಧಾರ ತೆಗೆದುಕೊಳ್ಳುವ ಸ್ವಾತಂತ್ರ್ಯ ಇತ್ಯಾದಿ ಸಮರ್ಪಕ

ಹಕ್ಕುಗಳನ್ನು ಅನುಭವಿಸುವುದರಿಂದ ವಂಚಿತರಾಗುವಂತೆ ಮಾಡುತ್ತದೆ. ಅಸಾಮರ್ಥ್ಯವಿರುವ ಮಹಿಳೆಯರು ಪರಿಚಿತ ಮತ್ತು ಅಪರಿಚಿತ ಅಪರಾಧಿಗಳ ಬಲಿಪಶುಗಳಾಗುವ ಸಂದರ್ಭಗಳು ಹೆಚ್ಚಾಗಿರುತ್ತವೆ. ಇದು ತಿಳಿದಿದ್ದರೂ ಆ ಅಪರಾಧಿಗಳ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುವ ಸನ್ನಿವೇಶಗಳು ಬಹಳ ಕಡಿಮೆ. ಇತರ ಮಹಿಳೆಯರಿಗೆ ಹೋಲಿಸಿದರೆ ಅಸಾಮರ್ಥ್ಯವಿರುವ ಮಹಿಳೆಯರು ಎರಡು ಪಟ್ಟು ದೈಹಿಕ ಶೋಷಣೆ, ಅತ್ಯಾಚಾರ ಮತ್ತು ನಿಂದೆಗಳಿಗೆ ಒಳಗಾಗುತ್ತಾರೆ. ಅಲ್ಲದೆ ನಿಕಟ ಸಂಗಾತಿಗಳ ತೀವ್ರತರವಾದ ಹಿಂಸೆಯಿಂದ ಶೋಷಣೆಯಾಗುವ ಸನ್ನಿವೇಶಗಳು ಹೆಚ್ಚು. ಸಮರ್ಪಕ ವಸತಿ ಮತ್ತು ಸೇವೆಗಳನ್ನು ಪಡೆಯುವ ಅವಕಾಶಗಳಿಂದಲೂ ಇವರು ವಂಚಿತರಾಗುತ್ತಾರೆ. ಈ ಎಲ್ಲವುಗಳಿಗೆ ಮಾಧ್ಯಮಗಳ ಕೊಡುಗೆಯೂ ಸಾಕಷ್ಟು ಪ್ರಮಾಣದಲ್ಲೇ ಇದೆ. ಮಾಧ್ಯಮಗಳು ಅಸಾಮರ್ಥ್ಯವುಳ್ಳವರನ್ನು ಸೌಂದರ್ಯದ ಪರಿಕಲ್ಪನೆಯಿಂದ ಹೊರತಾಗಿ ಅನಾಕರ್ಷಕವಾಗಿ, ಲೈಂಗಿಕ ಆಕರ್ಷಣೆ ಇಲ್ಲದವರು ಎಂಬ ಭಾವನೆ ಬೆಳೆಯುವಂತೆ ಬಿತ್ತರಿಸುತ್ತವೆ. ಅಸಾಮರ್ಥ್ಯವಿರುವ ಮಹಿಳೆಯರ ಒಟ್ಟು ಸಮೂಹವೇ ಸಾಮಾಜಿಕ ಹೊರಗಿಡುವಿಕೆಯ ಲಕ್ಷಣಗಳನ್ನು ಅನುಭವಿಸುತ್ತದೆ. ಇದು ಸಾಮಾಜಿಕ ಆರ್ಥಿಕ ಅನನುಕೂಲತೆ, ಸಾಮಾಜಿಕ ಪ್ರತ್ಯೇಕತೆ, ತಾರತಮ್ಯದ ಬಹುರೂಪಗಳು, ಸೇವೆಗಳಿಗೆ ಕ್ಷೀಣ ಅವಕಾಶಗಳು, ಅಸಮರ್ಪಕ ವಸತಿ, ಆರೋಗ್ಯ ಸೇವೆ, ಸಮಾಜದಲ್ಲಿ ಸಕ್ರಿಯವಾಗಿ ಭಾಗವಹಿಸುವ ಅವಕಾಶವಿಲ್ಲದಿರುವಿಕೆ ಇತ್ಯಾದಿ ಅಂಶಗಳನ್ನು ಒಳಗೊಳ್ಳುತ್ತದೆ. ಕೊರತೆ ಮತ್ತು ಅಸಾಮರ್ಥ್ಯತೆಗಳ ಪರಿಣಾಮಗಳು ಮಹಿಳೆಯರಿಗೆ ಸಂಬಂಧಿಸಿದಂತೆ ಹೆಚ್ಚು ಗಂಭೀರವಾದವು ಎಂಬುದನ್ನು ಅಸಾಮರ್ಥ್ಯ ವ್ಯಕ್ತಿಗಳನ್ನು ಕುರಿತ ಜಾಗತಿಕ ಕಾರ್ಯಯೋಜನೆಯು ಗುರುತಿಸಿದೆ. ಸಾಮಾನ್ಯವಾಗಿ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಅನನುಕೂಲತೆಗಳಿಗೆ ಒಳಗಾಗಿ ಸಮುದಾಯದ ಜೀವನದಲ್ಲಿ ಅವರು ಭಾಗವಹಿಸಲು ಹೆಚ್ಚು ಕಷ್ಟಕರವಾಗುವಂತೆ ಮಾಡುತ್ತದೆ.

**ಆರೋಗ್ಯ:** ಪ್ರಸವಕಾಲದಲ್ಲಿ ಪ್ರತಿ ನಿಮಿಷಕ್ಕೆ 30ಕ್ಕಿಂತ ಹೆಚ್ಚು ಮಹಿಳೆಯರು ಗಂಭೀರ ಅಸಾಮರ್ಥ್ಯಕ್ಕೆ ಒಳಗಾಗುತ್ತಾರೆ. ಇವರಲ್ಲಿ 15–50 ಮಿಲಿಯನ್ ಮಹಿಳೆಯರು ಗಮನಕ್ಕೆ ಬರುವುದೇ ಇಲ್ಲ. ಅಸಾಮರ್ಥ್ಯವಿರುವ, ಎಲ್ಲ ವಯೋಮಾನದ ಮಹಿಳೆಯರಿಗೆ ಆರೋಗ್ಯ ಸೇವೆಯ ಭೌತಿಕ ಅವಕಾಶಗಳಿರುವುದಿಲ್ಲ. ಮಾನಸಿಕ ಅಸಾಮರ್ಥ್ಯವಿರುವ ಮಹಿಳೆಯರು ನಿರ್ದಿಷ್ಟವಾಗಿ ಹೆಚ್ಚು ಅಪಾಯಕ್ಕೆ ಒಳಗಾಗುವವರು. ಲಿಂಗ ತಾರತಮ್ಯ ಮತ್ತು ಹಿಂಸೆಗಳು ಮಹಿಳೆಯರ ಮಾನಸಿಕ ಸ್ವಾಸ್ಥ್ಯದ ಮೇಲೆ ಉಂಟುಮಾಡುವ ಪರಿಣಾಮಗಳ ಅರಿವು ಮಹಿಳೆಯರಿಗೂ ಸಮಾಜದಲ್ಲಿ ಇತರರಿಗೂ ಅತ್ಯಂತ ಕಡಿಮೆ. ಅಸಾಮರ್ಥ್ಯವಿರುವ ಪುರುಷರಿಗಿಂತ ಮಹಿಳೆಯರು ಮನೆಯೊಳಗೆ ಹಾಗೂ ಹೊರಗೆ, ಹಿಂಸೆ, ನಿಂದೆ, ಪೆಟ್ಟು, ತಿರಸ್ಕಾರದ ನಡೆವಳಿಕೆ, ಶೋಷಣೆ ಇತ್ಯಾದಿಗಳಿಗೆ ಹೆಚ್ಚು ಒಳಗಾಗುತ್ತಾರೆ. ಅಸಾಮರ್ಥ್ಯವಿರುವ ಪುರುಷರಿಗಿಂತ ಇವರಿಗೆ ದೊರಕುವ ಸೇವೆಗಳೂ ಕಡಿಮೆ. ಅವರಿಗಿಂತ ಇವರು ಬಡವರು. ಪೋಷಕರಾಗಿರುವ ಅಥವಾ ಪೋಷಕರಾಗಬಯಸುವ ಅಸಾಮರ್ಥ್ಯವಿರುವವರಿಗೂ ಮತ್ತು ಅವರ ಮಕ್ಕಳಿಗೂ ಅಗತ್ಯವಾದ ಆರೋಗ್ಯ ಸೇವೆಗಳಿಗೆ ಅವಕಾಶ ಕಡಿಮೆ. ಇಂತಹ ಮಹಿಳೆಯರು ಅಮಾನವೀಯವಾದ ಮತ್ತು ಅಗ್ಗವಾಗಿಸುವ ನಡೆವಳಿಕೆಗೆ ಒಳಗಾಗುವ ಸನ್ನಿವೇಶಗಳೂ ಹೆಚ್ಚು. ಉದಾಹರಣೆಗೆ, ಹಿಂಸೆ, ಬಲಾತ್ಕಾರದ ಗರ್ಭಪಾತ, ಸಂತಾನ ಶಕ್ತಿಹರಣ ಚಿಕಿತ್ಸೆ, ರಾಸಾಯನಿಕ ಅಡ್ಡಿಗಳು ಈ ಎಲ್ಲದರಲ್ಲಿ ಅಸಾಮರ್ಥ್ಯವಿರುವ ಮಹಿಳೆಯರು ಹೆಚ್ಚು ಒಳಗಾಗುತ್ತಾರೆ.

**ಉದ್ಯೋಗ :** ಅಸಾಮರ್ಥ್ಯವಿರುವ ಮಹಿಳೆಯರು ಮತ್ತು ಪುರುಷರ ಉದ್ಯೋಗಾವಕಾಶಗಳಲ್ಲಿ ತಾರತಮ್ಯತೆ ಇದೆ. ದಿನಕೂಲಿ ನೌಕರರಲ್ಲಿ ಅಸಾಮರ್ಥ್ಯವಿರುವ ಮಹಿಳೆಯರಿಗಿಂತ ಪುರುಷರ ಸಂಖ್ಯೆ ಹೆಚ್ಚು.

ಅಸಾಮರ್ಥ್ಯವಿರುವ ಮಹಿಳೆಯರ ಶಕ್ತಿಯನ್ನು ಪುರುಷರಿಗಿಂತ ಕಡಿಮೆಮಟ್ಟದಲ್ಲಿ ದುಡಿಸಿಕೊಳ್ಳಲಾಗಿದೆ ಎಂಬುದನ್ನು ಕಾರ್ಮಿಕ ಮಾರುಕಟ್ಟೆಯ ತಾರತಮ್ಯತೆಗಳು ಎತ್ತಿ ತೋರುತ್ತವೆ. ಉದ್ಯೋಗದಲ್ಲಿ ಈ ಮಹಿಳೆಯರು ಪುರುಷರಿಗಿಂತ ಕಡಿಮೆ ವರಮಾನವನ್ನು ಪಡೆಯುತ್ತಾರೆ. ಅನೌಪಚಾರಿಕ, ಜೀವನೋಪಾಯ ಹಾಗೂ ಘಾಸಿಗೊಳಿಸಬಹುದಾದ ಉದ್ಯೋಗಗಳಲ್ಲಿ ಅಸಾಮರ್ಥ್ಯವಿರುವ ಮಹಿಳೆಯರನ್ನು ಹೆಚ್ಚು ಒಳಪಡಿಸಿಕೊಳ್ಳಲಾಗಿದೆ.

ಮುಕ್ತ ಕಾರ್ಮಿಕ ಮಾರುಕಟ್ಟೆಯನ್ನು ಪ್ರವೇಶಿಸಲು ಅಸಾಮರ್ಥ್ಯವಿರುವ ವ್ಯಕ್ತಿಗಳಿಗೆ ಅಡಚಣೆಗಳಿವೆ. ಆದರೆ ಲಿಂಗತ್ವ ದೃಷ್ಟಿಯಿಂದ ಗಮನಿಸಿದಾಗ ಅಸಾಮರ್ಥ್ಯವಿರುವ ಉದ್ಯೋಗಸ್ಥ ಪುರುಷರು ಮಹಿಳೆಯರಿಗಿಂತ ಎರಡು ಪಟ್ಟು ಹೆಚ್ಚಾಗಿರುವುದು ಕಂಡುಬರುತ್ತದೆ. ಅಸಾಮರ್ಥ್ಯವಿರುವ ಮಹಿಳೆಯರು ಕೆಲಸಮಾಡುವಾಗ, ಅಸಮವಾದ ಕೂಲಿ ಮತ್ತು ಉನ್ನತೀಕರಣ, ಸಾಲಪಡೆಯುವಿಕೆ, ತರಬೇತಿ, ಪುನರ್ ತರಬೇತಿ, ಇತರ ಉತ್ಪಾದಕತ್ವ ಸಂಪನ್ಮೂಲಗಳು ಇವುಗಳಿಗೆ ಅಸಮ ಅವಕಾಶಗಳು, ಸಮನಾದ ಕೆಲಸಕ್ಕೆ ಅಸಮ ವೇತನ, ಅಸಮವಾದ ಅವಕಾಶಗಳು, ಉದ್ಯೋಗ ಪ್ರತ್ಯೇಕತೆ, ಇವುಗಳನ್ನು ಅನುಭವಿಸುವರಲ್ಲದೆ ಇವರು ಅತ್ಯಂತ ಅಪರೂಪವಾಗಿ ಆರ್ಥಿಕ ನಿರ್ಧಾರ ಕೈಗೊಳ್ಳುವಿಕೆಯಲ್ಲಿ ಪಾಲುಗೊಳ್ಳುತ್ತಾರೆ. ಅಸಾಮರ್ಥ್ಯವಿರುವ ಮಹಿಳೆಯರು ಇತರ ಮಹಿಳೆಯರಂತೆ ಖಾಸಗಿ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ವೇತನವಿಲ್ಲದ ಕೆಲಸಗಳ–ಅಡುಗೆ ಮಾಡುವುದು, ಪಾತ್ರೆ ತೊಳೆಯುವುದು, ಗುಡಿಸಿ ಒರೆಸುವುದು, ಮಕ್ಕಳನ್ನು ಬೆಳೆಸುವುದು, ಅತಿಥಿ ಸತ್ಕಾರ– ಜವಾಬ್ದಾರಿಯನ್ನು ವಹಿಸಿಕೊಂಡಿರುತ್ತಾರೆ. ಮತದಾನಕ್ಕೆ ನೋಂದಣಿಸುವಲ್ಲಿ, ಮತದಾನದಲ್ಲಿ, ಪಾರ್ಟಿ ರಾಜಕೀಯದಲ್ಲಿ ಹಾಗೆಯೇ ಆಡಳಿತ ಮತ್ತು ನಿರ್ಧಾರ ಕೈಗೊಳ್ಳುವಿಕೆಯಲ್ಲಿ ಅಸಾಮರ್ಥ್ಯವಿರುವ ಪುರುಷರಿಗಿಂತ ಮಹಿಳೆಯರ ಪಾತ್ರ ಕಡಿಮೆಮಟ್ಟದಲ್ಲಿ ಕಂಡುಬರುತ್ತದೆ.

### (II) **ಅಸಾಮರ್ಥ್ಯಯುಳ್ಳ ಬಾಲಕಿಯರು/ಮಹಿಳೆಯರು– ಸವಾಲುಗಳು**

ಅಸಾಮರ್ಥ್ಯವುಳ್ಳ ಮಹಿಳೆಯರ ಸಮಸ್ಯೆಗಳು, ಎದುರಿಸುವ ಅಪಾಯದ ಸನ್ನಿವೇಶಗಳು ಇತ್ಯಾದಿಗಳೊಂದಿಗೆ ಅವರ ಪರಿಸ್ಥಿತಿಯನ್ನು ಮೊದಲಿಗೆ ಚರ್ಚಿಸಿದ್ದೇವೆ. ಈ ವಿಚಾರಗಳನ್ನು ಎದುರಿಸಿ ಪರಿಹರಿಸಬೇಕಾದರೆ ಮೊದಲಿಗೆ ಅಸಾಮರ್ಥ್ಯವಿರುವ ಮತ್ತು ಇಲ್ಲದಿರುವ ಮಹಿಳೆಯರು ಹಾಗೂ ಪುರುಷರ ಸಾಮಾಜಿಕ ಪಾತ್ರಗಳನ್ನು ಅರ್ಥಮಾಡಿಕೊಳ್ಳಬೇಕು. ಅಸಾಮರ್ಥ್ಯವಿರುವ ಮಹಿಳೆಯರು ಎದುರಿಸುತ್ತಿರುವ ಪ್ರತ್ಯೇಕತೆ ಅಥವಾ ಅವರನ್ನು ಸಮಾಜದ ಮುಖ್ಯವಾಹಿನಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳದಿರುವಿಕೆ ಅಸಾಮರ್ಥ್ಯವಿರುವ ಮಹಿಳೆಯರ ಸಮಸ್ಯೆ ಮಾತ್ರವಲ್ಲ, ಇದೊಂದು ಸಮಾಜದ ನೆಲೆಯಲ್ಲಿನ ಸಾಮಾಜಿಕ ವಿಚಾರ. ಇದು ಮಹಿಳೆಯರ, ಪುರುಷರ, ಬಾಲಕರ ಮತ್ತು ಬಾಲಕಿಯರೆಲ್ಲರ ಪಾತ್ರವನ್ನು ಒಳಗೊಳ್ಳುತ್ತದೆ. ಇದನ್ನು 'ಬೆಳವಣಿಗೆಯಲ್ಲಿ ಮಹಿಳೆ' ಎಂಬ ಉಪಕ್ರಮವಾಗಿ ವಿಶ್ಲೇಷಿಸುವುದಕ್ಕಿಂತ 'ಲಿಂಗತ್ವ ಮತ್ತು ಬೆಳವಣಿಗೆ' ಎಂಬ ಉಪಕ್ರಮವಾಗಿ ವಿಶ್ಲೇಷಿಸುವುದು ಒಳಿತು. ಅಸಾಮರ್ಥ್ಯವಿರುವವರನ್ನು ಮೂಲವಾಹಿನಿಗೆ ತರುವ ನಿಯಮಗಳು, ಕಾರ್ಯಕ್ರಮಗಳು ಹಾಗೂ ಪ್ರಯತ್ನಗಳು ಅಸಾಮರ್ಥ್ಯವಿರುವ ಬಾಲಕಿಯರು ಮತ್ತು ಮಹಿಳೆಯರನ್ನೂ ಒಳಗೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ಪುರುಷ ಮತ್ತು ಮಹಿಳೆಯರಿಗೆ ವಿಶೇಷವಾದ ಮತ್ತು ಪ್ರತ್ಯೇಕವಾದ ಭಾಗವನ್ನೊಳಗೊಳ್ಳಬೇಕು. ಅಸಾಮರ್ಥ್ಯವಿರುವ ವ್ಯಕ್ತಿಗಳ ಹಕ್ಕುಗಳನ್ನು ಕುರಿತ ಸಂಯುಕ್ತ ರಾಷ್ಟ್ರಗಳ ಸಮಾಲೋಚನೆ(ಗುಅಖಊ)ಯ 6ನೇ ವಿಧಿಯು ಇದನ್ನು ಬೆಂಬಲಿಸುತ್ತದೆ.

ಇದಕ್ಕೆ ಸಂಬಂಧಿಸಿದ ವಿವರಣೆಯು ಲಿಂಗತ್ವ ಮತ್ತು ಅಸಾಮರ್ಥ್ಯತೆಯ ಸಂಪನ್ಮೂಲಗಳು, ಅಸಾಮರ್ಥ್ಯವಿರುವವರ ಸನ್ನಿವೇಶವನ್ನು ವಿವರಿಸುವ ವಿವಿಧ ದೇಶಗಳ ಅಧ್ಯಯನಗಳು ಮತ್ತು ಲಿಂಗತ್ವ ಸಂಬಂಧಿ ಪ್ರಯತ್ನಗಳನ್ನು ಒಳಗೊಂಡಿದೆ. ಲಿಂಗತ್ವ ಮತ್ತು ಅಸಾಮರ್ಥ್ಯತೆಯ ಕ್ಷೇತ್ರಗಳಲ್ಲಿ ಕೆಲಸಮಾಡುತ್ತಿರುವವರಿಗೆ ಪ್ರಾಯೋಗಿಕ ಸಂಪನ್ಮೂಲಗಳು, ಪ್ರಮುಖ ನಿಯಮಗಳು, ಹಕ್ಕು ದಾಖಲೆಗಳು, ಲೈಂಗಿಕ ಆರೋಗ್ಯ ಮತ್ತು ಹಿಂಸೆ ಇತ್ಯಾದಿ ವಿಚಾರಗಳಿಗೆ ಸಂಬಂಧಿಸಿದ ಮಾಹಿತಿಗಳನ್ನೂ ಇದರಲ್ಲಿ ಗುರುತಿಸಲಾಗಿದೆ.

**ಅಸಾಮರ್ಥ್ಯವಿರುವ ಬಾಲಕಿಯರು ಮತ್ತು ಮಹಿಳೆಯರು ಎದುರಿಸುವ ಸವಾಲುಗಳು ಕೆಳಕಂಡಂತಿವೆ:**

- ಮಹಿಳೆಯರು, ಬಾಲಕಿಯರು ಕೆಳಮಟ್ಟದ ಸಾಮಾಜಿಕ ಸ್ಥಾನಮಾನ, ಲಿಂಗತ್ವ ಆಧಾರಿತ ಹಿಂಸೆ ಮತ್ತು ಅಪಾಯಕಾರಿಯಾದ ಲಿಂಗ ತಾರತಮ್ಯ ಪದ್ಧತಿಗಳು ಇವುಗಳಿಗೆ ಒಳಗಾಗಿರುತ್ತಾರೆ. ಇದರ ವಿರುದ್ಧ ಹೋರಾಡಬೇಕಾಗಿದೆ.
- ಮಹಿಳೆಯಾಗಿ ಬದುಕುವುದೇ ಒಂದು ಸವಾಲು, ಅಸಾಮರ್ಥ್ಯದೊಂದಿಗಿರುವ ಮಹಿಳೆಯರದು ಮತ್ತು ಬಾಲಕಿಯರ ಜೀವನ ದ್ವಿಗುಣೀಕೃತವಾದ ಸವಾಲು.
- ಲೈಂಗಿಕತೆ ಮತ್ತು ಲೈಂಗಿಕ ಕಿರುಕುಳ ಇವುಗಳಿಂದ ಹೆಚ್ಚಿನ ಭದ್ರತೆ ಕೊಡಬೇಕಾದ ಸವಾಲು ಅತಿ ದೊಡ್ಡದು. ಇದಕ್ಕೆ ಸಮಾಜ ಮತ್ತು ಸರ್ಕಾರ ಎರಡೂ ಕೈಜೋಡಿಸಬೇಕು. ಇತರ ಮಹಿಳೆಯರಿಗಿಂತ ಅಸಾಮರ್ಥ್ಯವಿರುವ ಮಹಿಳೆಯರು ಲೈಂಗಿಕತೆ ಮತ್ತು ಲೈಂಗಿಕ ಕಿರುಕುಳದಿಂದ ಹೆಚ್ಚು ಪೀಡಿತರು. ಹಾಗಾಗಿ ಅಸಾಮರ್ಥ್ಯವಿರುವ ಕೆಲವು ಮಹಿಳೆಯರು, ಅಸಾಮರ್ಥ್ಯತೆಯ ಹಕ್ಕುಗಳ ಚಳುವಳಿಯನ್ನು ಲೈಂಗಿಕತೆಯನ್ನು ಒಂದು ರಾಜಕೀಯ ವಿಚಾರವಾಗಿ ಇತರ ವಸತಿ ಹಾಗೂ ಸಾರಿಗೆಗಳಂತೆ ಪರಿಗಣಿಸಿಲ್ಲ ಎಂಬ ಟೀಕೆಯನ್ನು ಮಾಡಿದ್ದಾರೆ. ಮಹಿಳೆಯರ ಕೆಲಸ, ಮಾನಸಿಕ ಸ್ವಾಸ್ಥ್ಯ ಈ ಕ್ಷೇತ್ರಗಳಿಗೆ ಹೆಚ್ಚಿನ ಗಮನ ನೀಡಬೇಕು. ಅಸಾಮರ್ಥ್ಯವಿರುವ ಬಾಲಕಿಯರಿಗೆ, ಯುವತಿಯರಿಗೆ ಇವು ಸವಾಲಿನ ಕ್ಷೇತ್ರಗಳು. ದುಡಿಮೆಯ ಕ್ಷೇತ್ರದಲ್ಲಿ ಮಹಿಳೆಯರ ಹೆಚ್ಚಿನ ಭಾಗವಹಿಕೆ, ಅದರಲ್ಲೂ ಉದ್ಯೋಗಸ್ಥ ತಾಯಿಯರ ಸಂಖ್ಯೆಯಲ್ಲಿ ಗಮನಾರ್ಹ ಏರಿಕೆ, ಇವು ಮಹಿಳೆಯರ ಮಾನಸಿಕ ಆರೋಗ್ಯದ ಮೇಲೆ ಋಣಾತ್ಮಕ ಪ್ರಭಾವವನ್ನು ಬೀರಬಹುದು ಎಂಬ ಊಹೆಗಳಿವೆ. ಇದನ್ನು ಸವಾಲಾಗಿ ಎದುರಿಸಬೇಕು. ಮಹಿಳೆಯರ ಮಾನಸಿಕ ಸ್ವಾಸ್ಥ್ಯವನ್ನು ಕುರಿತ ಸಮಸ್ಯೆಗಳನ್ನು ಹೆಚ್ಚು ಹೆಚ್ಚು ನಿರ್ಲಕ್ಷಿಸಲಾಗುತ್ತಿದೆ. ಇದಕ್ಕೆ ಕಾರಣ ಉದ್ಯೋಗಕ್ಕೆ ಮತ್ತು ಕುಟುಂಬಕ್ಕೆ ಸಂಬಂಧಿಸಿದ ಅವರ ಕರ್ತವ್ಯಗಳ ಒತ್ತಡ. ಇದನ್ನೂ ಸವಾಲುಗಳ ಪಟ್ಟಿಯಲ್ಲಿ ಪ್ರಮುಖವಾಗಿ ಸೇರಿಸಬಹುದು.
- ಸಹಸ್ರಮಾನದ ಅಭಿವೃದ್ಧಿ ಗುರಿಗಳನ್ನೂ ಒಳಗೊಂಡಂತೆ ಅಂತರರಾಷ್ಟ್ರೀಯವಾಗಿ ಒಪ್ಪಂದ ಮಾಡಿಕೊಂಡಿರುವ ಗುರಿಗಳನ್ನು ಸಾಧಿಸಲು ಲಿಂಗ ಸಮಾನತೆ ಮತ್ತು ಮಹಿಳಾ ಸಬಲೀಕರಣ ಇವುಗಳನ್ನು ಬೆಳೆಸುವುದು ಪ್ರಮುಖವಾಗುತ್ತದೆ. ಅಸಾಮರ್ಥ್ಯವಿರುವ ಬಾಲಕಿಯರು ಮತ್ತು ಮಹಿಳೆಯರು ಅನುಭವಿಸುವ ದ್ವಿಗುಣೀಕೃತ ತಾರತಮ್ಯವು ಅವರನ್ನು ಲಿಂಗಾಧಾರಿತ ಹಿಂಸೆ, ಲೈಂಗಿಕ ಕಿರುಕುಳ, ತಿರಸ್ಕರಿಸುವಿಕೆ, ಕೆಟ್ಟರೀತಿಯಲ್ಲಿ ನೋಡಿಕೊಳ್ಳುವಿಕೆ ಮತ್ತು ಶೋಷಣೆ ಮುಂತಾದ ಅಪಾಯಕಾರಿ ಸನ್ನಿವೇಶಗಳಿಗೆ ಒಡ್ಡುತ್ತವೆ. ಗ್ಓಆಕ ಯ ಅಧ್ಯಯನದ ಪ್ರಕಾರ

ಅಸಾಮರ್ಥ್ಯವಿರುವ ಮಹಿಳೆಯರ ಜಾಗತಿಕ ಸಾಕ್ಷರತೆಯ ಪ್ರಮಾಣ ಶೇ 1ಕ್ಕಿಂತ ಕಡಿಮೆ ಮಟ್ಟದಲ್ಲಿದೆ.ಪ್ರಸವಕಾಲದಲ್ಲಿ ಪ್ರತಿ ನಿಮಿಷಕ್ಕೆ 30 ಕ್ಕಿಂತ ಹೆಚ್ಚು ಮಹಿಳೆಯರು ಗಂಭೀರ ಅಸಾಮರ್ಥ್ಯಕ್ಕೆ ಒಳಗಾಗುತ್ತಾರೆ. ಇವರಲ್ಲಿ 15–50 ಮಿಲಿಯನ್ ಮಹಿಳೆಯರು ಗಮನಕ್ಕೆ ಬರುವುದೇ ಇಲ್ಲ ಎಂಬ ವರ್ಲ್ಡ್ ಬ್ಯಾಂಕ್ ವರದಿಯನ್ನು ನಾವು ಈಗಾಗಲೇ ಚರ್ಚಿಸಿದ್ದೇವೆ. ಬಾಲಕಿಯರು ವಿಶೇಷ ಶಿಕ್ಷಣದಿಂದ ವಂಚಿತರಾದ ಪರಿಣಾಮವಾಗಿ ಸಮಸ್ಯೆಗಳ ಪ್ರಪಂಚವೇ ಮೇಲೆ ಬಿದ್ದಂತಾಗುತ್ತದೆ. ಇದು ಶೈಕ್ಷಣಿಕ ನಪಾಸಾಗುವ ಮಕ್ಕಳ ಪ್ರಮಾಣದಲ್ಲಿಹೆಚ್ಚಳ, ಸ್ಥಗಿತತೆ, ಹದಿಹರೆಯದಲ್ಲಿ ಗರ್ಭಧರಿಸುವುದು, ನಿರುದ್ಯೋಗ ಇತ್ಯಾದಿ ಅನೇಕ ಸಮಸ್ಯೆಗಳಿಗೆ ಎಡೆಮಾಡಿಕೊಡುತ್ತದೆ.

- ವಿಶೇಷ ಶಿಕ್ಷಣದ ಸಂದರ್ಭದಲ್ಲಿ ಶೈಕ್ಷಣಿಕ ಸಾಧನೆಯಲ್ಲಿ ಬಾಲಕಿಯರು ಬಾಲಕರಿಗಿಂತ ಹೆಚ್ಚಿನ ಸಾಧನೆಯ ಮಟ್ಟದಲ್ಲಿರುತ್ತಾರೆ. ಆದರೆ ಶಿಕ್ಷಣ ಮುಗಿದ ಮೇಲೆ ಉದ್ಯೋಗದಲ್ಲಿರುವವರಲ್ಲಿ ಬಾಲಕರದ್ದೇ ಮೇಲುಗೈ. ಸೆಕೆಂಡರಿ ನಂತರದ ಶಿಕ್ಷಣ, ತರಬೇತಿ ಇದಕ್ಕೆ ದಾಖಲಾಗುವ ಬಾಲಕಿಯರ ಸಂಖ್ಯೆ ಕಡಿಮೆ. ಹೆಚ್ಚಾಗಿ ಅವರು ಕಡಿಮೆ ಸಂಬಳದ ಕೆಲಸಕ್ಕೆ ಸೇರಿಕೊಳ್ಳುತ್ತಾರೆ.
- ಹೀಗೆ ಶಾಲಾ ಅವಧಿಯಲ್ಲಿ ಉತ್ತಮ ಸಾಧನೆ ತೋರಿಸುವ ಬಾಲಕಿಯರು ಶಿಕ್ಷಣವನ್ನೇಕೆ ಮುಂದುವರಿಸುವುದಿಲ್ಲ, ಉದ್ಯೋಗದಲ್ಲಿದ್ದರೂ ಬಡತನದ ಪ್ರಮಾಣ ಬಾಲಕಿಯರಲ್ಲಿ (ಶೇ33.8) ಬಾಲಕರಿಗಿಂತ (ಶೇ24.2) ಹೆಚ್ಚಾಗಿರುವುದು ಏಕೆ ಎಂಬ ಅಂಶ ಇಂದಿಗೂ ಅಸ್ಪಷ್ಟವಾಗಿಯೇ ಇದೆ. ಅಸಾಮರ್ಥ್ಯವಿರುವ ಬಾಲಕಿಯರನ್ನು ಕುರಿತ ಸಂಶೋಧನೆಗಳು ಬಹಳ ಕಡಿಮೆ. ಮಹಿಳೆಯರ ಶೈಕ್ಷಣಿಕ ಸಮತೆ ಕಾಯಿದೆಯ ಅಡಿಯಲ್ಲಿ ಅಸಾಮರ್ಥ್ಯವಿರುವ ಬಾಲಕಿಯರ ಕುರಿತ ಸಂಶೋಧನೆಗೆ ಸರ್ಕಾರದ ಧನಸಹಾಯಕ್ಕೆ ಅವಕಾಶವಿದೆ. 'ಯಾವ ಮಗುವೂ ಹಿಂದೆ ಉಳಿದಿಲ್ಲ' (No Child Left Behind) ಎಂಬ ಹೆಸರಿನಲ್ಲಿ ಪ್ರಚಲಿತವಾಗಿರುವ ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ ಕಾಯಿದೆ ಇದು. ವಿಶೇಷ ಶಿಕ್ಷಣದ ಲಿಂಗತ್ವದ ಅಂಶವನ್ನು ವಿಶ್ಲೇಷಿಸುವುದು ಮಾತ್ರವಲ್ಲ, ಅವರನ್ನು ಗುರುತಿಸುವ, ಸ್ಥಳ ನಿರ್ದೇಶನ ಮಾಡುವ ಕಡೆಗೆ ಗಮನವಿರುವ ಉತ್ತಮ ಹಾಗೂ ವಿಶ್ವಸನೀಯ ಸಂಶೋಧನೆಗಳ ಅವಶ್ಯಕತೆ ಗಮನಾರ್ಹ ಮಟ್ಟದಲ್ಲಿದೆ. ಈ ಎಲ್ಲ ಸವಾಲುಗಳನ್ನು ವಿಶೇಷ ಗಮನದಿಂದ ಸರ್ಕಾರ, ಸಮಾಜ, ಸಮುದಾಯ, ಶಾಲೆ, ಹಾಗೂ ವೈಯಕ್ತಿಕ ನೆಲೆಗಳಲ್ಲಿ ವಿಶೇಷ ಗಮನ ಹಾಗೂ ಭಾಗವಹಿಕೆಯಿಂದ ಎದುರಿಸಿ ಸಮಸ್ಯೆಗಳನ್ನು ಪರಿಹರಿಸಬೇಕಾಗಿದೆ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 1

ಕೆಳಗಿನ ಸಮಸ್ಯೆಗಳು ಯಾವ ಕ್ಷೇತ್ರಗಳಿಗೆ ಸಂಬಂಧಿಸಿದುದು(ಶಾಲೆ, ಕುಟುಂಬ, ಸಮಾಜ, ಉದ್ಯೋಗ, ಆರೋಗ್ಯ) ಎಂದು ಗುರುತಿಸಿ ಸಮಾಜ, ಶಾಲೆ ಮತ್ತು ವೈಯಕ್ತಿಕ ನೆಲೆಯಲ್ಲಿ ಅದರ ಪರಿಹಾರಕ್ಕೆ ನಿಮ್ಮ ಸಲಹೆಗಳನ್ನು ನೀಡಿ ನಿಮ್ಮ ಶಾಲೆಯಲ್ಲಿನ ಸಹೋದ್ಯೋಗಿಗಳೊಂದಿಗೆ ಚರ್ಚಿಸಿ ಯಾವುದಾದರೂ ಒಂದು ಸಮಸ್ಯೆಯನ್ನು ಪರಿಹರಿಸಲು ನಿಮ್ಮ ಮಿತಿಯಲ್ಲಿ ಕಾರ್ಯಯೋಜನೆಯನ್ನು ರೂಪಿಸಿ ಅನ್ವಯಿಸಿ.

| ಸಮಸ್ಯೆಗಳು | ಕ್ಷೇತ್ರಗಳು | ಪರಿಹಾರಗಳು | ಕಾರ್ಯ ಯೋಜನೆ |
|---|---|---|---|
| 1. ಅಸಾಮರ್ಥ್ಯವನ್ನು ಪೂರ್ವಜನ್ಮದ ಕರ್ಮ ಎಂದೋ ಶಾಪ ಎಂದೋ ನಂಬಲಾಗುತ್ತದೆ. | ಎ. ಶಾಲೆ | | |
| 2. ಕೆಲವು ಬಾಲಕಿಯರು ಶಾಲೆಗೆ ದಾಖಲಾದರೂ ಅವರ ಉಳಿಕೆಯ ಪ್ರಮಾಣ ಕಡಿಮೆ. | ಬಿ. ಕುಟುಂಬ | | |
| 3. ಇದು ಮಹಿಳೆಯರ ಕೆಲಸ; ಇದು ಪುರುಷರ ಕೆಲಸ ಎಂದು ಗುರುತಿಸುವಷ್ಟು ಸ್ಪಷ್ಟವಾಗಿ ಅವು ಆಯಾ ಸಮಾಜಗಳಲ್ಲಿ ಅಂತರ್ಗತವಾಗಿ ಬಿಟ್ಟಿರುತ್ತವೆ. | ಸಿ. ಸಮಾಜ | | |
| 4. ಲಿಂಗ ತಾರತಮ್ಯ ಮತ್ತು ಹಿಂಸೆಗಳು ಮಹಿಳೆಯರ ಮಾನಸಿಕ ಸ್ವಾಸ್ಥ್ಯದ ಮೇಲೆ ಉಂಟುಮಾಡುವ ಪರಿಣಾಮಗಳ ಅರಿವು ಮಹಿಳೆಯರಿಗೂ ಸಮಾಜದಲ್ಲಿ ಇತರರಿಗೂ ಅತ್ಯಂತ ಕಡಿಮೆ. | ಡಿ. ಉದ್ಯೋಗ | | |
| 5. ಮಹಿಳೆಯರು ಪುರುಷರಿಗಿಂತ ಕಡಿಮೆ ವರಮಾನವನ್ನು ಪಡೆಯುತ್ತಾರೆ– | ಇ. ಆರೋಗ್ಯ | | |

## 2.2.3.2. ಅಸಾಮರ್ಥ್ಯತೆಯುಳ್ಳ ಬಾಲಕಿಯರು ಮತ್ತು ಮಹಿಳೆಯರು – ಬೆಂಬಲಿಸುವ ಕಾರ್ಯಕ್ರಮಗಳು

ಅಸಾಮರ್ಥ್ಯವಿರುವ ಬಾಲಕಿಯರು ಮತ್ತು ಮಹಿಳೆಯರ ಕುರಿತು ಇಷ್ಟೆಲ್ಲಾ ವಿಚಾರಗಳನ್ನು, ಸವಾಲುಗಳನ್ನು ವಿಶ್ಲೇಷಿಸಿದ ಮೇಲೆ ಅವರಿಗೆ ನಿಜವಾಗಿಯೂ ಆದಷ್ಟೂ ಬೇಗನೆ ಅವರ ಹಕ್ಕುಗಳನ್ನು ಅನುಭವಿಸುವ ನೆಮ್ಮದಿಯ ಜೀವನ ದೊರೆಯುವಂತಾಗಬೇಕು ಎಂದು ನಿಮಗೆ ಅನ್ನಿಸುತ್ತದೆಯಲ್ಲವೇ? ಹೌದು. ಅವರಿಗೆ ಇತರರಂತೆಯೇ ನೆಮ್ಮದಿಯ ಜೀವನವನ್ನು ಸಮಾಜದ ಎಲ್ಲ ಘಟಕಗಳ ಸಹಕಾರದಿಂದ ಆಗುಮಾಡಿಕೊಡಬೇಕು.

### ಅಭ್ಯಾಸ–I

ಈ ಸಮಸ್ಯೆಗಳನ್ನು ಪರಿಹರಿಸಲು ನಿಮ್ಮ ನೆಲೆಯಲ್ಲಿ ನೀವೇನು ಮಾಡಬಹುದು ಎಂಬುದನ್ನು ಕುರಿತು ಎರಡು ಅಂಶಗಳನ್ನು ಬರೆಯಿರಿ.

1.

2.

ಅಸಾಮರ್ಥ್ಯವಿರುವ ಮಹಿಳೆಯರಲ್ಲಿ ನೀವು ಗುರುತಿಸಿರುವ ಅನೇಕ ಕಾರ್ಯಕ್ರಮಗಳ ಜೊತೆಗೆ, ಅವರಲ್ಲಿ ಆತ್ಮವಿಶ್ವಾಸವನ್ನು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವರ ಭಾಗವಹಿಕೆಯನ್ನು ಖಚಿತಪಡಿಸಿಕೊಳ್ಳುವ ಮೂಲಕ, ಅವರ ಬದುಕನ್ನು ಪ್ರಭಾವಿಸುವ ಅಂಶಗಳಲ್ಲಿ ಅವರದೇ ನಿರ್ಧಾರಗಳನ್ನು ತೆಗೆದುಕೊಳ್ಳಲು ಅನುವುಮಾಡಿಕೊಡುವುದು ಮಾತ್ರವಲ್ಲದೆ ಅದಕ್ಕೆ ಪ್ರೋತ್ಸಾಹ ಕೊಡುವುದರಿಂದ ಅವರನ್ನು ಸಬಲಗೊಳಿಸಬಹುದು. ಇದಕ್ಕೆ, ಸಂಬಂಧಪಟ್ಟ ಎಲ್ಲ ಸಮಿತಿಗಳು, ಆಯೋಗಗಳು ಮತ್ತು ಸರ್ಕಾರಗಳ ಕಾಳಜಿ ಇದೇ ಆಗಬೇಕು.

ವಿವಿಧ ಆಯೋಗಗಳು ಮತ್ತು ಕೆಲವು ನೀತಿ ನಿರ್ಧಾರಗಳು ಅಸಾಮರ್ಥ್ಯವಿರುವ ಬಾಲಕಿಯರ ಸಬಲೀಕರಣವನ್ನು ಕುರಿತು ಕೊಟ್ಟಿರುವ ಸಲಹೆಗಳು/ಶಿಫಾರಸುಗಳನ್ನು ಹಾಗೂ ಕಾರ್ಯಕ್ರಮಗಳನ್ನು ಗಮನಿಸೋಣ.

ಅಸಾಮರ್ಥ್ಯವಿರುವ ವ್ಯಕ್ತಿಗಳ ಹಕ್ಕುಗಳನ್ನು ಕುರಿತ ಸಂಯುಕ್ತ ರಾಷ್ಟ್ರಗಳ ಒಡಂಬಡಿಕೆ (UNCRPD)ಅಸಾಮರ್ಥ್ಯವಿರುವ ಮಹಿಳೆಯರು ಮತ್ತು ಬಾಲಕಿಯರು ಮನೆಯ ಒಳಗೆ ಮತ್ತು ಹೊರಗೆ ಹಿಂಸೆ, ಘಾಸಿ ಅಥವಾ ನಿಂದನೆ, ನಿರ್ಲಕ್ಷ್ಯ ಅಥವಾ ನಿರ್ಲಕ್ಷ್ಯದ ನಡೆವಳಿಕೆ, ದುರ್ನಡವಳಿಕೆ ಅಥವಾ ಶೋಷಣೆಯ ಅಪಾಯಗಳಿಗೆ ಒಳಗಾಗುವ ಸಾಧ್ಯತೆಗಳಿವೆ ಎಂದು ಗುರುತಿಸುತ್ತದೆ. ಈ ಕಾಳಜಿಯನ್ನು ಕುರಿತು ಕಾರ್ಯಪ್ರವೃತ್ತವಾಗಲು ಅಸಾಮರ್ಥ್ಯವಿರುವ ವ್ಯಕ್ತಿಗಳ ಹಕ್ಕುಗಳ ಸಮಾವೇಶವು ಅಸಾಮರ್ಥ್ಯವಿರುವ ಮಹಿಳೆಯರ ಲಿಂಗ ಸಮಾನತೆ ಮತ್ತು ಸಬಲೀಕರಣ ಎರಡನ್ನೂ ಸಾಧಿಸುವ ದ್ವಿಮುಖ ಉಪಕ್ರಮವನ್ನು ಕೈಗೊಂಡಿದೆ. ಅದು, ಪುರುಷರು ಮತ್ತು ಮಹಿಳೆಯರ ನಡುವೆ ಸಮಾನತೆಯನ್ನು ಅದರ ತತ್ವಗಳಲ್ಲೊಂದಾಗಿ ಪರಿಗಣಿಸಿ ಅಸಾಮರ್ಥ್ಯವಿರುವ ಮಹಿಳೆಯರಿಗಾಗಿಯೇ ಒಂದು ವಿಧಿಯನ್ನು ಮೀಸಲಿಟ್ಟಿದೆ. ಅಸಾಮರ್ಥ್ಯವಿರುವ ವ್ಯಕ್ತಿಗಳ ಅವಕಾಶಗಳಲ್ಲಿನ ಸಮಾನತೆಯ ಪ್ರಮಾಣೀಕೃತ ನಿಯಮಗಳು, ಅಸಾಮರ್ಥ್ಯವಿರುವ ಮಹಿಳೆಯರ ಮತ್ತು ಬಾಲಕಿಯರ ಹಕ್ಕುಗಳನ್ನು ಖಚಿತಪಡಿಸಿಕೊಳ್ಳಲು, ಒಡಂಬಡಿಕೆಯಲ್ಲಿರುವಂತೆ ಮಹಿಳೆಯರ ವಿರುದ್ಧ ಎಲ್ಲ ರೀತಿಯ ತಾರತಮ್ಯಗಳನ್ನು ಹೋಗಲಾಡಿಸುವುದರ ಕುರಿತ ಅವಕಾಶಗಳನ್ನು ನೆನಪಿಸಿಕೊಳ್ಳುತ್ತ, ಹಲವಾರು ನಿಯಮಗಳಲ್ಲಿ–ನಿಯಮ 4:ಬೆಂಬಲ ಸೇವೆಗಳು, ನಿಯಮ 6:ಶಿಕ್ಷಣ, ನಿಯಮ9:ಕುಟುಂಬ ಜೀವನ ಮತ್ತು ವೈಯಕ್ತಿಕ ಋಜುತ್ವ–ಅಸಾಮರ್ಥ್ಯವುಳ್ಳ ಮಹಿಳೆಯರು ಮತ್ತು ಬಾಲಕಿಯರನ್ನು ಕುರಿತ ಪ್ರಸ್ತಾಪವನ್ನು ಮಾಡಿದೆ.

ಈ ಒಡಂಬಡಿಕೆಯನ್ನು ಒಪ್ಪಿಕೊಳ್ಳುವ ಎಲ್ಲ ರಾಷ್ಟ್ರಗಳೂ ಮಹಿಳೆಯರ ವಿರುದ್ಧ ತಾರತಮ್ಯವನ್ನು ಕೊನೆಗಾಣಿಸಲು ಹಲವಾರು ಕ್ರಮಗಳನ್ನು ತೆಗೆದುಕೊಳ್ಳಲು ಬದ್ಧವಾಗಿವೆ. ಅವುಗಳು ಹೀಗಿವೆ:

- ರಾಷ್ಟ್ರಗಳು ಕಾನೂನು ವ್ಯವಸ್ಥೆಯಲ್ಲಿ ಪುರುಷರು ಮತ್ತು ಮಹಿಳೆಯರ ಸಮಾನತೆಯ ತತ್ವವನ್ನು ಸೇರಿಸಿಕೊಳ್ಳುವುದು, ತಾರತಮ್ಯವುಳ್ಳ ಎಲ್ಲ ನಿಯಮಗಳನ್ನು ತೆಗೆದುಹಾಕುವುದು, ಮಹಿಳೆಯರನ್ನು ಕುರಿತ ತಾರತಮ್ಯವನ್ನು ತಡೆಯುವ ಸಮರ್ಪಕ ನಿಯಮಗಳನ್ನು ಅಳವಡಿಸಿಕೊಳ್ಳುವುದು;
- ತಾರತಮ್ಯದ ವಿರುದ್ಧ ಮಹಿಳೆಯರಿಗೆ' ಪರಿಣಾಮಕಾರಿಯಾಗಿ ರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ನ್ಯಾಯಮಂಡಳಿಗಳನ್ನು ಹಾಗೂ ಇತರ ಸಾರ್ವಜನಿಕ ಸಂಸ್ಥೆಗಳನ್ನು ಸ್ಥಾಪಿಸುವುದು;
- ವ್ಯಕ್ತಿಗಳು, ಸಂಘಟನೆಗಳು ಹಾಗೂ ಉದ್ಯಮಗಳಿಂದ ಮಹಿಳೆಯರಿಗೆ ಆಗಬಹುದಾದ ಎಲ್ಲ ರೀತಿಯ ತಾರತಮ್ಯತೆಗಳನ್ನೂ ಇಲ್ಲವಾಗಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು;

- ಇದರ ಜೊತೆಗೆ ಅಸಾಮರ್ಥ್ಯವಿರುವ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಸಹಸ್ರಮಾನದ ಅಭಿವೃದ್ಧಿಯ ಗುರಿಗಳನ್ನು ಸಾಧಿಸುವುದನ್ನು ಕುರಿತ ಈಚಿನ ಎರಡು ನಿರ್ಧಾರಗಳಲ್ಲಿ ಲಿಂಗ ದೃಷ್ಟಿಕೋನವನ್ನು ಸೇರಿಸಿಕೊಳ್ಳಲು ಸಾಮಾನ್ಯ ಸಭೆಯು ಕರೆಕೊಟ್ಟಿದೆ;

- 18 ಡಿಸೆಂಬರ್ 2008ರ ಸಾಮಾನ್ಯ ಸಭೆಯ ನಿರ್ಧಾರವು (63/150) ಅಸಾಮರ್ಥ್ಯವಿರುವವರು ಸಂಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಎಲ್ಲ ಮಾನವ ಹಕ್ಕುಗಳನ್ನು ಮತ್ತು ಮೂಲಭೂತ ಸ್ವಾತಂತ್ರ್ಯವನ್ನು ಅನುಭವಿಸಲು ಕ್ರಮಗಳನ್ನು ತೆಗೆದುಕೊಳ್ಳುವುದನ್ನೂ ಸೇರಿದಂತೆ, ರಾಷ್ಟ್ರಗಳು, ಲಿಂಗ ನಿರ್ದಿಷ್ಟ ಅಗತ್ಯಗಳಿಗೆ ವಿಶೇಷ ಗಮನ ಕೊಡಬೇಕೆಂದು ಒತ್ತಾಯಿಸುತ್ತದೆ.(ಪರಿಚ್ಛೇದ 8) ;

- 18 ಡಿಸೆಂಬರ್ 2009ರ ಸಾಮಾನ್ಯ ಸಭೆಯ ನಿರ್ಧಾರವು (64/131) ಲಿಂಗ ಸಮಾನತೆ ಮತ್ತು ಮಹಿಳಾ ಸಬಲೀಕರಣ, ತಾಯಂದಿರ ಆರೋಗ್ಯವನ್ನು ಉತ್ತಮಪಡಿಸುವಿಕೆ–ಈ ಕಾರ್ಯಕ್ರಮಗಳು ಮತ್ತು ನಿಯಮಗಳು ಸಹಸ್ರಮಾನದ ಅಭಿವೃದ್ಧಿಯ ಗುರಿಗಳನ್ನು ಸಾಧಿಸುವ ಇತರ ಕಾರ್ಯಕ್ರಮಗಳ ಜೊತೆಯಲ್ಲಿ ಸೇರಿಸಿಕೊಂಡಿವೆ ಮತ್ತು ಅಸಾಮರ್ಥ್ಯವಿರುವವರಿಗೆ ಇವುಗಳ ಅವಕಾಶಗಳಿವೆ ಎಂಬುದನ್ನು ಖಚಿತಪಡಿಸಿಕೊಳ್ಳುವುದರ ಮೂಲಕ ಅಸಾಮರ್ಥ್ಯವಿರುವ ವ್ಯಕ್ತಿಗಳು ಬೆಳವಣಿಗೆಯಲ್ಲಿ, ಅದರಲ್ಲೂ ಸಹಸ್ರಮಾನದ ಅಭಿವೃದ್ಧಿಯ ಗುರಿಗಳನ್ನು ಸಾಧಿಸುವ ಎಲ್ಲ ಪ್ರಯತ್ನಗಳಲ್ಲಿ ಕಾರ್ಯಕರ್ತರಾಗಿಯೂ ಫಲಾನುಭವಿಗಳಾಗಿಯೂ ಭಾಗವಹಿಸಬೇಕು ಎಂದು ಸರ್ಕಾರಗಳಿಗೆ ಕರೆಕೊಟ್ಟಿದೆ (ಪರಿಚ್ಛೇದ 8) ; ಮತ್ತು

- ಎಲ್ಲ ನಿಯಮ ನಿರೂಪಣೆಯಲ್ಲಿ, ಕಾರ್ಯಕ್ರಮಗಳಲ್ಲಿ ಅಸಾಮರ್ಥ್ಯವಿರುವ ಮಹಿಳೆಯರ ಮತ್ತು ಬಾಲಕಿಯರ ಕಾಳಜಿಗಳನ್ನು ಗಮನಿಸಿಕೊಳ್ಳಬೇಕಾದ ಮತ್ತು ಬೆಳವಣಿಗೆಯ ಮೂಲವಾಹಿನಿಗೆ ಅವರನ್ನು ಸಮನ್ವಯಗೊಳಿಸಲು ಎಲ್ಲ ಹಂತಗಳಲ್ಲೂ ವಿಶೇಷ ಕ್ರಮಗಳನ್ನು ತೆಗೆದುಕೊಳ್ಳಬೇಕಾದ ಅಗತ್ಯವೂ ಇದೆ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 2

ಕೆಳಗಿನವುಗಳಲ್ಲಿ ಅಸಾಮರ್ಥ್ಯವುಳ್ಳ ಬಾಲಕಿಯರಿಗೆ ಮತ್ತು ಮಹಿಳೆಯರಿಗೆ ತತ್‌ಕ್ಷಣದಲ್ಲಿ ಒದಗಬೇಕಾದ ಅಂಶಗಳನ್ನು ಗುರುತಿಸಿ

1) ಹೆಚ್ಚು ಕಾಲ ಮನರಂಜನೆಗೆ ಅವಕಾಶಗಳು
2) ಮಾಹಿತಿ ತಂತ್ರಜ್ಞಾನ ಸಂಬಂಧಿ ಕೌಶಲಗಳಿಗೆ ಅವಕಾಶಗಳು
3) ಬಾಲಕಿಯರಿಗೆ ಪ್ರತ್ಯೇಕ ಶಿಕ್ಷಣ ಸಂಸ್ಥೆಗಳು
4) ಉಚಿತ ಗ್ರಂಥಾಲಯ ವ್ಯವಸ್ಥೆ
5) ಆತ್ಮವಿಶ್ವಾಸವನ್ನು ಮೂಡಿಸುವ ಕಾರ್ಯಕ್ರಮಗಳು,
6) ಸಮಾಜದಲ್ಲಿ ಭಾಗವಹಿಕೆಗೆ ಅವಕಾಶ
7) ಲಿಂಗ ಸಮಾನತೆಯನ್ನು ಖಚಿತಪಡಿಸುವ ನಿಯಮಗಳು
8) ಸಬಲೀಕರಣ ಕಾರ್ಯಕ್ರಮಗಳು

9) ಬೆಂಬಲ ಸೇವೆಗಳು

10) ಸಮರ್ಪಕ ಶಿಕ್ಷಣ,

11) ಗೌರವಯುತ ಕುಟುಂಬ ಜೀವನಕ್ಕೆ ಅವಕಾಶ

## 2.2.4. ಸಾರಾಂಶಿಸೋಣ

- ಲಿಂಗತ್ವ ಎಂಬುದು ಸಾಮಾಜಿಕ ವ್ಯವಸ್ಥೆಯ ಪ್ರಮುಖ ಅಂಶ. ಆದರೂ ಅಸಾಮರ್ಥ್ಯವಿರುವವರನ್ನು ಸಾಮಾನ್ಯವಾಗಿ ಲಿಂಗತ್ವವಿಲ್ಲದ ವ್ಯಕ್ತಿಗಳಾಗಿ ಪರಿಗಣಿಸಲಾಗುತ್ತದೆ. ಪುರುಷರಿಗೆ ಮತ್ತು ಮಹಿಳೆಯರಿಗೆ ಸಂಬಂಧಿಸಿದ ಹಲವು ಜೈವಿಕ, ಮನೋವೈಜ್ಞಾನಿಕ, ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಅಂಶಗಳಿಂದಾಗಿ ಅಸಾಮರ್ಥ್ಯವಿರುವ ಪುರುಷರು ಮತ್ತು ಮಹಿಳೆಯರು ಬೇರೆಯದೇ ಆದ ಜೀವನಾನುಭವಗಳನ್ನು ಪಡೆದಿರುತ್ತಾರೆ.
- ಯಾವುದೇ ಅಸಾಮರ್ಥ್ಯವಿರುವಿರಲಿ, ಎಲ್ಲ ವಯೋಮಾನದ ಬಾಲಕಿಯರು ಮತ್ತು ಮಹಿಳೆಯರು ಸಮಾಜದಲ್ಲಿ ಹೆಚ್ಚಿನ ಅಪಾಯ ಹಾಗೂ ಅವಗಣನೆಗೆ ಒಳಗಾಗುತ್ತಾರೆ.
- ವಿಶೇಷ ಶಿಕ್ಷಣದ ಅಗತ್ಯಗಳನ್ನು ಗಮನಿಸುವ ಸಂದರ್ಭದಲ್ಲಿ ಬಾಲಕಿಯರಿಗಿಂತ ಬಾಲಕರ ಅಸಾಮರ್ಥ್ಯತೆಯನ್ನು ಹೆಚ್ಚು ಗಮನಿಸಲಾಗಿದೆ ಎಂದು ಹಲವಾರು ಅಧ್ಯಯನಗಳು ಗುರುತಿಸಿವೆ. ಬಾಲಕರು ಬಾಲಕಿಯರಿಗಿಂತ ಹೆಚ್ಚು ತರಳೆ ಮಾಡುವುದರಿಂದ ಅವರನ್ನು ಹೆಚ್ಚು ಗುರುತಿಸಲಾಗುತ್ತದೆ ಎಂದು ಹೇಳಲಾಗುತ್ತದೆ.
- ಚರ್ಚೆಗಳು ವಿಶೇಷ ಶಿಕ್ಷಣ ಅಥವಾ ಅವಕಾಶಗಳಿಂದ ಅಸಾಮರ್ಥ್ಯವಿರುವ ಬಾಲಕಿಯರು ಹೇಗೆ ವಂಚಿತರಾಗಿದ್ದಾರೆ ಎಂಬುದನ್ನು ಮಾತ್ರವಲ್ಲದೆ, ಬಾಲಕಿಯರಲ್ಲಿ ಅಸಾಮರ್ಥ್ಯತೆಯನ್ನು ಗುರುತಿಸುವ ಪ್ರಯತ್ನಗಳು ನಡೆಯದೇ ಅವರ ಜೀವನ ಸಾಗುತ್ತದೆ ಎಂಬ ವಿಷಾದನೀಯ ಸಂಗತಿಯನ್ನು ಮನವರಿಕೆ ಮಾಡಿಕೊಡುತ್ತವೆ.
- ಶಿಕ್ಷಣದ ಸನ್ನಿವೇಶದಲ್ಲಿ, ಲಿಂಗಾಧಾರಿತವಾದ ತಾರತಮ್ಯದ ಇರುವಿಕೆಯನ್ನು ಅನೇಕ ಸಂಶೋಧನೆಗಳು ವರಿದಿಮಾಡಿವೆ.
- ಅಸಾಮರ್ಥ್ಯವಿರುವ ಬಾಲಕಿಯರ ಮತ್ತು ಮಹಿಳೆಯರ ಹಕ್ಕುಗಳನ್ನು ಇತರರ ಹಕ್ಕುಗಳಿಗೆ ಸಮಾನವಾಗಿ ಪರಿಗಣಿಸಲಾಗಿಲ್ಲ.
- ನಿರ್ದಿಷ್ಟ ಕ್ಷೇತ್ರಗಳಲ್ಲಿ ಅಸಾಮರ್ಥ್ಯವಿರುವ ಬಾಲಕಿಯರ ಬದುಕಿನ ಅನುಭವಗಳು ವಿಶಿಷ್ಟವಾಗಿರುತ್ತವೆ. ಉದಾಹರಣೆಗೆ ಶಿಕ್ಷಣ, ಉದ್ಯೋಗ, ಕುಟುಂಬ, ಆರೋಗ್ಯ ಇತ್ಯಾದಿ.
- ಅಸಾಮರ್ಥ್ಯವಿರುವ ಬಾಲಕಿಯರು ಮತ್ತು ಮಹಿಳೆಯರು ಅನೇಕ ಸವಾಲುಗಳನ್ನು ಎದುರಿಸುತ್ತಾರೆ.

## 2.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1 ಮತ್ತು 2

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 1

1–ಬಿ, 2–ಎ, 3–ಡಿ, 4– ಇ, 5–ಸಿ

ಕಾರ್ಯಯೋಜನೆಯನ್ನು ಸಹೋದ್ಯೋಗಿಗಳೊಂದಿಗೆ ಚರ್ಚಿಸಿ ಅನ್ವಯಿಸಿ.

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 2**

5 ರಿಂದ 11

## 2.2.6. ಘಟಕಾಂತ್ಯ ಅಭ್ಯಾಸಗಳು

1. ಅಸಾಮರ್ಥ್ಯವಿರುವ ಬಾಲಕಿಯರು ಮತ್ತು ಮಹಿಳೆಯರನ್ನು ಕುರಿತ ವಿಚಾರಗಳು ಮತ್ತು ಸವಾಲುಗಳನ್ನು ವಿಶ್ಲೇಷಿಸಿ
2. ಅಸಾಮರ್ಥ್ಯವಿರುವ ಬಾಲಕಿಯರು ಮತ್ತು ಮಹಿಳೆಯರ ಸಬಲೀಕರಣವನ್ನು ಬೆಂಬಲಿಸುವ ಕಾರ್ಯಕ್ರಮಗಳನ್ನು ವಿವರಿಸಿ.

## 2.2.7. ಪರಾಮರ್ಶನ ಸೂಚಿ


1. Gender andinclusive education: the weak link ingirls' education ...
2. https://medium.com/ungei-blog/gender-and-inclusive-education-the-weak-link-in-girls-education-pr
3. United Nations Educational, Scientific and Cultural Organization (UNESCO) (2000) Gender Equality and Equity. A summary review of UNESCO's accomplishments since the Fourth World Conference on Women (Beijing 1995). UNESCO, Paris, France.
4. Arnade, S. & Haefner, S. (2006) Gendering the Draft Comprehensive and Integral International Convention on the Protection and Promotion of the Rights and Dignity of Persons with Disabilities. Legal background paper. Published by Disabled Peoples International (DPI), Berlin.
5. Gray, G. (2010 draft) By Women for Women, the Australian women's health movement and public policy. (forthcoming).
6. UN Committee on Economic, Social and Cultural Rights (CESCR), General Comment No. 16: The Equal Right of Men and Women to the Enjoyment of All Economic, Social and Cultural Rights (Art. 3 of the Covenant), 11 August 2005, E/C.12/2005/4.
7. Women With Disabilities Australia (WWDA) (2007b) 'Forgotten Sisters – A global review of violence against women with disabilities'. WWDA Resource Manual on Violence Against Women With Disabilities. Published by WWDA, Tasmania, Australia.
8. Meekosha, H. (2004) Gender and Disability. Entry for the Sage Encyclopaedia of Disability. Available on line at: http://wwda.org.au/gendis2001


***************

# ಬ್ಲಾಕ್–2: ಕಲಿಯುವವರ ವೈವಿಧ್ಯತೆಯನ್ನು ಚರ್ಚಿಸುವುದು ಮತ್ತು ಅರ್ಥಮಾಡಿಕೊಳ್ಳುವುದು

## ಘಟಕ–3 : ಸಾಮಾಜಿಕ–ಸಾಂಸ್ಕೃತಿಕ ಮತ್ತು ಆರ್ಥಿಕ ಕಾರಣಗಳಿಂದಾಗಿ ವೈವಿಧ್ಯತೆ.

### ಘಟಕದ ರಚನೆ


2.3.1 ಕಲಿಕಾ ಉದ್ದೇಶಗಳು

2.3.2. ಪೀಠಿಕೆ

2.2.3 ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.3.3.1. ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರಣಗಳಿಂದಾಗಿ ವೈವಿಧ್ಯತೆ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 1

2.3.3.2. ಆರ್ಥಿಕ ಕಾರಣಗಳಿಂದಾಗಿ ವೈವಿಧ್ಯತೆ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 2

2.3.4. ಸಾರಾಂಶಿಸೋಣ

2.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1 ಮತ್ತು 2

2.3.6. ಘಟಕಾಂತ್ಯ ಅಭ್ಯಾಸಗಳು

2.3.7. ಪರಾಮರ್ಶನ ಸೂಚಿ


### 2.3.1 ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಸಂಸ್ಕೃತಿಯ ಪರಿಕಲ್ಪನೆಯನ್ನು ವಿವರಿಸುವರು;
- ಸಾಮಾಜಿಕ–ಸಾಂಸ್ಕೃತಿಕ ಅಂಶಗಳನ್ನು ಸ್ಪಷ್ಟಪಡಿಸುವರು;
- ತರಗತಿಯಲ್ಲಿ ಸಾಮಾಜಿಕ ಸಾಂಸ್ಕೃತಿಕವಾಗಿ ವಿಭಿನ್ನರಾದ ಮಕ್ಕಳ ವಿಚಾರಗಳನ್ನು ಗುರುತಿಸುವರು;
- ತರಗತಿಯಲ್ಲಿ ಆರ್ಥಿಕವಾಗಿ ವಿಭಿನ್ನರಾದ ಮಕ್ಕಳ ಸವಾಲುಗಳನ್ನು ಸ್ಪಷ್ಟಪಡಿಸುವರು; ಮತ್ತು
- ತರಗತಿಯಲ್ಲಿ ವೈವಿಧ್ಯತೆಯಿಂದಿರುವ ಮಕ್ಕಳನ್ನು ಗಮನಿಸಿಕೊಳ್ಳುವ ಕ್ರಮಗಳನ್ನು ಸೂಚಿಸುವರು.

## 2.3.2. ಪೀಠಿಕೆ

ಪ್ರತಿಯೊಂದು ಮಗುವೂ ವಿಶಿಷ್ಟವಾದುದು ಎಂಬ ಅಂಶ ನಮಗೆ ತಿಳಿದಿದೆ. ಈ ವಿಶಿಷ್ಟತೆಯೇ ಮಗುವನ್ನು ಅನನ್ಯವಾಗಿಸಿ ಆಸಕ್ತಿಹುಟ್ಟಿಸುವ ಮಾನವನಾಗಿಸುವಂತಹುದು. ಸ್ಪಷ್ಟವ್ಯತ್ಯಾಸಗಳಾದ ಕೂದಲಿನ ಬಣ್ಣ, ಮೈಬಣ್ಣ, ಎತ್ತರ, ದಪ್ಪ ಮತ್ತು ಕಣ್ಣಿನ ಬಣ್ಣ ಇತ್ಯಾದಿ ವ್ಯತ್ಯಾಸಗಳು ಸ್ಪಷ್ಟವಾಗಿ ಗೋಚರವಾಗುವಂತಹವು. ಇತರ ವ್ಯತ್ಯಾಸಗಳು ಅಷ್ಟೇನೂ ಸ್ಪಷ್ಟವಾಗಿರಲಿಕ್ಕಿಲ್ಲ. ಆದರೆ ಕಾಣದ ಈ ವ್ಯತ್ಯಾಸಗಳೇ ತರಗತಿಯಲ್ಲಿ ಕಲಿಕೆ ಮತ್ತು ವರ್ತನೆಗಳ ಮೇಲೆ ಪ್ರಭಾವ ಬೀರುತ್ತವೆ.

ವಿಶೇಷ ಅಗತ್ಯಗಳ ಮಗುವನ್ನು ಗುರುತಿಸಿದ ನಂತರದ ಹಂತದಲ್ಲಿ, ವಿಶೇಷ ಶಿಕ್ಷಣದ ಅಧ್ಯಾಪಕರ ಜೊತೆಗಿನ ಚರ್ಚೆಯಿಂದ ಮತ್ತು ಕಛೇರಿ ದಾಖಲೆಗಳ ವಿಮರ್ಶೆಯಿಂದ ತರಗತಿ ಅಧ್ಯಾಪಕರು ಮಗುವನ್ನು ಕುರಿತ ಮಾಹಿತಿಯನ್ನು ಪಡೆಯಬಹುದು. ಸಾಮಾನ್ಯ ತರಗತಿಯ ಅಧ್ಯಾಪಕರು ಈ ವಿಶೇಷ ಅಗತ್ಯಗಳುಳ್ಳ ಮಕ್ಕಳನ್ನು ತರಗತಿಯಲ್ಲಿರಿಸಿಕೊಳ್ಳಲು ಅವಕಾಶಮಾಡಿಕೊಡುವುದು ಹೆಚ್ಚಿನ ವಿಷಯವಲ್ಲ; ಆದರೆ ಆ ವ್ಯವಸ್ಥೆ ಎಂತಹುದಾಗಿರುತ್ತದೆ ಎಂಬುದು ಮುಖ್ಯ. ಸಾಮಾನ್ಯ ತರಗತಿಯಲ್ಲಿ ವಿಶೇಷ ಅಗತ್ಯಗಳನ್ನುಳ್ಳ ಮಕ್ಕಳಿಗೆ ಶಿಕ್ಷಣ ಕೊಡುವಾಗ ಸನ್ನಿವೇಶವು ಕನಿಷ್ಟ ತಡೆ ಇರುವ ಅಥವಾ ತಡೆಇಲ್ಲದಿರುವುದಾಗಿರಬೇಕು ಎಂಬುದು ಗಮನಾರ್ಹ. ಇಂದಿನ ತರಗತಿಗಳಲ್ಲಿ ಮಕ್ಕಳಲ್ಲಿನ ವೈವಿಧ್ಯತೆಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ಕಲಿಯುವವರನ್ನು ಉದ್ದೇಶಪೂರ್ವಕವಾಗಿ ಕೇಂದ್ರವಾಗಿಟ್ಟುಕೊಂಡ ಶಿಕ್ಷಣ ವ್ಯವಸ್ಥೆಯ ಬೆಂಬಲಪೂರಿತ ಪಲ್ಲಟದ ಅಗತ್ಯ ಎದ್ದು ಕಾಣುತ್ತದೆ.

ವಿದ್ಯಾರ್ಥಿಗಳು ಕಲಿಯುವ ರೀತಿ ವಿಭಿನ್ನವಾಗಿರುತ್ತದೆ, ಅವರು ಹೆಚ್ಚು ಕಡಿಮೆ, ಹಲವಾರು ಬೋಧನಾ ಉಪಕ್ರಮಗಳ ಆಧಾರದ ಮೇಲೆ ಕಲಿಯುತ್ತಾರೆ ಎಂಬ ವಿಷಯ ಅಧ್ಯಾಪಕರಿಗೆ ಹಿಂದಿನಿಂದಲೂ ತಿಳಿದಿದೆ. ಈ ಗ್ರಹಿಕೆಯನ್ನು ಅವರು ಸಾಮಾನ್ಯವಾಗಿ 20, 25 ಮಕ್ಕಳಿರುವ ತರಗತಿಯಲ್ಲಿ ಕಲಿಕೆಯನ್ನು ವೈಯಕ್ತೀಕರಿಸುವಲ್ಲಿ ಅನ್ವಯಿಸಿ ನೋಡಿ ಫಲಿತಾಂಶಗಳನ್ನು ಗುರುತಿಸಿಕೊಂಡಿರುತ್ತಾರೆ. ಈ ಅಧ್ಯಾಪಕರು ಈ ಪ್ರಯೋಗಗಳನ್ನು ವೈಯಕ್ತೀಕರಣಗೊಳಿಸುವುದಕ್ಕಾಗಿಯೇ ವಿನ್ಯಾಸಗೊಂಡ ಪಠ್ಯಕ್ರಮ, ಬೋಧನಾವಿಧಾನ, ಸಾಧನಗಳು, ಮಾರ್ಗೋಪಾಯಗಳು ಮತ್ತು ಸಂಪನ್ಮೂಲಗಳು ಮುಂತಾದ ಯಾವುದೇ ರಚನಾತ್ಮಕ ಬೆಂಬಲಗಳಿಲ್ಲದೆ– ತಮ್ಮಷ್ಟಕ್ಕೆ ತಾವೇ ಅನ್ವಯಿಸಿಕೊಂಡಿರುತ್ತಾರೆ. ವೈಯಕ್ತೀಕರಿಸಿದ ಕಲಿಕೆಯು, ಪ್ರತಿ ಕಲಿಕೆದಾರರೂ ಹೇಗೆ ಉತ್ತಮವಾಗಿ ಕಲಿಯುತ್ತಾರೆ, ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಾರೆ, ಅಭಿಪ್ರೇರಿತರಾಗುತ್ತಾರೆ, ಮತ್ತು ತಮ್ಮನ್ನು ತಾವೇ ಸಮರ್ಪಕ ಸಂಪನ್ಮೂಲಗಳಿಂದ ಸಕಾಲದಲ್ಲಿ ಸರಿಯಾದ ಮಾಧ್ಯಮದ ಮೂಲಕ, ಸರಿಯಾದ ಕಾಲದಲ್ಲಿ ಸ್ಫೂರ್ತಿಗೊಳಿಸಿಕೊಳ್ಳುತ್ತಾರೆ ಎಂಬುದನ್ನು ಅರಿಯುವುದರ ಮೂಲಕ ಹೆಚ್ಚುತ್ತಿರುವ ವೈವಿಧ್ಯತೆಯುಳ್ಳ ಮಕ್ಕಳನ್ನು ಬೆಂಬಲಿಸಲು ಒಂದು ದಾರಿ ತೋರಿಸುತದೆ.

ಶಾಲಾ ಪರಿಸರ ಮತ್ತು ಶಾಲಾ ಸಂಸ್ಕೃತಿ ಇವುಗಳು ವಿದ್ಯಾರ್ಥಿಯ ಯಶಸ್ಸಿನ ಮೇಲೆ ನೇರವಾಗಿ ಪ್ರಭಾವ ಬೀರುತ್ತವೆ. ಇದರ ಪರಿಣಾಮವಾಗಿ, ಶಾಲಾ ಸಂಸ್ಕೃತಿ ಮತ್ತು ತರಗತಿಯ ಸಂಸ್ಕೃತಿಯು ವೈವಿಧ್ಯತೆಯನ್ನು ಬಿಂಬಿಸುವುದು, ಗುರುತಿಸುವುದು, ಒಪ್ಪಿಕೊಳ್ಳುವುದು ಮತ್ತು ಸಂಭ್ರಮಿಸುವುದು ಅತ್ಯಂತ ಪ್ರಮುಖವಾಗುತದೆ. ಈ ಆದರ್ಶಗಳು ಮೇಲ್ನೋಟಕ್ಕೆ ದೊಡ್ಡದಾಗಿ ಆಕರ್ಷಕವಾಗಿ ಕಾಣುವುದಾದರೂ ಈಗಾಗಲೇ ಕಿಕ್ಕಿರಿದ ಜವಾಬ್ದಾರಿಗಳ ಮಧ್ಯೆ ಇದನ್ನೂ ಗ್ರಹಿಸಿ ಸಾಕ್ಷಾತ್ಕರಿಸಿಕೊಳ್ಳುವುದು ಶಿಕ್ಷಣ ನೀಡುವವರಿಗೆ ಕಷ್ಟವೆನಿಸಬಹುದು.

ಕಷ್ಟವಾದರೂ ಅದನ್ನು ಇಷ್ಟವಾಗಿಸಿಕೊಂಡು ಅದರ ಸಂಭ್ರಮ ಸಡಗರವನ್ನು ಅನುಭವಿಸುವುದು ಇಂದಿನ ಸನ್ನಿವೇಶದಲ್ಲಿ ಅಗತ್ಯ ಮಾತ್ರವಲ್ಲ ; ಅನಿವಾರ್ಯವೂ ಹೌದು.

ಇದೇಕೆ ಅಗತ್ಯ, ಅನಿವಾರ್ಯ ಎಂಬುದನ್ನು ನೋಡೋಣ.

ವೈವಿಧ್ಯತೆಯ ವಿಚಾರ ಅಷ್ಟು ಸರಳವಾದುದೇನೂ ಅಲ್ಲ. ವಿಶಾಲ ಜನಾಂಗಿಕ ಅಥವಾ ವಾಂಶಿಕ ಗುಂಪುಗಳ ಮಧ್ಯೆ ಇರುವ ವೈವಿಧ್ಯತೆಯನ್ನು ಮಾತ್ರವಲ್ಲ, ಇವುಗಳ ಒಳಗುಂಪುಗಳ ವೈವಿಧ್ಯತೆಯನ್ನೂ ಗುರುತಿಸಬೇಕು. ಹಿಂದೂಗಳ ಒಳಗುಂಪುಗಳ ನಡುವೆ, ಮುಸ್ಲಿಮರ ಒಳಗುಂಪುಗಳ ನಡುವೆ, ಕ್ರಿಶ್ಚಿಯನ್ನರ ಒಳಗುಂಪುಗಳ ನಡುವೆ ಅದೆಷ್ಟೋ ವೈವಿಧ್ಯತೆಗಳಿರುತ್ತವೆ. ಒಂದೇ ನೆರೆಕೆರೆಯಿಂದ ಬರುವ ಮಕ್ಕಳ ಕೌಟುಂಬಿಕ ಹಿನ್ನೆಲೆಯೇ ಭಿನ್ನವಾಗಿರುತ್ತದೆ. ವಿದ್ಯಾರ್ಥಿಗಳನ್ನು ಸಮನಾಗಿ ಪರಿಗಣಿಸುವ, ಯಶಸ್ಸಿಗೆ ಸಮನಾದ ಅವಕಾಶಗಳನ್ನು ಒದಗಿಸುವ, ಪಠ್ಯಕ್ರಮಕ್ಕೆ ಸಮನಾದ ಅವಕಾಶಗಳನ್ನು ಕೊಡುವ ಹಿನ್ನೆಲೆಯಲ್ಲಿ ಅಧ್ಯಾಪಕರು ಮತ್ತು ಆಡಳಿತಗಾರರು ವಿದ್ಯಾರ್ಥಿಗಳ ವೈಯಕ್ತಿಕ ಅಂಶಗಳು ಮತ್ತು ಅನನ್ಯತೆಗಳನ್ನು ಗಮನಿಸಿಕೊಳ್ಳಬೇಕು. ಈ ರೀತಿ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಕಾರಣಗಳಿಂದಾಗಿ ವಿಶೇಷ ಅಗತ್ಯಗಳಿರುವ ಮಕ್ಕಳಲ್ಲಿರುವ ವೈವಿಧ್ಯತೆಗಳನ್ನು ಈ ಘಟಕದಲ್ಲಿ ಚರ್ಚಿಸೋಣ.

## 2.3.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳೆಂದರೇನು?

ಶಿಕ್ಷಣವು ಬದುಕನ್ನು ಶ್ರೀಮಂತಗೊಳಿಸುತ್ತದೆ. ಬಡತನ ಮತ್ತು ರೋಗಗಳನ್ನು ಹೋಗಲಾಡಿಸಿ, ಸುಸ್ಥಿರ ಅಭಿವೃದ್ಧಿಗೆ ಅನುವುಮಾಡಿಕೊಡುತ್ತದೆ. ಶಿಕ್ಷಣ ಪಡೆಯುವುದು ಎಲ್ಲರ ಹಕ್ಕು ಕೂಡ. ಶಿಕ್ಷಣದಲ್ಲಿ ಯಶಸ್ವೀ ಸಾಧನೆಯಾಗಬೇಕಾದರೆ ರಾಜಕೀಯ, ಸಾಮಾಜಿಕ, ಪರಿಸರಾತ್ಮಕ ಇತ್ಯಾದಿ ಹತ್ತು ಹಲವು ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಪ್ರದಾಯ, ಆಚರಣೆಗಳು ವಿದ್ಯಾರ್ಥಿಗಳ ಬೆಳವಣಿಗೆಯ ಮೇಲೆ ಹೆಚ್ಚಾಗಿ ಪ್ರಭಾವ ಬೀರುತ್ತವೆ ಎಂಬುದನ್ನು ಸಂಶೋಧನೆಗಳು ಸ್ಪಷ್ಟಪಡಿಸುತ್ತವೆ. ವಿಭಿನ್ನ ಸಾಂಸ್ಕೃತಿಕ ಮತ್ತು ಸಾಮಾಜಿಕ ಹಿನ್ನೆಲೆಯಿಂದ ಬಂದ ಮಕ್ಕಳು ಸಂಜ್ಞಾನಾತ್ಮಕ ಕಾರ್ಯಗಳನ್ನು ವಿಭಿನ್ನ ರೀತಿಗಳಲ್ಲಿ ಮಾಡುತ್ತಾರೆ ಎಂಬುದನ್ನೂ ಸಂಶೋಧನೆಗಳು ತೋರಿಸಿಕೊಟ್ಟಿವೆ. ಹೆತ್ತವರು ಅವರ ಸಾಂಸ್ಕೃತಿಕ ಹಿನ್ನೆಲೆ ಮತ್ತು ಸಾಮಾಜಿಕ ವಿಭಿನ್ನತೆಗನುಗುಣವಾಗಿ ಮಕ್ಕಳು ಇತರರೊಂದಿಗೆ ಸಂವಹನ ಮಾಡಲು ವಿವಿಧ ರೀತಿಗಳಲ್ಲಿ ಪ್ರೋತ್ಸಾಹಿಸುತ್ತಾರೆ ಎಂಬ ಫಲಿತವೂ ಸಂಶೋಧನೆಯ ಒಂದು ಭಾಗವೇ.

ಉದಾಹರಣೆಗೆ, ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಹಿರಿಯರು ಮಾತನಾಡುವಾಗ ನಿನ್ನನ್ನು ನಿರ್ದಿಷ್ಟವಾಗಿ ಮಾತನಾಡಿಸದಿದ್ದರೆ ಮಾತನಾಡಬೇಡ, ಅವರಿಗೆ ಎದುರು ಹೇಳಬೇಡ ಇತ್ಯಾದಿಯಾಗಿ ಸಾಮಾಜೀಕರಣ ಮಾಡಿರಲಾಗುತ್ತದೆ. ಇಂತಹ ವರ್ತನೆಯನ್ನು ಪಾಶ್ಚಿಮಾತ್ಯ ಸಂಸ್ಕೃತಿಯಲ್ಲಿ ನಾಚಿಕೆಯ ಸ್ವಭಾವ ಎಂದು ಗುರುತಿಸುವುದು ಮಾತ್ರವಲ್ಲದೆ, ಅಂತಹ ವರ್ತನೆಗಳನ್ನು ಅಷ್ಟೇನೂ ಪ್ರೋತ್ಸಾಹಿಸುವುದಿಲ್ಲ.

ಮೂಲಭೂತವಾಗಿ ಸಂಸ್ಕೃತಿ ಎಂದರೇನು? ಇದು ಒಂದು ಗುಂಪು ಅಥವಾ ಸಮಾಜದ ಸದಸ್ಯರಿಗೆ ಸಮಾನವಾದ ನಂಬಿಕೆಗಳು, ವಸ್ತುಗಳು, ಮತ್ತು ಇತರ ವರ್ತನೆಗಳನ್ನು ಒಳಗೊಳ್ಳುತ್ತದೆ. ವ್ಯಕ್ತಿಗಳು ಮತ್ತು ಗುಂಪುಗಳು ತಮ್ಮನ್ನು ಗುರುತಿಸಿಕೊಳ್ಳುವುದು, ತಾವು ಹಂಚಿಕೊಂಡ ಮೌಲ್ಯಗಳಿಗೆ ಬದ್ಧರಾಗಿರುವುದು, ಸಮಾಜಕ್ಕೆ ಕೊಡುಗೆ ನೀಡುವುದು ಈ ಸಂಸ್ಕೃತಿಯ ಮೂಲಕವಾಗಿಯೇ. ಹೀಗೆ, ಸಂಸ್ಕೃತಿ ಎಂಬುದು,

ಭಾಷೆ, ಸಂಪ್ರದಾಯಗಳು, ಮೌಲ್ಯಗಳು, ಮಾನಕಗಳು, ಮೂಲಭೂತ ಸಾಮಾಜಿಕ ಕಾಳಜಿಗಳು, ಸಾಧನಗಳು, ತಂತ್ರಜ್ಞಾನಗಳು, ಉತ್ಪನ್ನಗಳು, ಸಂಘಟನೆಗಳು ಮತ್ತು ಸಂಸ್ಥೆಗಳು ಇತ್ಯಾದಿ ಅನೇಕ ಸಾಮಾಜಿಕ ಅಂಶಗಳನ್ನೂ ಒಳಗೊಳ್ಳುತ್ತದೆ. ಸಂಸ್ಥೆ ಎಂಬುದು ನಿರ್ದಿಷ್ಟ ಸಾಮಾಜಿಕ ಚಟುವಟಿಕೆಗಳಿಗೆ ಸಂಬಂಧಪಟ್ಟ ನಿಯಮಗಳ ಮತ್ತು ಸಾಂಸ್ಕೃತಿಕ ಅರ್ಥವಂತಿಕೆಗಳ ಸಮಷ್ಟಿ ಎಂದು ಹೇಳಬಹುದು. ಕುಟುಂಬ, ಶಿಕ್ಷಣ, ಕೆಲಸ, ಧರ್ಮ ಮತ್ತು ಆರೋಗ್ಯ ಪಾಲನೆ ಇವು ಕೆಲವು ಸಂಸ್ಥೆಗಳು

ಸಮಾಜಶಾಸ್ತ್ರಜ್ಞರು ಸಮಾಜ ಎಂಬುದಕ್ಕೆ ಸಮಾನ ಸಂಸ್ಕೃತಿಯನ್ನು ಹಂಚಿಕೊಳ್ಳುವ ರೀತಿಯಲ್ಲಿ ಅಂತರ್ ಕ್ರಿಯೆಗೆ ಒಳಗಾಗುವ ವ್ಯಕ್ತಿಗಳ ಸಮೂಹ ಎಂಬ ವ್ಯಾಖ್ಯೆ ನೀಡುತ್ತಾರೆ. ಈ ಸಾಂಸ್ಕೃತಿಕ ಬಂಧವು ವಾಂಶಿಕ ಅಥವಾ ಜನಾಂಗೀಯ ಅಥವಾ ಲಿಂಗಾಧಾರಿತವಾಗಿರಬಹುದು ಇಲ್ಲವೇ ಸಮಾನವಾದ ನಂಬಿಕೆಗಳು, ಮೌಲ್ಯಗಳು ಮತ್ತು ಚಟುವಟಿಕೆಗಳಿಂದ ಬೆಸೆದುದಾಗಿರಬಹುದು. ಸಮಾಜ ಎಂಬ ಪದಕ್ಕೆ ಭೌಗೋಳಿಕವಾದ ಅರ್ಥವೂ ಇದ್ದು ಒಂದು ನಿರ್ದಿಷ್ಟ ಸ್ಥಳದಲ್ಲಿ ಸಮಾನ ಸಂಸ್ಕೃತಿ ಇರುವ ವ್ಯಕ್ತಿಗಳ ಸಮೂಹ ಎಂದೂ ಅರ್ಥವಾಗುತ್ತದೆ.

ಸಂಸ್ಕೃತಿ ಮತ್ತು ಸಮಾಜ ಇವು ಅವಿನಾಭಾವ ಸಂಬಂಧವುಳ್ಳವು. ಸಂಸ್ಕೃತಿಯು ಸಮಾಜದ ಅಂಶಗಳನ್ನು ಒಳಗೊಂಡರೆ, ಸಮಾಜವು ಸಮಾನ ಸಂಸ್ಕೃತಿಯುಳ್ಳ ವ್ಯಕ್ತಿಗಳಿಂದ ರೂಪುಗೊಳ್ಳುತ್ತದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ ಸಮಾಜಶಾಸ್ತ್ರಜ್ಞರು ಮೌಲ್ಯಗಳು ಮತ್ತು ನಂಬಿಕೆಗಳು, ಭಾಷೆ ಮತ್ತು ಸಂವಹನ, ಹಾಗೂ ಒಂದು ಗುಂಪಿನ ವ್ಯಕ್ತಿಗಳಿಂದ ಸಮಾನವಾಗಿ ಹಂಚಿಕೊಂಡ ಪದ್ಧತಿಗಳು ಮೊದಲಾದವುಗಳನ್ನು ಸಂಸ್ಕೃತಿಯ ಅಭೌತಿಕ ಅಂಶಗಳು ಎಂದು ಪರಿಗಣಿಸುತ್ತಾರೆ. ಈ ವರ್ಗಗಳನ್ನು ಸ್ವಲ್ಪ ವಿಸ್ತರಿಸುವುದಾದರೆ, ಸಂಸ್ಕೃತಿಯು ನಮ್ಮ ಜ್ಞಾನ, ಸಾಮಾನ್ಯ ಜ್ಞಾನ, ಊಹೆಗಳು ಮತ್ತು ಅಪೇಕ್ಷೆಗಳಿಂದ ರೂಪಿತವಾಗುತ್ತದೆ. ಇದು ಸಮಾಜವನ್ನು ನಡೆಸುವ ನಿಯಮಗಳು, ಮಾನಕಗಳು, ನೀತಿಗಳನ್ನೂ ನಾವು ಬಳಸುವ ಪದಗಳು, ಮಾತುಗಳು, ಬರೆವಣಿಗೆ ಇವೆಲ್ಲವನ್ನೂ (ಇದನ್ನು ಇಂಗ್ಲಿಷ್‌ನಲ್ಲಿ 'ಡಿಸ್ಕೋರ್ಸ್' ಎನ್ನುತ್ತಾರೆ), ವಿಚಾರಗಳು ಮತ್ತು ಪರಿಕಲ್ಪನೆಗಳನ್ನು ಅಭಿವ್ಯಕ್ತಿಸಲು ನಾವು ಬಳಸುವ ಸಂಕೇತಗಳನ್ನೂ ಒಳಗೊಳ್ಳುತ್ತದೆ. ನಾವು ಏನು ಮಾಡುತ್ತೇವೆ ಮತ್ತು ಹೇಗೆ ಕಲಾತ್ಮಕವಾಗಿ ಸಾಧನೆ ಮಾಡುತ್ತೇವೆ ಎಂಬುದೂ ಸಂಸ್ಕೃತಿಯೇ. ನಾವು ಹೇಗೆ ನಡೆಯುತ್ತೇವೆ, ಕುಳಿತುಕೊಳ್ಳುತ್ತೇವೆ, ಇತರರ ಜೊತೆಗೆ ವ್ಯವಹರಿಸುತ್ತೇವೆ, ಇತ್ಯಾದಿಗಳೂ ಇದರಲ್ಲಿ ಸೇರಿಕೊಂಡಿರುತ್ತವೆ.

ಭೌತಿಕ ಸಂಸ್ಕೃತಿಯು ಮಾನವನು ನಿರ್ಮಿಸುವ ಮತ್ತು ಬಳಸುವ ವಸ್ತುಗಳಿಂದ ರೂಪಿತವಾಗುತ್ತದೆ. ಇದು ಕಟ್ಟಡ, ತಂತ್ರಜ್ಞಾನ, ವಸ್ತ್ರ, ಉಡುಪು, ಸಿನೆಮಾ, ಸಂಗೀತ, ಕಲೆ ಇತ್ಯಾದಿ ಅನೇಕ ಅಂಶಗಳನ್ನು ಒಳಗೊಳ್ಳುತ್ತದೆ. ಭೌತಿಕ ಸಂಸ್ಕೃತಿಯ ಅಂಶಗಳನ್ನು ಸಾಮಾನ್ಯವಾಗಿ ಸಾಂಸ್ಕೃತಿಕ ಉತ್ಪನ್ನಗಳು ಎಂದು ಹೇಳಲಾಗುತ್ತದೆ.

ಮಾನವನಿಗೆ ಸಾಮಾಜಿಕ ಅಂತರ್ ಕ್ರಿಯೆ ಅತ್ಯಂತ ಪ್ರಮುಖವಾದುದು. ಇತರರನ್ನು ಅನುಕರಿಸುವುದು, ಸಂವಹನವನ್ನು ಗ್ರಹಿಸುವುದು ಇವೆಲ್ಲವೂ ಸಾಧ್ಯವಾಗುವುದು ಇದರಿಂದಲೇ. ಈ ಸಾಮಾಜಿಕ ಅಂತರ್‌ಕ್ರಿಯೆ ಆತ್ಮವಿಮರ್ಶೆ ಮಾಡಿಕೊಂಡು ಆತ್ಮಗೌರವವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗಿಸುತ್ತದೆ. ಸಾಮಾಜಿಕ ಅಂತರ್ ಕ್ರಿಯೆಯ ಕೊರತೆ ಸಮಾಜದಲ್ಲಿ ವ್ಯಕ್ತಿಯ ಭಾಗವಹಿಕೆಗೆ ಅಡ್ಡಿಯಾಗುತ್ತದೆ.

ವಿದ್ಯಾರ್ಥಿಯ ಅಸ್ಮಿತೆಯನ್ನು ರೂಪಿಸುವಲ್ಲಿ ಸಂಸ್ಕೃತಿಯದು ಅತಿ ಮುಖ್ಯವಾದ ಪಾತ್ರ. ಸಂಸ್ಕೃತಿಯು ಕುಟುಂಬದಿಂದ ಅನಾಯಾಸವಾಗಿ ಬರುವಂತಹುದು. ಇದು ಸುಮಾರು ಮಗುವಿನ ಐದನೇ ವಯಸ್ಸಿಗೆ ಗಟ್ಟಿಯಾಗುತ್ತದೆ. ಇದು ಮಕ್ಕಳ ವರ್ತನೆಯ ಮೇಲೆ ಪ್ರಭಾವ ಬೀರುತ್ತದೆ. ಈ ಕಾರಣದಿಂದಾಗಿ ಮಗುವಿನ ವರ್ತನೆಗೂ ಅದರ ಸಂಸ್ಕೃತಿಗೂ ಅವಿನಾಭಾವ ಸಂಬಂಧವಿರುತ್ತದೆ. ಹಾಗಾಗಿ ಅಧ್ಯಾಪಕ ಮತ್ತು ಮಗು ಇಬ್ಬರ ಕಡೆಯಿಂದಲೂ ಸಂಸ್ಕೃತಿಯ ಬೇಡಿಕೆಗಳೇನು ಎಂಬುದರ ಅರಿವು ಅಗತ್ಯ. ಮಕ್ಕಳು ವಿವಿಧ ರೀತಿಗಳಲ್ಲಿ ತಮ್ಮನ್ನು ಅಭಿವ್ಯಕ್ತಿಪಡಿಸಿಕೊಳ್ಳುತ್ತಾರೆ ಎಂಬ ಅಧ್ಯಾಪಕರ ಅರಿವು ಈ ವ್ಯತ್ಯಾಸಗಳಿಗನುಗುಣವಾಗಿ ಅವುಗಳನ್ನು ಒಪ್ಪಿಕೊಳ್ಳಲು, ಅದರ ಆಧಾರದ ಮೇಲೆ ಧನಾತ್ಮಕ ಪ್ರತಿಕ್ರಿಯೆಗೆ ಕಲಿಕೆಯನ್ನು ಯೋಜಿಸಲು ಅನುವುಮಾಡಿಕೊಡುತ್ತದೆ. ಈ ಅರಿವು ಮಕ್ಕಳ ವರ್ತನೆಗೆ ಸಮಜಾಯಿಶಿ ಕೊಡುತ್ತದೆ. ಇದೇ ಅಧ್ಯಾಪಕರಿಗೆ ಅಗತ್ಯವಾದ ಸಾಂಸ್ಕೃತಿಕ ಸಾಮರ್ಥ್ಯ. ಇದು ಅಧ್ಯಾಪಕರಿಗೆ ಅವರ ಪೂರ್ವಾಗ್ರಹಗಳನ್ನು ಹೋಗಲಾಡಿಸಿಕೊಂಡು ಮಕ್ಕಳನ್ನು ಶುದ್ಧಮನಸ್ಸಿನಿಂದ ಸ್ವೀಕರಿಸಲು ಬೇಕಾದ ಮನಸ್ಥಿತಿಯನ್ನುಂಟುಮಾಡುತ್ತದೆ. ಇದು ಅಂತರ್ಗತ ಶಿಕ್ಷಣದ ಮೂಲಭೂತ ಅಗತ್ಯಗಳಲ್ಲಿ ಒಂದು.

## 2.3.3.1. ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರಣಗಳಿಂದಾಗಿ ವೈವಿಧ್ಯತೆ

ಶಾಲೆಯ ಮೊದಲ ಕೆಲವು ವರ್ಷಗಳು ಎಲ್ಲ ಮಕ್ಕಳಿಗೂ ಸ್ವಲ್ಪ ಕಷ್ಟವೇ. ಶಾಲಾ ಚಟುವಟಿಕೆಗಳಿಗೆ ಹೋಲಿಸಿದರೆ ಸ್ವಲ್ಪ ನಿಷ್ಕೃಷ್ಟವಲ್ಲದ ಶಾಲಾಪೂರ್ವ ಚಟುವಟಿಕೆಗಳಿಂದ ಶಾಲೆಯ ಅಗತ್ಯಗಳಿಗೆ ಹೊಂದಿಕೊಳ್ಳುವುದು ಸಾಮಾನ್ಯವೇನೂ ಅಲ್ಲ. ಇದಕ್ಕಾಗಿ ಮಕ್ಕಳಿಗೆ ಅತಿ ಹೆಚ್ಚಿನ ಮಟ್ಟದ ಸಾಮಾಜಿಕ ಮತ್ತು ಭಾವನಾತ್ಮಕ ಬೆಂಬಲ ಜೊತೆಗೆ ಶಾಲಾ ಪರಿಸರದಿಂದ ಸ್ವೀಕರಿಸುವ, ಒಪ್ಪಿಕೊಳ್ಳುವ ವಾತಾವರಣ ಸೃಷ್ಟಿ ಅಗತ್ಯವಾಗುತ್ತದೆ.

ನಮ್ಮ ಶಾಲೆಗೆ ಬರುವ ಮಕ್ಕಳ ಬಹುಸಂಸ್ಕೃತಿಯ ಪರಿಸರ ಮತ್ತು ವೈವಿಧ್ಯತೆಯಿಂದಾಗಿ ಈ ಅಂಶ ಮತ್ತೂ ಹೆಚ್ಚು ಸಂಕೀರ್ಣವಾಗುತ್ತದೆ. ಸುಮಾರು ಅರ್ಧ ಮಿಲಿಯ ಮಕ್ಕಳು ಶಾಲೆಗೆ ಹಾಜರಾಗುತ್ತಿದ್ದು ಅದರಲ್ಲಿ ಸುಮಾರು ಶೇ15ರಷ್ಟು ಮಕ್ಕಳು ವೈವಿಧ್ಯಮಯವಾದ ಹಿನ್ನೆಲೆಗಳಿಂದ ಬಂದಿರುವುದಲ್ಲದೆ, ದ್ವಿಭಾಷಿಗಳಾಗಿರುತ್ತಾರೆ. ಈ ಕಾರಣದಿಂದ, ಮಕ್ಕಳ ಸಾಮಾಜಿಕ ಹಿನ್ನೆಲೆಯ ಅರಿವು ಮೂಡಿಸಿಕೊಳ್ಳುವುದು ಮಾತ್ರವಲ್ಲ; ಆ ಮಕ್ಕಳು ಎದುರಿಸುವ ಸಾಮಾಜಿಕ ಸವಾಲುಗಳನ್ನೂ ಅರ್ಥಮಾಡಿಕೊಳ್ಳುವುದು ಅಗತ್ಯವಾಗುತ್ತದೆ.

### ಸಾಂಸ್ಕೃತಿಕ ವೈವಿಧ್ಯ ಮತ್ತು ಮಕ್ಕಳ ಸಾಮಾಜಿಕ–ಭಾವನಾತ್ಮಕ ಬೆಳವಣಿಗೆ

ವಿದ್ಯಾರ್ಥಿಗಳ ವೈವಿಧ್ಯತೆಯ ಅಥವಾ ವ್ಯತ್ಯಾಸಗಳನ್ನು ಗುರುತಿಸಿ ಅದರ ಆಧಾರದ ಮೇಲೆ ಪಾಠಗಳನ್ನು ಯೋಜಿಸಿಕೊಳ್ಳುವ ವಿಶಿಷ್ಟವಾದ ಜವಾಬ್ದಾರಿ ಅಧ್ಯಾಪಕರಿಗೆ ಇದೆ. ಇದು ತಾವೂ ಇತರರಂತೆಯೇ ಎಂಬ ಭಾವನೆ ಬರುವಂತೆ ಪ್ರೋತ್ಸಾಹಿಸುತ್ತದೆ. ಇದು ವೈವಿಧ್ಯಮಯವಾದ ಶಾಲಾ ಸನ್ನಿವೇಶವನ್ನು ಮೆಚ್ಚಿಕೊಳ್ಳುವಂತೆ ಮಾಡುತ್ತದೆ. ವೈವಿಧ್ಯಮಯವಾದ ಸಾಂಸ್ಕೃತಿಕ ಪರಂಪರೆಗಳನ್ನು ಶಾಲೆಯ ಏಕೈಕ ಘಟಕದಲ್ಲಿ ಬೆಸೆಯುತ್ತದೆ. ಇದು ನಿಜವಾಗಿಯೂ ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಮೂಲಕವಾಗಿ ನಮ್ಮ ವೈವಿಧ್ಯತೆಯ ಶ್ರೀಮಂತಿಕೆಯನ್ನು ಎತ್ತಿಹಿಡಿಯುವ ಪ್ರಯತ್ನ. ನಮ್ಮೊಳಗಿನ ವ್ಯತ್ಯಾಸಗಳನ್ನು ಗುರುತಿಸುವುದು, ಮಕ್ಕಳನ್ನು ಸಮಾನವಾಗಿ ನ್ಯಾಯಯುತವಾಗಿ ಪರಿಗಣಿಸುವುದರ ಭಾಗವೇ. ಸಾಂಸ್ಕೃತಿಕ ವ್ಯತ್ಯಾಸಗಳನ್ನು ಗುರುತಿಸಬೇಕು ಎಂದು ಹೇಳುವುದಕ್ಕೆ ಮತ್ತೊಂದು ಕಾರಣವೂ ಇದೆ. ಕಲಿಕೆಯ ಪ್ರಕ್ರಿಯೆಯಲ್ಲಿ ಈಗಾಗಲೇ ಮಗುವಿನಲ್ಲಿರುವ ಅರಿವು ಮತ್ತು ಅನುಭವವನ್ನು ಮಾಹಿತಿಯನ್ನು ವರ್ಗಾಯಿಸುವ ಕ್ರಿಯೆ ಅಡಗಿದೆ. ಈ ವರ್ಗಾವಣೆಯ

ಪ್ರಕ್ರಿಯೆಗೆ ಸಹಾಯವಾಗುವಂತಾಗಲು, ಮಕ್ಕಳ ಹಿನ್ನೆಲೆಯನ್ನು ಒಪ್ಪಿಕೊಂಡು, ಹೊಸ ಮಾಹಿತಿಯನ್ನು ಪಡೆಯುವ ಪ್ರಕ್ರಿಯೆಯಲ್ಲಿ ಪೂರ್ವಜ್ಞಾನವನ್ನು ಬೆಸೆದು ಮಾಹಿತಿಯನ್ನು ಮೌಲ್ಯೀಕರಿಸಬೇಕು. ಎಲ್ಲ ಮಕ್ಕಳೂ ಅವರವರ ಕುಟುಂಬದ ಸಂಸ್ಕೃತಿಗನುಗುಣವಾಗಿ ಕೆಲವು ಕೌಶಲಗಳು ಹಾಗೂ ಮಾಹಿತಿಯ ಚೌಕಟ್ಟಿನೊಡನೆ ಶಾಲಾ ಜೀವನವನ್ನು ಪ್ರವೇಶಿಸುತ್ತಾರೆ. ಇದು ವರ್ಣಮಾಲೆ, ಸಂಖ್ಯೆಗಳು, ಹಾಗೂ ಎರಡನೇ ಭಾಷೆಗೆ ಸಂಬಂಧಿಸಿದ ಕೆಲವು ಮೂಲ ಅಂಶಗಳ ಅರಿವು (ಅವರ ಹೆಸರಲ್ಲಿರುವ ಅಕ್ಷರಗಳು ಮತ್ತು ಅದನ್ನು ಬರೆಯುವ ರೀತಿ) ಇವುಗಳನ್ನು ಒಳಗೊಂಡಿರಬಹುದು. ಇದರ ಜೊತೆಗೆ ಕೆಲವು ಅಭ್ಯಾಸಗಳು, ಶಿಷ್ಟಾಚಾರಗಳು ಮತ್ತು ಸಾಮಾಜಿಕ ಅಪೇಕ್ಷೆಗಳನ್ನು ಕಲಿತು ಬಂದಿರುತ್ತಾರೆ. ಅಧ್ಯಾಪಕರಿಗೆ ಇರುವ ಮಕ್ಕಳ ವೈವಿಧ್ಯತೆಯ ಅರಿವು, ವಿದ್ಯಾರ್ಥಿಗಳಿಗೆ ಈಗ ಕಲಿಯಬೇಕಾದುದನ್ನು ಈ ಹಿಂದೆ ಕಲಿತುದರ ಜೊತೆಗೆ ಜೋಡಿಸಿಕೊಳ್ಳಲು ಸಹಾಯವಾಗುತ್ತದೆ. ಹೀಗೆ ಹೊಸದನ್ನು ಹಿಂದಿನ ಅರಿವಿನೊಂದಿಗೆ ಸಂಯೋಜಿಸಿಕೊಳ್ಳಲು ಸಾಧ್ಯವಾಗದಿದ್ದರೆ, ಅವರಿಗೆ ಹೊಸ ಮಾಹಿತಿ ಜುಗುಪ್ಸೆ ಬರುವಂತಾಗುತ್ತದೆ, ಇಲ್ಲವೇ ಕಲಿಯಲು ಕಷ್ಟವಾಗುತ್ತದೆ. ಹೀಗಾದಾಗ ಅವರು ಅದನ್ನು ಕೈಬಿಡುತ್ತಾರೆ. ಹೀಗಾಗಿ ಅಧ್ಯಾಪಕರು ಮಕ್ಕಳ ಸಾಂಸ್ಕೃತಿಕ ಕಟ್ಟಡದ ಹಂದರವನ್ನು ಪರಿಗಣಿಸಿ ಆ ಇಟ್ಟಿಗೆಗಳ ಮೇಲೆ ಕಲಿಕೆಯ ಹೊಸ ಇಟ್ಟಿಗೆಗಳನ್ನು ಜೋಡಿಸಿಡಬೇಕು. ಇದನ್ನೇ ಕೆಲವು ಶೈಕ್ಷಣಿಕ ಬೋಧನಾಶಾಸ್ತ್ರಗಳು 'ಸ್ಕ್ಯಾಫೋಲ್ಡಿಂಗ್' ಎಂದು ಹೇಳುತ್ತವೆ. ವಿದ್ಯಾರ್ಥಿಗಳ ಸಾಂಸ್ಕೃತಿಕ ವಿಭಿನ್ನತೆಗಳ ಗುರುತಿಸುವಿಕೆ ಪರಿಣಾಮಕಾರಿ ಕಲಿಕೆಗೆ ಒಂದು ಧನಾತ್ಮಕ ಅಧಾರವನ್ನು ಒದಗಿಸುತ್ತವೆ, ಜೊತೆಗೆ 'ಸುರಕ್ಷಿತ'ವಾದ ತರಗತಿ ಪರಿಸರವನ್ನೂ ಉಂಟುಮಾಡುತ್ತದೆ. ನಿಗದಿತ ಪಠ್ಯಕ್ರಮಕ್ಕೆ ಪ್ರತಿ ವಿದ್ಯಾರ್ಥಿ ಸಮೂಹವೂ ವಿಭಿನ್ನವಾಗಿಯೇ ಪ್ರತಿಕ್ರಿಯಿಸುತ್ತದೆ. ಹಾಗಾಗಿ ಅಧ್ಯಾಪಕರೂ ಅವರ ಬೋಧನಾ ವಿಧಾನಗಳು ತಾತ್ವಿಕವಾಗಿ ಮತ್ತು ಪ್ರಾಯೋಗಿಕವಾಗಿ ವಿಭಿನ್ನವಾಗಿಯೆ ಇದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

**ಅಭ್ಯಾಸ I :**

ಸಾಂಸ್ಕೃತಿಕ ವೈವಿಧ್ಯತೆಯನ್ನು ಉಳಿಸಿ, ಬೆಳೆಸಲು ಅಧ್ಯಾಪಕ ಏನು ಮಾಡಬಹುದು? ನಾಲ್ಕು ಅಂಶಗಳನ್ನು ಆಲೋಚಿಸಿ ಬರೆಯಿರಿ.

1.

2.

3.

4.

ವಿಶೇಷ ಅಗತ್ಯಗಳುಳ್ಳ ಮಕ್ಕಳನ್ನೂ ಸೇರಿದಂತೆ ಎಲ್ಲ ಮಕ್ಕಳೂ ಗುಣಮಟ್ಟದ ಶಿಕ್ಷಣವನ್ನು ಪಡೆಯುವ, ಬದುಕಿನಲ್ಲಿ ಯಶಸ್ವಿಯಾಗುವ ಅವಕಾಶಗಳನ್ನು ಪಡೆಯುವ ಹಕ್ಕುಗಳಿಗೆ ಸಮಾನವಾಗಿ ಭಾಜನರು. ವಿಶೇಷ ಅಗತ್ಯವುಳ್ಳ ಹಲವಾರು ಮಕ್ಕಳು ನಮ್ಮ ಶಿಕ್ಷಣ ವ್ಯವಸ್ಥೆಯಿಂದ ಇನ್ನೂ ಹೊರಗೆಯೇ ಉಳಿದಿದ್ದಾರೆ ಎಂಬುದು ನಮಗೆ ತಿಳಿದಿದೆ. ಈ ಮಕ್ಕಳಿಗೆ ಕಲಿಕಾ ಪ್ರಕ್ರಿಯೆಗಳನ್ನು ಉತ್ತಮಪಡಿಸಲು ಹಲವಾರು ಕ್ಷೇತ್ರಗಳ ಪ್ರಯತ್ನಗಳು ಅವಶ್ಯಕ. ಅಂತರ್ಗತ ಪಠ್ಯಕ್ರಮ ಮತ್ತು ಅದಕ್ಕೆ ಸಮರ್ಪಕವಾದ ಬೋಧನಾ ವಿಧಾನಗಳು ಈ ಸನ್ನಿವೇಶದಲ್ಲಿ ಹೆಚ್ಚು ಪರಿಣಾಮಕಾರಿ ಎಂಬುದು ತಿಳಿದುಬಂದಿದೆ.

ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ ವಿಧಿ 26ರ ಪ್ರಕಾರ ವಿಶೇಷ ಅಗತ್ಯವುಳ್ಳ ಮಕ್ಕಳಿಗೂ ಇತರ ಮಕ್ಕಳಂತೆಯೇ ಶಿಕ್ಷಣದ ಹಕ್ಕು ಇದೆ. ಶಿಕ್ಷಣವು ಒಂದು ಮೂಲಭೂತವಾದ ಹಕ್ಕು. ಎಲ್ಲ ಮಗುವಿಗೂ ಇದಕ್ಕೆ ಅಧಿಕಾರವಿದೆ. ವ್ಯಕ್ತಿಗಳಾಗಿ ಸಮಾಜವಾಗಿ ನಮ್ಮ ಅಭಿವೃದ್ಧಿಗೆ ಶಿಕ್ಷಣ ಎಂಬುದು ಅತ್ಯಂತ ನಿರ್ಣಾಯಕವಾದುದು. ಇದು ಯಶಸ್ವೀ ಮತ್ತು ಫಲಪ್ರದವಾದ ಭವಿಷ್ಯಕ್ಕೆ ದಾರಿಮಾಡಿಕೊಡುತ್ತದೆ. ಕ್ರಿಸ್ತಶಕೆಗೆ ಮೊದಲು ಕೆಲವು ದೇಶಗಳಲ್ಲಿ ಎಲ್ಲ ರೀತಿಯ ವಿಕಲಾಂಗರನ್ನು ನೋಡಿಕೊಳ್ಳದಿದ್ದುದು ಮಾತ್ರವಲ್ಲದೆ ಅವರನ್ನು ಬಹಿಷ್ಕರಿಸಲಾಗುತ್ತಿತ್ತು ಇಲ್ಲವೇ ಅವರನ್ನು ಇಲ್ಲವಾಗಿಸಿಬಿಡಲಾಗುತ್ತಿತ್ತು. ಬದುಕುಳಿದವರು ಭಿಕ್ಷುಕರಾಗಿ ಬದುಕುತ್ತಿದ್ದರು. ಶಕ್ತಿವಂತರಾಗಿದ್ದರೆ ಅವರನ್ನು ಗುಲಾಮರಾಗಿಸಿಕೊಳ್ಳಲಾಗುತ್ತಿತ್ತು. ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ ಪ್ರಕಾರ ಇದು ಮಾನವ ಹಕ್ಕುಗಳ ಉಲ್ಲಂಘನೆಯಾಗಿತ್ತು.

ಎಲ್ಲ ಮಗುವಿಗೂ ಶಿಕ್ಷಣಕ್ಕೆ ಮೂಲಭೂತವಾದ ಹಕ್ಕು ಇದೆ ಮತ್ತು ಸ್ವೀಕಾರಾರ್ಹವಾದ ಮಟ್ಟದ ಕಲಿಕೆಯನ್ನು ಸಾಧಿಸಲು ಅದನ್ನು ಉಳಿಸಿಕೊಳ್ಳಲು ಅವರಿಗೆ ಅವಕಾಶ ನೀಡಬೇಕು. ಪ್ರತಿಯೊಂದು ಮಗುವೂ ವಿಶಿಷ್ಟ ಗುಣಲಕ್ಷಣಗಳನ್ನು, ಆಸಕ್ತಿ, ಸಾಮರ್ಥ್ಯ ಮತ್ತು ಕಲಿಕಾ ಅಗತ್ಯಗಳನ್ನು ಹೊಂದಿರುತ್ತದೆ. ವಿಶಾಲ ವ್ಯಾಪ್ತಿಯ ಈ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಶೈಕ್ಷಣಿಕ ವ್ಯವಸ್ಥೆಗಳನ್ನು ವಿನ್ಯಾಸಗೊಳಿಸಬೇಕು ಮತ್ತು ಅದಕ್ಕನುಗುಣವಾದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಬೇಕು. ವಿಶೇಷ ಅಗತ್ಯಗಳುಳ್ಳ ಮಕ್ಕಳಿಗೆ ಸಾಮಾನ್ಯ ಶಾಲೆಗಳಲ್ಲಿ ಕಲಿಯಲು ಅವಕಾಶಗಳಿರಬೇಕು. ಈ ಶಾಲೆಗಳಲ್ಲಿ ಅವರ ವಿಶೇಷ ಅಗತ್ಯಗಳನ್ನು ಪೂರೈಸುವ ಶಿಶುಕೇಂದ್ರಿತ ಬೋಧನಾವಿಧಾನವನ್ನು ಅನುಸರಿಸಬೇಕು. ಪಕ್ಷಪಾತದ ಮನೋಭಾವವನ್ನೆದುರಿಸಲು, ಸಮುದಾಯಗಳನ್ನು ಸ್ವಾಗತಿಸುವ, ಅಂತರ್ಗತ ಸಮಾಜವನ್ನು ಸೃಷ್ಟಿಸುವ ಎಲ್ಲರಿಗೂ ಶಿಕ್ಷಣವನ್ನು ಒದಗಿಸುವ ಉದ್ದೇಶಗಳನ್ನು ಸಾಧಿಸಲು ಅಂತರ್ಗತ ನಿಲುವನ್ನುಳ್ಳ ಸಾಮಾನ್ಯ ಶಾಲೆಗಳು ಹೆಚ್ಚು ಪರಿಣಾಮಕಾರಿ ಸಾಧನಗಳು. ಅಲ್ಲದೆ, ಗರಿಷ್ಟ ಸಂಖ್ಯೆಯ ಮಕ್ಕಳಿಗೆ ಅದು ಪರಿಣಾಮಕಾರಿ ಶಿಕ್ಷಣವನ್ನು ಒದಗಿಸುವುದು ಮಾತ್ರವಲ್ಲದೆ, ದಕ್ಷತೆಯನ್ನು ಹೆಚ್ಚಿಸಿ, ಅಂತಿಮವಾಗಿ ಇಡೀ ಶಿಕ್ಷಣ ವ್ಯವಸ್ಥೆಯ ವೆಚ್ಚವನ್ನು ನಿರ್ವಹಿಸಲು ಸಹಾಯಮಾಡುತ್ತದೆ. ಈ ರೀತಿಯ ಬದಲಾವಣೆಗಳಾಗದಿದ್ದರೆ, ಜನರ ನಡುವೆ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಾಧನೆಗಳಲ್ಲಿ ಅಂತರ ಹೆಚ್ಚುತ್ತಾ ಹೋಗಿ, ನಾವು ಮತ್ತೂ ಹೆಚ್ಚು ಹೆಚ್ಚು ವಿದ್ಯಾರ್ಥಿಗಳನ್ನು ಸಮಾಜದ ಅಂಚಿನಲ್ಲಿರಿಸುವ ಅಪಾಯದ ಕಡೆಗೆ ಸಾಗುತ್ತೇವೆ. ಸುಮಾರು ಆರು ದಶಕಗಳಿಗೂ ಹಿಂದೆ, 17ನೇ ಮೇ 1954ರಂದು ಉಚ್ಚ ನ್ಯಾಯಾಲಯವು ಪ್ರತ್ಯೇಕಿಸಲ್ಪಟ್ಟ, ಅಂದರೆ ಕೇವಲ ಅಸಾಮರ್ಥ್ಯವಿಲ್ಲದಿರುವ ಮಕ್ಕಳಿಗಾಗಿಯೇ ಶಾಲೆಗಳನ್ನು ಸ್ಥಾಪಿಸುವುದು ಕಾನೂನು ಬದ್ಧವಲ್ಲ ಎಂಬ ನಿಯಮವನ್ನು ಹೊರಡಿಸಿದಾಗಿನಿಂದ, ನಮ್ಮ ಶೈಕ್ಷಣಿಕ ವ್ಯವಸ್ಥೆಯಲ್ಲಿ ಸಮನ್ವಯ ಮತ್ತು ವೈವಿಧ್ಯತೆ, ಕಷ್ಟಸಾಧ್ಯವಾಗಿದೆಯಾದರೂ ಸ್ವಲ್ಪಮಟ್ಟಿಗೆ, ಹೆಚ್ಚಾಗಿದೆ,

ವಿವಿಧ ಸಂಸ್ಕೃತಿಗಳು, ಧರ್ಮಗಳು ಇತ್ಯಾದಿ ಅಂಶಗಳನ್ನು ಶಾಲೆಯಲ್ಲಿ ಬೋಧಿಸಬಾರದು ಎಂದು ಹೇಳುವವರಿದ್ದಾರೆ. ಹಾಗೆ ಬೋಧಿಸುವಾಗ ಎಚ್ಚರಿಕೆಯಿಂದಿರಬೇಕಷ್ಟೆ. ತರಗತಿಯಲ್ಲಿ ವೈವಿಧ್ಯತೆಯನ್ನು ಗುರುತಿಸಿಕೊಳ್ಳುವುದು ಮಕ್ಕಳು ಕಲಿಯಲು ಹಾಗೂ ಭಿನ್ನವಾಗಿ ಆಲೋಚಿಸಲು ಸಹಾಯಕವಾಗುವುದಲ್ಲದೆ, ನೈಜ ಪ್ರಪಂಚಕ್ಕೆ ಅವರನ್ನು ಸಿದ್ಧಗೊಳಿಸಲು ಮತ್ತು ಮುಂದೆ ಕಾರ್ಯಕ್ಷೇತ್ರದಲ್ಲಿ ಮತ್ತು ದೈನಂದಿನ ಬದುಕಿನಲ್ಲಿ ವಿವಿಧ ಸಂಸ್ಕೃತಿಯ ಜನರೊಂದಿಗೆ ವ್ಯವಹರಿಸಲು ಸಹಾಯಕವಾಗುತ್ತದೆ.

ತರಗತಿಯಲ್ಲಿ ಈ ರೀತಿಯ ವೈವಿಧ್ಯತೆಯನ್ನು ಉಳಿಸಿಕೊಳ್ಳಲು ಇರುವ ಅಡ್ಡಿಗಳಾದರೂ ಏನು? ವಿವಿಧ ಜನಾಂಗ, ಸಂಸ್ಕೃತಿ ಅಥವಾ ಸಾಮಾಜಿಕ ಆರ್ಥಿಕ ಹಿನ್ನೆಲೆ ಇರುವವರನ್ನು ಒಟ್ಟು ಸೇರಿಸುವುದಕ್ಕೆ ಕೆಲವು ಪೋಷಕರ ಮತ್ತು ಶಾಲೆಗಳ ವಿರೋಧವಿರುವುದಾದರೂ ಏಕೆ?

ಈ ವೈವಿಧ್ಯತೆಗಳನ್ನು ಅರಿತುಕೊಳ್ಳುವುದು ಮಕ್ಕಳಿಗೆ ಮಾತ್ರವಲ್ಲ; ಅಧ್ಯಾಪಕರಿಗೂ ಅವಶ್ಯಕ. ಇದರಿಂದ ಅವರು ಮಕ್ಕಳ ಕಲಿಕೆಗೆ ಹೆಚ್ಚು ಒತ್ತಾಸೆ ನೀಡಲು ಸಾಧ್ಯವಾಗುತ್ತದೆ. ನಾವು ಯಾವಾಗ ವೈವಿಧ್ಯತೆ ಪ್ರಮುಖವಾದುದು ಎಂಬುದನ್ನು ಅರ್ಥಮಾಡಿಕೊಂಡು ಅದನ್ನು ಸಂಭ್ರಮಿಸಲು ಮೊದಲು ಮಾಡುತ್ತೇವೆಯೋ ಆಗ ನಾವು ಹೆಚ್ಚಿನದನ್ನು ಸಾಧಿಸುತ್ತೇವೆ, ನಮ್ಮಮಕ್ಕಳೂ ಇದರಿಂದ ಪ್ರಯೋಜನ ಪಡೆಯುತ್ತಾರೆ.

**ಶಿಕ್ಷಕರ ಪಾತ್ರ :**

ಮಕ್ಕಳು ಶಾಲೆಗೆ ಪ್ರವೇಶಿಸುವಾಗ ಅವರಿಗೆ ಓದು, ಬರಹ ಕಲಿಸುವುದಕ್ಕಿಂತ, ಅವರ ಭಾವನಾತ್ಮಕ ಅಗತ್ಯಗಳಿಗೆ ಸ್ಪಂದಿಸುವುದು ಹೆಚ್ಚು ಮುಖ್ಯವಾಗುತ್ತದೆ. ಶಿಕ್ಷಕರು ಈ ಕೆಲಸಕ್ಕೆ ಅವರಿಗೆ ಸಮರ್ಪಕ ತರಬೇತಿ ಒದಗಿ ಬರಲಿಲ್ಲ ಎಂದು ಹೇಳುತ್ತಿರುತ್ತಾರೆ. ಅವರು ಶಾಲೆಯಲ್ಲಿ ಗಮನಕೊಡಬೇಕಾದ ಕಾರ್ಯಗಳನ್ನು ಅಂದರೆ ಕಲಿಸಬೇಕಾದುದನ್ನು ಕುರಿತಂತೆಯೇ ಅವರ ತರಬೇತಿಯ ಹೆಚ್ಚಿನ ಭಾಗ ಕಳೆದುಹೋಗುತ್ತದೆ ಎಂಬುದು ಅವರ ಅನುಭವ. ಮಕ್ಕಳ ಭಾವನಾತ್ಮಕ ಅಗತ್ಯಗಳನ್ನು ನಿರ್ವಹಿಸುವಲ್ಲಿ ಅವರಿಗಿರುವ ಆತ್ಮವಿಶ್ವಾಸದ ಕೊರತೆ ಮಕ್ಕಳೊಳಗಿನ ಸಾಂಸ್ಕೃತಿಕ ಭಿನ್ನತೆಗಳನ್ನು ಗಮನಿಸುವಾಗ ಮತ್ತೂ ಹೆಚ್ಚು ಆತಂಕ ಹುಟ್ಟಿಸುತ್ತದೆ. ಶಿಕ್ಷಕರಿಗೆ ಮತ್ತು ಶಾಲೆಗಳಿಗೆ ಸಾಮಾಜಿಕ –ಸಾಂಸ್ಕೃತಿಕ ಭಿನ್ನತೆಗಳ ಅರಿವು ಇಲ್ಲದಿದ್ದರೆ ಮತ್ತು ಅದನ್ನು ನಿಭಾಯಿಸುವ ತರಬೇತಿ ಇಲ್ಲದಿದ್ದರೆ ಮಕ್ಕಳ ವರ್ತನೆಗಳನ್ನು ಅವರು ಅಪಾರ್ಥಮಾಡಿಕೊಳ್ಳುವ ಸಂದರ್ಭಗಳೇ ಹೆಚ್ಚು. ಇದರಿಂದಾಗಿ ಇದೊಂದು ಸಾಮಾಜಿಕ ಮತ್ತು ಭಾವನಾತ್ಮಕ ಹೊರೆಯಾಗಬಹುದು. ಆದರೆ, ಶೈಕ್ಷಣಿಕ ವ್ಯವಸ್ಥೆಗಳು ಶಾಲೆಗಳ ಅನುಭವಗಳನ್ನು ಶ್ರೀಮಂತಗೊಳಿಸಲು ಕಷ್ಟಪಟ್ಟು ಪ್ರಯತ್ನಿಸುತ್ತಿವೆ. ಆದರೆ ಗುರಿ ತಲುಪಲು ಕಾಲಾವಕಾಶ ಬೇಕು.

ನೀತಿ ನಿಯಾಮಕರು, ಶಿಕ್ಷಣ ತಜ್ಞರು, ಅಧ್ಯಾಪಕರು ಮತ್ತು ಪೋಷಕರು ಮಕ್ಕಳ ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆಗೆ ಹೆಚ್ಚು ಹೆಚ್ಚು ಗಮನ ಕೊಡಬೇಕು. ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ವಿಭಿನ್ನವಾದ ಮಕ್ಕಳನ್ನು ಕುರಿತ ಸಂಶೋಧನಾ ಫಲಿತಾಂಶಗಳನ್ನು ನಾವು ಹೆಚ್ಚು ಶೀಘ್ರವಾಗಿ ಸೇವಾ ಪೂರ್ವ ಶಿಕ್ಷಣ ಮತ್ತು ಶೈಕ್ಷಣಿಕ ನೀತಿಗಳಲ್ಲಿ ಸಮನ್ವಯಗೊಳಿಸಬೇಕು. ಈ ಮಧ್ಯೆ, ತರಬೇತಿಯಲ್ಲಿನ ಈ ಕೊರತೆಯನ್ನು ಅಧ್ಯಾಪಕರು ಗುರುತಿಸಿಕೊಂಡು ಮಕ್ಕಳು, ಅದರಲ್ಲೂ ವಿಭಿನ್ನ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಗಳನ್ನುಳ್ಳ ಮಕ್ಕಳು ಶಾಲೆಯ ಮೊದಲ ವರ್ಷಗಳಲ್ಲಿ ಯಾವ ರೀತಿಯಲ್ಲಿ ಸಾಧನೆಯನ್ನು ಮಾಡಬೇಕು ಎಂಬುದನ್ನು ಕುರಿತಂತೆ ತಮ್ಮದೇ ಆದ ಊಹೆಗಳು ಮತ್ತು ಅರಿವಿನ ಆಧಾರದ ಮೇಲೆ ನಿರ್ಧಾರಗಳನ್ನು ಕೈಗೊಳ್ಳುವುದನ್ನು ಬಿಡಬೇಕು. ಒಂದು ಸಂಸ್ಕೃತಿಯಲ್ಲಿ ಯಾವುದನ್ನು ನಾವು ಹೆಚ್ಚು ಮೌಲ್ಯವುಳ್ಳದ್ದು ಎಂದು ಪರಿಗಣಿಸುವುದಿಲ್ಲವೋ ಅದು ಮತ್ತೊಂದು ಸಂಸ್ಕೃತಿಯಲ್ಲಿ ಅತಿ ಹೆಚ್ಚಿನ ಮೌಲ್ಯವುಳ್ಳದ್ದಾಗಿರಬಹುದು ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದು ಹೆಚ್ಚು ಸಹಾಯವಾಗುವ ಅಂಶ.

ಈ ಗ್ರಹಿಕೆ ಅತ್ಯಂತ ಸುಲಭವಾಗಿ ಬರುವಂತಹುದಲ್ಲ. ಸ್ವಲ್ಪಮಟ್ಟಿನ ವಿರೋಧದೊಂದಿಗೆ ಸಾಧಿತವಾಗಬಹುದು. ಆದರೆ ವೈವಿಧ್ಯತೆ ಮತ್ತು ಅಂತರ್ಗತತೆಯ ಕಡೆಗೆ ದೊಡ್ಡ ಹೆಜ್ಜೆಗಳನ್ನಿಡುವುದೊಂದೇ ನಮ್ಮ ಶಾಲೆಗಳನ್ನು ಮುನ್ನಡೆಸುವ ಮತ್ತು ಭವಿಷ್ಯದಲ್ಲಿ ಉತ್ತಮಪಡಿಸುವ ಮಾರ್ಗ. ಹಾಗಾಗಿ, ಪೋಷಕರು, ಶಿಕ್ಷಣತಜ್ಞರು ಮತ್ತು ತರಗತಿ ವೈವಿಧ್ಯತೆಗಳನ್ನು ಗೌರವಿಸುವ ಯಾರೇ ಆದರೂ ನೀತಿನಿಯಾಮಕರು ಈ ಅಂಶವನ್ನು ಗಮನಕ್ಕೆ ತೆಗೆದುಕೊಳ್ಳುತ್ತಾರೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

ಇಡೀ ತರಗತಿ, ಸಮುದಾಯ ಮತ್ತು ನಗರಗಳು ವೈವಿಧ್ಯತೆ ಮತ್ತು ಅಂತರ್ಗತತೆಯ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳಲು ಯಾವಾಗ ಪ್ರಾರಂಭಿಸುತ್ತವೆಯೋ ಆಗ ನಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಸಿಗುವುದು ಸಾಧ್ಯ, ಇದರಿಂದ ನಮ್ಮ ಕಾರ್ಯಕ್ಷೇತ್ರಗಳು ಮತ್ತು ಪ್ರತಿಯೊಬ್ಬರೂ ಪ್ರಯೋಜನ ಪಡೆಯುತ್ತಾರೆ.

ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳ, ಸಹೋದ್ಯೋಗಿಗಳ ಮತ್ತು ಪೋಷಕರ ಮನೋಭಾವವನ್ನು ರೂಪಿಸುವ ವಿಶಿಷ್ಟ ಅವಕಾಶ ಅಧ್ಯಾಪಕರಿಗಿದೆ. ವಿಶೇಷ ಅಗತ್ಯವಿರುವ ಮಕ್ಕಳ ಕುರಿತು ಇತರರಿಗೆ ಏನು ಹೇಳಬಹುದು ಎಂಬುದನ್ನು ಗಮನಿಸಿ:

- ವಿಶೇಷ ಅಗತ್ಯಗಳನ್ನು ಎತ್ತಿ ಹಿಡಿಯಬೇಡಿ; ಬದಲಿಗೆ ಬದುಕನ್ನು ಹಸನುಗೊಳಿಸುವ ವಿಚಾರಗಳ ಮೇಲೆ ಗಮನಹರಿಸಿ.
- ಯಶಸ್ವಿಯಾಗಿರುವ(ವಿಶಿಷ್ಟ ಸಾಮರ್ಥ್ಯಗಳನ್ನುಳ್ಳ) ವಿಶೇಷ ಅಗತ್ಯವುಳ್ಳ ಮಕ್ಕಳನ್ನೂ ಅತಿಮಾನವರಾಗಿ ಚಿತ್ರಿಸಬೇಡಿ. ಇದು ವಿಶೇಷ ಅಗತ್ಯವುಳ್ಳ ಇತರ ಎಲ್ಲ ಮಕ್ಕಳ ಮೇಲೆ ತಪ್ಪು ಅಪೇಕ್ಷೆಗಳನ್ನು ಹೊರೆಸಬಹುದು.
- 'ವಿಶೇಷ ಪರಿಣಾಮಗಳಿಗೊಳಗಾದ' 'ವಿಕಲಾಂಗರಾದ' ಇತ್ಯಾದಿ ಪದಗಳನ್ನು ಬಳಸಿ ವಿಶೇಷ ಅಗತ್ಯವನ್ನು ಭಾವೋದ್ರೇಕಕ್ಕೆ ಒಳಗುಮಾಡಬೇಡಿ.
- ಸಾಮರ್ಥ್ಯಹೀನರು ಇತ್ಯಾದಿ ಸಾಮಾನ್ಯ ಪದಗಳಿಗಿಂತ ಬೌದ್ಧಿಕ ಸವಾಲುಗಳುಳ್ಳವರು ಎಂಬ ನಿರ್ದಿಷ್ಟ ಪದಗಳ ಬಳಕೆ ಒಳ್ಳೆಯದು.
- ವಿದ್ಯಾರ್ಥಿಗಳ ಬಗ್ಗೆ ಗಮನವಿರುವಂತೆ ನೋಡಿಕೊಳ್ಳಿ; ವಿಶೇಷ ಅಗತ್ಯಗಳ ಕಡೆಗಲ್ಲ.
- ಸಾಮರ್ಥ್ಯಗಳನ್ನು ಒತ್ತಿಹೇಳಿ; ಅಸಾಮರ್ಥ್ಯಗಳನ್ನಲ್ಲ.
- ಅಗತ್ಯಗಳನ್ನು ವರ್ಣಿಸಲು ಸುತ್ತು ಬಳಸಿ ಹೇಳುವ ಪದಗಳನ್ನು ಬಳಸಬೇಡಿ.
- ವಿಶೇಷ ಅಗತ್ಯಗಳಿಗೆ ಸಂಬಂಧಿಸಿದ ರೋಗಗಳ ಅರ್ಥಬರುವಂತೆ ಪದ ಬಳಸಬೇಡಿ
- ವಿಶೇಷ ಅಗತ್ಯವುಳ್ಳ ವ್ಯಕ್ತಿಗಳು ಸಮಾಜದ ಸಕ್ರಿಯ ಭಾಗಿದಾರರು ಎಂಬಂತೆ ಚಿತ್ರಿಸಿ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 1

ಕೆಳಗೆ ಕೊಟ್ಟಿರುವ ಹೇಳಿಕೆಗಳಲ್ಲಿ, ಅಂತರ್ಗತ ಸನ್ನಿವೇಶಗಳಲ್ಲಿ ವೈವಿಧ್ಯತೆಗಳನ್ನು ಗಮನಿಸುವುದರಿಂದಾಗುವ ಪ್ರಯೋಜನಗಳನ್ನು ಹೇಳುವ ಹೇಳಿಕೆಗಳನ್ನು ಗುರುತಿಸಿ;

1. ವಿಶೇಷ ಅಗತ್ಯವಿರುವ ಮಕ್ಕಳಿಗೆ ತಾವೂ ಇತರರಂತೆಯೇ ಎಂದೆನಿಸುವ ಮನೋಭಾವವನ್ನು ಉಂಟುಮಾಡುತ್ತದೆ.
2. ವೈವಿಧ್ಯಮಯವಾದ ಶಾಲಾ ಸನ್ನಿವೇಶವನ್ನು ಮೆಚ್ಚಿಕೊಳ್ಳುವಂತೆ ಮಾಡುತ್ತದೆ.
3. ವೈವಿಧ್ಯಮಯವಾದ ಸಾಂಸ್ಕೃತಿಕ ಪರಂಪರೆಗಳನ್ನು ಶಾಲೆಯ ಏಕೈಕ ಘಟಕದಲ್ಲಿ ಬೆಸೆಯುತ್ತದೆ.
4. ನಮ್ಮ ವೈವಿಧ್ಯತೆಯ ಶ್ರೀಮಂತಿಕೆಯನ್ನು ಎತ್ತಿಹಿಡಿಯುತ್ತದೆ.

5. ಗರಿಷ್ಠ ಸಂಖ್ಯೆಯ ಮಕ್ಕಳಿಗೆ ಅದು ಪರಿಣಾಮಕಾರಿ ಶಿಕ್ಷಣವನ್ನು ಒದಗಿಸುತ್ತದೆ.
6. ಶಿಕ್ಷಣವನ್ನು ದುಬಾರಿಯಾಗಿಸುತ್ತದೆ.
7. ಶಾಲಾ ವ್ಯವಸ್ಥೆಯಲ್ಲಿ ದಕ್ಷತೆಯನ್ನು ಹೆಚ್ಚಿಸುತ್ತದೆ.
8. ಮಕ್ಕಳ ಕಲಿಕೆ ನಿಧಾನವಾಗುತ್ತದೆ.
9. ಮಕ್ಕಳ ಭಿನ್ನವಾಗಿ ಆಲೋಚಿಸಲು ಸಹಾಯಕವಾಗುತ್ತದೆ,
10. ನೈಜ ಪ್ರಪಂಚಕ್ಕೆ ಅವರನ್ನು ಸಿದ್ಧಗೊಳಿಸುತ್ತದೆ.
11. ಕಾರ್ಯಕ್ಷೇತ್ರದಲ್ಲಿ ಮತ್ತು ದೈನಂದಿನ ಬದುಕಿನಲ್ಲಿ ವಿವಿಧ ಸಂಸ್ಕೃತಿಯ ಜನರೊಂದಿಗೆ ವ್ಯವಹರಿಸಲು ಸಹಾಯಕವಾಗುತ್ತದೆ.

## 2.3.3.2. ಆರ್ಥಿಕ ಕಾರಣಗಳಿಂದಾಗಿ ವೈವಿಧ್ಯತೆ

ಸುಮಾರು ಶೇ 10ಕ್ಕಿಂತಲೂ ಹೆಚ್ಚಿನ ಜಾಗತಿಕ ಜನಸಂಖ್ಯೆ ಒಂದಲ್ಲ ಒಂದು ರೀತಿಯ ಅಸಾಮರ್ಥ್ಯವನ್ನು ಹೊಂದಿರುವ ಪರಿಸ್ಥಿತಿಯಲ್ಲಿ, ಅವರ ಅಗತ್ಯಗಳನ್ನು ಸಮಾಜ ಪೂರೈಸಿದೆಯೇ ಇಲ್ಲವೇ ಎಂಬುದನ್ನು ಗುರುತಿಸುವುದು ಅತ್ಯಂತ ಗಂಭೀರವಾದ ವಿಷಯ ಎಂದು ಅಸಾಮರ್ಥ್ಯವಿರುವವರ ಹಕ್ಕುಗಳ ಸಮಾಲೋಚನೆ, 2006 ಗುರುತಿಸುತ್ತದೆ. ಮಾನವ ಹಕ್ಕುಗಳನ್ನು ಕುರಿತ ಅಂತರರಾಷ್ಟ್ರೀಯ ಒಪ್ಪಂದ ಮತ್ತು ಶಾಸನಗಳು ಅಸಾಮರ್ಥ್ಯವಿರುವವರನ್ನೂ ಒಳಗೊಂಡಂತೆ ಎಲ್ಲರಿಗೂ ಶಿಕ್ಷಣದ ಹಕ್ಕು ಮತ್ತು ಉದ್ಯೋಗದ ಹಕ್ಕುಗಳನ್ನೊಳಗೊಂಡಂತೆ ಕೆಲವು ಪ್ರಾವಧಾನಗಳ ಭರವಸೆಯನ್ನಿತ್ತಿವೆ. ಉದಾಹರಣೆಗೆ, ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ 26ನೇ ವಿಧಿಯು, ಮಾನವನ ವ್ಯಕ್ತಿತ್ವವನ್ನು ಬೆಳೆಸುವಲ್ಲಿ ಒಂದು ಮಾರ್ಗವಾಗಿ ಶಿಕ್ಷಣದ ಗಮನಾರ್ಹ ಪಾತ್ರವನ್ನು ಗುರುತಿಸುತ್ತದೆಯಲ್ಲದೆ,ಎಲ್ಲರಿಗೂ ಶಿಕ್ಷಣದ ಹಕ್ಕು ಇರುವುದು ಮಾತ್ರವಲ್ಲದೆ, ಪ್ರಾಥಮಿಕ ಶಿಕ್ಷಣವು ಉಚಿತವೂ ಕಡ್ಡಾಯವೂ ಆಗಿರಬೇಕು ಎಂದು ಹೇಳುತ್ತದೆ . ಮತ್ತೂ ಮುಂದೆ ಹೋಗಿ, ಈ ದಾಖಲೆ ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣವನ್ನು ನೀಡುವುದರ ಪ್ರಾಮುಖ್ಯತೆಯನ್ನು ಒತ್ತಿಹೇಳುತ್ತಾ ತಮ್ಮ ಮಕ್ಕಳಿಗೆ ಯಾವ ರೀತಿಯ ಶಿಕ್ಷಣವನ್ನು ನೀಡಬೇಕು ಎಂಬ ಹಕ್ಕನ್ನು ಪೋಷಕರಿಗೆ ಒದಗಿಸಿ, ಸಾಧನೆಯ ಆಧಾರದ ಮೇಲೆ ಉನ್ನತ ಶಿಕ್ಷಣಕ್ಕೂ ಅವಕಾಶ ಮಾಡಿಕೊಡುತ್ತದೆ. ಈಗ ಅಸ್ತಿತ್ವದಲ್ಲಿರುವ ಕಾನೂನಾತ್ಮಕ ಚೌಕಟ್ಟಿನಲ್ಲಿ ಅಸಾಮರ್ಥ್ಯವಿರುವವರಿಗೆ ಮೂಲಭೂತ ಮಾನವಹಕ್ಕುಗಳು ಇರುವುದಾದರೂ ಅವುಗಳನ್ನು ಅನ್ವಯಿಸುವಲ್ಲಿ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಅಂಶಗಳು ಅಡ್ಡಿಯೊಡ್ಡುತ್ತಿವೆ. ಅಸಾಮರ್ಥ್ಯವಿರುವವರ ಶಾಸನಗಳ ಅಂತರರಾಷ್ಟ್ರೀಯ ಕಾನೂನು ಚೌಕಟ್ಟಿನ ಪೀಠಿಕಾ ಭಾಗದಲ್ಲಿ , ಸಂಯುಕ್ತ ರಾಷ್ಟ್ರಗಳು, ಸಾಮಾಜಿಕ ಹಾಗೂ ಸಾಂಸ್ಕೃತಿಕ ರೂಢಿಗಳಿಂದಾಗಿ ಸಮಾಜದಲ್ಲಿ ಅಸಾಮರ್ಥ್ಯವಿರುವವರ ಸಂಪೂರ್ಣ ಭಾಗವಹಿಕೆಯನ್ನು ಖಚಿತಪಡಿಸಿಕೊಳ್ಳುವಲ್ಲಿನ ಸವಾಲುಗಳನ್ನು ಗುರುತಿಸಿದೆ. ಅಷ್ಟೇ ಅಲ್ಲದೆ, ಸಂಯುಕ್ತ ರಾಷ್ಟ್ರಗಳ ಅಭಿವೃದ್ಧಿ ಕಾರ್ಯಕ್ರಮ ಗುರುತಿಸಿರುವಂತೆ ಶೇ80ರಷ್ಟು ಅಸಾಮರ್ಥ್ಯವಿರುವವರು ಪ್ರಗತಿಪರ ರಾಷ್ಟ್ರಗಳಲ್ಲೇ ಇದ್ದಾರೆ ಎಂಬ ಮಾಹಿತಿಯನ್ನನುಸರಿಸಿ, ಈ ಅಭಿವೃದ್ಧಿ ಮಟ್ಟವು ಅಸಾಮರ್ಥ್ಯವಿರುವವರನ್ನು ಈ ದೇಶಗಳಲ್ಲಿ ಹೇಗೆ ನೋಡಿಕೊಳ್ಳಲಾಗುತ್ತಿದೆ ಎಂಬುದನ್ನೂ ಅವರ ಅಗತ್ಯಗಳನ್ನು ಪೂರೈಸಲು ಯಾವ ವಿಧಾನಗಳನ್ನು ಅಳವಡಿಸಿಕೊಳ್ಳಲಾಗುತ್ತಿದೆ ಎಂಬುದನ್ನೂ ತೋರಿಸುತ್ತದೆ ಎಂದೂ ಅಭಿಪ್ರಾಯ ಪಟ್ಟಿದೆ.

ಅಸಾಮರ್ಥ್ಯವಿರುವವರಾಗಲೀ ಇಲ್ಲದಿರುವವರಾಗಲೀ ಮಕ್ಕಳ ಕಲಿಕೆಯಲ್ಲಿ ಪೋಷಕರ ಆರ್ಥಿಕ ಸುಭದ್ರತೆ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಈ ಸುಭದ್ರತೆಯೇ ಮಕ್ಕಳಿಗೆ ಗುಣಮಟ್ಟದ ಬದುಕನ್ನು ಕೊಡುವಲ್ಲಿಯೂ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಸಮಯಕ್ಕೆ ಸರಿಯಾಗಿ ಶುಲ್ಕ ಪಾವತಿಸುವುದು, ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲ ಸಾಮಗ್ರಿ/ಉಪಕರಣಗಳನ್ನು ಒದಗಿಸುವುದು, ಅವರ ಜೀವನದ ಇತರ ಆವಶ್ಯಕತೆಗಳನ್ನು ಪೂರೈಸುವುದು ಇವೆಲ್ಲದರಲ್ಲೂ ಆರ್ಥಿಕತೆಯ ಪಾತ್ರ ಇದ್ದೇ ಇದೆ. ಪೋಷಕರು ಸಮಯಕ್ಕೆ ಸರಿಯಾಗಿ ಶಾಲೆಗೆ ಮತ್ತು ಇತರ ಶೈಕ್ಷಣಿಕ ಅಗತ್ಯಗಳಿಗೆ ಹಣ ಪಾವತಿಸುವುದು, ಅಗತ್ಯವಸ್ತುಗಳನ್ನು ಒದಗಿಸುವುದು ಇದು ಸಾಧ್ಯವಾದರೆ ಶಿಕ್ಷಣ ಅಡೆತಡೆ ಇಲ್ಲದೆ ಸಾಗುತ್ತದೆ. ಇದು ಶಾಲಾಮಟ್ಟದಲ್ಲೂ ಗುಣಮಟ್ಟದ ಶಿಕ್ಷಣವನ್ನು ನೀಡಲು ಸಹಕಾರಿಯಾಗುತ್ತದೆ. ವಿದ್ಯಾರ್ಥಿಗಳ ಉತ್ತಮ ಸಾಧನೆಗೆ ಪೂರಕವಾಗುತ್ತದೆ.

ಈ ಆರ್ಥಿಕ ಭದ್ರತೆ ಇಲ್ಲವಾದರೆ ಪೋಷಕರಿಗೆ ಈ ಅಗತ್ಯಗಳನ್ನು ಪೂರೈಸಲು ಸಾಧ್ಯವಿಲ್ಲದಾಗಿ, ಆಸಕ್ತಿ ಇಲ್ಲವಾಗಿ, ಮಕ್ಕಳನ್ನು ಶಾಲೆಗೆ ದೂಡುವುದು ಮಾತ್ರ ಸಾಧ್ಯವಾಗುತ್ತದೆ. ಇದರಿಂದ ಮಕ್ಕಳು ಹಲವಾರು ಕಾರಣಗಳನ್ನು ಕೊಟ್ಟು ಮನೆಯಲ್ಲೇ ಉಳಿಯಲು ಪ್ರಯತ್ನಿಸುತ್ತಾರೆ. ಅವರಿಗೆ ತರಗತಿಯಲ್ಲಿನ ಪಾಠಗಳು ತಪ್ಪಿ ಹೋಗುತ್ತವೆ, ಸಾಧನೆ ಕಳಪೆಯಾಗುತ್ತದೆ. ಶಾಲೆಯ ಒಟ್ಟು ಫಲಿತಾಂಶ ಕಡಿಮೆಯಾಗುತ್ತದೆ.

ಈ ರೀತಿಯ ಮಕ್ಕಳು ನಮ್ಮ ಶಾಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲೇ ಇಂದೂ ಇದ್ದಾರೆ. ಇವರನ್ನು ಅಧ್ಯಾಪಕರು ಹೆಚ್ಚಿನ ತಿಳಿವಳಿಕೆ ಮತ್ತು ಹೊಂದಾಣಿಕೆಯೊಂದಿಗೆ ಅರ್ಥಮಾಡಿಕೊಳ್ಳಬೇಕು.ಬಡತನದಲ್ಲಿ ಬದುಕುವ ಮಕ್ಕಳಿಗೆ ಅಧ್ಯಾಪಕರು ಮತ್ತು ಪರಿಸರದೊಡನೆ ಹೆಚ್ಚು ನಂಬಲರ್ಹವಾದ, ಗಟ್ಟಿಯಾದ, ಸುಭದ್ರವೂ ಸುರಕ್ಷಿತವೂ ಆದ ಸಂಬಂಧಗಳ ಅಗತ್ಯ ಇರುತ್ತದೆ. ಅಧ್ಯಾಪಕರೇ ಮಕ್ಕಳಿಗೆ ಮೊದಲ ಮನವರಿಕೆದಾರರು. ಶಾಲೆ ಅಥವಾ ಶಿಕ್ಷಣದ ಪ್ರಾಮುಖ್ಯತೆ, ಅದರ ಪ್ರಯೋಜನಗಳು, ಬಾವೀ ಜೀವನದಲ್ಲಿ ಅದರ ಪ್ರಭಾವ ಇವುಗಳನ್ನು ತಿಳಿಸಲು ಅಧ್ಯಾಪಕರಿಗೆ ಮಾತ್ರ ಸದವಕಾಶ ಮತ್ತು ಸಾಧ್ಯತೆ. ಶಾಲೆಯ ಅಪೇಕ್ಷೆಗಳಿಗನುಗುಣವಾಗಿ ವಿದ್ಯಾರ್ಥಿಗಳನ್ನು ತನ್ನೊಡನೆ ಒಯ್ದು ಪ್ರಯಾಣಿಸುವ ನಾಯಕ ಅಧ್ಯಾಪಕ ಮಾತ್ರ. ಹಾಗಾಗಿ ದಡ ಸೇರಿಸುವವರೂ ಅವರೇ. ಬಡತನದಲ್ಲಿ ಬೆಳೆದ ಮಕ್ಕಳು ಶಾಲೆಗೆ ಯಾವುದೇ ತಯಾರಿ ಇಲ್ಲದೆ ಬರುತ್ತಾರೆ. ಅದು ಶಾಲೆಯ ವರ್ತನೆಗೆ ಸಂಬಂಧಿಸಿದದ್ದಾಗಿರಬಹುದು, ಇಲ್ಲವೇ ಕಲಿಕೆಗೆ ಪೂರಕವಾಗಿದ್ದಿರಬಹುದು.ಅವರ ನಡೆವಳಿಕೆಗಳು ಇತರರಿಗಿಂತ ಸ್ವಲ್ಪ ಭಿನ್ನವಾಗಿರಬಹುದು. ತಮಗೆ ಅಪಾಯ ಒದಗಬಹುದೆಂಬ ಭಯದಿಂದ ಕೆಲವೊಮ್ಮೆ ಭ್ರಮೆಯಲ್ಲೇ ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಹಿನ್ನೆಲೆಯಲ್ಲಿ ದೈಹಿಕವಾಗಿಯೂ ಭಿನ್ನ ವರ್ತನೆಗಳನ್ನು ತೋರಿಸಬಹುದು. ಇವರು ಅಶಾಬ್ದಿಕ ಸಂವಹನಕ್ಕೆ ಹೆಚ್ಚು ಸಂವೇದನಾಶೀಲರಾಗಿರುತ್ತಾರೆ. ಶಾಬ್ದಿಕ ನಿರ್ದೇಶನಗಳನ್ನು ವಿವರಣೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಇವರಿಗೆ ಸ್ವಲ್ಪ ಕಷ್ಟವಾಗುತ್ತದೆ. ಅಧ್ಯಾಪಕರು ಅಪೇಕ್ಷಿಸಿದುದನ್ನು ಮಾಡಲು ಇವರಿಗೆ ಮೊದಲೇ ಮೂಲಭೂತವಾದ ವಿವರಣೆಗಳನ್ನು ಕೊಟ್ಟು ತಿಳಿಸಬೇಕಾಗುತ್ತದೆ. ತರಗತಿಗೆ ಬಂದ ಕೂಡಲೆ ಏನು ಮಾಡಬೇಕು, ಹೊರಗೆ ಪ್ರಾರ್ಥನೆಗೆ ಹೋಗುವಾಗ, ಆಡಲು ಹೋಗುವಾಗ ಹೇಗೆ ನಡೆದುಕೊಂಡು ಹೋಗಬೇಕು, ಕೈಕಾಲುಗಳನ್ನು ಹೇಗೆ ಬೀಸಬೇಕು, ಅಧ್ಯಾಪಕರೊಂದಿಗೆ ಇತರರೊಂದಿಗೆ ಹೇಗೆ ಮಾತನಾಡಬೇಕು, ಇದಕ್ಕೆ ಸಂಬಂಧಪಟ್ಟ ಧ್ವನಿ, ವಿನಯ, ಮಾತಿನ ರೀತಿ ಹೀಗೆ ನಿರ್ದಿಷ್ಟ ವಿವರಗಳೊಂದಿಗೆ ಹೇಳಿಕೊಡಬೇಕು. ಏಕೆಂದರೆ ಇವರು ಇದೇ ರೀತಿಯ ಇತರ ಔಪಚಾರಿಕ ವಾತಾವರಣಗಳಿಗೆ ತೆರೆದುಕೊಂಡಿರುವುದಿಲ್ಲ. ಅವರು ಅಧ್ಯಾಪಕರು ಹೇಳಿದಂತೆ ಮಾಡಿದಾಗ 'ಗುಡ್, ಭೇಷ್' ಇತ್ಯಾದಿ ಪ್ರೋತ್ಸಾಹಕ ಮಾತುಗಳಿಂದ ಅವರನ್ನು ಹುರಿದುಂಬಿಸಬೇಕು. ಇತರರು ಅವರನ್ನು

ಯಾವುದೇ ಕಾರಣಕ್ಕೆ ಗೇಲಿ ಮಾಡದಂತೆ ಎಚ್ಚರಿಕೆ ವಹಿಸಬೇಕು. ಅವರ ಘನತೆಯನ್ನು ಕಾಪಾಡುವುದರಿಂದ ಸ್ವ–ರಕ್ಷಣೆಗೆ ಅವರು ವಿಶೇಷ ಪ್ರಯತ್ನ ಮಾಡುವುದು ತಪ್ಪಿ, ಅಧ್ಯಾಪಕರನ್ನೂ ಒಳಗೊಂಡಂತೆ ಸುತ್ತಲಿರುವವರೊಡನೆ ವಿಶ್ವಾಸ ಮೂಡುತ್ತದೆ. ಬಡತನದಿಂದ ಬರುವ ಮಕ್ಕಳೊಂದಿಗೆ ಕೆಳಗಿನ ಸೂಚನೆಗಳು ಗಮನಾರ್ಹ:

- ಅವರಿಗೆ ಹೆಚ್ಚುವರಿ ಸಾಮಗ್ರಿಗಳು ಒದಗುವಂತೆ ನೋಡಿಕೊಳ್ಳಬೇಕು;
- ಯಾವುದೇ ಕೆಲಸವನ್ನು, ಘಟನೆಯನ್ನು ಹಂತ ಹಂತವಾಗಿ ಹೇಳಿಕೊಡಬೇಕು; ಪ್ರತಿಯೊಂದು ಹಂತದಲ್ಲೂ ಪ್ರಾತ್ಯಕ್ಷಿಕೆ ಒಳ್ಳೆಯದು;
- ಮಕ್ಕಳಿಗೆ ಮಾರ್ಗದರ್ಶಕರ ಅಗತ್ಯ ಇರುವುದರಿಂದ, ಏನು ಮಾಡಬೇಕು, ಹೇಗೆ ಮಾಡಬೇಕು, ಏಕೆ ಹಾಗೆ ಮಾಡಬೇಕು ಎಂಬುದನ್ನು ಪ್ರತಿ ಹಂತದಲ್ಲೂ ತಿಳಿಸಬೇಕು;
- ಅವರು ಸಮಸ್ಯೆಗಳೊಂದಿಗೆ ಶಾಲೆಗೆ ಬರುವುದರಿಂದ, ಆ ಸಮಸ್ಯೆಗಳು ತಕ್ಷಣವೇ ಪರಿಹರಿಸಬೇಕಾದುದಲ್ಲದಿದ್ದರೆ, ಅದರ ಕುರಿತು ತಲೆ ಕೆಡಿಸಿಕೊಳ್ಳಬಾರದೆಂದೂ ಅದರ ಪರಿಹಾರಕ್ಕೆ ಮಾರ್ಗಗಳಿವೆ, ತಮ್ಮ ಸಹಾಯವೂ ಇದೆ ಎಂದು ಭರವಸೆ ಕೊಡಬೇಕು;
- ಸಮಸ್ಯೆಗಳ ಪರಿಹಾರಕ್ಕೆ ಸೂಕ್ತವಾದವರನ್ನು ಸೂಚಿಸಬೇಕು;
- ಕಲಿಕೆಯಲ್ಲಿ ಭಾವನೆಗಳು ಅಡ್ಡಿ ಬರುವುದರಿಂದ ತೊಂದರೆ ಕೊಡುತ್ತಿರುವ ಘಟನೆಗಳ ಕುರಿತು ಬರೆದುಬಿಡಲು ಹೇಳಬೇಕು; ಅದನ್ನು ಮೌಲ್ಯಮಾಪನ ಮಾಡುವುದು ಬೇಡ;
- ಆತ್ಮ ವಿಶ್ವಾಸ, ಆತ್ಮ ಗೌರವಗಳನ್ನು ಬೆಳೆಸಲು ಧನಾತ್ಮಕ ಸ್ವ ಸಂಭಾಷಣೆಯನ್ನು ಪ್ರೋತ್ಸಾಹಿಸಬಹುದು;
- ಇತರರಿಗೆ ಸಾಧ್ಯವಾದಾಗ ಸಹಾಯಮಾಡಲು ಹೇಳಿಕೊಡಬೇಕು;
- ಪ್ರತಿ ಸನ್ನಿವೇಶದಲ್ಲಿ ಗುರಿಯನ್ನು ನಿರ್ದೇಶಿಸಿಕೊಳ್ಳಲು ಕಲಿಸಬೇಕು;
- ಮಕ್ಕಳ ಪೋಷಕರನ್ನು ಭೇಟಿಯಾದಾಗ ಮಗುವಿನ ಕುರಿತು ಧನಾತ್ಮಕವಾದ ಅಂಶವನ್ನು ಹೆಚ್ಚು ಹೇಳಿ, ಮತ್ತೂ ಉತ್ತಮವಾಗಲು ಹೀಗೆ ಮಾಡಿದರೆ ಒಳ್ಳೆಯದು ಎಂದು ಹೇಳುತ್ತಾ ಮಗು ಅಳವಡಿಸಿಕೊಳ್ಳಬೇಕಾದ ಇತರ ವರ್ತನೆಗಳನ್ನು ಹೇಳಬೇಕು. ಮಕ್ಕಳ ಕುರಿತು ಪೋಷಕರು ಏನು ಮಾಡಲಾಗುವುದಿಲ್ಲವೋ ಅದನ್ನು ಅವರಿಗೆ ಹೇಳದೆ ಶಾಲೆಯೇ ಪರಿಹರಿಸಬೇಕು.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 2

ಆರ್ಥಿಕ ಬೆಂಬಲ ಕಡಿಮೆ ಇರುವ ಮಕ್ಕಳಿಗೆ ಸಂಬಂಧಿಸಿದಂತೆ ಕೆಳಗಿನವುಗಳಲ್ಲಿ ಯಾವ ಮಾತುಗಳನ್ನು ಹೇಳಬಹುದು ಎಂದು ಗುರುತಿಸಿ:

1. "ನಿನ್ನ ಕೆಲಸ ನಿಧಾನವಾದರೂ ಚೆನ್ನಾಗಿ ಮಾಡುತ್ತೀಯ."
2. "ನೀನು ತಡವಾಗಿ ಬರಲು ಏನೋ ಕಾರಣವಿದೆ ಎಂದು ನನಗೆ ಗೊತ್ತು; ಅದರ ಕುರಿತು ಆಮೇಲೆ ನನ್ನ ಬಳಿ ಬಂದು ಮಾತನಾಡು."
3. "ಶಾಲೆಗೆ ಕೊಡಬೇಕಾದ ಹಣ ತರಲಾಗದಿದ್ದರೆ ನಾಳೆ ಶಾಲೆಗೆ ಬರುವುದು ಬೇಡ."

4. “ಇಷ್ಟು ಕಡಿಮೆ ಹಣವನ್ನು ಕೊಡಲು ಯಾಕೆ ನಿನಗೆ ಆಗುವುದಿಲ್ಲ?”

5. “ನಿನ್ನ ಬರೆವಣಿಗೆ ಚೆನ್ನಾಗಿದೆ ; ಆದರೆ ಅಚ್ಚುಕಟ್ಟಾಗಿ ಬರೆಯಬೇಕು.”

6. “ನಿಮ್ಮ ಮನೆಯಲ್ಲಿ ನೀನೊಬ್ಬನೇ ಶಾಲೆಗೆ ಬರುವುದಲ್ಲ; ಒಂದು ಕಾಪಿ ಪುಸ್ತಕ ತೆಗೆದುಕೊಡಲಾಗದೇ?”

7. “ನೀನೂ ಬೇರೆಯವರಂತೆ ನೀಟಾಗಿ ಬರಬೇಕು.”

8. “ಹರಿದ ಬಟ್ಟೆಯನ್ನು ನೀನೇ ಹೊಲೆದು ಹಾಕಿಕೊಂಡು ಬರಬಹುದಲ್ಲ?”

9. “ಅವನನ್ನು ನೋಡು, ಅದೆಷ್ಟು ನೀಟಾಗಿ ಕೂದಲು ಬಾಚಿಕೊಂಡು ಬಂದಿದ್ದಾನೆ; ನಿನ್ನ ಕೂದಲು ಹೇಗಿದೆ ಎಂದು ನೋಡಿದ್ದೀಯಾ?”

10. “ನೀವು ಅವನ ತಂದೆಯೇ? ಈ ಮಗನನ್ನು ಪಡೆಯಲು ನೀವು ಪುಣ್ಯ ಮಾಡಿದ್ದೀರಿ.”

11. “ನಿನ್ನ ಧ್ವನಿ ಗಟ್ಟಿಯಾಗಿ ಚೆನ್ನಾಗಿದೆ; ಸ್ವಲ್ಪ ಮೃದುವಾಗಿ ಮಾತನಾಡಿದರೆ ಮತ್ತೂ ಒಳ್ಳೆಯದು.”

## 2.3.4. ಸಾರಾಂಶಿಸೋಣ

- ವಿದ್ಯಾರ್ಥಿಗಳ ವೈವಿಧ್ಯತೆಯ ಅಥವಾ ವ್ಯತ್ಯಾಸಗಳನ್ನು ಗುರುತಿಸಿ ಅದರ ಆಧಾರದ ಮೇಲೆ ಪಾಠಗಳನ್ನು ಯೋಜಿಸಿಕೊಳ್ಳುವ ವಿಶಿಷ್ಟವಾದ ಜವಾಬ್ದಾರಿ ಅಧ್ಯಾಪಕರಿಗೆ ಇದೆ.
- ನಮ್ಮೊಳಗಿನ ವ್ಯತ್ಯಾಸಗಳನ್ನು ಗುರುತಿಸುವುದು, ಮಕ್ಕಳನ್ನು ಸಮಾನವಾಗಿ ನ್ಯಾಯಯುತವಾಗಿ ಪರಿಗಣಿಸುವುದರ ಭಾಗವೇ.
- ಅಧ್ಯಾಪಕರು ಮಕ್ಕಳ ಸಾಂಸ್ಕೃತಿಕ ಕಟ್ಟಡದ ಹಂದರವನ್ನು ಪರಿಗಣಿಸಿ ಆ ಇಟ್ಟಿಗೆಗಳ ಮೇಲೆ ಕಲಿಕೆಯ ಹೊಸ ಇಟ್ಟಿಗೆಗಳನ್ನು ಜೋಡಿಸಿಡಬೇಕು.
- ವಿಶೇಷ ಅಗತ್ಯಗಳುಳ್ಳ ಮಕ್ಕಳನ್ನೂ ಸೇರಿದಂತೆ ಎಲ್ಲ ಮಕ್ಕಳೂ ಗುಣಮಟ್ಟದ ಶಿಕ್ಷಣವನ್ನು ಪಡೆಯುವ, ಬದುಕಿನಲ್ಲಿ ಯಶಸ್ವಿಯಾಗುವ ಅವಕಾಶಗಳನ್ನು ಪಡೆಯುವ ಹಕ್ಕುಗಳಿಗೆ ಸಮಾನವಾಗಿ ಭಾಜನರು.
- ತರಗತಿಯಲ್ಲಿ ವೈವಿಧ್ಯತೆಯನ್ನು ಗುರುತಿಸಿಕೊಳ್ಳುವುದು ಮಕ್ಕಳ ಕಲಿಯಲು ಹಾಗೂ ಭಿನ್ನವಾಗಿ ಆಲೋಚಿಸಲು ಸಹಾಯಕವಾಗುವುದಲ್ಲದೆ, ನೈಜ ಪ್ರಪಂಚಕ್ಕೆ ಅವರನ್ನು ಸಿದ್ಧಗೊಳಿಸಲು ಮತ್ತು ಮುಂದೆ ಕಾರ್ಯಕ್ಷೇತ್ರದಲ್ಲಿ ಮತ್ತು ದೈನಂದಿನ ಬದುಕಿನಲ್ಲಿ ವಿವಿಧ ಸಂಸ್ಕೃತಿಯ ಜನರೊಂದಿಗೆ ವ್ಯವಹರಿಸಲು ಸಹಾಯಕವಾಗುತ್ತದೆ.
- ಇಡೀ ತರಗತಿ, ಸಮುದಾಯ ಮತ್ತು ನಗರಗಳು ವೈವಿಧ್ಯತೆ ಮತ್ತು ಅಂತರ್ಗತತೆಯ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳಲು ಯಾವಾಗ ಪ್ರಾರಂಭಿಸುತ್ತವೆಯೋ ಆಗ ನಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಸಿಗುವುದು ಸಾಧ್ಯ,

- ಈಗ ಅಸ್ತಿತ್ವದಲ್ಲಿರುವ ಕಾನೂನಾತ್ಮಕ ಚೌಕಟ್ಟಿನಲ್ಲಿ ಅಸಾಮರ್ಥ್ಯವಿರುವವರಿಗೆ ಮೂಲಭೂತ ಮಾನವಹಕ್ಕುಗಳು ಇರುವುದಾದರೂ ಅವುಗಳನ್ನು ಅನ್ವಯಿಸುವಲ್ಲಿ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಅಂಶಗಳು ಅಡ್ಡಿಯೊಡ್ಡುತ್ತಿವೆ.
- ಅಸಾಮರ್ಥ್ಯವಿರುವವರಾಗಲೀ ಇಲ್ಲದಿರುವವರಾಗಲೀ ಮಕ್ಕಳ ಕಲಿಕೆಯಲ್ಲಿ ಪೋಷಕರ ಆರ್ಥಿಕ ಸುಭದ್ರತೆ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಈ ಸುಭದ್ರತೆಯೇ ಮಕ್ಕಳಿಗೆ ಗುಣಮಟ್ಟದ ಬದುಕನ್ನು ಕೊಡುವಲ್ಲಿಯೂ ಪ್ರಮುಖ ಪಾತ್ರವನ್ನು ವಹಿಸುತ್ತದೆ.
- ಆರ್ಥಿಕ ಭದ್ರತೆ ಇಲ್ಲವಾದರೆ ಪೋಷಕರಿಗೆ ಈ ಅಗತ್ಯಗಳನ್ನು ಪೂರೈಸಲು ಸಾಧ್ಯವಿಲ್ಲದಾಗಿ, ಆಸಕ್ತಿ ಇಲ್ಲವಾಗಿ, ಮಕ್ಕಳನ್ನು ಶಾಲೆಗೆ ದೂಡುವುದು ಮಾತ್ರ ಸಾಧ್ಯವಾಗುತ್ತದೆ. ಇದರಿಂದ ಮಕ್ಕಳು ಹಲವಾರು ಕಾರಣಗಳನ್ನು ಕೊಟ್ಟು ಮನೆಯಲ್ಲೇ ಉಳಿಯಲು ಪ್ರಯತ್ನಿಸುತ್ತಾರೆ.
- ಈ ರೀತಿಯ ಮಕ್ಕಳು ನಮ್ಮ ಶಾಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲೇ ಇಂದೂ ಇದ್ದಾರೆ. ಇವರನ್ನು ಅಧ್ಯಾಪಕರು ಹೆಚ್ಚಿನ ತಿಳಿವಳಿಕೆ ಮತ್ತು ಮತ್ತು ಹೊಂದಾಣಿಕೆಯೊಂದಿಗೆ ಅರ್ಥಮಾಡಿಕೊಳ್ಳಬೇಕು.

## 2.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1 ಮತ್ತು 2

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 1

6 ಮತ್ತು 8 ಬಿಟ್ಟು ಉಳಿದವು ಸರಿಯಾದ ಉತ್ತರ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 2

1,2,5,10,11

## 2.2.6. ಘಟಕಾಂತ್ಯ ಅಭ್ಯಾಸಗಳು

1. ಶಾಲಾ ಸನ್ನಿವೇಶದಲ್ಲಿ ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಹಿಂದುಳಿದ ಮಕ್ಕಳ ಸಮಸ್ಯೆಗಳನ್ನೂ ಅವುಗಳನ್ನು ಶಾಲಾ ಸಿಬ್ಬಂದಿ ಹೇಗೆ ಪರಿಹರಿಸಬಹುದೆಂಬುದನ್ನೂ ವಿವರಿಸಿ.
2. ಆರ್ಥಿಕವಾಗಿ ಹಿಂದುಳಿದ ಮಕ್ಕಳ ಶಿಕ್ಷಣ ಪರಿಣಾಮಕಾರಿಯಾಗಲು ಒಂದು ಕಾರ್ಯಯೋಜನೆಯನ್ನು ರೂಪಿಸಿ ಅದನ್ನು ವಿವರಿಸಿ.

## 2.2.7. ಪರಾಮರ್ಶನ ಸೂಚಿ

1. http://theconversation.com/diversity-in-the-classroom-means-children-develop-differently Importance of Diversity in the Classroom- The Society forDiversity
2. http://www.societyfordiversity.org/importance-of-diversity-in-the-classroom/ 4 Reasons WhyClassroomsNeedDiversityEducation -
3. https://www.theedadvocate.org/4-reasons-classrooms-need-diversity-education/
4. Valmiki, A. (2003). Towards Culturally Inclusive Education: Preparing Culturally Responsible Teachers to Engage in Culturally Specific Pedagogy. Paper presented in

the National Seminar on Inclusive Education Practices in School-, Bangalore, India, February 26-27, 2003.

5. Werner, D. Disabled Village Children. Berkeley, CA: The Hesperian Foundation.

6. Wolf, G. (1995). Landscapes: Children's Voices. Madras: Tara Publishing Group.

7. Cultureand SocietyDefined- CliffsNotes
https://www.cliffsnotes.com/study-guides/sociology/culture-and-societies/culture-and-society-defined

8. Culture| AmericanSociologicalAssociation
http://www.asanet.org/topics/culture

9. What IsCulture? | Introduction toSociology- Lumen Learning
https://courses.lumenlearning.com/atd-bmcc-sociology/

10. culture definition: FreeSociology Dictionary:culture defined
https://sociologydictionary.org/culture/Sociological definition of culture. ... Free online sociology dictionary & OER. ... culture

11. What is the definition of cultureinsociology? - Quora
https://www.quora.com/What-is-the-definition-of-culture-in-sociology

****************

# ಬ್ಲಾಕ್–2 : ಕಲಿಯುವವರ ವೈವಿಧ್ಯತೆಯನ್ನು ಚರ್ಚಿಸುವುದು ಮತ್ತು ಅರ್ಥಮಾಡಿಕೊಳ್ಳುವುದು

## ಘಟಕ–4 ಪಠ್ಯಕ್ರಮ ವಿಚಾರಗಳು

### ಘಟಕದ ರಚನೆ


2.4.1 ಕಲಿಕಾ ಉದ್ದೇಶಗಳು

2.4.2. ಪೀಠಿಕೆ

2.4.3 ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.4.3.1. ಪಠ್ಯಕ್ರಮದ ಪರಿಕಲ್ಪನೆ ಮತ್ತು ವಿಚಾರಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 1

2.4.3.2. ವಿಶೇಷ ಅಗತ್ಯವುಳ್ಳ ಮಕ್ಕಳ ಪಠ್ಯಕ್ರಮ ವಿಚಾರಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 2

2.4.4. ಸಾರಾಂಶಿಸೋಣ

2.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1 ಮತ್ತು 2

2.4.6. ಘಟಕಾಂತ್ಯ ಅಭ್ಯಾಸಗಳು

2.4.7. ಪರಾಮರ್ಶನ ಸೂಚಿ


### 2.4.1 ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಪಠ್ಯಕ್ರಮದ ಪರಿಕಲ್ಪನೆಯನ್ನು ಸ್ಪಷ್ಟಪಡಿಸುವರು;
- ಪಠ್ಯಕ್ರಮಕ್ಕೆ ಸಂಬಂಧಿಸಿದ ಸಾಮಾನ್ಯ ಮತ್ತು ನಿರ್ದಿಷ್ಟ ಅಂಶಗಳನ್ನು ವಿವರಿಸುವರು;
- ವಿಶೇಷ ಅಗತ್ಯವುಳ್ಳ ಮಕ್ಕಳ ಪಠ್ಯಕ್ರಮ ವಿಚಾರಗಳನ್ನು ಗುರುತಿಸುವರು;
- ಸಾಮಾನ್ಯ ಮಕ್ಕಳ ಮತ್ತು ವಿಶೇಷ ಮಕ್ಕಳ ಪಠ್ಯಕ್ರಮಗಳಲ್ಲಿನ ವ್ಯತ್ಯಾಸಗಳೇನಿರಬೇಕು ಎಂಬುದನ್ನು ವಿಶ್ಲೇಷಿಸುವರು; ಮತ್ತು
- ವಿಶೇಷ ಮಕ್ಕಳ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಆಗಬೇಕಾದ ಮಾರ್ಪಾಡುಗಳನ್ನು ವಿವರಿಸುವರು.

### 2.4.2. ಪೀಠಿಕೆ

ವಿಶೇಷ ಅಗತ್ಯವಿರುವ ಮಕ್ಕಳಿಗೆ ಶಿಕ್ಷಣ ನೀಡುವುದು ಕೆಲವೊಮ್ಮೆ ಕಷ್ಟಕರವಾದ ಕೆಲಸ ಎಂಬುದು ನಿಜವಾದ ಸಂಗತಿ. ಆದರೆ ಆ ಶಿಕ್ಷಣದ ಫಲ ನೀಡುವ ಪ್ರಯೋಜನಕ್ಕೆ ಎಲ್ಲೆ ಇಲ್ಲ. ಈ ಮಕ್ಕಳಿಗೆ ಶಿಕ್ಷಣ

ನೀಡಲು, ಅವರು ಏನು ಸಾಧಿಸಬಲ್ಲರು ಎಂಬುದರ ಅರಿವು ಅಗತ್ಯ. ಪ್ರತಿಯೊಂದು ಮಗುವೂ ಅನನ್ಯವಾದುದು. ಹಾಗಾಗಿ ಪ್ರತಿ ಮಗುವನ್ನೂ ವಿಶೇಷವಾಗಿ ತಿಳಿದುಕೊಳ್ಳಲು ಸಾಕಷ್ಟು ಸಮಯ ವ್ಯಯಮಾಡಬೇಕು. ಇದು ಯಾವ ಮಾರ್ಗದಲ್ಲಿ ಆ ನಿರ್ದಿಷ್ಟ ಮಗುವಿಗೆ ಶಿಕ್ಷಣ ನೀಡಬೇಕು ಎಂಬುದನ್ನು ಕುರಿತಂತೆ ವಿಶೇಷ ಹೊಳಹುಗಳನ್ನು ಹೊಮ್ಮಿಸುತ್ತದೆ.

ಅಸಾಮರ್ಥ್ಯವುಳ್ಳ ಮಕ್ಕಳು ನೀರಿನ ಹೊರಗೆ ಬಿಟ್ಟ ಮೀನಿನಂತೆ ಎಂಬ ಅನುಭವದಲ್ಲಿರುತ್ತಾರೆ. ಅವರಿಗೆ ತಾವು ತರಗತಿಯೊಳಗೆ ಇರಬೇಕಾದವರಲ್ಲ ಎಂಬ ಭಾವನೆ ಆಗಾಗ್ಗೆ ಬರುತ್ತಿರುತ್ತದೆ. ಅವರಿಗೆ ಸಹಪಾಠಿಗಳೊಡನೆ ಹೊಂದಿಕೊಳ್ಳಲು ಜೊತೆಗೆ ಕಲಿಸುವ ವಿಷಯಗಳನ್ನು ಕಲಿಯಲು ಕಷ್ಟವಾಗುತ್ತಿರುತ್ತದೆ. ಈ ರೀತಿಯ ಪರಕೀಯತೆಯ ಭಾವನೆಯನ್ನು ಕಡಿಮೆಮಾಡಿ ಎಲ್ಲ ಮಕ್ಕಳಿಗೂ ಶ್ರೀಮಂತವಾದ ಜೊತೆಗೆ ಆನಂದ ನೀಡುವ ಬೋಧನಾ ಕಲಿಕಾ ಅನುಭವಗಳನ್ನು ನೀಡುವುದೇ ಅಂತರ್ಗತ ತರಗತಿಗಳ ಗುರಿ. ಸಾಮಾನ್ಯ ಶಾಲೆಗಳಲ್ಲಿ ಅಸಾಮರ್ಥ್ಯವಿರುವ ಹೆಚ್ಚಿನ ಮಕ್ಕಳು ಐದನೇ ತರಗತಿಯ ನಂತರ ಶಾಲೆಯನು ಬಿಡುವುದು ಹೆಚ್ಚು ಎಂದು ಅಂಕಿ ಅಂಶಗಳು ಹೇಳುತ್ತವೆ. ಇದಕ್ಕೆ ಹಲವಾರು ಕಾರಣಗಳಿರಬಹುದು. ಕೆಲವು ಶಾಲಾ ಸಂಬಂಧಿ, ಕುಟುಂಬ ಸಂಬಂಧಿ ಅಥವಾ ಸಮುದಾಯ ಸಂಬಂಧಿ ಕಾರಣಗಳಿರಬಹುದು. ಅಲ್ಲದೆ ಕೆಳಗಿನ ಕೆಲವು ಕಾರಣಗಳೂ ಇರಬಹುದು:

- ಪಠ್ಯಕ್ರಮ ಅಸಮರ್ಪಕವಾಗಿದ್ದು ಅದು ಯಾವುದೇ ವಿಧದಲ್ಲೂ ಮಕ್ಕಳ ಅಗತ್ಯಗಳಿಗೆ ಹೊಂದುವಂತಹುದಾಗಿಲ್ಲದಿರುವುದು
- ಪಠ್ಯಕ್ರಮ ಮಕ್ಕಳ ಅಪೇಕ್ಷೆಗೆ ಅನುಗುಣವಾಗಿಲ್ಲದಿರುವುದು;
- ಅಧ್ಯಾಪಕರು ಮಕ್ಕಳ ಕಲಿಕಾಶೈಲಿಯನ್ನು ಗಣನೆಗೆ ತೆಗೆದುಕೊಳ್ಳದಿರುವುದು;
- ಅಧ್ಯಾಪಕರ ತರಬೇತಿ ಹೊಸ ಆವಿಷ್ಕಾರಗಳನ್ನು ಒಳಗೊಂಡಿಲ್ಲದಿರಬಹುದು; ಮತ್ತು
- ಶಾಲೆಗೆ ಸಂಬಂಧಿಸಿದ ಕಾರಣಗಳಿರಬಹುದು.

ಈ ಎಲ್ಲ ಕಾರಣಗಳಿದ್ದರೂ, ಕೆಲವು ಅಧ್ಯಾಪಕರು, ಅಸಾಮರ್ಥ್ಯವಿರುವ ಮಕ್ಕಳನ್ನು ತರಗತಿಯೊಳಗೆ ಸ್ವಾಗತಿಸುವ ಮತ್ತು ಅವರನ್ನು ಒಪ್ಪಿಕೊಂಡು ಶಿಕ್ಷಣಕೊಡುವ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಈ ಅಭಿಪ್ರೇರಣೆಯೇ ಅಧ್ಯಾಪಕರು ಈ ಮಕ್ಕಳ ಮನೆಗೆ ಭೇಟಿಕೊಡುವಂತೆ, ಅವರ ಪೋಷಕರನ್ನು ಮಾತನಾಡಿಸಿ ತರಗತಿಯಲ್ಲಿ ಮಕ್ಕಳ ಭಾಗವಹಿಕೆ ಹೆಚ್ಚಾಗುವಂತೆ ಮಾಡಲು ಕಾರಣವಾಗಿದೆ. ಇವೆಲ್ಲವೂ ಸಾರ್ಥಕವಾಗಬೇಕಾದರೆ ಪಠ್ಯಕ್ರಮವು ಮಗುವಿಗೆ ಅದರ ಅಗತ್ಯಗಳಿಗೆ ಅನುಗುಣವಾಗಿರಬೇಕು. ಇದನ್ನು ಸಾಧಿಸುವುದು ಹೇಗೆ ಎಂಬುದನ್ನು ಈ ಘಟಕದಲ್ಲಿ ತಿಳಿಯೋಣ. ಇದನ್ನು ತಿಳಿಯಬೇಕಾದರೆ ಮೊದಲಿಗೆ ಪಠ್ಯಕ್ರಮ ಎಂದರೇನು ಎಂಬುದು ಸ್ಪಷ್ಟವಾಗಬೇಕು.

ಪಠ್ಯಕ್ರಮ ಎಂಬ ಪದ ಇಂಗ್ಲಿಷಿನ 'Curriculum' ಎಂಬ ಪದಕ್ಕೆ ಸಂವಾದಿಯಾಗಿದ್ದು ಈ ಪದದ ಮೂಲ ಲ್ಯಾಟಿನ್ ಭಾಷೆಯ 'currere' ಎಂಬ ಪದ. ಇದರ ಅರ್ಥ 'ಕಲಿಕಾರ್ಥಿ ಪಯಣಿಸುವ ದಾರಿ ಅಥವಾ ಮಾರ್ಗ' ಎಂಬುದಾಗಿ. ಶಿಕ್ಷಣದ/ಶಾಲೆಯ ಉದ್ದೇಶಗಳನ್ನು ಸಾಧಿಸಲು ಶಾಲೆಯ ಒಳಗೆ ಅಥವಾ ಹೊರಗೆ ನಡೆಯುವ ಎಲ್ಲ ಚಟುವಟಿಕೆಗಳು ಮತ್ತು ಅನುಭವಗಳ ಸಮಷ್ಟಿಯೇ ಪಠ್ಯಕ್ರಮ. ಇದು ಮಗುವಿನ ಬೌದ್ಧಿಕ, ದೈಹಿಕ, ನೈತಿಕ ಮತ್ತು ಭಾವನಾತ್ಮಕ ವಿಕಾಸಕ್ಕೆ ಮೂಲ.

ಪಠ್ಯಕ್ರಮವು ಮಗು ಶಾಲೆಯಲ್ಲಿ ನಡೆಯವ ಬಹುವಿಧವಾದ ಚಟುವಟಿಕೆಗಳ–ಶಾಲೆ, ತರಗತಿ, ಗ್ರಂಥಾಲಯ, ಪ್ರಯೋಗಾಲಯ, ಕಾರ್ಯಾಗಾರ, ಆಟದ ಮೈದಾನ ಈ ಎಲ್ಲ ಸ್ಥಳಗಳಲ್ಲಿ– ಮೂಲಕ ಪಡೆಯುವ ಅನುಭವಗಳ ಸಮಷ್ಟಿ ಎಂಬುದಾಗಿ ಸೆಕೆಂಡರಿ ಶಿಕ್ಷಣ ಆಯೋಗ(1952–53) ಹೇಳಿದೆ. ಇದು ಕಲೆಗಾರ(ಅಧ್ಯಾಪಕ) ತನ್ನ ಆದರ್ಶಗಳಿಗನುಗುಣವಾಗಿ(ಉದ್ದೇಶ) ತನ್ನ ಸಾಮಗ್ರಿಗಳಿಗೆ ರೂಪುಕೊಡಲು (ವಿದ್ಯಾರ್ಥಿಗಳು) ಅವನ ಕಲಾಗಾರದಲ್ಲಿ(ಶಾಲೆ) ಬಳಸುವ ಸಾಧನ ಎಂದು ಆಲಂಕಾರಿಕವಾಗಿ ವಿವರಿಸಲಾಗಿದೆ. ಈ ವಿವರಣೆ ಮತ್ತು ಮೇಲಿನ ವ್ಯಾಖ್ಯೆಗಳು ಅಸಾಮರ್ಥ್ಯವಿರುವ ಮತ್ತು ಇಲ್ಲದಿರುವರು ಭಾಗವಹಿಸುವ ಎಲ್ಲ ಶೈಕ್ಷಣಿಕ ಕಾರ್ಯಕ್ರಮಗಳಿಗೂ ಸಮಾನವಾಗಿ ಅನ್ವಯವಾಗುತ್ತದೆ. ಉದ್ದೇಶಗಳಿಗನುಗುಣವಾಗಿ ಜ್ಞಾನ, ಮನೋಭಾವಗಳು ಮತ್ತು ಕೌಶಲಗಳನ್ನು ವರ್ಗಾವಣೆ ಮಾಡುವ ವಿಧಾನದಲ್ಲಿ ಮಾತ್ರ ವ್ಯತ್ಯಾಸವಿದೆ. ಈ ಪಠ್ಯಕ್ರಮದ ತತ್ವಗಳೂ ಎಲ್ಲ ಶಿಕ್ಷಣ ಕಾರ್ಯಕ್ರಮಗಳಿಗೂ ಸಮಾನವಾಗಿ ಅನ್ವಯಿಸುತ್ತವೆ.

ಶಾಲೆಯ ಮೊದಲ ಹಂತಗಳಲ್ಲಿ ಪಠ್ಯಕ್ರಮವು ಮಕ್ಕಳ ಚಲನಾತ್ಮಕ ಕೌಶಲಗಳು, ಸಾಕ್ಷರತೆ ಮತ್ತು ಗಣಿತದ ಕೌಶಲಗಳನ್ನು ಬೆಳೆಸುವ ಕಡೆಗೆ ಗಮನ ಹರಿಸುತ್ತವೆ. ಮುಂದೆ ಇದು ಸಾಧಿಸಬೇಕಾದ ಉದ್ದೇಶಗಳು, ಬೋಧನಾ ಕಲಿಕಾ ಸಾಮಗ್ರಿಗಳು, ಮಾರ್ಗದರ್ಶನ ಮತ್ತು ಸಲಹಾ ಕಾರ್ಯಕ್ರಮಗಳು ಮತ್ತು ಮಕ್ಕಳ ಭಾಗವಹಿಕೆಗೆ ವಿವಿಧ ಚಟುವಟಿಕೆಗಳು ಇವೆಲ್ಲವನ್ನೂ ಒಳಗೊಳ್ಳುತ್ತದೆ. ಕಲಿಕಾ ಫಲಗಳನ್ನು ಸಾಧಿಸಲು ಪಠ್ಯಕ್ರಮವು ಕೆಲವು ತತ್ವಗಳನ್ನು ಹಾಗೂ ಮಾನಕಗಳನ್ನು ಗಮನಿಸಿಕೊಳ್ಳಬೇಕಾಗುತ್ತದೆ. ಪಠ್ಯಕ್ರಮವನ್ನು ರೂಪಿಸುವಾಗ ಈ ತತ್ವಗಳನ್ನು ಗಮನದಲ್ಲಿರಿಸಿಕೊಳ್ಳಬೇಕಾಗುತ್ತದೆ.

1. **ಶಿಶು ಕೇಂದ್ರಿತ ತತ್ವ :** ಪಠ್ಯಕ್ರಮವು ಮಕ್ಕಳ ಅಗತ್ಯಗಳು, ಆಸಕ್ತಿಗಳು, ಅಭಿಕ್ಷಮತೆ, ವಯಸ್ಸು ಮತ್ತು ಸನ್ನಿವೇಶಗಳನ್ನು ಗಮನದಲ್ಲಿಡಬೇಕು. ಯಾವುದೇ ಪಠ್ಯಕ್ರಮವನ್ನು ರೂಪಿಸುವಾಗ ಮಗುವೇ ಕೇಂದ್ರ ಸ್ಥಾನದಲ್ಲಿರಬೇಕು.

2. **ಸಮುದಾಯ ಕೇಂದ್ರಿತ ತತ್ವ :** ಮಗುವೇ ಪಠ್ಯಕ್ರಮದ ಕೇಂದ್ರವಾದರೂ ಅದು ಬದುಕುವ ಸಮುದಾಯದಲ್ಲಿ ಅದರ ಸಾಮಾಜಿಕ ವರ್ತನೆಗಳೂ ಅತ್ಯಂತ ಪ್ರಮುಖವಾಗುವುದರಿಂದ ಸಮುದಾಯಕ್ಕೆ ತಕ್ಕಂತೆ ಮಗುವನ್ನು ಸಾ'ಮಾಜೀಕರಿಸಬೇಕಾಗುತ್ತದೆ. ಹಾಗಾಗಿ ಸಮುದಾಯದ ಪ್ರಮುಖ ಅಂಶಗಳನ್ನೂ ಗಣನೆಗೆ ತೆಗೆದುಕೊಳ್ಳಬೇಕು. ಆಯಾ ಸಮುದಾಯಕ್ಕೆ ತಕ್ಕಂತೆ ಮಗುವನ್ನು ಸಾಮಾಜೀಕರಿಸಬೇಕಾದ ರೀತಿಯನ್ನು ತಿಳಿದು ಅದಕ್ಕನುಗುಣವಾಗಿ ಪಠ್ಯಕ್ರಮವನ್ನು ರೂಪಿಸಬೇಕಾಗುತ್ತದೆ.

3. **ಚಟುವಟಿಕೆ ಕೇಂದ್ರಿತ ತತ್ವ :** ಪಠ್ಯಕ್ರಮವಿರುವುದು ಕಲಿಯುವವರಿಗಾಗಿ. ಹಾಗಾಗಿ ಕಲಿಯುವವರ ವಯಸ್ಸು, ಸಾಮರ್ಥ್ಯ, ಆಶಯಗಳು, ಅಗತ್ಯಗಳು, ಮನೋವೈಜ್ಞಾನಿಕ ಅಂಶಗಳು ಇವೆಲ್ಲವುಗಳಿಗನುಗುಣವಾದ ಚಟುವಟಿಕೆಗಳನ್ನು ಅಳವಡಿಸಿಕೊಳ್ಳಬೇಕು. ಈ ಚಟುವಟಿಕೆಗಳು ರಚನಾತ್ಮಕವಾಗಿಯೂ ಸೃಜನಶೀಲವಾಗಿಯೂ ಇರಬೇಕು. ಇವು ಮಕ್ಕಳ ಕಲಿಕೆಯನ್ನು ಚುರುಕುಗೊಳಿಸುವುದಲ್ಲದೆ ಬಹಳ ಕಾಲ ಅವರ ಸ್ಮರಣೆಯಲ್ಲಿರಲು ಸಹಾಯಮಾಡುತ್ತದೆ.

4. **ಪಠ್ಯಕ್ರಮ ವೈವಿಧ್ಯಮಯವಾಗಿರಬೇಕು :** ಪಠ್ಯಕ್ರಮವು ವಿವಿಧ ಅಗತ್ಯಗಳಿರುವ ಮಕ್ಕಳ ವರ್ಗಗಳಿಗೆ ಅನುಗುಣವಾಗಿರಬೇಕು. ಹಾಗಾದಾಗ ಮಕ್ಕಳು ಅವರವರ ಅಗತ್ಯಕ್ಕನುಗುಣವಾಗಿ

ಭಾಗವಹಿಸುತ್ತಾರೆ. ಈ ಅಗತ್ಯಗಳು ಗ್ರಾಮೀಣ ಮತ್ತು ನಗರದ ಪ್ರದೇಶಗಳ ಮಕ್ಕಳಿಗೆ ಭಿನ್ನವಾಗಿರಬಹುದು, ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರಬಹುದು.

5. **ಸಂಯೋಜನೆ ಮತ್ತು ಸಮನ್ವಯದ ತತ್ವ :** ಮಕ್ಕಳಿಗೆ ವಿವಿಧ ವಿಷಯಗಳ ಅಡಿಯಲ್ಲಿ ವೈವಿಧ್ಯಮಯವಾದ ಚಟುವಟಿಕೆಗಳನ್ನು ಕೊಡುವುದು ಮಾತ್ರವಲ್ಲ; ಅವುಗಳಲ್ಲಿ ಉತ್ತಮವಾದ ಸಂಯೋಜನೆ ಮತ್ತು ಸಮನ್ವಯ ಕಾಣಬೇಕು; ಅನುಭವಕ್ಕೆ ಬರಬೇಕು. ವಿಷಯಗಳನ್ನು ಗ್ರಹಿಕೆಗೆ ಸುಲಭವಾಗುವ ಕಾರಣಕ್ಕಾಗಿ ಮಾತ್ರ ವಿವಿಧ ವಿಷಯಗಳ ಅಡಿಯಲ್ಲಿ ಬೋಧಿಸುವುದೇ ವಿನಾ ಜ್ಞಾನ ಎಂಬುದು ಅಖಂಡವಾದುದು ಎಂಬ ಪರಿಕಲ್ಪನೆ/ಭಾವನೆ ಮನಸ್ಸಿಗೆ ಬರುವಂತೆ ಪಠ್ಯಕ್ರಮರಚನೆ ಆಗಬೇಕು

6. **ಸಂರಕ್ಷಣೆಯ ತತ್ವ :** ಶಿಕ್ಷಣದ ಪ್ರಮುಖ ಕಾರ್ಯವೆಂದರೆ ಸಂಸ್ಕೃತಿಯ ವರ್ಗಾವಣೆ ಮತ್ತು ಸಂರಕ್ಷಣೆ. ಇದು ಮಾನವನ ಪ್ರಗತಿಗೆ ಪೂರಕ. ಈ ಸಂಸ್ಕೃತಿಯು ಪರಂಪರೆ, ಆಚಾರ, ವಿಚಾರ, ಮನೋಭಾವ, ಕೌಶಲಗಳು, ನಡೆವಳಿಕೆ, ಮೌಲ್ಯಗಳು ಮತ್ತು ಅರಿವು ಇವೆಲ್ಲವನ್ನೂ ಒಳಗೊಳುತ್ತದೆ.

7. **ಸೃಜನಶೀಲತೆಯ ತತ್ವ :** ಸಂಸ್ಕೃತಿಯನು ಉಳಿಸಿಕೊಳ್ಳಬೇಕಾದುದು ಅಗತ್ಯ ಎಂಬುದೇನೋ ನಿಜ. ಆದರೆ ಅದರ ಉನ್ನತೀಕರಣಕ್ಕೆ ಅದರಲ್ಲಿ ಆಗಬೇಕಾದ ಮಾರ್ಪಾಡುಗಳಿಗೆ ಗಮನಕೊಡಬೇಕು. ಇದು ಸಾಧ್ಯವಾಗಬೇಕಾದರೆ ಮಕ್ಕಳ/ ವಿದ್ಯಾರ್ಥಿಗಳ ಸೃಜನಶೀಲ ಶಕ್ತಿ ಸ್ಫುರಿಸಬೇಕು. ಇದಕ್ಕೆ ಪಠ್ಯಕ್ರಮ ಪೂರಕವಾಗಿರಬೇಕು.

8. **ಭವಿಷ್ಯಗಾಮಿ ತತ್ವ :** ಶಿಕ್ಷಣ ಮಗುವನ್ನು ಇಂದಿನ ಸಮಾಜಕ್ಕಾಗಿ ಮಾತ್ರವಲ್ಲ; ಭವಿಷ್ಯದ ಸಮಾಜಕ್ಕಾಗಿಯೂ ರೂಪಿಸಬೇಕು. ಹಾಗಾಗಿ ಮಗುವಿನ ಭವಿಷ್ಯಜೀವನಕ್ಕೆ ಅಗತ್ಯವಾದ ಪೂರಕವಾದ ಅನುಭವಗಳನ್ನು ಕೊಡುವಂತೆ ಅದು ರೂಪುಗೊಳ್ಳಬೇಕು

9. **ನಮ್ಯತೆಯ ತತ್ವ :** ಇಂದು ಶೀಘ್ರಗತಿಯಲ್ಲಿ ಬದುಕು ಬದಲಾಗುತ್ತಿದೆ. ಅದಕ್ಕನುಗುಣವಾಗಿ ಮಾನವ ಗಳಿಸಿಕೊಳ್ಳಬೇಕಾದ ಜ್ಞಾನ, ಕೌಶಲ ಮತ್ತು ಮನೋಭಾವಗಳೂ ಬದಲಾಗುತ್ತವೆ. ಹಾಗಾಗಿ ಎಲ್ಲ ಕಾಲಕ್ಕೂ ಒಂದೇ ಆದ ಪಠ್ಯಕ್ರಮದಿಂದ ಪ್ರಯೋಜನವಿಲ್ಲ. ಅದು ಹೊಸ ಅಂಶಗಳನ್ನು ಹೊಸ ವಿಷಯಗಳನ್ನು ಅಳವಡಿಸಿಕೊಳ್ಳಲು ಅವಕಾಶವಿರಬೇಕು

10. **ಸಮತೋಲನದ ತತ್ವ :** ಪಠ್ಯಕ್ರಮವು ಹಲವಾರು ಅಂಶಗಳಲ್ಲಿ ಸಮತೋಲನವನ್ನು ಸಾಧಿಸಬೇಕಾಗುತ್ತದೆ. ತಾತ್ವಿಕ–ಪ್ರಾಯೋಗಿಕ, ವಿಷಯ–ಚಟುವಟಿಕೆ, ನೇರ ಅನುಭವ–ಪರೋಕ್ಷ ಅನುಭವ, ಶೈಕ್ಷಣಿಕ–ಔದ್ಯೋಗಿಕ, ಔಪಚಾರಿಕ–ಅನೌಪಚಾರಿಕ ಇತ್ಯಾದಿ ಅನೇಕ ಅಂಶಗಳಲ್ಲಿ ಸಮತೋಲನವನ್ನು ಕಾಪಾಡಿಕೊಳ್ಳಬೇಕು.

11. **ಪ್ರಯೋಜನ ತತ್ವ :** ಪಠ್ಯಕ್ರಮವು ಕಲಿಯುವವರಿಗೆ ಉಪಯುಕ್ತವಾಗಿರಬೇಕೇ ವಿನಾ ಆಲಂಕಾರಿಕವಾಗಿರಬಾರದು. ಅದು ಸಾಂಪ್ರದಾಯಿಕವಾಗಿದ್ದರೆ ಸಾಲದು; ಅದಕ್ಕೆ ಪ್ರಾಯೋಗಿಕ ಮೌಲ್ಯವೂ ಇರಬೇಕು. ಅದು ಮಕ್ಕಳಿಗೆ ಭವಿಷ್ಯದಲ್ಲಿ ಒಂದು ವೃತ್ತಿಯನ್ನು ಪಡೆಯಲು ಸಹಾಯಕವಾಗಬೇಕು.

ಈ ಎಲ್ಲ ವಿಷಯಗಳ ಸ್ಪಷ್ಟತೆಯೊಂದಿಗೆ ಪಠ್ಯಕ್ರಮದ ವಿಚಾರಗಳನ್ನು ತಿಳಿಯೋಣ

## 2.4.3.1. ಪಠ್ಯಕ್ರಮದ ಪರಿಕಲ್ಪನೆ ಮತ್ತು ವಿಚಾರಗಳು

ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಅನೇಕ ಅಂಶಗಳಿವೆ. ಅದರಲ್ಲಿ ಪ್ರಮುಖವಾದುದು ಪಠ್ಯವಸ್ತು. ಪಠ್ಯವಸ್ತು ಮತ್ತು ಪಠ್ಯಕ್ರಮವನ್ನು ಕುರಿತಂತೆ ವಿದ್ಯಾರ್ಥಿಗಳಲ್ಲಿ ಸಾಮಾನ್ಯವಾಗಿ ಗೊಂದಲವಿದೆ. ಹಾಗಾಗಿ ಈ ಅಂಶವನ್ನು ಸ್ಪಷ್ಟಪಡಿಸಿಕೊಂಡು ಮುಂದುವರಿಯೋಣ. ಪಠ್ಯವಸ್ತು ಮತ್ತು ಪಠ್ಯಕ್ರಮವನ್ನು ಕುರಿತ ವ್ಯತ್ಯಾಸಗಳನ್ನು ಅರ್ಥಮಾಡಿಕೊಳ್ಳಲು ಕೆಳಗಿನ ಅಂಶಗಳನ್ನು ಗಮನಿಸಿ.

### ಪಠ್ಯಕ್ರಮ ಮತ್ತು ಪಠ್ಯವಸ್ತುವಿನ ನಡುವಿನ ವ್ಯತ್ಯಾಸಗಳು

| ಹೋಲಿಕೆಯ ಅಂಶಗಳು | ಪಠ್ಯಕ್ರಮ | ಪಠ್ಯವಸ್ತು |
|---|---|---|
| ಅರ್ಥ | ಒಂದು ಕೋರ್ಸಿನ ಅಡಿಯಲ್ಲಿ ಕೊಡಲಾಗುವ ಎಲ್ಲ ಅನುಭವಗಳು, ವಿಷಯಗಳು. | ಒಂದು ವಿಷಯವು ಒಳಗೊಳ್ಳಬೇಕಾದ ಎಲ್ಲ ಅಂಶಗಳ/ಉಪ ಅಂಶಗಳ ದಾಖಲೆ |
| ಮೂಲ | 'ಪಠ್ಯಕ್ರಮ'ದ ಸಂವಾದಿ ಪದ Curriculum ಎಂಬ ಲ್ಯಾಟಿನ್ ಮೂಲದ್ದು | 'ಪಠ್ಯವಸ್ತು' ಎಂಬುದರ ಸಂವಾದಿ ಪದ Syllabus ಗ್ರೀಕ್ ಮೂಲದ್ದು. |
| ಸಂಬಂಧ | ಒಂದು ಕೋರ್ಸಿಗೆ ಸಂಬಂಧಸಿದುದು | ಒಂದು ವಿಷಯಕ್ಕೆ ಸಂಬಂಧಿಸಿದುದು |
| ಸ್ವರೂಪ | ಆದೇಶಾತ್ಮಕ | ವಿವರಣಾತ್ಮಕ |
| ವ್ಯಾಪ್ತಿ | ವ್ಯಾಪಕ | ಸಂಕುಚಿತ |
| ರೂಪಿಸುವ ನಿಯೋಗ/ ಸಂಸ್ಥೆ | ಸರ್ಕಾರ ಅಥವಾ ಶಾಲೆ/ ಕಾಲೇಜು / ಸಂಸ್ಥೆ | ಮಂಡಳಿ |
| ಬಳಕೆಯ ಅವಧಿ | ಕೋರ್ಸು ಇರುವವರೆಗೆ | ನಿರ್ದಿಷ್ಟ ಅವಧಿಗೆ ಮಾತ್ರ |

ಪಠ್ಯಕ್ರಮವನ್ನು ರೂಪಿಸುವಾಗ ಕಲಿಯುವವರ ಅಗತ್ಯಗಳನ್ನು ಬೇಡಿಕೆಗಳನ್ನು ಗಮನದಲ್ಲಿರಿಸಿಕೊಳ್ಳಬೇಕು. ಸಾಮಾನ್ಯವಾಗಿ ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳಿಗೆ ಪಠ್ಯಕ್ರಮವನ್ನು ವರ್ಗಾವಣೆ ಮಾಡುವಾಗ ಕೆಲವು ಅಡಚಣೆಗಳಿವೆ. ಇವು ಶೈಕ್ಷಣಿಕ ಸಿಬ್ಬಂದಿಯ ಜವಾಬ್ದಾರಿಗಳು, ಮನೋಭಾವ ಮತ್ತು ಕೌಶಲಗಳು, ವಿಶೇಷ ಬೋಧನಾ ಸಾಮಗ್ರಿಗಳು ಮತ್ತು ಉಪಕರಣಗಳು ಹಾಗೂ ಸಮರ್ಪಕ ಸಂಖ್ಯೆಯ ಮತ್ತು ಸಾಮರ್ಥ್ಯದ ಸಿಬ್ಬಂದಿ ವರ್ಗ ಇವುಗಳಿಗೆ ಸಂಬಂಧಿಸಿದುದು. ವಿಶೇಷ ಅಗತ್ಯವುಳ್ಳ ಮಕ್ಕಳ ಗುಂಪು ಏಕರೂಪವಾದುದಲ್ಲ ಎಂಬುದು ನಮಗೆ ತಿಳಿದಿದೆ. ಹಾಗಾಗಿ ಅವರ ಅಗತ್ಯಗಳೂ ಭಿನ್ನವಾಗಿರುತ್ತದೆ. ಪಠ್ಯಕ್ರಮ ಈ ವಿಭಿನ್ನ ಗುಂಪಿನ ಮಕ್ಕಳ ಅವರ ವಿಭಿನ್ನ ಅಗತ್ಯಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕು.

ಸಮಾಜ ಕಾಲದಿಂದ ಕಾಲಕ್ಕೆ ಬದಲಾಗುತ್ತದೆ. ಅದಕ್ಕನುಗುಣವಾಗಿ ಪಠ್ಯಕ್ರಮವೂ ಬದಲಾಗಬೇಕು. ಪಠ್ಯಕ್ರಮವನ್ನು ರೂಪಿಸುವಾಗ ಸಮಕಾಲೀನ ಪಠ್ಯಕ್ರಮದ ಮಿತಿಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳನ್ನು ಮೀರಿದ ಪಠ್ಯಕ್ರಮ ರೂಪುಗೊಳ್ಳುವಂತೆ ನೋಡಿಕೊಳ್ಳಬೇಕು.

**ಪ್ರಸ್ತುತ ಪಠ್ಯಕ್ರಮದ ಮಿತಿಗಳು ಕೆಳಕಂಡಂತಿವೆ :**

- ತಾತ್ವಿಕ ವಿಚಾರಗಳಿಗೆ ಹೆಚ್ಚಿನ ಪ್ರಾಧಾನ್ಯತೆ; ಪ್ರಾಯೋಗಿಕ ವಿಚಾರಗಳಿಗೆ/ಕೌಶಲಗಳಿಗೆ ಪ್ರಾಮುಖ್ಯತೆ ಇಲ್ಲ;
- ಕುರುಡು ಪಾಠಕ್ಕೆ(ಅರ್ಥಗ್ರಹಣವಿಲ್ಲದೆ ಕಂಠಪಾಠ ಮಾಡುವುದು) ಹೆಚ್ಚಿನ ಮಹತ್ವ;
- ಪಠ್ಯಪುಸ್ತಕ ಆಧಾರಿತ ಪರೀಕ್ಷೆಗಳು;
- ಅತಿ ಹೆಚ್ಚು ಪಠ್ಯವಸ್ತುವಿನ ಹೊರೆ;
- ಜೀವನಕೇಂದ್ರಿತವಲ್ಲದ ಶಿಕ್ಷಣ;
- ವ್ಯಕ್ತಿತ್ವದ ಸರ್ವಾಂಗೀಣ ಬೆಳವಣಿಗೆಗೆ ಪ್ರಾಶಸ್ತ್ಯ ಇಲ್ಲ;
- ಉದ್ಯೋಗ ವಿಷಯಗಳಿಗೆ/ ಕೌಶಲಗಳಿಗೆ ಪ್ರಾಮುಖ್ಯತೆ ಇಲ್ಲ.

ಈ ಮಿತಿಗಳು ಅಥವಾ ಕೊರತೆಗಳು ಬಹಳ ಕಾಲದಿಂದ ಇರುವಂತಹವು. ಇವುಗಳ ಬಗ್ಗೆ ಯಾವುದೇ ರೀತಿಯ ಕಾಳಜಿ ವಹಿಸಲಾಗಿಲ್ಲ. ಕೆಲವು ಕೊರತೆಗಳಂತೂ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದೆ. ಇದು ಮುಂದುವರಿದರೆ ಶೈಕ್ಷಣಿಕ ಪ್ರಗತಿ ಸುಲಭಸಾಧ್ಯವಲ್ಲ.

ಪಠ್ಯಕ್ರಮವನ್ನು ರೂಪಿಸುವಾಗ ಕಲಿಯುವವರ ಅಗತ್ಯಗಳನ್ನೂ ಗಮನದಲ್ಲಿಡಬೇಕು. ಈ ಅಗತ್ಯಗಳನ್ನು ಗಮನಿಸೋಣ.

- ಕಲಿಯುವವರ ಅಗತ್ಯಗಳಿಗೆ ಅನುಗುಣವಾಗಿ ಉದ್ದೇಶಗಳನ್ನು ರೂಪಿಸಿಕೊಳ್ಳಬೇಕು;
- ಅವರ ಪ್ರಬುದ್ಧತೆ ಮತ್ತು ಆಸಕ್ತಿಗಳಿಗನುಗುಣವಾಗಿ ವಿಷಯವನ್ನು ಆಯ್ಕೆ ಮಾಡಿಕೊಳ್ಳಬೇಕು;
- ಅವರ ವಯೋಮಾನಕ್ಕನುಗುಣವಾದ ಕಲಿಕಾ ಅನುಭವಗಳನ್ನು ಆಯ್ಕೆ ಮಾಡಿಕೊಳ್ಳಬೇಕು;
- ವಿವಿಧ ವಿಷಯಗಳ ನಡುವೆ ಸಹಸಂಬಂಧವನ್ನು ಕಲ್ಪಿಸಬೇಕು;
- ವಿರಾಮಕಾಲವನ್ನು ಸದುಪಯೋಗಪಡಿಸಿಕೊಳ್ಳಲು ಮಾರ್ಗದರ್ಶನ ನೀಡಬೇಕು;
- ಪಠ್ಯಕ್ರಮವು ವಿದ್ಯಾರ್ಥಿಯ ಸಮುದಾಯ ಜೀವನದ ಅಗತ್ಯಗಳಿಗನುಗುಣವಾಗಿರಬೇಕು; ಮತ್ತು
- ಮೌಲ್ಯಮಾಪನ ಕ್ರಮವು ಕಲಿಕಾದಾರ ಸ್ನೇಹಿಯಾಗಿರಬೇಕು.

ಇಂದಿನ ಪರಿಸ್ಥಿತಿಯಲ್ಲಿ ಅಸಾಮರ್ಥ್ಯವುಳ್ಳ ಮತ್ತು ಇಲ್ಲದಿರುವ ಎರಡು ಗುಂಪುಗಳಿಗೆ ಸೇರಿದಂತೆಯೂ ಪಠ್ಯಕ್ರಮದಲ್ಲಿ ಈ ಅನೇಕ ಮಿತಿಗಳಿವೆ. ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣ ಸಾರ್ಥಕವಾಗಬೇಕಾದರೆ ಇವುಗಳನ್ನು ಗಮನಕ್ಕೆ ತೆಗೆದುಕೊಂಡು  ಈ ಮಿತಿಗಳಿಂದ ಮುಕ್ತವಾದ ಪಠ್ಯಕ್ರಮವನ್ನು ರೂಪಿಸಬೇಕು. ಅಂತರ್ಗತ ಶಿಕ್ಷಣದ ಸನ್ನಿವೇಶದ ಪಠ್ರಕ್ರಮವೂ ಈ ಕೊರತೆಗಳಿಂದ ಮುಕ್ತವಾಗಿಲ್ಲ. ವಿಶೇಷ ಅಗತ್ಯವುಳ್ಳವರ ದೃಷ್ಟಿಯಿಂದ ಪರಿಶೀಲಿಸಿದಾಗ ಪಠ್ಯಕ್ರಮದಲ್ಲಿ ಮತ್ತೂ ಹೆಚ್ಚಿನ ಕೊರತೆಗಳು ಕಂಡುಬರುತ್ತವೆ. ಇವರ ಪಠ್ಯಕ್ರಮಕ್ಕೆ ಸಂಬಂಧಿಸಿದ ವಿಚಾರಗಳನ್ನು ಮುಂದೆ ಪರಿಶೀಲಿಸೋಣ.

## ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ 1

'ಎ' ಪಟ್ಟಿಯ ಅಂಶಗಳನ್ನು 'ಬಿ'ಪಟ್ಟಿಯ ಅಂಶಗಳೊಂದಿಗೆ ಹೊಂದಿಸಿರಿ

| | 'ಎ' ಪಟ್ಟಿ | 'ಬಿ'ಪಟ್ಟಿ | |
|---|---|---|---|
| 1. | ಶಿಶು ಕೇಂದ್ರಿತ ತತ್ವ | ಮಗುವನ್ನು ಸಾಮಾಜೀಕರಿಸಬೇಕಾದ ರೀತಿಯನ್ನು ತಿಳಿದು ಅದಕ್ಕನುಗುಣವಾಗಿ ಪಠ್ಯಕ್ರಮವನ್ನು ರೂಪಿಸಬೇಕು | ಅ |
| 2. | ಸಮುದಾಯ ಕೇಂದ್ರಿತ ತತ್ವ | ಪಠ್ಯಕ್ರಮವು ಮಕ್ಕಳ ಅಗತ್ಯಗಳು, ಆಸಕ್ತಿಗಳು, ಅಭಿಕ್ಷಮತೆ, ವಯಸ್ಸು ಮತ್ತು ಸನ್ನಿವೇಶಗಳನ್ನು ಗಮನದಲ್ಲಿಡಬೇಕು. | ಇ |
| 3 | ಚಟುವಟಿಕೆ ಕೇಂದ್ರಿತ ತತ್ವ | ಜ್ಞಾನ ಎಂಬುದು ಅಖಂಡವಾದುದು ಎಂಬ ಭಾವನೆ ಮನಸ್ಸಿಗೆ ಬರುವಂತೆ ಪಠ್ಯಕ್ರಮರಚನೆ ಆಗಬೇಕು | ಉ |
| 4. | ಸಂಯೋಜನೆಯ ತತ್ವ | ಕಲಿಯುವವರ ವಯಸ್ಸು, ಸಾಮರ್ಥ್ಯ, ಆಶಯಗಳು, ಇವೆಲ್ಲವುಗಳಿಗನುಗುಣವಾದ ಕಲಿಕೆಯ ಅನುಭವಗಳನ್ನು ಅಳವಡಿಸಿಕೊಳ್ಳಬೇಕು. | ಎ |

## 2.4.3.2. ವಿಶೇಷ ಅಗತ್ಯವುಳ್ಳ ಮಕ್ಕಳ ಪಠ್ಯಕ್ರಮ ವಿಚಾರಗಳು

ವಿಶೇಷ ಮಕ್ಕಳಲ್ಲಿ ಪ್ರತಿ ಮಗುವಿನ ಕಲಿಕಾ ಶೈಲಿ ಭಿನ್ನವಾದದು. ಗ್ರಹಿಕೆಯ ಮಟ್ಟವೂ ಭಿನ್ನ. ಪ್ರತಿ ಮಗುವೂ ವಿಭಿನ್ನವಾದ ಬೋಧನಾ ಕಲಿಕಾ ವಿಧಾನವನ್ನು ಬಯಸುತ್ತದೆ. ಉದಾಹರಣೆಗೆ ಅಂಧಮಗುವಿಗೆ ಬ್ರೈಲ್ ಲಿಪಿಯ ಅಗತ್ಯವಿರುತ್ತದೆ. ಕಲಿಯಬೇಕಾದ ಎಲ್ಲ ಪರಿಕಲ್ಪನೆಗಳೂ ಬ್ರೈಲ್ ಲಿಪಿಯಲ್ಲೇ ಸಿಗಬೇಕು.

**ವಿಶೇಷ ಅಗತ್ಯವುಳ್ಳ ಮಕ್ಕಳ ಪಠ್ಯಕ್ರಮ ವಿಚಾರಗಳು ಯಾವುವು ಎಂಬುದನ್ನು ಪರಿಶೀಲಿಸೋಣ.**

- ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಶಿಕ್ಷಣದ ಅವಕಾಶಗಳೇ ಮಿತಿಯುಳ್ಳದ್ದು.
- ಅಸಾಮರ್ಥ್ಯಕ್ಕೆ ಸಂಬಂಧಿಸಿದ ಪರಿಕಲ್ಪನೆಗಳು ಮತ್ತು ಅಧ್ಯಯನಗಳು ಹೆಚ್ಚು ಅವಗಣನೆಗೆ ಒಳಗಾಗಿವೆ.
- ಅಸಾಮರ್ಥ್ಯವಿರುವವರಿಗೆ ಸಂಬಂಧಿಸದಿ ವಿವಧ ಬೋಧನಾ ಕಲಿಕಾ ವಿಧಾನಗಳನ್ನು ಪಠ್ಯಕ್ರಮವನ್ನು ರೂಪಿಸುವಾಗ ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಅಧ್ಯಾಪಕರ ಬೋಧನಾ ಕ್ರಮಕ್ಕೆ ಈ ಮಕ್ಕಳು ಹೊಂದಿಕೊಳ್ಳಬೇಕೇ ವಿನಾ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಅಗತ್ಯವಾದ ಬೋಧನಾ ವಿಧಾನಗಳನ್ನು ಶಾಲೆಗಳು ಅಳವಡಿಸಿಕೊಳ್ಳುವುದಿಲ್ಲ;

- ಅಂತರ್ಗತ ವ್ಯವಸ್ಥೆಯ ಅಡಿಯಲ್ಲಿ ಅಸಾಮರ್ಥ್ಯವಿರುವ ಮಕ್ಕಳನ್ನು ದಾಖಲು ಮಾಡಿಕೊಳ್ಳುವ ಅವಕಾಶಗಳಿದೆಯಾದರೂ ಅವರಿಗೆ ಅಗತ್ಯವಾದ ಕಲಿಕಾ ಮಾರ್ಪಾಡುಗಳನ್ನು ಮಾಡಿಕೊಳ್ಳಲಾಗುವುದಿಲ್ಲ.
- ಅವರಿಗೆ ವಿಶೇಷವಾದ ಕಲಿಕಾ ಚಟುವಟಿಕೆಗಳನ್ನು ಯೋಜಿಸಲಾಗುವುದಿಲ್ಲ;
- ಪಠ್ಯಕ್ರಮಗಳು ವಿಶೇಷ ಕಲಿಕಾ ಅಗತ್ಯವುಳ್ಳ ಮಕ್ಕಳ ಹಿನ್ನೆಲೆಯಲ್ಲಿ ನಿರ್ದಿಷ್ಟ ಉದ್ದೇಶಗಳನ್ನು ಗುರುತಿಸಿಕೊಳ್ಳುವುದಿಲ್ಲ;
- ಒಟ್ಟು ಶಿಕ್ಷಣ ವ್ಯವಸ್ಥೆಯಲ್ಲಿ ಅಗತ್ಯವಾದ ಉದ್ದೇಶಗಳನ್ನು ಗುರುತಿಸಿಕೊಳ್ಳುವಿಕೆ, ಕಲಿಕಾ ಅನುಭವಗಳನ್ನು ಒದಗಿಸುವಿಕೆ ಮತ್ತು ಮೌಲ್ಯಮಾಪನ– ಈ ಮೂರೂ ವಿಷಯಗಳಲ್ಲಿ ವಿಶೇಷ ಅಗತ್ಯವಿರುವ ಮಕ್ಕಳಿಗೆ ವಿಭಿನ್ನವಾಗಿ ಆಲೋಚನೆ ಮಾಡಿ ಅವರ ಅಗತ್ಯಗಳಿಗನುಗುಣವಾಗಿ ಈ ಮೂರೂ ವಿಷಯಗಳಲ್ಲಿ ಮಾರ್ಪಾಡುಗಳನ್ನು ಮಾಡಿಕೊಳ್ಳಬೇಕು. ಆದರೆ ಅಂತರ್ಗತ ವ್ಯವಸ್ಥೆಯಲ್ಲಿ ಹೀಗೇನೂ ಆಗುತ್ತಿಲ್ಲ.
- ಮೌಲ್ಯಮಾಪನ ಕ್ರಮಗಳಲ್ಲಿ ವಿಶೇಷ ಮಕ್ಕಳ ಅಗತ್ಯಗಳಿಗೆ ತಕ್ಕಂತೆ ಹೊಂದಾಣಿಕೆ ಮಾಡಿಕೊಳ್ಳಲಾಗಿಲ್ಲ; ಈ ಸನ್ನಿವೇಶದಲ್ಲಿ ನಮ್ಯತೆಯ ಅಂಶ ಬಹಳ ಮುಖ್ಯ. ಇದನ್ನು ಗಣನೆಗೆ ತೆಗೆದುಕೊಳ್ಳಲಾಗಿಲ್ಲ.
- ವಿಶೇಷ ಅಗತ್ಯವುಳ್ಳ ಮಕ್ಕಳ ಅಗತ್ಯಗಳಿಗೆ ತಕ್ಕಂತೆ ಶಾಲಾ ಸನ್ನಿವೇಶದಲ್ಲಿ ವಿಶೇಷ ಮಾರ್ಪಾಡುಗಳು ಅಗತ್ಯ. ಅವುಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಅದು ಇಂತಹ ಮಕ್ಕಳನ್ನು ಕುರಿತ ಅಧ್ಯಾಪಕರ ಮನೋಭಾವ ಇರಬಹುದು; ಇತರ ವಿದ್ಯಾರ್ಥಿಗಳ ಮನೋಭಾವವಿರಬಹುದು; ಒಟ್ಟು ಶಾಲೆಯ ಮನೋಭಾವವಿರಬಹುದು. ಪಠ್ಯಕ್ರಮವು ಈ ಅಂಶಗಳ ಹಿನ್ನೆಲೆಯಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳ ವಿಶೇಷ ಅಗತ್ಯಗಳನ್ನು ಸ್ಪಷ್ಟಪಡಿಸಬೇಕು. ಗುರುತಿಸಿಕೊಂಡಿರುವ ಉದ್ದೇಶಗಳನ್ನು ಸಾಧಿಸಲು ಶಾಲೆಯ ಒಳಗೆ ಮತ್ತು ಹೊರಗೆ ಯೋಜಿಸುವ ಕಾರ್ಯಕ್ರಮಗಳು ಪಠ್ಯಕ್ರಮವೆನಿಸಿಕೊಳ್ಳವುದರಿಂದ, ಈ ನಿರ್ದಿಷ್ಟ ಉದ್ದೇಶಗಳನ್ನು ಗುರುತಿಸಿಕೊಂಡು ಅದಕ್ಕೆ ಅನುಗುಣವಾದ ಸನ್ನಿವೇಶ, ಕಲಿಕಾ ವಿಧಾನ ಇವುಗಳನ್ನು ಗುರುತಿಸಿಕೊಂಡು ಅನ್ವಯಿಸಲು ಪಠ್ಯಕ್ರಮ ಸೂಚಿಸಬೇಕು.
- ವಿಶೇಷ ಅಗತ್ಯವುಳ್ಳ ಮಕ್ಕಳು ಕೆಳಮಟ್ಟದ ಬುದ್ಧಿಮಟ್ಟವುಳ್ಳವರು, ಅವರಿಗೆ ಉನ್ನತ ಮಟ್ಟದ ಕೆಲಸಗಳನ್ನು ಮಾಡಲು ಸಾಧ್ಯವಿಲ್ಲ ಎಂಬ ತಪ್ಪು ಅಭಿಪ್ರಾಯದಿಂದ ಪಠ್ಯಕ್ರಮ ಮುಕ್ತವಾಗಿ, ಅವರ ವಿಶೇಷ ಸಾಮರ್ಥ್ಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.
- ಶಾಲಾ ಚಟುವಟಿಕೆಗಳಲ್ಲಿ ಗರಿಷ್ಟ ಮಟ್ಟದಲ್ಲಿ ಅವರ ಭಾಗವಹಿಕೆ ಸಾಧ್ಯವಾಗುವಂತೆ ಕಲಿಕಾ ಅನುಭವಗಳನ್ನು ರೂಪಿಸಬೇಕು
- ವಿವಿಧ ರೀತಿಯ ಅಸಾಮರ್ಥ್ಯವಿರುವ ಮಕ್ಕಳು ಭಾಗವಹಿಸಲು ಸಾಧ್ಯವಾಗುವಂತೆ ಕಲಿಕಾ ಅನುಭವಗಳಲ್ಲಿ ವೈವಿಧ್ಯತೆಯನ್ನು ಪಠ್ಯಕ್ರಮ ಸೃಷ್ಟಿಸಬೇಕು

- ವಿವಿಧ ರೀತಿಯ ಅಸಾಮರ್ಥ್ಯವಿರುವ ಮಕ್ಕಳ ಕಲಿಕೆಗೆ ಅಗತ್ಯವಾದ ಕಲಿಕಾ ಉಪಕರಣಗಳು, ವಿಧಾನಗಳನ್ನು ಪಠ್ಯಕ್ರಮ ಸ್ಪಷ್ಟಪಡಿಸಬೇಕು. ಉದಾಹರಣೆಗೆ ಬ್ರೈಲ್ ಲಿಪಿಯ ಅಳವಡಿಕೆ, 'ಆಡಿಯೊ ಪಠ್ಯಗಳು' ಇವುಗಳ ಬಳಕೆಯ ಅಗತ್ಯ ಅಳವಡಿಕೆ ಇವುಗಳನ್ನು ಪಠ್ಯಕ್ರಮ ಸೂಚಿಸಬೇಕು.
- ಅಸಾಮರ್ಥ್ಯವಿರುವ ಎಲ್ಲ ಮಕ್ಕಳಿಗೂ ಕ್ರೀಡೆಯಲ್ಲಿ ಭಾಗವಹಿಕೆ ಸಾಧ್ಯವಿಲ್ಲ ಎಂದೇನೂ ಇಲ್ಲ. ವಿಶಾಲ ವ್ಯಾಪ್ತಿಯ ಕ್ರೀಡಾ ಚಟುವಟಿಕೆಗಳ ಲಭ್ಯತೆ ಮತ್ತು ಭಾಗವಹಿಕೆಗೆ ಪಠ್ಯಕ್ರಮ ಅವಕಾಶ ಕಲ್ಪಿಸಬೇಕು.
- ಸಂಕೇತ ಭಾಷೆಯ ಬಳಕೆಗೆ ಪಠ್ಯಕ್ರಮ ಅವಕಾಶ ಮಾಡಿಕೊಡಬೇಕು; ಅಗತ್ಯವಿದ್ದರೆ ಅದನ್ನ ಕಡ್ಡಾಯವಾಗಿ ಬಳಸುವಂತೆ ಸೂಚಿಸಬೇಕು.
- ಒಟ್ಟಿನಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳ ವಿಭಿನ್ನ ಅಗತ್ಯಗಳನ್ನು ಗಣನೆಗೆ ತೆಗೆದುಕೊಂಡು ಅದರ ಆಧಾರದ ಮೇಲೆ ಪಠ್ಯಕ್ರಮವನ್ನು ರೂಪಿಸಬೇಕು.

**NCERT ಯ National Focus Group Team ವಿಶೇಷ ಅಗತ್ಯವುಳ್ಳ ಮಕ್ಕಳ ಪಠ್ಯಕ್ರಮವನ್ನು ಕುರಿತಂತೆ ಕೊಟ್ಟಿರುವ ಸಲಹೆಗಳು ಕೆಳಕಂಡಂತಿವೆ:**

- ದೊಡ್ಡ ತರಗತಿಗಳಲ್ಲಿ ಅಸಾಮರ್ಥ್ಯವುಳ್ಳ ಕಲಿಕೆದಾರರ ಅಗತ್ಯಗಳನ್ನು ಪೂರೈಸಲು ಮಾರ್ಗೋಪಾಯಗಳನ್ನು ರೂಪಿಸುವುದು;
- ಅಸಾಮರ್ಥ್ಯವನ್ನು ಬೇಗನೆ ಗುರುತಿಸುವುದು ಮತ್ತು ಸೂಕ್ತ ಮಧ್ಯವರ್ತಿ ಕಾರ್ಯಕ್ರಮಗಳನ್ನು ಯೋಜಿಸುವುದು;
- ಪಠ್ಯಕ್ರಮವನ್ನು ನಮ್ಯತೆಯೊಂದಿಗೆ ಮತ್ತು ಅವರ ಮಿತಿಯಲ್ಲಿ ರೂಪಿಸುವುದು;
- ತಂತ್ರಜ್ಞಾನ ಮತ್ತು ಸಹಕಾರಿ ಸಾಧನಗಳನ್ನು ಬಳಸಿಕೊಳ್ಳುವುದು;
- ಸಮರ್ಪಕ ಮಾಪನ ಹಾಗೂ ಮೌಲ್ಯಮಾಪನ ವಿಧಾನಗಳನ್ನು ರೂಪಿಸಿಕೊಳ್ಳುವುದು;
- ಔದ್ಯೋಗಿಕ ಶಿಕ್ಷಣವನ್ನು ನೀಡುವುದು;
- ಅಧ್ಯಾಪಕರ ಮತ್ತು ಫಲಾನುಭವಿಗಳ ಸಾಮರ್ಥ್ಯವೃದ್ಧಿ ಮಾಡುವುದು;
- ವಿಶೇಷ ಅಗತ್ಯವುಳ್ಳ ಮಕ್ಕಳ ಗರಿಷ್ಠ ಬೆಳವಣಿಗೆಗಾಗಿ ಸಮರ್ಪಕವಾದ ಕ್ರೀಡಾ ಮತ್ತು ಸಹಪಠ್ಯ ಚಟುವಟಿಕೆಗಳನ್ನು ಗುರುತಿಸುವುದು;(
- ತಡೆರಹಿತ ಮಧ್ಯವರ್ತಿ/ಶಿಕ್ಷಣ ಪರಿಸರವನ್ನು ಸೃಷ್ಟಿಸುವುದು;(ಮನೋಭಾವವನ್ನು ಕುರಿತ ಅಡೆತಡೆಗಳನ್ನೂ ತಡೆದು)
- ರಾಷ್ಟ್ರೀಯ ಬೆಂಬಲ ವ್ಯವಸ್ಥೆಗಳನ್ನು ರೂಪಿಸುವುದು; ಶಿಕ್ಷಣದ ವಿವಿಧ ಆಯ್ಕೆಗಳಾದ ತೆರೆದ ಶಾಲೆಗಳು, ಸಾಮಾನ್ಯ ಶಾಲೆಗಳು, ವಿಶೇಷ ಶಾಲೆಗಳು, ಔಪಚಾರಿಕೇತರ ಶಾಲೆಗಳು, ಮತ್ತ ಪರ್ಯಾಯ ಶಿಕ್ಷಣ ವ್ಯವಸ್ಥೆಗಳು ಅಸಾಮರ್ಥ್ಯವಿರುವ ಮಕ್ಕಳಿಗೆ ಲಭ್ಯವಾಗುವಂತೆ ಮಾಡುವುದು.

**ಅಸಾಮರ್ಥ್ಯವಿರುವ ಮಕ್ಕಳ ಪಠ್ಯಕ್ರಮಕ್ಕೆ ಸಂಬಂಧಿಸಿದ ಇತರ ಕೆಲವು ಕ್ರಮಗಳಿಗೆ ಸಲಹೆಗಳು:**

- ಎಲ್ಲ ಮಕ್ಕಳ ಶೈಕ್ಷಣಿಕ ಅಗತ್ಯಗಳನ್ನು ಗಮನಿಸಿಕೊಂಡಂತೆ ಶಾಲಾ ಪಠ್ಯಕ್ರಮವನ್ನು ಪುನರ್ವಿಮರ್ಶೆ ಮಾಡಬೇಕು.
- ಸರ್ಕಾರವು ವಿಶೇಷ ಶಿಕ್ಷಣಕ್ಕೆ ಕೊಡುವ ಅನುದಾನವನ್ನು ಹೆಚ್ಚಿಸಬೇಕು;
- ಅಸಾಮರ್ಥ್ಯಸ್ನೇಹಿ ಸೌಕರ್ಯಗಳನ್ನು ಮತ್ತು ಸಾಮಗ್ರಿಗಳಿಗೆ ಪಠ್ಯಕ್ರಮದಲ್ಲಿ ಅವಕಾಶಮಾಡಿಕೊಡಬೇಕು;
- ವಿಶೇಷ ಅಗತ್ಯವುಳ್ಳ ಮಕ್ಕಳ ಚಲನೆಗೆ ಅಗತ್ಯವಾದ ಸಹಾಯಕ ಉಪಕರಣಗಳನ್ನು ಮತ್ತು ಸನ್ನಿವೇಶಗಳನ್ನು ಒದಗಿಸಬೇಕು;
- ವಿಶೇಷ ಅಗತ್ಯವಿರುವ ಮಕ್ಕಳು ಪರೀಕ್ಷೆಗೆ ಸಂಬಂಧಿಸಿದಂತೆ ಕೆಳಗೆ ಕಾಣಿಸಿರುವ ಅಂಶಗಳಲ್ಲಿ ಒಂದಕ್ಕಿಂತ ಹೆಚ್ಚು ಸೌಲಭ್ಯಗಳನ್ನು ಬಳಸಿಕೊಳ್ಳಲು ಅವಕಾಶಮಾಡಿಕೊಡಬೇಕು;
- ಹೆಚ್ಚಿನ ಕಾಲಾವಕಾಶ: ಪ್ರತಿ ಒಂದು ಗಂಟೆಗೆ ಹೆಚ್ಚುವರಿ 20 ನಿಮಿಷಗಳ ಅವಕಾಶವನ್ನು ಕೊಡಬೇಕು. ಇದು ಲಿಪಿಯನ್ನು ಓದಲು, ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳಲು, ಒಂದೇ ಸಮನೆ ಕುಳಿತುಕೊಳ್ಳುವುದರಿಂದಾಗುವ ಆಯಾಸವನ್ನು ಪರಿಹರಿಸಿಕೊಳ್ಳಲು ಅಗತ್ಯವಾಗುತ್ತದೆ. ವೈದ್ಯಕೀಯ ಸ್ಥಿತಿ/ಸೂಚನೆಗನುಗುಣವಾಗಿ ಸಣ್ಣ ವಿರಾಮದ ಅವಶ್ಯಕತೆ ಇದ್ದರೆ 10ನಿಮಿಷಗಳಿಗೆ ಮೀರದ ವಿರಾಮವನ್ನು ಕಲ್ಪಿಸಿಕೊಡಬೇಕು;
- ಬರಹಗಾರರನ್ನು ಒದಗಿಸುವುದು: ಬರಹಗಾರರ ಅಗತ್ಯವಿದೆ ಎಂಬ ಪ್ರಮಾಣಪತ್ರವಿರುವ ಅಸಾಮರ್ಥ್ಯವುಳ್ಳ ಮಕ್ಕಳಿಗೆ ಈ ಅವಕಾಶವನ್ನು ಕಲ್ಪಿಸಿಕೊಡಬೇಕು. ಇದಕ್ಕೆ ಅರ್ಜಿ ಸಲ್ಲಿಸುವಾಗಲೇ ಅಭ್ಯರ್ಥಿಯು ಯಾವ ಭಾಷೆಯ ಬರಹಗಾರರ ಅವಶ್ಯಕತೆ ಇದೆ ಎಂಬುದನ್ನು ನಮೂದಿಸಬೇಕು;
- ಹೆಚ್ಚುವರಿ ಸಹಾಯ: ಪರೀಕ್ಷೆಯ ಸ್ವರೂಪಕ್ಕನುಗುಣವಾಗಿ, ಪ್ರಯೋಗಾಲಯ ಸಹಾಯಕ ಅಥವಾ ಓದುಗರನ್ನು ಪರೀಕ್ಷಾ ಸಮಯದಲ್ಲಿ ಒದಗಿಸಬೇಕು;
- ವೃತ್ತಿಪರವಲ್ಲದ ಬೆಂಬಲ ಸಿಬ್ಬಂದಿ: ಕೆಲವೊಮ್ಮೆ ಅಸಾಮರ್ಥ್ಯವಿರುವ ಮಕ್ಕಳನ್ನು ಪರೀಕ್ಷಾ ಕೊಠಡಿಯೊಳಗೆ ಕರೆತರಲು, ಅವರ ಸ್ಥಳವನ್ನು ಗುರುತಿಸಲು ಅವರಿಗೆ ಅಭಿಪ್ರೇರಣೆ ಮತ್ತು ಸಮಾಧಾನಕ್ಕಾಗಿ ಸೇವಾನಿರತರ ಅಗತ್ಯವಿರುತ್ತದೆ. ಅದನ್ನು ಒದಗಿಸಿಕೊಡಬೇಕು;
- ಗಣಕಯಂತ್ರಗಳ ಬಳಕೆ: ಕೆಲವೊಮ್ಮೆ ನಿರ್ದಿಷ್ಟ ದೌರ್ಬಲ್ಯವಿರುವವರು (ಕಲಿಕಾ ಅಸಾಮರ್ಥ್ಯತೆ, ಸೆರೆಬ್ರಲ್ ಪಾಲ್ಸಿ, ಸ್ವಲೀನತೆ) ಸಂಬಂಧಪಟ್ಟ ಅಧಿಕಾರಿಗಳಲ್ಲಿ ವಿನಂತಿಸಿಕೊಂಡು ಗಣಕಯಂತ್ರವನ್ನು ಬಳಸಿ ಪರೀಕ್ಷೆಯನ್ನು ಉತ್ತರಿಸುವಂತಾಗಬೇಕು;
- ನಿರ್ದಿಷ್ಟ ದೌರ್ಬಲ್ಯವಿರುವವರಿಗೆ ವಿಶಿಷ್ಟ ಅವಕಾಶಗಳು: ಅಲ್ಪದೃಷ್ಟಿ ಮತ್ತು ಅಂಧರಿಗೆ: ಇವರಿಗೆ ಪರ್ಯಾಯ ಪ್ರಶ್ನೆಪತ್ರಿಕೆಗಳನ್ನು ನೀಡಬೇಕು. ಪತ್ರಿಕೆಯಲ್ಲೇ ಗುರುತಿಸುವುದು, ಭೂಪಟದಲ್ಲಿ ಹೆಸರಿಸುವಿಕೆ, ಜ್ಯಾಮಿತಿಯ ಆಕೃತಿಗಳ ರಚನೆ ಇವುಗಳಿಗೆ ಬದಲಾಗಿ ಬೇರೆ ಪ್ರಶ್ನೆಗಳನ್ನು ಕೊಡಬೇಕು. ಬರಹಗಾರರ ಸಹಾಯ, ಅಥವಾ ಗಣಕಯಂತ್ರಗಳ ಸಹಾಯದ ಬದಲಿಗೆ

ಇವರು ಬ್ರೈಲ್ ಟೈಪ್ ರೈಟರ್ ಗಳನ್ನು ಬಳಸಲು ಅವಕಾಶವಿರಬೇಕು. ಶ್ರವಣ ಅಸಾಮರ್ಥ್ಯವಿರುವವರಿಗೆ ಸಂಕೇತ ಭಾಷಾ ವ್ಯಾಖ್ಯಾನಕಾರರಿ ಪರೀಕ್ಷಾ ಕೊಠಡಿಯ ಒಳಗೆ ಬಂದು ಸಹಾಯ ಮಾಡಲು ಅವಕಾಶ ಮಾಡಿಕೊಡಬೇಕು;

- ಸೆರೆಬ್ರಲ್ ಪಾಲ್ಸಿ, ಸ್ವಲೀನತೆ, ಬೌದ್ಧಿಕ ಅಸಾಮರ್ಥ್ಯವಿರುವವರಿಗೆ ವಿಶಿಷ್ಟ ಸಂಯೋಜನೆಯುಳ್ಳ ಗಣಕಯಂತ್ರಗಳನ್ನು ಬಳಸಲು ಅವಕಾಶ ನೀಡಬೇಕು. ಅವರು ಯೋಜನಾ ಕಾರ್ಯವನ್ನೂ ಆಯ್ಕೆ ಮಾಡಿಕೊಳ್ಳುವ ಅವಕಾಶವಿರಬೇಕು;
- ಸಮುದಾಯದ ಮತ್ತು ಫಲಾನುಭವಿಗಳ ಸಾಮರ್ಥ್ಯಗಳನ್ನು ಸಂವೇದನಾಶೀಲಗೊಳಿಸಬೇಕು;
- ಅಸಾಮರ್ಥ್ಯವಿರುವ ಮಕ್ಕಳು ಮತ್ತು ಅವರ ಪೋಷಕರನ್ನು ಅವರ ಮೇಲೆ ಪ್ರಭಾವ ಬೀರುವ ವಿಷಯಗಳ ಕುರಿತು ಆಗಾಗ್ಗೆ ಮಾತನಾಡಿಸಿ ಮಾಹಿತಿ ನೀಡಬೇಕು. ವಿಭಿನ್ನ ಅಸಾಮರ್ಥ್ಯವಿರುವ ಮಕ್ಕಳ ನಿರ್ದಿಷ್ಟ ಸಮಸ್ಯೆಗಳನ್ನು ಕುರಿತು ಪೋಷಕರೊಡನೆ ಚರ್ಚಿಸಬೇಕು. ಉದಾಹರಣೆಗೆ, ಬ್ರೈಲ್ ಲಿಪಿಯನ್ನು ಓದಲಾಗದ ಅಥವಾ ಸಂಕೇತ ಭಾಷೆಯಲ್ಲಿ ಸಂವಹನ ಮಾಡಲಾಗದ ಸಮಸ್ಯೆಗಳಿದ್ದರೆ ವಿಶೇಷ ಶಿಕ್ಷಕರ ಪೋಷಕರ ಸಹಯೋಗದೊಂದಿಗೆ ಸಮಸ್ಯೆಗಳನ್ನು ನಿವಾರಿಸಬಹುದು.
- ವಿದ್ಯಾರ್ಥಿಯ ಪ್ರಯತ್ನಗಳನ್ನು ಬೆಂಬಲಿಸುವ ಮೂಲಕ ಅವರ ಕಲಿಕೆಯಲ್ಲಿ ಕಾಳಜಿ ವಹಿಸುವ ಮೂಲಕ ವಿದ್ಯಾರ್ಥಿಗಳ ಸ್ವಪರಿಕಲ್ಪನೆಯನ್ನು ಉತ್ತಮಪಡಿಸಬಹುದು.
- ಶಾಲೆ ಮತ್ತು ತರಗತಿಯ ವಾತಾವರಣ ಉತ್ತಮವಾಗಿದ್ದರೆ ವಿಭಿನ್ನ ಸಾಮರ್ಥ್ಯಗಳನ್ನು ಗೌರವಿಸುವಂತಿದ್ದರೆ, ವಿದ್ಯಾರ್ಥಿಗಳ ನಡುವಿನ ಸಂಬಂಧಗಳನ್ನು ಪೋಷಿಸುವಂತಿದ್ದರೆ, ಪೋಷಕ ಸಮುದಾಯದಂತಿದ್ದರೆ, ಎಲ್ಲ ಮಕ್ಕಳೂ ಪ್ರೋತ್ಸಾಹಕ ಭಾವದಿಂದ ಉತ್ತೇಜಿತರಾಗುತ್ತಾರೆ. ಧನಾತ್ಮಕ ಹಿಮ್ಮಾಹಿತ ಕೊಡುವುದರ ಮೂಲಕ ಅಧ್ಯಾಪಕರು ಮಕ್ಕಳ ಸ್ವ-ಪರಿಕಲ್ಪನೆಯನ್ನು ಉತ್ತಮಪಡಿಸಬಹುದು.

**ಅಧ್ಯಾಪಕರು ಏನು ಮಾಡಬಹುದು?**

- ಅಧ್ಯಾಪಕರು ಸಂವೇದನಾಶೀಲರಾಗಿದ್ದು, ಮುಂದಾಲೋಚಕರು ಮತ್ತು ನಿಷ್ಪಕ್ಷಪಾತಿಗಳಾಗಿರಬೇಕು;
- ಎಲ್ಲ ಮಕ್ಕಳೂ ಕಲಿಯಬಲ್ಲರು, ಎಂಬ ಮೂಲಭೂತ ನಂಬಿಕೆಯುಳ್ಳವರಾಗಿದ್ದು, ಮಕ್ಕಳ ಕುರಿತು ಮಹತ್ವಾಕಾಂಕ್ಷಿಗಳಾಗಿರಬೇಕು. ಇದನ್ನು ಮಕ್ಕಳೊಡನೆ ಹಂಚಿಕೊಳ್ಳಬೇಕು;
- ಯಶಸ್ಸನ್ನು ಪ್ರಶಂಸಿಸಬೇಕು; ಇದು ಮಕ್ಕಳ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ;
- ಕಲಿಕಾ ಪ್ರಕ್ರಿಯೆಯಲ್ಲಿ ಎಲ್ಲ ಮಕ್ಕಳೂ ಭಾಗವಹಿಸುವಂತೆ ಸಾಕಷ್ಟು ಅರ್ಥವತ್ತಾದ ಅವಕಾಶಗಳನ್ನೊದಗಿಸಬೇಕು;
- ಮಕ್ಕಳ ಅಸಾಮರ್ಥ್ಯ ಬಾಧಿಸದಿರುವ ಕಲಿಕಾ ಮಾರ್ಗೋಪಾಯಗಳನ್ನು ಬಳಸಬೇಕು. ಮಕ್ಕಳು ತರಗತಿಗೆ ಒಗ್ಗಿಕೊಳ್ಳುವುದಿಲ್ಲ ಎಂಬ ಕಾರಣಕ್ಕಾಗಿ ಬೇರೆಯಾಗಿ ಕುಳ್ಳಿರಿಸುವುದು ಇತ್ಯಾದಿ

ಮಾಡಬಾರದು. ಚಟುವಟಿಕೆಗಳಲ್ಲಿ ಆಯ್ಕೆಗೆ ಅವಕಾಶ ಮಾಡಿಕೊಡುವುದರ ಮೂಲಕ ಇದನ್ನು ಸಾಧಿಸಬಹುದು;

- ಅಸಾಮರ್ಥ್ಯ ಎಂದರೆ ಅಸಹಾಯಕತೆ ಅಥವಾ ನಿಷ್ಪ್ರಯೋಜಕತೆಯಲ್ಲ ಎಂಬುದನ್ನು ಅರ್ಥಮಾಡಿಕೊಂಡು ಅದರಲ್ಲಿ ವಿಶ್ವಾಸವಿಡಬೇಕು;
- ಅಸಾಮರ್ಥ್ಯವಿರುವ ಮಕ್ಕಳಿಗಾಗಿಯೇ ವಿಶೇಷವಾಗಿ ವಿನ್ಯಾಸಗೊಳಿಸಿದ 'ಪ್ಲಸ್ ಕರಿಕ್ಯುಲಮ್' ಅಥವಾ ಧನಾತ್ಮಕ ಪಠ್ಯಕ್ರಮವನ್ನು ರೂಪಿಸುವುದರ ಮೂಲಕ ಅವರಿಗೆ ಶಿಕ್ಷಣದ ಅವಕಾಶ ಸಿಗುವಲ್ಲಿ (ಉದಾಹರಣೆಗೆ, ಬ್ರೈಲ್, ದೊಡ್ಡ ಅಕ್ಷರಗಳು, ಓದುವ ಉಪಕರಣಗಳು, ಕಿವುಡ ಮಕ್ಕಳಿಗೆ ಸಂವಹನ ಇತ್ಯಾದಿ) ಸಹಾಯಮಾಡಬಹುದು;
- ಸಾಮಾನ್ಯ ಪಠ್ಯಕ್ರಮವನ್ನು ನಿರ್ದಿಷ್ಟ ಅಗತ್ಯಗಳಿಗೆ ಮಾರ್ಪಾಡುಗೊಳಿಸಬೇಕು;
- ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು(2005) ದಾಖಲೆಯೂ ವಿಭಿನ್ನ ಕಲಿಕಾದಾರರನ್ನು ಗಮನದಲ್ಲಿಟ್ಟುಕೊಂಡು ಅಂತರ್ಗತ ಪಠ್ಯಕ್ರಮವನ್ನು ಶಿಫಾರಸುಮಾಡುತ್ತದೆ;
- ಎಲ್ಲ ಅಂತರ್ಗತ ಪಠ್ಯಕ್ರಮವು ಎಲ್ಲ ಮಕ್ಕಳೂ ಪರಿಣಾಮಕಾರಿಯಾಗಿ ಭಾಗವಹಿಸುವ ಮತ್ತು ಕಲಿಯಲು ಅವಕಾಶ ಮಾಡಿಕೊಡುವ ಗುರಿಯನ್ನು ಹೊಂದಿರುವಂತಹುದು;
- ಇಂದಿನ ಪರಿಸ್ಥಿತಿಯಲ್ಲಿ ಅಧ್ಯಾಪಕರು ಮಕ್ಕಳ ಅಗತ್ಯಕ್ಕನುಗುಣವಾಗಿ ಮಾರ್ಪಾಡುಗಳನ್ನು ಮಾಡುವ ಅವಕಾಶಗಳಿಲ್ಲ. ಇಂತಹ ಅವಕಾಶಗಳಿರುವಂತೆ ಪಠ್ಯಕ್ರಮದಲ್ಲಿ ನಮ್ಯತೆ ಇರಬೇಕು. ಉದಾಹರಣೆಗೆ, ಶ್ರವಣ ತೊಂದರೆ ಇರುವ ಮಕ್ಕಳಿಗೆ ಒಂದು ಭಾಷೆಯನ್ನು ಕಲಿಯುವುದೇ ಕಷ್ಟ, ಅಂತಹುದರಲ್ಲಿ ಎರಡು ಮೂರು ಭಾಷೆಗಳನ್ನು ಕಲಿಯುವುದಾದರೂ ಹೇಗೆ?
- ಅಂತರ್ಗತ ಶಿಕ್ಷಣವು ಮಗುವಿನ ಬೌದ್ಧಿಕ, ಭಾವನಾತ್ಮಕ, ಸಾಮಾಜಿಕ ಮತ್ತು ಸೃಜನಶೀಲ ಬೆಳವಣಿಗೆಯನು ಗಮನಕ್ಕೆ ತೆಗೆದುಕೊಳ್ಳಬೇಕು. ಅದು 20 ನೇ ಶತಮಾನದ ಶಿಕ್ಷಣಕ್ಕೆ ಗುರುತಿಸಿಕೊಂಡಿರುವ ನಾಲ್ಕು ಸ್ತಂಭಗಳ ಮೇಲೆ –ಕಲಿಯಲು, ಕಾರ್ಯವೆಸಗಲು, ಬದುಕಲು, ಕೂಡಿಬದುಕಲು– ಅವಲಂಬಿತವಾಗಿರಬೇಕು;
- ಅಂತರ್ಗತ ಶಿಕ್ಷಣ ವ್ಯವಸ್ಥೆ ಮತ್ತು ಸಮಾಜವನ್ನು ಸಾಧಿಸಬೇಕಾದರೆ, ಸರ್ಕಾರಕ್ಕೆ ಅದು ಎದುರಿಸುತ್ತಿರುವ ಸಮಸ್ಯೆಗಳ ಸಂಪೂರ್ಣ ಪರಿಚಯವಿರಬೇಕು ಮತ್ತು ಅದಕ್ಕೆ ಸರ್ಕಾರ ಬದ್ಧವಾಗಿರಬೇಕು;
- ಕಲಿಕಾರ್ಥಿ, ಶಿಕ್ಷಣ ವ್ಯವಸ್ಥೆ ಮತ್ತು ಸಮಾಜದ ಬೆಳವಣಿಗೆಯನ್ನು ಕುರಿತ ಅಂತರ್ಗತ ಶಿಕ್ಷಣದ ನಿಯಮಗಳನ್ನು ಮಾಪನಮಾಡಲು ಸೂಕ್ತ ಮೇಲ್ವಿಚಾರಣಾ ಮತ್ತು ಮೌಲ್ಯಮಾಪನ ಕ್ರಮಗಳನ್ನು ಅಳವಡಿಸಿಕೊಳ್ಳಬೇಕು;

**ನಿಯಮ ನಿರೂಪಕರನ್ನು ಸಂವೇದನಾಶೀಲರನ್ನಾಗಿಸುವುದು:**

- ಅಂತರ್ಗತತೆ ಯಶಸ್ವಿಯಾಗಬೇಕಾದರೆ, ಅಧ್ಯಾಪಕರನ್ನು ಮತ್ತು ಪುನರ್ವಸತಿ ವೃತ್ತಿಪರರನ್ನು ತರಬೇತಿಗೊಳಿಸುವುದಲ್ಲದೆ, ಆಡಳಿತಗಾರರನ್ನು ಮತ್ತು ನಿಯಮ ನಿರೂಪಕರು ಮತ್ತು

ಯೋಜಕರನ್ನು ಸಂವೇದನಾಶೀಲರಾಗಿಸುವುದು, ಅವರು ಸಮಸ್ಯೆಗಳನ್ನು ನಿಜರೂಪದಲ್ಲಿ ಅರ್ಥಮಾಡಿಕೊಳ್ಳುವಂತೆ ಮಾಡುವುದು ಅವಶ್ಯಕ.

- ಅಂತರ್ಗತ ಶಿಕ್ಷಣ ಚಳುವಳಿಯನ್ನು ಸಶಕ್ತಗೊಳಿಸಲು ರಾಷ್ಟ್ರಮಟ್ಟದಲ್ಲಿ ವಿಶಾಲವ್ಯಾಪ್ತಿಯ ವೃತ್ತಿಪರರನ್ನು ತರಬೇತಿಗೊಳಿಸಲು ಕಾರ್ಯಕ್ರಮ ಯೋಜನೆ ಮತ್ತು ಅನ್ವಯ ಮತ್ತೊಂದು ಪ್ರಮುಖವಾದ ವಿಚಾರ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

1. ಅಸಾಮರ್ಥ್ಯವಿರುವ ಮಕ್ಕಳಿಗೆ ಹೆಚ್ಚಿನ ಕಾಲಾವಕಾಶ ಕೊಡಬೇಕು, ಕಾರಣ
   a) ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳಲು
   b) ಹುರಿದುಂಬಿಸಲು
   c) ಭಯವನ್ನು ನಿವಾರಿಸಿಕೊಳ್ಳಲು
   d) ಉತ್ತರ ಹುಡುಕಿಕೊಳ್ಳಲು
2. ಅಸಾಮರ್ಥ್ಯವಿರುವ ಮಕ್ಕಳಿಗೆ ಕೊಡಬಹುದಾದ ಹೆಚ್ಚಿನ ಕಾಲಾವಕಾಶ
   a) 30 ನಿಮಿಷ
   b) 20 ನಿಮಿಷ
   c) 40 ನಿಮಿಷ
   d) 50 ನಿಮಿಷ
3. ಹೆಚ್ಚುವರಿ ಸಹಾಯದ ಸ್ವರೂಪ
   a) ಗೆಳೆಯ/ಗೆಳತಿ
   b) ಸಂಬಂಧಿಕರು
   c) ಪ್ರಯೋಗಾಲಯ ಸಹಾಯಕ
   d) ಅಧ್ಯಾಪಕರು
4. ವೃತ್ತಿಪರವಲ್ಲದ ಬೆಂಬಲ ಸಿಬ್ಬಂದಿಯನ್ನು ಒದಗಿಸುವ ಉದ್ದೇಶ
   a) ಅಸಾಮರ್ಥ್ಯತೆ ಇರುವವರಿಗೆ ಧೈರ್ಯ ಹೇಳಲು
   b) ಪರೀಕ್ಷೆಯಲ್ಲಿ ಬರೆಯಲು ಸಹಾಯಮಾಡಲು
   c) ನೈತಿಕ ಬೆಂಬಲ ನೀಡಲು
   d) ಅಸಾಮರ್ಥ್ಯವಿರುವ ಮಕ್ಕಳನ್ನು ಪರೀಕ್ಷಾ ಕೊಠಡಿಯೊಳಗೆ ಕರೆತರಲು

5. ಪರೀಕ್ಷೆಯಲ್ಲಿ ಗಣಕಯಂತ್ರಗಳ ಬಳಕೆಯ ಅವಶ್ಯಕತೆ ಇರುವುದು

a) ಕಲಿಕಾ ಅಸಾಮರ್ಥ್ಯತೆ ಇರುವವರಿಗೆ

b) ದೃಷ್ಟಿ ದೋಷವಿರುವವರಿಗೆ

c) ಶ್ರವಣದೋಷವಿರುವವರಿಗೆ

d) ವರ್ತನಾ ಸಮಸ್ಯೆ ಇರುವವರಿಗೆ

## 2.4.4. ಸಾರಾಂಶಿಸೋಣ :

- ಶಿಕ್ಷಣದ/ಶಾಲೆಯ ಉದ್ದೇಶಗಳನ್ನು ಸಾಧಿಸಲು ಶಾಲೆಯ ಒಳಗೆ ಅಥವಾ ಹೊರಗೆ ನಡೆಯುವ ಎಲ್ಲ ಚಟುವಟಿಕೆಗಳು ಮತ್ತು ಅನುಭವಗಳ ಸಮಷ್ಟಿಯೇ ಪಠ್ಯಕ್ರಮ. ಇದು ಮಗುವಿನ ಬೌದ್ಧಿಕ, ದೈಹಿಕ, ನೈತಿಕ ಮತ್ತು ಭಾವನಾತ್ಮಕ ವಿಕಾಸಕ್ಕೆ ಮೂಲ.
- ಪಠ್ಯಕ್ರಮ ರಚನೆಗೆ ಸಂಬಂಧಿಸಿದಂತೆ ಹಲವು ತತ್ವಗಳನ್ನು ಅನುಸರಿಸಬೇಕು. ಅವೆಂದರೆ, ಶಿಶುಕೇಂದ್ರಿತ ತತ್ವ, ಸಮುದಾಯ ಕೇಂದ್ರಿತ ತತ್ವ, ಚಟುವಟಿಕೆ ಕೇಂದ್ರಿತ ತತ್ವ, ಸಂಯೋಜನಯ ತತ್ವ, ಸಂರಕ್ಷಣೆಯ ತತ್ವ, ಸೃಜನಶೀಲತೆಯ ತತ್ವ.
- ಪಠ್ಯವಸ್ತು ಮತ್ತು ಪಠ್ಯಕ್ರಮ ಇವುಗಳ ನಡುವೆ ವ್ಯತ್ಯಾಸ ಮತ್ತು ಸಂಬಂಧಗಳಿವೆ; ಪಠ್ಯವಸ್ತು ಪಠ್ಯಕ್ರಮದ ಒಂದು ಭಾಗ.
- ಇಂದಿನ ಪಠ್ಯಕ್ರಮದಲ್ಲಿ ಕೆಲವು ಮಿತಿಗಳಿವೆ: ತಾತ್ವಿಕ ವಿಚಾರಗಳಿಗೆ ಹೆಚ್ಚಿನ ಪ್ರಾಧಾನ್ಯತೆ; ಪ್ರಾಂಯೋಗಿಕ ವಿಚಾರಗಳಿಗೆ/ಕೌಶಲಗಳಿಗೆ ಪ್ರಾಮುಖ್ಯತೆ ಇಲ್ಲ; ಕುರುಡು ಪಾಠಕ್ಕೆ(ಅರ್ಥಗ್ರಹಣವಿಲ್ಲದೆ ಕಂಠಪಾಠ ಮಾಡುವುದು) ಹೆಚ್ಚಿನ ಮಹತ್ವ;ಪಠ್ಯಪುಸ್ತಕ ಆಧಾರಿತ ಪರೀಕ್ಷೆಗಳು; ಅತಿ ಹೆಚ್ಚು ಪಠ್ಯವಸ್ತುವಿನ ಹೊರೆ; ಜೀವನಕೇಂದ್ರಿತವಲ್ಲದ ಶಿಕ್ಷಣ; ವ್ಯಕ್ತಿತ್ವದ ಸರ್ವಾಂಗೀಣ ಬೆಳವಣಿಗೆಗೆ ಪ್ರಾಶಸ್ತ್ಯ ಇಲ್ಲ; ಉದ್ಯೋಗ ವಿಷಯಗಳಿಗೆ/ ಕೌಶಲಗಳಿಗೆ ಪ್ರಾಮುಖ್ಯತೆ ಇಲ್ಲ.
- ವಿಶೇಷ ಅಗತ್ಯವುಳ್ಳ ಮಕ್ಕಳ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಕೆಲವು ವಿಚಾರಗಳಿವೆ. ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಶಿಕ್ಷಣದ ಅವಕಾಶಗಳೇ ಮಿತಿಯುಳ್ಳದ್ದು, ಅಸಾಮರ್ಥ್ಯಕ್ಕೆ ಸಂಬಂಧಿಸಿದ ಪರಿಕಲ್ಪನೆಗಳು ಮತ್ತು ಅಧ್ಯಯನಗಳು ಹೆಚ್ಚು ಅವಗಣನೆಗೆ ಒಳಗಾಗಿವೆ, ಅಸಾಮರ್ಥ್ಯವಿರುವವರಿಗೆ ಸಂಬಂಧಿಸದಿ ವಿವಧ ಬೋಧನಾ ಕಲಿಕಾ ವಿಧಾನಗಳನ್ನು ಪಠ್ಯಕ್ರಮವನ್ನು ರೂಪಿಸುವಾಗ ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ, ಅಂತರ್ಗತ ವ್ಯವಸ್ಥೆಯ ಅಡಿಯಲ್ಲಿ ಅಸಾಮರ್ಥ್ಯವಿರುವ ಮಕ್ಕಳನ್ನು ದಾಖಲು ಮಾಡಿಕೊಳ್ಳುವ ಅವಕಾಶಗಳಿದೆಯಾದರೂ ಅವರಿಗೆ ಅಗತ್ಯವಾದ ಕಲಿಕಾ ಮಾರ್ಪಾಡುಗಳನ್ನು ಮಾಡಿಕೊಳ್ಳಲಾಗುವುದಿಲ್ಲ.ಅವರಿಗೆ ವಿಶೇಷವಾದ ಕಲಿಕಾ ಚಟುವಟಿಕೆಗಳನ್ನು ಯೋಜಿಸಲಾಗುವುದಿಲ್ಲ;ಪಠ್ಯಕ್ರಮಗಳು ವಿಶೇಷ ಕಲಿಕಾ ಅಗತ್ಯವುಳ್ಳ ಮಕ್ಕಳ ಹಿನ್ನೆಲೆಯಲ್ಲಿ ನಿರ್ದಿಷ್ಟ ಉದ್ದೇಶಗಳನ್ನು ಗುರುತಿಸಿಕೊಳ್ಳುವುದಿಲ್ಲ; ಮೌಲ್ಯಮಾಪನ ಕ್ರಮಗಳಲ್ಲಿ ವಿಶೇಷ ಮಕ್ಕಳ ಅಗತ್ಯಗಳಿಗೆ ತಕ್ಕಂತೆ ಹೊಂದಾಣಿಕೆ ಮಾಡಿಕೊಳ್ಳಲಾಗಿಲ್ಲ; ಈ ಸನ್ನಿವೇಶದಲ್ಲಿ ನಮ್ಯತೆಯ ಅಂಶ ಬಹಳ ಮುಖ್ಯ. ಇದನ್ನು ಗಣನೆಗೆ ತೆಗೆದುಕೊಳ್ಳಲಾಗಿಲ್ಲ.

- ಅಸಾಮರ್ಥ್ಯವಿರುವ ಮಕ್ಕಳ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಕೆಲವು ಸಲಹೆಗಳನ್ನು ನೀಡಲಾಗಿದೆ: ಎಲ್ಲ ಮಕ್ಕಳ ಶೈಕ್ಷಣಿಕ ಅಗತ್ಯಗಳನ್ನು ಗಮನಿಸಿಕೊಂಡಂತೆ ಶಾಲಾ ಪಠ್ಯಕ್ರಮವನ್ನು ಪುನರ್ವಿಮರ್ಶೆ ಮಾಡಬೇಕು, ಸರ್ಕಾರವು ವಿಶೇಷ ಶಿಕ್ಷಣಕ್ಕೆ ಕೊಡುವ ಅನುದಾನವನ್ನು ಹೆಚ್ಚಿಸಬೇಕು, ಅಸಾಮರ್ಥ್ಯಸ್ನೇಹಿ ಸೌಕರ್ಯಗಳನ್ನು ಮತ್ತು ಸಾಮಗ್ರಿಗಳಿಗೆ ಪಠ್ಯಕ್ರಮದಲ್ಲಿ ಅವಕಾಶಮಾಡಿಕೊಡಬೇಕು, ವಿಶೇಷ ಅಗತ್ಯವುಳ್ಳ ಮಕ್ಕಳ ಚಲನೆಗೆ ಅಗತ್ಯವಾದ ಸಹಾಯಕ ಉಪಕರಣಗಳನ್ನು ಮತ್ತು ಸನ್ನಿವೇಶಗಳನ್ನು ಒದಗಿಸಬೇಕು, ವಿಶೇಷ ಅಗತ್ಯವಿರುವ ಮಕ್ಕಳು ಪರೀಕ್ಷೆಗೆ ಸಂಬಂಧಿಸಿದಂತೆ ಕೆಳಗೆ ಕಾಣಿಸಿರುವ ಅಂಶಗಳಲ್ಲಿ ಒಂದಕ್ಕಿಂತ ಹೆಚ್ಚು ಸೌಲಭ್ಯಗಳನ್ನು ಬಳಸಿಕೊಳ್ಳಲು ಅವಕಾಶಮಾಡಿಕೊಡಬೇಕು, ಪ್ರತಿ ಒಂದು ಗಂಟೆಗೆ ಹೆಚ್ಚುವರಿ 20 ನಿಮಿಷಗಳ ಅವಕಾಶವನ್ನು ಕೊಡಬೇಕು, ಬರಹಗಾರರ ಅಗತ್ಯವಿದೆ ಎಂಬ ಪ್ರಮಾಣಪತ್ರವಿರುವ ಅಸಾಮರ್ಥ್ಯವುಳ್ಳ ಮಕ್ಕಳಿಗೆ ಈ ಅವಕಾಶವನ್ನು ಕಲ್ಪಿಸಿಕೊಡಬೇಕು, ಪರೀಕ್ಷೆಯ ಸ್ವರೂಪಕ್ಕನುಗುಣವಾಗಿ, ಪ್ರಯೋಗಾಲಯ ಸಹಾಯಕ ಅಥವಾ ಓದುಗರನ್ನು ಪರೀಕ್ಷಾ ಸಮಯದಲ್ಲಿ ಒದಗಿಸಬೇಕು,  ಕೆಲವೊಮ್ಮೆ ಅಸಾಮರ್ಥ್ಯವಿರುವ ಮಕ್ಕಳನ್ನು ಪರೀಕ್ಷಾ ಕೊಠಡಿಯೊಳಗೆ ಕರೆತರಲು, ಅವರ ಸ್ಥಳವನ್ನು ಗುರುತಿಸಲು ಅವರಿಗೆ ಅಭಿಪ್ರೇರಣೆ ಮತ್ತು ಸಮಾಧಾನಕ್ಕಾಗಿ ಸೇವಾನಿರತರ ಅಗತ್ಯವಿರುತ್ತದೆ. ಅದನ್ನು ಒದಗಿಸಿಕೊಡಬೇಕು; ಕೆಲವೊಮ್ಮೆ ನಿರ್ದಿಷ್ಟ ದೌರ್ಬಲ್ಯವಿರುವವರು (ಕಲಿಕಾ ಅಸಾಮರ್ಥ್ಯತೆ, ಸೆರೆಬ್ರಲ್ ಪಾಲ್ಸಿ, ಸ್ವಲೀನತೆ) ಸಂಬಂಧಪಟ್ಟ ಅಧಿಕಾರಿಗಳಲ್ಲಿ ವಿನಂತಿಸಿಕೊಂಡು ಗಣಕಯಂತ್ರವನ್ನು ಬಳಸಿ ಪರೀಕ್ಷೆಯನ್ನು ಉತ್ತರಿಸುವಂತಾಗಬೇಕು.

## 2.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1 ಮತ್ತು 2

### ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ 1

1–ಇ, 2–ಅ. 3–ಎ, 4–ಉ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ 2

1–a, 2–b, 3–c, 4–d, 5–a

## 2.4.6. ಘಟಕಾಂತ್ಯ ಅಭ್ಯಾಸಗಳು

1. ವಿಶೇಷ ಅಗತ್ಯವುಳ್ಳ ಮಕ್ಕಳ ಪಠ್ಯಕ್ರಮ ವಿಚಾರಗಳನ್ನು ವಿವರಿಸಿ
2. ವಿಶೇಷ ಅಗತ್ಯವುಳ್ಳ ಮಕ್ಕಳ ಪಠ್ಯಕ್ರಮದ ಮಿತಿಗಳನ್ನು ಹೋಗಲಾಡಿಸಲು ಸಲಹೆಗಳನ್ನು ವಿಶ್ಲೇಷಿಸಿ.

## 2.4.7. ಪರಾಮರ್ಶನ ಸೂಚಿ


1. Kerr John F., Changing the Curriculum, UNI Books, University Of London, 1974.
2. Report Of The Secondary Education Commission, Govt. Of India, Ministry Of Education , New Delhi, 1953.

3. National Curriculum For Primary And Secondary Education: A Frame Work, NCERT,New Delhi, 1985, (From Preface)
4. Sharma R.C. Modern Science Teaching, Dhanpal Rai Publishing Company, 1975. P 82
5. Das R C Curriculum And Evaluation, NCERT, New Delhi, 1984 P 42,
6. Https://Keydifferences.Com/Difference-Between-Syllabus-And-Curriculum.Html
7. Https://En.Wikipedia.Org/Wiki/Curriculum .
8. Https://Cornerstoneseducation.Co.Uk › Blog › Curriculum
9. Https://Www.Theedadvocate.Org/4-Reasons-Classrooms-Need-Diversity-Education/

****************

# ಬ್ಲಾಕ್–2 : ಕಲಿಯುವವರ ವೈವಿಧ್ಯತೆಯನ್ನು ಚರ್ಚಿಸುವುದು ಮತ್ತು ಅರ್ಥಮಾಡಿಕೊಳ್ಳುವುದು

## ಘಟಕ–5 ಪಠ್ಯಕ್ರಮ ಹೊಂದಾಣಿಕೆ ಮತ್ತು ಮಾರ್ಪಾಡುಗಳು

### ಘಟಕದ ರಚನೆ


2.5.1 ಕಲಿಕಾ ಉದ್ದೇಶಗಳು

2.5.2. ಪೀಠಿಕೆ

2.5.3 ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.5.3.1. ಪಠ್ಯಕ್ರಮ ಹೊಂದಾಣಿಕೆ ಮತ್ತು ಮಾರ್ಪಾಡುಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 1

2.5.3.2. ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಸಂಬಂಧಿಸಿದಂತೆ ಪಠ್ಯಕ್ರಮ ಹೊಂದಾಣಿಕೆ ಮತ್ತು ಮಾರ್ಪಾಡುಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 2

2.5.4. ಸಾರಾಂಶಿಸೋಣ

2.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1 ಮತ್ತು 2

2.5.6. ಘಟಕಾಂತ್ಯ ಅಭ್ಯಾಸಗಳು

2.5.7. ಪರಾಮರ್ಶನ ಸೂಚಿ


### 2.5.1 ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಪಠ್ಯಕ್ರಮ ಹೊಂದಾಣಿಕೆಯ ಪರಿಕಲ್ಪನೆಯನ್ನು ಸ್ಪಷ್ಟಪಡಿಸುವರು;
- ಪಠ್ಯಕ್ರಮ ಮಾರ್ಪಾಡು ಎಂಬ ಪರಿಕಲ್ಪನೆಯನ್ನು ವಿವರಿಸುವರು;
- ಪಠ್ಯಕ್ರಮ ಹೊಂದಾಣಿಕೆ ಮತ್ತು ಮಾರ್ಪಾಡುಗಳ ನಡುವಿನ ವ್ಯತ್ಯಾಸವನ್ನು ಗುರುತಿಸುವರು; ಮತ್ತು
- ವಿಶೇಷ ಅಗತ್ಯವುಳ್ಳ ಮಕ್ಕಳ ಪಠ್ಯಕ್ರಮಕ್ಕೆ ಅಗತ್ಯವಾದ ಹೊಂದಾಣಿಕೆ ಮತ್ತು ಮಾರ್ಪಾಡುಗಳೇನು ಎಂಬುದನ್ನು ವಿಶ್ಲೇಷಿಸುವರು.

## 1.5.2. ಪೀಠಿಕೆ

ಹಿಂದಿನ ಘಟಕದಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳ ಪಠ್ಯಕ್ರಮಕ್ಕೆ ಸಂಬಂಧಿಸಿದ ವಿಚಾರಗಳನ್ನು ಅಧ್ಯಯನ ಮಾಡಿದ್ದೀರಿ. ಈ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಪ್ರಮುಖವಾದ ಮತ್ತೆರಡು ಪ್ರಮುಖ ಪರಿಕಲ್ಪನೆಗಳನ್ನು ಮತ್ತು ವಿಶೇಷ ಅಗತ್ಯವುಳ್ಳ ಮಕ್ಕಳ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಅವುಗಳ ನಿಹಿತಾರ್ಥಗಳನ್ನು ಈ ಘಟಕದಲ್ಲಿ ಕಲಿಯುವವರಿದ್ದೀರಿ.

ಈ ಹಂತದಲ್ಲಿ ತರಗತಿ ಅಭ್ಯಾಸಗಳಿಗೆ ಪಠ್ಯಕ್ರಮದ ಪಾಮುಖ್ಯತೆ ಏನು ಎಂಬುದನ್ನೂ ತಿಳಿದುಕೊಳ್ಳಬೇಕು. ತರಗತಿಯಲ್ಲಿ ಅಂತರ್ಗತ ಸಂಸ್ಕೃತಿಯನ್ನು ಬೆಳೆಸಬೇಕಾದರೆ, ಪಠ್ಯಕ್ರಮ ಇದಕ್ಕೆ ಸಂಬಂಧಿಸಿದಂತೆ ಸೂಚಿಸಿರುವ ಎಲ್ಲ ಅಂಶಗಳನ್ನೂ ಗಮನಕ್ಕೆ ತೆಗೆದುಕೊಳ್ಳಬೇಕು. ಇದು ಪಠ್ಯವಸ್ತು, ಪಠ್ಯಪುಸ್ತಕ, ಬೋಧನಾ ಕಲಿಕಾ ಸಾಮಗ್ರಿಗಳು, ಬೋಧನಾ ಮಾರ್ಗೋಪಾಯಗಳು, ಪ್ರಕ್ರಿಯೆಗಳು ಮತ್ತು ಮಾಪನ ಹಾಗೂ ಮೌಲ್ಯಮಾಪನ ಪ್ರಕ್ರಿಯೆಗಳೆಲ್ಲವನ್ನೂ ಒಳಗೊಳ್ಳುತ್ತದೆ.

ಪಠ್ಯಕ್ರಮ ಬೆಳವಣಿಗೆ ಮತ್ತು ಪರಿಷ್ಕಾರಗಳನ್ನು ಚರ್ಚಿಸುತ್ತಾ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಪಠ್ಯಕ್ರಮವನ್ನು "ಮಕ್ಕಳಿಗೆ ಅಂತರ್ಗತವಾಗಿ ಮತ್ತು ಅರ್ಥಪೂರ್ಣ ಅನುಭವವಾಗಿ" ಮಾಡಬೇಕಾದ ಪ್ರಾಮುಖ್ಯತೆಯನ್ನು ಕುರಿತು ಹೇಳುತ್ತದೆ. ಅದರ ಪ್ರಕಾರ ಇದು ಕಲಿಯುವವರ ಕುರಿತು ನಾವು ಆಲೋಚಿಸುವ ರೀತಿಯಲ್ಲಿ ಮತ್ತು ಕಲಿಯುವ ಪ್ರಕ್ರಿಯೆಯಲ್ಲಿ ಮೂಲಭೂತವಾದ ಬದಲಾವಣೆಯನ್ನು ಬಯಸುತ್ತದೆ.

ಹೊಂದಾಣಿಕೆ (Adaptations), ಅನುಕೂಲನ (Accommodations), ಮಾರ್ಪಾಡು (Modifications) ಈ ಪದಗಳು ಒಂದೇ ಅರ್ಥಕೊಡುವಂತೆ ಕಂಡರೂ ವಿಶೇಷ ಅಗತ್ಯವುಳ್ಳ ಮಕ್ಕಳ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಇವುಗಳ ಅರ್ಥ ಗಮನಾರ್ಹವಾಗಿ ಭಿನ್ನವಾಗುತ್ತದೆ. ಅನುಕೂಲನ ಮತ್ತು ಮಾರ್ಪಾಡು ಇವು ಎರಡು ಭಿನ್ನ ರೀತಿಯ ಪಠ್ಯಕ್ರಮ ಹೊಂದಾಣಿಕೆಯಾಗಿ ಸಹಾಯಕವಾಗುತ್ತದೆ.

## 2.5.3.1. ಪಠ್ಯಕ್ರಮ ಹೊಂದಾಣಿಕೆ ಮತ್ತು ಮಾರ್ಪಾಡುಗಳು

ಹೊಂದಾಣಿಕೆಯ ಪರಿಕಲ್ಪನೆಯನ್ನು ಕುರಿತಂತೆ ನಿಮಗೆ ತಿಳಿದಿರಬಹುದು. ನಮ್ಮ ದಿನನಿತ್ಯದ ಜೀವನದಲ್ಲಿ ನಾವು ಸಂತೃಪ್ತಿಯ ಜೀವನವನ್ನು ನಡೆಸಲು ಅನೇಕ ರೀತಿಯ ಹೊಂದಾಣಿಕೆಗಳನ್ನು ಮಾಡಿಕೊಳ್ಳುತ್ತೇವೆ. ಅಂತರ್ಗತ ಶಿಕ್ಷಣದ ಸನ್ನಿವೇಶದಲ್ಲಿ ಹೊಂದಾಣಿಕೆ ಎಂದರೇನು? ಸಾಮಾನ್ಯ ಶಿಕ್ಷಣ ಹಾಗೂ ವಿಶೇಷ ಶಿಕ್ಷಣದ ಸಂದರ್ಭಗಳಲ್ಲಿ ವಿದ್ಯಾರ್ಥಿ/ವಿದ್ಯಾರ್ಥಿನಿ ತನ್ನ ಗುರಿ ಮತ್ತು ಉದ್ದೇಶಗಳನ್ನು ಸಾಧಿಸಲು ಅವಶ್ಯಕವಾದ ಬದಲಾವಣೆಗಳ ವರ್ಣನೆಯೇ ಹೊಂದಾಣಿಕೆ. NCERT (2015), ವಿವರಿಸುವಂತೆ ಮಾಪನಗಳು, ಸಾಮಗ್ರಿಗಳು, ಪಠ್ಯಕ್ರಮ ಮತ್ತು ತರಗತಿಯ ಪರಿಸರ ಇವುಗಳನ್ನು ವಿದ್ಯಾರ್ಥಿಯ ಅಗತ್ಯಗಳಿಗನುಗುಣವಾಗಿ, ಅವನು/ಅವಳು ಭಾಗವಹಿಸುವಂತೆ, ಬೋಧನಾ ಕಲಿಕಾ ಗುರಿಗಳು ಸಾಧಿತವಾಗುವಂತೆ ಮಾಡಿಕೊಳ್ಳುವ ಬದಲಾವಣೆಗಳೇ ಹೊಂದಾಣಿಕೆ ಎನಿಸಿಕೊಳ್ಳುತ್ತದೆ.

ಅವಕಾಶ, ಫಲ, ಪ್ರಯೋಜನ ಮತ್ತು ಸಾಧನೆಯ ಹಂತ ಇವುಗಳು ವಿದ್ಯಾರ್ಥಿ/ವಿದ್ಯಾರ್ಥಿನಿಗಳೆಲ್ಲರಿಗೂ ಸಮನಾಗಿ ಲಭ್ಯವಾಗುವಂತೆ ಶೈಕ್ಷಣಿಕ ಸನ್ನಿವೇಶದಲ್ಲಿ ಅನುವು ಮಾಡಿಕೊಟ್ಟ ಬದಲಾವಣೆಗಳೇ ಒಟ್ಟಾಗಿ ಹೊಂದಾಣಿಕೆಗಳಾಗುತ್ತವೆ. ಅತ್ಯಂತ ಸರಳವಾಗಿ ಹೇಳುವುದಾದರೆ, ಪಠ್ಯಕ್ರಮ ಹೊಂದಾಣಿಕೆಗಳು ಅಸಾಮರ್ಥ್ಯವಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಕಲಿಕಾ ಕೊರತೆಗಳನ್ನು ಕಟ್ಟಿಕೊಡುವ ಮೂಲಕ ಅಂತರ್ಗತ ಪರಿಸರದಲ್ಲಿ ಭಾಗವಹಿಸಲು ಅವಕಾಶಮಾಡಿಕೊಡುತ್ತವೆ.

ಅನುಕೂಲನಗಳು ಇದೇ ಉದ್ದೇಶವನ್ನು ಪಠ್ಯಕ್ರಮದ ಬದಲಾವಣೆ ಇಲ್ಲದೆ ಸಾಧ್ಯವಾಗಿಸುತ್ತವೆ. ಕೆಲವು ಪಠ್ಯಕ್ರಮ ಅನುಕೂಲನಗಳು ಮೂಲಭೂತವಾಗಿ ಕೋರ್ಸಿನ ಬೋಧನೆ ಹಾಗೂ ಮಾಪನಗಳ ಹಂತಗಳಲ್ಲಿ ಇತರ ಮಕ್ಕಳಿಗೆ ನಿಗದಿತವಾದ ಮಟ್ಟದಿಂದ ಅಸಾಮರ್ಥ್ಯವುಳ್ಳವರಿಗೆ ಕಡಿಮೆ ಮಾಡುವುದಾಗಲೀ ಬದಲಾವಣೆ ಮಾಡುವುದಾಗಲೀ ಮಾಡದೇ ಅದನ್ನೇ ಉಳಿಸಿಕೊಳ್ಳುತ್ತವೆ. ಅಂದರೆ ಅನುಕೂಲನದ ಸನ್ನಿವೇಶದಲ್ಲಿ ಕಲಿಯುತ್ತಿರುವ ಅಸಾಮರ್ಥ್ಯವುಳ್ಳ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಅವರ ಇತರ ಸಹಪಾಠಿಗಳು(ಅಸಾಮರ್ಥ್ಯವಿಲ್ಲದವರು) ಕಲಿಯುವ ಪಠ್ಯಕ್ರಮದಲ್ಲೇ ಕಲಿಯುತ್ತಾರೆ. ಅನುಕೂಲನಗಳು ಅಸಾಮರ್ಥ್ಯವಿರುವವರಿಗೆ ಗ್ರಹಿಸಲು, ಮಾಹಿತಿ ಪಡೆಯಲು ಅಥವಾ ಸಂವಹನ ಮಾಡಲು ವಿವಿಧ ಮಾರ್ಗಗಳ ಅನುಕೂಲನವನ್ನು ಮಾಡಿಕೊಡುತ್ತವೆ. ಈ ಬದಲಾವಣೆಗಳು ಕೋರ್ಸಿನ ಗುಣಮಟ್ಟವನ್ನು, ಅದರ ಅಪೇಕ್ಷೆಯನ್ನೇನೂ ಬದಲಿಸುವುದಿಲ್ಲ. ಓದುವ ಕೌಶಲವನ್ನು ಗಳಿಸಿಕೊಳ್ಳುವಲ್ಲಿ ನಿಧಾನಗತಿ ಇರುವ ವಿದ್ಯಾರ್ಥಿ ಕಲಿಯಬೇಕಾದ ವಿಷಯವನ್ನು 'ಆಡಿಯೋ ಟೇಪ್' ಅಥವಾ 'ಸಿ.ಡಿ'ಯ ಮೂಲಕ ಕೇಳಿ ಚರ್ಚೆಯಲ್ಲಿ ಭಾಗವಹಿಸಿ ತನ್ನ ಸಾಧನೆಯನ್ನು ಪ್ರಕಟಪಡಿಸಬಹುದು. ಅಕ್ಷರ ಜೋಡಣೆಯ ಸಮಸ್ಯೆ ಇರುವ ಮಗು ಪೇಪರ್ ಮತ್ತು ಪೆನ್ಸಿಲ್ ಬಳಸುವ ತೊಂದರೆಯ ಬದಲಿಗೆ ತಂತ್ರಜ್ಞಾನದ ಸಹಾಯದಿಂದ ಅಥವಾ ಗಣಕಯಂತ್ರದ ಕೀಬೋರ್ಡ್ ಬಳಸುವುದರ ಮೂಲಕ ಅಪೇಕ್ಷಿತವಾದ ವರದಿ ತಯಾರಿಸಬಹುದು.

ಅನುಕೂಲನಗಳು, ತರಗತಿಯಲ್ಲಿ ಅಸಾಮರ್ಥ್ಯವಿರುವ ಮಗುವನ್ನು ಮುಂದಿನ ಬೆಂಚಿನಲ್ಲಿ ಕೂರಿಸುವುದು, ವ್ಯಕ್ತಿ ನಿರ್ದಿಷ್ಟ ನಿಯೋಜಿತ ಕಾರ್ಯಗಳನ್ನು ಕೊಡುವುದು, ಪರೀಕ್ಷೆಗೆ ಸಂಬಂಧಿಸಿದಂತೆ ಮೌಖಿಕ ಪರೀಕ್ಷೆ, ಬಹು ಉತ್ತರ ಪರೀಕ್ಷೆ, ಪ್ರಶ್ನೆ ಓದಿ ಹೇಳುವುದು, ಇತ್ಯಾದಿ ಕ್ರಮಗಳನ್ನು ಒಳಗೊಳ್ಳುತ್ತದೆ.ಇದು ವೈಯಕ್ತಿಕ ಹೊಂದಾಣಿಕೆಗಳ ಅಗತ್ಯವನ್ನು ಕಡಿಮೆ ಮಾಡುತ್ತವೆ.

ಪಠ್ಯಕ್ರಮ ಹೊಂದಾಣಿಕೆ ಅಂತರ್ಗತ ಸನ್ನಿವೇಶಗಳಲ್ಲಿ ಇಂದು ಅಸ್ತಿತ್ವದಲ್ಲಿರುವ ಒಂದು ಪ್ರಕ್ರಿಯೆ. ಈ ಸಂದರ್ಭದಲ್ಲಿ ಕಲಿಕೆಯ ಅಥವಾ ಇತರ ಅಸಾಮರ್ಥ್ಯವಿರುವವರ ಕಲಿಕಾ ಅವಶ್ಯಕತೆಗಳಿಗನುಗುಣವಾಗಿ ಬೋಧನೆಯ ವಿಷಯ ಮತ್ತು ವರ್ಗಾವಣೆಗೆ ಸಂಬಂಧಿಸಿದಂತೆ ನಿಗದಿಪಡಿಸಲಾಗಿರುವ ಪಠ್ಯಕ್ರಮವನ್ನು ಬದಲಿಸಲಾಗುತ್ತದೆ. ವಿದ್ಯಾರ್ಥಿಗಳು ಪ್ರಯೋಜನ ಪಡೆದು ಕಲಿಕೆಯಲ್ಲಿ ಯಶಸ್ವಿಯಾಗುವಂತೆ ವಿಷಯ, ಬೋಧನಾ ಪ್ರಕ್ರಿಯೆ, ಮಾಪನ ಮತ್ತು ಮೌಲ್ಯಮಾಪನ, ತರಗತಿಯ ಭೌತಿಕ ಪರಿಸರ ಇವುಗಳಲ್ಲಿ ನಮ್ಯತೆ ಇರುವಂತೆ ಮಾಡಿಕೊಳ್ಳುವುದೇ ಪಠ್ಯಕ್ರಮ ಹೊಂದಾಣಿಕೆ.

ಅಧ್ಯಾಪಕರು ಸಮತೆಯನ್ನೊದಗಿಸಿ, ವಿಭಿನ್ನ ಕಲಿಕಾರ್ಥಿಗಳ ಅಗತ್ಯಗಳನ್ನು ಪೂರೈಸಲು, ಅವರು ಪ್ರಯೋಜನ ಪಡೆದುಕೊಳ್ಳುವಂತೆ ಮಾಡಲು, ತರಗತಿಯ ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ಭಾಗವಹಿಸುವಂತೆ ಮಾಡಲುಹೊಂದಾಣಿಕೆ ಮಾಡಿಕೊಳ್ಳುವುದು ಅನಿವಾರ್ಯವಾಗುತ್ತದೆ. ಮೊದಲಿಗೆ ಶಿಕ್ಷಣ ಎಲ್ಲರಿಗೂ ಲಭ್ಯವಾಗುವಂತೆ ಮಾಡುವುದು ಹೊಂದಾಣಿಕೆಯ ಮೊದಲ ಗುರಿಯಾದರೆ, ಯಾವುದೇ ಕಲಿಕಾರ್ಥಿಯನ್ನೂ ಶೈಕ್ಷಣಿಕ ಸನ್ನಿವೇಶದಿಂದ ಹೊರಗಿಡದಂತೆ ನೋಡಿಕೊಳ್ಳುವುದು ಇದರ ಪರಮ ಗುರಿ.

**ಯಾವುದೇ ರೀತಿಯ ಹೊಂದಾಣಿಕೆಯನ್ನು ಮಾಡಿಕೊಳ್ಳುವ ಮೊದಲು ಕೆಳಗಿನ ಅಂಶಗಳನ್ನು ಗಮನಿಸಿಕೊಳ್ಳಬೇಕು:**

- ವೈಯಕ್ತಿಕ ಶಿಕ್ಷಣ ಯೋಜನೆ/ ತರಬೇತಿ ಯೋಜನೆಯೊಂದಿಗೆ ಹೊಂದಾಣಿಕೆಗಳು ಹೊಂದಿಕೊಳ್ಳುವಂತೆ ಗಮನಿಸಿಕೊಳ್ಳಬೇಕು.

- ಹೊಂದಾಣಿಕೆ ಮಾಡಿಕೊಳ್ಳಬೇಕು ಎಂಬ ಕಾರಣ ಮಾತ್ರದಿಂದ ಹೊಂದಾಣಿಕೆ ಮಾಡಿಕೊಳ್ಳಬಾರದು; ಅದು ವಿದ್ಯಾರ್ಥಿಯ/ಗಳ ಅಗತ್ಯವನ್ನು ಪೂರೈಸುವಲ್ಲಿ ಗಮನಾರ್ಹವಾಗಿ ಪ್ರಭಾವ ಬೀರುವಂತಹುದಾಗಿರಬೇಕು.
- ಅಸಾಮರ್ಥ್ಯವಿರುವ ಮಗುವಿಗೆ ಎಲ್ಲ ಕ್ಷೇತ್ರಗಳಲ್ಲೂ ಹೊಂದಾಣಿಕೆಯ ಅಗತ್ಯವಿಲ್ಲದಿರಬಹುದು; ಅಧ್ಯಾಪಕರು ಅಗತ್ಯವಿರುವ ಹೊಂದಾಣಿಕೆಗಳನ್ನು ಮಾತ್ರ ಅನ್ವಯಿಸಿಕೊಳ್ಳಬೇಕು;
- ವಿದ್ಯಾರ್ಥಿಗಳಿಗಾಗಿ ಅಧ್ಯಾಪಕರು ವಿವಿಧ ಕಾರ್ಯಕ್ರಮಗಳನ್ನು ಯೋಜಿಸಿಕೊಳ್ಳಬಾರದು; ಬದಲಿಗೆ ವಿವಿಧ ಉಪಕ್ರಮಗಳ ಮೂಲಕ ವಿಭಿನ್ನ ಅಗತ್ಯಗಳನ್ನು ಪೂರೈಸಬೇಕು.
- ಪ್ರತಿ ಘಟಕದಲ್ಲೂ ವಿದ್ಯಾರ್ಥಿಗಳ ಅಗತ್ಯಗಳನ್ನು ಪೂರೈಸಲು ಅಧ್ಯಾಪಕರು ಪ್ರಯತ್ನಿಸಬೇಕು

**ಪಠ್ಯಕ್ರಮ ಮಾರ್ಪಾಡುಗಳು**

ಪಠ್ಯಕ್ರಮ ಹೊಂದಾಣಿಕೆಗೆ ವಿರುದ್ಧವಾಗಿ ಪಠ್ಯಕ್ರಮ ಮಾರ್ಪಾಡುಗಳು ಅಪೇಕ್ಷಿತ ಗುಣಮಟ್ಟವನ್ನು ಮೊಟಕುಗೊಳಿಸುತ್ತವೆ. ಉದಾಹರಣೆಗೆ, ಪ್ರೌಢಶಾಲಾ ಹಂತದಲ್ಲಿ ಅಸಾಮರ್ಥ್ಯವಿಲ್ಲದ ಮಕ್ಕಳಿಗೆ ಹಳಗನ್ನಡದ ಪದ್ಯಗಳಿರುವ ಪಠ್ಯವಿದ್ದರೆ, ಅದಕ್ಕೆ ಸಮನಾಗ ಅಸಾಮರ್ಥ್ಯವಿರುವ ಮಗುವಿಗೆ ಅದೇ ಪದ್ಯವನ್ನು ಹೊಸಗನ್ನಡ ಗದ್ಯರೂಪದಲ್ಲಿ ಕಲಿಯುವಂತೆಯೋ ಅಥವಾ ಹೊಸಗನ್ನಡದ ಬೇರೆಯೋ ಪದ್ಯವನ್ನು ಕಲಿಯುವಂತೆಯೋ ನಿಗದಿಮಾಡುವುದು ಒಂದು ರೀತಿಯ ಪಠ್ಯಕ್ರಮ ಮಾರ್ಪಾಡು. ಇದು ಅವರಿಗೆ ತರಗತಿಯಲ್ಲಿ ಭಾಗವಹಿಕೆಗೆ ಅವಕಾಶ ಮಾಡಿಕೊಡುತ್ತದೆಯಾದರೂ ಕಲಿಯುವ ಗುಣಮಟ್ಟದಲ್ಲಿ ವ್ಯತ್ಯಾಸವನ್ನು ಉಳಿಸುತ್ತದೆ.

NCERT ಯ ಪ್ರಕಾರ, ವಿದ್ಯಾರ್ಥಿಯ ಕಲಿಕಾ ಅಗತ್ಯಗಳಿಗೆ ಅನುಕೂಲಿಸಲು ಕಲಿಕಾ ಗುರಿಗಳು, ಬೋಧನಾ ಪ್ರಕ್ರಿಯೆಗಳು, ನಿಯೋಜಿತ ಕಾರ್ಯಗಳು ಮತ್ತು ಮಾಪನ ಪ್ರಕ್ರಿಯೆಗಳಲ್ಲಿ ಮಾಡಿಕೊಳ್ಳುವ ಬದಲಾವಣೆಗಳೇ ಮಾರ್ಪಾಡುಗಳು.

**ಕೆಳಕಂಡ ಅಂಶಗಳಲ್ಲಿ ಮಾರ್ಪಾಡುಗಳನ್ನು ಮಾಡಿಕೊಳ್ಳಬಹುದು :**

- ಶಾಲೆ ಮತ್ತು ತರಗತಿಯ ಬೋಧನಾ ಮತ್ತು ಕಲಿಕಾ ಪರಿಸರದಲ್ಲಿ ಮಾರ್ಪಾಡುಗಳು;
- ವ್ಯಕ್ತಿ ಭಿನ್ನತೆಗಳನ್ನು ಸರಿದೂಗಿಸಲು ಬೋಧನೆ ಮತ್ತು ಕಲಿಕೆಯ ಮಾರ್ಗೋಪಾಯಗಳಲ್ಲಿ ಮಾರ್ಪಾಡುಗಳು;
- ಕಲಿಕಾರ್ಥಿಯ ಸಾಧನೆಯನ್ನು ಹೆಚ್ಚಿಸಲು ಬೋಧನೆ ಮತ್ತು ಕಲಿಕೆಯನ್ನು ಬೆಂಬಲಿಸುವ ಸಾಮಗ್ರಿಗಳಲ್ಲಿ ಮಾರ್ಪಾಡುಗಳು;
- ಬೆಂಬಲಿಸುವ ಮಟ್ಟದಲ್ಲಿ ಎಲ್ಲ ರೀತಿಯ ಮಾರ್ಪಾಡುಗಳು; ಮತ್ತು
- ಮಾಪನ ಕ್ರಮಗಳಲ್ಲಿ ಮಾರ್ಪಾಡುಗಳು.




ಹೊಂದಾಣಿಕೆ, ಅನುಕೂಲನ ಮತ್ತು ಮಾರ್ಪಾಡುಗಳ ಸಂಬಂಧವನ್ನು ಮೇಲಿನ ಚಿತ್ರದಲ್ಲಿ ಗಮನಿಸಬಹುದು

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 1**

ಕೆಳಗಿನವುಗಳಲ್ಲಿ ಅನುಕೂಲನವನ್ನು ಕುರಿತ ಮತ್ತು ಮಾರ್ಪಾಡುಗಳನ್ನು ಕುರಿತ ಅವಕಾಶಗಳನ್ನು ಕ್ರಮವಾಗಿ 'ಅ' ಮತ್ತು 'ಮಾ' ಎಂಬ ಅಕ್ಷರಗಳಿಂದ ಗುರುತಿಸಿ.

1. ಬರೆವಣಿಗೆಯ ತೊಂದರೆ ಇರುವ ಮಗುವಿಗೆ ಮೌಖಿಕ ಪರೀಕ್ಷೆ ನೀಡುವುದು
2. ಸರಳೀಕರಿಸಿದ ವಿಷಯವನ್ನು ನಿಗದಿಪಡಿಸುವುದು.
3. ಲಿಖಿತ ಪರೀಕ್ಷೆಯ ಬದಲಿಗೆ ಗಣಕ ಯಂತ್ರದ ಸಹಾಯದಿಂದ ಪರೀಕ್ಷೆ ಉತ್ತರಿಸಲು ಹೇಳುವುದು
4. ಕಡಿಮೆ ಪ್ರಮಾಣದ ವಿಷಯವನ್ನು ನಿಗದಿಮಾಡುವುದು
5. ಅವಧಾನದ ತೊಂದರೆ ಇರುವ ಮಗುವಿಗೆ ಬಹುಉತ್ತರದ ಪ್ರಶ್ನೆ ಕೊಡುವುದು
6. ತೇರ್ಗಡೆಯಾಗಲು ಕಡಿಮೆ ಮಟ್ಟವನ್ನು ನಿಗದಿಗೊಳಿಸುವುದು
7. ಮಗುವನ್ನು ಅಧ್ಯಾಪಕರ ಹತ್ತಿರ ಕೂರಿಸಿಕೊಳ್ಳುವುದು
8. ಕಪ್ಪು ಹಲಗೆಯ ಬದಲಿಗೆ ಹಸಿರು ಅಥವಾ ಹಲಗೆ ಬಳಸುವುದು
9. ಕಲಿಸುವ ರೀತಿಯಲ್ಲಿ ಬದಲಾವಣೆ ಮಾಡಿ ಅಸಾಮರ್ಥ್ಯವಿರುವ ಪ್ರತಿ ಮಗುವಿಗೆ ಅನುಗುಣವಾದ ವಿಧಾನದಲ್ಲಿ ಕಲಿಸುವುದು.

## 2.5.3.2. ವಿಶೇಷ ಅಗತ್ಯವುಳ್ಳ ಮಕ್ಕಳ ಪಠ್ಯಕ್ರಮದ ಹೊಂದಾಣಿಕೆಗಳು ಮತ್ತು ಮಾರ್ಪಾಡುಗಳು :

ಪಠ್ಯಕ್ರಮದ ಹೊಂದಾಣಿಕೆಗಳು ಏಕೆ ಮತ್ತು ಹೇಗೆ ಎಂಬುದು ಪ್ರಶ್ನೆ. ನಾವು ಒಂದು ಅಂಶವನ್ನು ಗಮನದಲ್ಲಿಡಬೇಕು. ಶಾಲೆಗಳು, ತರಗತಿಗಳು ಅಂತರ್ಗತತೆಯ ಸಂಸ್ಕೃತಿಯನ್ನು ಒಪ್ಪಿಕೊಳ್ಳುವುದಾದರೆ ಹೊಂದಾಣಿಕೆ ಅಗತ್ಯ ಮಾತ್ರವಲ್ಲ; ಅನಿವಾರ್ಯವೂ ಹೌದು. ಎಷ್ಟರಮಟ್ಟಿನ ಹೊಂದಾಣಿಕೆ ಎಂಬ ಪ್ರಶ್ನೆಗೆ ಉತ್ತರವಿಲ್ಲ. ಏಕೆಂದರೆ ಎಲ್ಲ ಸನ್ನಿವೇಶಗಳಲ್ಲೂ ಇದೇ ರೀತಿಯ, ಇದೇ ಮಟ್ಟದ ಹೊಂದಾಣಿಕೆಯನ್ನು ಮಾಡಿಕೊಳ್ಳಬೇಕು ಎಂದು ಹೇಳುವುದು ಅಸಾಧ್ಯ. ಅದು ಆಯಾ ಸನ್ನಿವೇಶಕ್ಕೆ ತಕ್ಕಂತೆ, ಅಲ್ಲಿರುವ ಮಕ್ಕಳ ಅಸಾಮರ್ಥ್ಯದ ವಿಧ ಮತ್ತು ಮಟ್ಟಕ್ಕೆ ಅನುಗುಣವಾಗಿ ಕಂಡುಕೊಂಡು ನಿರ್ಧರಿಸಬೇಕಾದ ಅಂಶ. ಕೆಲವರಿಗೆ ಸ್ವಲ್ಪ ಮಟ್ಟಿನ ಹೊಂದಾಣಿಕೆ ಸಾಕಾಗಬಹುದು; ಮತ್ತೆ ಕೆಲವರಿಗೆ ಹೆಚ್ಚಿನ ಮಟ್ಟದ ಹೊಂದಾಣಿಕೆ

ಅಗತ್ಯವಾಗಬಹುದು. ಮತ್ತೆ ಕೆಲವು ಸನ್ನಿವೇಶಗಳಲ್ಲಿ ಭಿನ್ನ ಸ್ವರೂಪದ ಹೊಂದಾಣಿಕೆಯ ಅವಶ್ಯಕತೆ ಉಂಟಾಗಬಹುದು. ಅಸಾಮರ್ಥ್ಯವಿರುವ ಪ್ರತಿ ಮಗುವಿನ ಶೈಕ್ಷಣಿಕ ಗುರಿ ಭಿನ್ನವಾಗಿರುತ್ತದೆ. ಅದಕ್ಕನುಗುಣವಾದ ಹೊಂದಾಣಿಕೆಯನ್ನು ಅಧ್ಯಾಪಕರು ಸ್ವಂತ ವಿವೇಚನೆಯಿಂದ ಗುರುತಿಸಿಕೊಳ್ಳಬೇಕಷ್ಟೆ. ಒಂದು ವಿಷಯವಂತೂ ಸತ್ಯ. ತರಗತಿಯಲ್ಲಿ ಅಂತರ್ಗತತೆಯ ಸ್ವರೂಪ ಹೆಚ್ಚಿದಷ್ಟೂ ಫಲಿತಾಂಶ ಉತ್ತಮವಾಗುತ್ತದೆ.

ಶಿಕ್ಷಣದ ಇತ್ತೀಚಿನ ಸನ್ನಿವೇಶಗಳಿಂದಾಗಿ ಅಧ್ಯಾಪಕರು ಅಸಾಮರ್ಥ್ಯವುಳ್ಳ ಮಕ್ಕಳನ್ನು ಹೆಚ್ಚಿನ ಸಂಖ್ಯೆಯಲ್ಲಿ ದಾಖಲು ಮಾಡಿಕೊಳ್ಳಲು ಕಾತರರಾಗಿದ್ದಾರೆ. ಆದರೆ ಅವರೆಲ್ಲರಿಗೂ ಈ ಮಕ್ಕಳಿಗೆ ಪರಿಣಾಮಕಾರಿಯಾಗಿ ಶಿಕ್ಷಣ ಕೊಡುವ ವಿಶ್ವಾಸವಾಗಲೀ ಸಾಮರ್ಥ್ಯವಾಗಲೀ ಇಲ್ಲ. ಈ ಹಿನ್ನೆಲೆಯಲ್ಲಿ ಇವರಿಗೆ ಸಹಾಯವಾಗುವ ಸಾಹಿತ್ಯವನ್ನು ಸರ್ಕಾರ ಹೊರಡಿಸುತ್ತಿದೆ.

ತರಗತಿಯಲ್ಲಿ ಅಂತರ್ಗತತೆಯ ಸಂಸ್ಕೃತಿಯನ್ನು ಮೂಡಿಸುವಲ್ಲಿ ಇರಬೇಕಾದ ಸನ್ನಿವೇಶವೇನು, ಅದರ ಸ್ವರೂಪ ಎಂತಹುದು, ಅಲ್ಲಿ ನಡೆಯಬೇಕಾದ ಬೋಧನಾ ಕಲಿಕಾ ಪ್ರಕ್ರಿಯೆ ಹೇಗಿರಬೇಕು ಎಂದು ತಿಳಿಯಬೇಕಾದರೆ ಅದಕ್ಕೆ ಮೂಲವಾದ ಪಠ್ಯಕ್ರಮವನ್ನೇ ಪರಾಮರ್ಶಿಸಬೇಕಾಗುತ್ತದೆ. ಇದಕ್ಕೆ ನಿಜವಾದ ಆಧಾರ ತರಗತಿಯಲ್ಲಿರುವ ಮಕ್ಕಳೇ. ಯಾವುದೇ ದಾಖಲೆ/ಸಾಹಿತ್ಯ ಈ ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಸಂಪೂರ್ಣವಾಗಿ ಸಹಾಯಕ್ಕೆ ಬರುತ್ತದೆ ಎಂದು ಹೇಳಲಾಗುವುದಿಲ್ಲ. ಇದನ್ನು ಪರಿಣಾಮಕಾರಿಯಾಗಿಸಲು ಇರುವ ಪ್ರಮುಖ ಮಾರ್ಗ ಎಂದರೆ ಅದೇ ಮಕ್ಕಳನ್ನು ಕುರಿತ ವೀಕ್ಷಣೆ, ಅಧ್ಯಯನ, ತೀರ್ಮಾನಗಳು, ಅದರ ಆಧಾರದ ಮೇಲೆ ಯೋಜನೆ, ಅನ್ವಯ. ಇತರ ಸಾಹಿತ್ಯ ನೆರವಾಗುವುದೇ ಇಲ್ಲ ಎಂದು ಹೇಳಲಾಗುವುದಿಲ್ಲ; ಮೂಲಭೂತವಾಗಿ ಸಹಾಯ ಮಾಡುವುದು ಮಕ್ಕಳ ಸನ್ನಿವೇಶವನ್ನು ಕುರಿತ ಅಧ್ಯಯನವೇ. ಶಿಕ್ಷಣದ ಹಕ್ಕು ಜಾರಿಗೆ ಬಂದ ನಂತರ ನಮ್ಮ ತರಗತಿಗಳ ಸ್ವರೂಪ ಬದಲಾಗುತ್ತಿದೆ. ಜವಾಬ್ದಾರಿ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ಅಂತರ್ಗತ ಶಾಲೆಗಳು, ಅದಕ್ಕೆ ಹೊಂದಿಕೊಂಡ ಪಠ್ಯಕ್ರಮ ಇಂದಿನ ಅಗತ್ಯ.

**ಪಠ್ಯಕ್ರಮ ಹೊಂದಾಣಿಕೆಯ ಪ್ರಾಮುಖ್ಯತೆ :**

- UNCRPD (2006) ಕಡ್ಡಾಯಗೊಳಿಸಿರುವಂತೆ ಪಠ್ಯಕ್ರಮ ಹೊಂದಾಣಿಕೆ ಎಂಬುದು ಸೂಕ್ತವಾದ ಒಂದು ಅನುಕೂಲನ ವ್ಯವಸ್ಥೆ. ಇದು ಮೂಲವಾಹಿನಿಯ ತರಗತಿಗಳಲ್ಲಿ ಕಲಿಕಾ ತೊಂದರೆಗಳಿರುವ ವಿದ್ಯಾರ್ಥಿಗಳಿರುವಾಗ ಬೋಧನಾ ಕಲಿಕಾ ಪ್ರಕ್ರಿಯೆಯನ್ನು ಅನುಕೂಲಿಸುತ್ತದೆ.
- ಪಠ್ಯಕ್ರಮದ ಅತ್ಯಂತ ಪ್ರಮುಖ ಅಂಶಗಳನ್ನು ಕಲಿಯಲು ಸುಲಭವಾಗುವಂತೆ, ಕಲಿಕಾ ವಿಷಯಗಳನ್ನು ಸರಳಗೊಳಿಸಲು ಮತ್ತು ಕಡಿಮೆ ಮಾಡಲು ಪಠ್ಯಕ್ರಮ ಹೊಂದಾಣಿಕೆಗಳನ್ನು ಮಾಡಲಾಗುತ್ತದೆ.
- ಪಠ್ಯಕ್ರಮ ಹೊಂದಾಣಿಕೆಗಳು ಗುಣಮಟ್ಟದ ಮತ್ತು ಅರ್ಥಪೂರ್ಣವಾದ ಕಲಿಕಾ ಅನುಭವಗಳು ಎಲ್ಲ ಮಕ್ಕಳಿಗೂ ದೊರೆಯುತ್ತವೆ ಎಂಬುದನ್ನು ಖಚಿತಪಡಿಸುತ್ತದೆ.
- ಪಠ್ಯಕ್ರಮ ಹೊಂದಾಣಿಕೆಯ ಕಾರಣದಿಂದಾಗಿ ಕಲಿಕಾ ತೊಂದರೆಗಳಿರುವ ಮಕ್ಕಳಿಗೆ ವಿಷಯವನ್ನು ಅರ್ಥಮಾಡಿಕೊಳ್ಳಬೇಕಾದ ಸಂದರ್ಭ ಬಂದಾಗ ತಮ್ಮನ್ನು ಅವಗಣನೆ ಮಾಡಲಾಗಿದೆ ಎಂಬ ಭಾವನೆ ಬರುವುದಿಲ್ಲ.

**ಪಠ್ಯಕ್ರಮ ಹೊಂದಾಣಿಕೆಯ ಅಗತ್ಯವನ್ನು ಅರಿತ ನಂತರ ಅದಕ್ಕೆ ಸಂಬಂಧಿಸಿದ ಪ್ರಮುಖ ತತ್ವಗಳನ್ನು ಗಮನಿಸೋಣ :**

- ಹೊಂದಾಣಿಕೆ ಪಠ್ಯಕ್ರಮದ ಮೂಲ ಪರಿಕಲ್ಪನೆಯನ್ನು ಬದಲಿಸುವಂತಿಲ್ಲ. ಆದರೆ ಬದಲಾವಣೆಗಳ ಮೂಲಕ ಅದನ್ನು ಸುಗಮಗೊಳಿಸಬಹುದು. ಏಕೆಂದರೆ ಎಲ್ಲ ಮಕ್ಕಳಿಗೂ ಕಲಿಕಾ ಅನುಭವಗಳನ್ನು ಒದಗಿಸುವುದು ಹೊಂದಾಣಿಕೆಯ ಉದ್ದೇಶ.
- ಸಮಾನ ಅನುಭವಗಳನ್ನು ಒದಗಿಸಲು, ಕಲಿಕಾ ಕೊರತೆಯನ್ನು ನೀಗಿಸುವ ಪರಿಹಾರಾತ್ಮಕ ಚಟುವಟಿಕೆಗಳನ್ನು ಯೋಜಿಸಬೇಕು. ಇದು ಮಕ್ಕಳಿಗೆ ತರಗತಿಯಲ್ಲಿ ಬೋಧಿಸುವ ಪರಿಕಲ್ಪನೆಗಳು ಸಂಪೂರ್ಣ ಅಥವಾ ಇಡಿಯಾದ ಚಿತ್ರವನ್ನು ಕಟ್ಟಿಕೊಡಲು ಸಹಾಯಕವಾಗುತ್ತದೆ. ಬೋಧನಾ ಸಾಮಗ್ರಿಯ ಉದ್ದೇಶ ಎಲ್ಲ ಮಕ್ಕಳಿಗೂ ಒಂದೇ ಆಗಿರಬೇಕು.
- ಪಠ್ಯಕ್ರಮದ ಬದಲಾವಣೆ ಮಕ್ಕಳ ಗರಿಷ್ಟ ಭಾಗವಹಿಕೆಯನ್ನು ಸಾಧಿಸುವುದನ್ನು ಗುರಿಯಾಗಿರಿಸಿಕೊಳ್ಳಬೇಕು. ಇದು ತರಗತಿಯ ಕಲಿಕಾರ್ಥಿಗಳೆಲ್ಲರಿಗೂ ಅಭಿಪ್ರೇರಣೆಯನ್ನು ಒದಗಿಸಬೇಕು.
- ಕಲಿಕಾ ಸವಾಲುಗಳುಳ್ಳ ಮಕ್ಕಳ ಕಲಿಕಾ ಫಲಗಳನ್ನು ಮಾಪನ ಮಾಡಲು ಮಾಪನ ಮಾನದಂಡಗಳನ್ನೂ ಬದಲಿಸಬಹುದು. ಎಲ್ಲ ಮಕ್ಕಳಿಗೂ ನ್ಯಾಯ ಸಿಗುವಂತೆ ಎಚ್ಚರಿಕೆ ವಹಿಸಬೇಕು.

**ಬೋಧನಾ ವ್ಯವಸ್ಥೆಯಲ್ಲಿ ಮಾಡಬೇಕಾದ ಹೊಂದಾಣಿಕೆಗಳು :**

- ಅಸಾಮರ್ಥ್ಯವಿಲ್ಲದಿರುವ ಮಕ್ಕಳು ಐದು ಆರು ಮಕ್ಕಳ ಗುಂಪಿನಲ್ಲಿ ಕೆಲಸ ಮಾಡುವಾಗ, ಅಸಾಮರ್ಥ್ಯವಿರುವ ಮಕ್ಕಳ ಗುಂಪಿನಲ್ಲಿ ಮೂರು ಮಕ್ಕಳು ಮಾತ್ರ ಇರುವಂತೆ ನೋಡಿಕೊಳ್ಳಬೇಕು.
- ಇತರ ಮಕ್ಕಳು ಒಂಟಿಯಾಗಿ ಕೆಲಸಮಾಡುವಾಗ ಅಸಾಮರ್ಥ್ಯವಿರುವ ಮಕ್ಕಳು ಗುಂಪಿನಲ್ಲಿ ಕೆಲಸಮಾಡುವಂತೆ ನೋಡಿಕೊಳ್ಳಬೇಕು.
- ಇತರ ಮಕ್ಕಳು ಗುಂಪಿನಲ್ಲಿ ಅವರದೇ ನಾಯಕತ್ವದಲ್ಲಿ ಕೆಲಸಮಾಡುವಾಗ ಅಸಾಮರ್ಥ್ಯವಿರುವ ಮಕ್ಕಳೂ ಇತರ ಮಕ್ಕಳೊಡನೆ ಕೆಲಸಮಾಡುವಂತೆ ಮಾಡಿ, ಆ ಗುಂಪಿನ ಜೊತೆಗೆ ಅಧ್ಯಾಪಕರು ಕುಳಿತುಕೊಳ್ಳಬೇಕು. ಇದು ಅವರಿಗೆ ವಿವಿಧ ರೀತಿಗಳಲ್ಲಿ ಸಹಾಯವಾಗುತ್ತದೆ. ಈ ಮೂಲಕ ಚಿಕ್ಕ ಗುಂಪುಗಳಿಗೆ ವೈವಿಧ್ಯತೆ ತರಲು ಪ್ರಯತ್ನಿಸಬೇಕು.

**ಭೌತಿಕ ಪರಿಸರ ಮತ್ತು ಸಾಮಾಜಿಕ ಪರಿಸರದಲ್ಲಿ ಮಾಡಬೇಕಾದ ಹೊಂದಾಣಿಕೆಗಳು :**

- ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಡೆಸ್ಕುಗಳನ್ನು ಬಳಸುವ ಬದಲು ಮೇಜು ಬಳಸುವ ಆಯ್ಕೆ ನೀಡಬೇಕು;
- ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಅವರ ಅಗತ್ಯಗಳಿಗೆ ತಕ್ಕಂತೆ ದೊಡ್ಡ ಅಥವಾ ಸಣ್ಣ ಡೆಸ್ಕುಗಳನ್ನು ಒದಗಿಸಬೇಕು.

- ಶ್ರವಣ ಸೂಕ್ಷ್ಮತೆಯುಳ್ಳ ಮಕ್ಕಳು ತರಗತಿಯಲ್ಲಿ ಹೆಚ್ಚು ಶಬ್ದವಿಲ್ಲದ ಜಾಗದಲ್ಲಿ, ಉದಾಹರಣೆಗೆ ತರಗತಿಯ ಒಂದು ಬದಿಯಲ್ಲಿ ಕೆಲಸಮಾಡಲಿ.
- ಶಾಲೆಯ ಎಲ್ಲ ಸ್ಥಳವನ್ನು ಮಟ್ಟವಾಗಿಸಬೇಕು. ಸಾಧ್ಯವಾಗದಿದ್ದರೆ ಅಸಾಮರ್ಥ್ಯವಿರುವವರ ತರಗತಿಗಳು, ಗ್ರಂಥಾಲಯ, ಪ್ರಯೋಗಾಲಯ ಇವು ಕೆಳಗಿನ ಕಟ್ಟಡದಲ್ಲೇ ಇರುವಂತೆ ನೋಡಿಕೊಳ್ಳಬೇಕು.
- ಹೆಚ್ಚು ಗಮನ ಕೇಂದ್ರೀಕರಿಸಲಾಗದ ಅಸಾಮರ್ಥ್ಯವಿರುವ ಮಕ್ಕಳನ್ನು ಕರಿಹಲಗೆಗೆ ಹತ್ತಿರವಿರುವ ಸ್ಥಳದಲ್ಲಿ ಕುಳ್ಳಿರಿಸಬೇಕು.

**ಬೋಧನಾ ವಿಧಾನ ಮತ್ತು ಬೋಧನಾ ಸಾಮಗ್ರಿಗೆ ಸಂಬಂಧಿಸಿದಂತೆ ಮಾಡಬೇಕಾದ ಹೊಂದಾಣಿಕೆಗಳು :**

- ವಿಷಯಗಳನ್ನು ಅರ್ಥಮಾಡಿಸಲು ಹೆಚ್ಚಾಗಿ ಭೂಪಟ, ಚಾರ್ಟುಗಳು, ಚಿತ್ರಗಳು, ವಸ್ತುಗಳು ಅಥವಾ ವೀಡಿಯೋಗಳು ಇತ್ಯಾದಿ ದೃಶ್ಯ ಸಾಧನಗಳನ್ನು ಬಳಸಬೇಕು.
- ಅಸಾಮರ್ಥ್ಯವಿರುವ ಮಕ್ಕಳಿಗೆ ಪರಿಕಲ್ಪನೆಗಳು ಸುಲಭವಾಗಿ ಅರ್ಥವಾಗುವಂತೆ 'ಗ್ರಾಫಿಕ್ ಆರ್ಗನೈಝರ್' ಗಳನ್ನು ಬಳಸುವುದರ ಮೂಲಕ ಬೋಧಿಸಬೇಕು.
- ಬೋಧನೆ ಮತ್ತು ಮಾಪನ ಎರಡೂ ಸಾಂಪ್ರದಾಯಿಕವಲ್ಲದ ರೀತಿಯಲ್ಲಿ ನಡೆಯಬೇಕು. ಉದಾಹರಣೆ, ಕಿರುನಾಟಕ, ಕ್ಷೇತ್ರ ಪ್ರವಾಸ, ಪ್ರಾಜೆಕ್ಟ್‌ಗಳು ಇತ್ಯಾದಿ.
- ಅಗತ್ಯವಿರುವ ಮಕ್ಕಳಿಗೆ ಹೆಚ್ಚಿನ ಬೆಂಬಲವಾಗಿ ಹೆಚ್ಚುವರಿ ಮಾದರಿಗಳು ಅಥವಾ ಪ್ರಾತ್ಯಕ್ಷಿಕೆಗಳನ್ನು ಕೊಡಬೇಕು.
- ಸಾಂಕೇತಿಕ ಅಭಿವ್ಯಕ್ತಿಯ ಬದಲಿಗೆ ಸ್ಪಷ್ಟ ಸಾಮಗ್ರಿಗಳನ್ನು ಬಳಸಬೇಕು ಇಲ್ಲವೇ ಸಾಂಕೇತಿಕ ಪರಿಕಲ್ಪನೆಗಳನ್ನು ಸ್ಪಷ್ಟ ದೃಷ್ಟಾಂತಗಳೊಂದಿಗೆ, ಉದಾಹರಣೆಗಳೊಂದಿಗೆ ಬೋಧಿಸಿ ಅರ್ಥಮಾಡಿಸಬೇಕು.
- ಅಸಾಮರ್ಥ್ಯವಿರುವ ಮಕ್ಕಳ ಗ್ರಹಿಕೆ ಸುಲಭವಾಗಲು ತಂತ್ರಜ್ಞಾನದ ಅಡಿಯಲ್ಲಿ ಲಭ್ಯವಿರುವ ಎಲ್ಲವನ್ನೂ –ವೈಟ್ ಬೋರ್ಡ್, ವೀಡಿಯೋಗಳು, ಟಾಕ್ ಬುಕ್ಸ್ ಇತ್ಯಾದಿ– ಬಳಸಿಕೊಳ್ಳಬೇಕು.
- ಅವರ ಕಲಿಕೆಯನ್ನು ತಪ್ಪದೇ ನಿರಂತರವಾಗಿ ಪರೀಕ್ಷಿಸುತ್ತಿರಬೇಕು. ಪ್ರಶ್ನೆಗಳನ್ನು ಕೇಳುವುದರ ಮೂಲಕ, ಬಹು ಉತ್ತರ ಪ್ರಶ್ನೆಗಳನ್ನು ಕೊಡುವುದರ ಮೂಲಕ, ಇತರರು ಇವರ ಉತ್ತರಗಳನ್ನು ಅನುಮೋದಿಸುವಂತೆ ಮಾಡುವುದರ ಮೂಲಕ ಕಲಿಕೆಯನ್ನು ಗಟ್ಟಿಗೊಳಿಸಬಹುದು ಮಾತ್ರವಲ್ಲ; ಉತ್ತಮ ಅಭಿಪ್ರೇರಣೆಯನ್ನೂ ನೀಡಬಹುದು.
- ಅವರಿಗೆ ಅವರ ಗ್ರಹಿಕೆಯ ಮಟ್ಟಕ್ಕೆ ಅನುಗುಣವಾಗಿ ವೈವಿಧ್ಯಮಯವಾದ ಓದುವ ಸಾಮಗ್ರಿಗಳನ್ನು ಕೊಡಬೇಕು.
- ಪಠ್ಯವನ್ನು ಗುರುತುಮಾಡಿರುವ, ಮುಖ್ಯಾಂಶಗಳನ್ನು ದೊಡ್ಡದಾಗಿ ಪ್ರಿಂಟಿಸಿರುವ, ಹೆಚ್ಚುವರಿ ಚಿತ್ರಗಳನ್ನು ಬಳಸಿರುವ ವಿಶೇಷ ಪಠ್ಯಗಳನ್ನು ಒದಗಿಸಬೇಕು.

**ಪ್ರಕ್ರಿಯೆ ಅಥವಾ ಕಾರ್ಯಗಳಿಗೆ ಸಂಬಂಧಿಸಿದಂತೆ ಮಾಡಬೇಕಾದ ಹೊಂದಾಣಿಕೆಗಳು :**

- ಇವರಿಗೆ ಮೌಖಿಕವಾಗಿ ಬೋಧನೆಯನ್ನು ಮಾಡುವ ಬದಲಿಗೆ, ಬರಹದಲ್ಲಿರುವ, ಚಿತ್ರರೂಪದಲ್ಲಿರುವ ಅಥವಾ ಧ್ವನಿಮುದ್ರಿತವಾಗಿರುವ ಕಾರ್ಯಗಳನ್ನು ಬಳಸಿ, ಹಂತಹಂತವಾಗಿ ಅರ್ಥಮಾಡಿಕೊಳ್ಳುವಂತೆ ಪ್ರಯತ್ನಿಸಿ.
- ಪ್ರಬಂಧ ರೂಪದ ನಿಯೋಜಿತ ಕಾರ್ಯಗಳನ್ನು ಒಂದು ಚಾರ್ಟಿನಲ್ಲಿರುವುದನ್ನು ಪೂರ್ಣಗೊಳಿಸುವ ರೀತಿಯಲ್ಲಿ, ಪಠ್ಯವನ್ನು ಮಾತಾಗಿ ಪರಿವರ್ತಿಸುವ ರೂಪದಲ್ಲಿ, ಅಥವಾ ಒಂದು ರೂಪುರೇಖೆಯನ್ನು ತೋರಿಸುವ ರೂಪದಲ್ಲಿ ಬದಲಿಸಿ.
- ಇತರ ಮಕ್ಕಳಿಗೆ ಹೋಲಿಸಿದರೆ, ಅಸಾಮರ್ಥ್ಯವಿರುವ ಮಕ್ಕಳಿಗೆ ಕೊಡುವ ನಿಯೋಜಿತ ಕಾರ್ಯಗಳ ಸಂಖ್ಯೆ ಕಡಿಮೆ ಇರಬೇಕು. ಉದಾಹರಣೆಗೆ, ಕೊಟ್ಟಿರುವ ಲೆಕ್ಕಗಳಲ್ಲಿ ಬೆಸ ಸಂಖ್ಯೆಯ ಲೆಕ್ಕಗಳನ್ನು ಮಾತ್ರ ಮಾಡಿರಿ ಇತ್ಯಾದಿ ಹೇಳಬಹುದು.
- ಇತರ ಮಕ್ಕಳು ಮಾಡುವ ಕೆಲಸವನ್ನು ವಿಭಿನ್ನವಾಗಿ ಸಂಗ್ರಹರೂಪದಲ್ಲಿ ಮಾಡುವ ಅವಕಾಶ ಕೊಡಬೇಕು.
- ಟಿಪ್ಪಣಿ ತೆಗೆದುಕೊಳ್ಳುವ ಸುಲಭವಾದ ವಿಧಾನಗಳನ್ನು ಹೇಳಿಕೊಡಬೇಕು. ಇದರಿಂದಾಗಿ ಹೆಚ್ಚು ಪ್ರಮಾಣದ ಬರವಣಿಗೆ ಕಾರ್ಯವನ್ನು ತಡೆಯಬಹುದು.
- ಮಾತನ್ನು ಬರಹರೂಪದಲ್ಲಿರಿಸುವ ತಂತ್ರಜ್ಞಾನ ಮೃದ್ವಂಗಿಗಳನ್ನು ಬಳಸಲು ಅಭ್ಯಾಸ ಮಾಡಿಸಬೇಕು.
- ಅಸಾಮರ್ಥ್ಯವಿರುವವರ ಗ್ರಹಿಕೆಯನ್ನು ಮಾಪನ ಮಾಡುವ ಹೆಚ್ಚು ಸೃಜನಶೀಲವಾದ ಕ್ರಮಗಳನ್ನು ಅಭ್ಯಾಸಗಳನ್ನು ಶಾಲೆಗಳಲ್ಲಿ ರೂಢಿಸಿಕೊಳ್ಳಬೇಕು.

**ವೈಯಕ್ತಿಕ ನೆರವು ನೀಡುವುದಕ್ಕೆ ಸಂಬಂಧಿಸಿದಂತೆ ಮಾಡಬೇಕಾದ ಹೊಂದಾಣಿಕೆಗಳು :**

- ಸಹಾಯಕ ಮಾದರಿಯ ಸೇವೆಯನ್ನು, ಅಂದರೆ ವಿಶೇಷ ಅಗತ್ಯವುಳ್ಳ ಮಕ್ಕಳು ಒಂದು ಕೆಲಸವನ್ನು ಮಾಡುವ ಮೊದಲಿಗೆ ಮಾಡಿ ತೋರಿಸುವ, ಕೊಡಬಹುದು.
- ಸಹಾಯಕರು ಹೆಚ್ಚಿನ ಸೂಚಕಗಳನ್ನು ಬಳಸಲು ಹೇಳಬೇಕು. ಉದಾಹರಣೆಗೆ, ಶಾಬ್ದಿಕ, ಸಂಕೇತಗಳ ಮೂಲಕ, ಅಥವಾ ಪಾರ್ಶ್ವಿಕ, ದೈಹಿಕ ರೂಪಗಳಲ್ಲಿ ಸೂಚಕಗಳನ್ನು ನೀಡಲು ಪ್ರೋತ್ಸಾಹಿಸಬೇಕು.
- ಸಹಾಯಕರು ಕೆಲವು ಕೆಲಸಗಳನ್ನು ಈ ಮಕ್ಕಳ ಜೊತೆಯಲ್ಲಿ ಅಥವಾ ಇವರಿಗಾಗಿ ಮಾಡಲು ಹೇಳಬೇಕು.
- ಸಹಾಯಕರು ತಕ್ಷಣವೇ ಹಿಮ್ಮಾಹಿತಿ ನೀಡಿ ಅಥವಾ ವಿಶೇಷ ಪ್ರೋತ್ಸಾಹಕ ನುಡಿಗಳ ಮೂಲಕ ಯಶಸ್ಸನ್ನು ಖಚಿತಪಡಿಸಿಕೊಳ್ಳುವಂತೆ ಹೇಳಬೇಕು.

**ಅಸಾಮರ್ಥ್ಯವಿರುವ ಮಕ್ಕಳ ಪಠ್ಯಕ್ರಮದಲ್ಲಿ ಮಾಡಬೇಕಾದ ಇತರ ಹೊಂದಾಣಿಕೆಗಳು:**

- ಕಲಿಕೆಯ ವಿಷಯ, ಬೋಧನಾ ಪ್ರಕ್ರಿಯೆ, ಮಾಪನ ಮತ್ತು ಮೌಲ್ಯಮಾಪನ, ಭೌತಿಕ ಪರಿಸರ ಇವುಗಳನ್ನು ಅಸಾಮರ್ಥ್ಯವಿರುವ ಮಕ್ಕಳು ಕಲಿಕೆಯಲ್ಲಿ ಯಶಸ್ಸು ಸಾಧಿಸುವ ಹಾಗೆ ಮಾರ್ಪಡಿಸಬೇಕು.
- ಅಧ್ಯಾಪಕರು ನೀಡುವ ಗುಂಪುಚಟುವಟಿಕೆಗಳು ಎಲ್ಲ ಮಕ್ಕಳನ್ನು ಅರಿತುಕೊಂಡ ಅರಿವಿನ ಆಧಾರದ ಮೇಲೆ ರೂಪಿತವಾಗಿ ಎಲ್ಲರ ಭಾಗವಹಿಕೆಯನ್ನು ಖಚಿತಪಡಿಸಿಕೊಳ್ಳಬೇಕು. ಇದು ಅಧ್ಯಾಪಕರಿಗೆ ಮಕ್ಕಳ ಕುರಿತು ಇರುವ ಜ್ಞಾನವನ್ನು ವ್ಯಕ್ತಪಡಿಸಬೇಕು.
- ಅಂತರ್ಗತ ಸಂಸ್ಕೃತಿಯನ್ನು ಮೂಡಿಸುವುದು, ಹೆಚ್ಚುಹೆಚ್ಚು ಮಕ್ಕಳನ್ನು ತರಗತಿಯೊಳಗೆ ಸೇರಿಸಿಕೊಳ್ಳಲು ಸಹಾಯವಾಗುತ್ತದೆ.
- ಅಸಾಮರ್ಥ್ಯವಿರುವ ಎಲ್ಲ ಮಕ್ಕಳೂ ಒಬ್ಬ ಸಹಪಾಠಿಯೊಡನೆ ನಿಕಟ ಸಂಪರ್ಕದಿಂದಿರುವುದು, ಅವರಿಗೆ ಸಹಾಯಕರಾಗಿರುವವರೊಬ್ಬರು ಇದ್ದಾರೆ ಎಂಬುದನ್ನು ಖಚಿತಪಡಿಸುತ್ತದೆ. ಅಧ್ಯಾಪಕರ ಬೋಧನೆಗಿಂತ ಸಹಪಾಠಿಗಳ ಬೋಧನೆ ಕೆಲವೊಮ್ಮೆ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ.
- ಬೋಧನಾ ವಿಧಾನದಲ್ಲಿ ವಿವಿಧ ಶೈಲಿಗಳನ್ನು ಅನುಸರಿಸಿದರೆ ಒಳ್ಳೆಯದು. ಉದಾಹರಣೆಗೆ ದೃಶ್ಯ, ಶ್ರವಣ, ಸ್ಪರ್ಶ ಇತ್ಯಾದಿ. ಇದು ಕಲಿಕೆಯನ್ನು ಗಟ್ಟಿಗೊಳಿಸುತ್ತದೆ. ಉದಾಹರಣೆಗೆ, ಸಸ್ಯಗಳು ಹೇಗೆ ಬೆಳೆಯುತ್ತವೆ ಎಂಬುದನ್ನು ತರಗತಿಯಲ್ಲಿ ಒಂದು ಸಸ್ಯವನ್ನು ಬೆಳೆಸುವುದರ ಮೂಲಕ, ಪಠ್ಯಗಳ ಮೂಲಕ, ವೀಕ್ಷಣೆಯ ಮೂಲಕ ಇತ್ಯಾದಿ ವಿವಿಧ ವಿಧಾನಗಳಲ್ಲಿ ಕಲಿಸಬಹುದು.

ಮೇಲೆ ಹೇಳಿದ ರೀತಿಯ ಹೊಂದಾಣಿಕೆಗಳು ಅಸಾಮರ್ಥ್ಯವುಳ್ಳ ಮಕ್ಕಳಿಗೆ ವಿವಿಧ ರೀತಿಯ ಕಲಿಕಾ ಅವಕಾಶಗಳನ್ನು ತೆರೆದಿಡುತ್ತವೆ. ಇದು ಮಕ್ಕಳ ಸ್ವ ಪರಿಕಲ್ಪನೆಯನ್ನು ಉತ್ತಮಪಡಿಸಲು, ಅಭಿಪ್ರೇರಣೆಯನ್ನು ಹೆಚ್ಚಿಸಲು, ಉತ್ತಮ ಸಂಬಂಧವನ್ನು ಬೆಳೆಸಲು, ಭಾಗವಹಿಕೆಯನ್ನು ಉತ್ತಮಪಡಿಸಲು, ಪ್ರಮುಖ ಪರಿಕಲ್ಪನೆಗಳನ್ನು ಸ್ಪಷ್ಟಪಡಿಸಿಕೊಳ್ಳಲು ಸಾಧ್ಯಮಾಡಿಕೊಡುತ್ತವೆ.

## ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

ವಿಶೇಷ ಅಗತ್ಯವಿರುವ ಮಕ್ಕಳ ಕಲಿಕೆಗೆ ಬೆಂಬಲವಾಗಿ ಬಳಸಬಹುದಾದುದೇನು ಎಂಬುದನ್ನು '✓' ಗುರುತಿನೊಂದಿಗೆ ಸೂಚಿಸಿರಿ:

1. ಹೆಚ್ಚುವರಿ ಮಾದರಿಗಳು
2. ಬಾಯಿಪಾಠ
3. ಪ್ರಾತ್ಯಕ್ಷಿಕೆಗಳನ್ನು ಕೊಡಬೇಕು.
4. ಉಪನ್ಯಾಸಗಳು
5. ಸ್ಪಷ್ಟ ದೃಷ್ಟಾಂತಗಳು

6. ನಿರಂತರ ಪಾಠ ಬೋಧನೆ

7. ವೈಟ್ ಬೋರ್ಡ್‌ಗಳು

8. ಟಾಕ್ ಬುಕ್ಸ್

9. ವೈವಿಧ್ಯಮಯವಾದ ಓದುವ ಸಾಮಗ್ರಿಗಳು

10. ದೊಡ್ಡದಾಗಿ ಪ್ರಿಂಟಿಸಿರುವ ಪಠ್ಯಗಳು

## 2.5.4. ಸಾರಾಂಶಿಸೋಣ

- ಹೊಂದಾಣಿಕೆ (Adaptations), ಅನುಕೂಲನ (Accommodations), ಮಾರ್ಪಾಡು (Modifications) ಈ ಪದಗಳು ಒಂದೇ ಅರ್ಥಕೊಡುವಂತೆ ಕಂಡರೂ ವಿಶೇಷ ಅಗತ್ಯವುಳ್ಳ ಮಕ್ಕಳ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಇವುಗಳ ಅರ್ಥ ಗಮನಾರ್ಹವಾಗಿ ಭಿನ್ನವಾಗುತ್ತದೆ.
- ಅವಕಾಶ, ಫಲ, ಪ್ರಯೋಜನ ಮತ್ತು ಸಾಧನೆಯ ಹಂತ ಇವುಗಳು ವಿದ್ಯಾರ್ಥಿ/ ವಿದ್ಯಾರ್ಥಿನಿಗಳೆಲ್ಲರಿಗೂ ಸಮನಾಗ ಲಭ್ಯವಾಗುವಂತೆ ಶೈಕ್ಷಣಿಕ ಸನ್ನಿವೇಶದಲ್ಲಿ ಅನುವು ಮಾಡಿಕೊಟ್ಟ ಬದಲಾವಣೆಗಳೇ ಒಟ್ಟಾಗಿ ಹೊಂದಾಣಿಕೆಗಳಾಗುತ್ತವೆ. ಅತ್ಯಂತ ಸರಳವಾಗಿ ಹೇಳುವುದಾದರೆ, ಪಠ್ಯಕ್ರಮ ಹೊಂದಾಣಿಕೆಗಳು ಅಸಾಮರ್ಥ್ಯವಿರುವ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ಕಲಿಕಾ ಕೊರತೆಗಳನ್ನು ಕಟ್ಟಿಕೊಡುವ ಮೂಲಕ ಅಂತರ್ಗತ ಪರಿಸರದಲ್ಲಿ ಭಾಗವಹಿಸಲು ಅವಕಾಶಮಾಡಿಕೊಡುತ್ತವೆ.
- ಅನುಕೂಲನಗಳು ಇದೇ ಉದ್ದೇಶವನ್ನು ಪಠ್ಯಕ್ರಮದ ಬದಲಾವಣೆ ಇಲ್ಲದೆ ಸಾಧ್ಯವಾಗಿಸುತ್ತವೆ. ಕೆಲವು ಪಠ್ಯಕ್ರಮ ಅನುಕೂಲನಗಳು ಮೂಲಭೂತವಾಗಿ ಕೋರ್ಸಿನ ಬೋಧನೆ ಹಾಗೂ ಮಾಪನಗಳ ಹಂತಗಳಲ್ಲಿ ಇತರ ಮಕ್ಕಳಿಗೆ ನಿಗದಿತವಾದ ಮಟ್ಟದಿಂದ ಅಸಾಮರ್ಥ್ಯವುಳ್ಳವರಿಗೆ ಕಡಿಮೆ ಮಾಡುವುದಾಗಲೀ ಬದಲಾವಣೆ ಮಾಡುವುದಾಗಲೀ ಮಾಡದೇ ಅದನ್ನೇ ಉಳಿಸಿಕೊಳ್ಳುತ್ತವೆ.
- ಪಠ್ಯಕ್ರಮ ಹೊಂದಾಣಿಕೆಗೆ ವಿರುದ್ಧವಾಗಿ ಪಠ್ಯಕ್ರಮ ಮಾರ್ಪಾಡುಗಳು ಅಪೇಕ್ಷಿತ ಗುಣಮಟ್ಟವನ್ನು ಮೊಟಕುಗೊಳಿಸುತ್ತವೆ.
- ತರಗತಿಗಳು ಅಂತರ್ಗತತೆಯ ಸಂಸ್ಕೃತಿಯನ್ನು ಒಪ್ಪಿಕೊಳ್ಳುವುದಾದರೆ ಹೊಂದಾಣಿಕೆ ಅಗತ್ಯ ಮಾತ್ರವಲ್ಲ; ಅನಿವಾರ್ಯವೂ ಹೌದು. ಎಷ್ಟರಮಟ್ಟಿನ ಹೊಂದಾಣಿಕೆ ಎಂಬ ಪ್ರಶ್ನೆಗೆ ಉತ್ತರವಿಲ್ಲ. ಏಕೆಂದರೆ ಎಲ್ಲ ಸನ್ನಿವೇಶಗಳಲ್ಲೂ ಇದೇ ರೀತಿಯ, ಇದೇ ಮಟ್ಟದ ಹೊಂದಾಣಿಕೆಯನ್ನು ಮಾಡಿಕೊಳ್ಳಬೇಕು ಎಂದು ಹೇಳುವುದು ಅಸಾಧ್ಯ.
- ಪಠ್ಯಕ್ರಮ ಹೊಂದಾಣಿಕೆ ಮಾಡುವಾಗ ಸಂಬಂಧಿಸಿದ ಪ್ರಮುಖ ತತ್ವಗಳನ್ನು ಗಮನಿಸಬೇಕು
- ಬೋಧನಾ ವ್ಯವಸ್ಥೆ, ಭೌತಿಕ ಪರಿಸ'ರ ಮತ್ತು ಸಾಮಾಜಿಕ ಪರಿಸರ, ಬೋಧನಾ ವಿಧಾನ ಮತ್ತು ಬೋಧನಾ ಸಾಮಗ್ರಿ, ಪ್ರಕ್ರಿಯೆ ಅಥವಾ ಕಾರ್ಯಗಳು– ಈ ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ ಹೊಂದಾಣಿಕೆ ಮಾಡಿಕೊಳ್ಳಬೇಕು.

## 2.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1 ಮತ್ತು 2

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 1

1, 3, 5, 7, 8–ಅ

2, 4, 6, 9– ಮಾ

### ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

1, 3, 5, 7, 8, 9, 10–✓

## 2.5.6. ಘಟಕಾಂತ್ಯ ಅಭ್ಯಾಸಗಳು

1. ಹೊಂದಾಣಿಕೆ, ಅನುಕೂಲನ ಮತ್ತು ಮಾರ್ಪಾಡುಗಳ ಪರಿಕಲ್ಪನೆಗಳನ್ನು ಉದಾಹರಣೆಯೊಂದಿಗೆ ವಿವರಿಸಿ.

2. ಅಸಾಮರ್ಥ್ಯವಿರುವ ಮಕ್ಕಳಿಗೆ ಬೋಧನಾ ವ್ಯವಸ್ಥೆ, ಭೌತಿಕ ಪರಿಸ'ರ ಮತ್ತು ಸಾಮಾಜಿಕ ಪರಿಸರ, ಬೋಧನಾ ವಿಧಾನ ಮತ್ತು ಬೋಧನಾ ಸಾಮಗ್ರಿ, ಕಾರ್ಯಗಳಿಗೆ ಸಂಬಂಧಿಸಿದಂತೆ ಮಾಡಿಕೊಳ್ಳಬೇಕಾದ ಹೊಂದಾಣಿಕೆಯನ್ನು ವಿವರಿಸಿ.

## 2.5.7. ಪರಾಮರ್ಶನ ಸೂಚಿ


1. blog.brookespublishing.com/5-types-of-instructional-adaptations-for-your-inclusive-c

3. Syllabus is the document that contains all the portion of the concepts covered in a subject.

4. www.rehabcouncil.nic.in/writereaddata/Block3accie.pdf
5. https://www.teachervision.com/.../adaptations-modifications-students-special-needs

6. Guha, A. (2016). Curriculum Adaptations and Types of Adaptation, Lecture notes/Power Point Presentation, International Workshop on Inclusive Education, Short Training Initiative, December 2016, Ranchi, Jharkhand.

7. De Vroey, A. (2016). Inclusive Education, Lecture notes/Power Point Presentation, International Workshop on Inclusive Education, Short Training Initiative, December 2016, Ranchi, Jharkhand.

8. NCERT (ncert.nic.in) (2005). National Curriculum Framework 2005. Retrieved from www.ncert.nic.in/rightside/links/pdf/framework/english/nf2005.pdfhttps://www.google.co.in/ webhp?sourceid=chrome

9. Wikipedia, the free encyclopedia, Main Features of the NCF 2005 · Perspective of NCF. Retrieved from https://en.wikipedia.org/wiki/National_Curriculum_Framework_(NCF_2005) https://johnparankimalil.wordpress.com/.../salient-features-of-national-curriculum-fra...

10. Dushi, G. Need and importance of curriculum may be summed up as follows, Retrieved from http://www.preservearticles.com/2012010920288/need-and-importance-of-curriculum-maybe-summed-up-as-follows.html

****************

# ಬ್ಲಾಕ್–2 : ಕಲಿಯುವವರ ವೈವಿಧ್ಯತೆಯನ್ನು ಚರ್ಚಿಸುವುದು ಮತ್ತು ಅರ್ಥಮಾಡಿಕೊಳ್ಳುವುದು

## ಘಟಕ–6 ಮಾಪನ ಮತ್ತು ಮೌಲ್ಯಮಾಪನ

### ಘಟಕದ ರಚನೆ


2.6.1 ಕಲಿಕಾ ಉದ್ದೇಶಗಳು

2.6.2. ಪೀಠಿಕೆ

2.6.3 ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.6.3.1. ಮಾಪನ ಮತ್ತು ಮೌಲ್ಯಮಾಪನ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 1

2.6.3.2. ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಸಂಬಂಧಿಸಿದಂತೆ ಮಾಪನ ಮತ್ತು ಮೌಲ್ಯಮಾಪನ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ– 2

2.6.4. ಸಾರಾಂಶಿಸೋಣ

2.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1 ಮತ್ತು 2

2.6.6. ಘಟಕಾಂತ್ಯ ಅಭ್ಯಾಸಗಳು

2.6.7. ಪರಾಮರ್ಶನ ಸೂಚಿ


### 2.6.1 ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಮಾಪನದ ಪರಿಕಲ್ಪನೆಯನ್ನು ಸ್ಪಷ್ಟಪಡಿಸುವರು;
- ಮೌಲ್ಯಮಾಪನದ ಪರಿಕಲ್ಪನೆಯನ್ನು ವಿವರಿಸುವರು;
- ಮಾಪನ ಮತ್ತು ಮೌಲ್ಯಮಾಪನಗಳ ನಡುವಿನ ವ್ಯತ್ಯಾಸವನ್ನು ಗುರುತಿಸುವರು;
- ನಿರಂತರ ಮತ್ತು ಸಮಗ್ರ ಮೌಲ್ಯಮಾಪನದ ಪರಿಕಲ್ಪನೆ ಮತ್ತು ಅನ್ವಯವನ್ನು ಕುರಿತು ವಿಶ್ಲೇಷಿಸುವರು; ಮತ್ತು
- ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ನಿರಂತರ ಮತ್ತು ಸಮಗ್ರ ಮೌಲ್ಯಮಾಪನದ ಪ್ರಾಮುಖ್ಯತೆಯನ್ನು ಸಮರ್ಥಿಸುವರು.

## 2.6.2. ಪೀಠಿಕೆ

ಅಧ್ಯಾಪಕರಾಗಿರುವ ನಿಮಗೆಲ್ಲರಿಗೂ ಮುಂದಿನ ಅನುಭವ ಒಂದಲ್ಲ ಒಂದು ಸಲ ಆಗಿಯೇ ಇರುತ್ತದೆ. ಪಾಠ ಮಾಡುವಾಗ ನೀವು ಬೋಧಿಸುತ್ತಿರುವ ವಿಷಯ ಮಕ್ಕಳಿಗೆ ಅರ್ಥವಾಗುತ್ತಿದೆಯೇ ಇಲ್ಲವೇ ಎಂಬ ಸಂಶಯ ನಿಮಗುಂಟಾಗುತ್ತದೆ. ಅವರ ಮುಖಚರ್ಯೆಯನ್ನು ನೋಡಿ ನೀವು 'ಓಹೋ, ಅರ್ಥವಾಗುತ್ತಿದೆ' ಎನಿಸುತ್ತದೆ. ನಂತರ ಪರೀಕ್ಷಿಸಲು ಒಂದು ಪರೀಕ್ಷೆಯನ್ನು ಕೊಟ್ಟು ಫಲಿತಾಂಶವನ್ನು ನೋಡಿದರೆ, ನಿಮಗೇ ಆಶ್ಚರ್ಯವಾಗುವಂತೆ, ಕೆಲವೇ ಮಕ್ಕಳಿಗೆ ನಿಮ್ಮ ಪಾಠ ಅರ್ಥವಾಗಿರುತ್ತದೆ. ಕೆಲವರು ಪಾಠವನ್ನು ತಪ್ಪಾಗಿ ಗ್ರಹಿಸಿರುವುದೂ ನಿಮ್ಮ ಗಮನಕ್ಕೆ ಬಂದಿರುತ್ತದೆ. ಇದು ನಿಮ್ಮನ್ನು ಬೇಸರಕ್ಕೀಡುಮಾಡುತ್ತದೆ. ಹಿಂದಿನ ಪಾಠ ಅರ್ಥವಾಗದ ಕಾರಣ, ಮುಂದಿನ ಪಾಠವೂ ಅರ್ಥವಾಗುವುದಿಲ್ಲ.

ಈ ರೀತಿಯ ಒತ್ತಡದಿಂದ ಹೊರಬರಲು ಏನು ಮಾಡಬಹುದು? ರೂಪಣಾತ್ಮಕ ಮಾಪನಗಳು ಇದಕ್ಕೆ ಒಂದು ಉಪಾಯ ಎಂದು ಶಿಕ್ಷಣ ಜಗತ್ತಿನಲ್ಲಿ ಕಂಡುಕೊಳ್ಳಲಾಗಿದೆ. ಇವು ಕಲಿಕೆಯನ್ನು ಪರಿಣಾಮಕಾರಿಯಾಗಿಸುತ್ತವೆ ಎಂದೂ ಕಂಡುಕೊಳ್ಳಲಾಗಿದೆ.

ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಇತ್ತೀಚೆಗೆ ಬಳಕೆಯಲ್ಲಿರುವ ಉಪಕ್ರಮ ಎಂದರೆ ನಿರಂತರ ಮತ್ತು ಸಮಗ್ರ ಮೌಲ್ಯಮಾಪನ. ಇದು ಶಿಕ್ಷಣ ಹಕ್ಕು ಕಾಯಿದೆಯಿಂದಲೂ (RTE Act 2009) ಅನುಮೋದನೆಗೊಂಡಿದೆ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಪ್ರಕಾರ ಇದು ಅರ್ಥವತ್ತಾದ ಏಕೈಕ ಮೌಲ್ಯಮಾಪನ ವಿಧಾನ. ಇದನ್ನು ವ್ಯವಸ್ಥೆಯಲ್ಲಿ ಎಲ್ಲಿ ಮತ್ತು ಯಾವಾಗ ಪರಿಣಾಮಕಾರಿಯಾಗಿ ಬಳಸಬಹುದು ಎಂಬುದನ್ನು ಅರ್ಥಮಾಡಿಕೊಳ್ಳುವುದು ಅತಿ ಅವಶ್ಯಕ. ಇದು ಅಧ್ಯಾಪಕರ ಹೆಚ್ಚಿನ ಕಾಲ ಮತ್ತು ಸಾಮರ್ಥ್ಯಗಳನ್ನು ಬಯಸುತ್ತದೆ. ಸೂಕ್ತ ದಾಖಲೆಗಳ ನಿರ್ವಹಣೆ ಇದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ನಿರಂತರವಾಗಿ ಮಗುವಿನ ಸಾಧನೆ/ಸಾಮರ್ಥ್ಯಗಳನ್ನು ಗುರುತಿಸುವುದು ಇದರ ಉದ್ದೇಶ. ಈ ಪ್ರಕ್ರಿಯೆಯಲ್ಲಿ ಕೇವಲ ಪರೀಕ್ಷೆಗಳನ್ನು ನಡೆಸಿ ಮಾರ್ಕು ಹಾಕುವುದನ್ನೇ ಪ್ರಧಾನ ಅಂಶವಾಗಿ, ಅಧ್ಯಾಪಕರ ಅಧಿಕಾರವೇ ಪ್ರಧಾನವಾಗಿಬಿಟ್ಟರೆ ಇದರ ಮೂಲ ಉದ್ದೇಶವೇ ಮರೆಯಾಗಿಬಿಡುತ್ತದೆ.

ಹೆಸರೇ ತಿಳಿಸುವಂತೆ ನಿರಂತರ ಮತ್ತು ಸಮಗ್ರ ಮೌಲ್ಯಮಾಪನವು ಒಂದು ನಿರಂತರವಾಗಿ ನಡೆಯಬೇಕಾದ ಪ್ರಕ್ರಿಯೆ. ಇವು ಸಾಂಪ್ರದಾಯಿಕ ಪರೀಕ್ಷೆಗಳಲ್ಲ. ಬೋಧನೆ ಮತ್ತು ಕಲಕೆಯ ಉದ್ದೇಶಗಳು ಎಷ್ಟರಮಟ್ಟಿಗೆ ಸಾಧಿತವಾಗಿವೆ ಎಂಬುದನ್ನು ನಿರಂತರವಾಗಿ ಕಂಡುಕೊಳ್ಳುವ ಪ್ರಕ್ರಿಯೆ. ಹಾಗಾಗಿ ಮೌಲ್ಯಮಾಪನವನ್ನು ಯೋಜಿಸುವುದು ಮತ್ತು ವಿನ್ಯಾಸಗೊಳಿಸುವುದು ಬೋಧನೆಯ ಅನಿವಾರ್ಯ ಭಾಗ. ಸರಿಯಾಗಿ ಯೋಜಿಸಿದ ಈ ಉಪಕ್ರಮದ ಪ್ರಯೋಜನವೆಂದರೆ, ಇದು ವಿದ್ಯಾರ್ಥಿಗಳ ಸಾಧನೆಯನ್ನು ನಿರಂತರವಾಗಿ ಗುರುತಿಸಿ ಅಗತ್ಯವಾದ ಮಧ್ಯವರ್ತನಗಳನ್ನು ಕೊಡುವುದು ಇದರಿಂದ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ವಿಶೇಷ ಅಗತ್ಯವಿರುವ ಮಕ್ಕಳ ಸಾಧನೆಯ ಮೌಲ್ಯಮಾಪನದಲ್ಲಿ ನಿರಂತರ ಮತ್ತು ಸಮಗ್ರ ಮೌಲ್ಯಮಾಪನವನ್ನು ಹೇಗೆ ಅಳವಡಿಸಬಹುದು ಎಂಬುದನ್ನು ಈ ಘಟಕದಲ್ಲಿ ಚರ್ಚಿಸೋಣ.

## 2.6.3 ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 2.6.3.1. ಮಾಪನ ಮತ್ತು ಮೌಲ್ಯಮಾಪನ

ಶಿಕ್ಷಣದಲ್ಲಿ ಮೌಲ್ಯಮಾಪನ ಎಂಬ ಪದವು, ಸಾಮಾನ್ಯ ಹಾಗೂ ವಿಶೇಷ ಅಗತ್ಯವಿರುವ ಮಕ್ಕಳ ಶೈಕ್ಷಣಿಕಸಿದ್ಧತೆ, ಕಲಿಕಾ ಪ್ರಗತಿ, ಕೌಶಲಗಳ ಸ್ವಾಮ್ಯ, ಅಥವಾ ಶೈಕ್ಷಣಿಕ ಅಗತ್ಯಗಳನ್ನು ಮಾಪನಮಾಡಲು, ಮೌಲ್ಯಮಾಪನ ಮಾಡಲು ಮತ್ತು ದಾಖಲಿಸಲು, ಶಿಕ್ಷಕರು ಬಳಸುವ ವಿಶಾಲವ್ಯಾಪ್ತಿಯ ವಿಧಾನ ಮತ್ತು ಸಾಧನಗಳನ್ನು ಒಳಗೊಳ್ಳುತ್ತದೆ. ಮಾಪನಗಳನ್ನು ಸಾಮಾನ್ಯವಾಗಿ ಸಾಂಪ್ರದಾಯಿಕ ಪರೀಕ್ಷೆಗಳಿಗೆ, ವಿಶೇಷವಾಗಿ ಪ್ರಮಾಣೀಕರಿಸಿದ ಪರೀಕ್ಷೆಗಳಿಗೆ ಬಳಸುವುದಾದರೂ ಶಿಕ್ಷಣ ತಜ್ಞರು ಹಲವಾರು ಮೌಲ್ಯಮಾಪನ ಸಾಧನಗಳನ್ನು ವಿಭಿನ್ನ ಉದ್ದೇಶಗಳಿಗಾಗಿ ಬಳಸುತ್ತಾರೆ. ಶೈಕ್ಷಣಿಕ ಪಾಠಗಳಿಗೆ ವಿವಿಧ ಕಾರ್ಯಗಳಿರುವಂತೆ, ಮಾಪನಿಗಳನ್ನೂ ಹಲವಾರು ಭಿನ್ನ ಉದ್ದೇಶಗಳಿಗಾಗಿ ಬಳಸಲಾಗುತ್ತದೆ. ಉದಾಹರಣೆಗೆ, ಒಂದು ಪರಿಕಲ್ಪನೆಗೆ ಸಂಬಂಧಿಸಿದಂತೆ ವಿದ್ಯಾರ್ಥಿ ಈಗಾಗಲೇ ಹೊಂದಿರುವ ಜ್ಞಾನವನ್ನು ಗುರುತಿಸಲು, ವಿವಿಧ ರೀತಿಯ ಪಠ್ಯಗಳನ್ನು ಗ್ರಹಿಸಲು ಮತ್ತು ವಿಶ್ಲೇಷಿಸಲು ವಿದ್ಯಾರ್ಥಿಗಿರುವ ಸಾಮರ್ಥ್ಯವನ್ನು ಮಾಪನಮಾಡಲು ಇತ್ಯಾದಿ. ವಿದ್ಯಾರ್ಥಿಗಳ ವೈಯಕ್ತಿಕ ಸಾಮರ್ಥ್ಯಗಳನ್ನು ಮಿತಿ ಅಥವಾ ಕೊರತೆಗಳನ್ನೂ ಮಾಪನಿಗಳು ತೆರೆದಿಡುತ್ತವೆ. ಇದರಿಂದಾಗಿ ಶಿಕ್ಷಕರು ಸೂಕ್ತವಾದ ಶೈಕ್ಷಣಿಕ ಬೆಂಬಲವನ್ನು ಕೊಡಲು, ಕಾರ್ಯಕ್ರಮಗಳನ್ನು ಯೋಜಿಸಲು, ಅಥವಾ ಸಾಮಾಜಿಕ ಸೇವೆಗಳನ್ನೊದಗಿಸಲು ಸಾಧ್ಯವಾಗುತ್ತದೆ.

ಮಾಪನವನ್ನು, ಕಲಿಕೆಯನ್ನು ಕುರಿತ ಮಾಹಿತಿಯ ವ್ಯವಸ್ಥಿತ ಸಂಗ್ರಹ, ವ್ಯಾಖ್ಯಾನ ಮತ್ತು ಬಳಕೆ ಎಂಬುದಾಗಿ ಹೇಳಲಾಗುತ್ತದೆ. ಇದು ವಿದ್ಯಾರ್ಥಿಗಳಿಗೆ ಏನು ಗೊತ್ತಿದೆ, ಅವರು ಏನು ಗ್ರಹಿಸಿದ್ದಾರೆ, ಅವರಿಗೆ ನೀಡಿದ ಕಲಿಕೆಯ ಅನುಭವಗಳು ಅವರನ್ನು ಏನು ಮಾಡಲು ಸಮರ್ಥರನ್ನಾಗಿಸಿದೆ, ಅವರ ವೈಯಕ್ತಿಕ ಕೌಶಲಗಳು ಮತ್ತು ಸಾಮರ್ಥ್ಯಗಳೇನು ಎಂಬುದರ ಕುರಿತು ಅಧ್ಯಾಪಕರಿಗೆ ಅರಿವು ಮೂಡಿಸುತ್ತದೆ.

ಗುಣಮಟ್ಟವನ್ನು ಮಾಪನಮಾಡುವ ಅಭ್ಯಾಸಗಳು ಐದು ತತ್ವಗಳನ್ನು ಮುಂದಿಡುತ್ತವೆ.

- ಮಾಪನವು ಕಲಿಕೆಗೆ ಪೂರಕವಾಗಿದ್ದು ಬೆಂಬಲಿಸುವಂತಿರ'ಬೇಕು;
- ಮಾಪನವು ಸಿಂಧುವೂ ವಿಶ್ವಸನೀಯವೂ ಆಗಿರಬೇಕು;
- ಉದ್ದೇಶಕ್ಕನುಗುಣವಾದ ಫಲ ನೀಡುವಂತಹುದೂ ನಿರ್ವಹಣೆಗೆ ಸಾಧ್ಯವಾಗುವಂತಹುದೂ ಆಗಿರಬೇಕು;
- ಅಧ್ಯಾಪಕರ ವೃತ್ತಿಪರವಾದ ನಿರ್ಣಯಗಳನ್ನು ಬೆಂಬಲಿಸುವಂತಹುದಾಗಿರಬೇಕು; ಮತ್ತು
- ಬದ್ಧತೆಯನ್ನು ಬೆಂಬಲಿಸಬೇಕು.

ಕಲಿಕಾ ಸರಣಿಯ ವಿವಿಧ ಹಂತಗಳಲ್ಲಿ ವಿಭಿನ್ನ ಉದ್ದೇಶಗಳಿಗಾಗಿ ಹಲವಾರು ಮಾಪನ ಉಪಕ್ರಮಗಳನ್ನು ಬಳಸಬಹುದು. ಕೆಳಗಿನ ವಿವರಣೆಯು ಕೆಲವು ಪ್ರಮುಖ ಶೈಕ್ಷಣಿಕ ಮಾಪನಗಳನ್ನು ಪ್ರಾತಿನಿಧಿಕವಾಗಿ ಸೂಚಿಸುತ್ತದೆ.

**ಪೂರ್ವ ಮಾಪನಗಳು :** ಇದು ವಿದ್ಯಾರ್ಥಿಯು ಒಂದು ಹೊಸ ಪಾಠ, ಘಟಕ, ಅಥವಾ ಶೈಕ್ಷಣಿಕ ಕಾರ್ಯಕ್ರಮವನ್ನು ಪ್ರಾರಂಭಿಸುವ ಮೊದಲು ಅನ್ವಯ ಮಾಡುವಂತಹುದು. ಇದಕ್ಕೆ ಹಲವಾರು ಉದ್ದೇಶಗಳಿವೆ: ಅಧ್ಯಾಪಕ ತನ್ನ ಬೋಧನೆಯನ್ನು ಯೋಜಿಸಿಕೊಳ್ಳಲು, ಕಲಿಸುವ ವಿಷಯಗಳ ಕುರಿತು ಮಕ್ಕಳಿಗೆ ಈಗಾಗಲೇ

ಏನು ಗೊತ್ತಿದೆ, ನಾನು ಎಲ್ಲಿಂದ ಪ್ರಾರಂಭ ಮಾಡಬೇಕು ಎಂದು ತಿಳಿದುಕೊಳ್ಳಲು, ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು ಅಳೆಯಲು ಒಂದು ಆಧಾರವನ್ನಿಟ್ಟುಕೊಳ್ಳಲು, ಕಲಿಯುವ ವಿಷಯಕ್ಕೆ ವಿದ್ಯಾರ್ಥಿಯ ಸಿದ್ಧತೆಯನ್ನು ಗುರುತಿಸಿಕೊಳ್ಳಲು ಈ ರೀತಿಯ ಮಾಪನಗಳನ್ನು ಮಾಡಲಾಗುತ್ತದೆ.

**ರೂಪಣಾತ್ಮಕ ಮಾಪನಗಳು :** ಇದು ಒಂದು ವ್ಯಾಪ್ತಿಯಲ್ಲಿ ಬಳಸಲಾಗುವ ಔಪಚಾರಿಕ ಮತು ಅನೌಪಚಾರಿಕ ಮಾಪನ ಕ್ರಮಗಳು. ಇದನ್ನು ಬೋಧನೆ–ಕಲಿಕೆಯ ಪ್ರಕ್ರಿಯೆಯಲ್ಲಿ ಬಳಸಲಾಗುತ್ತದೆ. ಮಗುವಿನ ಸಾಧನೆಯನ್ನು ಉತ್ತಮಪಡಿಸುವ ಹಾದಿಯಲ್ಲಿ ಬೋಧನಾ ಕಲಿಕಾ ಚಟುವಟಿಕೆಗಳನ್ನು ಮಾರ್ಪಡಿಸುವ ಅಗತ್ಯ ಮತ್ತು ಮಾರ್ಪಾಡಿನ ಸ್ವರೂಪ ಇವುಗಳನ್ನು ಇವು ತಿಳಿಸುತ್ತದೆ. ಇವು ಪ್ರಕ್ರಿಯೆಯೊಳಗೆ ವಿದ್ಯಾರ್ಥಿಯ ಕಲಿಕೆಯ ಮೌಲ್ಯಮಾಪನಗಳು. ಇದನ್ನು ಒಂದು ಘಟಕವನ್ನು ಕಲಿಯುವ ಸಮಯದಲ್ಲಿ ಹಲವಾರು ಬಾರಿ ಅನ್ವಯಿಸಲಾಗಿರುತ್ತದೆ. ರೂಪಣಾತ್ಮಕ ಮಾಪನಗಳ ಸಾಮಾನ್ಯ ಉದ್ದೇಶವೆಂದರೆ, ಪ್ರಕ್ರಿಯೆಯೊಳಗಿರುವ (ಬೋಧಿಸುತ್ತಿರುವ)ವರಿಗೆ ವಿದ್ಯಾರ್ಥಿಗಳು ಏನು ಕಲಿಯುತ್ತಿದ್ದಾರೆ ಮತ್ತು ಏನು ಕಲಿಯುತ್ತಿಲ್ಲ ಎಂಬುದರ ಕುರಿತು ಹಿಮ್ಮಾಹಿತಿ ನೀಡುವುದು. ಇದಕ್ಕನುಗುಣವಾಗಿ ಬೋಧನಾ ಉಪಕ್ರಮಗಳು, ಬೋಧನಾ ಸಾಮಗ್ರಿಗಳು ಮತ್ತು ಶೈಕ್ಷಣಿಕ ಬೆಂಬಲಗಳಲ್ಲಿ ಮಾರ್ಪಾಡುಗಳನ್ನು ತರಬಹುದು. ರೂಪಣಾತ್ಮಕ ಮಾಪನಗಳಲ್ಲಿ ಸಾಮಾನ್ಯವಾಗಿ ಅಂಕಗಳನ್ನು ನೀಡಲಾಗುವುದಿಲ್ಲ, ಗ್ರೇಡ್ ಗಳನ್ನೂ ಕೊಡಲಾಗುವುದಿಲ್ಲ. ಇದನ್ನು ರಸಪ್ರಶ್ನೆಗಳ ರೂಪದಲ್ಲಿ, ನಿಯೋಜಿತ ಕಾರ್ಯಗಳ ರೂಪದಲ್ಲಿ ಅಥವಾ ಅನೌಪಚಾರಿಕ ಪ್ರಶ್ನೋತ್ತರಗಳ ರೂಪದಲ್ಲಿ ಮಾಡಲಾಗುತ್ತದೆ.

**ಸಂಕಲನಾತ್ಮಕ ಮಾಪನಗಳು :**

ಇದು ಕಲಿಕಾ ಸರಣಿಯ ಅಂತ್ಯದಲ್ಲಿ ಮಾಡುವಂತಹುದು. ಒಂದು ನಿರ್ದಿಷ್ಟ ಹಂತದಲ್ಲಿ ವಿದ್ಯಾರ್ಥಿಯ ಒಟ್ಟು ಸಾಧನೆಯನ್ನು ಗುರುತಿಸಲು, ದಾಖಲಿಸಲು ಮತ್ತು ವರದಿ ಮಾಡುವುದು ಇದರ ಉದ್ದೇಶ. ಒಂದು ಘಟಕದ ಕೊನೆಯಲ್ಲಿ ಅಥವಾ ಬೋಧನಾ ಅವಧಿಯಲ್ಲಿ, ಒಂದು ಸೆಮೆಸ್ಟರ್‌ನ, ಕಾರ್ಯಕ್ರಮದ ಅಥವಾ ಶಾಲಾವರ್ಷದ ಕೊನೆಯಲ್ಲಿ ವಿದ್ಯಾರ್ಥಿಗಳ ಕಲಿಕೆಯ ಮೌಲ್ಯಮಾಪನ ಮಾಡಲು ಬಳಸುವಂತಹುದು. ಇವುಗಳಲ್ಲಿ ಸಾಧನೆಯನ್ನು ಅಂಕಗಳ ಮೇಲೆ ಗ್ರೇಡ್ ಗಳ ಮೇಲೆ ನಿರ್ಧರಿಸುವಂತಹುದು.

**ನಿದಾನಾತ್ಮಕ ಮಾಪನ :** ಇದು ವೈಯಕ್ತಿಕ ಸಾಮರ್ಥ್ಯಗಳು, ಉತ್ತಮಿಕೆಯ ಕ್ಷೇತ್ರಗಳು, ಭವಿಷ್ಯದ ಕ್ರಮಗಳನ್ನು ಗುರುತಿಸಲು ಬಳಸುವಂತಹುದು.

**ಮೌಲ್ಯಮಾಪನಾತ್ಮಕ ಮಾಪನ :** ಒಂದು ಶಿಕ್ಷಣ ವಿಭಾಗ, ಶಾಲೆ ಅಥವಾ ವ್ಯವಸ್ಥೆಯಿಂದ ಮೂಡಿಬಂದ ಸಾಧನೆಗಳಿಗೆ ಸಂಬಂಧಿಸಿದುದು.

ಮಾಪನದ ರೂಪಣಾತ್ಮಕ ಉಪಕ್ರಮಗಳು ಕಲಿಕೆಯನ್ನು ಉತ್ತಮಪಡಿಸುವಿಕೆಯ ಕಡೆಗೆ ಗಮನಹರಿಸಿದರೆ, ಸಂಕಲನಾತ್ಮಕ ಮಾಪನಗಳು ಅಧ್ಯಯನದ ಅವಧಿಯ ಅಂತ್ಯದಲ್ಲಿ ಈವರೆಗೆ ಆಗಿರುವ ಕಲಿಕೆಯನ್ನು ಹಿಡಿದಿಡಲು ಪ್ರಯತ್ನಿಸುತ್ತವೆ. ಇವು ಒಂದಕ್ಕೊಂದು ವಿರುದ್ಧವಾದವುಗಳಲ್ಲ; ಪೂರಕವಾದವು, ಒಂದು ಮತ್ತೊಂದಕ್ಕೆ ಸಂಬಂಧಿಸಿರುವಂತಹುದು. ರೂಪಣಾತ್ಮಕ ಮಾಹಿತಿ ಅದನ್ನನುಸರಿಸಿದ ಸಂಕಲನಾತ್ಮಕ ಮಾಪನದ ಫಲಿತಾಂಶವನ್ನು ಖಚಿತಪಡಿಸಲು ಸಹಾಯಕವಾಗುತ್ತದೆ.

ಮಾಪನದ ಗುಣಮಟ್ಟವು ನಿಖರವಾದ ಫಲಿತಾಂಶಗಳನ್ನು ನೀಡುವ ಮಾಪನ ವಿಧಾನಗಳನ್ನು ಅನ್ವಯಿಸುವ ಅಧ್ಯಾಪಕರ ವೃತ್ತಿಪರ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ಉತ್ತಮ ಮಾಪನಗಳಾಗಬೇಕಾದರೆ, ಮೇಲೆ ಹೇಳಿದ ಐದು ತತ್ವಗಳನ್ನು ಅನುಸರಿಸಬೇಕು.

**ಮಾಪನದ ಪ್ರಾಮುಖ್ಯತೆಯನ್ನು ಕೆಳಕಂಡಂತೆ ಗುರುತಿಸಬಹುದು :**

- ಪರಿಣಾಮಕಾರಿ ಬೋಧನೆ ಮತ್ತು ಕಲಿಕೆಗೆ ಮಾಪನ ಅತ್ಯಂತ ಅಗತ್ಯ. ಬೋಧನಾ ಸರಣಿಯ ಪರಿಣಾಮಕಾರಿತ್ವವನ್ನು ಗುರುತಿಸಿಕೊಳ್ಳಲು ಅಧ್ಯಾಪಕರು ತಮ್ಮ ಬೋಧನಾ ಉದ್ದೇಶಗಳು ಎಷ್ಟರಮಟ್ಟಿಗೆ ಸಾರ್ಥಕವಾಗುತ್ತಿವೆ ಎಂದು ಅಂದಾಜು ಮಾಡಬೇಕು. ಇದು ಮಾಪನದಿಂದ ಮಾತ್ರ ಸಾಧ್ಯ.
- ಮಾಪನವೆಂಬುದು ಬೋಧನೆ ಮತ್ತು ಕಲಿಕೆಯ ನಡುವಣ ಕೊಂಡಿ ಇದ್ದಂತೆ. ಇದಿಲ್ಲದೆ ಮಕ್ಕಳು ತರಗತಿಯ ಅನುಭವಗಳಿಂದ ಏನನ್ನು ಪಡೆಯುತ್ತಾರೆ ಎಂಬುದನ್ನು ಗುರುತಿಸಲಾಗದು. ಇದು ಬೋಧನೆಯ ಪರಿಣಾದ ಅಪೇಕ್ಷೆಗಳಿಗಿಂತ ಭಿನ್ನವಾಗಿರಬಹುದು. ಬೋಧನೆ ಮತ್ತು ಕಲಿಕೆಯ ಸರಣಿಯಲ್ಲಿ ನಿಜವಾಗಿ ಯಾವ ಪರಿಣಾಮಗಳಾಗಿವೆ ಎಂಬುದನ್ನು ತಿಳಿಯಲು ಅಧ್ಯಾಪಕರಿಗೆ ಮಾಪನಗಳು ಅಗತ್ಯ ಮಾತ್ರವಲ್ಲ; ಅನಿವಾರ್ಯವಾಗುತ್ತವೆ ಕೂಡ.

**ಮಾಪನ ಮಾರ್ಗೋಪಾಯಗಳು :**

ಅಧ್ಯಾಪಕರು ಮಕ್ಕಳ ಪ್ರಗತಿಯನ್ನು ಗುರುತಿಸಲು ಅನೇಕ ಮಾಪನ ಮಾರ್ಗೋಪಾಯಗಳನ್ನು ಬಳಸಬಹುದು. ಅವುಗಳನ್ನು ಕೆಳಗೆ ನೀಡ'ಲಾಗಿದೆ:

- ತರಗತಿ ಚಟುವಟಿಕೆಗಳಲ್ಲಿ ಮಕ್ಕಳ ಭಾಗವಹಿಕೆಯನ್ನು ಅಧ್ಯಾಪಕರು ವೀಕ್ಷಣೆ ಮಾಡಬಹುದು;
- ವಿದ್ಯಾರ್ಥಿಗಳ ಸಾಧನೆಯನ್ನು ಅಧ್ಯಾಪಕರು ವೀಕ್ಷಿಸಬಹುದು;
- ಮಕ್ಕಳ ಕೆಲಸ/ಕಾರ್ಯಗಳನ್ನು ಪರಿಶೀಲಿಸುವುದು;
- ವಿದ್ಯಾರ್ಥಿಗಳು ಪರಸ್ಪರರ(ಇತರ ವಿದ್ಯಾರ್ಥಿಗಳ)ಕಾರ್ಯಗಳನ್ನು ಅದರ ಉದ್ದೇಶಗಳ ಹಿನ್ನೆಲೆಯಲ್ಲಿ ಪರಿಶೀಲಿಸುವುದು;
- ಗ್ರಹಿಕೆಯನ್ನು ಪರಿಶೀಲಿಸಲು ಪ್ರಶ್ನೆ ಕೇಳುವುದು;
- ಘಟಕಾಂತ್ಯ ಪರೀಕ್ಷೆ ಕೊಡುವುದು;
- ವರ್ಷದ ಅಂತ್ಯದಲ್ಲಿ ಪರೀಕ್ಷೆ ಕೊಡುವುದು
- ಇತರ ಪ್ರಾಜೆಕ್ಟ್‌ಗಳು ಮತ್ತು ನಿಯೋಜಿತ ಕಾರ್ಯಗಳನ್ನು ನೀಡುವುದು

ಮೌಲ್ಯಮಾಪನ ಎಂಬುದು ಕಾರ್ಯಕ್ರಮ/ವರ್ಷ/ ಕೋರ್ಸು/ ಇವುಗಳ ಕೊನೆಯಲ್ಲಿ ನಡೆಸುವ ಕಾರ್ಯ, ಅದರೊಂದಿಗೆ ಆ ಹಂತದ ಶಿಕ್ಷಣ ಮುಗಿಯಿತು ಎಂದುಕೊಳ್ಳುವುದಾದರೆ, ಮೌಲ್ಯಮಾಪನದ ಉದ್ದೇಶವನ್ನೇ ನಗಣ್ಯಮಾಡಿದಂತಾಗುತ್ತದೆ. ಹಾಗೆ ಮಾಡಿದಾಗ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಬ್ಬರೂ ಮೌಲ್ಯಮಾಪನವನ್ನು ಬೋಧನೆ ಮತ್ತು ಕಲಿಕೆಯ ಕಾರ್ಯಗಳಿಂದಾಚೆಗೆ ಗಮನಿಸಿಕೊಳ್ಳುತ್ತಾರೆ. ಪಠ್ಯಕ್ರಮದಿಂದ ಹೊರತಾದ ಮೌಲ್ಯಮಾಪನ ಅಸಮರ್ಪಕವೂ ಅಪರಿಚಿತವೂ ಆಗಿಬಿಡುತ್ತದೆ. ಇಂತಹ ಗ್ರಹಿಕೆ ಕಲಿಯುವವರಲ್ಲಿ ಆತಂಕ ಮತ್ತು ಒತ್ತಡಗಳನ್ನು ತಂದೊಡ್ಡುತ್ತವೆ. ಇದರ ಬದಲಿಗೆ ಮೌಲ್ಯಮಾಪನವನ್ನು ಬೋಧನಾ ಕಲಿಕಾ ಪ್ರಕ್ರಿಯೆಯ ಅಂತರ್ಗತ ಭಾಗವಾಗಿ ಗ್ರಹಿಸಿದರೆ ಕಲಿಯುವವರು ಪರೀಕ್ಷೆ ಮತ್ತು ಉಪ ಪರೀಕ್ಷೆಗಳ ಸಮಯದಲ್ಲಿ ಭಯಪಡುವುದಿಲ್ಲ. ಇದು ಕಲಿಕೆಯನ್ನು ಹೆಚ್ಚಿಸಲು ಕಾರಣವಾಗುತ್ತದೆ. ಮಾಪನದ ವ್ಯಾಪ್ತಿಯು ಕಲಿಯುವವರ

ವ್ಯಕ್ತಿತ್ವ ವಿಕಾಸದ ಎಲ್ಲ ಕ್ಷೇತ್ರಗಳಿಗೂ ವ್ಯಾಪಿಸಿ, ಹೆಚ್ಚು ವ್ಯಾಪಕ ಸ್ವರೂಪದ್ದಾಗುತ್ತದೆ.ಮೌಲ್ಯಮಾಪನವು ವಿದ್ಯಾರ್ಥಿಗಳ ಸಾಮರ್ಥ್ಯಗಳು ಮತ್ತು ದೌರ್ಬಲ್ಯಗಳನ್ನು ತೆರೆದಿಡುವುದಲ್ಲದೆ ಯಶಸ್ವಿಯಾಗಿ ಕಲಿಕೆಯನ್ನು ವಿಸ್ತರಿಸಿಕೊಳ್ಳಲು ಅಗತ್ಯವಾದ ಮಾರ್ಗಸೂಚಿಯನ್ನು ಒದಗಿಸುತ್ತದೆ.ಇದು ಅಧ್ಯಾಪಕರಿಗೆ ಬೋಧನಾ ಮಾರ್ಗೋಪಾಯಗಳನ್ನು ಬದಲಿಸಿಕೊಳ್ಳಲು ಅಗತ್ಯವಾದ ಹಿಮ್ಮಾಹಿತಿಯನ್ನು ನೀಡುತ್ತದೆ.ಇದೇ ಸಂದರ್ಭದಲ್ಲಿ ಮಾಪನ ಮತ್ತು ಮೌಲ್ಯಮಾಪನಗಳ ನಡುವಣ ವ್ಯತ್ಯಾಸಗಳನ್ನು ತಿಳಿದಿರುವುದು ಅವಶ್ಯಕ. ಕೆಳಗಿನ ಕೋಷ್ಟಕ ಇದನ್ನು ಸೂಚಿಸುತ್ತದೆ.

| ಮಾಪನ | ಮೌಲ್ಯಮಾಪನ |
|---|---|
| ರೂಪಣಾತ್ಮಕ : ನಿರಂತರವಾದುದು, ಕಲಿಕೆಯನ್ನು ಉತ್ತಮಪಡಿಸುವಂತಹುದು. | ಸಂಕಲನಾತ್ಮಕ : ಗುಣವನ್ನು ನಿರ್ಧರಿಸುವಂತಹುದು, ಅಂತ್ಯದಲ್ಲಿ ಕೈಗೊಳ್ಳುವಂತಹುದು |
| ಪ್ರಕ್ರಿಯಾತ್ಮಕವಾದುದು : ಕಲಿಕೆ ಹೇಗೆ ಪ್ರಗತಿಯಲ್ಲಿದೆ ಎಂಬುದರ ಕಡೆಗೆ ಗಮನ. | ಫಲ ಅಥವಾ ಪರಿಣಾಮಾಧಾರಿತವಾದುದು |
| ನಿದಾನಾತ್ಮಕವಾದುದು: ಉತ್ತಮಪಡಿಸಿಕೊಳ್ಳ ಬೇಕಾದ ಕ್ಷೇತ್ರಗಳನ್ನು ಗುರುತಿಸುವಂತಹುದು. | ತೀರ್ಪು ಅಥವಾ ನಿರ್ಣಯಾತ್ಮಕವಾದುದು |
| ಮಾಪನ ಕ್ರಮಗಳು ಕಲಿಕೆ, ಬೋಧನೆ ಮತ್ತು ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಯ ಪರಿಣಾಮ ಗಳ ಕಡೆಗೆ ಗಮನವಿರುವಂತಹುದು | ಮೌಲ್ಯಮಾಪನಗ್ರೇಡ್‌ಗಳನ್ನು ಗಮನದಲ್ಲಿರಿಸಿ ಕೊಂಡಿರುವಂತಹುದು ಮತ್ತು ಕೋರ್ಸಿನ ವಿಷಯ ಮತ್ತು ಸ್ವಾಮ್ಯದ ಹಂತವನ್ನು ಹೇಳುವುದರಿಂದಾಚೆಗೆ ತರಗತಿಯ ಇತರ ಅಂಶಗಳನ್ನು ಕುರತೂ ಹೇಳಬಹುದು. |
| ಮಾಪನ ಪ್ರಕ್ರಿಯೆಗಳು ಮಾಹಿತಿ ಸಂಗ್ರಹಿಸುವಲ್ಲಿ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳನ್ನು ಒಳಗುಮಾಡಿಕೊಳ್ಳುತ್ತದೆ. ಇದು ವಿದ್ಯಾರ್ಥಿಗಳು ಎಷ್ಟು ಮತ್ತು ಹೇಗೆ ಕಲಿಯುತ್ತಿದ್ದಾರೆ, ತರಗತಿಯಲ್ಲಿ ಬೋಧನಾ ಕಲಿಕಾ ಪ್ರಕ್ರಿಯೆ ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗುತ್ತಿದೆ ಎಂಬುದನ್ನು ಅಧ್ಯಾಪಕರಿಗೆ ಮನವರಿಕೆ ಮಾಡಿಕೊಡುತ್ತದೆ. | ಮೌಲ್ಯಮಾಪನ ಪ್ರಕ್ರಿಯೆಗಳು ಚರ್ಚೆ, ಸಹಕಾರ, ಹಾಜರಾತಿ ಮತ್ತು ಶಾಬ್ದಿಕ ಸಾಮರ್ಥ್ಯ ಇವುಗಳನ್ನೂ ಒಳಗೊಳ್ಳಬಹುದು. |
| ವಿದ್ಯಾರ್ಥಿಗಳ ಸಾಧನೆಯನ್ನು ಉತ್ತಮಪಡಿಸಲು ಬೋಧನೆಯಲ್ಲಿ ಮಾಡಿಕೊಳ್ಳಬೇಕಾದ ಮಾರ್ಪಾಡುಗಳನ್ನು ಗುರುತಿಸಿಕೊಳ್ಳಲು ಸಹಾಯಕ. | ವಿದ್ಯಾರ್ಥಿಯ ಪ್ರಗತಿ ಸೂಚಕವಾದುದು. ವಿದ್ಯಾರ್ಥಿ ಎಷ್ಟು ಪ್ರಗತಿ ಹೊಂದಿದ್ದಾನೆ ಎಂದು ಹೇಳುವಂತಹುದು. |
| ಮಾಹಿತಿ ವಿದ್ಯಾರ್ಥಿ ಕೇಂದ್ರಿತವಾದುದು, ಕೋರ್ಸ್ ಆಧಾರಿತವಾದುದು, ಬಹಳಮಟ್ಟಿಗೆ ಇಂತಹವರೇ ಮಾಹಿತಿ ನೀಡಿದ್ದಾರೆ ಎಂದು ಹೇಳಲಾಗದುದು ಮತ್ತು ಗ್ರೇಡ್ ಆಧಾರಿತವಾಲ್ಲದುದು | ಗ್ರೇಡ್ ಆಧಾರಿತವಾದುದು. ವಿದ್ಯಾರ್ಥಿಗೆ ತನ್ನ ಗುಂಪಿನಲ್ಲಿ ಯಾವ ಸ್ಥಾನದಲ್ಲಿದ್ದೇನೆ ಮತ್ತು ತನ್ನ ವೈಯಕ್ತಿಕ ಶೈಕ್ಷಣಿಕ ಸ್ಥಿತಿ ಏನು ಎಂಬುದು ತಿಳಿಯುತ್ತದೆ. |
| ವಿದ್ಯಾರ್ಥಿಗಳ ಒಟ್ಟು ಸಾಧನೆಯನ್ನಲ್ಲದೆ ಸಾಧನೆಯ ಹಂತದಲ್ಲಿನ ಪ್ರಗತಿಯನ್ನು ತಿಳಿಸುವಂತಹುದು. | ವಿದ್ಯಾರ್ಥಿಗಳ ಒಟ್ಟು ಸಾಧನೆಯನ್ನು ಸಂಕಲನಾತ್ಮಕ ವಾಗಿ ತಿಳಿಸುವಂತಹುದು. |

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 1

ಮಾಪನ ವಿಧಾನಗಳನ್ನು ಅವುಗಳ ಉದ್ದೇಶಗಳೊಂದಿಗೆ ಹೊಂದಿಸಿರಿ

| | ಮಾಪನ ವಿಧಾನಗಳು | ಉದ್ದೇಶಗಳು | |
|---|---|---|---|
| a | ರೂಪಣಾತ್ಮಕ ಮಾಪನಗಳು | ಶಾಲೆಯಲ್ಲಿ ಎಸ್ ಎಸ್ ಎಲ್ ಸಿ ಪರೀಕ್ಷೆಯ ಫಲಿತಾಂಶ ಕಡಿಮೆಯಾಗಿರುವುದಕ್ಕೆ ಕಾರಣಗಳನ್ನು ಗುರುತಿಸುವುದು | 1 |
| b | ಪೂರ್ವ ಮಾಪನಗಳು<br>12 | ಕಲಿಸಬೇಕಾಗಿರುವ ವಿಷಯಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಎಷ್ಟು ತಿಳಿದಿದೆ ಎಂದು ಗುರುತಿಸಿಕೊಳ್ಳುವುದು | 2 |
| c | ಸಂಕಲನಾತ್ಮಕ ಮಾಪನಗಳು | ಒಂದು ಘಟಕದ ವಿಷಯವನ್ನು ಕುರಿತು ವಿದ್ಯಾರ್ಥಿಗಳಿಗೆ ಎಷ್ಟು ತಿಳಿದಿದೆ ಎಂದು ಗುರುತಿಸಿಕೊಳ್ಳುವುದು. | 3 |
| d | ನಿದಾನಾತ್ಮಕ ಮಾಪನಗಳು | ವಿದ್ಯಾರ್ಥಿಗಳು ಮುಂದಿನ ತರಗತಿಗೆ ತೇರ್ಗಡೆಯಾಗಲು ಸಮರ್ಥರಾಗಿದ್ದಾರೆಯೇ ಎಂದು ತಿಳಿಯುವುದು. | 4 |
| e | ಮೌಲ್ಯಮಾಪನಾತ್ಮಕ ಮಾಪನಗಳು | ಗಣಿತ ವಿಷಯದಲ್ಲಿ ವಿದ್ಯಾರ್ಥಿಗಳಿಗೆ ನಿಜವಾಗಿ ಎಲ್ಲಿ ತೊಂದರೆಯಾಗುತ್ತಿದೆ ಎಂದು ಕಂಡುಹಿಡಿಯುವುದು. | 5 |

## 1.6.3.2. ವಿಶೇಷ ಅಗತ್ಯವಿರುವ ಮಕ್ಕಳಿಗೆ ಸಂಬಂಧಿಸಿದಂತೆ ನಿರಂತರ ಮತ್ತು ಸಮಗ್ರ ಮೌಲ್ಯಮಾಪನ

ಇಂದು ಶಿಕ್ಷಣ ಕ್ಷೇತ್ರದಲ್ಲಿ ನಡೆಯುತ್ತಿರುವ ಮಾಪನ ವ್ಯವಸ್ಥೆಯನ್ನು ಕುರಿತ ಪ್ರಮುಖ ಟೀಕೆ ಎಂದರೆ, ಅದು ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ಕೇವಲ ಭಾಗಶಃ ಗುರುತಿಸುತ್ತಿದೆ, ಎಂಬುದು. ಈಗಿರುವಂತೆ 2–3 ಗಂಟೆಗಳ ಪರೀಕ್ಷೆಯು ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ವಿದ್ಯಾರ್ಥಿಗಳ ಒಟ್ಟು ವಿಕಾಸ/ ಪ್ರಗತಿಯನ್ನು ಮಾಪನಮಾಡುವುದು ಅಸಾಧ್ಯವಾದ ಮಾತು. ಕಲಿಕೆಯ ಮೂಲಭೂತ ಉದ್ದೇಶದಂತೆ, ಅದು ಬೌದ್ಧಿಕ, ದೈಹಿಕ, ಸಾಮಾಜಿಕ, ಭಾವನಾತ್ಮಕ ಹೀಗೆ ಒಟ್ಟಾಗಿ ಮಗುವಿನ ಎಲ್ಲ ಕ್ಷೇತ್ರಗಳಲ್ಲಿ ವಿಕಾಸವನ್ನು ಫಲಿಸಬೇಕು. ಇದಕ್ಕಾಗಿ ಮೌಲ್ಯಮಾಪನವೂ ಅನಿವಾರ್ಯವಾಗಿ ಈ ಎಲ್ಲ ಕ್ಷೇತ್ರಗಳನ್ನೂ ಒಳಗೊಳ್ಳಬೇಕು. ಇದಕ್ಕಾಗಿ ನಿರಂತರ ಮತ್ತು ಸಮಗ್ರ ಮೌಲ್ಯಮಾಪನದ ಸಾಧ್ಯತೆಗಳನ್ನು ಆವಿಷ್ಕರಿಸಿಕೊಳ್ಳಬೇಕಾಗಿದೆ.

ಈ ಕಾರಣಕ್ಕಾಗಿ ನಿರಂತರ ಮತ್ತು ಸಮಗ್ರ ಮೌಲ್ಯಮಾಪನವನ್ನು ಕುರಿತಂತೆ ಕೆಲವು ಅಂಶಗಳನ್ನು ಸ್ಪಷ್ಟಪಡಿಸಿಕೊಳ್ಳಬೇಕು.

ನಿರಂತರ ಮತ್ತು ಸಮಗ್ರ ಮೌಲ್ಯಮಾಪನವನ್ನು ಕುರಿತಂತೆ ಇರುವ ಗ್ರಹಿಕೆಗಳಾವುವು?

ನಿರಂತರ ಮತ್ತು ಸಮಗ್ರ ಮೌಲ್ಯಮಾಪನವನ್ನು ಏಕೆ ಅನ್ವಯಿಸಿಕೊಳ್ಳಬೇಕು?

ನಿರಂತರ ಮತ್ತು ಸಮಗ್ರ ಮೌಲ್ಯಮಾಪನದ ಅಡಿಯಲ್ಲಿ ಏನನ್ನು ಮಾಪನ ಮಾಡಬೇಕು?

ನಿರಂತರ ಮತ್ತು ಸಮಗ್ರ ಮೌಲ್ಯಮಾಪನವನ್ನು ಹೇಗೆ ಮಾಡಬೇಕು?

ನಿರಂತರ ಮತ್ತು ಸಮಗ್ರ ಮೌಲ್ಯಮಾಪನವನ್ನು ಯಾವಾಗ ಮಾಡಬೇಕು?

ನಿರಂತರ ಮತ್ತು ಸಮಗ್ರ ಮೌಲ್ಯಮಾಪನದಿಂದ ಪಡೆದ ಮಾಹಿತಿಯನ್ನು ಹೇಗೆ ಬಳಸಿಕೊಳ್ಳಬೇಕು?

ಕಾಲದಿಂದ ಕಾಲಕ್ಕೆ ಅನೇಕ ಆಯೋಗಗಳು, ವರದಿಗಳು ದೇಶದಲ್ಲಿನ ಮೌಲ್ಯಮಾಪನ ಸ್ಥಿತಿಯನ್ನು ಕುರಿತಂತೆ ವಿಶೇಷ ಕಾಳಜಿಯನ್ನು ವ್ಯಕ್ತಪಡಿಸಿವೆ. ಇವುಗಳಲ್ಲಿ NPE-POA (1992), NCF (2005), National Focus Group on Examination Reform (2007), NCFTE (2009), ಮತ್ತು NKC (2009) ಮುಖ್ಯವಾದವು. ಇವೆಲ್ಲವೂ ಗ್ರಹಿಕೆ ಇಲ್ಲದೆ ಕುರುಡುಪಾಠ ಮಾಡಿಸುವ ಮತ್ತು ವರ್ಷಾಂತ್ಯದಲ್ಲೊಂದು ಪರೀಕ್ಷೆ ಮಾಡಿ ವಿದ್ಯಾರ್ಥಿಗಳ ಸಾಧನೆಯ ಕುರಿತು ನಿರ್ಧಾರಗಳನ್ನು ಕೈಗೊಳ್ಳುವ ಅಭ್ಯಾಸಗಳನ್ನು ಅಲ್ಲಗಳೆದಿವೆ. ಜೊತೆಗೆ ಶಿಕ್ಷಣದ ಎಲ್ಲ ಹಂತಗಳಲ್ಲಿ ನಿರಂತರ ಮತ್ತು ಸಮಗ್ರ ಮೌಲ್ಯಮಾಪನವನ್ನು ಅಳವಡಿಸಿಕೊಳ್ಳುವುದರ ಮೂಲಕ ಪ್ರಸ್ತುತ ಅಸ್ತಿತ್ವದಲ್ಲಿರುವ ಪರೀಕ್ಷಾ ವ್ಯವಸ್ಥೆಯನ್ನು ಪರಿಷ್ಕರಿಸುವಂತೆ ಸಲಹೆ ನೀಡಿವೆ.. ಇವು ಶಾಲಾ ಸಂಬಂಧಿ ಮತ್ತು ಸಹ–ಶಾಲಾ ಸಂಬಂಧಿ (scholastic and co-scholastic) ವಿಷಯಗಳನ್ನೊಳಗೊಂಡಂತೆ ಹಲವಾರು ಸಾಧನಗಳನ್ನು–ತಪಶೀಲು ಪಟ್ಟಿ, ವೀಕ್ಷಣಾ ತಖ್ತೆ, ದರ್ಜಾಮಾಪನಗಳು, ಸಂದರ್ಶನ ಇತ್ಯಾದಿ– ಬಳಸಿಕೊಂಡು ಶಾಲಾ ಮೌಲ್ಯಮಾಪನವನ್ನು ಸಮಗ್ರವಾಗಿಸಲು ಆ ಮೂಲಕ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸದ ಸಮಗ್ರ ಮೌಲ್ಯಮಾಪನ ಮಾಡಲು ಕರೆಕೊಟ್ಟಿವೆ.

ಸಮಗ್ರ ಮೌಲ್ಯಮಾಪನವು ವಿದ್ಯಾರ್ಥಿಯ ಕಲಿಕೆಯನ್ನು ಸಮಷ್ಟಿಯಾಗಿ ಅಥವಾ ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವುದಕ್ಕೆ ಸಂಬಂಧಿಸಿದುದು. ಅಂದರೆ ಸಾಮಾಜಿಕ, ಭಾವನಾತ್ಮಕ, ದೈಹಿಕ, ನೈತಿಕ ಮತ್ತು ಬೌದ್ಧಿಕ ಹೀಗೆ ಎಲ್ಲ ಅಂಶಗಳಲ್ಲೂ ವಿದ್ಯಾರ್ಥಿಯ ಕಲಿಕೆಯ ಪ್ರಗತಿಯನ್ನು ಮಾಪನಮಾಡುವುದನ್ನು ಇದು ಒಳಗೊಳ್ಳುತ್ತದೆ.

ಸಾಮಾನ್ಯವಾಗಿ 'CCE' (Continuous and Comprehensive Evaluation) ಎಂದು ಕರೆಯಲಾಗುವ ನಿರಂತರ ಮತ್ತು ಸಮಗ್ರ ಮೌಲ್ಯಮಾಪನವನ್ನು ಶಾಲಾ ಮುಕ್ತ ಹಾಗೂ ಕಡ್ಡಾಯ ಶಿಕ್ಷಣದ ಅಡಿಯಲ್ಲಿ ಮಕ್ಕಳ ಹಕ್ಕು ಎಂದು ಪರಿಗಣಿಸಲಾದ ಶಿಕ್ಷಣದ ಹಕ್ಕು ಕಾಯಿದೆ 2009ಕ್ಕೆ ಅನುಗುಣವಾಗಿ ಏಪ್ರಿಲ್ 2010ರಲ್ಲಿ ಶಾಲಾ ಆಧರಿತ ಮೌಲ್ಯಮಾಪನ ವ್ಯವಸ್ಥೆಯಾಗಿ ಪ್ರಾರಂಭಿಸಲಾಯಿತು. ಎಲ್ಲ ಮಕ್ಕಳೂ ಕಲಿತು ಯಶಸ್ವಿಯಾಗಿ ಮುಂದುವರಿಯಲು ಶಿಕ್ಷಣದ ಎಲ್ಲ ಫಲಾನುಭವಿಗಳೂ ಇದನ್ನು ಸಮರ್ಪಕವಾಗಿ ಅರ್ಥಮಾಡಿಕೊಂಡು ಅನ್ವಯಿಸಬೇಕಾದುದು ಇಂದಿನ ಅಗತ್ಯ. ಇದು ಮಾರ್ಕುಗಳನ್ನು ಕೊಡುವುದಕ್ಕಿಂತ 'ಗ್ರೇಡ್' ವ್ಯವಸ್ಥೆ ಏಕೆ ಮತ್ತು ಹೇಗೆ ಸಮರ್ಪಕ ಎಂಬುದನ್ನು ಅರ್ಥಮಾಡಿಸುತ್ತದೆ. ಬಾಹ್ಯ ಪರೀಕ್ಷೆಗಳನ್ನು ಕೈಬಿಟ್ಟು, ಶಾಲಾ ಮಿತಿಯಲ್ಲೇ ಪರೀಕ್ಷೆಗಳನ್ನು ನಡೆಸುವುದರಿಂದಾಗುವ ಪ್ರಯೋಜನಗಳನ್ನೂ ಇದು ಮನದಟ್ಟು ಮಾಡುತ್ತದೆ.

ಮನೋಭಾವಗಳು, ಮೌಲ್ಯಗಳು, ಮತ್ತು ಭಾವನೆಗಳ ಸಮರ್ಪಕ ಬೆಳವಣಿಗೆ ಬೌದ್ಧಿಕ ಬೆಳವಣಿಗೆಯ ಅಂತರ್ಗತ ಭಾಗ ಎಂಬುದನ್ನು ಪರಿಗಣಿಸಿ NCF–2005 ದಾಖಲೆಯು ಶಾಲಾ ಆಧರಿತ ಅಂತರ್ಗತ

ಮಾಪನ ವ್ಯವಸ್ಥೆಯನ್ನು ಮುಂದಿಟ್ಟಿದೆ. ಇದೇ ನಿರಂತರ ಮತ್ತು ಸಮಗ್ರ ಮೌಲ್ಯಮಾಪನ. ಅದು ಈ ಕುರಿತು ಗುರುತಿಸಿರುವ ಅಂಶಗಳು ಹೀಗಿವೆ:

ಇದು ಮಗುವಿನ ಪ್ರಗತಿಯನ್ನು ನಿರಂತರ ಮತ್ತು ಸಮಗ್ರವಾದ ರೀತಿಯಲ್ಲಿ ನೀಡುತ್ತದೆ. ನಿರಂತರತೆ ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಗೆ ಸಂಬಂಧಿಸಿದುದು. ಇದು ಕೋರ್ಸಿನ ಅವಧಿಯ ಕೊನೆಯ ಮಾಪನದ ಜೊತೆಗೆ ಪ್ರತಿ ಹಂತದಲ್ಲಿ ಆಯಾ ಕ್ಷೇತ್ರದ ಕಲಿಕೆಯ ಉತ್ತಮಿಕೆಗೆ ಅಗತ್ಯವಾದ ಅಂಶಗಳನ್ನು ತೆರೆದಿಡುತ್ತದೆ. ಪಠ್ಯಕ್ರಮ ಕ್ಷೇತ್ರಗಳಲ್ಲಿ ಮಾತ್ರವಲ್ಲದೆ, ಮಗುವಿನ ಸರ್ವಾಂಗೀಣ ವಿಕಾಸವನ್ನು ಒಳಗೊಳ್ಳುವುದರಿಂದ ಇದು ಸಮಗ್ರವಾಗಿದೆ. ಇದು ನಿರ್ದಿಷ್ಟ ಕಾಲಾವಧಿಯಲ್ಲಿ ಮಗುವಿನ ಕಲಿಕೆ ಮತ್ತು ವಿಕಾಸದಲ್ಲಿನ ಬದಲಾವಣೆಗಳ'ನ್ನು ಕಂಡುಕೊಳ್ಳಲು ಸಹಕಾರಿಯಾಗಿದೆ. ಗುಣಮಟ್ಟದ ಶಿಕ್ಷಣವನ್ನು ನೀಡಲು ಪ್ರತಿ ಮಗುವಿಗೆ ಯಾವ ಕ್ಷೇತ್ರದಲ್ಲಿ ಹೆಚ್ಚಿನ ಬೆಂಬಲ ಅಗತ್ಯ ಎಂದು ಕಂಡುಕೊಳ್ಳಲು ಇದು ಸಹಾಯಕ. ಕಲಿಕಾ ಅಗತ್ಯಗಳು, ಸಮಸ್ಯೆಗಳು, ಪರಿಕಲ್ಪನಾ ಕೊರತೆಗಳು ಇವುಗಳನ್ನು ಗುರುತಿಸಲು, ಸೂಕ್ತ ಮತ್ತು ಸಕಾಲದ ಮಧ್ಯವರ್ತನಗಳನ್ನು ನೀಡಲು, ಮಕ್ಕಳ ಒತ್ತಡ ಮತ್ತು ಆತಂಕವನ್ನು ನಿವಾರಿಸಲು, ಪ್ರಗತಿಯನ್ನು ಅನುಕೂಲಿಸಲು ಇದು ದಾರಿಮಾಡಿಕೊಡುತ್ತದೆ. ಗ್ರಹಿಕೆ ಇಲ್ಲದ ಕುರುಡು ಪಾಠವನ್ನು ನಿವಾರಿಸಲು, ಅಧ್ಯಾಪಕರು ಬೋಧನೆಯನ್ನು ಕುರಿತ ಪ್ರತಿಫಲಿತ ಆಲೋಚನೆಗಳನ್ನು ಮಾಡಿ ಬೋಧನೆಯನ್ನು ಉತ್ತಮಪಡಿಸಿಕೊಳ್ಳಲು ಇದು ಸಹಾಯಕ. ವಿಶೇಷ ಅಗತ್ಯವಿರುವ ಮಕ್ಕಳು, ಸಮಾಜದ ಅಂಚಿನಲ್ಲಿರುವ ಮಕ್ಕಳನ್ನೂ ಸೇರಿದಂತೆ ಎಲ್ಲ ಮಕ್ಕಳಿಗೆ ಕಲಿಕೆಯನ್ನು ಉತ್ತಮಪಡಿಸಿಕೊಳ್ಳಲು ಅಗತ್ಯವಾದ ಹಿಮ್ಮಾಹಿತಿ ಕೊಡಲು ಇದು ಸಹಕಾರಿ.

ಬೋಧನಾ ಕಲಿಕಾ ಪ್ರಕ್ರಿಯೆಯ ಸಮಯದಲ್ಲಿ ಮಾಡುವ ಮೌಲ್ಯಮಾಪನ ಮಕ್ಕಳ ಕಲಿಕೆಯನ್ನು ಕುರಿತಂತೆ ಕೆಲವು ಸೂಚನೆಗಳನ್ನು ನೀಡುತ್ತದೆ. ಇದನ್ನು ಬಳಸಿಕೊಂಡು ಅಧ್ಯಾಪಕರು ಮಕ್ಕಳ ಕಲಿಕೆಯನ್ನು ಉತ್ತಮಪಡಿಸಬಹುದು. ಇದು ವಿಶೇಷ ಅಗತ್ಯವಿರುವ ಮಕ್ಕಳಿಗೆ ಅಥವಾ ಕಲಿಕೆಯಲ್ಲಿ ಕಷ್ಟವನ್ನನುಭವಿಸುತ್ತಿರುವ ಮಕ್ಕಳಿಗೆ ವಿಶೇಷವಾಗಿ ಸಹಾಯವಾಗುತ್ತದೆ. ಇದಕ್ಕೆ ಇತರ ಮಕ್ಕಳಿಗೆ ಕೊಡುವ ರಚನಾತ್ಮಕವಾದ ಅಥವಾ ಪ್ರಮಾಣೀಕೃತವಾದ ಪರೀಕ್ಷೆಗಳ ಅಗತ್ಯವಿಲ್ಲ. ನಿರಂತರ ಮತ್ತು ಸಮಗ್ರ ಮೌಲ್ಯಮಾಪನದ ಕ್ರಮಗಳನ್ನು ಅನ್ವಯಿಸುವಾಗ ಮಕ್ಕಳಿಗೆ ಅವರನ್ನು ಮೌಲ್ಯಮಾಪನ ಮಾಡಲಾಗುತ್ತಿದೆ ಎಂಬ ಅರಿವೂ ಇರುವುದಿಲ್ಲ. ಆದ್ದರಿಂದ ನಿರಂತರ ಮತ್ತು ಸಮಗ್ರ ಮೌಲ್ಯಮಾಪನ ಎಂದರೆ ಆಗಾಗ್ಗೆ ನೀಡುವ ಸಾಂಪ್ರದಾಯಿಕ ಪರೀಕ್ಷೆಗಳು ಎಂದರ್ಥಮಾಡಿಕೊಳ್ಳಬಾರದು.

ಮಗುವಿನ ಪ್ರಗತಿಯನ್ನು ಕುರಿತ ಸಮಗ್ರ ಮತ್ತು ಸಮಷ್ಟಿಯುತವಾದ ಮಾಹಿತಿ ಅನೇಕ ವಿಧಗಳಲ್ಲಿ ಸಹಾಯಕ್ಕೆ ಬರುತ್ತದೆ. ಗುಂಪಿನಲ್ಲಿ ಮಗು ಹೇಗೆ ಕೆಲಸ ಮಾಡುತ್ತದೆ, ಅದಕ್ಕೆ ಬರೆವಣಿಗೆಯ ಮೂಲಕ ಉತ್ತರಿಸಬಹುದಾದ ಪರೀಕ್ಷೆಗಳನ್ನು ತೆಗೆದುಕೊಳ್ಳುವುದು ಸಾಧ್ಯವೇ, ಚಿತ್ರಗಳನ್ನು ಅರ್ಥಮಾಡಿಕೊಳ್ಳಲು ಆಗುತ್ತದೆಯೇ, ಮೌಖಿಕ ಅಭಿವ್ಯಕ್ತಿ ಸಾಧ್ಯವೇ, ಪಠ್ಯಗಳನ್ನು ಓದಲು ಸಾಧ್ಯವೇ ಇತ್ಯಾದಿ ಅಂಶಗಳನ್ನು ಅರ್ಥಮಾಡಿಕೊಳ್ಳಬಹುದು. ಬಹು ಆಯಾಮಗಳಲ್ಲಿ ಮಗುವನ್ನು ವೀಕ್ಷಿಸುವುದು ಮತ್ತು ಅರ್ಥಮಾಡಿಕೊಳ್ಳುವುದು ಮಗವನ್ನು ಕೇವಲ ಬೌದ್ಧಿಕವಾಗಿ ಮತ್ತು ಸಂಜ್ಞಾನಾತ್ಮಕವಾಗಿ ಮಾತ್ರವಲ್ಲದೆ, ಸಮಗ್ರವಾಗಿ ಮೌಲ್ಯಮಾಪನ ಮಾಡಲು ಸಾಧ್ಯಮಾಡಿಕೊಡುತ್ತದೆ. ಇದರಿಂದಾಗಿ ಸಾಂಪ್ರದಾಯಿಕ ಮೌಲ್ಯಮಾಪನ ವಿಧಾನದಿಂದ ಸಾಧ್ಯವಾಗದ, ಮಗುವಿನ ಕಲಿಕೆ, ಪ್ರತಿಭೆಗಳು, ವಿವಿಧ ಕ್ಷೇತ್ರಗಳಲ್ಲಿ ಮಗುವಿನಲ್ಲಿ ಹುದುಗಿರುವ ಸಾಮರ್ಥ್ಯಗಳನ್ನು ಹೊರತೆಗೆಯಲು ಸಾಧ್ಯವಾಗುತ್ತದೆ.

ಹೀಗೆ ಮೌಲ್ಯಮಾಪನವು ಒಂದು ಉಪಯುಕ್ತವಾದ, ಅಪೇಕ್ಷಣೀಯವಾದ, ಪ್ರಯೋಜನಕರವಾದ ಪ್ರಕ್ರಿಯೆಯಾಗಿದೆ. ಶಿಕ್ಷಣದ ಹಕ್ಕು ಕಾಯಿದೆ ಹೊರಬಂದಾಗಿನಿಂದ ನಮ್ಮ ತರಗತಿಗಳ ಸ್ವರೂಪ ಬದಲಾಗಿದೆ. ಭಿನ್ನಮಟ್ಟದ ಬುದ್ಧಿಶಕ್ತಿ, ಪ್ರತಿಭೆ, ಕೌಶಲ, ಆಸಕ್ತಿ, ಹಿನ್ನೆಲೆ, ಸಂಸ್ಕೃತಿಯ ಮಕ್ಕಳು ನಮ್ಮ ತರಗತಿಗಳನ್ನು ಶ್ರೀಮಂತಗೊಳಿಸುತ್ತಿದ್ದಾರೆ. ನಮ್ಮಲ್ಲಿನ ಅನೇಕ ತರಗತಿಗಳು ಹಿಂದಿಗಿಂತ ಹೆಚ್ಚು ವೈವಿಧ್ಯಮಯವಾಗಿವೆ. ಈ ರೀತಿ ವಿಭಿನ್ನ ಮಟ್ಟದ ಮಕ್ಕಳೊಡನೆ ವ್ಯವಹರಿಸುವ ಅಧ್ಯಾಪಕರಿಗೂ ಸರ್ವೌಷಧವಾಗಿ ಸಹಾಯಕವಾಗುವ ಒಂದೇ ಒಂದು ಬೋಧನಾ ವಿಧಾನ ಇದೆ ಎಂಬುದು ಕೇವಲ ಭ್ರಮೆ ಎಂಬ ಅಂಶ ಮನವರಿಕೆಯಾಗಿದೆ. ಹೊಂದಾಣಿಕೆ ಮಾಡಿಕೊಳ್ಳದಿದ್ದರೆ, ಕೆಲವು ಮಕ್ಕಳು ಅಭಿಪ್ರೇರಣೆ ಇಲ್ಲದೆ ಯಶಸ್ಸನ್ನು ಸಾಧಿಸಲು ಅಸಾಧ್ಯವಾಗುತ್ತದೆ.

**ವಿಶೇಷ ಅಗತ್ಯವಿರುವ ಮಕ್ಕಳಿಗೆ ನಿರಂತರ ಮತ್ತು ಸಮಗ್ರ ಮೌಲ್ಯಮಾಪನವನ್ನು ಹೇಗೆ ಯೋಜಿಸುವುದೆಂದು ಚರ್ಚಿಸೋಣ.**

ಇದು ಶಾಲಾ ವಿಷಯಗಳಲ್ಲಿ ಸಹ–ಶಾಲಾ ವಿಷಯಗಳಲ್ಲಿನ ಮಾಪನಗಳನ್ನು ಒಳಗೊಳ್ಳುತ್ತದೆ. ಶಾಲಾ ವಿಷಯಗಳು ನಿರ್ದಿಷ್ಟ ವಿಷಯಗಳಾದ ಭಾಷೆ, ವಿಜ್ಞಾನ, ಗಣಿತ ಇತ್ಯಾದಿ ಅಂಶಗಳನ್ನು ಒಳಗೊಂಡರೆ, ಸಹ–ಶಾಲಾ ವಿಷಯಗಳು ಜೀವನ ಕೌಶಲಗಳು, ಮನೋಭಾವಗಳು, ಮೌಲ್ಯಗಳು ಇತ್ಯಾದಿಗಳನ್ನು ಒಳಗೊಳ್ಳುತ್ತದೆ. ಶಾಲಾ ವಿಷಯಗಳಲ್ಲಿನ ಮಾಪನವನ್ನು ಅನೌಪಚಾರಿಕವಾಗಿ ಮತ್ತು ಔಪಚಾರಿಕವಾಗಿ, ಹಲವಾರು ಮಾಪನ ತಂತ್ರಗಳನ್ನು ಬಳಸಿ, ನಿರಂತರವಾಗಿ ಮತ್ತು ನಿರ್ದಿಷ್ಟ ಅವಧಿಗಳಲ್ಲಿ ಮಾಡಲಾಗುತ್ತದೆ. ನಿದಾನಾತ್ಮಕ ಮಾಪನವನ್ನು ಘಟಕದ ಅಥವಾ ನಿರ್ದಿಷ್ಟ ಕಾಲಾವಧಿಯ ಕೊನೆಯಲ್ಲಿ ಮಾಡಲಾಗುತ್ತದೆ. ಸಹ–ಶಾಲಾ ಸಂಬಂಧಕ ವಿಷಯಗಳ ಮಾಪನವನ್ನು ಸಮರ್ಪಕ ತಂತ್ರಗಳನ್ನು ಬಳಸಿ, ಗುರುತಿಸಿಕೊಂಡ ಮಾನದಂಡಗಳ ಆಧಾರದ ಮೇಲೆ ಮಾಡಿದರೆ, ಕೌಶಲಗಳ ಮಾಪನವನ್ನು ಗುರುತಿಸಿಕೊಂಡ ಸೂಚಕಗಳ ಆಧಾರದ ಮೇಲೆ ಮಾಡಲಾಗುತ್ತದೆ.

- ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ನಿರಂತರ ಮತ್ತು ಸಮಗ್ರ ಮೌಲ್ಯಮಾಪನವನ್ನು ಅನ್ವಯಿಸಬೇಕಾದರೆ ಮೊದಲಿಗೆ ಅದರ ಉದ್ದೇಶಗಳನ್ನು ತಿಳಿದುಕೊಳ್ಳಬೇಕು:
- ಶಾಲಾ ಮತ್ತು ಸಹ–ಶಾಲಾ ಕ್ಷೇತ್ರಗಳನ್ನೊಳಗೊಂಡಂತೆ, ಕಲಿಕೆಯ ವಿವಿಧ ಕ್ಷೇತ್ರಗಳಲ್ಲಿ, ಕಲಿಕೆದಾರರ ಬೆಳವಣಿಗೆಯನ್ನು ಮಾಪನಮಾಡಬೇಕು;
- ಕಲಿಕೆದಾರರ ಸರ್ವಾಂಗೀಣ ಬೆಳವಣಿಗೆಗೆ ಅನುಕೂಲನ ಮಾಡಿಕೊಡಬೇಕು;
- ಪ್ರತಿ ಮಗುವಿನ ಸಾಮರ್ಥ್ಯಗಳನ್ನು ಮತ್ತು ದೌರ್ಬಲ್ಯಗಳನ್ನು ಎಲ್ಲ ಆಯಾಮಗಳಲ್ಲಿ ಗುರುತಿಸಿ ಮಕ್ಕಳಿಗೆ ಸಹಾಯಮಾಡಬೇಕು;
- ಅಲೋಚನಾ ಪ್ರಕ್ರಿಯೆಗಳನ್ನು ಸಶಕ್ತಗೊಳಿಸಿ, ಅವರನ್ನು ಭಾವನಾತ್ಮಕವಾಗಿ ಗಟ್ಟಿಗೊಳಿಸುವುದು, ಸಾಮಾಜೀಕರಣಕ್ಕೆ ಸಹಾಯಮಾಡುವುದು;
- ಶೈಕ್ಷಣಿಕ ಕಾರ್ಯಕ್ರಮದ ಪರಿಣಾಮಕಾರಿತ್ವವನ್ನು ಅಧ್ಯಯನ ಮಾಡಬೇಕು ಮತ್ತು ಕಲಿಕೆದಾರರ ಅಗತ್ಯ, ಆವಶ್ಯಕತೆಗಳಿಗನುಗುಣವಾಗಿ ಸಮರ್ಪಕ ಮಾರ್ಪಾಡುಗಳನ್ನು ಮಾಡಿಕೊಳ್ಳಬೇಕು;

- ಅಧ್ಯಾಪಕ ಪ್ರಾಬಲ್ಯತೆಯನ್ನು ಕಡಿಮೆ ಮಾಡಿ, ಕಲಿಕಾರ್ಥಿ ಕೇಂದ್ರಿತ ಚಟುವಟಿಕಾ ಆಧಾರಿತ ವ್ಯವಸ್ಥೆಯನ್ನು ಪ್ರೋತ್ಸಾಹಿಸಬೇಕು.
- ಅಭಿಕ್ಷಮತೆ ಮತ್ತು ಆಸಕ್ತಿಯ ಕ್ಷೇತ್ರಗಳನ್ನು ಗುರುತಿಸಿ, ಅದಕ್ಕನುಗುಣವಾದ ಚಟುವಟಿಕೆಗಳನ್ನು ಯೋಜಿಸಬೇಕು; ಮತ್ತು
- ಮಾಪನ ಮತ್ತು ಮೌಲ್ಯಮಾಪನಗಳನ್ನು ಬೋಧನಾ ಕಲಿಕಾ ಪ್ರಕ್ರಿಯೆಯ ನಿರಂತರ ಮತ್ತು ಅಂತರ್ಗತ ಭಾಗವಾಗಿ ಮಾಡಿಕೊಳ್ಳಬೇಕು.

ಉದ್ದೇಶಗಳನ್ನು ಸ್ಪಷ್ಟಪಡಿಸಿಕೊಂಡ ನಂತರ, ಅಧ್ಯಾಪಕರು, ಕಲಿಕಾರ್ಥಿಗಳ ಅಗತ್ಯಗಳನ್ನು ಪೂರೈಸಲು ಮತ್ತು ಸಾಮರ್ಥ್ಯಗಳನ್ನು ವೃದ್ಧಿಸಲು ಚಟುವಟಿಕೆಗಳನ್ನು ಯೋಜಿಸಬೇಕು.

ಈ ನಿಟ್ಟಿನಲ್ಲಿ ಅಧ್ಯಾಪಕರು ಕೆಲವು ಅಂಶಗಳನ್ನು ತಿಳಿದಿರಬೇಕು.

- ವಿದ್ಯಾರ್ಥಿಗಳ ಪ್ರಾರಂಭಿಕ ಕಲಿಕಾ ಮಟ್ಟವನ್ನು ಗುರುತಿಸಬೇಕು. ಅಂದರೆ ವಿದ್ಯಾರ್ಥಿ ಈಗಾಗಲೇ ಏನು ಕಲಿತಿದ್ದಾನೆ/ತಿಳಿದಿದ್ದಾನೆ ಎಂಬುದು;
- ಅಧ್ಯಾಪಕರ ಗಮನ ವಿದ್ಯಾರ್ಥಿಗಳು ಪಡೆದಿರುವ ಮಾರ್ಕುಗಳ ಮೇಲಲ್ಲದೆ ವಿದ್ಯಾರ್ಥಿಗಳ ಸಾಮರ್ಥ್ಯಗಳು, ಗುಣಗಳು ಮತ್ತು ಅಗತ್ಯಗಳ ಮೇಲಿರಬೇಕು. ಅವರ ಪ್ರಗತಿಯ ಕುರಿತು ಪ್ರತಿಫಲನಾತ್ಮಕವಾಗಿ ವಿಮರ್ಶಾತ್ಮಕವಾಗಿ ಆಲೋಚಿಸಲು ಅವಕಾಶ ಮಾಡಿಕೊಡಬೇಕು;
- ಮಾಪನವು ವೈವಿಧ್ಯಮಯವಾದ ಕಾರ್ಯಗಳನ್ನು ಒಳಗೊಳ್ಳಬೇಕು. ಏಕೆಂದರೆ ಮಕ್ಕಳ ಕಲಿಕಾ ಶೈಲಿಗಳು ಭಿನ್ನವಾಗಿರುತ್ತವೆ. ಅವರು ವಿವಿಧ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾರೆ. ವಿದ್ಯಾರ್ಥಿಯು ಅವನ/ಅವಳ ಮಾಪನ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಬಾಗವಹಿಸಲಿ;
- ವಿದ್ಯಾರ್ಥಿಯ ಕಲಿಕೆಯ ಕುರಿತು ಮಾಃಇತಿ ಸಂಗ್ರಹಿಸಲು, ಪ್ರಸ್ತುತ ಪಡಿಸಲು ವಿವಿಧ ಮಾರ್ಗಗಳನ್ನು ಬಳಸಬೇಕು. ಉದಾಹರಣೆಗೆ, ಕಿರುನಾಟಕ, ಶ್ರವಣ ಸಾಧನಗಳು, ಪೋಸ್ಟರ್ ಗಳು, ಇತ್ಯಾದಿ.
- ಮಾಪನಮಾಡುವಾಗ ಅಗತ್ಯವಿದ್ದರೆ ಕಾಲಾವಕಾಶಕ್ಕೆ ಸಂಬಂಧಿಸಿದಂತೆ ನಮ್ಯತೆ ಇರಬೇಕು. ಕಲಿಕಾರ್ಥಿಗಳ ಪ್ರತಿಕ್ರಿಯೆಯ ಕುರಿತು ಸಂವೇದನಾಶೀಲರಾಗಿರಬೇಕು.
- ಕಲಿಕಾರ್ಥಿಗಳನ್ನು ಅಭಿಪ್ರೇರಿಸುವ ಮತ್ತು ಧನಾತ್ಮಕ ಕ್ರಿಯೆಗಳಿಗೆ ಒಡ್ಡುವ ಧನಾತ್ಮಕ ಮತ್ತು ರಚನಾತ್ಮಕ ಹಿಮ್ಮಾಹಿತಿ ನೀಡಬೇಕು. ಯಾವ ಮಾರ್ಗೋಪಾಯಗಳು ಅವರ ಕಲಿಕೆಗೆ ಸಾಧಕವಾಯಿತು, ಯಾವುದು ಬಾಧಕವಾಯಿತು ಎಂಬುದನ್ನು ಗುರುತಿಸಲು ಕಲಿಕಾರ್ಥಿಗಳನ್ನು ಪ್ರೋತ್ಸಾಹಿಸಬೇಕು.
- ಎಲ್ಲರನ್ನೂ ಸಮಾನವಾಗಿ ಕಾಣುವ ಸನ್ನಿವೇಶದಲ್ಲಿ ಸಹಕಾರಿ ಕಲಿಕೆಯನ್ನು ಪ್ರೋತ್ಸಾಹಿಸಬೇಕು.
- ಮಗುವಿನ ದೈನಂದಿನ ಚಟುವಟಿಕೆಗಳನ್ನೂ ಆಸಕ್ತಿಗಳನ್ನೂ ಸಾಮಗ್ರಿಗಳನ್ನೂ ಮಾಪನ ಪ್ರಕ್ರಿಯೆಯಲ್ಲಿ ಒಳಗು ಮಾಡಿಕೊಳ್ಳಬೇಕು.

- ಮಗುವಿನ ಅಗತ್ಯಕ್ಕೆ ತಕ್ಕಂತೆ ಗಣಕಯಂತ್ರ, ಧ್ವನಿಮುದ್ರಿಕೆ, ಇತ್ಯಾದಿ ತಂತ್ರಜ್ಞಾನಾತ್ಮಕವಾದ ಸಾಧನಗಳನ್ನು ಬಳಸಬೇಕು;
- ಕ್ಯಾಲ್ಕ್ಯುಲೇಟರ್, ಅಬಾಕಸ್, ಬ್ರೈಲ್, ಸಂವಹನಾ ಹಲಗೆ, ಇತ್ಯಾದಿ ವಿಶೇಷ ಸಾಧನಗಳನ್ನು ಬಳಸಿಕೊಳ್ಳಬೇಕು.
- ವಿವಿಧ ಅವಕಾಶಗಳನ್ನು ಒದಗಿಸಿಕೊಡುವುದರ ಮೂಲಕ ಅನುಕೂಲಿಗರಾಗಿ ವರ್ತಿಸಬೇಕು;
- ಪೋಷಕರು ಮತ್ತು ವಿದ್ಯಾರ್ಥಿಗೆ ಹತ್ತಿರವಾದ ಇತರ ವ್ಯಕ್ತಿಗಳನ್ನು ಸಂಪರ್ಕಿಸಬೇಕು.

ಅಂತರ್ಗತ ತರಗತಿಗಳಲ್ಲಿ ವಿಶೇಷ ಅಗತ್ಯವಿರುವ ಮಕ್ಕಳನ್ನು ಮಾಪನ ಮಾಡಲು ನಿರಂತರ ಮತ್ತು ಸಮಗ್ರ ಮೌಲ್ಯಮಾಪನದ ಅಡಿಯಲ್ಲಿ ಅಧ್ಯಾಪಕರು ಯೋಜಿಸಿಕೊಳ್ಳಬಹುದಾದ ಚಟುವಟಿಕೆಗಳು:

- NCERT ಹೊರಡಿಸಿರುವ CCE ಮಾರ್ಗದರ್ಶಕಗಳು ವಿಶೇಷ ಅಗತ್ಯವಿರುವ ಮಕ್ಕಳ ಮಾಪನ/ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಕೆಲವು ಮಾಪನ ಸೂಚಕಗಳನ್ನು ಗುರುತಿಸಿದೆ. ಅಂತರ್ಗತ ತರಗತಿಗಳಲ್ಲಿ ಶಾಲಾ ಮತು ಸಹ–ಶಾಲಾ ವಿಷಯಗಳ ಮಾಪನಕ್ಕೆ ಇವುಗಳನ್ನು ಬಿಡಿಯಾಗಿ ಅಥವಾ ಇಡಿಯಾಗಿ ಬಳಸಿಕೊಳ್ಳಬಹುದು;
- ವೀಕ್ಷಿಸುವುದು ಮತ್ತು ದಾಖಲಿಸುವುದು; ವರದಿ ಮಾಡುವುದು, ನಿರೂಪಿಸಿ ಚಿತ್ರಿಸುವುದು, ಚಿತ್ರ ಬಿಡಿಸುವುದು, ಚಿತ್ರ ಓದುವುದು, ಚಿತ್ರ ಬಿಡಿಸುವುದು, ಕೋಷ್ಟಕ ಅಥವಾ ಭೂಪಟ ರಚಿಸುವುದು ಇತ್ಯಾದಿ;
- ಚರ್ಚಿಸುವುದು : ಕೇಳುವುದು, ಮಾತನಾಡುವುದು, ಅಭಿಪ್ರಾಯಗಳನ್ನು ಅಭಿವ್ಯಕ್ತಪಡಿಸುವುದು, ಇತರರಿಂದ ಕೇಳಿ ಮಾಹಿತಿ ಪಡೆಯುವುದು;
- ಅಭಿವ್ಯಕ್ತಿಸುವುದು : ಚಿತ್ರ, ದೇಹಚಲನೆ, ಬರೆವಣಿಗೆ, ಶಿಲ್ಪ ಇತ್ಯಾದಿ;
- ವಿವರಿಸುವುದು: ಕಾರ್ಯ–ಕಾರಣ, ತಾರ್ಕಿಕ ಸಂಬಂಧಗಳು ಇತ್ಯಾದಿ;
- ವರ್ಗೀಕರಿಸುವುದು: ಗುಂಪುಮಾಡುವುದು, ಹೋಲಿಕೆ ಮತ್ತು ವ್ಯತ್ಯಾಸಗಳನ್ನು ತಿಳಿಸುವುದು ಇತ್ಯಾದಿ;
- ಪ್ರಶ್ನೆ ಕೇಳುವುದು : ಕುತೂಹಲ ವ್ಯಕ್ತಪಡಿಸುವುದು, ವಿಮರ್ಶಾತ್ಮಕ ಆಲೋಚನೆ ಮಾಡುವುದು, ಪ್ರಶ್ನೆಗಳನ್ನು ರೂಪಿಸುವುದು ಇತ್ಯಾದಿ;
- ವಿಶ್ಲೇಷಿಸುವುದು: ಊಹಿಸುವುದು, ಪ್ರಾಕ್ಕಲ್ಪನೆಗಳನ್ನು ರೂಪಿಸುವುದು ಇತ್ಯಾದಿ;
- ಪ್ರಯೋಗ ಮಾಡುವುದು: ಉತ್ತಮೀಕರಿಸುವುದು (Improvising), ಪ್ರಯೋಗಗಳನ್ನು ಮಾಡುವುದು ಇತ್ಯಾದಿ;
- ನ್ಯಾಯ ಮತ್ತು ಸಮಾನತೆಯ ಕಾಳಜಿ: ಕಡಿಮೆ ಸೌಲಭ್ಯವಿರುವವರ ಕುರಿತ ಸಂವೇದನೆ, ಪರಿಸರ ಕಾಳಜಿ;

## ಶಾಲಾ ವಿಷಯಕ ಮಾಪನ ಮತ್ತು ಮೌಲ್ಯಮಾಪನ:

ನಿರಂತರ ಮತ್ತು ಸಮಗ್ರ ಮೌಲ್ಯಮಾಪನದಲ್ಲಿ ನಿರಂತರತೆಯ ಪರಿಕಲ್ಪನೆ ನಿರಂತರವಾಗಿ ಮತ್ತು ವಿವಿಧ ಹಂತಗಳಲ್ಲಿ ನಡೆಯಬೇಕಾದ ಮಾಪನ ವ್ಯವಸ್ಥೆಯನ್ನು ಗಮನಕ್ಕೆ ತೆಗೆದುಕೊಳ್ಳುತ್ತದೆ. ಇವುಗಳನ್ನು ವಿವಿಧ ರೀತಿಗಳಲ್ಲಿ ನಡೆಸಬಹುದು

**ಘಟಕ ಪರೀಕ್ಷೆ ಮತ್ತು ಸಾಧನಾ ಪರೀಕ್ಷೆಗಳು :** ಮಕ್ಕಳು ಏನು ತಿಳಿದಿದ್ದಾರೆ, ಏನು ಅಲೋಚಿಸುತ್ತಾರೆ, ಕಲ್ಪಿಸಿಕೊಳ್ಳುತ್ತಾರೆ ಮತ್ತು ಭಾವಿಸುತ್ತಾರೆ ಎಂಬುದನ್ನು ಪ್ರಶ್ನೆಗಳನ್ನು ಕೇಳಿ ಕಂಡುಕೊಳ್ಳಬಹುದು. ಉದಾಹರಣೆಗೆ ಪ್ರಬಂಧ ಮಾದರಿ, ಕಿರು ಉತ್ತರ, ಅತಿ ಸಣ್ಣ ಉತ್ತರ ಬಯಸುವ ಪ್ರಶ್ನೆಗಳು, ವಸ್ತುನಿಷ್ಠ ಮಾದರಿ ಪ್ರಶ್ನೆಗಳು, ರೂಪ ಪ್ರಶ್ನೆಗಳು(ಚಿತ್ರ, ವ್ಯಾಖ್ಯಾನ), ಇತ್ಯಾದಿ.

**ಮೌಖಿಕ ಪರೀಕ್ಷೆಗಳು :** ಔಪಚಾರಿಕವಾಗಿ ಮಕ್ಕಳ ಕಲಿಕೆಯನ್ನು ಮಾಪನ ಮಾಡಲು ಇದನ್ನು ಬಳಸಲಾಗುತ್ತದೆ. ಈ ಪರೀಕ್ಷೆಗಳು ಪಠ್ಯವಸ್ತುವಿನ ಕೆಲವು ಕಲಿಕಾ ವಿಷಯಗಳನ್ನು ಕೇಂದ್ರವಾಗಿರಿಸಿಕೊಂಡಿರುತ್ತವೆ. ಅಲ್ಲದೆ ಕೆಲವು ರೀತಿಯ ಸಾಮರ್ಥ್ಯಗಳು ಇಂತಹ ಪರೀಕ್ಷೆಯನ್ನೇ ಬಯಸುತ್ತವೆ. ಉದಾಹರಣೆಗೆ, ಮೌಖಿಕ ಅಭಿವ್ಯಕ್ತಿ, ಓದುವ ಕೌಶಲ, ಸಂವಹನ ಕೌಶಲ ಇತ್ಯಾದಿ. ನಿಯೋಜಿತ ಕಾರ್ಯಗಳು: ಇದನ್ನು ಕಲಿಕೆ ಮತ್ತು ಮಾಪನ ಎರಡರಲ್ಲೂ ಬಳಸಲಾಗುತ್ತದೆ. ವೀಕ್ಷಣೆಯ ಪ್ರಸ್ತುತಿ, ಸಂಗ್ರಹಿಸಿದ ಮಾಹಿತಿಯ ವ್ಯವಸ್ಥಿತವಾದ ಪ್ರಸ್ತುತಿ, ವಿಷಯದ ಕುರಿತ ಪ್ರಮುಖ ಅಂಶಗಳ ಸಂಘಟನೆ, ಸೃಜನಶೀಲತೆ ಇವು ನಿರ್ದಿಷ್ಟ ನಿಯೋಜಿತ ಕಾರ್ಯಗಳನ್ನು ಆಧರಿಸಿರುತ್ತವೆ.

**ಸಹಕಾರಿ ಕಲಿಕೆ :** ಇದು ಮತ್ತೊಂದು ಬೋಧನಾ ಮಾರ್ಗೋಪಾಯ. ಇದು ಧನಾತ್ಮಕವಾದ ಅಂತರಾವಲಂಬನೆಯನ್ನು ಪೋಷಿಸುತ್ತದೆ. ಯಾವುದೇ ಮಗುವೂ ಇತರರ ಸಹಾಯ ಮತ್ತು ವೈಯಕ್ತಿಕ ಬದ್ಧತೆ ಇಲ್ಲದೆ ಯಶಸ್ವಿಯಾಗಲು ಸಾಧ್ಯವಿಲ್ಲ ಎಂಬುದು ಇದರ ಆಧಾರ ತತ್ವ.'ಸಹಕಾರಿ ಕಲಿಕೆಯ ವಿವಿಧ ಹಂತಗಳಲ್ಲಿ ಮಾಪನ ಚಟುವಟಿಕೆಗಳನ್ನು ಅಧ್ಯಾಪಕರು, ವಿದ್ಯಾರ್ಥಿಗಳು ಅಥವಾ ಸಹಪಾಠಿಗಳ ಕಡೆಯಿದ ಅನ್ವಯಿಸಿಕೊಳ್ಳಬಹುದು.

ಗುಂಪುಕಾರ್ಯವನ್ನು ಉತ್ತೇಜಿಸುವ ರೂಪಣಾತ್ಮಕ ಮತ್ತು ಸಂಕಲನಾತ್ಮಕ ಮಾಪನಗಳು ವಿದ್ಯಾರ್ಥಿಗಳನ್ನು ಸಮನ್ವಯಗೊಳಿಸಿಕೊಳ್ಳಲು, ಭಾಗವಹಿಸುವಂತೆ ಮಾಡಲು, ಒಬ್ಬರನ್ನೊಬ್ಬರು ಅರಿತುಕೊಳ್ಳಲು, ವಿವಿಧ ರೀತಿಯ ಸಹಾಯ ಮಾಡುವ ಅವಕಾಶ ಮಾಡಿಕೊಡಲು, ಹೆಚ್ಚು ಸುರಕ್ಷಿತವಾದವು. ಕಲಿಕಾ ಗುಂಪುಗಳನ್ನು ಬಳಸಿಕೊಂಡು ವಿವಿಧ ಸಾಮರ್ಥ್ಯದ ಮಕ್ಕಳು ಕಲಿಕಾ ಅಗತ್ಯಗಳನ್ನು ಪೂರೈಸಿಕೊಳ್ಳಬಹುದು. ಈ ಗುಂಪು ಚಟುವಟಿಕೆಗಳ ಸಮಯದಲ್ಲಿ ಅವರು ಭಾಗವಹಿಸಿದ ಚಟುವಟಿಕೆಗಳನ್ನು ಕುರಿತು ಆಲೋಚಿಸಲು ಅವರಿಗೆ ಅವಕಾಶ ಕೊಡಬೇಕು. ಅವರು ಸಾಮಾನ್ಯವಾಗಿ ಪ್ರಾಜೆಕ್ಟ್‌ಗಳು, ಗುಂಪು ಚರ್ಚೆ, ಚಾರ್ಟ್ ತಯಾರಿ ಇತ್ಯಾದಿ ಕೆಲಸಗಳಲ್ಲಿ ತೊಡಗಿಕೊಂಡಿರುತ್ತಾರೆ.

## ದೃಶ್ಯ ವಿಧಾನ :

ದೃಶ್ಯವಿಧಾನದ ಮಾಪನ ಮತ್ತೊಂದು ಮಾರ್ಗೋಪಾಯವಾಗಬಹುದು. ಉದಾಹರಣೆಗೆ, ಮಕ್ಕಳು ಅವರು ಕಲಿಯುವ ಪರಿಸರವನ್ನು ಹೇಗೆ ಗ್ರಹಿಸುತ್ತಾರೆ ಎಂಬುದನ್ನು ಚಿತ್ರಿಸಲು ಹೇಳಬಹುದು. ಇವು ಭಾಗವಹಿಸುವ ಮಕ್ಕಳ ಗುಂಪುಗಳಲ್ಲಿ ಚರ್ಚೆಯನ್ನು ಪ್ರಚೋದಿಸಲು ಸಹಾಯವಾಗುವುದು. ಶಾಬ್ದಿಕ ಅಥವಾ

ಬರಹದ ಅಭಿವ್ಯಕ್ತಿಯ ತೊಂದರೆ ಇರುವ ಮಕ್ಕಳು ಅವರ ಸಾಧನೆಯನ್ನು ದೃಶ್ಯ ಮಾಧ್ಯಮದ ಮೂಲಕ ತೋರಿಸಬಹುದು.

**ಪ್ರಾಜೆಕ್ಟ್ ಗಳು :**

ಒಂದು ನಿರ್ದಿಷ್ಟ ವಿಷಯದ ಕುರಿತು ಒಂಟಿಯಾಗಿ ಅಥವಾ ಗುಂಪಿನಲ್ಲಿ ಮಾಡುವ ಕೆಲಸವಿದು. ಇದು ಒಂದು ನಿರ್ದಿಷ್ಟ ಅವಧಿಗೆ ಸೀಮಿತವಾಗಿದ್ದು, ಸಂಬಂಧಪಟ್ಟ ದತ್ತಾಂಶವನ್ನು ಕಲೆ ಹಾಕಿ ವಿಶ್ಲೇಷಣೆ ಮಾಡಿ ನಿರ್ಧಾರಗಳನ್ನು ಕೈಗೊಳ್ಳಬೇಕಾಗುತ್ತದೆ.

## ಸಂಕಲನಾತ್ಮಕ ಮೌಲ್ಯಮಾಪನಕ್ಕೆ ಮೌಖಿಕ ಮತ್ತು ಲಿಖಿತ ರೂಪದ ಸಾಧನಗಳು :

ಇತರೆ: ರಸಪ್ರಶ್ನೆ, ತಂತ್ರಜ್ಞಾನಾತ್ಮಕವಾದ ಸಾಧನಗಳು, 'ಪೋರ್ಟ್ ಫೋಲಿಯೋ'ಗಳು, ರೂಬ್ರಿಕ್ಸ್ ಗಳನ್ನು ಈ ಉದ್ದೇಶಕ್ಕೆ ಬಳಸಬಹುದು.

ಸಹ–ಶಾಲಾ ವಿಷಯಕ ಮೌಲ್ಯಮಾಪನವನ್ನು ಅನೇಕ ತಂತ್ರಗಳ ಸಹಾಯದಿಂದ ಗುರುತಿಸಿಕೊಂಡಿರುವ ಮಾನದಂಡಗಳ ಸಹಾಯದಿಂದ ಮಾಡಬಹುದು. ಜೀವನ ಕೌಶಲಗಳ ಮಾಪನವನ್ನು ಮಾಪನ ಸೂಚಕಗಳ ಸಹಾಯದಿಂದ ಅಥವಾ ತಪಶೀಲು ಪಟ್ಟಿಯ ಸಹಾಯದಿಂದ ಮಾಡಬೇಕು. ಸಹ–ಶಾಲಾ ವಿಷಯಕ ಮಾಪನಗಳು ಜೀವನ ಕೌಶಲಗಳು, ಸಹ–ಪಠ್ಯ ಚಟುವಟಿಕೆಗಳು, ಮನೋಭಾವಗಳು ಮತ್ತು ಮೌಲ್ಯಗಳ ಮಾಪನವನ್ನು ಒಳಗೊಳ್ಳುತ್ತದೆ.

ಪರಿಶೋಧನೆ ಅಥವಾ ಅನ್ವೇಷಣೆಗೆ ಅವಕಾಶವಿರುವ ಸನ್ನಿವೇಶಗಳನ್ನು ಒದಗಿಸಬೇಕು. ಇದು ಒಂದು ಪರಿಕಲ್ಪನೆಯನ್ನು ಕುರಿತಂತೆ ಕಾರ್ಯಗಳನ್ನು, ಸನ್ನಿವೇಶಗಳನ್ನು, ಜನಗಳನ್ನು ಹಂಚಿಕೊಳ್ಳುವ ಮನೋಭಾವವನ್ನು ಮತ್ತು ಪರಾನುಭೂತಿಯನ್ನು ಬೆಳೆಸಲು ಸಹಕಾರಿಯಾಗುತ್ತದೆ. ಪ್ರಾಜೆಕ್ಟ್ ವರದಿ, ನಿಯೋಜಿತ ಕಾರ್ಯ ಇವುಗಳಲ್ಲಿ ತಾತ್ವಿಕ ಅಂಶಗಳನ್ನೂ ಪ್ರಾಯೋಗಿಕ ಅಂಶಗಳನ್ನೂ ಜೊತೆಗೆ ಮೌಖಿಕ ಪರೀಕ್ಷೆಯನ್ನೂ ಸೇರಿಸಬೇಕು.

**ವೀಕ್ಷಣಾ ವಿಧಾನ :** ಸಹ–ಶಾಲಾ ಅಂಶಗಳನ್ನು ಮಾಪನ ಮಾಡಲು ವೀಕ್ಷಣಾ ವಿಧಾನವನ್ನೂ ಬಳಸಬಹುದು. ಇದು ಚಟುವಟಿಕೆಗಳನ್ನು, ಪ್ರಕ್ರಿಯೆಗಳನ್ನು, ಫಲಿತಾಂಶಗಳನ್ನು ಮತ್ತು ವರ್ತನೆಗಳನ್ನು ಮತ್ತು ಭೌತಿಕ ಅಂಶಗಳನ್ನು ದಾಖಲಿಸಲು ಸಹಾಯಮಾಡುತ್ತದೆ.

ಘಟನಾತ್ಮಕ ದಾಖಲೆಗಳನ್ನೂ ತಪಶೀಲು ಪಟ್ಟಿಗಳನ್ನೂ ಈ ಉದ್ದೇಶಗಳಿಗಾಗಿ ಬಳಸಬಹುದು.

## ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ 2

**ನಿರಂತರ ಮತ್ತು ಸಮಗ್ರ ಮೌಲ್ಯಮಾಪನದ ಪ್ರಯೋಜನಗಳಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ:**

1. ಇದು ಮೌಲ್ಯಮಾಪನವನ್ನು ಒಂದು ಫಲವಾಗಿ ಕಾಣುವುದಕ್ಕಿಂತ ಪ್ರಕ್ರಿಯೆಯಾಗಿ ಪರಿಗಣಿಸುತ್ತದೆ.
2. ಇದು ಹೊಸ ವಿಷಯ ಬೋಧನೆಗೆ ಅಧ್ಯಾಪಕರಿಗೆ ಅನುಕೂಲಿಸುತ್ತದೆ.
3. ಇದು ಪರೀಕ್ಷೆಯ ಭಯ, ಒತ್ತಡ ಮತ್ತು ಆತಂಕಗಳನ್ನು ಕಡಿಮೆ ಮಾಡುತ್ತದೆ.
4. ಇದು ಮಕ್ಕಳ ಕೆಲಸವನ್ನು ಕಡಿಮೆ ಮಾಡುತ್ತದೆ.

5. ಇದು ಪರೀಕ್ಷೆಗಳನ್ನು ನಡೆಸುವುದಕ್ಕಿಂತ ಕಲಿಕೆಯ ಕಡೆಗೆ ಗಮನ ಕೊಡುತ್ತದೆ.

6. ಇದು ಶಾಲೆಗಳ ಬೆಳವಣಿಗೆಗೆ ಕೊಡುಗೆ ನೀಡುತ್ತದೆ.

7. ಇದು ಕಲಿಕಾರ್ಥಿಗಳು ಆಸಕ್ತಿ, ಹವ್ಯಾಸ ಮತ್ತು ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ನೆರವಾಗುತ್ತದೆ.

8. ಇದು ಕಲಿಕಾರ್ಥಿಗಳು ದೈಹಿಕವಾಗಿ , ಬೌದ್ಧಿಕವಾಗಿ, ಭಾವನಾತ್ಮಕವಾಗಿ ಮತ್ತು ಸಾಮಾಜಿಕವಾಗಿ ಬೆಳೆಯಲು ಸಹಾಯಮಾಡುತ್ತದೆ.

9. ಇದು ಕಲಿಕಾರ್ಥಿ ಸ್ನೇಹಿ ವಾತಾವರಣವನ್ನು ಉಂಟುಮಾಡುತ್ತದೆ.

10. ಇದು ಜೀವನ ಕೌಶಲಗಳನ್ನು ಬೆಳೆಸುತ್ತದೆ.

11. ಇದು ಕಲಿಕಾರ್ಥಿಯನ್ನು ಕುರಿತು ಅಧ್ಯಾಪಕರಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ಧನಾತ್ಮಕ ಮನೋಭಾವವನ್ನು ಬೆಳೆಸುತ್ತದೆ.

## 2.6.4 ಸಾರಾಂಶಿಸೋಣ

- ಶಿಕ್ಷಣದಲ್ಲಿ ಮೌಲ್ಯಮಾಪನ ಎಂಬ ಪದವು, ಸಾಮಾನ್ಯ ಹಾಗೂ ವಿಶೇಷ ಅಗತ್ಯವಿರುವ ಮಕ್ಕಳ ಶೈಕ್ಷಣಿಕಸಿದ್ಧತೆ, ಕಲಿಕಾ ಪ್ರಗತಿ, ಕೌಶಲಗಳ ಸ್ವಾಮ್ಯ, ಅಥವಾ ಶೈಕ್ಷಣಿಕ ಅಗತ್ಯಗಳನ್ನು ಮಾಪನಮಾಡಲು, ಮೌಲ್ಯಮಾಪನ ಮಾಡಲು ಮತ್ತು ದಾಖಲಿಸಲು, ಶಿಕ್ಷಕರು ಬಳಸುವ ವಿಶಾಲವ್ಯಾಪ್ತಿಯ ವಿಧಾನ ಮತ್ತು ಸಾಧನಗಳನ್ನು ಒಳಗೊಳ್ಳುತ್ತದೆ.
- ಗುಣಮಟ್ಟವನ್ನು ಮಾಪನಮಾಡುವ ಅಭ್ಯಾಸಗಳು ಐದು ತತ್ವಗಳನ್ನು ಮುಂದಿಡುತ್ತವೆ. ಅವೆಂದರೆ, ಮಾಪನವು ಕಲಿಕೆಗೆ ಪೂರಕವಾಗಿದ್ದು ಬೆಂಬಲಿಸುವಂತಿರ'ಬೇಕು; ಮಾಪನವು ಸಿಂಧುವೂ ವಿಶ್ವಸನೀಯವೂ ಆಗಿರಬೇಕು; ಉದ್ದೇಶಕ್ಕನುಗುಣವಾದ ಫಲ ನೀಡುವಂತಹುದೂ ನಿರ್ವಹಣೆಗೆ ಸಾಧ್ಯವಾಗುವಂತಹುದೂ ಆಗಿರಬೇಕು; ಅಧ್ಯಾಪಕರ ವೃತ್ತಿಪರವಾದ ನಿರ್ಣಯಗಳನ್ನು ಬೆಂಬಲಿಸುವಂತಹುದಾಗಿರಬೇಕು; ಮತ್ತು ಬದ್ಧತೆಯನ್ನು ಬೆಂಬಲಿಸಬೇಕು.
- ಶಿಕ್ಷಣ ಕ್ಷೇತ್ರದಲ್ಲಿ ನಡೆಯುತ್ತಿರುವ ಮಾಪನ ವ್ಯವಸ್ಥೆಯನ್ನು ಕುರಿತ ಪ್ರಮುಖ ಟೀಕೆ ಎಂದರೆ, ಅದು ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ಕೇವಲ ಭಾಗಶಃ ಗುರುತಿಸುತ್ತಿದೆ, ಎಂಬುದು. ಕಲಿಕೆಯ ಮೂಲಭೂತ ಉದ್ದೇಶದಂತೆ, ಅದು ಬೌದ್ಧಿಕ, ದೈಹಿಕ, ಸಾಮಾಜಿಕ, ಭಾವನಾತ್ಮಕ ಹೀಗೆ ಒಟ್ಟಾಗಿ ಮಗುವಿನ ಎಲ್ಲ ಕ್ಷೇತ್ರಗಳಲ್ಲಿ ವಿಕಾಸವನ್ನು ಫಲಿಸಬೇಕು. ಇದಕ್ಕಾಗಿ ಮೌಲ್ಯಮಾಪನವೂ ಅನಿವಾರ್ಯವಾಗಿ ಈ ಎಲ್ಲ ಕ್ಷೇತ್ರಗಳನ್ನೂ ಒಳಗೊಳ್ಳಬೇಕು. ಇದಕ್ಕಾಗಿ ನಿರಂತರ ಮತ್ತು ಸಮಗ್ರ ಮೌಲ್ಯಮಾಪನದ ಸಾಧ್ಯತೆಗಳನ್ನು ಆವಿಷ್ಕರಿಸಿಕೊಳ್ಳಬೇಕಾಗಿದೆ.
- ಶೈಕ್ಷಣಿಕ ಮಾಪನಗಳಲ್ಲಿ ಕೆಲವು ಪ್ರಮುಖ ವಿಧಗಳಿವೆ. ಅವೆಂದರೆ ಪೂರ್ವ ಮಾಪನಗಳು, ರೂಪಣಾತ್ಮಕ ಮಾಪನಗಳು, ಸಂಕಲನಾತ್ಮಕ ಮಾಪನಗಳು, ಮೌಲ್ಯಮಾಪನಾತ್ಮಕ ಮಾಪನಗಳು.
- ನಿರಂತರ ಮತ್ತು ಸಮಗ್ರ ಮೌಲ್ಯಮಾಪನವನ್ನು ಶಾಲಾ ಮುಕ್ತ ಹಾಗೂ ಕಡ್ಡಾಯ ಶಿಕ್ಷಣದ ಅಡಿಯಲ್ಲಿ ಮಕ್ಕಳ ಹಕ್ಕು ಎಂದು ಪರಿಗಣಿಸಲಾದ ಶಿಕ್ಷಣದ ಹಕ್ಕು ಕಾಯಿದೆ 2009ಕ್ಕೆ

ಅನುಗುಣವಾಗಿ ಏಪ್ರಿಲ್ 2010ರಲ್ಲಿ ಶಾಲಾ ಆಧರಿತ ಮೌಲ್ಯಮಾಪನ ವ್ಯವಸ್ಥೆಯಾಗಿ ಪ್ರಾರಂಭಿಸಲಾಗಿದೆ.

- ಇದು ಮಗುವಿನ ಪ್ರಗತಿಯನ್ನು ನಿರಂತರ ಮತ್ತು ಸಮಗ್ರವಾದ ರೀತಿಯಲ್ಲಿ ನೀಡುತ್ತದೆ. ನಿರಂತರತೆ ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಗೆ ಸಂಬಂಧಿಸಿದುದು. ಇದು ಕೋರ್ಸಿನ ಅವಧಿಯ ಕೊನೆಯ ಮಾಪನದ ಜೊತೆಗೆ ಪ್ರತಿ ಹಂತದಲ್ಲಿ ಆಯಾ ಕ್ಷೇತ್ರದ ಕಲಿಕೆಯ ಉತ್ತಮಿಕೆಗೆ ಅಗತ್ಯವಾದ ಅಂಶಗಳನ್ನು ತೆರೆದಿಡುತ್ತದೆ.
- ವಿಶೇಷ ಅಗತ್ಯವಿರುವ ಮಕ್ಕಳಿಗೆ ನಿರಂತರ ಮತ್ತು ಸಮಗ್ರ ಮೌಲ್ಯಮಾಪನವನ್ನು ಅನ್ವಯಿಸಬೇಕಾದರೆ ಮೊದಲಿಗೆ ಅದರ ಉದ್ದೇಶಗಳನ್ನು ತಿಳಿದುಕೊಳ್ಳಬೇಕು, ಶಾಲಾ ಮತ್ತು ಸಹ–ಶಾಲಾ ಕ್ಷೇತ್ರಗಳನ್ನೊಳಗೊಂಡಂತೆ, ಕಲಿಕೆಯ ವಿವಿಧ ಕ್ಷೇತ್ರಗಳಲ್ಲಿ, ಕಲಿಕೆದಾರರ ಬೆಳವಣಿಗೆಯನ್ನು ಮಾಪನಮಾಡಬೇಕು, ಕಲಿಕೆದಾರರ ಸರ್ವಾಂಗೀಣ ಬೆಳವಣಿಗೆಗೆ ಅನುಕೂಲನ ಮಾಡಬೇಕು, ಪ್ರತಿ ಮಗುವಿನ ಸಾಮರ್ಥ್ಯಗಳನ್ನು ಮತ್ತು ದೌರ್ಬಲ್ಯಗಳನ್ನು ಎಲ್ಲ ಆಯಾಮಗಳಲ್ಲಿ ಗುರುತಿಸಿ ಮಕ್ಕಳಿಗೆ ಸಹಾಯಮಾಡಬೇಕು; ಅಲೋಚನಾ ಪ್ರಕ್ರಿಯೆಗಳನ್ನು ಸಶಕ್ತಗೊಳಿಸಿ, ಅವರನ್ನು ಭಾವನಾತ್ಮಕವಾಗಿ ಗಟ್ಟಿಗೊಳಿಸುವುದು, ಸಾಮಾಜೀಕರಣಕ್ಕೆ ಸಹಾಯಮಾಡಬೇಕು, ಶೈಕ್ಷಣಿಕ ಕಾರ್ಯಕ್ರಮದ ಪರಿಣಾಮಕಾರಿತ್ವವನ್ನು ಅಧ್ಯಯನ ಮಾಡುವುದು ಮತ್ತು ಕಲಿಕೆದಾರರ ಅಗತ್ಯ, ಆವಶ್ಯಕತೆಗಳಿಗನುಗುಣವಾಗಿ ಸಮರ್ಪಕ ಮಾರ್ಪಾಡುಗಳನ್ನು ಮಾಡಿಕೊಳ್ಳಬೇಕು; ಅಧ್ಯಾಪಕ ಪ್ರಾಬಲ್ಯತೆಯನ್ನು ಕಡಿಮೆ ಮಾಡಿ, ಕಲಿಕಾರ್ಥಿ ಕೇಂದ್ರಿತ ಚಟುವಟಿಕಾ ಆಧಾರಿತ ವ್ಯವಸ್ಥೆಯನ್ನು ಪ್ರೋತ್ಸಾಹಿಸಬೇಕು, ಅಭಿಕ್ಷಮತೆ ಮತ್ತು ಆಸಕ್ತಿಯ ಕ್ಷೇತ್ರಗಳನ್ನು ಗುರುತಿಸಿ, ಅದಕ್ಕನುಗುಣವಾದ ಚಟುವಟಿಕೆಗಳನ್ನು ಯೋಜಿಸಬೇಕು, ಮತ್ತು ಮಾಪನ ಮತ್ತು ಮೌಲ್ಯಮಾಪನಗಳನ್ನು ಬೋಧನಾ ಕಲಿಕಾ ಪ್ರಕ್ರಿಯೆಯ ನಿರಂತರ ಮತ್ತು ಅಂತರ್ಗತ ಭಾಗವಾಗಿ ಮಾಡಬೇಕು.

## 2.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1 ಮತ್ತು 2

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 1

a–3. b–2. c–4, d–5, e–1

### ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ 2

2, 4, 6, ಮತ್ತು 8 ಬಿಟ್ಟು ಉಳಿದವು ಸರಿ.

## 2.6.6. ಘಟಕಾಂತ್ಯ ಅಭ್ಯಾಸಗಳು

ವಿಶೇಷ ಅಗತ್ಯವಿರುವ ಮಕ್ಕಳಿಗೆ ಸಂಬಂಧಿಸಿದಂತೆ ನಿರಂತರ ಮತ್ತು ಸಮಗ್ರ ಮೌಲ್ಯಮಾಪನವನ್ನು ಯೋಜಿಸುವ ವಿಧಾನವನ್ನು ವಿವರಿಸಿ ಮತ್ತು ಈ ಪ್ರಕ್ರಿಯೆಯಲ್ಲಿ ಎದುರಾಗುವ ಸಮಸ್ಯೆಗಳನ್ನು ಗುರುತಿಸಿ.

## 2.6.7. ಪರಾಮರ್ಶನ ಸೂಚಿ

1. http://www.ncert.nic.in/gpPDF/pdf/tiicsnups101.pdf
2. Source: Rodriguez, Falcon, E. Evans, M. Allam, C.Barrett, J. & Forrest. 2010. The Inclusive Learning and Teaching Handbook. University of Sheffield.
3. CBSE (2010). Manual for teachers on school based assessment. Classes VI to VIII.
4. CBSE (2011). Continuous and Comprehensive Evaluation – Manual for English Teachers, Classes IX and X. SCERT-New Delhi.
5. William Woods University (2016). Handbook of Academic Assessment. Revised.
6. CBSE Rules and Exemptions, http://mycbseguide.com/blog/cbse-rules-and-exemptions-for-disabledstudents/
7. IGNOU, Unit 11, Continuous and comprehensive evaluation www.egyankosh.ac.in/bitstream/ 123456789/25735/1/Unit11.pdf
8. Carol A. et al. (2015). Assessment and student success in differentiated classroom. ASCD professional learning services.
9. Charles R. (1999). “Alternative Assessment and Second Language Study: What and Why?”
10. Davis, K. et al. (1998). "Methods of Evaluating Student Performance rough Service Learning". Evaluation/Reflection. Paper 38. h p:// digitalcommons.unomaha.edu/slceeval/38
11. Kapoor, N. and Natarajan, V. (2013). Assessing Scholastic and Non-Scholastic areas of Learning of Primary School 4th and 5th Graders in English, Mathematics and Science. Educationia Confab Journal. Vol. 2, No. 2, February 2013, 24-37.
12. Michael, A. et al. (1999). Educational programming for students with high support needs: A report of work in progress. Australasian Journal of Special Education. Vol. 23, Iss. 1.

13. M.Naeem Mohsin (2011). Ecological Inventory: An Approach for Assessment of Children with Intellectual Disability. International Journal of Early Childhood Special Education (INT-JECSE), 3(2), 148-159.

14. Trevor R. et al. (2002). Assessment and Classification of Support Needs. Pathways 6 Conference 2002; Centre for Developmental Disability Studies, Sydney University.

15. Assessing Learning – Alternative Assessments, http://www.nclrc.org/assessing/alternative.htm

****************